ಕನ್ನಡ ವಿಶ್ವವಿದ್ಯಾಲಯ, ಹಂಪಿ

ಆಲನಹಳ್ಳಿ ಹಾಗೂ ತೇಜಸ್ವಿ ಅವರ ಕಥನಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷದ ಸ್ವರೂಪ

ಸಂಶೋಧಕರು

ಲಕ್ಷ್ಮೀ ಜಿ.ಎಂ.

ನೋಂದಣಿ ಸಂಖ್ಯೆ: ೧೬೧೨೦೧೦೨೦೦೫೬

ಮಾರ್ಗದರ್ಶಕರು

ಡಾ. ಎ.ಆರ್.ಮದನಕುಮಾರ್

ಮುಖ್ಯಸ್ಥರು ಮತ್ತು ಸಂಯೋಜಕರು

ಕನ್ನಡ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗ

ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ

ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩೨೭೬

೨೦೧೯

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಆಲನಹಳ್ಳಿ ಹಾಗೂ ತೇಜಸ್ವಿ ಅವರ ಕಥನಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷದ ಸ್ವರೂಪ

ಸಂಶೋಧಕರು

ಲಕ್ಷ್ಮೀ ಜಿ.ಎಂ.

ನೋಂದಣಿ ಸಂಖ್ಯೆ: ೧೬೧೨೦೧೦೨೦೦೫೬

ಮಾರ್ಗದರ್ಶಕರು

ಡಾ. ಎ.ಆರ್.ಮದನಕುಮಾರ್

ಮುಖ್ಯಸ್ಥರು ಮತ್ತು ಸಂಯೋಜಕರು

ಕನ್ನಡ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗ

ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ

ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩೨೭೬

೨೦೧೯

ಮಾರ್ಗದರ್ಶಕರ ದೃಢೀಕರಣಪತ್ರ

ಶ್ರೀಮತಿ ಲಕ್ಷ್ಮೀ.ಜಿ.ಎಂ. ಇವರು **"ಆಲನಹಳ್ಳಿ ಹಾಗೂ ತೇಜಸ್ವಿ ಅವರ ಕಥನಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷದ .ಸ್ವರೂಪ"** ಎಂಬ ವಿಷಯದ ಮೇಲೆ ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ, ಪಿಎಚ್.ಡಿ. ಪದವಿಗಾಗಿ ತಮ್ಮ ಮಹಾಪ್ರಬಂಧವನ್ನು ಸಿದ್ಧಪಡಿಸಿರುತ್ತಾರೆ.

ಈ ಮಹಾಪ್ರಬಂಧವು ಸಂಶೋಧನಾ ವಿದ್ಯಾರ್ಥಿಯ ಸ್ವಂತ ಪರಿಶ್ರಮದ ಸಂಶೋಧನೆಯ ಮೂಲಕ ರೂಪುಗೊಂಡಿದೆ. ಈ ಮಹಾಪ್ರಬಂಧವನ್ನು ಆಂಶಿಕವಾಗಿಯಾಗಲಿ, ಪೂರ್ಣವಾಗಿಯಾಗಲಿ ಯಾವುದೇ ಬಗೆಯ ಪದವಿ, ಡಿಪ್ಲೊಮಾ ಅಥವಾ ಯಾವುದೇ ತತ್ಸಮಾನ ಪದವಿಗಾಗಿ ಈ ಮೊದಲು ಸಲ್ಲಿಸಿಲ್ಲವೆಂದು, ಇದನ್ನು ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಾದರಪಡಿಸಲು ನಾನು ಸಮ್ಮತಿಸುತ್ತೇನೆಂದೂ ಈ ಮೂಲಕ ದೃಢೀಕರಿಸುತ್ತೇನೆ.

ವಿದ್ಯಾರಣ್ಯ ಮಂಡ್ಯ.
ದಿನಾಂಕ: 19-10-2019

(ಡಾ. ಎ.ಆರ್.ಮದನಕುಮಾರ್)
ಮುಖ್ಯಸ್ಥರು ಮತ್ತು ಸಂಯೋಜಕರು
ಕನ್ನಡ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗ
ಮಹಿಳಾ ಸರ್ಕಾರಿ ಕಾಲೇಜು,
ಮಂಡ್ಯ.

ಡಾ. ಎ.ಆರ್. ಮದನಕುಮಾರ
ಕನ್ನಡ ಸಹ ಪ್ರಾಧ್ಯಾಪಕ
ಮಹಿಳಾ ಸರ್ಕಾರಿ ಕಾಲೇಜು
ಮಂಡ್ಯ-571401

ಸಂಶೋಧಕರ ಘೋಷಣಾಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸುತ್ತಿರುವ **"ಆಲನಹಳ್ಳಿ ಹಾಗೂ ತೇಜಸ್ವಿ ಅವರ ಕಥನಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷದ ಸ್ವರೂಪ"** ಎಂಬ ಮಹಾಪ್ರಬಂಧವನ್ನು **ಡಾ. ಎ.ಆರ್.ಮದನಕುಮಾರ್,** ಮುಖ್ಯಸ್ಥರು ಮತ್ತು ಸಂಯೋಜಕರು, ಕನ್ನಡ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗ, ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ. ಇವರ ಸಲಹೆ ಮತ್ತು ಸೂಕ್ತ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಈ ಮಹಾಪ್ರಬಂಧವನ್ನು ಯಾವುದೇ ವಿಶ್ವವಿದ್ಯಾನಿಲಯದ ಪದವಿ, ಡಿಪ್ಲೊಮಾ ಹಾಗೂ ತತ್ಸಮಾನ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

Lakshmi G.M

ವಿದ್ಯಾರಣ್ಯ
ದಿನಾಂಕ: ೧೬/೧೦/೨೦೧೬

(ಲಕ್ಷ್ಮೀ ಜಿ.ಎಂ.)
ಸಂಶೋಧಕರು

ಅರಿಕೆ

"ಆಲನಹಳ್ಳಿ ಹಾಗೂ ತೇಜಸ್ವಿ ಅವರ ಕಥನಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷದ .ಸ್ವರೂಪ" ಎಂಬ ವಿಷಯದ ಮೇಲೆ ಸಂಶೋಧನೆ ಮಾಡಲು ಕಾರಣರಾದವರು, ನೆರವಾದವರು, ಸಹಕರಿಸಿದವರನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಂಡು ಕೃತಜ್ಞತೆ ಸಲ್ಲಿಸುತ್ತೇನೆ.

ನಾನು ಸಂಶೋಧನಾ ಕಾರ್ಯ ಆರಂಭಿಸಲು ಮನಸ್ಸು ಮಾಡಿದಾಗ ಅಧ್ಯಯನ ದೃಷ್ಟಿಯಿಂದ ನನ್ನ ಪತಿಯಾದ ಡಾ. ನಂದೀಶ.ಜಿ.ಎಂ. ಇವರು ಸಲಹೆ ಮತ್ತು ಮಾರ್ಗದರ್ಶನಗಳನ್ನು ನೀಡುತ್ತಾ ಉತ್ತೇಜಿಸಿದವರು. ನನ್ನ ಈ ಸಂಶೋಧನೆಗೆ ಮಾರ್ಗದರ್ಶನ ಮಾಡಲು ಒಪ್ಪಿದ ಡಾ. ಎ.ಆರ್.ಮದನಕುಮಾರ್ ಮಹಾಪ್ರಬಂಧವನ್ನು ತಿದ್ದಿತೀಡಿ ಪ್ರೋತ್ಸಾಹಿಸುತ್ತಾ ಬಂದಿರುತ್ತಾರೆ. ಸಂಶೋಧನೆಗೆ ಸಂಬಂಧಿಸಿದ ಅನೇಕ ವಿಚಾರಗಳನ್ನು ಮುಕ್ತವಾಗಿ ಚರ್ಚಿಸಿ ಉತ್ತಮ ಮಾರ್ಗದರ್ಶನ ನೀಡಿರುತ್ತಾರೆ. ಜೊತೆಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ರಹಮತ್ ತರೀಕೆರೆಯವರು ಆಲನಹಳ್ಳಿ ಹಾಗೂ ತೇಜಸ್ವಿಯವರ ವಿಷಯದ ಆಯ್ಕೆಯಲ್ಲಿ ನನಗೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನವನ್ನು ಸಂಶೋಧನೆಯ ಆರಂಭದಿಂದ ಹಿಡಿದು ಅಂತ್ಯದವರೆಗೂ ಸರಿತಪ್ಪುಗಳನ್ನು ಕುರಿತು ಚರ್ಚಿಸಿರುತ್ತಾರೆ ಮತ್ತು ಹಿತೈಷಿಗಳಾದ ಪ್ರೊ. ಸುಂದರಿ, ಪ್ರೊ. ಶೇಖರ ಎಂ.ಬಿ., ಡಾ. ವೆಂಕಟಗಿರಿ ದಳವಾಯಿಯವರ ಸಲಹೆ ಮತ್ತು ಸೂಕ್ತ ಮಾರ್ಗದರ್ಶನಗಳು ನನಗೆ ಸಾಕಷ್ಟು ಬೌದ್ಧಿಕ ಬೆಳವಣಿಗೆಗೆ ನೆರವಾಗಿವೆ. ಇವರಿಗೆ ನಾನು ಚಿರಋಣಿ.

ಈ ಸಂಶೋಧನೆ ಕೈಗೊಂಡ ಸಂದರ್ಭದಲ್ಲಿ ಸಹಕರಿಸಿದ ಮಾನ್ಯತಾ ಸಂಸ್ಥೆಯ ವಿದ್ವಾಂಸರುಗಳು ಸಲಹೆ ಮತ್ತು ಸೂಚನೆಗಳನ್ನು ನೀಡಿದರು. ಭಾರತೀ ಕಾಲೇಜಿನ ಕನ್ನಡ ವಿಭಾಗದ ನನ್ನ ಎಲ್ಲಾ ಸಹೋದ್ಯೋಗಿ ಮಿತ್ರರು ಹಾಗೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಕರ್ನಾಟಕ ಸಂಘದ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಬದುಕಿನ ದುಃಖದುಮ್ಮಾನಗಳನ್ನೆಲ್ಲ ತಮಗಿರಿಸಿಕೊಂಡು, ಪ್ರೀತಿಯ ಸವಿಯನ್ನಷ್ಟೇ ಉಣಿಸಿ ವಿದ್ಯಾಭ್ಯಾಸ ಮಾಡಿಸಿದ, ನನ್ನ ಇಂದಿನ ಬದುಕಿಗೆ ಕಾರಣಕರ್ತರಾದ, ನನಗೆ ಯಾವಾಗಲೂ ಸ್ಫೂರ್ತಿ ನೀಡುವ, ನನ್ನ ಬದುಕಿಗೆ ಮುಖ್ಯ ಆಗರವಾದ ನನ್ನ ತಂದೆ ಮಾದೇಗೌಡ .ಜಿ ಮತ್ತು ತಾಯಿ ಇಂದ್ರಾಣಿ ಅವರಿಗೆ ಸದಾಕಾಲ ಆಭಾರಿಯಾಗಿರುತ್ತೇನೆ.

ಸಂಶೋಧನೆಯ ಕಾರ್ಯದಲ್ಲಿ ನನಗೆ ಬೆನ್ನೆಲುಬಾಗಿ ನಿಂತು ಅಧ್ಯಯನದಲ್ಲಿ ಯಾವ ಅಡಚಣೆಯಾಗದಂತೆ ನೋಡಿಕೊಂಡು, ಅನೇಕ ಸಲಹೆಗಳನ್ನು ಕೊಟ್ಟ ನನ್ನ ಬಾಳಸಂಗಾತಿ ಡಾ. ನಂದೀಶ.ಜಿ.ಎಂ. ನನ್ನ ಬದುಕಿನಲ್ಲಿ ಹೊಸಬೆಳಕನ್ನು ತಂದು ಸ್ಫೂರ್ತಿ ತುಂಬಿದ ಪ್ರೀತಿಯ ಅತ್ತೆ ಸಾವಿತ್ರಮ್ಮ, ಮಾವ ಮರೀಗೌಡ ಇವರಿಗೆ ಪ್ರೀತಿಯ ಕೃತಜ್ಞತೆಗಳು. ಹಾಗೂ ಭಾವ ಮಹೇಶ್ ಜಿ.ಎಂ. ಮತ್ತು ಸಹಸಹೋದರಿಯಾದ ರೇಖಾ, ನನ್ನ ಭಾವನ ಮಗಳಾದ ರಕ್ಷಿತಾ.ಜಿ.ಎಂ. ನನ್ನ ಪ್ರಬಂಧದ ಬರವಣಿಗೆಯ ವೇಳೆಯಲ್ಲಿ ಆಗಾಗ್ಗೆ ತನ್ನ ಅಳು ಮತ್ತು ನಗುವಿನಿಂದ ನನ್ನನ್ನು ಆಕರ್ಷಿಸಿ ಸಣ್ಣ ವಿರಾಮ ನೀಡುತ್ತಿದ್ದ ಪ್ರೀತಿಯ ಮಗಳಾದ ಸೌಖ್ಯಳನ್ನು ಈ ಸಮಯದಲ್ಲಿ ನೆನೆಯುವೆ.

ನನ್ನ ಸಂಶೋಧನಾ ಬರಹವನ್ನು ಪ್ರೀತಿಯಿಂದ ಶ್ರಮವಹಿಸಿ ಮಾಡಿಕೊಟ್ಟ ಶ್ರೀಮತಿ ರಾಧಾ ಅವರಿಗೆ ಧನ್ಯವಾದಗಳು.

ಪರಿವಿಡಿ

ಆಲನಹಳ್ಳಿ ಹಾಗೂ ತೇಜಸ್ವಿ ಅವರ ಕಥನಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷದ ಸ್ವರೂಪ

* * * * *

ಅಧ್ಯಾಯ ಒಂದು

ಪೀಠಿಕೆ, ಉದ್ದೇಶ, ವ್ಯಾಪ್ತಿ ಮತ್ತು ಅಧ್ಯಯನದ ವಿಧಾನ

ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯ ತನ್ನದೇ ಆದ ಸ್ವಂತ ಅಸ್ತಿತ್ವವನ್ನು ಕಂಡುಕೊಂಡಿದೆ. ಆಯಾಯ ಕಾಲಮಾನವನ್ನು ಹಿಡಿದಿಟ್ಟು ಬದುಕಿನ ಸ್ಪಂದನೆಗಳನ್ನು ಸಾಹಿತ್ಯ ಕೃತಿಗಳ ಮೂಲಕ ಅನಾವರಣಗೊಳಿಸಿದೆ. ವಿಪುಲವಾಗಿರುವ ಕನ್ನಡ ಸಾಹಿತ್ಯವನ್ನು ನಾಲ್ಕು ವಿಭಾಗಗಳ ಮೂಲಕ ನಾವು ಅಭ್ಯಾಸ ಮಾಡುತ್ತೇವೆ. ಹಳಗನ್ನಡ, ನಡುಗನ್ನಡ, ಹೊಸಗನ್ನಡ ಮತ್ತು ಆಧುನಿಕ ಕನ್ನಡ. ಈ ಎಲ್ಲ ಕಾಲಘಟ್ಟದಲ್ಲೂ ಆಯಾಯ ಕಾಲದ ರಾಜಕೀಯ, ಸಾಮಾಜಿಕ ನೆಲೆಯ ಪಲ್ಲಟ, ಕ್ರಾಂತಿಗಳನ್ನು ಸಾಹಿತ್ಯದಲ್ಲಿ ಗುರುತಿಸಬಹುದು. ಇಪ್ಪತ್ತನೆ ಶತಮಾನವು ಪ್ರಪಂಚದ ಎಲ್ಲಾ ಕ್ಷೇತ್ರಗಳಲ್ಲೂ ಕಂಡ ಬದಲಾವಣೆಗಳು ಯಾವ ಶತಮಾನದಲ್ಲಿ ಇಂತಹ ಪಲ್ಲಟವನ್ನು ಕಾಣಲು ಸಾಧ್ಯವಿಲ್ಲ. ಅದರಲ್ಲೂ ಸಾಹಿತ್ಯದ ಸ್ವರೂಪ ಗಮನಾರ್ಹವಾದದ್ದು. ಇದೊಂದು ಚಾರಿತ್ರಿಕ ಪರಿವರ್ತನೆಯೂ ಆಗಿದೆ. ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯವನ್ನು ಆಧುನಿಕ ಕನ್ನಡ ಸಾಹಿತ್ಯವೆಂದು ಗುರುತಿಸಲ್ಪಡುತ್ತದೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಸಾಹಿತ್ಯ ಘಟ್ಟಗಳೆಂದು ಕವಲುಗಳನ್ನು ಅಧ್ಯಯನದ ದೃಷ್ಟಿಯಿಂದ ಮಾಡಿಕೊಳ್ಳಲಾಗುತ್ತದೆ.

ಈ ಆಧುನಿಕ ಕನ್ನಡ ಸಾಹಿತ್ಯದ ಸಾಹಿತ್ಯ ಪ್ರಕಾರಗಳಲ್ಲಿ ಕ್ರಿಯಾಶೀಲತೆಯ ಕಥನಸಾಹಿತ್ಯ ಪ್ರಕಾರಕ್ಕೆ ಮಹತ್ವದ ಸ್ಥಾನವಿದೆ. ವಸ್ತು, ಭಾಷೆ, ರಚನಾಶೈಲಿ ಅನನ್ಯ ಅಭಿವ್ಯಕ್ತಿಯಿಂದಾಗಿ ನವೋದಯ, ನವ್ಯ ಹಾಗೂ ನವ್ಯೋತ್ತರ ಕಾಲದ ಕಥನಸಾಹಿತ್ಯ ವೈವಿಧ್ಯಪೂರ್ಣ ಪ್ರಯೋಗಶೀಲತೆಯಿಂದಾಗಿ ಶ್ರೇಷ್ಠ ನೆಲೆಯನ್ನು ಕಂಡುಕೊಂಡಿತು. ವ್ಯಕ್ತಿಪ್ರಧಾನ ಅಭಿವ್ಯಕ್ತಿ ಸಾಹಿತ್ಯ ನವ್ಯಕಾಲದಲ್ಲಿ ನೆಲೆ ಕಂಡುಕೊಂಡಿತು. ಹೊಸತನದ ತುಡಿತ ವಾಸ್ತವ ಸ್ಥಿತಿಗತಿಗಳು, ಸಂಕೀರ್ಣಜೀವನ, ಜೀವನದ ಅಸಲಿ ಅನುಭವಗಳು, ನವ್ಯಸಾಹಿತಿಗಳ ಭದ್ರನೆಲೆಗೊಳ್ಳುವಿಕೆಗೆ ಅನುವಾಯಿತು. ಕಾಲಕ್ರಮೇಣ ಹೊಸತನಕ್ಕಾಗಿ ಸಮಾಜಮುಖಿಯಾಗಿ ತುಡಿತ ಸಾಹಿತಿಗಳು ಹಲವು ಸಾಮಾಜಿಕ, ಸಾಂಸ್ಕೃತಿಕ ಪ್ರಭಾವಗಳಿಂದಾಗಿ ನವ್ಯೋತ್ತರ ಸಾಹಿತ್ಯದತ್ತ ತಮ್ಮ ಒಲವನ್ನು ತೋರಿದರು. ಸಾಮಾಜಿಕ ವರ್ಗ, ಜಾತೀಯತೆ, ಸ್ತ್ರೀಶೋಷಣೆ, ದರ್ಪ–ದೌರ್ಜನ್ಯಗಳಿಂದ ಬೇಸತ್ತ ಸಾಹಿತಿಗಳು ಚಿಂತಕರು ತಮ್ಮ ಅನುಭವಗಳನ್ನು ಆಶಯಗಳನ್ನು ನೇರ ನಿಷ್ಠುರವಾಗಿ ಅಭಿವ್ಯಕ್ತಿಸಿದರು. ಸಮಾನತೆಯ ಸಮಾಜಕ್ಕಾಗಿ ತುಡಿದ ಈ ಲೇಖಕರುಗಳು ಹಿಂದಿನ ತಲೆಮಾರುಗಳಿಗಿಂತ ಭಿನ್ನವಾದ ಅಸ್ತಿತ್ವವನ್ನು ಕಂಡುಕೊಂಡರು. ಇವರಿಗೆ ಪಾಶ್ಚಾತ್ಯ ಸಾಹಿತ್ಯ

ಚಿಂತಕರುಗಳು ಪ್ರಭಾವಬೀರಿದರು. ಹೊಸ ಸಂವೇದನೆಯ ಸಾಮಾಜಿಕ ಚಿಂತನೆಗಳು, ಮೌಲ್ಯಗಳು ನವ್ಯಸಾಹಿತ್ಯದ ಬರಹಗಾರರನ್ನು ಪ್ರೇರೇಪಿಸಿದವು. ವ್ಯಕ್ತಿಕೇಂದ್ರಿತ ನೆಲೆಯಲ್ಲಿ ಸಮಾಜದ ನೈತಿಕ, ಧಾರ್ಮಿಕ, ಆಧ್ಯಾತ್ಮಿಕ ನಂಬುಗೆಗಳು ಮತ್ತು ಮೌಲ್ಯಗಳು ಶೋಧನೆಗೆ ಗುರಿಯಾದವು. ಆಂತರಿಕ ಬದುಕಿನ ಒತ್ತಡ, ಬದುಕಿನ ಸಂಕೀರ್ಣತೆ ಸೂಕ್ಷ್ಮ ಹಾಗೂ ಸಾಂಕೇತಿಕತೆ, ಅಂತರ್‌ಮುಖಿ ಅಭಿವ್ಯಕ್ತಿಗೆ ಕಾರಣವಾದವು. ಬದುಕಿನ ವಿಭಿನ್ನ ಮೌಲ್ಯಗಳನ್ನು ಹೊಸ ಸ್ವರೂಪದ ಮೂಲಕ ಶೋಧಿಸಲಾರಂಭಿಸಿದರು. ನವ್ಯ ಬರಹಗಾರರು ಮನುಷ್ಯನ ಪ್ರಜ್ಞೆಯ ವಿವಿಧ ಅವಸ್ಥೆಗಳನ್ನು ತಾತ್ವಿಕವಾಗಿ ನಿರೂಪಿಸಿದರು. ವಸ್ತು, ಭಾಷೆಗಳಲ್ಲಿ ಪರಂಪರೆಯ ಪ್ರಜ್ಞೆಗಿಂತ ಭಿನ್ನ ನಾವೀನ್ಯತೆಯನ್ನು ಕಂಡುಕೊಂಡವು. ಶೋಧನೆ, ಹೊಸವಿಚಾರಗಳ ಸ್ವೀಕಾರ, ಹಳೆಯ ವಿಚಾರಗಳ ಆವಿಷ್ಕಾರ, ನಂಬುಗೆಗಳ ಬಗ್ಗೆ ಪ್ರಶ್ನೆಗಳು ನವ್ಯ ಕಥನಸಾಹಿತ್ಯದ ಸ್ವರೂಪಗಳಾದವು.

ನವ್ಯ ಸಾಹಿತ್ಯದ ಬಿಗಿ, ದೇಸಿ ಚಿಂತಕರು, ಸಾಹಿತಿಗಳ ಪ್ರಭಾವ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರದಲ್ಲಾದ ಬದಲಾವಣೆಗಳು ನವ್ಯೋತ್ತರ ಚಿಂತನೆಗಳಿಗೆ ಅನುವು ಮಾಡಿಕೊಟ್ಟವು. ವ್ಯಕ್ತಿನಿಷ್ಠೆಯಿಂದ ಸಮಾಜಮುಖಿ ಆಲೋಚನೆ, ಸಾಮಾಜಿಕ ಬದಲಾವಣೆಯ ಆಶಯ ನವ್ಯೋತ್ತರ ಸಾಹಿತ್ಯದ ಕಾಳಜಿಗಳಾದವು. ಹಸಿವು, ಬಡತನ, ಸಾಮಾಜಿಕ ಕ್ರೌರ್ಯ, ಅರಾಜಕತೆ ಮುಂತಾದ ಸಾಮಾಜಿಕ ಪೀಡನೆಗಳು ನವ್ಯೋತ್ತರ ಕಥನಸಾಹಿತ್ಯದ ವಸ್ತುಗಳಾದವು. ಜಾತ್ಯಾತೀತ, ಸಮಾಜವಾದ ನಿಲುವುಗಳಿಂದ ಸಾಗಿದ ನವ್ಯೋತ್ತರ ಕಾಲಘಟ್ಟದ ಬರಹಗಾರರು ನೇರ, ನಿಷ್ಠೂರಭಾಷೆ ಮೂಲಕ ಸಾಮಾಜಿಕ ಶೋಧನೆಗೆ ಮುಂದಾದರು. ಬದುಕಿನ ಬಗೆಗಿನ ತೀವ್ರವಾದ ಗ್ರಹಿಕೆ ಹೊಸ ಬಾಳಿನ ಉತ್ಕಟವಾದ ಹಂಬಲ, ನಿಕಟವಾದ ಜೀವನಾನುಭವ, ಆಳವಾದ ವೈಚಾರಿಕತೆ, ಭಾಷೆಯಲ್ಲಿನ ವೈಶಿಷ್ಟ್ಯತೆ ನವ್ಯ ಹಾಗೂ ನವ್ಯೋತ್ತರ ಕಥನಸಾಹಿತ್ಯ ಪ್ರಕಾರವನ್ನು ಚಾರಿತ್ರಿಕವಾಗಿ ಗಟ್ಟಿಗೊಳಿಸಿತು. ಈ ಕಾಲಘಟ್ಟದ ಲೇಖಕರು ಆರೋಗ್ಯಕಾರಿ ಸಮಾಜ ನಿರ್ಮಾಣದ ಕಾಳಜಿಗಳಿಂದಾಗಿ ಹೊಸ ಸವಾಲುಗಳನ್ನು ತಾತ್ವಿಕವಾಗಿ ಸ್ವೀಕರಿಸಿದರು. ಅಮೂರ್ತ ಅನುಭವಗಳಿಗೆ ಮೂರ್ತರೂಪ ಕೊಡಬಲ್ಲ ವಸ್ತು, ಭಾಷೆಯನ್ನು ಸ್ವೀಕರಿಸುತ್ತಾ ಚಾರಿತ್ರಿಕ ರೀತಿಯಲ್ಲಿ ತಮ್ಮ ಕಾಳಜಿ ಹಾಗೂ ಆಲೋಚನೆಗಳನ್ನು ಅಭಿವ್ಯಕ್ತಿಸಿದರು.

ನವ್ಯ ಕಾಲಘಟ್ಟದಲ್ಲಿ ಸಾಹಿತ್ಯರಚನೆ ಮಾಡಿದ ಆಲನಹಳ್ಳಿ ಹಾಗೂ ತೇಜಸ್ವಿ ಅವರು ಈ ಕಾಲದ ಎಲ್ಲಾ ಲಕ್ಷಣಗಳಿಗೆ ಸ್ಪಂದಿಸಿದವರು. ನವ್ಯ ಕಾಲಘಟ್ಟದಲ್ಲಿ ವಿಭಿನ್ನ ರೀತಿಯಲ್ಲಿ ಸಾಹಿತ್ಯ ರಚಿಸಿದ ಈ ಲೇಖಕರುಗಳು ಕಾಲಕ್ರಮೇಣ ಸಾಮಾಜಿಕ ಕಳಕಳಿಯತ್ತ ಹೊರಳಿದ್ದು ಬಹುಮುಖ್ಯ ಸಾಂಸ್ಕೃತಿಕ ತಿರುವಾಗಿದೆ. ಸಮಾನತೆಯ ಸಮಾಜಕ್ಕಾಗಿ ತುಡಿದ ಇವರುಗಳು ಕಳೆದುಹೋಗುತ್ತಿರುವ ಸಾಂಸ್ಕೃತಿಕ, ಮಾನವೀಯ ಮೌಲ್ಯಗಳನ್ನು ಉಳಿಸಿಕೊಳ್ಳಲು ಪ್ರಾಮಾಣಿಕ

ಪ್ರಯತ್ನ ಮಾಡಿದ್ದಾರೆ. ಸೃಜನಶೀಲ ಪ್ರತಿಭೆ, ಬಹುಮುಖ ಕಾಳಜಿಗಳಿಂದಾಗಿ ನವ್ಯ ಹಾಗೂ ನವ್ಯೋತ್ತರ ಕಾಲಘಟ್ಟದ ಕಥನಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಜಾತಿ-ಧರ್ಮಗಳ, ಕಟ್ಟುಕಟ್ಟಳೆಗಳನ್ನು ಮೀರಿ, ವ್ಯಕ್ತಿತ್ವದ ಘನತೆಗಳಾಗಿ ತುಡಿಯುವ ಸಾಮಾಜಿಕ ತಲಸ್ಪರ್ಶಿ ಶೋಧನೆಯಲ್ಲಿ ನಿರತರಾದ ಈ ಲೇಖಕರುಗಳು ಚಲನಶೀಲತೆಯ ವಸ್ತು-ತಂತ್ರದಿಂದಾಗಿ ನವ್ಯ ನವ್ಯೋತ್ತರ ಕಥನಕಾರರಲ್ಲಿ ವಿಭಿನ್ನವಾಗಿ ಉಳಿಯುತ್ತಾರೆ.

ಆಲನಹಳ್ಳಿ ಹಾಗೂ ತೇಜಸ್ವಿ ಅವರು ಕಾದಂಬರಿ, ಸಣ್ಣಕಥೆ, ಕಾವ್ಯ ಮುಂತಾದ ಸಾಹಿತ್ಯ ಪ್ರಕಾರಗಳ ಜೊತೆಗೆ ಇನ್ನೂ ಹಲವಾರು ಸೃಜನಶೀಲ ಕ್ಷೇತ್ರಗಳಿಗೆ ತಮ್ಮನ್ನು ತೊಡಗಿಸಿಕೊಂಡಿದ್ದವರು. ಯಾವುದೇ ಭಯ ಸಂಕೋಚಗಳಿಗೆ ಒಳಗಾಗದೆ ಅನ್ಯಾಯ, ಅಸಮಾನತೆಯ ವಿರುದ್ಧ ಧ್ವನಿಯಾದವರು. ನಗರ ಮತ್ತು ಹಳ್ಳಿಗಳನ್ನು ಪ್ರವೇಶಿಸಿಕೊಂಡ ನಾಗರೀಕತೆಯನ್ನು ಬೆರಗುಗಣ್ಣಿನಿಂದ ನೋಡಿದ ಲೇಖಕರು. ಆಗ ಹುಟ್ಟಿಕೊಂಡ ಒಳತೋಟಿಯ ತುಡಿತಗಳನ್ನು ಮುಚ್ಚಿಡಲಾಗದೇ ತಮ್ಮ ನಡುವಿನ ಮಾನವ ಸಂಘರ್ಷ ಸಾಮಾಜಿಕ ಚಿಂತನೆಗಳನ್ನು ಪ್ರೀತಿಯಿಂದ ಕಥಾನಕವಾಗಿ ಬರೆದವರು. ಹಾಗೆ ಬರೆಯುವಾಗ ತುಂಬಾ ಕುತೂಹಲದಿಂದ ಬರೆದರು. ಅದು ಒಂದು ಆರೋಗ್ಯಕರ ಸಮಾಜಕ್ಕಾಗಿ ಕನಸುಕಂಡವರ ರೋದನೆಗಳಂತೆ ಕಾಣಿಸಿತು. ವರ್ತಮಾನದಲ್ಲಿ ಈ ಎಲ್ಲದರ ಬದಲಾವಣೆಯಿಂದ ಮತ್ತು ಮನಸ್ಥಿತಿಯಿಂದ ಸಾಂಸ್ಕೃತಿಕ ಸಂಘರ್ಷದ ಸ್ವರೂಪದಲ್ಲಿ ಎಲ್ಲವನ್ನು ನಿರೂಪಿಸುವುದು. ಜೊತೆಗೆ ಅದನ್ನು ಸಿದ್ದಿಸಿಕೊಳ್ಳುವುದರ ಪ್ರಕ್ರಿಯೆಯಲ್ಲಿ ಆಲನಹಳ್ಳಿ ಹಾಗೂ ತೇಜಸ್ವಿಯವರ ಹಠಸಾಧನೆ ಮಹತ್ವದ್ದು. ಆಲನಹಳ್ಳಿ ಹಾಗೂ ತೇಜಸ್ವಿಯವರ ಮಹತ್ವದ ಮತ್ತೊಂದು ಸಾಹಿತ್ಯಕ ಗುಣಗಳೆಂದರೆ ಆಧುನಿಕ ಸಂವೇದನೆಯನ್ನು ತನ್ನ ವ್ಯಕ್ತಿತ್ವದೆಡೆಗೆ ಜೀರ್ಣಿಸಿಕೊಂಡು ಅಭಿವ್ಯಕ್ತಿಸುವುದಾಗಿದೆ. ತಮ್ಮೊಳಗಿನ ನಿಜಸಂಕಟಗಳನ್ನು ಸಾಮಾಜಿಕ ಸಂಬಂಧದೊಂದಿಗೆ ಬೆಸೆಯುವುದಾಗಿದೆ. ಅದಕ್ಕೆ ಪೂರಕವಾದ ಸಂವಹನ ಸಾಧ್ಯತೆಯನ್ನು ಹೊಸದಾದ ರೀತಿಯಲ್ಲಿ ರೂಪಿಸಿಕೊಳ್ಳುವುದಾಗಿದೆ. ಮಾತ್ರವಲ್ಲ ಆ ಮೂಲಕ ತಾನು ಹೇಳಬೇಕು ಎಂದುಕೊಂಡಿರುವುದನ್ನು ಯಾವ ರೀತಿಯಲ್ಲಿ ವ್ಯಕ್ತಪಡಿಸಲು ಸಾಧ್ಯ ಎಂಬುದರ ಹುಟುಕಾಟದಲ್ಲಿ ಆಲನಹಳ್ಳಿ ಹಾಗೂ ತೇಜಸ್ವಿಯವರ ಚಿಂತನೆ ವಿಶಿಷ್ಟವಾದುದಾಗಿದೆ.

ಬದುಕು ಹಾಗೂ ಬರಹಗಳೆರಡರಲ್ಲೂ ಅನನ್ಯವಾದ ಸಂಬಂಧವನ್ನು ಕಂಡುಕೊಂಡ ಆಲನಹಳ್ಳಿ ಹಾಗೂ ತೇಜಸ್ವಿಯವರು ನವ್ಯಕಾಲದ ಬಿಸಿಯಲ್ಲಿ ತಮ್ಮ ಸೃಜನಶೀಲ ಬರವಣಿಗೆಯನ್ನು ಪ್ರಾರಂಭಿಸಿದರು. ನಂತರ ನವ್ಯಕ್ಕೆ ಹೊರತಾಗಿ ಬರವಣಿಗೆಯ ಸ್ವರೂಪವನ್ನು ಬದಲಾಯಿಸಿಕೊಂಡರು. ಪ್ರಾರಂಭದಲ್ಲಿ ಹನ್ನೆರಡನೇ ಶತಮಾನದ ವಚನಗಳ ಶೈಲಿ, ಕುಮಾರವ್ಯಾಸ, ಶಿಶುನಾಳ ಷರೀಫರ ಸಾಹಿತ್ಯ, ಇಪ್ಪತ್ತನೆಯ ಶತಮಾನದಲ್ಲಿ ಕುವೆಂಪು, ಬೇಂದ್ರೆ,

ಮಾಸ್ತಿ, ರಾಜರತ್ನಂ ಅವರ ಸಾಹಿತ್ಯದಿಂದ ಪ್ರಭಾವಿತರಾದರು. ಕಾಮು, ಕಾಫ್ಕಾ ಮುಂತಾದ ಪಾಶ್ಚಾತ್ಯ ಬರಹಗಾರರ ಪ್ರಭಾವವನ್ನು ಕೂಡ ಒಪ್ಪಿಕೊಂಡರು. ಇದರ ಜೊತೆಗೆ ಲೋಹಿಯಾದ ಸಮಾಜವಾದ, ಗಾಂಧೀಜಿಯ ಅಹಿಂಸಾವಾದಗಳನ್ನು ತಮ್ಮ ಸಾಹಿತ್ಯದಲ್ಲಿ ಅಳವಡಿಸಿಕೊಂಡಿರುವುದು ಕಂಡುಬರುತ್ತದೆ. ನವ್ಯಕಾಲದ ಮೂಲಕ ಪ್ರಾರಂಭವಾದ ಆಲನಹಳ್ಳಿ ಹಾಗೂ ತೇಜಸ್ವಿಯವರ ಬರವಣಿಗೆ ಕಾವ್ಯ, ಕಥೆ, ಕಾದಂಬರಿ, ನಾಟಕ ಹೀಗೆ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಹಾಯ್ದು ಅನನ್ಯ ಸಿದ್ದಿಯನ್ನು ಪಡೆದಿದೆ. ಮಾನವನ ಸಂಭಾವಿತತನದ ಸೋಗಿನ ಹಿಂದಿರುವ ಸಣ್ಣತನಗಳನ್ನು ಬಯಲಿಗೆಳೆಯುವುದು ಈ ಲೇಖಕರ ಬರವಣಿಗೆಯ ವೈಶಿಷ್ಟ್ಯ ನೇರ ನಡೆನುಡಿ, ಪ್ರಾಮಾಣಿಕತೆ, ಅವಮಾನದ ಅಸಹಿಷ್ಣುತೆ, ಸ್ವಾಭಿಮಾನ, ನೈಜಜೀವಂತಿಕೆಗಳಿಗೆ ಪ್ರಾಮುಖ್ಯ ನೀಡುವ ಇವರ ಕಥನ ಬರವಣಿಗೆಯ ಶೈಲಿಯು ವಿಶಿಷ್ಟ ಬಗೆಯದು.

ಸಾಹಿತ್ಯ ಯಾವತ್ತಿಗೂ ವ್ಯಕ್ತಿ ಮತ್ತು ಸಮಾಜಗಳ ಬಹುರ್ಮುಖೀ ನೆಲೆಯನ್ನು ಕಟ್ಟುತ್ತಿದ್ದರೆ, ಲೇಖಕರು ಅದರ ಅಂತರ್ಮುಖೀ ಶೋಧನೆಯಲ್ಲಿ ತೊಡಗಿರುತ್ತಾರೆ. ಆಲನಹಳ್ಳಿ ಹಾಗೂ ತೇಜಸ್ವಿ ತಮ್ಮನ್ನು ತಾವು ಗುರುತಿಸಿಕೊಂಡ ನವ್ಯಸಾಹಿತ್ಯ ಅಂತರ್ಮುಖತೆಗೆ ಹೆಚ್ಚು ಒತ್ತು ನೀಡಿದ ಸಂದರ್ಭದಲ್ಲಿ ಈ ಲೇಖಕರು ಅಲ್ಲಿದ್ದುಕೊಂಡೇ ಕಾಯಕ ಶ್ರೀಮಂತಿಕೆಯ ಜೊತೆಗೆ ಜನರನ್ನು ತಲುಪಲು ಸೃಜನಶೀಲತೆಯ ಹತ್ತಾರು ಮಾಧ್ಯಮಗಳನ್ನು ಹುಡುಕಿಕೊಂಡರು. ಅಂದರೆ ಇವರ ಸಮಗ್ರ ಸಾಹಿತ್ಯ ಹತ್ತಾರು ಮಾರ್ಗಗಳನ್ನು ಹುಡುಕಿಕೊಂಡ ಕಾರಣದಿಂದಲೇ ಅದು ಜನಪರ ಕಾಳಜಿಯಾಯಿತು. ವಿಶೇಷವಾಗಿ ಆಲನಹಳ್ಳಿ ಹಾಗೂ ತೇಜಸ್ವಿಯವರ ಕೃತಿಗಳ ಸಾಂಸ್ಕೃತಿಕ ಸಂಘರ್ಷದ ಸ್ವರೂಪವನ್ನೇ ಅಧ್ಯಯನದ ಉದ್ದೇಶವಾಗಿಟ್ಟುಕೊಂಡು ಇವರ ಬರಹಗಳ ತೀವ್ರತೆಯನ್ನು ಗಮನಿಸಿದರೆ ಈ ಲೇಖಕರದು ಸದಾ ಮನುಷ್ಯನ ಸೂಕ್ಷ್ಮ ಸಂವೇದನೆಗಳಿಗೆ ದನಿಗೂಡಿಸುವ ಚಿಂತನೆ ಹಾಗೂ ಚಡಪಡಿಕೆ, ಆಲನಹಳ್ಳಿ ಹಾಗೂ ತೇಜಸ್ವಿಯವರು ಕಂಡದ್ದನ್ನು ನೇರವಾಗಿ ಯಾವ ಇರಿಸುಮುರುಸು ಇಲ್ಲದೆ ಬರೆದವರು. ಪ್ರಸ್ತುತ ಪ್ರಬಂಧ ಅವರ ಅಪ್ಪಟ ಮನುಷ್ಯ ಕಾಳಜಿಯ ಜೀವನದ ಜನಜಾಗೃತಿಯ ವಿವರಗಳನ್ನು ಹುಡುಕುವ ನಿಟ್ಟಿನಲ್ಲಿ ಸದಾ ಎಚ್ಚರದ ಪ್ರಜ್ಞೆಯ ಕಥಾನಕಗಳ ಸ್ವರೂಪಗಳನ್ನು ಮಹಾಪ್ರಬಂಧದ ಶೋಧನೆಯಲ್ಲಿ ಸಂಶೋಧಿಸುತ್ತದೆ. ಸಾಹಿತ್ಯ ಪರಿಭಾಷೆಯಲ್ಲಿ ಸಾಧಿಸಿದ್ದೇನು? ಕಂಡುಕೊಂಡಿದ್ದೇನು? ಎಂಬ ಸತ್ಯಗಳನ್ನು ಹುಡುಕುವ ಕುತೂಹಲವೇ ಪ್ರಸ್ತುತ ಮಹಾಪ್ರಬಂಧದ ಆಶಯ.

ಒಟ್ಟಾರೆ ಅವರ ಎಲ್ಲ ಬರವಣಿಗೆಯ ಒಟ್ಟು ಆಶಯವನ್ನು ಗಮನಿಸಿದರೆ ಅದರಲ್ಲೂ ಕಥಾನಕಗಳನ್ನು ಕಟ್ಟುವಾಗ ಸಾಂಸ್ಕೃತಿಕ ಸಂದರ್ಭದ ಪರಿಸರದಲ್ಲಿ ವ್ಯಕ್ತಿ ಮತ್ತು ಸಮಾಜಗಳ ಪರಸ್ಪರ ತಿಳುವಳಿಕೆಗಳ ತೀವ್ರ ಚರ್ಚೆಗೆ ಸಂಬಂಧಿಸಿದಂತೆ ಕಾಣುತ್ತದೆ. ಮನುಷ್ಯತ್ವ ಮತ್ತು

ಅಮಾನುಷ ಕ್ರೌರ್ಯಗಳ ಜಟಿಲ ಸಂಘರ್ಷಗಳನ್ನು ತಾಯ್ತನದ ಸಂಬಂಧಗಳು ದೇಸೀಯ ಸಮಾಜದ ಜೀವ ವೈವಿಧ್ಯವನ್ನು ಕಟ್ಟುವಾಗ ತಮ್ಮ ಅನುಭವ ತೀವ್ರತೆಯ ಜೊತೆಜೊತೆಗೆ ತಮ್ಮ ಕಾಲದ ಸಾಹಿತ್ಯ ದಿಗ್ಗಜರ ಪ್ರೇರಣೆ ಮತ್ತು ಪ್ರಭಾವಗಳನ್ನು ದಕ್ಕಿಸಿಕೊಂಡ ಲೇಖಕರು ತಮ್ಮ ಕಥನಸಾಹಿತ್ಯದಲ್ಲಿ ಸಾಂಸ್ಕೃತಿಕ ಅನನ್ಯತೆಯನ್ನು ಹೇಗೆ ಬಿಂಬಿಸುತ್ತವೆ ಎಂಬುದನ್ನು ಪ್ರಸ್ತುತ ಮಹಾಪ್ರಬಂಧ ತಿಳಿಸುತ್ತದೆ. ಸಾಮಾಜಿಕ ಪಿಡುಗುಗಳ ಮತ್ತು ಧೋರಣೆಗಳ ಬಗೆಗೆ ಆಲನಹಳ್ಳಿ ಹಾಗೂ ತೇಜಸ್ವಿಯವರು ಬರೆಯುತ್ತಾ ಕೂರಲಿಲ್ಲ. ಸದಾಕಾಯಕ ಜೀವಿಗಳಂತೆ ಕರ್ನಾಟಕ ಸಾಂಸ್ಕೃತಿಕ ಲೋಕದಲ್ಲಿ ಎಲ್ಲಿ ಏನೇ ನಡೆದರೂ ಮಾನವೀಯ ಸಂಬಂಧಗಳಿಗೆ ಮಿಡಿಯುವ ಮನಸ್ಸು ಈ ಲೇಖಕರದು. ತಮ್ಮ ಕಥನಸಾಹಿತ್ಯದಲ್ಲಿ ದಮನಿತ ವರ್ಗದ ಶಕ್ತಿಗೆ ಪ್ರೇರಣೆ ಒದಗಿಸುವಂತೆ ಬರೆದರಷ್ಟೇ ಅಲ್ಲ, ಹಾಗೆಯೇ ಅನೂಚಾನವಾಗಿ ಪ್ರತಿಕ್ರಿಯಿಸುತ್ತಿದ್ದರು. ಆಲನಹಳ್ಳಿ ಹಾಗೂ ತೇಜಸ್ವಿ ಸಾಹಿತ್ಯಕೃತಿಗಳ ಸಂಶೋಧನೆಗೆ ಮುಖ್ಯ ಕಾರಣ ಅವರ ನೇರ ಮತ್ತು ನೈಜ ವ್ಯಕ್ತಿತ್ವಗಳೇ, ಮನುಷ್ಯನ ಸಣ್ಣತನ, ಮುಗ್ಧತೆ, ಪೊಳ್ಳು ಸ್ಥಿತಿಗತಿಗಳನ್ನು ಬಹಿರಂಗಗೊಳಿಸುವ ಮಾಧ್ಯಮವಾಗಿ ಸಾಹಿತ್ಯವನ್ನು ದುಡಿಸಿಕೊಂಡ ಕನ್ನಡದ ಮೇರು ಪ್ರತಿಭೆಗಳು. ನವ-ವಸಾಹತುಶಾಹಿಯಿಂದ ಉಂಟಾದ ಬದುಕಿನ ಪಲ್ಲಟ, ಜಿಜ್ಞಾಸೆ, ಸಂಕೀರ್ಣತೆ, ಮನಸ್ಸಿನಾಳದ ಭೋಳೆತನ, ಖಿನ್ನಮನಸ್ಸಿನ ಉದ್ವಿಗ್ನತೆ, ತೀಕ್ಷ್ಣವಾದ ವಿಡಂಬನೆಗಳನ್ನು ಸಾಂಸ್ಕೃತಿಕ ಸಂಘರ್ಷದ ಹಿನ್ನೆಲೆಯಲ್ಲಿ ಬರೆದಿದ್ದಾರೆ. ನಗರಾಭಿಮುಖ ಚಲನೆ, ಪಟ್ಟಣ-ಹಳ್ಳಿಯ ಮುಖಾಮುಖಿ ಅಲ್ಲಿ ನಡೆಯುವ ಪಟ್ಟಣ ಪಂಚಾಯ್ತಿ, ಜಾತಿ ಮತ್ತು ವೃತ್ತಿಗಳು, ಗಂಡು-ಹೆಣ್ಣಿನ ಸಂದರ್ಭಗಳು ಆಲನಹಳ್ಳಿ ಹಾಗೂ ತೇಜಸ್ವಿ ಕಥನಸಾಹಿತ್ಯದಲ್ಲಿ ರಕ್ತಮಾಂಸದೊಟ್ಟಿಗೆ ಮಿಡಿಯುತ್ತವೆ. ಈ ಹಿನ್ನೆಲೆಯಲ್ಲಿ ಕೈಗೆತ್ತಿಕೊಂಡಿರುವ ಪ್ರಸ್ತುತ ಸಂಶೋಧನ ಮಹಾಪ್ರಬಂಧದ ಶೀರ್ಷಿಕೆಯೇ **"ಆಲನಹಳ್ಳಿ ಹಾಗೂ ತೇಜಸ್ವಿ ಅವರ ಕಥನಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷದ ಸ್ವರೂಪ"** ಆಲನಹಳ್ಳಿ ಹಾಗೂ ತೇಜಸ್ವಿ ಕಥನಗಳು ನೇರವಾಗ ಸಾಂಸ್ಕೃತಿಕ ಸಂಘರ್ಷದ ಆಶೋತ್ತರಗಳನ್ನು ದಾಖಲಿಸುತ್ತವೆ. ಹಾಗಾಗಿಯೇ ಅದರ ಅಭಿವ್ಯಕ್ತಿಗಾಗಿ ಅವರು ಕಥೆ ಮತ್ತು ಕಾದಂಬರಿಗಳಲ್ಲಿ ಸಾಂಸ್ಕೃತಿಕ ಅನನ್ಯತೆಯ ಸ್ವರೂಪವನ್ನು ರಚಿಸಹೊರಡುತ್ತಾರೆ. ಅವರ ಕಾದಂಬರಿಗಳು ಹಾಗೂ ಪ್ರಾತಿನಿಧಿಕ ಕಥಾವಲಯದ ಕಥಾನಕಗಳಲ್ಲಿ ಸಾಂಸ್ಕೃತಿಕ ಸಂಘರ್ಷದ ಸ್ವರೂಪವನ್ನು ಚರ್ಚಿಸಬೇಕೆನ್ನುವುದು ಪ್ರಸ್ತುತ ಸಂಶೋಧನೆಯ ಉದ್ದೇಶ ಈ ಕಾರಣಕ್ಕಾಗಿ ಪ್ರಸ್ತುತ ಶೀರ್ಷಿಕೆಯಡಿಯಲ್ಲಿ ಈ ಮಹಾಪ್ರಬಂಧವನ್ನು ನನ್ನ ಸಂಶೋಧನೆಯ ವಿಷಯವನ್ನಾಗಿ ಆಯ್ಕೆಮಾಡಿಕೊಂಡಿದ್ದೇನೆ.

ಅಧ್ಯಯನದ ಉದ್ದೇಶ:

ನವ್ಯ-ನವ್ಯೋತ್ತರ ಸಾಹಿತ್ಯದ ಕಾಲದಲ್ಲಿ ಸಾಂಸ್ಕೃತಿಕ ಚಿಂತನೆಗಳನ್ನು, ಜನಜೀವನವನ್ನು ಆಲನಹಳ್ಳಿ ಹಾಗೂ ತೇಜಸ್ವಿ ಗ್ರಹಿಸಿದ ರೀತಿ ಸತ್ಯವೂ ನಿಷ್ಠುರವೂ ಆದುದರಿಂದ ಆಲನಹಳ್ಳಿ

ಹಾಗೂ ತೇಜಸ್ವಿ ಕುರಿತಂತೆ ಸಂಶೋಧನೆಯ ಕೆಲಸ ಎಲ್ಲಾ ಕಾಲಕ್ಕೂ ನಡೆಯುತ್ತಲೇ ಇರುತ್ತದೆ. ವಸಾಹತೋತ್ತರ ಭಾರತದಲ್ಲಿ ವ್ಯಕ್ತಿ ಹಾಗೂ ಸಮಾಜ ತನ್ನ ಸ್ವಹಿತಾಸಕ್ತಿಯ ಗುಂಗಿನಲ್ಲೇ ಮೈಮರೆತು ಅಸ್ವಸ್ಥತೆಯಲ್ಲೇ ನರಳಿ ಸಾಯುತ್ತದೆ. ಆ ಜೀವನಶೈಲಿಯ ಬದುಕಿನ ಕ್ರಮಗಳನ್ನು, ಸಾಮಾಜಿಕ ಸಂಗತಿಗಳನ್ನು ಈ ಲೇಖಕರು ತಮ್ಮ ಕಥಾನಕದಲ್ಲಿ ಬೆಳೆಸುವ ಪ್ರಯತ್ನಮಾಡಿದ್ದಾರೆ. ಸಾಂಸ್ಕೃತಿಕ ಸಂದರ್ಭದ ಬದುಕಿನಲ್ಲಿ ಜಾತಿ ಮತ್ತು ಸಾಮಾಜಿಕ ವಿವರಗಳು ಬಾಲ್ಯದಲ್ಲಿ ಕಂಡ ಸಂತೆ, ಉತ್ಸವ, ತೇರು, ಕುಸ್ತಿ, ಅಕ್ಷರ ಕಲಿಸುತ್ತಿದ್ದ ಮಾಸ್ತರರ ಕಿಲಾಡಿತನಗಳು, ತಮ್ಮ ಸುತ್ತಲಿನ ಮನುಷ್ಯರ ವರ್ತನೆಗಳು ತಮ್ಮ ವಾರಗೆಯವರ ಆಟಾಟೋಪಗಳು, ಓದಿನ ಬಗೆಗಿನ ಅರಿವು, ರಾಷ್ಟ್ರೀಯ ಭಾವೈಕ್ಯತೆಯ ಚಿಂತನೆಗಳು, ರಾಷ್ಟ್ರೀಯ ಚಳವಳಿಗಳು ಮೈಸೂರು ರಾಜ್ಯ ಸರ್ಕಾರಕ್ಕಾಗಿ ನಡೆದ ಹೋರಾಟಗಳು, ಪ್ಲೇಗು ಎಂಬ ಮಾರಿ ಈ ರೀತಿ ಎಲ್ಲದರ ಸವಿನೆನಪು ಈ ಲೇಖಕರ ಬರಹದಲ್ಲಿದ್ದು ಅವುಗಳ ಪ್ರಭಾವದಿಂದ ಮೂಡಿದ ಚಿಂತನೆಗಳು ಮುಂದೆ ತಮ್ಮ ಬರಹಗಳಲ್ಲಿ ವ್ಯಕ್ತಪಡುವಾಗ ತಾವು ಬದುಕುತ್ತಿರುವ ವರ್ತಮಾನದ ಬದುಕಿಗೂ ಈಗಾಗಲೇ ಪರಿಭಾವಿಸಿದ ತಮ್ಮ ದೇಸೀ ಬದುಕಿಗೂ ಇರುವ ಸಾಂಸ್ಕೃತಿಕ ಸಂಬಂಧದ ಸೂಕ್ಷ್ಮತೆಗಳ ಅಂತರವನ್ನು ಒಬ್ಬ ಬರಹಗಾರನಾಗಿ ಗ್ರಹಿಸುತ್ತಾರೆ. ಹೀಗೆ ಜೀವಂತಿಕೆಯ ಜೀವನ ಪ್ರಕ್ರಿಯೆಗಳನ್ನು ತಮ್ಮ ಸಾಹಿತ್ಯದ ಮೂಲಕ ಅವರು ದಾಖಲಿಸಿದ್ದಾರೆ. ಆ ಮೂಲಕ ಕರ್ನಾಟಕದ ದಿನಮಾನಗಳಿಗೆ ಪ್ರತಿಸ್ಪಂದಿಸಿದರು. ಮನುಷ್ಯನ ನೀಚತನಗಳನ್ನು ಯಾವ ಎಗ್ಗೂ ಸಿಗ್ಗೂ ಇಲ್ಲದೆ ಬಹಿರಂಗಗೊಳಿಸಿದರೆಂಬ ಅವರ ಸಾಹಿತ್ಯದ ಧೋರಣೆಗಳು ಸಾಂಸ್ಕೃತಿಕ ಸಂಘರ್ಷದ ಆಶಯಗಳನ್ನು ವ್ಯಕ್ತಪಡಿಸುತ್ತವೆ. ಇಂಥ ಮಾನವಪರ ಧೋರಣೆಯುಳ್ಳ ಸಾಮಾಜಿಕ ಪರಿಸರದಲ್ಲಿನ ಸಾಂಸ್ಕೃತಿಕ ಸಂಘರ್ಷದ ಸ್ವರೂಪವನ್ನು ಶೋಧಿಸುವುದೇ ಈ ಮಹಾಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಸಮಾಜ ನಿಂತ ನೀರಲ್ಲ. ಅದು ಹರಿಯುವ ನೀರು. ಇಲ್ಲಿ ಬದಲಾವಣೆ ಸಹಜ. ಆ ನಿರಂತರ ಬದಲಾವಣೆಯ ಪ್ರಕ್ರಿಯೆಗೆ ಒಳಪಡುವ ಸಮಾಜದಲ್ಲಿ ಹೊಸ-ಹೊಸ ಆಸೆ-ಆಕಾಂಕ್ಷೆಗಳಿಗೆ ಇಂಬು ದೊರೆಯುತ್ತದೆ. ಬದುಕಿನ ಎಲ್ಲ ವಲಯದಲ್ಲೂ ಸಾಧನೆ ಮತ್ತು ಸಿದ್ಧಿ ಕಂಡುಬರುತ್ತದೆ. ಸಾಹಿತ್ಯದ ಸತ್ಯ ಮತ್ತು ಸತ್ವ ಮನುಷ್ಯನ ಮನಸ್ಸಿನ ಮೇಲೆ ಉಂಟುಮಾಡುವ ಪರಿಣಾಮ ತುಂಬಾ ಮಹತ್ವದ್ದು. ಈ ದೃಷ್ಟಿಯಿಂದ ನಿಷ್ಠುರ, ಪ್ರಾಮಾಣಿಕ ಹಾಗೂ ಶಿಸ್ತಿನ ಬರವಣಿಗೆಯನ್ನು ಬರೆದ ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನಸಾಹಿತ್ಯವು ಪ್ರಸ್ತುತ ಸಂಶೋಧನೆಯ ಅಧ್ಯಯನದ ತೆಕ್ಕೆಗೆ ತೆಗೆದುಕೊಂಡು ಅದರ ವಸ್ತು, ಅನುಭವ ಮತ್ತು ಭಾವಸ್ಪಂದನೆಗೆ ಒಂದು ಸ್ವರೂಪಕೊಡುವುದು ಹಾಗೂ ಈ ಇಬ್ಬರು ಲೇಖಕರ ಸಾಹಿತ್ಯವನ್ನು ಅವಲೋಕಿಸಿದಾಗ ತೇಜಸ್ವಿ ಅವರ ಕೃತಿಗಳ ರಚನೆಗೆ ಮಲೆನಾಡಿನ ಪ್ರಾಕೃತಿಕ ಜಗತ್ತು ಹಾಗೂ

ವಿಜ್ಞಾನ ಇವರಿಗೆ ಪ್ರಭಾವಬೀರಿದವು. ಇವುಗಳ ಪ್ರೇರಣೆಯಿಂದ ಅವರ ಸಾಹಿತ್ಯ ಬರಹ ಸಿದ್ಧಿಗೊಂಡಿತು. ಆಲನಹಳ್ಳಿಯವರಿಗೆ ಬಯಲುಸೀಮೆಯ ದಟ್ಟ ಪ್ರಭಾವ ಹಾಗೂ ಬಾಲ್ಯದ ಅನುಭವಗಳು ಇವರಿಗೆ ಪ್ರಮುಖ ಪ್ರೇರಣೆಯಾಗಿವೆ. ಇವು ಸಾಂಸ್ಕೃತಿಕ ಸಂಬಂಧಗಳ ಬದುಕಿನ ಮಿಡಿತದಡಿಯಲ್ಲಿ ಹೇಗೆ ಮನೆಮಾಡಿಕೊಂಡಿವೆ ಎಂಬುದನ್ನು ಅರಿತಿರುವುದೇ ಈ ಮಹಾಪ್ರಬಂಧದ ಉದ್ದೇಶ.

ಅಧ್ಯಯನದ ವ್ಯಾಪ್ತಿ:

ಪ್ರಸ್ತುತ ಮಹಾಪ್ರಬಂಧದ ಪರಿಕಲ್ಪನೆ 'ಸಾಂಸ್ಕೃತಿಕ ಸಂಘರ್ಷದ ಸ್ವರೂಪ'ವನ್ನು ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನಸಾಹಿತ್ಯದ ಹಿನ್ನೆಲೆಯಲ್ಲಿ ನೋಡಲಾಗಿದೆ. ಈ ಲೇಖಕರು ತಮ್ಮ ಸಾಹಿತ್ಯ ಪ್ರಕಾರಗಳ ಸೀಮೋಲ್ಲಂಘನೆಯನ್ನು ಮೀರಿಬೆಳೆದಿರುವುದನ್ನು ಕಾಣಬಹುದು. ಸಣ್ಣಕಥೆಗಳು, ಕಾದಂಬರಿಗಳು, ಜೀವನಚರಿತ್ರೆ, ಕವಿತೆ, ನಾಟಕ, ವಿಮರ್ಶೆ, ಕಾಡಿನ ಕಥೆಗಳು, ಪರಿಸರ ಕಥೆಗಳು, ಪರಿಸರ ವಿಸ್ಮಯ ಮಾಲಿಕೆ, ಮಿಲೇನಿಯಂ ಪುಸ್ತಕ ಸರಣಿ ಇನ್ನೂ ಮುಂತಾದ ಆಯಾಮಗಳನ್ನು ವ್ಯಾಪಿಸಿಕೊಂಡಿದೆ. ಹೀಗೆ ಹಲವು ಪ್ರಕಾರಗಳಲ್ಲಿ ವೈವಿಧ್ಯಮಯವಾದ ವಿಶಾಲ ಸಾಹಿತ್ಯ ಹಾಗೂ ಸಾಹಿತ್ಯೇತರ ಕ್ಷೇತ್ರವನ್ನು ಒಂದು ನಿರ್ದಿಷ್ಟಪಡಿಸಿದ ಮಹಾಪ್ರಬಂಧದ ವ್ಯಾಪ್ತಿಯಲ್ಲಿ ತರುವುದು ಕಷ್ಟಸಾಧ್ಯ. ಹೀಗಾಗಿ ಅಧ್ಯಯನದ ಅನುಕೂಲತೆಗೆ ಆಲನಹಳ್ಳಿ ಹಾಗೂ ತೇಜಸ್ವಿ ಕಥನಸಾಹಿತ್ಯವನ್ನು ಕೇಂದ್ರೀಕರಿಸಿದೆ. ಆಲನಹಳ್ಳಿ ಕಾದಂಬರಿಗಳಾದ 'ಕಾಡು' 'ಪರಸಂಗದಗೆಂಡೆತಿಮ್ಮ' ಭುಜಂಗಯ್ಯನ ದಶಾವತಾರ', ತೇಜಸ್ವಿಯವರ ಕಾದಂಬರಿಗಳಾದ 'ಸ್ವರೂಪ', 'ನಿಗೂಡ ಮನುಷ್ಯರು', 'ಕರ್ವಾಲೋ', 'ಚಿದಂಬರರಹಸ್ಯ', 'ಜುಗಾರಿಕ್ರಾಸ್', 'ಕಾಡು ಮತ್ತು ಕ್ರೌರ್ಯ', 'ಮಾಯಾಲೋಕ-೧', ಆಲನಹಳ್ಳಿ ಕಥಾಸಂಕಲನಗಳಾದ 'ತಪ್ತ', 'ಫೀನಿಕ್ಸ್' 'ಗೋಡೆ', ತೇಜಸ್ವಿ ಕಥಾಸಂಕಲನಗಳಾದ 'ಹುಲಿಯೂರಿನ ಸರಹದ್ದು', 'ಅಬಚೂರಿನ ಪೋಸ್ಟಾಫೀಸು', 'ಪರಿಸರದ ಕಥೆಗಳು', 'ಕಿರಗೂರಿನ ಗಯ್ಯಾಳಿಗಳು' 'ಕೃಷ್ಣೇಗೌಡನ ಆನೆ' 'ಪಾಕಕ್ರಾಂತಿ ಮತ್ತು ಇತರ ಕಥೆಗಳು' ಇವುಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಹಾಗೆಯೇ ಸಾಂದರ್ಭಿಕವಾಗಿ ನವೋದಯ, ಪ್ರಗತೀಶೀಲ, ನವ್ಯ, ದಲಿತ-ಬಂಡಾಯ ಸಾಹಿತ್ಯದ ಕವಿಗಳನ್ನು ಮತ್ತು ಕೃತಿಗಳನ್ನು ಈ ಸಂಶೋಧನೆಯಲ್ಲಿ ಪೂರಕವಾಗಿ ಚರ್ಚಿಸಲಾಗಿದೆ.

ಆಲನಹಳ್ಳಿ ಹಾಗೂ ತೇಜಸ್ವಿಯವರನ್ನು ಕುರಿತಂತೆ ನಡೆದಿರುವ ಈವರೆಗಿನ ಅಧ್ಯಯನಗಳನ್ನು ಗಮನಿಸಿದಾಗ ಅವರ ಎಲ್ಲಾ ಸಾಹಿತ್ಯಕೃತಿಗಳು ಸಾಹಿತ್ಯಕ ಸಮಕಾಲೀನ ಪ್ರಜ್ಞೆ ಮತ್ತು ಚಿಂತನಾಕ್ರಮಗಳ ತಾರ್ಕಿಕ ಚರ್ಚೆಗಳು ಪ್ರೇರಣೆಪಡೆದಿದ್ದು ವಸಾಹತೋತ್ತರ ಸಂದರ್ಭದ ಬದಲಾವಣೆಯ ಕಾಲದೊಳಗೆ. ಇಂಥ ಆಧುನಿಕ ಸಂದರ್ಭದ ಹೊಸಚಿಂತನೆಗಳ ಬದಲಾವಣೆಯನ್ನು ಕರ್ನಾಟಕದ ಜನಜೀವನ ಸ್ವೀಕರಿಸಿದಾಗ ಉಂಟಾದ ತಲೆಮಾರಿನ

ಕಂಪನಗಳನ್ನು ಹೊಸದಕ್ಕೆ ತೆರೆದುಕೊಳ್ಳುವಾಗಿನ ಗ್ರಾಮಭಾರತದ ಸಂಗತಿಗಳನ್ನು ನಗರಕೇಂದ್ರಿತ, ವ್ಯಕ್ತಿಕೇಂದ್ರಿತ, ಪರಿಸರ ನಿಲುವಿನ ತಿಳುವಳಿಕೆಗಳನ್ನು ಕಟ್ಟಲು ಮನುಷ್ಯನ ಆ ಸಂದರ್ಭದಲ್ಲಿ ಉಂಟಾದ ವರ್ತನೆಗಳು, ತಲ್ಲಣಗಳು ಸಾಮಾಜಿಕವಾಗಿ ಅವನು ವರ್ತಿಸುವ ರೀತಿ ಇವುಗಳನ್ನು ಕಟ್ಟಲು ಆಲನಹಳ್ಳಿ ಹಾಗೂ ತೇಜಸ್ವಿ ಕಥನಮಾರ್ಗವನ್ನೇ ಹುಡುಕಿಕೊಳ್ಳುತ್ತಾರೆ. ಹಾಗೆ ನಿರ್ವಹಿಸಿಕೊಂಡ ಅವರ ಜೀವನಾನುಭವ ನವ್ಯಸಾಹಿತ್ಯದ ಪ್ರಕಾರ ಆಧುನಿಕತೆಯಲ್ಲೇ ಮೈತಾಳಿದ್ದು ಹಾಗೆ ನವ್ಯದ ಧೋರಣೆಗಳನ್ನು ಹೊತ್ತುಬಂದರೂ ಎಲ್ಲೋ ಒಂದುಕಡೆ ಮನುಷ್ಯ ಸಾಮಾಜಿಕವಾಗಿ, ಕೌಟುಂಬಿಕವಾಗಿ ಒಂದು ಬದುಕಿನ ಚೌಕಟ್ಟಿನಲ್ಲಿ ನಡೆಯುವ ಸಂಬಂಧಗಳ ಚರ್ಚೆಯ ಕಡೆಗೆ ಆಲನಹಳ್ಳಿ ಹಾಗೂ ತೇಜಸ್ವಿ ಕಥನಗಳು ಚಲಿಸುತ್ತವೆ. ಹಾಗಾಗಿ ಮನುಷ್ಯನ ತಾಕಲಾಟ ಮತ್ತು ಅಂತಃಕರಣಗಳನ್ನು ಶೋಧಿಸುವ ಔಚಿತ್ಯವಿದೆ. ಸದಾ ಹೊಸದರ ಹುಡುಕಾಟಕ್ಕಾಗಿ ತುಡಿಯುವ ಎಚ್ಚರದ ಸೂಕ್ಷ್ಮಪ್ರಜ್ಞೆಗಳು ಹೇಗೆ ಸಾರ್ವಕಾಲಿಕವಾಗಿ ಚರ್ಚೆಗೆ ಒಳಗಾಗುತ್ತವೆ ಎಂಬುದರ ಔಚಿತ್ಯದ ಶೋಧನೆಗಾಗಿ ಪ್ರಸ್ತುತ ಮಹಾಪ್ರಬಂಧ ಸಂಶೋಧನಾ ವಿವರಣೆಯನ್ನು ನಿರೂಪಿಸಿದೆ. ಆಲನಹಳ್ಳಿ ಹಾಗೂ ತೇಜಸ್ವಿಯವರು ಬರೆದದ್ದೇ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಜೀವನದ ಸಂದರ್ಭದಲ್ಲಿ ಅವರು ಬರೆಯಲು ಆರಂಭಿಸಿದ ವಸಾಹತೋತ್ತರ ಕಾಲಘಟ್ಟದಲ್ಲಿ ಕಂಡುಬಂದ ಸಾಂಸ್ಕೃತಿಕ ಮಾದರಿಗಳು ಹೇಗೆ ಪ್ರತಿಕ್ರಿಯಿಸುತ್ತವೆ ಎಂಬುದನ್ನು ಸಮಾಜದ ಒಟ್ಟಂದದಲ್ಲಿ ಗುರುತಿಸುವುದು ಪ್ರಬಂಧದ ಉದ್ದೇಶವಾಗಿದೆ. ಈಗಾಗಲೇ ಆಲನಹಳ್ಳಿ ಹಾಗೂ ತೇಜಸ್ವಿಯವರನ್ನು ಕುರಿತು ಸಂಶೋಧಿಸಿರುವ ಮಹಾಪ್ರಬಂಧಗಳ ಸಂಶೋಧಕರು ಮಂಡಿಸಿದ ಅಭಿಪ್ರಾಯಗಳಿಗೆ ಆಲನಹಳ್ಳಿ ಹಾಗೂ ತೇಜಸ್ವಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘರ್ಷಗಳ ವಿಭಿನ್ನರೂಪದ ಚರ್ಚೆಗಳು ಸಂಶೋಧಿತಗೊಂಡಿವೆ. ಆದರೆ ಈ ಲೇಖಕರು ಕಂಡ ಸಾಮಾಜಿಕ ಸಂಬಂಧಗಳ ರೂಪವು ಧಾರ್ಮಿಕ ಕಟ್ಟಲೆಗಳಲ್ಲಿ ಜಾತಿ, ವರ್ಗ, ವರ್ಣ, ಅಂತಸ್ತು, ಅಧಿಕಾರ, ಹಣ ಮೇಲುಕೀಳುಗಳೆಂಬ ಒಮ್ಮತವಿರದ ಒತ್ತಾಸೆಗಳಿಂದ ತುಂಬಿಹೋಗಿದ್ದ ಕಾಲವಾಗಿತ್ತು. ಅದೇ ಕಾಲಕ್ಕೆ ಕಥನಸಾಹಿತ್ಯವು ಆಯಾ ಕಾಲದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪಲ್ಲಟಗಳನ್ನು ಕಲಾತ್ಮಕವಾಗಿ ಹಿಡಿದಿಟ್ಟಿವೆ. ಸ್ವಂತಿಕೆ, ನಿಖರತೆ ಹಾಗೂ ವಿಶಿಷ್ಟ ಸಮಾಜೋಸಾಂಸ್ಕೃತಿಕ ಒಳನೋಟಗಳೇ ಕೂಡಿವೆ. ಇವರ ಸಾಹಿತ್ಯವನ್ನು ಇವು ಪುಷ್ಟಿಗೊಳಿಸಿವೆ. ತಮ್ಮ ಕಥನಸಾಹಿತ್ಯದ ಮೂಲಕ ಹೊಸಗನ್ನಡದ ಸಾಹಿತ್ಯ ಧೋರಣೆಗಳ ಮೇಲೆ ನೇರ ಪ್ರಭಾವಬೀರಿ ಹೊಸದಿಗಂತದ ಕಡೆಗೆ ಸಾಹಿತಿ–ಓದುಗರನ್ನು ಕರೆದೊಯ್ದ ಶಕ್ತಿ ಈ ಲೇಖಕರದು. ಹೀಗೆ ಬಹುವಿಧದಲ್ಲಿ ಸೃಜನಶೀಲತೆ ಹಲವು ಹವ್ಯಾಸ–ಪ್ರವೃತ್ತಿಗಳ ಸೃಜನಾತ್ಮಕತೆಗಳನ್ನು ಆವಿರ್ಭವಿಸಿದ ಹಿನ್ನೆಲೆಯು ಮುಖ್ಯವಾಗುತ್ತದೆ. ಈ ಚಿಂತನೆಗೆ ಉತ್ತರಗಳನ್ನು ಹುಡುಕುವ ಸಂಶೋಧನೆಯೇ ಪ್ರಸ್ತುತ ಮಹಾಪ್ರಬಂಧದ ಉದ್ದೇಶ. ಪ್ರಸ್ತುತ

ಮಹಾಪ್ರಬಂಧವು ಈಗಾಗಲೇ ವಿವಿಧ ವಿಶ್ವವಿದ್ಯಾನಿಲಯಗಳಿಗೆ ಸಲ್ಲಿಕೆಯಾಗಿರುವ ಮಹಾಪ್ರಬಂಧಗಳಲ್ಲಿ ಚರ್ಚಿಸಿರದ ಸಾಂಸ್ಕೃತಿಕ ಸಂಘರ್ಷದ ಸ್ವರೂಪವನ್ನು ವಿಶ್ಲೇಷಿಸುತ್ತದೆ.

ಅಧ್ಯಯನದ ವಿಧಾನ

ಆಲನಹಳ್ಳಿ ಹಾಗೂ ತೇಜಸ್ವಿಯವರನ್ನು ಕುರಿತ ಸಂಶೋಧನೆಗಳಲ್ಲಿ ಈ ಲೇಖಕರನ್ನು ಕುರಿತು ಬೇರೆ ಬೇರೆ ಆಯಾಮಗಳಿಗೆ ಶೋಧಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಶೀರ್ಷಿಕೆಯೇ ಸೂಚಿಸುವಂತೆ ಸಾಂಸ್ಕೃತಿಕ ಸಂಘರ್ಷದ ಮೂಲನೆಲೆಗಟ್ಟುಗಳನ್ನು ಇಡಿಯಾಗಿ ಬಿಡಿಯಾಗಿ ವಿವರಣಾತ್ಮಕ ಹಾಗೂ ತೌಲನಿಕ ವಿಧಾನದಲ್ಲಿ ಸಂಶೋಧಿಸುವುದು ಪ್ರಸ್ತುತ ಮಹಾಪ್ರಬಂಧದ ಅಧ್ಯಯನದ ವಿಧಾನವಾಗಿದೆ.

ಆಲನಹಳ್ಳಿ ಹಾಗೂ ತೇಜಸ್ವಿಯವರು ಕನ್ನಡ ಸಂಸ್ಕೃತಿಯನ್ನು ಕರ್ನಾಟಕದ ಜನಜೀವನವನ್ನು ತಮ್ಮ ಬರವಣಿಗೆಯ ಮೂಲಕ ಪ್ರಭಾವಿಸಿದವರು. ಇಲ್ಲಿನ ಜೀವನ ವೈವಿಧ್ಯದ ಸಂಬಂಧಗಳಿಗೆ ಮನುಷ್ಯನ ವರ್ತನೆಗಳನ್ನು ಪ್ರಶ್ನಿಸುತ್ತಾ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ಅಗತ್ಯಗಳನ್ನು ಅದರ ಒಳಿತು ಕೆಡುಕುಗಳನ್ನು ಮುಲಾಜಿಲ್ಲದೆ ಪ್ರಶ್ನಿಸಿದರು. ವಸಾಹತೋತ್ತರ ಭಾರತೀಯ ಸಂದರ್ಭದ ನವನಾಗರಿಕತೆಗೆ ತೆರೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಮನುಷ್ಯನ ಸಾಂಸ್ಕೃತಿಕ ತಲ್ಲಣಗಳಿಗೆ ಉತ್ತರದ ಹುಟುಕಾಟದಲ್ಲಿದ್ದ ಆಲನಹಳ್ಳಿ ಹಾಗೂ ತೇಜಸ್ವಿಯವರಿಗೆ ತಾವು ಕಂಡ ಮೂಲ ಘಟಕಗಳಿಂದ ವ್ಯಕ್ತಿ ಮತ್ತು ಸಮಾಜ, ಆಚರಣೆ ಮತ್ತು ಅನುಕೂಲ, ಪ್ರತಿಕೂಲ ಮತ್ತು ಸಾಂಸ್ಕೃತಿಕ ಮಾದರಿಗಳನ್ನು ಅವರ ಕಥಾನಕಗಳಿಗೆ ಕಾಣಿಸುವ ಪ್ರಯತ್ನ ಮಾಡಿದ್ದಾರೆ. ಒಬ್ಬ ಸೃಜನಶೀಲ ಲೇಖಕ ವ್ಯಕ್ತಿ ಮತ್ತು ಕುಟುಂಬಗಳನ್ನು ಆ ಮೂಲಕ ಸಾಮುದಾಯಿಕ ಸಂಸ್ಕೃತಿಯ ಮೇಲೆ ಉಂಟುಮಾಡುವ ಪರಿಣಾಮ, ಪ್ರೇರಣೆ ಮತ್ತು ಧೋರಣೆಗಳನ್ನು ತಮ್ಮ ಕಥಾನಕಗಳಿಗೆ ಕಟ್ಟಿಕೊಡುವ ಯತ್ನದಂತೆ ಅವರ ಕಥಾನಕಗಳು ಗೋಚರಿಸುತ್ತವೆ. ಸಾಮಾಜಿಕ ಸಂಗತಿಗಳು ಅವನ ಬದುಕಿನ ಬವಣೆ, ಚಿಂತನೆ ಅವನ ವ್ಯವಹಾರಿಕಬುದ್ಧಿ, ಕೃತ್ರಿಮತೆ, ಪರಿಸರದ ಪ್ರಭಾವ ಇವುಗಳೆಲ್ಲವನ್ನು ಈ ಲೇಖಕರ ಕಥಾನಕಗಳಲ್ಲಿ ಶೋಧಿಸಲು ಸಹಕಾರಿಯಾಗಲಿವೆ. ಭಾವುಕತೆಯಿದ್ದ ಜಾಗದಲ್ಲಿ ಚಿಂತನಾಕ್ರಮಗಳು ಕಣ್ಣಿಗೆ ಢಾಳಾಗಿ ಕಾಣಿಸುವಷ್ಟು ಬದಲಾದ ಪರಿಸರ ಕುಟುಂಬ ವಸ್ತು ವ್ಯಕ್ತಿಗಳನ್ನು ಹೇಗೆ ನಿಯಂತ್ರಿಸುತ್ತದೆ ಎಂಬ ವಿಲಕ್ಷಣ ಮಾದರಿಗಳನ್ನು ಆಲನಹಳ್ಳಿ ಹಾಗೂ ತೇಜಸ್ವಿ ತಮ್ಮ ಕಥಾನಕಗಳಲ್ಲಿ ಕಂಡುಕೊಳ್ಳುವ ಮೂಲಕ ವಿಶ್ಲೇಷಣಾತ್ಮಕ ಮತ್ತು ತೌಲನಿಕ ವಿಧಾನದಲ್ಲಿ ಸಂಶೋಧನಾ ಅಧ್ಯಯನವನ್ನು ಕೈಗೊಳ್ಳಲಾಗಿದೆ. ವಸಾಹತೋತ್ತರ ಕಾಲದಲ್ಲಿ ಹೊಸ ಮಾನದಂಡಗಳೊಂದಿಗೆ ವಿಭಿನ್ನವಾಗಿ ಬೆಳೆದುಬಂದ ಈ ವಿವರಣಾತ್ಮಕ ವಿಶ್ಲೇಷಣೆಯ ಗ್ರಹಿಕೆಗಳು ಸಂಶೋಧನೆಯ

ಮೇಲೂ ಹೆಚ್ಚು ಪರಿಣಾಮವನ್ನು ಬೀರಿದವು. ಇಲ್ಲಿಯೂ ಸಹ ಸಾಕ್ಷ್ಯ ತೀರ್ಮಾನ ಹಾಗೂ ಸಿದ್ಧಾಂತಗಳು ಎಂಬ ಸೂಚ್ಯಂಕಗಳಲ್ಲಿ ವಿಮರ್ಶೆಯ ಪರಿಭಾಷೆಯ ಸಂಶೋಧನೆಯು ಸಂಶೋಧನಾ ವಿಧಾನಗಳಿಗೆ ಒಂದಾಯಿತು. ಲೇಖಕ ಸೃಷ್ಟಿಸಿದ ಸೃಜನಶೀಲ ಕೃತಿಯೊಂದರ ವಸ್ತು, ಭಾಷೆ, ಪಾತ್ರ, ಘಟನೆ, ಸಾಮಾಜಿಕ ಸಂದರ್ಭ, ಸಾಂಸ್ಕೃತಿಕ ಘನತೆ ಮುಂತಾದ ಆಯಾಮಗಳು ಸೃಜನಶೀಲ ಕೃತಿಯೊಂದು ಕೊಡುವ ಲಭ್ಯತೆಯ ಸಾಕ್ಷ್ಯಗಳಾಗುತ್ತವೆ. ಕೃತಿರಚನೆಯ ಕಾಲಮಾನದ ಸಾಮಾಜಿಕ ಸಂದರ್ಭಗಳು, ನಂಬಿಕೆಗಳು ವಿಮರ್ಶಾತ್ಮಕ ವಿಶ್ಲೇಷಣೆಯ ನೆಲೆಗಳಾಗುತ್ತವೆ. ಸೃಷ್ಟಿಶೀಲಬರಹ ಸೃಷ್ಟಿಸಿದ ಸಾಂಸ್ಕೃತಿಕ ಚಿಂತನೆಗಳು ಮನುಷ್ಯನಲ್ಲಿ ಉಂಟಾದ ತಲ್ಲಣಗಳು ಸೂಕ್ಷ್ಮವಾಗಿವೆಯೋ, ಸ್ಥೂಲವಾಗಿವೆಯೋ ಎಂಬುದನ್ನು ತೀರ್ಮಾನಿಸಿಕೊಂಡು ಕೈಗೊಳ್ಳುವ ಸಂಶೋಧನಾ ವಿಧಾನ ವಿಮರ್ಶಾತ್ಮಕ ವಿಶ್ಲೇಷಣೆಯಾಗುತ್ತದೆ. ಪ್ರಸ್ತುತ ಮಹಾಪ್ರಬಂಧದ ಸಂಶೋಧನಾ ವಿಧಾನವೂ ವಸಾಹತೋತ್ತರ ಕಾಲದಲ್ಲಿ ವ್ಯಾಪಕಗೊಂಡ ತೌಲನಿಕ ವಿಶ್ಲೇಷಣೆಯ ಸಂಶೋಧನಾ ವಿಧಾನವನ್ನು ಅಳವಡಿಸಿಕೊಂಡಿದೆ.

ಆಧುನಿಕ ಕಾಲದ ವಿಮರ್ಶಾಮಾನದಂಡಗಳು ಹೊಸದರ ಹುಡುಕಾಟಕ್ಕೆ ಸಶಕ್ತವಾದ ಸಂಶೋಧನಾ ವಿಧಾನಗಳಾಗಿ ಬಳಕೆಯಾಗುತ್ತಿವೆ. ಈ ಹಿನ್ನೆಲೆಯಲ್ಲಿ ಕಥನಸಾಹಿತ್ಯವು ಬೇರೆಬೇರೆ ಪ್ರದೇಶ, ಭಾಷೆ, ಪರಿಸರ ವ್ಯಾಪ್ತಿಗಳಲ್ಲಿ ತನ್ನ ಪಾತ್ರಪ್ರಪಂಚವನ್ನು ಹೆಣೆದುಕೊಂಡಿರುವುದರಿಂದ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಭಿನ್ನಪರಿಸರದ ಒಳಗೆ ಚರ್ಚಿಸುವ ವಿಧಾನ ಪ್ರಸ್ತುತ ಮಹಾಪ್ರಬಂಧದ ಆಶಯವಾಗಿದೆ. ಆಲನಹಳ್ಳಿ ಹಾಗೂ ತೇಜಸ್ವಿಯವರು ಕಟ್ಟಿಕೊಟ್ಟ ಸಾಂಸ್ಕೃತಿಕ ಚಿಂತನೆಗಳು, ಮನುಷ್ಯನ ತಲ್ಲಣ, ತಳಮಳಗಳನ್ನು ಅವರ ಸೃಜನಶೀಲ ಕೃತಿಗಳನ್ನು ಅಧ್ಯಯನ ಮಾಡುವುದರ ಜೊತೆಗೆ ಸೃಷ್ಟಿಶೀಲಬರಹವೊಂದು ಬಂದ ನಂತರ ನಡೆದ ಚರ್ಚಾಸ್ಪದ ವಿಶ್ಲೇಷಣೆಗಳು, ವಿಮರ್ಶಾತ್ಮಕ ವಿವರಣೆಗಳು ಸೂಚಿಸಿದ ತರ್ಕಗಳು, ಬಿಚ್ಚಿಟ್ಟ ಸತ್ಯಗಳು, ನಿಗೂಢಗಳು ಒಟ್ಟಾರೆ ಕೃತಿಯ ಗುಣಾವಗುಣಗಳ ಕುರಿತ ಸತ್ಯಾನ್ವೇಷಣೆಗಳು ಇಲ್ಲಿ ಮುಖ್ಯವಾಗುತ್ತವೆ. ಇಲ್ಲಿ ಹೊಸದರ ಹುಡುಕಾಟಕ್ಕೆ ಅದರ ಚಿಂತನಾತ್ಮಕ ತಿಳುವಳಿಕೆಗೆ ಆಧುನಿಕ ವಿಶ್ಲೇಷಣಾ ಸ್ಥಾನದ ಸಂಶೋಧನೆಯು ತೌಲನಿಕ ಅಧ್ಯಯನ ವಿಧಾನವನ್ನು ಆಯ್ಕೆಮಾಡಿಕೊಂಡಿದೆ.

- ಮೂಲಕೃತಿಗಳು ಮತ್ತು ಆಲನಹಳ್ಳಿ ಹಾಗೂ ತೇಜಸ್ವಿಯವರನ್ನು ಕುರಿತಂತೆ ಬರೆದ ವಿಮರ್ಶಾ ಬರವಣಿಗೆಗಳ ಪರಿಸರಾತ್ಮಕ ಚಿಂತನೆಗಳೊಡನೆ ಚರ್ಚಿಸುವುದು.
- ಆಲನಹಳ್ಳಿ ಹಾಗೂ ತೇಜಸ್ವಿಯವರ ಕುರಿತಾದ ಇತರೆ ಬರಹಗಾರರ ತೌಲನಿಕ ಅಧ್ಯಯನದ ಈವರೆಗಿನ ಸಮೀಕ್ಷೆಯ ಒಪ್ಪಿತ ಅಭಿಪ್ರಾಯಗಳ ಸಂಗ್ರಹ ಹಾಗೂ

ಈವರೆಗಿನ ಈ ಲೇಖಕರನ್ನು ಕುರಿತ ಸಾಂದರ್ಭಿಕ ವಿವರಗಳ ಚರ್ಚೆ ಹಾಗೂ ಮಂಥನ.

- ಸಮಕಾಲೀನ ಸಾಹಿತ್ಯದ ಸಂದರ್ಭದಲ್ಲಿ ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನದ ಪ್ರಸ್ತುತತೆ ಕುರಿತ ಬಿಡಿ ಬರಹಗಳು ಮತ್ತು ಸೂಚ್ಯಂಕಗಳ ಅವಲೋಕನ.
- ಆಲನಹಳ್ಳಿ ಹಾಗೂ ತೇಜಸ್ವಿಯವರ ಒಟ್ಟು ಫಲಿತಗಳ ಸಿದ್ಧಮಾದರಿಗಳ ಮಹಾಪರಿಶೀಲನೆ ಚಿಂತನೆಯಲ್ಲಿನ ಆಮೂಲಾಗ್ರ ಹೊಸ ಸಂದೇಶಗಳ ಹುಡುಕಾಟ.
- ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನ ಮಾದರಿಗಳ ಹೊಸ ಬದಲಾವಣೆ ಮತ್ತು ಸೂಕ್ಷ್ಮತೆಯ ಅವಲೋಕನದ ಸೈದ್ಧಾಂತಿಕ ನಿಲುವುಗಳ ನೋಟ.

ಪ್ರಸ್ತುತ ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನ ಸಾಂಸ್ಕೃತಿಕ ಸಂಘರ್ಷದ ಸ್ವರೂಪವನ್ನು ಕುರಿತಂತೆ ವಿವರಣಾತ್ಮಕ ಮತ್ತು ತೌಲನಿಕ ಸಂಶೋಧನಾ ವಿಧಾನದ ಮುಖೇನ ಒಟ್ಟಾರೆ ಸಾಂಸ್ಕೃತಿಕ ಸಂಘರ್ಷದ ಶೋಧಿತ ಫಲಿತಗಳನ್ನು ಶೋಧಿಸುವುದು ಪ್ರಸ್ತುತ ಮಹಾಪ್ರಬಂಧದ ಸಂಶೋಧನೆಯ ವಿಧಾನವಾಗಿದೆ.

ಸಂಶೋಧನಾ ಅಧ್ಯಯನದ ಮಿತಿಗಳನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನಗಳನ್ನು ಆಧರಿಸಿದ ಈ ಅಧ್ಯಯನ ಕಥೆ ಮತ್ತು ಕಾದಂಬರಿಗಳನ್ನು ಮಾತ್ರ ಕೇಂದ್ರೀಕರಿಸಿದೆ. ಕಥನದ ವ್ಯಾಪ್ತಿಗೆ ಸೇರಬಹುದಾದ ನಾಟಕಗಳನ್ನು, ಕಾವ್ಯವನ್ನು ಪರಿಗಣಿಸಿಲ್ಲ, ವಿಮರ್ಶಾ ಬರಹಗಳನ್ನು ಪರಿಗಣಿಸಿಲ್ಲ. ಇವನ್ನು ನಾನು ಮಿತಿ ಎಂದೇ ಪರಿಭಾವಿಸಿಕೊಳ್ಳುತ್ತೇನೆ. ಆದರೆ ವಸ್ತುನಿಷ್ಠ ಅಧ್ಯಯನಕ್ಕೆ ಈ ಬರಹದ ಆಯ್ಕೆ ಅಗತ್ಯವಾಗಿದೆ. ಸಾಂಸ್ಕೃತಿಕ ಸಂಘರ್ಷ ಎಂಬ ಪರಿಕಲ್ಪನೆಯಡಿಯಲ್ಲಿ ನನ್ನ ಅಧ್ಯಯನ ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥೆ ಮತ್ತು ಕಾದಂಬರಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ನನ್ನ ಅಧ್ಯಯನದ ಅನುಕೂಲಕ್ಕೆ ಮಹಾಪ್ರಬಂಧವನ್ನು ಈ ಕೆಳಕಂಡ ಅಧ್ಯಾಯಗಳಲ್ಲಿ ವಿಶ್ಲೇಷಿಸಿರುತ್ತೇನೆ.

ಮೊದಲನೇ ಅಧ್ಯಾಯವು ಸಂಶೋಧನಾ ಮಹಾಪ್ರಬಂಧದ ಒಟ್ಟು ಸ್ವರೂಪವನ್ನು ಒಳಗೊಂಡಂತೆ ಅಧ್ಯಯನ ಸ್ವರೂಪ ಹಾಗೂ ವ್ಯಾಪ್ತಿಯನ್ನು ಒಳಗೊಂಡಿದ್ದು ಸಂಶೋಧನಾ ವಿಷಯದ ಆಯ್ಕೆ ಮತ್ತು ಪರಿಚಯವನ್ನು ವಿಶ್ಲೇಷಿಸಿಕೊಂಡಿದೆ ಮತ್ತು ಅಧ್ಯಯನದ ಮಿತಿಗಳು ಹಾಗೂ ಅಧ್ಯಯನದ ವಿಂಗಡಣೆಗಳ ವಿವರವನ್ನು ನೀಡಲಾಗಿದೆ.

ಎರಡನೆಯ ಅಧ್ಯಾಯವು ಈವರೆಗಿನ ಆಲನಹಳ್ಳಿ ಹಾಗೂ ತೇಜಸ್ವಿ ಕುರಿತ ಪೂರ್ವ ಸಾಹಿತ್ಯ ಸಮೀಕ್ಷೆಯನ್ನು ಪರಿಶೀಲಿಸುವುದರ ಮೂಲಕ ಅಧ್ಯಯನಕ್ಕೆ ಒದಗಬಹುದಾದ ವಿಭಿನ್ನ

ಅಭಿಪ್ರಾಯಗಳನ್ನು ಸಂಗ್ರಹಿಸಿ ಚರ್ಚಿಸಲಾಗಿದೆ. ಹಾಗೂ ಈವರೆಗಿನ ಆಲನಹಳ್ಳಿ ಹಾಗೂ ತೇಜಸ್ವಿ ಅವರನ್ನು ಕುರಿತ ಸಂಶೋಧನಾತ್ಮಕ ಪ್ರಬಂಧಗಳನ್ನು ಸಮೀಕ್ಷಿಸುವುದರ ಮೂಲಕ ಪ್ರಸ್ತುತ ಮಹಾಪ್ರಬಂಧದ ಶೋಧನೆಯ ಹುಡುಕಾಟಕ್ಕೆ ಸಾಂಸ್ಕೃತಿಕ ಸಂಘರ್ಷದ ಸ್ವರೂಪದ ನಿರ್ದಿಷ್ಟವಾದ ಗುರಿ ಮತ್ತು ನೆಲೆಯನ್ನು ಅಧ್ಯಯನ ಸ್ಪಷ್ಟವಾಗಿ ಕಂಡುಕೊಂಡಿದೆ.

ಮೂರನೆಯ ಅಧ್ಯಾಯವು ನಿರ್ದಿಷ್ಟಪಡಿಸಿದ್ದ ಕನ್ನಡ ಕಥನಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ ಒಂದು ಅವಲೋಕನವನ್ನು ಯಶಸ್ವಿಯಾಗಿ ಈಡೇರಿಸಿಕೊಂಡಿದೆ. ವಿಶ್ಲೇಷಣೆ ಹಾಗೂ ವಿವರಣೆಯ ಮಾರ್ಗದಲ್ಲಿ ಸಾಂಸ್ಕೃತಿಕ ಸಂಘರ್ಷದ ವಿವರಣೆಯನ್ನು ತನ್ನ ಅಧ್ಯಯನದ ಮಿತಿಯಲ್ಲಿ ಗುರುತಿಸಿಕೊಂಡು ಮುಂದಿನ ಸಂಶೋಧನೆಯ ಸಾಧ್ಯತೆಗಳಿಗೆ ಬಿಟ್ಟುಕೊಟ್ಟಿದೆ. ಹಾಗೂ ಮಹಾಪ್ರಬಂಧವೂ ಪ್ರಸ್ತುತ ಏಳು ಆಧ್ಯಾಯಗಳಲ್ಲಿ ಕಂಡುಕೊಂಡ ಆಲನಹಳ್ಳಿ ಹಾಗೂ ತೇಜಸ್ವಿ ಅವರು ಕಟ್ಟಿದ ಸಾಂಸ್ಕೃತಿಕ ಮುಖಾಮುಖಿಯನ್ನು ಒಟ್ಟಂದದ ಪರಿಕಲ್ಪನೆಗಳು ಫಲಿತಗಳಲ್ಲಿ ಫಲಿಸಿವೆ ಎಂಬುದನ್ನು ಪ್ರಬಂಧ ಘೋಷಿಸಿಕೊಳ್ಳುತ್ತದೆ.

ನಾಲ್ಕನೆಯ ಅಧ್ಯಾಯದಲ್ಲಿ 'ಆಲನಹಳ್ಳಿಯವರ ಕಥನಸಾಹಿತ್ಯದ ತಾತ್ವಿಕತೆ' ಎಂಬ ಶೀರ್ಷಿಕೆಯನ್ನೂ ಹಾಕಿಕೊಂಡಿದ್ದೇನೆ. ಆಲನಹಳ್ಳಿ ಕಥನವನ್ನು ಅವಲೋಕಿಸಿದಾಗ ನವ್ಯ ಸಂದರ್ಭದಲ್ಲಿ ಬಂದಿರುವ ಹಲವಾರು ಕಥೆಗಳಲ್ಲಿ ಮತ್ತು ಕಾದಂಬರಿಗಳಲ್ಲಿ ಈ ಪರಿಕಲ್ಪನೆ ಬಹಳ ವಿಸ್ತಾರವಾಗಿ ಮೂಡಿಬಂದಿರುವುದರನ್ನು ಕಾಣುತ್ತೇವೆ. ಇವರ ಕಥನಸಾಹಿತ್ಯದಲ್ಲಿ ಗ್ರಾಮ ಮತ್ತು ನಗರಜೀವನ, ಗಂಡುಹೆಣ್ಣಿನ ಸಂಬಂಧಗಳು, ಕುಟುಂಬ ಮತ್ತು ವಿಷಮದಾಂಪತ್ಯ, ಜಾತಿ ಮತ್ತು ಸಮಾಜ ಇವು ಹೇಗೆ ಹೆಣೆದುಕೊಂಡಿವೆ ಎಂಬುದನ್ನು ಆಲನಹಳ್ಳಿಯವರ 'ಕಾಡು', 'ಪರಸಂಗದ ಗೆಂಡೆತಿಮ್ಮ', 'ಭುಜಂಗಯ್ಯನ ದಶಾವತಾರ', ತಪ್ತ, ಫೀನಿಕ್ಸ್, ಗೋಡೆ, 'ಸುಟ್ಟತಿಕದದೇವರು', 'ಮಾಮರವೋ ಮಾಪಿಳ್ಳೆಯೋ' ಇಂಥ ಸೃಜನಶೀಲಬರಹಗಳಲ್ಲಿ ಸಾಂಸ್ಕೃತಿಕ ಸಂಘರ್ಷದ ಎಳೆಗಳನ್ನು ಗುರುತಿಸುವ ಸೂಕ್ಷ್ಮಾತಿಸೂಕ್ಷ್ಮ ಚಿಂತನೆಗಳನ್ನು ಗುರುತಿಸಲಾಗಿದೆ. ಆಧುನಿಕ ಕಾಲಘಟ್ಟದ ಮನುಷ್ಯನ ಬದುಕಿನೊಡನೆ ಸಂಘರ್ಷಕ್ಕಿಳಿಯಬೇಕಾದ ಅನಿವಾರ್ಯ ಘಟ್ಟದಲ್ಲಿ ಆಧುನಿಕತೆಯ ವಿಘಟನಕಾರಿ ಗೊಂದಲಗಳನ್ನು ಮುಖಾಮುಖಿಯಾಗಿ ಎದುರಿಸುವಂತಹ ಹಲವು ಪಾತ್ರಗಳ ಸಂದರ್ಭಗಳಲ್ಲಿ ಈ ಮಹಾಪ್ರಬಂಧವನ್ನು ಸಂಶೋಧಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ 'ತೇಜಸ್ವಿ ಅವರ ಕಥನಸಾಹಿತ್ಯದ ತಾತ್ವಿಕತೆ' ಎಂಬ ಶೀರ್ಷಿಕೆಯನ್ನು ಹಾಕಿಕೊಂಡಿದ್ದೇನೆ. ತೇಜಸ್ವಿಕಥನವನ್ನು ಅವಲೋಕಿಸಿದಾಗ ನವ್ಯಸಾಹಿತ್ಯ ಸಂದರ್ಭದಲ್ಲಿ ಬಂದಿರುವ ಹಲವಾರು ಕಥೆಗಳು ಮತ್ತು ಕಾದಂಬರಿಗಳಲ್ಲಿ ಈ ಪರಿಕಲ್ಪನೆ ಬಹಳ ವಿಸ್ತಾರವಾಗಿ ಮೂಡಿಬಂದಿರುವುದನ್ನು ಕಾಣುತ್ತೇವೆ. ಇವರ ಕಥನಸಾಹಿತ್ಯದಲ್ಲಿ ವ್ಯಕ್ತಿ ವಿಶಿಷ್ಟತೆ ಮತ್ತು ನಿರೂಪಣಾ ವಿಧಾನ, ಗ್ರಾಮ ಸಂಸ್ಕೃತಿಯ ಶೋಧ, ಆಧುನಿಕತೆ ಮತ್ತು ಸಂಘರ್ಷ,

ಪರಿಸರ ಮತ್ತು ಮಾನವಸಮಾಜದ ಅಂತರ್‌ಸಂಬಂಧಗಳು ಹೇಗೆ ಹೆಣೆದುಕೊಂಡಿವೆ ಎಂಬುದನ್ನು ತೇಜಸ್ವಿಯವರ 'ಸ್ವರೂಪ' 'ನಿಗೂಢ ಮನುಷ್ಯರು', 'ಕರ್ವಾಲೋ', 'ಕಾಡು ಮತ್ತು ಕ್ರೌರ್ಯ', 'ಚಿದಂಬರರಹಸ್ಯ', 'ಜಗಾರಿ ಕ್ರಾಸ್' 'ಮಾಯಾಲೋಕ-೧', 'ಹುಲಿಯೂರಿನ ಸರಹದ್ದು', 'ಅಬಚೂರಿನ ಪೋಸ್ಟಾಫೀಸು' 'ಕಿರಗೂರಿನ ಗಯ್ಯಾಳಿಗಳು', 'ಪರಿಸರದ ಕಥೆಗಳು', 'ಪಾಕಕ್ರಾಂತಿ ಮತ್ತು ಇತರ ಕಥೆಗಳು' ಇಂಥ ಸೃಜನಶೀಲ ಬರಹಗಳ ಮೂಲಕ ಸಾಂಸ್ಕೃತಿಕ ಸಂಘರ್ಷದ ಎಳೆಗಳನ್ನು ಗುರುತಿಸುವ ಸೂಕ್ಷ್ಮಾತಿಸೂಕ್ಷ್ಮ ಚಿಂತನೆಗಳನ್ನು ಗುರುತಿಸಲಾಗಿದೆ. ಬದುಕು ಮತ್ತು ಚಿಂತನೆ ಹೇಗೆ ಒಂದರೊಡನೊಂದು ಬೆರೆತು ಒಂದು ಸಂಸ್ಕೃತಿಯನ್ನು ರೂಪಿಸಿಕೊಳ್ಳುತ್ತಾ ಸಾಗುತ್ತದೆ ಎಂಬುದರ ಹಿನ್ನೆಲೆಯಲ್ಲಿ ಕಥನವು ಚಿತ್ರಿತಗೊಂಡಿದೆ. ಪ್ರತಿಯೊಂದು ಕಾಲಘಟ್ಟದಲ್ಲೂ ಭಿನ್ನವಾದ ಚಿಂತನೆಗಳು ಕಂಡುಬರುತ್ತವೆಂಬುದು ನಿಜವಾದರೂ ಅವು ಒಂದರಿಂದ ಮತ್ತೊಂದು ಪ್ರಭಾವಿತಗೊಂಡಿರುತ್ತವೆ. ಹಾಗೆಯೇ ಪ್ರಭಾವವನ್ನು ತನ್ನೊಳಗಿಟ್ಟುಕೊಂಡೇ ಇನ್ನೊಂದು ಆಯಾಮದೆಡೆಗೆ ಚಲಿಸುವ ಪ್ರಯತ್ನ ಮಾಡಿದೆ. ಈ ಪ್ರಭಾವ ಮತ್ತು ಚಲಿಸುವ ಪ್ರಯತ್ನದ ಮೂಲ ಹೇಗೆ ಸೃಜನಶೀಲವಾಗಿದೆ ಎಂಬುದನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಆರನೆಯ ಅಧ್ಯಾಯದಲ್ಲಿ ಆಲನಹಳ್ಳಿ ಹಾಗೂ ತೇಜಸ್ವಿ ಅವರ ಕಥನಸಾಹಿತ್ಯದಲ್ಲಿ ಸಾಂಸ್ಕೃತಿಕವಾಗಿ ಮುಖಾಮುಖಿಯಾಗಿಸಿದ ಸಂದರ್ಭಗಳಲ್ಲಿ ತೌಲನಿಕ ವಿವೇಚನೆಯನ್ನು ಮಾಡಲಾಗಿದೆ. ಈ ಇಬ್ಬರೂ ಲೇಖಕರಲ್ಲಿ ವ್ಯಕ್ತವಾಗಿರುವ ನಗರದ ನಾಗರೀಕ ಬದುಕು, ಬದಲಾದ ಗ್ರಾಮೀಣ ಪರಿಸರ, ಮಲೆನಾಡಿನ ಪ್ರಕೃತಿ ಸೊಬಗು ಮುಂತಾದವುಗಳನ್ನು ಹಳೆಯ ಹಾಗೂ ಹೊಸಜೀವನ ಕ್ರಮಗಳ ಸಂಘರ್ಷ, ಸಾಮಾಜಿಕಮೌಲ್ಯಗಳ ಮತ್ತು ವೈಯಕ್ತಿಕಮೌಲ್ಯಗಳ ಮುಖಾಮುಖಿ, ನೈತಿಕ ನಿಯಮಗಳನ್ನು ಮೀರಿ ಹೊಸ ನೈತಿಕ ನಿಯಮಗಳನ್ನು ಸೃಷ್ಟಿಸಿಕೊಳ್ಳುವಿಕೆ, ಮುಗ್ಧತೆ ಮತ್ತು ವೈಚಾರಿಕತೆ ಹೀಗೆ ಚರ್ಚಿಸಲಾಗಿದೆ. ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನಸಾಹಿತ್ಯದಲ್ಲಿ ಗ್ರಾಮ ಸಂಸ್ಕೃತಿಯ ಶೋಧದ ತೌಲನಿಕತೆ, ಗಂಡುಹೆಣ್ಣುಗಳ ಸಂಬಂಧದ ಶೋಧ, ಭಾಷೆ ಮತ್ತು ಆಭಿವ್ಯಕ್ತಿಕ್ರಮಗಳನ್ನೂ ಈ ಇಬ್ಬರೂ ಲೇಖಕರಿಗೆ ಬಳಸಿರುವ ಬಗೆಯನ್ನು ಸಾಂಸ್ಕೃತಿಕ ಸಂಘರ್ಷದ ನೆಲೆಗಳಾಗಿ ಅಧ್ಯಯನ ನಡೆಸಿ ತೌಲನಿಕವಾಗಿ ಚರ್ಚೆಗೆ ಒಳಪಡಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಸಮಾರೋಪದಲ್ಲಿ ಅಧ್ಯಯನವು ತನ್ನ ಉದ್ದೇಶಗಳ ಈಡೇರಿಕೆಗಾಗಿ ರೂಪಿಸಿಕೊಂಡಿದ್ದ ಅಧ್ಯಯನದ ವಿಧಾನಗಳನ್ನು ವಿಶ್ಲೇಷಣಾ ಮಾದರಿಗಳನ್ನು ಗ್ರಹಿಸಿಕೊಂಡ ಗೃಹೀತಗಳನ್ನು ಅಧ್ಯಯನದ ಫಲಿತಗಳ ನಿರೂಪಣೆಯಲ್ಲಿ ದಾಖಲಿಸಿಕೊಂಡಿದೆ. ಈ ಮಹಾಪ್ರಬಂಧದ ಚೌಕಟ್ಟಿಗೆ ಅಗತ್ಯವಾಗಿ ಬೇಕಾಗಿದ್ದ ಅಧ್ಯಯನದ ಪರಿಕರಗಳು ಅಧ್ಯಯನದ

ಆಕರಗಳು, ಲಭ್ಯವಿದ್ಧ ವಿಮರ್ಶಾತ್ಮಕ ಚಿಂತನೆಗಳು, ಜಿಜ್ಞಾಸೆಗೊಳಗಾಗಿದ್ದು ಅದನ್ನು ಸ್ವೀಕರಿಸಲು ಸಿದ್ಧವಿದೆಯೆಂಬ ಪ್ರಜಾಸತ್ತಾತ್ಮಕ ಸ್ವೀಕೃತಿಯೊಂದಿಗೆ ಸಮಾರೋಪ ನಿರೂಪಿತಗೊಂಡಿದೆ.

ಈ ರೀತಿಯಾಗಿ ನನ್ನ ಸಂಶೋಧನೆಯು ಆಲನಹಳ್ಳಿ ಹಾಗೂ ತೇಜಸ್ವಿ ಅವರ ಕಥನಸಾಹಿತ್ಯದೆಡೆಗೆ ಇರುವ ಸೂಕ್ಷ್ಮ ಒಳನೋಟಗಳನ್ನು ಶೋಧಿಸಿದೆ. ಮೇಲಿನ ಎಲ್ಲಾ ಅಂಶಗಳ ಮೂಲಕ ಅಪೂರ್ವ ಮತ್ತು ಅಪರೂಪದ ಸಾಧ್ಯತೆಗಳನ್ನು ನಿರಂತರವಾಗಿ ಶೋಧಿಸಿಕೊಟ್ಟ ಆಲನಹಳ್ಳಿ ಹಾಗೂ ತೇಜಸ್ವಿ ಅವರು ಅದ್ಭುತ – ಸೋಜಿಗ – ಬೆರಗುತರುವ ಅನಿಯತ ಲೋಕವನ್ನು ಕನ್ನಡಿಗರಿಗೆ ಪರಿಚಯಿಸಿದವರು. ಅವರವರ ಭಾಗದ ಪ್ರಕೃತಿ ಮತ್ತು ಸಂಸ್ಕೃತಿಗಳ ಜೊತೆಯಾಟ, ಅದಕ್ಕನುಗುಣವಾದ ಮನುಷ್ಯ ಬದುಕಿನ ಮೇಲಾಗುವ ಪರಿಣಾಮ ಇವರ ಈ ಕಥನಸಾಹಿತ್ಯದ ಅಭ್ಯಾಸದಿಂದ ಲಭ್ಯವಾಗುತ್ತವೆ. ಹೀಗಾಗಿ ಇವರ ಕಥನಸಾಹಿತ್ಯದ ಸಾಂಸ್ಕೃತಿಕ ಸಂಘರ್ಷದ ಸ್ವರೂಪವನ್ನು ಸಾಂಸ್ಕೃತಿಕ ಸಂಗತಿಗಳನ್ನು ಗುರುತಿಸುವಾಗ ಸಂಶೋಧನಾ ವಿಧಾನಗಳ ಅಳವಡಿಕೆಯೊಂದಿಗೆ ವಿಶ್ಲೇಷಿಸಲು ಈ ಅಧ್ಯಯನ ಆಸಕ್ತವಾಗಿದೆ.

ಅಧ್ಯಾಯ ಎರಡು

ಇದುವರೆಗೆ ನಡೆದಿರುವ ಅಧ್ಯಯನಗಳ ತಾತ್ವಿಕ ಸಮೀಕ್ಷೆ

ಕನ್ನಡ ಸಾಹಿತ್ಯ ಪರಂಪರೆಯು ತನ್ನದೇ ಆದ ಅರಿವು ಮತ್ತು ಹರಹನ್ನು ಕಾಲಕಾಲಕ್ಕೆ ವಿಸ್ತರಿಸಿಕೊಳ್ಳುತ್ತಲೇ ಬಂದಿದೆ. ಅಭಿಜಾತ ನೆಲೆಯಿಂದ ಹಿಡಿದು ಪಾಶ್ಚಾತ್ಯ ಪರಿಕಲ್ಪನೆಗಳವರೆವಿಗೂ ಅದು ತನ್ನ ವಿಭಿನ್ನ ನೆಲೆಗಳನ್ನು ಅನುಸಂಧಾನಗೊಳಿಸಿಕೊಳ್ಳುತ್ತದೆ. ಈ ನೆಲದ ಅಭಿವ್ಯಕ್ತಿಯ ದನಿಯಾಗಿ ಮೂಡಿನಿಂತಿವೆ. ಅದು ಪ್ರಾಚೀನ ಶಾಸ್ತ್ರೀಯ ನೆಲೆಯಿಂದ ಹಿಡಿದು ಇಂದಿನ ಕಾವ್ಯ, ನಾಟಕ, ಕಥೆ, ಕಾದಂಬರಿಗಳ ಪ್ರಕಾರಗಳಲ್ಲಿ ತನ್ನ ಮೂರ್ತತೆಯನ್ನು ಬಿತ್ತರಿಸಿದೆ.

ಕನ್ನಡ ಸಾಹಿತ್ಯ ಕಾಲಧರ್ಮ, ಮತಧರ್ಮ ಮತ್ತು ಮನೋಧರ್ಮದಲ್ಲಿ ಸ್ಪಂದಿಸುತ್ತಾ ಅದರ ಅಭಿವ್ಯಕ್ತಿ ಹಾಗೂ ಇವುಗಳ ಕ್ರಿಯಾತ್ಮಕ ರೂಪವಾಗಿ ಮೂಡಿದೆ. ಇದು ಪಂಪನ 'ಮನುಷ್ಯ ಜಾತಿ ತಾನೊಂದೆವಲಂ'ನಿಂದ ಹಿಡಿದು ಕುವೆಂಪು ಅವರ 'ವಿಶ್ವಮಾನವ ಸಂದೇಶ'ದವರೆಗಿನ ಸಾಹಿತ್ಯದ ನೆಲೆಯಲ್ಲಿ ಅವುಗಳ ಮೂಲವನ್ನು ಹುಡುಕಹೊರಟರೆ ಹಲವಾರು ಹೊಸ-ಹೊಸ ವಿಷಯಗಳು ದೊರೆಯುತ್ತಾ ಹೋಗುತ್ತವೆ. ಅಂತಹ ಹೊಸ-ಹೊಸ ವಿಷಯಗಳು ದೊರೆತಂತೆ ಅವುಗಳ ಮೇಲೆ ಮತ್ತಷ್ಟು ಆಸಕ್ತಿ ಹೆಚ್ಚಾಗುವುದರೊಂದಿಗೆ ಅದು ಸಂಶೋಧನೆಗೆ ದಾರಿ ಮಾಡಿಕೊಡುತ್ತದೆ. ಇದು ಸಾಹಿತ್ಯ ಮತ್ತು ಸಂಶೋಧನೆಯ ಕ್ರಿಯಾಶೀಲತೆಯನ್ನು ಸಾಬೀತುಪಡಿಸಿದೆ. ಯಾವುದೇ ಒಂದು ಕ್ಷೇತ್ರದ ವಿಸ್ತಾರವನ್ನು ತಿಳಿಯಲು ಸಂಶೋಧನೆ ಎಂಬುದು ಒಂದು ಮಾನದಂಡವಾಗಿದೆ. ಹಾಗಾಗಿ ಸಂಶೋಧನೆಯು ಕನ್ನಡ ಸಾಹಿತ್ಯದ ವ್ಯಾಪ್ತಿಯನ್ನು ವಿಸ್ತರಿಸಿದ್ದಲ್ಲದೆ, ಹೊಸ ಸಾಧ್ಯತೆಗಳಿಗೆ ಎಡೆಮಾಡಿಕೊಟ್ಟಿದೆ. ಆಧುನಿಕ ಕನ್ನಡ ಸಾಹಿತ್ಯ ಹಾಗೂ ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ವಿಭಿನ್ನ ಸಂಸ್ಕೃತಿಯ ಹೊಸ ರೂಪುರೇಷೆಗಳು ಕನ್ನಡ ಸಾಹಿತ್ಯದಲ್ಲಿ ಬದಲಾವಣೆಯನ್ನು ಕಂಡವು. ಆದ್ದರಿಂದಲೇ ಕನ್ನಡ ಸಾಹಿತ್ಯ ಸಂಶೋಧನೆಯು ಬದಲಾವಣೆಯ ಹಾದಿಯನ್ನು ಹಿಡಿಯಿತು ಎಂಬುದು ಇದರಿಂದ ಸ್ಪಷ್ಟವಾಗಿ ಅರಿವಾಗುತ್ತದೆ.

೨೦ನೇ ಶತಮಾನದ ಹೊಸ ಚಿಂತನೆಗಳ ಕೊಡುಗೆಗಳ ಸಾಲಿನಲ್ಲಿ ಸಂಶೋಧನೆಯು ಒಂದು. ಈಗಾಗಲೇ ರೂಪಿತವಾಗಿರುವ ಕಲಾಕೃತಿಗಳು. ವಿಭಿನ್ನ ನೆಲೆಗಳು ಹೊಸ ಶೋಧವನ್ನು ಹೊಸ ಚಿಂತನೆಯ ನೆಲೆಯಲ್ಲಿ ನೋಡಹೊರಟಿದ್ದು ಸಂಶೋಧನೆಯ ಹಿರಿಮೆ, ಹಾಗಾಗಿ ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯ ಪರಂಪರೆಯ ಸಂಶೋಧನೆಗಳ ಜೊತೆಗೆ ಆಧುನಿಕ ಸಾಹಿತ್ಯಗಳ ತೌಲನಿಕ ವಿವೇಚನೆ, ತಾತ್ವಿಕ ಹಾಗೂ ಮೌಲಿಕ

ಚಿಂತನೆಗಳು ಸಾಂಸ್ಕೃತಿಕ ಭಿನ್ನತೆಗಳು ಮತ್ತು ವ್ಯಕ್ತಿ ಅಧ್ಯಯನಗಳಾಚೆಗೂ ಸಂಶೋಧನೆ ತನ್ನ ಬಾಹುಗಳನ್ನು ವಿಸ್ತರಿಸಿಕೊಳ್ಳುತ್ತಲೇ ಬಂದಿದ್ದು ಅವುಗಳ ಸಂಕ್ಷಿಪ್ತ ಚಿತ್ರಣವನ್ನು ಕೆಳಕಂಡಂತೆ ನೋಡಬಹುದು.

ನವೋದಯ ಸಾಹಿತ್ಯದ ಮುಖ್ಯ ಲೇಖಕರೆಂದರೆ ಬಿ.ಎಂ.ಶ್ರೀ, ಕುವೆಂಪು, ಬೇಂದ್ರೆ, ಮಾಸ್ತಿ, ಶಿವರಾಮಕಾರಂತ, ಪುತಿನ ಈ ಲೇಖಕರು ವಾಸ್ತವ ಮಾರ್ಗವನ್ನು ಆಯ್ದುಕೊಂಡು ತಮ್ಮ ಪರಿಸರದಲ್ಲಿ ಹುಟ್ಟಿದ ಆಸ್ಥೆ ಮತ್ತು ವಾಸ್ತವವನ್ನು ಹಿಡಿದಿಡುವಲ್ಲಿ ಭಾಷಾ ಸಾಮರ್ಥ್ಯದ ಬಗ್ಗೆ ತುಂಬಾ ವಿಶ್ವಾಸವುಳ್ಳ ಲೇಖಕರು, ಸಮಾಜವನ್ನೇ ವಸ್ತುವನ್ನಾಗಿ ಆರಿಸಿಕೊಂಡು ವೈವಿಧ್ಯಪೂರ್ಣವಾದ ಕರ್ನಾಟಕದ ಪ್ರಾದೇಶಿಕ ಜೀವನವನ್ನು ದಾಖಲೆಗೊಳಿಸುವ ಒಳ್ಳೆಯ ಬರಹಗಾರರು ನವೋದಯ ಕವಿಗಳು. ಪ್ರಗತಿಶೀಲ ಕವಿಗಳಾದ ಅ.ನ.ಕೃ, ತ.ರಾ.ಸು., ಶ್ರೀರಂಗ, ಚದುರಂಗ, ಬಸವರಾಜಕಟ್ಟಿಮನಿ, ನಿರಂಜನ ಇವರೆಲ್ಲರೂ ತಮಗೆ ಲಭ್ಯವಿದ್ದ ಎಲ್ಲಾ ಸಾಹಿತ್ಯ ಪ್ರಕಾರಗಳನ್ನು ಉಪಯೋಗಿಸಿಕೊಂಡವರು. ವಿಚಾರ ಪ್ರಚೋದನೆ ಮತ್ತು ಭಾವಶುದ್ಧಿ ಅವುಗಳ ಗುರಿಯಾಗಿ ಪ್ರಗತಿಶೀಲರು ಒಂದೆಡೆ ತಂದವರು. ಧರ್ಮ, ತತ್ವಜ್ಞಾನ ಮತ್ತು ಸಾಹಿತ್ಯ ಎಲ್ಲವುಗಳ ಉದ್ದೇಶ ಜೀವನವನ್ನು ಪವಿತ್ರಗೊಳಿಸಿ ಅದನ್ನು ಶುಭಕರವಾಗಿ ಮಾಡುವುದು ಮತ್ತು ಸಾಂಪ್ರದಾಯಿಕ ಮೌಲ್ಯಗಳ ಮೇಲೆ ನಿಂತ ಸಾವಯವ ಸಮಾಜ ಮತ್ತು ಆಧುನಿಕ ಒತ್ತಡಗಳಿಂದ ಅದರ ವಿಘಟನೆ ಕುಟುಂಬದ ಶಿಥಿಲೀಕರಣ, ಲೈಂಗಿಕತೆ ಹಾಗೂ ವಿವಾಹ, ಕಲಾವಿದ ಮತ್ತು ಅವನ ಜಗತ್ತನ್ನು ಪ್ರಗತಿಶೀಲ ಬರಹಗಾರರಲ್ಲಿ ಕಾಣಬಹುದು. ಸಂಪ್ರದಾಯ ಮತ್ತು ಆಧುನಿಕತೆಗಳ ಹೋರಾಟದಲ್ಲಿ ಸಿಲುಕಿ ಬದಲಾಗುತ್ತಿರುವ ಸಮಾಜದ ಬೃಹತ್ ಚಿತ್ರವನ್ನೇ ಪ್ರಗತಿಶೀಲ ಲೇಖಕರ ಚಿಂತನೆಗಳಲ್ಲಿ ಕಾಣಬಹುದು. ನವ್ಯ ಕವಿಗಳಾದ ವಿ.ಕೃ.ಗೋಕಾಕ್, ಗೋಪಾಲಕೃಷ್ಣ ಅಡಿಗ, ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ಶಾಂತಿನಾಥದೇಸಾಯಿ, ಬಿ.ಸಿ.ರಾಮಚಂದ್ರಶರ್ಮ, ಎ.ಕೆ.ರಾಮಾನುಜನ್ ಯಶವಂತ ಚಿತ್ತಾಲ, ಆಲನಹಳ್ಳಿ ಕೃಷ್ಣ, ಕೆ.ಪಿ.ಪೂರ್ಣಚಂದ್ರತೇಜಸ್ವಿ ಈ ಲೇಖಕರ ನವ್ಯ ಸಾಹಿತ್ಯದ ಬರಹದಲ್ಲಿ ಹೊಸತನ ಹಾಗೂ ಅವುಗಳ ಮೌಲ್ಯಪ್ರಜ್ಞೆಗೂ ಇರುವ ನಿಕಟ ಸಂಬಂಧವನ್ನು ಗುರುತಿಸಬಹುದು. ಆತ್ಮನಿಷ್ಠ ಅನುಭವವನ್ನೇ ಪ್ರಮಾಣವೆಂದು ಸ್ವೀಕರಿಸುವ ನವ್ಯಸಾಹಿತ್ಯದ ಕಥನಗಳ ನಾಯಕರು ಸಂಸ್ಕೃತಿಜನ್ಯ ಮೌಲ್ಯಗಳನ್ನು ಶೋಧಿಸುವುದರ ಮೂಲಕ ಸಂಸ್ಕೃತಿಯ ಸ್ವರೂಪವನ್ನೇ ಬದಲಿಸಲು ನವ್ಯ ಕಥನಸಾಹಿತ್ಯಕಾರರು ಪ್ರಯತ್ನಿಸಿದ್ದಾರೆ. ಈ ರೀತಿಯಾಗಿ ನವ್ಯಸಾಹಿತ್ಯದ ಧೋರಣೆಗಳು ಪ್ರಬಲವಾಗಿದ್ದ ಕಾಲದಲ್ಲೇ ಆಲನಹಳ್ಳಿ ಹಾಗೂ ತೇಜಸ್ವಿಯವರು ಬರವಣಿಗೆ ಪ್ರಾರಂಭಿಸಿ ಅನಂತರ ಅದರಿಂದ ಹೊರಬಂದು ನವ್ಯಕ್ಕಿಂತ ವಿಭಿನ್ನವಾಗಿ ಚಿಂತಿಸಿದರು. "ಕನ್ನಡ ಸಾಹಿತ್ಯ ನವ್ಯಸಂಪ್ರದಾಯವನ್ನು ಸಂಪೂರ್ಣ ತೊರೆದು ಹೊಸದಿಕ್ಕಿನಲ್ಲಿ ಅನ್ವೇಷಿಸಬೇಕಾಗಿದೆ" ಎಂದು

ತಮ್ಮ ಅಬಚೂರಿನ ಪೋಸ್ಟಾಫೀಸು ಕಥಾಸಂಕಲನದ ಮುನ್ನುಡಿ ಹೊಸದಿಗಂತದೆಡೆಗೆ ಎಂಬಲ್ಲಿ ತಿಳಿಸಿದ್ದಾರೆ. ನವ್ಯದ ಅನಂತರ ದಲಿತ–ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ದೇವನೂರ ಮಹಾದೇವ, ಸಿದ್ದಲಿಂಗಯ್ಯ, ಬರಗೂರು ರಾಮಚಂದ್ರಪ್ಪ, ಕಾಳೇಗೌಡನಾಗವಾರ ಇನ್ನೂ ಮುಂತಾದವರು ಕನ್ನಡ ಸಾಹಿತ್ಯಕ್ಕೆ ಅವರವರ ಚಿಂತನೆಗಳ ಮೂಲಕ ಒಂದು ಎತ್ತರದ ಸ್ಥಾನವನ್ನು ತಂದುಕೊಟ್ಟಿದ್ದಾರೆ.

ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನನ್ನ ಸಂಶೋಧನಾತ್ಮಕ ಚಿಂತನೆಯ ಪರಿಕಲ್ಪನಾ ಹಿನ್ನೆಲೆಯಲ್ಲಿ ಈವರೆಗೆ ನಡೆದಿರುವ ಅಧ್ಯಯನಗಳನ್ನು ನೋಡೋಣ.

ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನ ಸೃಷ್ಟಿಗೆ ಕನ್ನಡ ಮನಸ್ಸುಗಳು ಪ್ರತಿಕ್ರಿಯಿಸಿರುವ ಬಗೆಯೂ ಕುತೂಹಲಕಾರಿಯಾದುದು. ಪಿಎಚ್.ಡಿ. ಪದವಿಗಾಗಿ ನಡೆದಿರುವ ಅಧ್ಯಯನಗಳು ವಿಚಾರಗೋಷ್ಠಿಗಳಲ್ಲಿ ಮಂಡಿಸಲಾಗಿರುವ ಪ್ರಬಂಧಗಳು, ನಿಯತಕಾಲಿಕೆಗಳಲ್ಲಿ ಬಂದಿರುವ ಕೃತಿವಿಮರ್ಶೆ ಆಲನಹಳ್ಳಿ ಹಾಗೂ ತೇಜಸ್ವಿಯವರ ಕಾಲಾನಂತರ ಪ್ರಕಟವಾದ ನೆನಪಿನ ಪುಸ್ತಕಗಳು ಇತ್ಯಾದಿ ಬಗೆಯಲ್ಲಿ ಇವುಗಳನ್ನು ವಿಂಗಡಿಸಿಕೊಳ್ಳಬಹುದು.

- **ಎಂ.ಎಸ್.ಶೇಖರ್ ಅವರು 'ಶ್ರೀಕೃಷ್ಣ ಆಲನಹಳ್ಳಿಯವರ ಸಾಹಿತ್ಯ – ಒಂದು ಅಧ್ಯಯನ'** ಎಂಬ ಶೀರ್ಷಿಕೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕಾಳೇಗೌಡ ನಾಗವಾರ ಅವರ ಮಾರ್ಗದರ್ಶನದಲ್ಲಿ ಸಲ್ಲಿಸಿದ ಮಹಾಪ್ರಬಂಧ ಈ ಸಂಶೋಧನಾ ಪ್ರಬಂಧದಲ್ಲಿ ಆಲನಹಳ್ಳಿಯವರ ಬಹುಮುಖ ಪ್ರತಿಭೆ ಅನಾವರಣ ಮಾಡಲು ಆಲನಹಳ್ಳಿಯವರ ಸಾಹಿತ್ಯಲೋಕ, ವ್ಯಕ್ತಿ ಮತ್ತು ಸಮಾಜದ ಗ್ರಹಿಕೆ, ಮನುಷ್ಯ ಪರಿಕಲ್ಪನೆಯಲ್ಲಿ ಆಧುನಿಕತೆ, ಗ್ರಾಮಬದುಕು ಮತ್ತು ಸ್ತ್ರೀಪುರುಷರ ಸಂಬಂಧಗಳು ಆಧುನಿಕತೆಯ ಮೂಲಕ ಅನಾವರಣವಾಗಿರುವ ಗ್ರಾಮೀಣಸಮಾಜ, ಮನುಷ್ಯನ ಭ್ರಷ್ಟತೆ, ಗೋಸುಂಬೆತನ, ಜಾತಿ–ವೈಷಮ್ಯಗಳು, ಸ್ತ್ರೀ–ಪುರುಷ ಸಂಬಂಧಗಳು, ವಸ್ತುನಿರೂಪಣಾ ತಂತ್ರಗಳನ್ನು ವಸ್ತುನಿಷ್ಠನೆಲೆ ಹಾಗೂ ಸಮಷ್ಠಿ ನೆಲೆಯಲ್ಲಿ ಆಲನಹಳ್ಳಿಯವರು ಕಥನಸಾಹಿತ್ಯವನ್ನು ಸಾಮಾಜಿಕಪ್ರಜ್ಞೆಯ ನೆಲೆಯಲ್ಲಿ ನೋಡಿದ್ದಾರೆ. ಆಲನಹಳ್ಳಿಯವರ ಕಥನಸಾಹಿತ್ಯದಲ್ಲಿ ಸಮಾಜವನ್ನು ಗ್ರಹಿಸಿರುವ ರೀತಿ, ನೇರವಾದ ನುಡಿ ಅವರ ವ್ಯಕ್ತಿತ್ವದ ರೀತಿಯನ್ನು ಪಾತ್ರಗಳ ಮೂಲಕ ಅವರು ಸಾಂಸ್ಕೃತಿಕ ಅನನ್ಯತೆಯನ್ನು ಮನುಷ್ಯತ್ವದ ಹಿನ್ನೆಲೆಯಲ್ಲಿ ಗ್ರಹಿಸುವ ಕ್ರಮವನ್ನು ನೋಡಬಹುದು. ಆಲನಹಳ್ಳಿಯವರ ಕಥನಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಕಟ್ಟಿಕೊಡುತ್ತಾ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಬಹಳ ಮುಖ್ಯವಾಗಿ ಲೇಖಕರು ತರುತ್ತಾರೆ.

ಸಾಂಪ್ರದಾಯಿಕ ಸಮಾಜದ ಬದುಕಿನ ನೆಲೆಗಟ್ಟುಗಳನ್ನು ಜಾತಿ-ವರ್ಗಗಳಿಗೆ ಆಧುನಿಕತೆಯು ಹೊಸಬಗೆಯ ಆಯಾಮಗಳನ್ನು ತಂದುಕೊಟ್ಟ ರೀತಿಯನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಸಾಮಾಜಿಕವಾಗಿ ಸಮಾನತೆಯನ್ನು ಪಡೆಯುವ ಮನಸ್ಸುಗಳನ್ನು ಆಲನಹಳ್ಳಿ ತಮ್ಮ ಕಥನಸಾಹಿತ್ಯದಲ್ಲಿ ತರುತ್ತಾರೆ. ಜೊತೆಗೆ ಶೈಕ್ಷಣಿಕವಾಗಿ ಆದಂತಹ ಅರಿವು ಎಲ್ಲಾ ಸಮಸ್ಯೆಗಳಿಂದ ಬಿಡುಗಡೆಯನ್ನು ಪಡೆಯುವ ದಾರಿಯನ್ನು ಕಂಡುಕೊಳ್ಳಲು ನೆರವಾಗುತ್ತದೆ. ಆ ಮೂಲಕ ಸಾಂಸ್ಕೃತಿಕ ಅನನ್ಯತೆಯನ್ನು ಸಾಧಿಸಲು ನೆರವಾಗುತ್ತದೆ. ಇಂತಹ ಗಟ್ಟಿತನವನ್ನು ಎತ್ತಿತೋರಿಸುವ ಕೆಲಸ ಸಂಶೋಧನೆಯಲ್ಲಿ ಆಗಬೇಕಿದೆ.

- **ಬಿ.ಕೆ.ಕಡೇಪ್ಪನವರ ಕೆ.ಪಿ.'ಪೂರ್ಣಚಂದ್ರ ತೇಜಸ್ವಿ ಸಾಂಸ್ಕೃತಿಕ ಅಧ್ಯಯನ'**

ಡಾ. ಹೆಚ್.ಎಂ.ಮಹೇಶ್ವರಯ್ಯನವರ ಮಾರ್ಗದರ್ಶನದಲ್ಲಿ ಧಾರವಾಡ ವಿಶ್ವವಿದ್ಯಾನಿಲಯಕ್ಕೆ ಅರ್ಪಿಸಿರುವ ಸಂಶೋಧನಾ ಪ್ರಬಂಧ ಇದಾಗಿರುತ್ತದೆ. ಈ ಪ್ರಬಂಧದಲ್ಲಿ ಸಾಂಸ್ಕೃತಿಕ ಅಧ್ಯಯನದ ಮೂಲಕ ತೇಜಸ್ವಿ ಕಥನಸಾಹಿತ್ಯವನ್ನು ನೋಡಲು ಮುಂದಾಗಿದ್ದಾರೆ. ಕಾದಂಬರಿ ಸಾಹಿತ್ಯ ಸ್ವರೂಪ ಮತ್ತು ವಿವಿಧ ನೆಲೆಗಳು ಸಾಮಾಜಿಕ ಘಟಕಗಳಲ್ಲಿ ಶೋಧಿಸಲ್ಪಡುವ ಜೀವನ ಮೌಲ್ಯಗಳು ತೇಜಸ್ವಿ ಸೃಷ್ಟಿಸಿದ ಸಾಂಸ್ಕೃತಿಕ ಸಾಧ್ಯತೆಗಳಲ್ಲಿ ಹೇಳುವ ಬದುಕಿನ ಆಯಾಮಗಳನ್ನು ಸಂಶೋಧಕರು ನೋಡಿದ್ದಾರೆ. ತೇಜಸ್ವಿ ಕಥೆ, ಕವಿತೆ, ನಾಟಕ, ಪರಿಸರಗಳ ಕುರಿತ ಚಿಂತನಾ ಬರಹ ಹೀಗೆ ಸಾಹಿತ್ಯ ಸಂಸ್ಕೃತಿಯ ಹತ್ತಾರು ಮಾರ್ಗಗಳನ್ನು ಅವರು ಹುಡುಕಿಕೊಂಡು ಜನಪರ ಕಾಳಜಿಯನ್ನು ಕಂಡವರು. ವಿಶೇಷವಾಗಿ ತೇಜಸ್ವಿಯವರ ಕೃತಿಗಳ ಸಾಂಸ್ಕೃತಿಕ ಅಧ್ಯಯನದ ಉದ್ದೇಶವನ್ನಾಗಿಸಿಕೊಂಡು ಬರಹಗಳ ತೀವ್ರತೆಯನ್ನು ಗಮನಿಸಿದರೆ ಅವರ ಸೃಜನಶೀಲತೆಯ ಮನಸ್ಸು ತಿಳಿಯುತ್ತದೆ. ತೇಜಸ್ವಿಯವರು ಮನುಷ್ಯನ ಬದುಕಿನ ಮೂಲಕ ಏನೆಲ್ಲಾ ಸಾಧ್ಯತೆಗಳನ್ನು, ಜೀವಂತಿಕೆಗಳನ್ನು ಕಟ್ಟಿಕೊಡುತ್ತಾರೆ ಎಂಬುದನ್ನು ಕಾಣುತ್ತೇವೆ.

- **ಸುನೀತಾ – 'ಪೂರ್ಣಚಂದ್ರತೇಜಸ್ವಿಯವರ ಸಮಗ್ರ ಸಾಹಿತ್ಯ ಒಂದು ಅಧ್ಯಯನ'**

ಪ್ರೊ. ಚನ್ನಣ್ಣ ವಾಲೀಕಾರ ಅವರ ಮಾರ್ಗದರ್ಶನದಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ ಈ ಸಂಶೋಧನಾ ಮಹಾಪ್ರಬಂಧದಲ್ಲಿ ಸಮಾಜವನ್ನು ಪ್ರಾತಿನಿಧಿಕ ಕೃತಿಗಳ ಜೊತೆಯಲ್ಲಿ ಚರ್ಚಿಸಿದ್ದಾರೆ ಮತ್ತು ಆರಂಭದ ಗ್ರಹಿಕೆಯ ನೆಲೆಯಲ್ಲಿ ನವ್ಯಘಟ್ಟದ ಕಥನಸಾಹಿತ್ಯದಲ್ಲಿ ಗ್ರಾಮಸಮಾಜದ ಚಿಂತನೆಗಳನ್ನು ಕಾಣಬಹುದು. ಅವರ ಕಾದಂಬರಿಗಳ ಮೂಲಕ ಸಮಗ್ರ ಭಾರತವನ್ನು ನೋಡುವ ಕ್ರಮವನ್ನು ಕಾಣಬಹುದು. ಜೀವಪ್ರೀತಿಯ

ಹೊಸದಾರಿಯನ್ನು ಹುಡುಕುತ್ತಾ ವಾಸ್ತವ ಬದುಕಿನ ಅಂಶಗಳನ್ನು ನೋಡಿರುವ ಕ್ರಮಗಳನ್ನು ಮತ್ತು ಅವರ ಸಾಹಿತ್ಯದ ಸೂಕ್ಷ್ಮತೆಗಳೇನು? ಎಂಬುದನ್ನು ಗುರುತಿಸುತ್ತಾ ಸಾಗಿದ್ದಾರೆ.

ತೇಜಸ್ವಿಯವರ ಕಥನಸಾಹಿತ್ಯದಲ್ಲಿ ಪರಿಸರ ವಿಶಿಷ್ಟ ರೀತಿಯಾಗಿ ಮೂಡಿಬಂದಿರುವುದು ಹಾಗೂ ವಿಶಿಷ್ಟತೆಯಿಂದ ಕೂಡಿರುವುದು. ಜೊತೆಗೆ ತೇಜಸ್ವಿಯವರು ಮನುಷ್ಯ ಸಮಾಜವನ್ನು ನೋಡುವ ಬಗೆ ಮತ್ತು ಹೊಸ ದೃಷ್ಟಿಕೋನವನ್ನು ಸಂಶೋಧನೆಯಲ್ಲಿ ಗುರುತಿಸಿದ್ದಾರೆ. ಗ್ರಾಮೀಣಪ್ರದೇಶದ ಜೀವನರೀತಿಯಲ್ಲಿ ಉಂಟಾಗುತ್ತಿರುವ ಪಲ್ಲಟಗಳನ್ನು ಬದಲಾವಣೆಯನ್ನು ಬಯಸುವ ಹೊಸ-ಹೊಸ ಮನಸ್ಸುಗಳನ್ನು ಮುಖ್ಯವಾಗಿ ಇಲ್ಲಿ ಗುರುತಿಸುತ್ತಾರೆ. ತೇಜಸ್ವಿ ಸೃಷ್ಟಿಸಿರುವ ಪಾತ್ರಗಳಲ್ಲಿ ಹೊಸದಾದ ಐಡಿಯಾಲಜಿ, ನಂಬಿಕೆ, ಅನಿಸಿಕೆ ಅಭಿಪ್ರಾಯಗಳು ಬಿತ್ತರಗೊಳ್ಳುತ್ತಿರುವ ಮನಸ್ಸುಗಳನ್ನು ನಾವಿಲ್ಲಿ ಕಾಣಬಹುದು. ಹಳ್ಳಿಗಳಲ್ಲಿ ಆಗುತ್ತಿರುವ ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಗಳನ್ನು ಅವುಗಳ ಗುಣದೋಷಗಳೊಂದಿಗೆ ಮನುಷ್ಯನ ವ್ಯಕ್ತಿತ್ವದ ವೈವಿಧ್ಯತೆಯ ಶೋಧನಾಕಾರ್ಯ ಹೇಗೆ ನಡೆದಿದೆ ಎಂಬುದನ್ನು ಕಾಣಬಹುದು.

- **ಕವಿತಾ – 'ಪೂರ್ಣಚಂದ್ರತೇಜಸ್ವಿಯವರ ಕಥೆಗಳಲ್ಲಿ ಸಂಘರ್ಷ ಮತ್ತು ಸ್ಥಿತ್ಯಂತರ**

ಡಾ. ಹಿ.ಚಿ.ಬೋರಲಿಂಗಯ್ಯನವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲ ಹಂಪಿಗೆ ಸಲ್ಲಿಸಿರುವ ಸಂಶೋಧನಾ ಮಹಾಪ್ರಬಂಧ ಇದಾಗಿರುತ್ತದೆ. ತೇಜಸ್ವಿಯವರ ಸಮಗ್ರ ಕಥೆಗಳನ್ನು ಇಟ್ಟುಕೊಂಡು ಗ್ರಾಮಸಮಾಜದ ಚಿಂತನೆಗಳು ಮತ್ತು ಸ್ಥಿತ್ಯಂತರಗಳು ಪಡಿಮೂಡಿರುವ ನೆಲೆಗಳನ್ನು ಅವರು ಸಂಶೋಧನೆಗೆ ಒಳಗುಮಾಡಿದ್ದಾರೆ. ತೇಜಸ್ವಿಯವರ ಬಹುಮುಖ ಪ್ರತಿಭೆ ಹಾಗೂ ಭಿನ್ನ ಆಯಾಮಗಳನ್ನು ಸಮಕಾಲಿನ ಸಾಹಿತ್ಯದೊಂದಿಗೆ ತೆರೆದು ತೋರಿಸುವ ಕೆಲಸವನ್ನು ಸಂಶೋಧನೆಯಲ್ಲಿ ಮಾಡಿದ್ದಾರೆ.

ತೇಜಸ್ವಿಯವರ ಸಾಹಿತ್ಯಪ್ರಜ್ಞೆ, ಸಾಮಾಜಿಕಪ್ರಜ್ಞೆ, ಸಾಹಿತ್ಯದಲ್ಲಿ ಸುಪ್ತಪ್ರಜ್ಞೆ ಬಂಡಾಯಪ್ರಜ್ಞೆ, ಮಹಿಳಾಪ್ರಜ್ಞೆ, ಗ್ರಾಮಪ್ರಜ್ಞೆ, ಪರಿಸರಪ್ರಜ್ಞೆಗಳನ್ನು ಒಳಗೊಂಡಿದೆ. ಹೀಗೆ ತೇಜಸ್ವಿಯವರ ಒಟ್ಟು ಸಾರವನ್ನು ಸಂಶೋಧಕರು ಸ್ಪಷ್ಟಪಡಿಸಿದ್ದಾರೆ. ಅಂದರೆ ತೇಜಸ್ವಿಯವರ ಸೃಜನ ಮತ್ತು ಸೃಜನೇತರ ಸಾಹಿತ್ಯದ ವಿಶ್ಲೇಷಣೆ ಮಾಡಿದ್ದಾರೆ.

- **ಕವಿತ ಕೆ.ಜೆ. – 'ಲಂಕೇಶ್ ಮತ್ತು ಪೂರ್ಣಚಂದ್ರ ತೇಜಸ್ವಿ ಅವರ ಸಣ್ಣ ಕಥೆಗಳ ತೌಲನಿಕ ಅಧ್ಯಯನ'**

ಈ ಸಂಶೋಧನಾ ಪ್ರಬಂಧವನ್ನು ಪ್ರೊ. ಎಂ.ಎಸ್.ಶೇಖರ್ ಅವರ ಮಾರ್ಗದರ್ಶನದಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲಾಗಿದೆ. ಈ ಮಹಾಪ್ರಬಂಧದ ಹರವು ಇಬ್ಬರು

ಲೇಖಕರ ಕಥಾಸಾಹಿತ್ಯದಲ್ಲಿ ತೌಲನಿಕವಾಗಿ ವಿಸ್ತಾರವನ್ನು ಕಂಡುಕೊಂಡಿದೆ. ಲಂಕೇಶ್ ಮತ್ತು ತೇಜಸ್ವಿ ಇವರ ಸಾಂಸ್ಕೃತಿಕ ಪರಿಸರ ಸಾಹಿತ್ಯ ಹಾಗೂ ಸಮಾಜ ಸೇವೆಗಳಿಗೆ ಸಿಕ್ಕ ಮನ್ನಣೆ ಮತ್ತು ಪ್ರೇರಣೆ ಹಾಗೂ ಸಾಹಿತ್ಯಕ ಸ್ಫೂರ್ತಿ ಚಿತ್ರಿತವಾಗಿರುವುದು ನವ್ಯ ಕಥಾಸಾಹಿತ್ಯದ ಹಿನ್ನೆಲೆಯ ಕಥೆಗಳಲ್ಲಿನ ನಿರೂಪಣಾತಂತ್ರ ವಸ್ತು ವೈವಿಧ್ಯತೆ ಭಾಷೆ ಅವರ ಬಹುಮುಖ ಆಸಕ್ತಿಗಳು ಸಮಾಜದ ಸಂಬಂಧಗಳಲ್ಲಿ ಕಥನಪ್ರಯೋಗದ ನೆಲೆಗಟ್ಟಿನ ಇಬ್ಬರು ಲೇಖಕರು ವಿಭಿನ್ನ ಸಾಂಸ್ಕೃತಿಕ ಪರಿಸರದಿಂದ ಬಂದಿದ್ದರೂ ಅವರ ಸೃಜನಶೀಲತೆಯ ಪರಿಸರದ ಬಗೆಗಿನ ಕಾಳಜಿ ಮುಂತಾದವುಗಳ ಬಗೆಗೆ ಸಮಾನ ಆಸಕ್ತಿಯಿರುವುದನ್ನು ಸಂಶೋಧಕರು ಗುರುತಿಸಿದ್ದು ವಿಭಿನ್ನ ಬರಹಗಾರರ ಕಥನಸಾಹಿತ್ಯವನ್ನು ತೌಲನಿಕವಾಗಿ ಅಧ್ಯಯನ ನಡೆಸಿದ್ದಾರೆ.

ಲಂಕೇಶ್ ಮತ್ತು ತೇಜಸ್ವಿಯವರ ಕಥನಸಾಹಿತ್ಯದಲ್ಲಿ ಮನುಷ್ಯ ಸಂಬಂಧಗಳನ್ನು ಬಹಳ ತೀಕ್ಷ್ಣವಾಗಿ ಗುರುತಿಸಬಹುದು. ಪ್ರಾಕೃತಿಕ ಪರಿಸರದಲ್ಲಿರುವ ಪ್ರಾಣಿಪಕ್ಷಿಗಳೊಂದಿಗೆ ಸಾಂಸ್ಕೃತಿಕ ಸಂಬಂಧಗಳನ್ನು ಬಹಳ ಮುಖ್ಯವಾಗಿ ತೇಜಸ್ವಿಯವರು ಗುರುತಿಸುತ್ತಾರೆ. ಈ ನೆಲೆಗಟ್ಟಿನಲ್ಲಿ ಇಬ್ಬರೂ ಲೇಖಕರ ಬದುಕು ಮತ್ತು ಸಾಹಿತ್ಯವನ್ನು ಅವಲೋಕಿಸಿದಾಗ ಮಾನವಪರ ಕಾಳಜಿ ಮತ್ತು ಧೋರಣೆಯು ತಿಳಿಯುತ್ತದೆ.

ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನ ಸೃಷ್ಟಿಗೆ ಕನ್ನಡ ಮನಸ್ಸುಗಳು ಪ್ರತಿಕ್ರಿಯಿಸಿರುವ ಬಗೆಯೂ ಕುತೂಹಲಕಾರಿಯಾದುದು. ಮೇಲೆ ಚರ್ಚಿಸಿದಹಾಗೆ ಪಿಎಚ್.ಡಿ., ಪದವಿಗಾಗಿ ನಡೆದಿರುವ ಅಧ್ಯಯನಗಳು, ವಿಚಾರಗೋಷ್ಠಿಗಳಲ್ಲಿ ಮಂಡಿತವಾಗಿರುವ ಪ್ರಬಂಧಗಳು, ನಿಯತಕಾಲಿಕೆಗಳಲ್ಲಿ ಬಂದಿರುವ ಕೃತಿವಿಮರ್ಶೆ ತೇಜಸ್ವಿ ಹಾಗೂ ಆಲನಹಳ್ಳಿ ಕಾಲಾನಂತರ ಪ್ರಕಟವಾದ ನೆನಪಿನ ಪುಸ್ತಕಗಳು ಇತ್ಯಾದಿ ಕೃತಿಗಳನ್ನು ನೋಡಬಹುದು.

- **'ಕನ್ನಡ ಕಥನಸಾಹಿತ್ಯ'** ಎಂಬ ಶೀರ್ಷಿಕೆಯಲ್ಲಿ ಜಿ.ಎಸ್.ಆಮೂರ ಅವರು ಸಣ್ಣಕತೆ ಮತ್ತು ಕಾದಂಬರಿ ಪ್ರಕಾರವನ್ನು ಅನುಲಕ್ಷಿಸಿ ಎರಡು ಸಂಪುಟಗಳನ್ನು ಪ್ರಕಟಿಸಿದ್ದಾರೆ. ಭಾರತೀಯ ಕಥನಸಂದರ್ಭ, ಕನ್ನಡ ಕಥನಸಾಹಿತ್ಯ ಸಂದರ್ಭಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿರುವ ಆಮೂರರು ಸಹಜವಾಗಿಯೇ ಕನ್ನಡದ ಪ್ರತಿಭಾವಂತ ಲೇಖಕರನ್ನು ಚರ್ಚಿಸುವಾಗ ಆಲನಹಳ್ಳಿ ಹಾಗೂ ತೇಜಸ್ವಿಯವರ ರಚನೆಗಳ ವಿಶ್ಲೇಷಣೆ ಮಾಡಿದ್ದಾರೆ. ಇಲ್ಲಿನ ಬರಹಗಳು ಸಮೀಕ್ಷಾ ರೂಪದವೇ ಹೊರತು, ವಿದ್ವತ್ಪೂರ್ಣ ವೈಚಾರಿಕ ವಿಮರ್ಶೆಗಳೆಂದು ಅನ್ನಿಸುವುದಿಲ್ಲ. ಕೃತಿಯ ಉದ್ದೇಶವೂ ಅದಲ್ಲವಾದ್ದರಿಂದ ಆಲನಹಳ್ಳಿ ಹಾಗೂ ತೇಜಸ್ವಿಯವರ ಸಣ್ಣಕಥೆ, ಕಾದಂಬರಿಗಳನ್ನು ಸಮೀಕ್ಷಿಸುವಾಗ ಅದರಲ್ಲಿರುವ ಹಲವಾರು ಒಳನೋಟಗಳು ಅಧ್ಯಯನಕಾರರಿಗೆ ನೆರವು ನೀಡಿದೆ.

- **'ಶತಮಾನಗಳ ಸಣ್ಣಕಥೆಗಳ ಸಮೀಕ್ಷೆ'** ಮಾಡಿರುವ ಕರೀಗೌಡ ಬೀಚನಹಳ್ಳಿಯವರು ಆಲನಹಳ್ಳಿ ಹಾಗೂ ತೇಜಸ್ವಿಯವರ ಸಣ್ಣಕಥೆಗಳ ಬಗ್ಗೆ ವಿಮರ್ಶೆಮಾಡಿದ್ದಾರೆ. ಕನ್ನಡ ಕಥನಸಂದರ್ಭದಾಚೆಗೆ ಈ ಇಬ್ಬರು ಲೇಖಕರ ಸ್ಥಾನ ಗುರುತಿಸುವ ಪ್ರಯತ್ನವನ್ನು ಇಲ್ಲಿ ಯಶಸ್ವಿಯಾಗಿ ಮಾಡಲಾಗಿದೆ. ಏಕೆ ಆಲನಹಳ್ಳಿ ಹಾಗೂ ತೇಜಸ್ವಿಯವರು ಕನ್ನಡದ ಅದ್ಭುತ ಕಥನಕಾರರೆಂಬುದನ್ನು ಲೇಖಕರು ಇಲ್ಲಿ ವಿವರಿಸುವ ಪ್ರಯತ್ನ ಮಾಡಿದ್ದಾರೆ ಎಂಬುದನ್ನು ನೋಡುವುದಾದರೆ ತೇಜಸ್ವಿಯವರ ಮರಣಾನಂತರ ಇದೇ ಲೇಖಕರು ಕೇಂದ್ರಸಾಹಿತ್ಯ ಅಕಾಡೆಮಿಗಾಗಿ 'ಕೆ.ಪಿ.ಪೂರ್ಣಚಂದ್ರತೇಜಸ್ವಿ – ಬದುಕು ಬರಹ' ಎಂಬ ಕೃತಿಯನ್ನು ರಚಿಸಿಕೊಟ್ಟಿದ್ದಾರೆ. ತೇಜಸ್ವಿಯವರ ಎಲ್ಲಾ ಪ್ರಕಾರದ ಕೃತಿಗಳ ವಿಶ್ಲೇಷಣೆಯುಳ್ಳ ಏಕೈಕ ಮೊಟ್ಟಮೊದಲ ಕೃತಿಯಿದು. ಅಧ್ಯಯನಕಾರರಿಗೆ ಅತ್ಯಂತ ಉಪಯುಕ್ತವಾದ ಆಕರಗ್ರಂಥವಿದು. ನವಕರ್ನಾಟಕ ಪಬ್ಲಿಕೇಷನ್‌ನವರು ಕೇಂದ್ರಸಾಹಿತ್ಯ ಅಕಾಡೆಮಿ ವಿಜೇತ ಲೇಖಕರ ಕುರಿತು ಪುಸ್ತಕ ಸರಣಿಯನ್ನೇ ಹೊರತಂದಿದ್ದಾರೆ. ಈ ಸರಣಿಯಲ್ಲಿ ಎಚ್.ಎಂ.ಮಹೇಶ್ವರಯ್ಯ ಅವರು 'ಪೂರ್ಣಚಂದ್ರತೇಜಸ್ವಿ' ಎಂಬ ೧೧೨ ಪುಟಗಳ ಹೊತ್ತಿಗೆಯನ್ನು ಪ್ರಕಟಿಸಿದ್ದಾರೆ. ಕರೀಗೌಡ ಬೀಚನಹಳ್ಳಿಯವರ ಅಧ್ಯಯನ ಮುಂದುವರಿಕೆಗಾಗಿ ಇಲ್ಲಿನ ಬರಹವಿರದೆ 'ಸಂಕ್ಷಿಪ್ತ ಪರಿಚಯ'ದ ಮಟ್ಟದಲ್ಲಿ ನಿಲ್ಲುವ ಕೃತಿಯಿದು. ಆದರೆ ತೇಜಸ್ವಿಯವರ ಬರಹಗಳನ್ನು ಕುರಿತು ಸ್ವತಂತ್ರ ಕೃತಿಗಳನ್ನು ಪ್ರಕಟಿಸಿರುವವರು ಕರೀಗೌಡ ಬೀಚನಹಳ್ಳಿ ಮತ್ತು ಎಚ್.ಎಂ.ಮಹೇಶ್ವರಯ್ಯ ಅವರು ಮಾತ್ರ.

- **'ತೇಜಸ್ವಿ ಕಥನ'** ಟಿ.ಪಿ.ಅಶೋಕ ಅವರು ತಮ್ಮ ಪ್ರತಿಕ್ರಿಯೆಗಳನ್ನು ಈ ಕೃತಿಯಲ್ಲಿ ದಾಖಲಿಸಿದ್ದಾರೆ. ತೇಜಸ್ವಿಯವರ ಕೃತಿಗಳ ಅಂತರ್ ಸಂಬಂಧಗಳ ನೆಲೆಯಲ್ಲಿ ಒಟ್ಟಾರೆ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಸಮಕಾಲೀನ ವಿದ್ಯಮಾನಗಳ ಹಿನ್ನಲೆಯಲ್ಲಿ ಓದಿ ವಿಮರ್ಶಿಸುವ ಸಣ್ಣ ಪ್ರಯತ್ನವಿದೆಂದು ಲೇಖಕರು ಹೇಳಿಕೊಂಡಿದ್ದಾರೆ. ಮೊದಲ ಭಾಗದಲ್ಲಿ ಒಟ್ಟಾರೆ ತೇಜಸ್ವಿಯವರ ಕಥೆಗಳನ್ನು ಕುರಿತ ನಲವತ್ತು ಪುಟಗಳ ವಿಸ್ತಾರದ ಸಮಗ್ರ ವಿವೇಚನೆಯಿದೆ. ಮುಂದಿನ ಭಾಗಗಳಲ್ಲಿ ತೇಜಸ್ವಿಯವರ ಒಂಭತ್ತು ಕೃತಿಗಳ ವಿಶ್ಲೇಷಣೆ ಇದೆ. ಈ ಕಥನವು ತೇಜಸ್ವಿಯವರ ಬರಹಗಳಲ್ಲೇ ಕಾಣಸಿಗುವ ಬೌದ್ಧಿಕ ಲಹರಿಯಂತಹ ಮಾರ್ಗವೊಂದನ್ನು ಬಳಸಿಕೊಂಡು ಆ ಮೂಲಕ ತೇಜಸ್ವಿ ಜಗತ್ತಿನ ಭೂಪಟವೊಂದನ್ನು ಆವಿಷ್ಕರಿಸಲು ಹವಣಿಸುತ್ತದೆ. ಜೊತೆಗೆ ಸಿದ್ಧಾಂತಗಳ ಶಸ್ತ್ರಗಳನ್ನು ಝುಳಪಿಸಿದೆ. ಕೃತಿಯ ಉಲ್ಲೇಖಗಳನ್ನೇ ಆಧರಿಸಿ ಅವುಗಳ ಜೊತೆಗೆ ವಿಮರ್ಶೆ ವಿವೇಕವನ್ನು ಕಂಡಿಸುತ್ತಾ ಕಥನವನ್ನು ಹೆಣೆದಿರುವುದು ಟಿ.ಪಿ.ಅಶೋಕ ಅವರ ಕ್ರಮವಾಗಿದೆ. ಈ ಕಥನವು ತೇಜಸ್ವಿ ಕೃತಿ ಸಮೂಹದ ಆಪ್ತಾವಲೋಕನವೊಂದನ್ನು ನಮ್ಮ ಮುಂದಿಡುವಲ್ಲಿ ಯಶಸ್ವಿಯಾಗಿದೆ.

ಇವುಗಳೊಂದಿಗೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗವು ಪ್ರಕಟಿಸಿರುವ ವೆಂಕಟೇಶ್ ಇಂದ್ರಾಡಿಯವರ 'ಪೂರ್ಣಚಂದ್ರತೇಜಸ್ವಿ' ಎಂಬ ಕಿರುಹೊತ್ತಿಗೆ, ಬಿ.ಚಂದ್ರೇಗೌಡ ಮತ್ತು ಬಿ.ಎಲ್.ರಾಜು ಸಂಪಾದಿಸಿರುವ 'ತೇಜಸ್ವಿ ನೆನಪು', ಮೂಡಿಗೆರೆಯ ಬಿ.ಎಸ್.ಸಂಪತ್‌ಕುಮಾರ್ ಬೆಟಗೆರೆ ಸಂಪಾದಿಸಿರುವ 'ಮೂಡಿಗೆರೆಯ ಮುದ್ದುಹಕ್ಕಿ ಪೂರ್ಣಚಂದ್ರ ತೇಜಸ್ವಿ', ಧನಂಜಯ ಜೀವಾಳ ಅವರ 'ಕಾಡಿನ ಸಂತ – ತೇಜಸ್ವಿ' ಹಾಗೂ 'ಇದನ್ನೆಲ್ಲಾ ನಿಮಗೆ ಹೇಳಲು ತೇಜಸ್ವಿ ನನಗೆ ನಿಮಿತ್ತ', ಕೀರ್ತಿ ಕೊಲ್ಗಾರ್ ಅವರ 'ತೇಜಸ್ವಿ ಬದುಕಿದ್ದಾರೆ', ಕಲೀಮುಲ್ಲಾ ಅವರ 'ಪೂಚಂತೇ ನೆನಪು' ಮುಂತಾದ ಕೃತಿಗಳು ತೇಜಸ್ವಿಯವರ ವ್ಯಕ್ತಿತ್ವವನ್ನು ನೆನಪಿಸುವಲ್ಲಿ ಆಸಕ್ತವಾಗಿದೆಯೇ ವಿನಹ ಅವರ ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿರುವುದಿಲ್ಲ. ಇವುಗಳೊಂದಿಗೆ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿರುವ ಲೇಖನಗಳ ವಿವರವನ್ನು ಅನುಬಂಧಗಳಿಗೆ ನೀಡಲಾಗಿದೆ. ಶ್ರೀಮತಿ ರಾಜೇಶ್ವರಿ ಅವರು ಬರೆದಿರುವ 'ನನ್ನ ತೇಜಸ್ವಿ' ಮತ್ತು ತಾರಿಣಿ ಚಿದಾನಂದಗೌಡ ಅವರು ಬರೆದಿರುವ 'ಮಗಳು ಕಂಡ ಕುವೆಂಪು' ಕೃತಿಗಳೂ ತೇಜಸ್ವಿ ಅವರ ಬಗೆಗಿನ ವಿವರಗಳನ್ನು ಒಳಗೊಂಡಿದೆ.

- **'ಶ್ರೀ ಕೃಷ್ಣ ಆಲನಹಳ್ಳಿ' – ಅಮರೇಶನುಗಡೋಣಿ**

ಆಲನಹಳ್ಳಿಯವರ ಸಮಗ್ರ ಬರಹಗಳ ವಿಮರ್ಶೆಯನ್ನು ಕುರಿತಾದ ಗ್ರಂಥ ಇದಾಗಿದೆ. ಆಲನಹಳ್ಳಿಯವರ ಚಿಂತನೆ ಹಾಗೂ ಆಲೋಚನಾ ಬರಹವು ರಸಿಕತೆಗಿಂತ ಬೌದ್ಧಿಕತೆಗೆ, ಕಲಾತ್ಮಕತೆಗಿಂತ ವಾಸ್ತವಿಕತೆಗೆ, ಭಾವಕ್ಕಿಂತ ಭಾಷೆಗೆ ಒತ್ತು ಕೊಟ್ಟು ಬರೆದಂತಹ ಲೇಖಕರಲ್ಲಿ ಆಲನಹಳ್ಳಿ ಪ್ರಮುಖರಾದವರು. ಆಲನಹಳ್ಳಿ ಕನ್ನಡದಲ್ಲಿಯೇ ವಿರಳಾತಿವಿರಳ ಪ್ರಖರ ಜನರ ನಾಡಿಮಿಡಿತವನ್ನು ಹಿಡಿದಿಟ್ಟಿರುವ ಲೇಖಕ ಆಲನಹಳ್ಳಿ. ಇವರ ಬರಹವನ್ನು ವಿಮರ್ಶೆಗೆ ತೊಡಗಿಸುವಲ್ಲಿಯೂ ಧೈರ್ಯಬೇಕಾಗುತ್ತದೆ. ಜೊತೆಗೆ ಆಳವಾದ ಅಧ್ಯಯನ ಚಿಂತನಾಶೀಲತೆ, ಬಿಚ್ಚುಮನಸ್ಸಿನ ಚಿಂತನೆ ಬೇಕಾಗಿರುತ್ತದೆ. ಈ ಎಲ್ಲಾ ಗುಣಗಳನ್ನು ಇಟ್ಟುಕೊಂಡು ರಚಿತವಾಗಿರುವ ಕೃತಿ ಇದಾಗಿದೆ. ಅಮರೇಶನುಗಡೋಣಿಯವರು ಸಮಾಜದಲ್ಲಿಯ ವ್ಯಕ್ತಿ ಓರೆಕೋರೆ, ದ್ವಂದ್ವ, ಸಂಘರ್ಷ, ಒಳಿತು–ಕೆಡಕು, ಪ್ರೀತಿ–ಪ್ರೇಮ, ಕಾಮ ಏನೇ ಇರಲಿ ಅವುಗಳನ್ನು ಸಾಹಿತ್ಯ ಕೃತಿ ಕಲಾತ್ಮಕವಾಗಿ ಚಿತ್ರಿಸಿರುತ್ತದೆ. ಅಲ್ಲಿ ಲೇಖಕರು ಎಷ್ಟೋ ಸಲ ಲೇಖಕನಾಗಿರುವುದಿಲ್ಲ ಪಾತ್ರವಾಗುತ್ತಾನೆ, ವಿಮರ್ಶಕನಾಗುತ್ತಾನೆ, ವಿಡಂಬಕನಾಗುತ್ತಾನೆ, ಸಂಶೋಧಕನಾಗುತ್ತಾನೆ. ಆದ್ದರಿಂದ ಕಲಾಕೃತಿ ಅವರ ಸೃಷ್ಟಿಕರ್ತನ ಸಹೃದಯನಾಗಿ ತನ್ನ ಆನಂದಕ್ಕಾಗಿ ಓದುತ್ತಾನೆ, ಇಷ್ಟಪಡುತ್ತಾನೆ, ಅದೇ ಅವನ ವಿಶಿಷ್ಟ ಅನುಭೂತಿ. ವಿಮರ್ಶಕನೂ ಕೂಡ ಒಂದು ಕೃತಿಯನ್ನು ಇಂತಹ ಅನುಭೂತಿಗಾಗಿಯೇ

ವಿಮರ್ಶಿಸುತ್ತಾನೆ. ಆಲನಹಳ್ಳಿಯವರ ಕೃತಿಯೊಂದನ್ನು ಈ ಹರಹಿನಲ್ಲಿ ವಿಮರ್ಶೆ ಮಾಡಿರುವ ಕೃತಿಯಾಗಿದೆ.

- **'ಕಾಡಿನ ಹುಡುಗ ಕೃಷ್ಣ'**

ಇದೊಂದು ನೆನಪಿನ ಸಂಪುಟದ ಕೃತಿ ಇದನ್ನು ಸಂಪಾದಿಸಿದವರು ಡಿ.ಎಸ್.ನಾಗಭೂಷಣ, ರಾಘವೇಂದ್ರಪಾಟೀಲ, ಸ.ಉಷಾ ಈ ಮೂವರು ಆಲನಹಳ್ಳಿಯವರ ಸಮಗ್ರಸಾಹಿತ್ಯ ಹಾಗೂ ವ್ಯಕ್ತಿತ್ವವನ್ನು ಸಾಕ್ಷೀಕರಸಿದ ಕೃತಿ. ಅವರ ವಾರಿಗೆಯವರು ಮತ್ತು ಸಮಕಾಲೀನರು ಅವರವರ ಅಭಿಪ್ರಾಯಗಳನ್ನು, ಅನಿಸಿಕೆಗಳನ್ನು ದಾಖಲಿಸಿದ ಕೃತಿಯಿದು. ಈ ಕೃತಿಯಲ್ಲಿ ಆಲನಹಳ್ಳಿಯವರನ್ನು ಅವರ ಚಿಂತನೆಗಳನ್ನು ಅವರ ಸಾಹಿತ್ಯಕ ಚಿಂತನೆಗಳನ್ನು ಕುರಿತು ವಿವರಿಸಿದೆ.

ಡಾ. ಕೆ.ವಿ.ತಿರುಮಲೇಶ್ ಅವರು 'ಕಾಲಾಂತರದಲ್ಲಿ ಕೃಷ್ಣ' ಎಂಬ ಲೇಖನ ಬರೆಯುತ್ತಾ ತಿರುಮಲೇಶ್ ಮತ್ತು ಆಲನಹಳ್ಳಿಯವರ ಒಡನಾಟ ಅವರ ನಡೆ-ನುಡಿಯನ್ನು ಸ್ಮರಿಸುತ್ತಾರೆ. 'ಲಕ್ಷ್ಮೀಶತೋಳ್ಪಾಡಿ' ಅವರು ಆಲನಹಳ್ಳಿಯವರ ಸ್ನೇಹ ಸಂಬಂಧಗಳು ಮೆಚ್ಚುಗೆ ಗೌರವವನ್ನು ನೆನೆಯುತ್ತಾರೆ. 'ಕನ್ನಡ ಕಾದಂಬರಿ ಪರಂಪರೆ ಮತ್ತು ಶ್ರೀಕೃಷ್ಣ ಆಲನಹಳ್ಳಿ' ಎಂಬ ಅವರ ಪ್ರತಿಭೆಯನ್ನು ಕುರಿತಂತೆ ಟಿ.ಪಿ.ಅಶೋಕ ಅವರು ಕಾದಂಬರಿಯನ್ನು ಬರೆದ ರೀತಿಯನ್ನು ಅದರ ವಸ್ತು ವೈವಿದ್ಯತೆಯನ್ನು ಕುರಿತು ಬರೆಯುತ್ತಾರೆ.

'ವಿದ್ಯಾರ್ಥಿಮಿತ್ರ' ಎಂದು ಸುಜನಾ ಅವರು ಬರೆಯುತ್ತಾರೆ. 'ಮನಮೋಹಕ ಕೃಷ್ಣ' ಎಂದು ರಮೇಶ್ ಬಂದಗದ್ದೆಯವರು, ಚಂದ್ರಶೇಖರತಾಳ್ಯ, ಎಸ್.ಮಂಜುನಾಥ್, ಡಾ. ಬೆಸಗರಹಳ್ಳಿರಾಮಣ್ಣ, ಪ್ರತಿಭಾನಂದ ಕುಮಾರ್, ಕೆ.ನ.ಶಿವತೀರ್ಥನ್, ಕಂ.ವೆಂ.ರಾಜಗೋಪಾಲ ಆಲನಹಳ್ಳಿ ಹತ್ತಿರದ ಒಡನಾಟಗಳನ್ನು ಸ್ನೇಹತ್ವದ ದಿನಗಳನ್ನು, ನೆನಪಿನ ಸ್ಮರಣೆಗಳನ್ನು ಆಲನಹಳ್ಳಿಯ ಒಡನಾಡಿಗಳಾಗಿ ವಿಚಾರ ಮಾಧಕರಾಗಿ ಇವರೆಲ್ಲರೂ ತಮ್ಮ ತಮ್ಮ ಗಾಢ ಅನುಭವಗಳನ್ನು ಯಾವುದೇ ಮುಚ್ಚುಮರೆ ಇಲ್ಲದೆ ಹೇಳಿಕೊಳ್ಳುತ್ತಾರೆ.

ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆಯನ್ನು ಗಮನಿಸಿದಾಗ ಆಲನಹಳ್ಳಿ ಹಾಗೂ ತೇಜಸ್ವಿಯವರ ಸಮಗ್ರ ಸಾಹಿತ್ಯದಲ್ಲಿ ಭಿನ್ನ ಭಿನ್ನ ಪರಿಕಲ್ಪನೆಗಳಲ್ಲಿ ಸಂಶೋಧನೆಯು ನಡೆದಿರುವುದನ್ನು ಕಾಣಬಹುದು. ನನ್ನ ಸಂಶೋಧನಾ ಶೀರ್ಷಿಕೆಗೆ ಸಂಬಂಧಿಸಿದ ಹಾಗೆ ಬೇರೆ ಬೇರೆ ಸಂಶೋಧಕರು ವಿವರಿಸಿರುವ ವಿವರಣೆ, ಹುಡುಕಾಟ, ವಿಮರ್ಶೆ, ಸಂಶೋಧನೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಸಾಂಸ್ಕೃತಿಕ ಸಂಘರ್ಷದ ಸ್ವರೂಪವನ್ನು ಯಾರು ಕಟ್ಟಿಕೊಟ್ಟಿಲ್ಲ. ಬಹಳ ಮುಖ್ಯವಾಗಿ ಮನುಷ್ಯನ ಬದುಕು

ಚಲನಶೀಲವಾದದು. ಚಲನಶೀಲವಾದ ಬದುಕಿನಲ್ಲಿ ಬದಲಾವಣೆಯೆನ್ನುವುದು ಅಷ್ಟೇ ಸಹಜ ಹಾಗೂ ಜೀವಂತಿಕೆಯ ಲಕ್ಷಣವಾಗಿದೆ. ಕಾಲದಿಂದ ಕಾಲಕ್ಕೆ ಮನುಷ್ಯನ ಚಿಂತನೆ, ಆಲೋಚನೆ, ಬದುಕಿನ ಕ್ರಮ, ವರ್ತನೆಗಳು, ಸಾಮಾಜಿಕ ಕಟ್ಟಳೆಯಲ್ಲಿ ಬದಲಾವಣೆಯ ಗತಿ ಸ್ಥಿತಿಯನ್ನು ಅನುಸರಿಸಿದೆ. ಸಾಹಿತ್ಯ ಕೂಡ ಅಂದಿನ ಸಾಮಾಜಿಕ ಸಂದರ್ಭಕ್ಕನುಗುಣವಾಗಿ ಅಭಿವ್ಯಕ್ತಿ ಪಡೆಯುತ್ತಿರುತ್ತದೆ. ಈ ರೀತಿಯಾಗಿ ಬದಲಾವಣೆಯು ಸಂವೇದನೆಯ ಮೂಲಕ ಸಾಂಸ್ಕೃತಿಕ ಅನನ್ಯತೆಯನ್ನೂ ಹಾಗೂ ಸಂಘರ್ಷವನ್ನು ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನಸಾಹಿತ್ಯದಲ್ಲಿ ಕಟ್ಟಿರುವ ಬಗೆಯನ್ನು ನೋಡಬಹುದು. ಹೀಗೆ ಈ ಇಬ್ಬರು ಲೇಖಕರ ಸಾಹಿತ್ಯವನ್ನು ಅವಲೋಕಿಸಿದಾಗ ತೇಜಸ್ವಿ ಅವರ ಕೃತಿಗಳ ರಚನೆಗೆ ಮಲೆನಾಡಿನ ಪ್ರಾಕೃತಿಕ ಜಗತ್ತು ಹಾಗೂ ವಿಜ್ಞಾನ ಇವರಿಗೆ ಪ್ರಭಾವಬೀರಿದವು. ಇವುಗಳ ಪ್ರೇರಣೆಯಿಂದ ಅವರ ಸಾಹಿತ್ಯ ಬರಹ ಸಿದ್ಧಿಗೊಂಡಿತು. ಆಲನಹಳ್ಳಿಯವರಿಗೆ ಬಯಲುಸೀಮೆಯ ದಟ್ಟ ಪ್ರಭಾವ ಹಾಗೂ ಬಾಲ್ಯದ ಅನುಭವಗಳು ಇವರಿಗೆ ಪ್ರಮುಖ ಪ್ರೇರಣೆಯಾಗಿವೆ. ಈ ಎಲ್ಲಾ ಅಧ್ಯಯನಗಳ ಮುಂದುವರಿಕೆಯಾಗಿ ನನ್ನ ಅಧ್ಯಯನವು ನಡೆಯಬೇಕಾದ ಅರಿವಿನೊಂದಿಗೆ ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನಸಾಹಿತ್ಯದ ಸಾಂಸ್ಕೃತಿಕ ಸಂಘರ್ಷದ ನೆಲೆಗಳಿಗೆ ಮುಖಾಮುಖಿಯಾಗುವ ಪ್ರಯತ್ನ ಈ ಮಹಾಪ್ರಬಂಧದಲ್ಲಿದೆ.

ಅಧ್ಯಾಯ – ೩

ಕನ್ನಡ ಕಥನಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ : ಒಂದು ಅವಲೋಕನ

ಕಳೆದ ೨೦ನೇ ಶತಮಾನದಲ್ಲಿ ಕನ್ನಡ ಸಾಹಿತ್ಯ ಎಲ್ಲಾ ನೆಲೆಗಳಲ್ಲಿ ಹಿಂದೆಂದೂ ಊಹಿಸದಷ್ಟು ಶ್ರೀಮಂತವಾಗಿ ಸಮೃದ್ಧವಾಗಿ ಬೆಳೆಯಿತು. ಇಷ್ಟು ಸಮೃದ್ಧ ವಾಙ್ಮಯವನ್ನು ವಿಮರ್ಶಾತ್ಮಕವಾಗಿ ನೋಡುವುದಕ್ಕೆ ಅಗತ್ಯವಿರುವ ಒಂದು ವೈಚಾರಿಕ ಚೌಕಟ್ಟನ್ನು ಹಾಕಿಕೊಳ್ಳುವ ಅನಿವಾರ್ಯತೆ ಇದೆ. 'ಸಂಸ್ಕೃತಿ'ಯನ್ನು ಅರಿಯ ಹೊರಟರೆ ವಿಭಿನ್ನ ಆಯಾಮಗಳ ನೆಲೆಯಲ್ಲಿ ಅರ್ಥೈಸಿಕೊಳ್ಳಬಹುದು. 'ಸಂಸ್ಕೃತಿ ಎಂದರೆ ಜೀವನ ಕ್ರಮ', 'ಒಂದು ಸಭ್ಯ ಸಂಸ್ಕಾರ', 'ಮೌಲ್ಯಪ್ರಜ್ಞೆ', 'ಸಂಸ್ಕೃತಿ' ಶಬ್ದವು ಸಾಮಾಜಿಕವಾಗಿ ನೆಲೆಗೊಂಡಿರುವ ವರ್ತನೆ, ಸಹಜ ಸ್ವಭಾವ ಎಂಬರ್ಥದಲ್ಲಿ ಬಳಕೆಯಾಗುತ್ತಿದೆ.

ಸಂಸ್ಕೃತಿಯನ್ನು ಚಾರಿತ್ರಿಕವಾಗಿ ನೋಡಿದರೆ ಸಾಮಾಜಿಕ, ರಾಜಕೀಯ, ಆರ್ಥಿಕವಾದ ಚಲನೆಗಳು ಅಂದಿನಿಂದ ಇಂದಿನವರೆಗೆ ಕಾರಣವಾಗಿವೆ. ಆದ್ದರಿಂದ 'ಶುದ್ಧ ಮೂಲ' ಸಂಸ್ಕೃತಿ ಎಂಬುದು ಇರಲು ಸಾಧ್ಯವಿಲ್ಲ. ಸಂಸ್ಕೃತಿಯು ಸಹ ಸಂಕರರೂಪಿ. ಈ ಸಂಕರವು ಚಲನಶೀಲತೆಯ ಸಂಕೇತ. ಇದನ್ನು ಸಾಂಸ್ಕೃತಿಕ ಬಹುತ್ವ ಎಂದು ಕರೆಯಬಹುದು. ಸಂಸ್ಕೃತಿ ಎಂಬ ಪರಿಕಲ್ಪನೆ ಮೂಲತಃ ಒಂದು ರಾಜಕೀಯ, ಆರ್ಥಿಕ, ಸಾಮಾಜಿಕವಾದ ಲೋಕದೃಷ್ಟಿಯನ್ನು ಸೂಚಿಸುವ ಸೈದ್ಧಾಂತಿಕ ಪರಿಭಾಷೆ. ಅದನ್ನು ಧಾರ್ಮಿಕವಾಗಿ ಪವಿತ್ರವೆಂಬ ಭಾವನೆಯಲ್ಲಿ ಬಳಸುವಾಗಲೂ ಅದು ನಿರ್ದಿಷ್ಟ ರಾಜಕೀಯ, ಆರ್ಥಿಕ, ಸಾಮಾಜಿಕ ಚಿಂತನೆಯನ್ನು ಒಳಗೊಂಡಿರುತ್ತದೆ.

ಮಾನವನ ಅಂತರಂಗದ ಜೀವಂತ ಚಿತ್ರವೇ ಸಂಸ್ಕೃತಿ. "ಈ ವಿಶೇಷಣ ಇಟ್ಟುಕೊಂಡು ಸಾಂಸ್ಕೃತಿಕ ಓದು, ಸಾಂಸ್ಕೃತಿಕ ಅಧ್ಯಯನ, ಸಾಂಸ್ಕೃತಿಕ ಮುಖಾಮುಖಿ, ಸಾಂಸ್ಕೃತಿಕ ನೋಟ ಎಂಬ ಪರಿಕಲ್ಪನೆಗಳು ಚಾಲ್ತಿಗೆ ಬರುತ್ತವೆ. ಈ ಬಹುಶಿಸ್ತೀಯತೆಯ ಅರ್ಥವು, ಮೇಲೆ ಹೇಳಿದಂತೆ ಕೇವಲ ಶೈಕ್ಷಣಿಕ ಅಗತ್ಯವಾಗಿ ಬಂದಿದ್ದಲ್ಲ. ನಮ್ಮ ಸಾಮಾಜಿಕ ರಚನೆಯಲ್ಲಿ ಸಮಾಜ, ರಾಜಕಾರಣ, ಧರ್ಮ, ಸಾಹಿತ್ಯ, ಆರ್ಥಿಕತೆ, ಇವು ಒಂದಕ್ಕೊಂದು ಸೇರಿಕೊಂಡಂತೆ ಇರುವುದು. 'ಸಾಂಸ್ಕೃತಿಕ' ಎಂಬುದು ಬದುಕಿನ ಹಲವು ಆಯಾಮಗಳನ್ನು ಅಖಂಡವಾಗಿ ಹಿಡಿವ ಪರಿಭಾಷೆಯಾಗಿ ಬಳಕೆ ಆಗುತ್ತಿರುವುದನ್ನು ಕನ್ನಡದಲ್ಲಿ ಕಾಣಬಹುದು."[೧] 'ಸಂಸ್ಕೃತಿ' ಪರಿಕಲ್ಪನೆಯಲ್ಲಿ ನಡೆಯುತ್ತಿರುವುದು ಜ್ಞಾನದ ಅಥವಾ ಶೈಕ್ಷಣಿಕವಾದ ಚರ್ಚೆಯಲ್ಲಿ ಸಾಮಾಜಿಕ,

---

೧. ರಹಮತ್ ತರೀಕೆರೆ, 'ಸಾಂಸ್ಕೃತಿಕ ಅಧ್ಯಯನ', ಪುಟ. ೫೬, ೨೦೦೪.

ರಾಜಕೀಯ ದೃಷ್ಟಿಕೋನಗಳ ಮಂಡನೆ. ನಾವು ಸಂಸ್ಕೃತಿಯೆಂದು ಕರೆಯುವುದು ಸಂಕೀರ್ಣ ಸಮಾಜದ ಮೂಲ ರಚನೆಯ ಮೇಲೆ ನಿಂತಿರುವ ಒಂದು ಮೇಲ್‌ರಚನೆ. ಸಂಸ್ಕೃತಿಯ ರೂಪದಲ್ಲಿ ಕಾಣುವುದೆಲ್ಲ ಸಮಾಜದ ವರ್ಗ ವ್ಯವಸ್ಥೆಯನ್ನು ಅವಲಂಬಿಸಿದ ಮತ್ತು ಈ ಸಮಾಜದ ವರ್ಗಶಕ್ತಿಗಳನ್ನು ಬಿಂಬಿಸುವ ಒಂದು ಹೊರ ಮೈ. ಅದೆಂದರೆ, ಪ್ರಭುತ್ವ ಮತ್ತು ಪ್ರತಿರೋಧ ಹಾಗೂ ಸಾಹಿತ್ಯ ಮತ್ತು ವಿಚ್ಛಿನ್ನತೆ ಆಶಯಗಳ ಸಂಕೀರ್ಣ ವಿನ್ಯಾಸಗಳು.

ಮೊದಲು ಪ್ರಭುತ್ವ ಮತ್ತು ಪ್ರತಿರೋಧದ ಆಶಯ ವಿನ್ಯಾಸಗಳನ್ನು ಗಮನಿಸೋಣ. ೧೯ನೆಯ ಶತಮಾನದ ಉತ್ತರಾರ್ಧದಿಂದ ಪ್ರಾರಂಭವಾದ ಆಧುನಿಕ ಕನ್ನಡ ಸಾಹಿತ್ಯ ಒಂದು ನೆಲೆಯಲ್ಲಿ ವಸಾಹತುಶಾಹಿ ಅನುಭವದಿಂದ ರೂಪಿಸಲ್ಪಟ್ಟಿದೆ. ಇಂದು ಸರ್ವವೇದ್ಯವಾಗಿರುವಂತೆ ತನ್ನ ಪ್ರಭುತ್ವವನ್ನು ಉಳಿಸಿ ಬೆಳೆಸಲು ಬ್ರಿಟಿಷ್ ವಸಾಹತುಶಾಹಿ ತನ್ನದೇ ಆದ ಸಾಂಸ್ಕೃತಿಕ ಯಜಮಾನ್ಯವನ್ನು ಕರ್ನಾಟಕ ಅಥವಾ ಭಾರತದ ಮೇಲೆ ಹೇರುವುದರಲ್ಲಿ ಯಶಸ್ವಿಯಾಯಿತು. ಅಂದರೆ, ವಸಾಹತುಶಾಹಿ ವೈಚಾರಿಕತೆ, ಇಂಗ್ಲಿಷ್ ಶಿಕ್ಷಣ ಪ್ರಗತಿ ಎಂಬ ಸರಳ ಸಮೀಕರಣವನ್ನು ಭಾರತೀಯರೇ ಒಪ್ಪುವಂತೆ ಮಾಡಲು ಯಶಸ್ವಿಯಾಯಿತು. ಬ್ರಿಟಿಷ್ ಸಾಂಸ್ಕೃತಿಕ ವೈಚಾರಿಕ ಯಜಮಾನ್ಯವನ್ನು ಆಧುನಿಕ ಕನ್ನಡದ ಸಾಹಿತಿಗಳು ಹಾಗೂ ಚಿಂತಕರು ಪ್ರಜ್ಞಾಪೂರ್ವಕವಾಗಿ ಮಾನ್ಯ ಮಾಡಿದ್ದರು ಎಂಬುದಕ್ಕೆ ಸಮರ್ಥನೆಯಾಗಿ ಈ ಪ್ರಾತಿನಿಧಿಕ ಸಾಲುಗಳನ್ನು ಉದಾಹರಿಸಬಹುದು.

‘ಸಕಲ ಧರ್ಮದ ತಿರುಳ ಹೊರೆದಳು
ಸಕಲ ಜ್ಞಾನದ ತೆರೆಗಳು,
ಸಕಲ ಸೇವೆಯ ಬಯಕೆಗಳೆದಳು
ಸಕಲ ಕುಲವನೊರೆದಳು.’

ಬಿ.ಎಂ.ಶ್ರೀ.ಯವರು ತಮ್ಮ ‘ಭರತಮಾತೆಯ ವಾಕ್ಯ’ ಎಂಬ ಕವನದಲ್ಲಿ ಬ್ರಿಟಾನಿಯಾ ರಾಣಿಯನ್ನುದ್ದೇಶಿಸಿ ಹೀಗೆ ಹೇಳುತ್ತಾರೆ.

ಅದೇ ರೀತಿ ಕುವೆಂಪುರವರ ಸಾಲುಗಳನ್ನು ನೋಡಬಹುದು:

‘ಬೀಸುತ್ತಿದೆ ಪಶ್ಚಿಮದ ರಸಪೂರ್ಣ ಹೊಸಗಾಳಿ
ಭಾರತದ ಬಣಗು ಬಾಳ್ಮರವನಲುಗಾಡಿ’

ಎಂದು ಘೋಷಿಸಿದರು.

“ಈ ರೀತಿ ಬ್ರಿಟಿಷ್ ಸಾಂಸ್ಕೃತಿಕ ಯಜಮಾನ್ಯವನ್ನು ಇತರ ಭಾರತೀಯರಂತೆ ಕನ್ನಡ ಲೇಖಕರು ಹಾಗೂ ಚಿಂತಕರು ಸಂಪೂರ್ಣವಾಗಿ ಮಾನ್ಯ ಮಾಡಿದುದಕ್ಕೆ ಕೇವಲ ಬ್ರಿಟಿಷರ ರಾಜಕೀಯಾಸಕ್ತಿ ಮತ್ತು ಪಾಶ್ಚಿಮಾತ್ಯರ ವೈಜ್ಞಾನಿಕ, ತಾಂತ್ರಿಕ ಪ್ರಗತಿಗಳೇ ಕಾರಣವಲ್ಲ. ೨೬೦

ವರ್ಷಗಳ ಬ್ರಿಟಿಷ್ ಪ್ರಭುತ್ವದೊಡನೆಯೇ ಸಾವಿರ ವರ್ಷಗಳ ದೇಶೀಪ್ರಭುತ್ವವು ಭಾರತದಲ್ಲಿ ಅಸ್ತಿತ್ವದಲ್ಲಿತ್ತು. ಮತ್ತು ಜಾತಿ, ಧರ್ಮ, ಲಿಂಗಬೇಧವನ್ನಾಧರಿಸಿದ ಭಾರತದ ಶ್ರೇಣೀಕೃತ ಸಮಾಜ ಪ್ರಭುತ್ವ ಒಂದು ಬಿಡುಗಡೆಯ ದಾರಿಯಾಗಿ ಕಂಡಿತು. ರಾಜಕೀಯ ಸ್ವಾತಂತ್ರ್ಯಕ್ಕಿಂತಲೂ ಸಾಂಸ್ಕೃತಿಕ, ಸಾಮಾಜಿಕ ಸ್ವಾತಂತ್ರ್ಯಕ್ಕೆ ಪ್ರಥಮ ಆದ್ಯತೆ ನೀಡಬೇಕೆಂಬ ಡಾ. ಅಂಬೇಡ್ಕರ್ ಅವರ ವಾದ ಎಲ್ಲರಿಗೂ ಪರಿಚಿತವಾಗಿದೆ. ಆದ್ದರಿಂದ ಬ್ರಿಟಿಷ್ ಸಾಂಸ್ಕೃತಿಕ ಯಜಮಾನ್ಯವನ್ನು ಒಪ್ಪಿಕೊಂಡು ಆ ಮೂಲಕ ದೇಶೀ ಯಜಮಾನ್ಯದಿಂದ ಮುಕ್ತಿ ಪಡೆಯುವ ವೈಚಾರಿಕತೆ ಸಾಹಿತ್ಯದಲ್ಲಿ 'ಸುಧಾರಣವಾದ'ವಾಗಿ ರೂಪಾಂತರಗೊಂಡು ವಸಾಹತುಶಾಹಿ ಹಾಗೂ ವಸಾಹತೋತ್ತರ ಕಾಲಗಳಲ್ಲಿ ಭಾರತೀಯ ಅಥವಾ ಕನ್ನಡ ಸಾಹಿತ್ಯವನ್ನು ಗಾಢವಾಗಿ ಪ್ರಭಾವಿಸಿತು."[೨]

ಸಾಹಿತ್ಯ ಪ್ರಕಾರಗಳಲ್ಲೆಲ್ಲಾ ಸಣ್ಣ ಕಥಾಸಾಹಿತ್ಯ ಅತ್ಯಂತ ಪ್ರಾಚೀನವಾದುದು. ಬಹುಶಃ ಕಾವ್ಯದ ಜೊತೆಗೆ ಅದು ಹುಟ್ಟಿರಬೇಕು. ಅಕ್ಷರ ವಿದ್ಯೆ ಇಲ್ಲದ ಜನಾಂಗಗಳಲ್ಲಿ ಕೂಡ ಜಾನಪದ ಸಾಹಿತ್ಯದ ಒಂದು ಪ್ರಕಾರವಾಗಿ ಅದು ಅಸ್ತಿತ್ವದಲ್ಲಿದೆ. ಶಿಷ್ಟಸಾಹಿತ್ಯದಲ್ಲೂ ಅದರ ರೂಪಗಳು ಅರೇಬಿಯನ್ ನೈಟ್ಸ್ ಕಥೆಗಳಂತೆ, ಪಂಚತಂತ್ರ ಕಥೆಗಳಂತೆ ಸಾಕಷ್ಟು ಜನಪ್ರಿಯವಾಗಿದೆ. ಆದರೆ, ಇಂದಿನ ಆಧುನಿಕ ಕಥಾಸಾಹಿತ್ಯ ತೀರಾ ಭಿನ್ನವಾದುದು. ಇಂದಿನ ಆಧುನಿಕ ರೂಪದಲ್ಲಿ ಅದು ಸಾಹಿತ್ಯ ಪ್ರಕಾರಗಳಲ್ಲೆಲ್ಲ ಅತ್ಯಂತ ಅರ್ವಾಚೀನವಾದದ್ದು. ಕಾದಂಬರಿ ಇಂಗ್ಲೀಷ್‌ನಲ್ಲಿ ಹದಿನೇಳನೇ ಶತಮಾನದ ಕೊನೆಗೆ ಆರಂಭವಾಗಿ ಹದಿನೆಂಟನೆಯ ಶತಮಾನದಲ್ಲಿ ಬೆಳೆದು ಹತ್ತೊಂಭತ್ತನೆಯ ಶತಮಾನದಲ್ಲಿ ಪ್ರಬುದ್ಧವಾದ ಒಂದು ಸಾಹಿತ್ಯ ಪ್ರಕಾರವಾದರೆ ಆಧುನಿಕ ಕಾಲಕ್ಕೆ ಅತ್ಯಂತ ಜನಪ್ರಿಯ ಸಾಹಿತ್ಯ ಪ್ರಕಾರವಾಗಿ ಈ ಕಥಾಸಾಹಿತ್ಯ ರೂಪುಗೊಂಡಿದೆ.

ಹತ್ತೊಂಭತ್ತನೆಯ ಶತಮಾನದಲ್ಲಿ ಭಾರತೀಯರಲ್ಲಿ ಕಂಡು ಬಂದ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳು ಮುಖ್ಯವಾಗಿ ಭಾರತೀಯ ಮಧ್ಯಮ ವರ್ಗದ ವಿದ್ಯಾವಂತರ ಉದಾರವಾದಿ ಭಾವನೆಯ ತತ್ವಸಿದ್ಧಾಂತಗಳ ಫಲವಾಗಿದ್ದವು. ಇವೆಲ್ಲ ಹಿಂದೂ ಧರ್ಮದ ಆತ್ಮಶೋಧನೆಯ ಮುಖ್ಯ ಬೆಳವಣಿಗೆಗಳೆಂದೇ ಹೇಳಬಹುದಾಗಿದೆ. ಕ್ರೈಸ್ತ ಮಿಷನರಿಗಳು ತಮ್ಮ ಧರ್ಮ ಸಿದ್ಧಾಂತಗಳನ್ನು ಪ್ರಚಾರ ಮಾಡುವ ಸಲುವಾಗಿ ದೇಶದಾದ್ಯಂತ ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಮತಾಂತರ ಕಾರ್ಯದಲ್ಲಿ ಮುಂದಾಗಿದ್ದರು. ಅದಕ್ಕಾಗಿ ಹಿಂದೂ ಧರ್ಮ ಹಾಗೂ ಸಿದ್ಧಾಂತಗಳಲ್ಲಿನ ಅವೈಚಾರಿಕತೆ, ಅವೈಜ್ಞಾನಿಕತೆ, ಗೊಡ್ಡು ಸಂಪ್ರದಾಯ, ಆಚರಣೆ ಮುಂತಾದ ಅನಿಷ್ಟ ಪದ್ಧತಿಗಳಿಂದ ಕೂಡಿದ ಶ್ರೇಣೀಕೃತ ಸಮಾಜ ವ್ಯವಸ್ಥೆಯ ಧಾರ್ಮಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ತರ್ಕನಿಷ್ಠವಾಗಿಯೇ ಟೀಕಿಸುತ್ತಾ ಬಂದಿದ್ದರು.

---

೨. ಸಿ.ಎನ್. ರಾಮಚಂದ್ರನ್, 'ಪರಂಪರೆ–ಪ್ರತಿರೋಧ', ಪುಟ. ೨, ೩೨೦೦೩.

ಇನ್ನೂ ಹಳಗನ್ನಡ, ನಡುಗನ್ನಡ ಕಾಲದ ಬರಹವನ್ನು ವಿಶ್ಲೇಷಿಸಲೇಬೇಕು. ಪಂಪನ ಕೃತಿಗಳಲ್ಲಿ ಬರುವ ಕಥನ ಸಾಂಸ್ಕೃತಿಕವಾದ ಅನನ್ಯತೆಯನ್ನು ಸಾರುವ ಸಂಘರ್ಷದ ಮಾದರಿಯೇ ರನ್ನ, ಜನ್ನ, ಪೊನ್ನ, ಹರಿಹರ, ರಾಘವಾಂಕ, ವಚನಸಾಹಿತ್ಯ, ಕೀರ್ತನಸಾಹಿತ್ಯ ಹೀಗೆ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ ಅಂದಿನ ಸಾಹಿತ್ಯ ಇವತ್ತಿಗೂ ಪ್ರಸ್ತುತವೇ. ಕಾರಣ ಬದುಕು ನಿರಂತರವಾದುದು. "ಸಂಸ್ಕೃತಿಯು ಹಳೆಯ ಮಾರ್ಗದರ್ಶಿತ ಸೂತ್ರಗಳನ್ನು ಹೊರತುಪಡಿಸಿ ಇರುವುದಿಲ್ಲ. ಹಾಗಾಗಿ ಇವರು ಕಟ್ಟುವ ಕಥನಗಳಲ್ಲಿ ಸಂಘರ್ಷದ ಮಾದರಿಗಳನ್ನು ಕಾಣಬಹುದು. ಮಾಸ್ತಿಯವರ ಸಣ್ಣಕಥೆಗಳಲ್ಲಿ ತಮ್ಮ ಛಾಪನ್ನು ಒತ್ತುವ ಮೊದಲೆ ಪಂಜೆ ಮಂಗೇಶರಾಯ, ಎಂ.ಎನ್. ಕಾಮತ್, ಕೆರೂರು ವಾಸುದೇವಾಚಾರ್ಯ ಮುಂತಾದವರು ಸಣ್ಣಕಥೆಗಳ ಬರವಣಿಗೆಯಲ್ಲಿ ತೊಡಗಿದ್ದರು. ಈಗಾಗಲೇ ಆಧುನಿಕತೆಯ ರೂಪಗಳನ್ನೊಳಗೊಂಡ ಹಲವು ಮಾದರಿಗಳ ಕಥಾಚಿತ್ರಣಗಳನ್ನು ಅಭಿವ್ಯಕ್ತಿಸಿ, ಸಣ್ಣಕಥೆಗಳಲ್ಲಿ ಮುನ್ನುಡಿ ಬರೆದು ಅನಾವರಣಗೊಳಿಸಿದ್ದರು."[೩]

ಭಾರತೀಯ ಪರಂಪರೆಯ ಗತಕಾಲದ ವೈಭವಗಳಲ್ಲಿ ನಾಡು–ನುಡಿ, ಧರ್ಮ–ಸಂಸ್ಕೃತಿ, ಇತಿಹಾಸ, ಪುರಾಣ ಮುಂತಾದವುಗಳನ್ನು ಪುನರ್‌ದಾಖಲಿಸುತ್ತಾ ಅವುಗಳ ಅರಿವು ಮತ್ತು ಪ್ರಜ್ಞೆಯನ್ನು ಪರೋಕ್ಷವಾಗಿ ಕಟ್ಟುತ್ತಾಹೋಗುವ ವೈವಿಧ್ಯತೆ ಕಂಡುಬಂದರೆ ಅವರ ಸಾಂಸ್ಕೃತಿಕ ಸಂಘರ್ಷದ ಕಥೆಗಳ ವೈವಿಧ್ಯ ಭಾರತೀಯ ಸಮಕಾಲೀನ ಸಮಾಜದಲ್ಲಿ ಬದುಕನ್ನು ವಿಕೃತಗೊಳಿಸಿಕೊಳ್ಳದೆ ಸಾರ್ಥಕತೆ ಕಂಡುಕೊಳ್ಳುವುದಾಗಿದೆ. ಇದಕ್ಕೆ ಪೂರಕವಾಗಿ ಅನ್ಯದೇಶೀಯ ಕಥೆಗಳ ವೈವಿಧ್ಯತೆಗಳನ್ನು ಸೇರಿಸಿಕೊಳ್ಳಬಹುದು. ಬದುಕಿನ ಸಾರ್ಥಕತೆಗೆ ದಯೆ, ಕರುಣೆ, ಪ್ರೀತಿ, ವಿಶ್ವಾಸ, ಮಾನವೀಯತೆ, ತ್ಯಾಗ, ಬಲಿದಾನ ಮುಂತಾದ ಮಾನವನ ಸದ್ಗುಣಗಳ ಮಾರ್ಗದರ್ಶನ ಬೇಕೆಂಬುದಾಗಿದೆ. ಇವರ ಕಥೆಗಳಲ್ಲಿ ಪೂರ್ವ ಪೀಠಿಕೆಯೊಂದು ಇದ್ದೇ ಇರುತ್ತದೆ. ಅನಂತರವೇ ಕಥೆಯ ಒಳ ವಿವರಗಳನ್ನು ಕಟ್ಟಿಕೊಡುತ್ತಾ ಭಾರತೀಯ ಸಂಸ್ಕೃತಿಯ ಬದುಕಿನ ಬಗ್ಗೆ ಅದಮ್ಯವಾದ ಪ್ರೀತಿಯನ್ನು ಹುಟ್ಟಿಸುತ್ತಾ ಹೋಗುತ್ತಾರೆ. ಈ ರೀತಿಯ ಧಾಟಿಗಳನ್ನು ಕಥೆಗಳಿಂದ ಕಸಿ ಮಾಡಿಕೊಂಡಿದ್ದಾರೆ. ಅದನ್ನು ಕಥೆಗಾರರು ಉದ್ದೇಶಪೂರ್ವಕವಾಗಿಯೇ ಸೃಷ್ಟಿಸಿಕೊಂಡದ್ದು ಇಂತಹ ಕಥೆಗಳನ್ನು ಹೇಳುವಾಗ ಓದುಗರ ಕುತೂಹಲವನ್ನು ಕೆರಳಿಸುತ್ತಾ ಅವರ ಗಮನ ಬೇರೆಯ ಕಡೆಗೆ ವಿಚಲಿತವಾಗದಂತೆ ಪ್ರಜ್ಞಾಪೂರ್ವಕವಾಗಿ ನಾಟಿಸುವುದಕ್ಕೆ ಮಾಡಿಕೊಂಡದ್ದು ವರ್ತಮಾನದಲ್ಲಿ ನಿಂತು ಭೂತವನ್ನು

---

೩. ಶಿವಾನಂದ ಕೆಳಗಿನಮನಿ, 'ಕಥೆ, ಕಾದಂಬರಿ ಮತ್ತು ಮೌಲ್ಯ ಪಲ್ಲಟಗಳು', ಪುಟ. ೫೦–೫೧, ೨೦೦೯.

ಕಟ್ಟುತ್ತಾ ಅದಕ್ಕೊಂದು ಭವಿಷ್ಯದ ಕಾಲಾತೀತ ಸಂಸ್ಕಾರವನ್ನು ತೆರೆದಿಡುತ್ತಾರೆ. ಹೀಗೆ ಕನ್ನಡ ಕಥಾ ಪರಂಪರೆ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದುತ್ತಾ ಶ್ರೀಮಂತಗೊಂಡಿತು.

ಸ್ವಾತಂತ್ರ್ಯ ಬಂದ ಅರ್ಧ ಶತಮಾನದ ನಂತರವೂ ನಮ್ಮ ಗ್ರಾಮಭಾರತ ಮೂಲಭೂತ ಸೌಕರ್ಯಗಳನ್ನು ಕಾಣದ ನಮ್ಮ ನಾಡಿನಲ್ಲಿಯೇ ಪರಕೀಯವೆಂಬಂತೆ ಅನೇಕ ಸಂದರ್ಭದಲ್ಲಿ ಕಾಣಿಸಿಕೊಂಡಿವೆ. ಅನಕ್ಷರತೆ, ಬಡತನ ಪಾರಂಪರಿಕ ಬಳುವಳಿಗಳು ಒಂದು ಕಡೆಯಾದರೆ, ಜಮೀನ್ದಾರಿ ಪದ್ಧತಿಯ ಕ್ರೌರ್ಯಗಳು ಜೀವಂತವಾಗಿವೆ. ಈ ಪಿಡುಗುಗಳನ್ನು ಅದರ ಪರಿಣಾಮಗಳನ್ನು ಅತ್ಯಂತ ಸೂಕ್ಷ್ಮ ಕಲಾತ್ಮಕತೆಯಿಂದ ಹಿಡಿದಿಟ್ಟಿರುವ ಅನೇಕ ಉತ್ತಮ ಕಥೆಗಳು ನಮಗೆ ದೊರೆಯುತ್ತವೆ. ಗ್ರಾಮೀಣ ಭಾರತ ಜಾಗೃತ ಸಮಾಜದ ಕೆಳ ಮೆಟ್ಟಿಲುಗಳಲ್ಲಿರುವ ದಲಿತರ ಬದುಕು ಬವಣೆಗಳ ಚಿತ್ರಣಗಳು ತೀವ್ರವಾದ ಸಾಮಾಜಿಕ ಕಳಕಳಿಯಿಂದ ಕೂಡಿದ್ದರೆ ಅವರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಆಕ್ರಮಣದ ಚಿತ್ರಣ ವಿಷಾಧದಿಂದ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ಇಂತಹ ಗಂಭೀರ ಪರಿಸ್ಥಿತಿಗೆ ಸಾಂಸ್ಕೃತಿಕ ಮತ್ತು ರಾಜಕಾರಣ ಪ್ರೇರಿತ ಕಾರಣಗಳಿವೆ.

ನಮ್ಮ ಪರಂಪರೆಯಲ್ಲಿರುವ ಚಾರಿತ್ರಿಕ ಕಾರಣಗಳನ್ನು ಹುಡುಕುತ್ತಲೇ ಪ್ರಸಕ್ತ ಸಂದರ್ಭದಲ್ಲಿ ನ್ಯೂನ್ಯತೆಗಳನ್ನು ಹುಡುಕುವ ಕೆಲಸವನ್ನು ನಮ್ಮ ಲೇಖಕರು ಮಾಡಿದ್ದಾರೆ. ಪ್ರತಿಯೊಬ್ಬ ಕಥೆಗಾರನೂ ಅರಿವಿಗೆ ಬಂದಿರುವ ಸಂಗತಿಗಳ ಜೊತೆ ಸಾಮಾಜಿಕ ಸಮಸ್ಯೆಗಳನ್ನು ಸ್ಪಷ್ಟವಾಗಿ ತೆರೆದಿಡುವ ಪ್ರಾಮಾಣಿಕ ಪ್ರಯತ್ನವನ್ನಿಲ್ಲಿ ಮಾಡಿದ್ದಾರೆ. ಕನ್ನಡನಾಡು ಹಲವು ವಿಶೇಷಗಳುಳ್ಳ ಪ್ರಾದೇಶಿಕತೆಯಿಂದ ಕೂಡಿದೆ. ದಕ್ಷಿಣ ಕರ್ನಾಟಕದ ಸಮಸ್ಯೆಗಳಂತೆ ಉತ್ತರ ಕರ್ನಾಟಕದ ಸಾಮಾಜಿಕ, ಸಾಂಸ್ಕೃತಿಕ ಬದುಕಿಲ್ಲ. ಭಾಷೆ ಕೂಡ ಇದೇ ರೀತಿಯ ವಿಶಿಷ್ಟತೆಯಿಂದ ಕೂಡಿದೆ. ಇಂತಹ ಭಾಷೆಯ ಪ್ರಾದೇಶಿಕ ಸೊಗಡನ್ನು ತಮ್ಮ ಕಥನಗಳಲ್ಲಿ ಲೇಖಕರು ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ.

ಕೆರೂರು ವಾಸುದೇವಾಚಾರ್ಯರು ಆಧುನಿಕ ಕನ್ನಡ ಸಾಹಿತ್ಯದ ಅರುಣೋದಯದ ಪ್ರಮುಖ ಲೇಖಕರಾಗಿದ್ದಾರೆ. ಮರಾಠಿಮಯವಾಗಿದ್ದ ಉತ್ತರ ಕರ್ನಾಟಕದಲ್ಲಿ ಕನ್ನಡದ ದೀಪವನ್ನು ಹೊತ್ತಿಸಿ ಅದು ಪ್ರಜ್ವಲಿಸುವಂತೆ ಮಾಡಿದವರು ಕೆರೂರು ವಾಸುದೇವಾಚಾರ್ಯರು. ಕಾದಂಬರಿ, ನಾಟಕ, ಸಣ್ಣಕಥೆ, ಪತ್ರಿಕಾ ಸಂಪಾದನೆ ಹೀಗೆ ಬಹುಮುಖವಾದ ಸಾಹಿತ್ಯ ಕಾರ್ಯಗಳನ್ನು ಅವರು ಮಾಡಿದರು. ಹೊಸಗನ್ನಡ ಸಾಹಿತ್ಯದ ಇತಿಹಾಸದಲ್ಲಿ ಕೆರೂರು ವಾಸುದೇವಾಚಾರ್ಯರು 'ಪತಿವಶೀಕರಣ', ನಾಟಕ 'ಇಂದಿರೆ', ಕಾದಂಬರಿ 'ತೊಳೆದ ಮುತ್ತು', 'ಮಲ್ಲೇಶಿಯ ನಲ್ಲೆಯರು' ಮೊದಲಾದ ಸಣ್ಣಕಥೆಗಳು 'ಸಚಿತ್ರ ಭಾರತ', 'ಶುಭೋದಯ'

ಪತ್ರಿಕೆಗಳನ್ನು ಅಗತ್ಯವಾಗಿಯೇ ಅವಲೋಕಿಸಿ ನಾವು ಮುನ್ನಡೆಯಬೇಕಾಗುತ್ತದೆ. ಕೆರೂರು ವಾಸುದೇವಾಚಾರ್ಯರು ಹೊಸ ಸಾಹಿತ್ಯಕ್ಕೆ ಅಸ್ತಿಭಾರ ಹಾಕಿದ ಮಹನೀಯರಾಗಿದ್ದಾರೆ.

ಕೆರೂರು ವಾಸುದೇವಾಚಾರ್ಯರ ಸಾಹಿತ್ಯವು ಕನ್ನಡದಲ್ಲಿ ವಾಸ್ತವವಾದವನ್ನು ಕಥೆಗಳಲ್ಲಿ ತರುವ ಉತ್ಕೃಷ್ಟ ಪ್ರಯತ್ನಗಳಾಗಿವೆ. ಇದನ್ನು ಕನ್ನಡದ ಶ್ರೇಷ್ಠ ಕಥೆಗಾರರಾದ ಮಾಸ್ತಿಯವರೇ ಒಂದೆಡೆ ಹೀಗೆ ಹೇಳಿದ್ದಾರೆ. 'ಕನ್ನಡದ ಸಣ್ಣಕಥೆ ಮೊದಲಿನಿಂದಲೂ ವಾಸ್ತವತೆಯನ್ನು ಗುರಿಯಾಗಿಟ್ಟುಕೊಂಡೇ ಬೆಳೆದಿದೆ. ವಾಸ್ತವವಾಗಿ ಕಥೆಗಳಿಗೆ ಕೆರೂರರ ಕಥೆಗಳು ಒಳ್ಳೆಯ ಉದಾಹರಣೆಗಳಾಗಿವೆ. ಅವರ 'ಮಲ್ಲೇಶಿಯ ನಲ್ಲೆಯರು' ತೋಟದ ಕಾವಲು ಯಜಮಾನನಾಗಿದ್ದ ಮಲ್ಲೇಶಿ ಅವನ ದನಿಯರ ಹತ್ತಿರ ನಿಲ್ಲುವುದು, ನುಡಿಯುವುದು ಮೊದಲಾಗಿ ಅವನು ಮದುವೆಯ ವಿಷಯ ಪ್ರಕಟಿಸುವ ಅಭಿಪ್ರಾಯ ಅವರು ಮದುವೆಯಾಗಿ ಹೆಣ್ಣನ್ನು ಹುಡುಕುವ ಕ್ರಮ ಅವನಿಗೆ ಸಿಕ್ಕುವ ಜನ, ಅವರಾಡುವ ಮಾತು ಈ ಎಲ್ಲ ವಿವರದಲ್ಲಿ ಈ ಕಥೆ ತೀರಾ ಜೀವನದ ಒಂದು ಚಿತ್ರವಾಗುತ್ತದೆ. ಇರುವುದನ್ನು ಹೇಳುವುದೆಂದರೆ ಹೇಗೆ ಎಂದು ಕೇಳಿದರೆ ಹೀಗೆ ಎಂದು ಕಥೆಯ ಈ ಭಾಗವನ್ನು ನಿರ್ದೇಶಿಸಬಹುದು. ಹೀಗೆ ಕನ್ನಡ ಸಣ್ಣಕಥೆಗಳಲ್ಲಿ ವಾಸ್ತವವಾದವನ್ನು ಮಾಸ್ತಿಯವರು ಕೆರೂರು ವಾಸುದೇವಾಚಾರ್ಯರ ಕಥೆಗಳಲ್ಲೇ ಗುರುತಿಸಿ ವಿಶ್ಲೇಷಿಸಿರುವ ಬಗೆಯು ಗಮನಿಸುವ ಅಂಶವಾಗಿದೆ.

ದುಂ.ನಿ. ಬೆಳಗಲಿಯವರು ಉತ್ತರ ಕರ್ನಾಟಕದ ಸೃಜನಶೀಲ ಬರಹಗಾರರು. ಮಿರ್ಜಿ ಅಣ್ಣಾರಾಯ, ಸಿಂಪಿಲಿಂಗಣ್ಣ ಮುಂತಾದವರ ನಂತರದಲ್ಲಿ ಎದ್ದು ಕಾಣುವ ಹೆಸರು ಬನಹಟ್ಟಿಯ ದುಂ.ನಿ. ಬೆಳಗಲಿಯವರು. ಕ್ರಿಯಾಶೀಲ ಬರಹಗಾರರಾಗಿ, ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿದ ಕೊಡುಗೆ ವೈಶಿಷ್ಟ್ಯಪೂರ್ಣವೆನಿಸಿದೆ. ಶ್ರೀ ಬಸವರಾಜ ಕಟ್ಟಿಮನಿಯವರ ನಿಕಟ ಸಂಪರ್ಕದಿಂದ ಪ್ರಗತಿಶೀಲ ಸಾಹಿತ್ಯದಲ್ಲಿ ಆಸ್ಥೆ ವಹಿಸಿದ ಅವರು ತಮ್ಮ ಅನೇಕ ಕಥೆಗಳಲ್ಲಿ ಈ ಧೋರಣೆಯನ್ನು ಪ್ರಕಟಿಸಿದ್ದಾರೆ. ಬೆಳಗಲಿಯವರು ಮುಖ್ಯವಾಗಿ ಕಥೆಗಾರರು. 'ಸಣ್ಣಕಥೆಗಳೆಂದರೆ ನನಗೆ ಮೊದಲಿನಿಂದಲೂ ಅಚ್ಚುಮೆಚ್ಚು' ಎಂದು ಮುಳ್ಳುದಾರಿಯಲ್ಲಿ ಬಿರಿದಹೂಗಳು ಕೃತಿಯಲ್ಲಿ ಅವರೇ ಹೇಳಿಕೊಂಡಿದ್ದಾರೆ. ಪ್ರಾದೇಶಿಕ ಭಾಷೆಯ ಸೊಗಡು, ಸ್ಥಳೀಯ ಸಂಸ್ಕೃತಿಯ ಶೋಧ ಮತ್ತು ಚಲನಶೀಲ ಆಶಯಗಳಿಂದ ತಮ್ಮ ಸಾಹಿತ್ಯಾಭಿವ್ಯಕ್ತಿಯ ಮೌಲಿಕತೆಯನ್ನು ಹೆಚ್ಚಿಸಿಕೊಂಡಿದ್ದಾರೆ. ವೃತ್ತಿಯಿಂದ ಶಿಕ್ಷಕರಾಗಿ, ಪ್ರವೃತ್ತಿಯಿಂದ ಕಥೆಗಾರರಾಗಿದ್ದ ಇವರು ಬೆನ್ನ ಹಿಂದಿನ ಕಣ್ಣು (೧೯೫೭), 'ಸಿಟ್ಯಾಕೋ ರಾಯ ನನ ಮ್ಯಾಲ' (೧೯೬೯), 'ಮಾಸ್ತರನ ಹೆಂಡತಿ', 'ಗೌಡರ ಮಗಳು ಗೌರಿ', 'ಮುಳ್ಳುದಾರಿಯಲ್ಲಿ ಬಿದ್ದ ಹೂಗಳು', 'ಮುತ್ತಿನ ತೆನೆಗಳು', ಇನ್ನಷ್ಟು ಕಥೆಗಳು ಹಾಗೂ ಬೇಸಿಗೆಯ ಮೊದಲ ಮಳೆ ಎಂಬ ಒಟ್ಟು ಎಂಟು ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಇನ್ನೂ ಹಲವಾರು ಕಥೆಗಳು ಅಪ್ರಕಟಿತವಾಗಿಯೇ

ಉಳಿದಿವೆ. ಲೇಖಕರು ಅನುಭವದಿಂದ ಕಂಡುಕೊಂಡುದುದು ಅಸಮಾನತೆ, ಶೋಷಣೆ, ದೌರ್ಜನ್ಯಗಳ ಆಧಾರದಿಂದ ಕಟ್ಟಲ್ಪಡುವ ಬದುಕು ಅನಾರೋಗ್ಯಕರವಾದುದು ಅದು ಒಮ್ಮೆಗೆ ಛಿದ್ರಗೊಳ್ಳುತ್ತದೆ. ಯಾವುದೋ ಭ್ರಮೆಯಲ್ಲಿ ಕಟ್ಟಿಕೊಂಡ ಬದುಕು ಕುಸಿಯುತ್ತದೆ. ಒಂದು ನಿರ್ಣಾಯಕ ಹಂತದಲ್ಲಿ ಅದು ಒಡೆಯುತ್ತದೆ. ಅದಕ್ಕಾಗಿ ದುಃಖಿಸಬೇಕಿಲ್ಲ. ಜೀವನದ ಗತಿಯೇ ಹೀಗಿರುವಾಗ ಬದಲಾವಣೆಯನ್ನು ನಿಷ್ಠುರವಾಗಿ ಒಪ್ಪಿಕೊಂಡಾಗ ಹೊಸ ಬದುಕನ್ನು, ಹೊಸ ವ್ಯವಸ್ಥೆಯನ್ನು, ಹೊಸ ಮೌಲ್ಯಗಳನ್ನು ನಿರೀಕ್ಷಿಸುವವ ಮಾತ್ರ ಅವನತಿಯನ್ನು ಸಹನೆಯಿಂದ ಚಿತ್ರಿಸಬಲ್ಲ. ಬೆಳಗಲಿಯವರ ಬಹಳಷ್ಟು ಕಥೆಗಳಲ್ಲಿ ಏಕತಾನತೆ ಇದ್ದರೂ ಅವರು ಹೇಳಬೇಕಾದುದನ್ನು ಹೇಳುವಲ್ಲಿ ಹಿಂದೇಟು ಹಾಕಿಲ್ಲ. ಅನಿಸಿದ್ದೆಲ್ಲವನ್ನು ಕಥಾವಸ್ತುವಿನಲ್ಲಿ ಹಿಡಿದಿಡಲು ಮನದ ತುಡಿತವೇ ಸಾಕ್ಷಿ. ಮನಸ್ಸಿನಲ್ಲಿಟ್ಟುಕೊಂಡು ಹಳಹಳಿಸದೇ, ಹಪಹಪಿಸದೇ ಬಿಟ್ಟು ಮನದಿಂದ ಸೂಚಿಸುವಲ್ಲಿ ಕಥಾಮಾಧ್ಯಮ ಬೆಳಗಲಿಯವರಿಗೆ ಸಹಕರಿಸಿದೆ.

ಒಟ್ಟಾರೆ ಕಥಾಸಾಹಿತ್ಯ ಒಂದು ಶತಮಾನದಷ್ಟು ಕಾಲಾವಧಿಯನ್ನು ವ್ಯಾಪಿಸಿಕೊಂಡಿದ್ದರೂ ಅಂದುಕೊಂಡಷ್ಟು ಕಥೆಗಳ ಶ್ರೀಮಂತಿಕೆ ಬೆಳೆದುಬಂದಿಲ್ಲ. ಬಹುಶಃ ಬದುಕಿನ ಕಾಲಘಟ್ಟಗಳ ಸ್ಥಿತ್ಯಂತರಗಳು ಜೀವನದೃಷ್ಟಿ ಹೊಸತನಕ್ಕೆ ತುಡಿಯುವ ಹಂಬಲ ಇಲ್ಲದಿರುವುದು ಕಂಡುಬರುತ್ತದೆ. ಆದರೆ ಮೊದಲ ತಲೆಮಾರಿನ ಕಥೆಗಾರರು ಕೆರೂರು ವಾಸುದೇವಾಚಾರ್ಯರು, ರಾವಬಹುದ್ದೂರ, ಸತ್ಯಕಾಮ, ದು.ನಿಂ. ಬೆಳಗಲಿಯಂತಹ ಲೇಖಕರು ಕಥೆಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ.

ಬಿ. ವೆಂಕಟಾಚಾರ್ಯರು ತಮ್ಮ 'ಅವಕಾಶ ಶೋಷಿಣಿ' ಪತ್ರಿಕೆಯಲ್ಲಿ ಬಂಗಾಳಿಯಿಂದ 'ಚಿಕ್ಕಕಥೆಗಳು' ಶೀರ್ಷಿಕೆಯಲ್ಲಿ ಕಥೆಗಳನ್ನು ಅನುವಾದಿಸಿ ಪ್ರಕಟಿಸುತ್ತಿದ್ದರು. ಪಂಜೆ, ಕೆರೂರು ಇಂಗ್ಲಿಷ್ ಕಥೆಗಳಿಂದ ಪ್ರಭಾವಿತರಾಗಿದ್ದರೆಂದು ಹೇಳಲಾಗುತ್ತದೆ. "ಆ ಕಾಲದಲ್ಲಿ ಕೆಲವರು ಕಾನನ್ ಡಾಯಲ್, ಅಮೇರಿಕೆಯ ಎಡ್ಗರ್ ಅಲೆನ್‌ಪೋ ಕಥೆಗಳನ್ನು ಹೋಲುವ ರೂಪಾಂತರಗಳನ್ನು ಮಾಡಿದ್ದು ತಿಳಿದುಬರುತ್ತದೆ. ಸ್ವತಃ ಕೆರೂರರೇ ಷರ್ಲಾಕ್ ಹೋಮ್ಸ್‌ನ ಪತ್ತೇದಾರಿ ಕಥೆಗಳನ್ನು ಕನ್ನಡ ಜಾಯಮಾನಕ್ಕೆ ಅನುಗುಣವಾಗುವಂತೆ 'ಸರಳಾಕ್ಷರ ಹುಲಿಮೀಸೆ' ಎಂಬ ಹೆಸರಿನಲ್ಲಿ ರೂಪಾಂತರಿಸಿ ಪ್ರಕಟಗೊಳಿಸಿದ್ದಾರೆ".[೪] ಎಸ್.ಜಿ. ನರಸಿಂಹಾಚಾರ್ಯ, ಧೋಂಡೋ ನರಸಿಂಹಮೂರ್ತಿಬಾಗಲ, ಚುರಮುರಿ ಶೇಷಗಿರಿರಾಯರು, ಬಸವಪ್ಪ ಶಾಸ್ತ್ರಿಗಳು ಮುಂತಾದವರನ್ನು ಹೆಸರಿಸಬಹುದು. "ಕಳೆದ ಶತಮಾನದ ಕನ್ನಡ ಸಾಹಿತ್ಯವು ಒಟ್ಟಿನಲ್ಲಿ ಅನುವಾದ, ಅನುಕರಣೆಗಳಿಂದ ಕೂಡಿದ್ದೆಂಬುದು ನಿರ್ವಿವಾದ. ಈ ಮಾತು ಭಾರತದ ಇತರ

---

೪. ಶ್ರೀಕಂಠ ಕೂಡಿಗೆ, 'ಧ್ಯಾನ', ೧೯೯೬, ಪುಟ. ೯೨.

ಭಾಷಾ ಸಾಹಿತ್ಯಗಳಿಗೂ ಅನ್ವಯಿಸುತ್ತದೆ. ಸಾಹಿತ್ಯ ಬೆಳವಣಿಗೆಯ ಆರಂಭದಲ್ಲಿ ಸ್ವತಂತ್ರ ಮತ್ತು ಮೌಲಿಕ ವಿಚಾರಗಳ ಅಭಿವ್ಯಕ್ತಿಯು ಕಂಡುಬರದಿದ್ದರೆ ಅದು ಸಹಜವೇ. ಹಾಗಿದ್ದರೂ ಅನುವಾದ, ಅನುಕರಣ ಕೃತಿಗಳಲ್ಲಿ ಹೊಸ ವಿಚಾರಗಳನ್ನು ಹಾಗೂ ಹೊಸ ದೃಷ್ಟಿಯನ್ನು ತೋರಿದ ಪ್ರಗತಿಪರ ಲೇಖಕರ ಕೃತಿಗಳನ್ನು ಈಗಾಗಲೇ ಎತ್ತಿ ತೋರಿಸಲಾಗಿದೆ. ಹೀಗೆ ಅನುವಾದ ಅನುಕರಣ ಕೃತಿಗಳೂ ಸಹ, ಆ ಕಾಲದ ಸ್ವತಂತ್ರ ಕೃತಿಗಳ ಜೊತೆಗೆ, ಹೊಸಗನ್ನಡ ಸಾಹಿತ್ಯ ವರ್ಧನಕ್ಕೆ ಪುಷ್ಟಿ ನೀಡಿದುವೆಂದು ಹೇಳಬೇಕು."[೫] ಈ ನವೋದಯದ ಪೂರ್ವ ಘಟ್ಟದಲ್ಲಿಯೇ ಆಧುನಿಕ ಕಾವ್ಯ, ಸಣ್ಣಕಥೆ ಮತ್ತು ಕಾದಂಬರಿಗಳು ಕನ್ನಡದಲ್ಲಿ ಅಂಕುರವಾದವು. ಕನ್ನಡದ ಕಾದಂಬರಿಯಲ್ಲಿ ಆಧುನಿಕ ಎನ್ನಬಹುದಾದ ಸೃಜನಾತ್ಮಕ ಕ್ರಿಯೆಗಳನ್ನು ನಾವು ಗುಲ್ವಾಡಿ ವೆಂಕಟಾಯರ ಇಂದಿರಾ (೧೮೯೯), ಎಂ.ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೊ ಮಹಾರಾಯ (೧೯೧೬), ವೆಂಕಟರಮಣ ಕರ್ಕಿಯವರ ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ (೧೮೮೫), ಬಾಬುರಾಯರ ವಾಗ್ದೇವಿ (೧೯೦೫) ಮುಂತಾದ ಕೃತಿಗಳಲ್ಲಿ ಗುರುತಿಸಬಹುದಾಗಿದೆ.

ವಿಮರ್ಶಕ ಕೆ.ವಿ. ನಾರಾಯಣರು ಗ್ರಹಿಕೆಯಂತೆ "ವಸಾಹತುಶಾಹಿ ಅನುಭವಗಳ ಮೂಲಕ ಒದಗಿದ ದಿಗ್ಭ್ರಮೆಯಲ್ಲಿ ನಾಡಿನ ಪ್ರಜ್ಞೆ, ನಂಬಿಕೆ ಮತ್ತು ಆಚರಣೆಗಳ ನಡುವಣ ಸಹಬಾಳ್ವೆಗೆ ಕೇಂದ್ರ ಆಘಾತವನ್ನು ಅರಗಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಇದರಿಂದ ಬಿಡುಗಡೆ ಪಡೆಯಲು ಹಲವು ಮಾದರಿಗಳನ್ನು ಹುಡುಕಲಾಯಿತು. ಮಾಸ್ತಿಯವರ ಸಾಹಿತ್ಯ ಅಂತಹ ಮಾದರಿ ಮಂಡಿಸುತ್ತದೆ"[೬] ಎಂಬ ಮಾತುಗಳು ಹೆಚ್ಚು ಅರ್ಥಪೂರ್ಣ. ಮಾಸ್ತಿ ಕಥೆಗಳಲ್ಲಿನ ಐತಿಹಾಸಿಕ, ಪೌರಾಣಿಕ ಕಥಾ ವೈವಿಧ್ಯತೆಗಳು ಕಳೆದುಹೋದ ಭಾರತೀಯ ಪರಂಪರೆಯ ಗತಕಾಲದ ವೈಭವಗಳಲ್ಲಿ ನಾಡು, ನುಡಿ, ಧರ್ಮ, ಸಂಸ್ಕೃತಿ, ಇತಿಹಾಸ, ಪುರಾಣ ಮುಂತಾದವುಗಳನ್ನು ಪುನರ್‌ದಾಖಲಿಸುತ್ತಾ ಅವುಗಳ ಅರಿವು ಮತ್ತು ಪ್ರಜ್ಞೆಯನ್ನು ಪರೋಕ್ಷವಾಗಿ ಕಟ್ಟುತ್ತಾ ಹೋಗುವ ವೈವಿಧ್ಯತೆ ಕಂಡುಬಂದರೆ ಅವರ ಸಾಮಾಜಿಕ ಕಥೆಗಳ ವೈವಿಧ್ಯ ಭಾರತೀಯ ಸಮಕಾಲೀನ ಸಮಾಜದಲ್ಲಿ ಬದುಕನ್ನು ವಿಕೃತಗೊಳಿಸಿಕೊಳ್ಳದೇ ಸಾರ್ಥಕತೆ ಕಂಡುಕೊಳ್ಳುವುದಾಗಿದೆ. ಇದಕ್ಕೆ ಪೂರಕವಾಗಿ ಅನ್ಯದೇಶೀಯ ಕಥೆಗಳ ವೈವಿಧ್ಯತೆಗಳನ್ನು ಸೇರಿಸಿಕೊಳ್ಳಬಹುದು. ಬದುಕಿನ ಸಾರ್ಥಕತೆಗೆ ದಯೆ, ಕರುಣೆ, ಪ್ರೀತಿ, ವಿಶ್ವಾಸ, ಮಾನವೀಯತೆ, ತ್ಯಾಗ, ಬಲಿದಾನ ಮುಂತಾದ ಮಾನವನ ಸದ್ಗುಣಗಳ ಮಾರ್ಗದರ್ಶನ ಬೇಕೆಂಬುದಾಗಿದೆ. ಇವರ ಕಥೆಗಳಲ್ಲಿ ಪೂರ್ವ ಪೀಠಿಕೆಯೊಂದು ಇದ್ದೇ ಇರುತ್ತದೆ. ಅದು ಮಾಸ್ತಿಯವರ ಮೊದಲನೆಯ ಓದು, ಅನಂತರವೇ ಕಥೆಯ ಒಳವಿವರಗಳನ್ನು ಕಟ್ಟಿಕೊಡುತ್ತಾ ಭಾರತೀಯ

---

೫. ಶ್ರೀನಿವಾಸ ಹಾವನೂರ, 'ಹೊಸಗನ್ನಡದ ಅರುಣೋದಯ', ೨೦೦೦, ಪುಟ. ೫೧೦.
೬. ಕೆ.ವಿ.ನಾರಾಯಣ, 'ಬೇರುಕಾಂಡ ಚಿಗುರು', ೧೯೯೮, ಪುಟ. ೧೬.

ಸಂಸ್ಕೃತಿಯ ಬದುಕಿನ ಬಗ್ಗೆ ಅದಮ್ಯವಾದ ಪ್ರೀತಿಯನ್ನು ಹುಟ್ಟಿಸುತ್ತಾ ಹೋಗುತ್ತಾರೆ. ಈ ರೀತಿಯ ಧಾಟಿಗಳನ್ನು ಮಾಸ್ತಿಯವರು ಭಾರತೀಯ ಪರಂಪರೆಯ ಜನಪದಕಥೆಗಳಿಂದ ಹಾಗೂ ಪುರಾಣಕಥೆಗಳಿಂದ ಕಸಿ ಮಾಡಿಕೊಂಡಿದ್ದಾರೆ. ಇದನ್ನು ಮಾಸ್ತಿಯವರು ಉದ್ದೇಶಪೂರ್ವಕ-ವಾಗಿಯೇ ಸೃಷ್ಟಿಸಿಕೊಂಡದ್ದು. ಇಂತಹ ಕಥೆಗಳನ್ನು ಹೇಳುವಾಗ ಓದುಗರ ಕುತೂಹಲವನ್ನು ಕೆರಳಿಸುತ್ತಾ ಅವರ ಗಮನ ಬೇರೆಯ ಕಡೆಗೆ ವಿಚಲಿತವಾಗದಂತೆ ಪ್ರಜ್ಞಾಪೂರ್ವಕವಾಗಿ ನಾಟಿಸುವುದಕ್ಕೆ ಮಾಡಿಕೊಂಡದ್ದು ವರ್ತಮಾನದಲ್ಲಿ ನಿಂತು ಭೂತವನ್ನು ಕಟ್ಟುತ್ತಾ ಅದಕ್ಕೊಂದು ಭವಿಷ್ಯದ ಕಾಲಾತೀತ ಸಂಸ್ಕಾರವನ್ನು ತೆರೆದಿಡುತ್ತಾರೆ. ಇವೆಲ್ಲಾ ಕಥಾಗಾರ ಮಾಸ್ತಿಯವರ ನಿರೂಪಣಾ ತಂತ್ರ ವೈವಿಧ್ಯತೆಗಳು.

ಮುಖ್ಯವಾಗಿ ಮಾಸ್ತಿ ಕಥೆಗಳು ಭಾರತೀಯ ಬದುಕಿನ ಹಿಂದಿರುವ ಸ್ಥಾಯಿಕೇಂದ್ರ ಧಾರ್ಮಿಕ ಶ್ರದ್ಧೆ. ಅದು ಯಾರಿಗೂ ಕೆಡುಕನ್ನುಂಟುಮಾಡುವುದಿಲ್ಲ. ಮಾನವನ ಮನಸ್ಸು ಕಾಲಮಾನಕ್ಕೆ ತಕ್ಕಂತೆ ಸಾಹಿತ್ಯಕ ಪರಿವರ್ತನೆ ಹೊಂದುತ್ತಾ ಬದುಕಿಗೊಂದು ಅರ್ಥ ಮತ್ತು ಧಾರ್ಮಿಕತೆಯಲ್ಲಿ ಅಪಾರ ಜೀವನ ಶ್ರದ್ಧೆ ಇದೆ. ಮಾನವನ ಮೇಲಿರುವ ಗುರುತರ ಜವಾಬ್ದಾರಿಯ ಅರಿವಿದೆ. "ಬದುಕನ್ನು ಶುಚಿ ಮಾಡಿ ಸಾರ್ಥಕಪಡಿಸುವ ಮಾರ್ಗಾನ್ವೇಷಣೆ ಇದೆ. ಮೇಲ್ನೋಟಕ್ಕೆ ಸಂಪ್ರದಾಯಶರಣರಂತೆ ಕಾಣಿಸುತ್ತಿದ್ದ ಮಾಸ್ತಿ ಆಳದಲ್ಲಿ ಅಪಾರ ಮಾನವೀಯ ಅಂತಃಕರಣ ತುಳುಕಿಸಿದರು – ಘಟನೆಗಳ ಬಗೆಗೆ ಅಷ್ಟಾಗಿ ಗಮನಕೊಡದ ಅವರು ನಿಜಕ್ಕೂ ಆಸಕ್ತಿ ತಾಳಿದ್ದು ಮನುಷ್ಯ ಸ್ವಭಾವದಲ್ಲಿ. ಅಂದರೆ ಒಂದು ಪಾತ್ರ ತೆರೆದಿಡುವ ಪ್ರಾಮಾಣಿಕ ಅನುಭವದಲ್ಲಿ ಅಥವಾ ಒಂದು ಪಾತ್ರ ಕ್ರಮೇಣ ಸಹಜವಾಗಿ ಹೊಂದುವ ಬೆಳವಣಿಗೆಯಲ್ಲಿ. ಸಾಂಪ್ರದಾಯಿಕ ಮೌಲ್ಯಗಳನ್ನೊಪ್ಪಿಕೊಂಡ ಅವರ ಮನಸ್ಸು ಎಲ್ಲರಿಗೂ ಒಳಿತನ್ನು ಬಯಸುವ ಪ್ರಜ್ಞಾಪೂರ್ವಕ ಧೋರಣೆಯನ್ನು ಅಪ್ಪಿಕೊಂಡಿತು."[೭] ಬಹುಶಃ ಮಾಸ್ತಿ ಈ ಧೀಮಂತತನವನ್ನು ಭಾರತೀಯ ಧಾರ್ಮಿಕ ಸುಧಾರಣಾವಾದಿಗಳ ಸಂಸ್ಕಾರದಿಂದ ದಕ್ಕಿಸಿಕೊಂಡದ್ದಾಗಿದೆ. ಅದಕ್ಕಿಂತ ಹೆಚ್ಚಾಗಿ ಮಾಸ್ತಿಯವರ ಜೀವನಾನುಭವದಲ್ಲಿನ ಬಾಲ್ಯದ ಪರಿಸರ, ಬಡತನ, ನೋವು, ನಲಿವು ಹಾಗೂ ಆಡಳಿತಾನುಭವದ ಸಂಚಾರದಲ್ಲಿ ಕಂಡ ಭಾರತೀಯ ವಿವಿಧ ಸ್ತರದ ಜನಗಳ ಕಷ್ಟ, ಕಾರ್ಪಣ್ಯ, ರೀತಿನೀತಿಗಳು ಮುಂತಾದವುಗಳು ಪರಿಚಯ ಮಾಸ್ತಿಯವರ ಮಾನವೀಯ ಅಂತಃಕರಣವನ್ನು ಕಟ್ಟಿರಬಹುದು. ಆದ್ದರಿಂದಲೇ ಅವರ ಕಥೆಗಳಲ್ಲಿ ಕಂಡುಬರುವ ಭಾರತೀಯ ಸಂಸ್ಕೃತಿ, ಪರಂಪರೆ, ಬದುಕು, ಜೀವನ, ಪ್ರೀತಿ ಅಪಾರವಾಗಿ ಕಾಣಿಸಿಕೊಂಡಿದೆ.

ಮಾಸ್ತಿಯೊಳಗಿನ ಸನಾತನ ಮನಸ್ಸು ಹಿಂದೂ ಧರ್ಮಪರಂಪರೆಯಲ್ಲಿ ಎಲ್ಲವೂ ಸರಿಯಾಗಿಯೇ ಇದೆ ಎಂಬ ನಂಬಿಕೆಯಲ್ಲಿ ನಿಲ್ಲುತ್ತದೆ. ಅದಕ್ಕೆ ಪೂರಕ ಸಮರ್ಥನೆ ಎಂಬಂತೆ

---

೭. ಮಾವಿನಕೆರೆ ರಂಗನಾಥನ್, 'ಮಾಸ್ತಿ ಅವರ ಸಮಗ್ರ ಕಥೆಗಳು–೨', ಮುನ್ನುಡಿ, ೧೯೯೭, ಪುಟ. xv.

ಒಡ್ಡರ ಜನಾಂಗವು ತಮ್ಮದೇ ಆದ ತಿಳುವಳಿಕೆಯಲ್ಲಿ ನಂಬಿಕೊಂಡಿರುವ ರಾಮದೇವರಲ್ಲಿ ಭಕ್ತಿ, ನಂಬಿಕೆಗಳ ಕಡೆ ನಮ್ಮನ್ನು ಕರೆದೊಯ್ಯುತ್ತಾರೆ. ಆ ಗುಡ್ಡದ ನಡುನೆತ್ತಿಯಾದ ಇಡೀ ಊರನ್ನು, ಜನಜೀವನವನ್ನು, ಪ್ರಕೃತಿಯ ರಮಣೀಯ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಾರೆ. ಅದರ ಸೌಂದರ್ಯ ಮೀಮಾಂಸೆಯಲ್ಲಿ ತೊಡಗಿ ಎಲ್ಲರ ಸಾಮರಸ್ಯ ಸಂಕೇತವೆನ್ನುವಂತೆ ಮೆಚ್ಚುತ್ತಾರೆ. ಇವರ ಸಾಂಸ್ಕೃತಿಕ ವಿವರದಲ್ಲಿ ಹಿಂದೂ ಜನಸಮುದಾಯಕ್ಕೆ ಅರಿವನ್ನುಂಟುಮಾಡುವ ಕಲೆ ಇದೆ. ಆದರೆ ಅದರಾಚೆಗೆ ಇರಬೇಕಾದ ವೈಚಾರಿಕತೆ ಪ್ರಗತಿಪರತೆ ಅಂಶಗಳು ಸಿಗುವುದಿಲ್ಲ. ಹಿಂದೂ ದೇವಾಲಯದ ಸಂಸ್ಕೃತಿಯನ್ನು ಮೆಚ್ಚುವ ಮಾಸ್ತಿ ಮನಸ್ಸು ಯಾವಾಗಲೂ ಹಿಂದೂಗಳನ್ನು ಪ್ರಶಂಸಿಸುತ್ತದೆ. ಒಂದು ಸಾರಿ ಹಿಂದೂ ದೇವಾಲಯ ಪರಂಪರೆ ಮೆಚ್ಚಿ ಸಮರ್ಥಿಸುವ ಮಾಸ್ತಿ ಇನ್ನೊಂದು ಸಾರಿ ದೇವಾಲಯ ಸ್ಥಾಪನೆಯ ಸೃಷ್ಟಿಯನ್ನು ಕುರಿತ ಅವರ ಅಜ್ಞಾನವನ್ನು ತೆಗಳುತ್ತಾರೆ. ಬೋಯಿಗಳಿಬ್ಬರು ಇಂದು ಅಪರಾಧಿಗಳಾಗಿ ಆಧುನಿಕತೆಯ ಕೋರ್ಟು ಕಛೇರಿಗಳಿಗೆ ಬಂದುದರ ಬಗೆಗೆ ಕಥೆಗಾರನಿಗೆ ಬೇಸರವಿದೆ. ಆದರೆ ಆ ಜನರ ಹೀನಾಯ ಬದುಕು ಕತ್ತಲಲ್ಲಿ ಕರಗಿಹೋಗುತ್ತಿದ್ದುದರ ಬಗ್ಗೆ ಬೇಸರವಿಲ್ಲ.

ಈ ಮಧ್ಯೆ ಹಿಂದೂಧರ್ಮ ತತ್ವ, ಸಿದ್ಧಾಂತಗಳ ಬಗ್ಗೆ ಅಪಸ್ವರ ಎತ್ತುವ ಜನರನ್ನು ಮಾಸ್ತಿಯವರ ಸನಾತನ ಮನಸ್ಸು ಒಪ್ಪುವುದಿಲ್ಲ. ನಮ್ಮನ್ನು ಕಾಪಾಡುವ ಧರ್ಮವು ಸರಿಯಾಗಿದೆ. ಅದನ್ನು ನಾವು ಅರ್ಥಮಾಡಿಕೊಳ್ಳುವುದರಲ್ಲಿ ವಿಫಲರಾಗಿದ್ದೇವೆ ಎಂಬುದನ್ನು ಪ್ರತಿಪಾದಿಸುತ್ತಾರೆ.

ಕೊರಡ್ಕಲ್ ಶ್ರೀನಿವಾಸರಾವ್ ನವೋದಯ ಕನ್ನಡ ಸಣ್ಣಕಥೆಗಾರರಲ್ಲಿ ಹೆಚ್ಚು ಜನಪ್ರಿಯತೆ ಪಡೆಯುವ ಒಳ್ಳೆ ಕಥೆಗಾರರು. ಮಾಸ್ತಿ ಸಮಕಾಲೀನರಾದ ಇವರು ಕೆಲವು ಪತ್ರಿಕೆಗಳಲ್ಲಿ ಕಥೆಗಳನ್ನು ಬರೆದು ದಕ್ಷಿಣ ಕನ್ನಡ ಜಿಲ್ಲೆಯ ಕಥೆಗಾರರಾಗಿ ಪರಿಚಿತರಾಗಿದ್ದವರು. ಆದರೆ ಇವರ ಮೊದಲ ಕಥೆ ಯಾವುದು, ಯಾವಾಗಿನಿಂದ ಕಥೆ ಬರೆಯತೊಡಗಿದ್ದರು ಇತ್ಯಾದಿ ಮಾಹಿತಿಗಳು ಖಚಿತವಾಗಿ ನಮಗೆ ತಿಳಿದುಬರುವುದಿಲ್ಲ. ಸುಮಾರು ಮೂರು, ನಾಲ್ಕನೇ ದಶಕಗಳಲ್ಲಿ ಇವರ ಎರಡು ಕಥಾಸಂಕಲನಗಳು ಮಾತ್ರ ಹೊರಬಂದಿವೆ. ಭಾರತೀಯ ಸಾಮಾಜಿಕ ಬದುಕಿನ ಬಗ್ಗೆ ವಿಶೇಷ ಆಸಕ್ತಿ ಇರುವ ಕೊರಡ್ಕಲ್‌ರವರು ಅಂತಹ ವಸ್ತುಗಳನ್ನೇ ಆಯ್ಕೆ ಮಾಡಿಕೊಂಡು ಅನೇಕ ಕಥೆಗಳನ್ನು ರಚಿಸಿದ್ದಾರೆ. ಅವುಗಳ ನಿರ್ವಹಣೆಯಲ್ಲಿ ಮಾತ್ರ ನವೋದಯ ಕಥೆಗಳ ಯಥಾಸ್ಥಿತಿವಾದವನ್ನು ದಾಟಿದ ನಡಿಗೆಯೊಂದನ್ನು ಕಾಣುತ್ತೇವೆ. ಸಾಮಾನ್ಯವಾಗಿ ನವೋದಯ ಕಥೆಗಳಲ್ಲಿ ಪ್ರಗತಿಪರ, ಪ್ರತಿಭಟನೆ, ವರ್ಗಪ್ರಜ್ಞೆ, ಸಾಮಾಜಿಕ ನ್ಯಾಯ ಮುಂತಾದುವುಗಳು ದಟ್ಟವಾಗಿ ಕಾಣಲಾಗುವುದಿಲ್ಲ. ಇವುಗಳ ಘಾಟು ವಾಸನೆಗಳೇನಿದ್ದರೂ ಮುಂದಿನ ಪ್ರಗತಿಶೀಲರಲ್ಲಿ ಕಾಣಿಸಿಕೊಳ್ಳುತ್ತವೆ. ಆದರೆ ಅದಕ್ಕಿಂತ ಮುಂಚಿತವಾಗಿಯೇ ಕೊರಡ್ಕಲ್‌ರ ಕೆಲವು ಕಥೆಗಳಲ್ಲಿ ಆ ವಾಸನೆ ಕಾಣಿಸಿಕೊಂಡಿರುವುದು ವಿಶೇಷವಾಗಿದೆ. "ಇವರೆಲ್ಲರಿಗಿಂತ ವಿಭಿನ್ನ ವಸ್ತು ಶೈಲಿಯಲ್ಲಿ

ಕಥೆ ಬರೆದ ಕೊರಡ್ಕಲ್ ಮಾಸ್ತಿಯವರ ಸಮಕಾಲೀನರಾದರೂ ದುರ್ಬಲ ವರ್ಗದ ಬದುಕನ್ನು ತಮ್ಮ ಕಥೆಗಳಿಗೆ ಹಿನ್ನೆಲೆಯಾಗಿ ಸ್ವೀಕರಿಸಿರುವುದು ಗಮನಾರ್ಹ. ಆದರ್ಶದ ಅನುಕಂಪಗಳ ಸ್ಪರ್ಶವಿಲ್ಲದೆ ವಾಸ್ತವ ಮಾರ್ಗದಲ್ಲಿ ರೂಪುಗೊಂಡ ಇವರ ಹಲವು ಕಥೆಗಳು ಪ್ರಗತಿಶೀಲದೃಷ್ಟಿ ಧೋರಣೆಯನ್ನು ಉಳ್ಳವಾಗಿವೆ."[೮]

ನವೋದಯ ಕನ್ನಡ ಸಣ್ಣಕಥೆಗಾರರಲ್ಲಿ ಕುವೆಂಪು ಮೊದಲ ಶೂದ್ರವರ್ಗದ ಕಥೆಗಾರರು. ಅವರನ್ನು ಹೊರತುಪಡಿಸಿದರೆ, ಬಹುಶಃ ಮಿಕ್ಕ ಕಥೆಗಾರರೆಲ್ಲ ಬ್ರಾಹ್ಮಣ ವರ್ಗದವರೇ ಆಗಿದ್ದಾರೆ. ಅಕ್ಷರ ಸಂಸ್ಕೃತಿಯ ಶ್ರೇಣಿಯಲ್ಲಿ ಕಾಣಿಸಿಕೊಳ್ಳುವ ಬ್ರಾಹ್ಮಣ ವರ್ಗದವರು ಸಹಜವಾಗಿಯೇ ಬ್ರಿಟಿಷ್ ಸಾಮ್ರಾಜ್ಯಶಾಹಿ ಆಧುನಿಕತೆಯ ಎಲ್ಲಾ ಸೌಲಭ್ಯ ಸೌಕರ್ಯಗಳನ್ನು ಸ್ವೀಕರಿಸಿಕೊಂಡ ಮೊದಲ ವಿದ್ಯಾವಂತ ವರ್ಗವಾಗಿ ಕಾಣಿಸಿಕೊಳ್ಳುತ್ತಾರೆ. ಹಾಗಾಗಿ ಕಥಾಪ್ರಕಾರದಲ್ಲೂ ತಮ್ಮದೇ ಆದ ಅನುಭವಗಳನ್ನು ಕಟ್ಟಿಕೊಟ್ಟ ಮೊದಲ ಕಥೆಗಾರರಾಗಿ ಕಂಡುಬರುತ್ತಾರೆ. ಈ ಮಾತುಗಳನ್ನು ನವೋದಯದ ಎಲ್ಲಾ ಸಾಹಿತ್ಯ ಪ್ರಕಾರಗಳಿಗೂ ಅನ್ವಯಿಸಿ ಹೇಳಬಹುದಾಗಿದೆ. ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದ ಶೂದ್ರ-ಅತಿಶೂದ್ರವರ್ಗ ಬ್ರಿಟಿಷರ ಆಡಳಿತದ ಪರಿಣಾಮದಿಂದಾಗಿ ನಿಧಾನವಾಗಿಯಾದರೂ ಆಧುನಿಕ ಶಿಕ್ಷಣ ಸಂಸ್ಕೃತಿಯ ಸೌಲಭ್ಯ ಪಡೆದರು. ಇಂತಹ ಅವಕಾಶಗಳಲ್ಲಿ ಕುವೆಂಪು ಅವರನ್ನು ಬಿಟ್ಟರೆ "ಬ್ರಾಹ್ಮಣೇತರ ವರ್ಗಗಳಿಂದ ಬಂದ ಒಬ್ಬ ಲೇಖಕನು ಇಲ್ಲಿ ಇಲ್ಲ..... ಮಧ್ಯಮವರ್ಗದ ಬ್ರಾಹ್ಮಣ ಸಮಾಜಕ್ಕೆ ಸಂಬಂಧಿಸಿದ ವಸ್ತುಗಳೇ ಪ್ರಧಾನವಾಗಿದೆ."[೯] ದಲಿತ ವರ್ಗಕ್ಕೆ ಸಂಬಂಧಿಸಿದ ಕಥೆಗಾರರನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ.

ಹಿಂದೂಧರ್ಮದ ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ನಲುಗಿದ ಕುವೆಂಪು ತಮ್ಮ ಕೃತಿಗಳಲ್ಲಿ ಕಟುವಿಮರ್ಶೆಗೆ ಗುರಿಮಾಡಿರುವ ಅಭಿವ್ಯಕ್ತಿ ಸ್ವರೂಪವನ್ನು ತೆರೆದಿಡುತ್ತಾರೆ. ಇಲ್ಲೆಲ್ಲ ಕುವೆಂಪು ಅವರ ಉದಾರವಾದಿ ಮಾನವತಾವಾದದ ನಿಲುವುಗಳು ಕಂಡುಬರುತ್ತವೆ. ಅವುಗಳನ್ನು ಅವರು ತಮ್ಮ ಮೇಲೆ ಪ್ರಭಾವ ಬೀರಿದ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಅರವಿಂದ, ರವೀಂದ್ರರ ವ್ಯಕ್ತಿತ್ವಗಳಿಂದ ಪಡೆದುಕೊಂಡಿದ್ದಾಗಿದೆ. 'ಬ್ರಾಹ್ಮಣೇತರ ಚಳುವಳಿ'ಯ ದಟ್ಟವಾದ ಪ್ರಭಾವಕ್ಕೆ ಒಳಗಾಗಿರುವ ಸಾಧ್ಯತೆಯನ್ನು ಕಂಡುಕೊಳ್ಳಬಹುದಾಗಿದೆ. ಈ ಹಿನ್ನೆಲೆಯಲ್ಲಿ ಕುವೆಂಪು ಕಥೆಗಳಲ್ಲಿ ಕಂಡುಬರುವ 'ಸಾಲದ ಮಗು' ಮತ್ತು 'ಯಾರೂ ಅರಿಯದ ವೀರ' ಕಥೆಗಳಲ್ಲಿ ತಮ್ಮ ಶೂದ್ರವರ್ಗದ ಯಜಮಾನ ಸಂಸ್ಕೃತಿಯಿಂದ ದಲಿತ ವರ್ಗಗಳನ್ನು ತುಳಿಯಲ್ಪಟ್ಟ ಶೋಷಣೆ, ದಬ್ಬಾಳಿಕೆ, ದೌರ್ಜನ್ಯಗಳನ್ನು ಅನಾವರಣಗೊಳಿಸಿದ್ದಾರೆ. ದಲಿತ ವರ್ಗದ ಬಗ್ಗೆ ಇರುವ ಸಹಾನುಭೂತಿ, ಕರುಣೆ, ಮಾನವೀಯತೆಗಳನ್ನು ಅಭಿವ್ಯಕ್ತಗೊಳಿಸಿದ್ದಾರೆ. ದಲಿತರ

---

೮. ಶ್ರೀಕಂಠ ಕೂಡಿಗೆ, 'ಧ್ಯಾನ', ೧೯೯೬, ಪುಟ. ೭೭.
೯. ಗಿರಡ್ಡಿ ಗೋವಿಂದರಾಜು, 'ಕನ್ನಡ ಕಥಾ ಸಂಕಲನ', ೧೯೮೦, ಪುಟ. ೧೦.

ಬದುಕಿನ ಬಲೆಯಲ್ಲಿ ಬ್ರಾಹ್ಮಣರು ಶೂದ್ರರನ್ನು, ದಲಿತರನ್ನು ಶೋಷಣೆ ಮಾಡುವ ಪರಿ ಒಂದು ರೀತಿಯಾದರೆ, ಶೂದ್ರ ವರ್ಗದವರೇ ದಲಿತರನ್ನು ಶೋಷಣೆ ಮಾಡುವ ಪರಿ ಇನ್ನೊಂದು ರೀತಿಯದಾಗಿರುತ್ತದೆ. ಅದರಲ್ಲಿ ಗೇಣೀದಾರರಾದ ದಲಿತರು ಸಾಗುವಳಿ ಮಾಡುತ್ತಾ ಬೆವರು ಸುರಿಸಿ, ಅದರಿಂದ ಬಂದ ಪ್ರತಿಫಲದ ನಾಲ್ಕನೇ ಮೂರು ಪಾಲನ್ನು ಒಡೆಯನಿಗೆ ಅರ್ಪಿಸಿ ಮಿಕ್ಕ ಪಾಲಿನಲ್ಲಿ ಬದುಕು ಸಾಗಿಸುವ ಜೀತಗಾರರಾಗಿ ಮಾರ್ಪಡುವ ದಲಿತರ ಬದುಕಿನ ಬವಣೆ ದುರಂತಮಯವಾದುದು.

ಆಧುನಿಕ ಕನ್ನಡ ಸಣ್ಣಕಥೆಗಾರರಲ್ಲಿ ಆನಂದಕಂದರು ಒಬ್ಬರು. ಉತ್ತರ ಕರ್ನಾಟಕದ ಪ್ರಾದೇಶಿಕ ಭಾಷೆಯಲ್ಲಿ ಆ ಭಾಗದ ಹಳ್ಳಿಗಾಡಿನ ಜನಜೀವನದ ಅನುಭವಗಳನ್ನು ಕಟ್ಟಿಕೊಡುವ ಆರಂಭದ ಕಥೆಗಾರರಾಗಿ ಕಂಡುಬರುತ್ತಾರೆ. ಹಳ್ಳಿಗಾಡಿನ ಬದುಕನ್ನು ಅಪಾರವಾಗಿ ಮೆಚ್ಚಿಕೊಂಡು ಕಥೆ ಬರೆದಿರುವ ಆನಂದಕಂದರು ತಮ್ಮ ಕಥೆಗಳಲ್ಲಿ ಕಳೆದುಹೋದ ಕನ್ನಡನಾಡಿನ ಭವ್ಯಪರಂಪರೆಯ ಐತಿಹಾಸಿಕ, ಸಾಂಸ್ಕೃತಿಕ, ಸಾಮಾಜಿಕ ಜನಜೀವನದ ವಸ್ತುಗಳನ್ನು ಆಯ್ಕೆ ಮಾಡಿಕೊಂಡು ವಾಸ್ತವ ನೆಲೆಗಟ್ಟಿನಲ್ಲಿ ಅದರ ಅರಿವು ಮತ್ತು ಪ್ರಜ್ಞೆಯನ್ನು ಓದುಗರ ಮುಂದೆ ತೆರೆದಿಡುತ್ತಾರೆ. ಈ ಮಾದರಿಯ ಕಥಾ ಸಂಪ್ರದಾಯವನ್ನು ನಾವು ಮೊದಲೇ ಮಾಸ್ತಿಯವರಲ್ಲಿ ಕಾಣುತ್ತೇವೆಯಾದರೂ, ಮಾಸ್ತಿಯವರ ಕಥೆಗಳಲ್ಲಿ ಕಂಡುಬರುವ ಪರಂಪರೆಯ ಪ್ರಜ್ಞೆಯ ವಿಶಾಲ ವ್ಯಾಪ್ತಿಯ ನೆಲೆಗಟ್ಟು ಆನಂದಕಂದರ ಕಥೆಗಳಲ್ಲಿ ಪ್ರತಿಬಿಂಬಿತವಾಗಿಲ್ಲ. ಆದರೆ ಇವರ ಕಥೆಗಳಲ್ಲಿ ಎರಡು ವಿಧ. ಒಂದು ಅವರ ಸಂಶೋಧನ ಕಣ್ಣು, ಐತಿಹಾಸಿಕ, ಸಾಂಸ್ಕೃತಿಕ ಬದುಕಿನ ವೀರ ಜೀವನ, ತ್ಯಾಗ ಬಲಿದಾನ, ನಾಡುನುಡಿ, ಕಲೆ ಸಂಸ್ಕೃತಿಗಳ ವಿಶಿಷ್ಟತೆಯನ್ನು ಹೆಕ್ಕಿ ಎಳೆದು ಅವುಗಳನ್ನು ಪುನರ್‌ಸೃಷ್ಟಿಯ ಪ್ರತೀಕವಾಗಿ ನಿರೂಪಿಸುತ್ತದೆ. ಹಾಗೆಯೇ, ಅವರ ಆದರ್ಶದ ಕಣ್ಣು ಕೂಡಿ ಬಾಳಿದರೆ ಸ್ವರ್ಗಸುಖ ಅನ್ನುವ ರೀತಿಯಲ್ಲಿ ಹಳ್ಳಿಯ ಬದುಕಿನ ಸಾಮಾಜಿಕ ಜೀವನದ ರೀತಿ–ನೀತಿ, ರೂಢಿ–ಸಂಪ್ರದಾಯ, ನಂಬಿಕೆ–ಆಚರಣೆ, ಪರೋಪಕಾರ, ಸಹಕಾರ, ಸಹಬಾಳ್ವೆಗಳನ್ನು ಎಲ್ಲಾ ಜಾತಿ ಜನಾಂಗಗಳು ಒಪ್ಪಿತ ಮೌಲ್ಯವಾಗಿ ಸ್ವೀಕರಿಸುತ್ತಾ ಅವುಗಳನ್ನು ಇವತ್ತಿನ ಹಳ್ಳಿಯ ಆದರ್ಶ ಸಮಾಜದ ಮಾದರಿಯಾಗಿ ನಿರೂಪಿಸುತ್ತದೆ.

ಹೊಸ ತಲೆಮಾರಿನಲ್ಲಿ ಅನೇಕ ಪ್ರತಿಭಾವಂತ ಕಥೆಗಾರರೂ ಮೂಡಿ ಬರುತ್ತಿದ್ದಾರೆ. ಇನ್ನೂ ಕೆಲವರು ಅನುಭವಿ ಕಥೆಗಾರರಿದ್ದಾರೆ. ಸದ್ಯದ ಮಟ್ಟಿಗೆ ಕನ್ನಡ ಕಥಾಸಾಹಿತ್ಯ ಆಶಾದಾಯಕವಾಗಿದೆ ಎಂದು ಹೇಳಬಹುದು.

ಹತ್ತೊಂಬತ್ತನೆಯ ಶತಮಾನದವರೆಗೂ ಕನ್ನಡದಲ್ಲಿ ಕಾದಂಬರಿಯ ರೂಪ ಅಪರಿಚಿತ ಸಾಂಪ್ರದಾಯಿಕವಾದ ಕಥನಾಕ್ರಮವನ್ನು ಕಾದಂಬರಿಯು ಭೇದಿಸಿ ಕಥೆಯನ್ನು ಹೊಸ ಬಗೆಯಲ್ಲಿ

ಹೇಳುವ ಕ್ರಮದ ಕಡೆಗೆ ಗಮನವನ್ನು ಹರಿಸಿತು. ಕಾದಂಬರಿಯು ಹೊಸ ಮಾದರಿಯ ಬೌದ್ಧಿಕ ಉತ್ಪಾದನೆಯಾಗಿರುವುದರಿಂದ ಅದನ್ನು ಹೆಚ್ಚಿನ ಕಾದಂಬರಿಕಾರರು ವ್ಯಾಖ್ಯಾನಿಸಬೇಕಾಗಿ ಬಂತು.

"ಕಾದಂಬರಿಗಳಲ್ಲಿ ಶೀಲದ ವಿಷಯ ಮುಖ್ಯ. ಅದರಲ್ಲಿ ನೀತಿಯನ್ನು ಹೇಳಬೇಕಾದ ಪಶ್ಚಿಮದ ಅಥವಾ ಇಂಗ್ಲಿಷಿನ 'ನಾವೆಲ್' ರೀತಿಯ ಬರವಣಿಗೆಯಿದ್ದರೂ ಹಿಂದೂಧರ್ಮದ ಮರ್ಯಾದೆಗೆ ಅನುಸಾರವಾಗಿ ಬರೆಯಬೇಕು. ಕಾದಂಬರಿಯ ಓದುಗರನ್ನು ವಿಚಾರಪರರನ್ನಾಗಿ ಮಾಡಬೇಕು. ಕಾದಂಬರಿಯನ್ನು ಓದುವವರಿಗೆ ಅವರ ಮನೋಭೂಮಿಕೆಯಲ್ಲಿ ಪರಿವರ್ತನೆಯಾಗಬೇಕು. ಕಾದಂಬರಿಗಳು ಕಡಿಮೆ ಯೋಗ್ಯತೆಯ ಕೃತಿಗಳಲ್ಲಿ ಸಾಮಾಜಿಕ ಮತ್ತು ಸ್ವರಾಜ್ಯದ ಆಸಕ್ತಿಗೆ ಮತ್ತು ಕಾದಂಬರಿಯ ರೂಪಗಳಿಗೆ ಸಂಬಂಧವಿದೆ. ಕನ್ನಡದ ಕೆಲವು ಕಾದಂಬರಿಗಳಿಗೆ ಹಾಗೂ ಆ ಕಾಲದ ಪತ್ರಿಕೆಗೆ ಸಂಬಂಧವಿದೆ. ಕೆಲವು ಕಾದಂಬರಿಗಳು ಪತ್ರಿಕೆಗಳಲ್ಲಿ ಧಾರಾವಾಹಿಯಾಗಿಯೂ ಪ್ರಕಟವಾಗಿದೆ. ಕಾದಂಬರಿಗಳಿಗೂ ಉದ್ದೇಶವಿರುತ್ತದೆ. ಕಾದಂಬರಿಯ ಮಾಧ್ಯಮವು ಹೊಸದಾಗಿದ್ದರೂ ಅದರ ಮುಖಾಂತರ ಜನರಿಗೆ ಹೊಸ ಅರಿವನ್ನು ಮೂಡಿಸಲು ಸಾಧ್ಯ. ಕಾದಂಬರಿಯನ್ನು ಓದುವವರದೂ ಒಂದು ವರ್ಗವಿದೆ. ಕಾದಂಬರಿಗಳಲ್ಲಿ ಒಂದು ವಿಶಾಲವಾದ ನೋಟ ಸಾಧ್ಯ. ಪತ್ತೇದಾರಿ ಮಾದರಿಯ ಕಾದಂಬರಿಗಳನ್ನು ಬರೆಯುವುದರಲ್ಲಿ ಯಾವುದೇ ಉದ್ದೇಶವೂ ಈಡೇರುವುದಿಲ್ಲ. ಈ ಉದ್ದೇಶ ಸಾಧನೆಯಲ್ಲಿ ಎರಡು ದಾರಿಗಳು. ಒಂದು: ಹಿಂದಿನ ಪುರಾಣ ಪುರುಷ, ಐತಿಹಾಸಿಕ ವ್ಯಕ್ತಿಗಳು ಸ್ವರಾಜ್ಯಕ್ಕಾಗಿ ಮಾಡಿದ ಸಾಧನೆಯನ್ನು ಪರಿಚಯಿಸಿ ಅದರ ಮುಖಾಂತರ ದೇಶಾಭಿಮಾನಕ್ಕೆ ಕಾರಣವಾಗುವುದು ಗಳಗನಾಥ. ಅನಂತರ ದೇವುಡು ಮುಂತಾದವರು ಈ ಹಾದಿಯಲ್ಲಿ ನಡೆದರು."[೧೦]

ವಸಾಹತು ಪೂರ್ವದಲ್ಲಿಯೂ ಗದ್ಯದ ನಿರೂಪಣೆಗಳು ಇದ್ದುದರಿಂದ ಗದ್ಯದ ಬರವಣಿಗೆ ಸಮಸ್ಯೆಯಲ್ಲ. ಆದರೆ ಗದ್ಯದ ಮುದ್ರಣ ರೂಪದಲ್ಲಿ 'ನಿವೇದನ' ಎನ್ನುವುದು ಮುಖ್ಯವಾಯಿತು. ವಸಾಹತು ಕಾಲದ ಸಾಂಸ್ಕೃತಿಕ ನಿರೂಪಣೆಗಳು ಆ ಕಾಲದ ಪ್ರಜ್ಞೆಯಲ್ಲಿ ತಂತ್ರಗಾರಿಕೆಯ ಪರಿಣಾಮಗಳನ್ನು ಕುರಿತೂ ಚಿಂತಿಸತೊಡಗಿದವು. ಸಮೂಹ ಮಾಧ್ಯಮದ ಸಂವಹನ ಪ್ರಕ್ರಿಯೆಯಲ್ಲಿ ಓದುಗರನ್ನು ಸಮೂಹ ಮಾಧ್ಯಮದ ಕಡೆಗೆ ತರಲು ಕಾದಂಬರಿಯೂ ಒಂದು ಅಗತ್ಯವಾಗಿತ್ತು ಎಂಬುದನ್ನು ಮರೆಯಬಾರದು. ಕಾದಂಬರಿಕಾರರು ಮತ್ತು ಆಗಿನ ಓದುವ ವರ್ಗ ಇಬ್ಬರೂ ವಸಾಹತು ಕಾಲದ ಶಿಕ್ಷಣದ ಕೂಸುಗಳು ವಸಾಹತು ಕಾಲದ ಶಿಕ್ಷಣ ಕ್ರಮ ರೂಪಿಸಿದ ಚಿಂತನೆಯ ಕ್ರಮಕ್ಕೂ ಈ ಮಾದರಿಯ ಸಾಂಸ್ಕೃತಿಕ ಸಂಚಲನೆಗೂ ಒಂದು ಸಂಬಂಧವಿದೆ.

---

೧೦. ಶಿವಾನಂದ ಕೆಳಗಿನಮನಿ, 'ಶತಮಾನದ ಕನ್ನಡ ಸಾಹಿತ್ಯ ಪುನರಾವಲೋಕನ', ಪುಟ. ೬೩.

ಶಿಕ್ಷಣ, ಸಮೂಹ ಮಾಧ್ಯಮವಾಗಿ ಪತ್ರಿಕೆ, ಸಾಹಿತ್ಯದ ಸಾಂಸ್ಥಿಕ ಕಲಿಕೆ, ಮುದ್ರಣ ಬಂಡವಾಳ ಇವೆಲ್ಲದರ ಪರಿಣಾಮವಾಗಿ ಹೊಸ ರೀತಿಯ ಬದಲಾವಣೆಯು ಸಾಹಿತ್ಯಕ್ಕೂ ಅಗತ್ಯವಿತ್ತು. ಇದನ್ನೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಗತ್ಯವೆಂದು ಕರೆಯಬಹುದು.

೧೯೪೭ರ ಹೊತ್ತಿಗೆ ಪ್ರಕಟಗೊಂಡ ಕಾದಂಬರಿಗಳು ಕೆಲವೇ ಆದರೂ ಅವು ಪ್ರಮುಖ ಕಾದಂಬರಿಗಳು ಸ್ವಾತಂತ್ರ್ಯಪೂರ್ವ ಯುಗದಲ್ಲಿ ರಚಿತಗೊಂಡಿದ್ದರೂ ರಾವ್‌ಬಹದ್ದೂರ್ ಅವರ 'ಗ್ರಾಮಾಯಣ', ಕೆರೂರು ವಾಸುದೇವಾಚಾರ್ಯರ 'ಇಂದಿರಾ' ನವೋದಯ ಮತ್ತು ಪ್ರಗತಿಶೀಲ ಕಾದಂಬರಿಗಳಲ್ಲಿ ಲೇಖಕರ ವೈಯಕ್ತಿಕ ಗುಣ, ಪ್ರತಿಭೆಗಳಿಂದಾಗಿ ವಸ್ತು, ಶೈಲಿಗಳ ವೈವಿಧ್ಯ ಅನಿವಾರ್ಯವಾಯಿತು. ಮಾನವತಾವಾದ, ಧ್ಯೇಯವಾದ, ವೈಚಾರಿಕತೆ, ವರ್ಗಪ್ರಜ್ಞೆ, ಉತ್ಕಟತೆ, ಯಥಾರ್ಥತೆ, ಮನೋವೈಜ್ಞಾನಿಕ ಚಿಂತನೆ – ಇವೆಲ್ಲ ಅವರ ಕಾದಂಬರಿಗಳ ಅಂತಃಸ್ವರೂಪ ಮತ್ತು ಶೈಲಿಗಳ ವೈಶಿಷ್ಟ್ಯಕ್ಕೆ ಕಾರಣವಾಯಿತು. ವಾಸ್ತವ ಕಾದಂಬರಿಗಳು ಪರಿಸರಕ್ಕೆ ಕೊಡುವಷ್ಟು ಗಮನ ಮಾಧ್ಯಮಕ್ಕೆ ಕೊಡಲಿಲ್ಲ. ಹೀಗಾಗಿ ರಾವ್‌ಬಹದ್ದೂರ್, ಕೆರೂರು ವಾಸುದೇವಾಚಾರ್ಯ, ಸತ್ಯಕಾಮ, ದು.ನಿಂ. ಬೆಳಗಲಿ, ಬಾಳಾಸಾಹೇಬ ಲೋಕಾಪುರ, ಮಲ್ಲಿಕಾರ್ಜುನ ಹಿರೇಮಠ, ಶಿವಾನಂದ ಅಂಗಡಿ, ಸುಶೀಲಾ ಕಮತಗಿ ಮುಂತಾದವರ ಕಾದಂಬರಿಗಳನ್ನು ಪ್ರಾತಿನಿಧಿಕವಾಗಿ ಇಲ್ಲಿ ಅಧ್ಯಯನ ಮಾಡಲಾಗಿದೆ.

ಹತ್ತೊಂಬತ್ತನೆಯ ಶತಮಾನದ ಕೊನೆಯ ಹೊತ್ತಿಗೆ ಹೊಸಗನ್ನಡ ಗದ್ಯವನ್ನು ಸ್ಫುಟವಾಗಿ ಸಮಕಾಲೀನ ಪ್ರಜ್ಞೆಯೊಂದಿಗೆ ರೂಪಿಸಲಾರಂಭಿಸಿ, ಚಾರಿತ್ರಿಕವಾಗಿ ಮಹತ್ವ ಉಳಿಸುವಂತಹ ಕೃತಿಗಳನ್ನು ರಚಿಸಿದವರಲ್ಲಿ ಕೆರೂರು ವಾಸುದೇವಾಚಾರ್ಯರು ಪ್ರಮುಖರು. ೧೯೦೮–೧೯೨೦ರ ಅವಧಿಯಲ್ಲಿ ಕೆರೂರು ಪ್ರಕಟಿಸಿದ ಸೃಜನಶೀಲ ಕಾದಂಬರಿ ಪ್ರಕಾರವೇ ಹೆಚ್ಚು ಗಮನಾರ್ಹವಾಗಿದೆ. ಕನ್ನಡದಲ್ಲಿ ಸ್ವತಂತ್ರ ಕಥಾವಸ್ತು ಮತ್ತು ಕಲ್ಪನೆಯುಳ್ಳ ಕಾದಂಬರಿಗಳು ಅದೇ ಆಗ ಹುಟ್ಟುತ್ತಿದ್ದ ದಿನಗಳಲ್ಲಿ ಕೆರೂರರು ರಚಿಸಿದ ಐದು ಕಾದಂಬರಿಗಳಲ್ಲಿ ಮೂರು ಕಾದಂಬರಿಗಳಂತೂ ಕಾದಂಬರಿ ಪ್ರಕಾರದ ಉಗಮ, ಬೆಳವಣಿಗೆಯ ದೃಷ್ಟಿಯಿಂದ ಮಹತ್ವವನ್ನು ಪಡೆಯುವಂತಿವೆ. ಹೀಗೆ ಕನ್ನಡ ಕಾದಂಬರಿ ಸಾಹಿತ್ಯ ಪ್ರವರ್ತಕರಲ್ಲಿ ಕೆರೂರು ವಾಸುದೇವಾಚಾರ್ಯರು ಒಬ್ಬರಾಗಿರುವುದು ಹೊಸಗನ್ನಡ ಗದ್ಯ ಚರಿತ್ರೆಯಲ್ಲಿ ಉಲ್ಲೇಖನೀಯ ಅಂಶವಾಗಿದೆ.

'ಇಂದಿರಾ' ಸಾಮಾಜಿಕ ಕಾದಂಬರಿಗಳಿಗಿಂತ ವಸ್ತು ಮತ್ತು ಶೈಲಿಯಲ್ಲಿ ಭಿನ್ನವಾಗಿರುವ, ಸ್ವತಂತ್ರ ದೃಷ್ಟಿಯ ಕೃತಿ. ಸಾಮಾಜಿಕ ಜೀವನದಲ್ಲಾಗುವ ಬದಲಾವಣೆಯನ್ನು ಸ್ಥೂಲವಾಗಿ ತೋರಿಸುತ್ತ ಆಧುನಿಕತೆಗೆ ತಿರುಗುವ ವ್ಯಕ್ತಿಗಳ ಮನೋ ಪ್ರವೃತ್ತಿಯನ್ನೂ ಪರೀಕ್ಷಿಸುವ

ನೋಟದಿಂದ ತುಂಬಿದೆ. ವ್ಯಕ್ತಿಯ ಚಾರಿತ್ರ್ಯ ಎಂದಿಗೂ ಆರೋಗ್ಯಕರ ಸಮಾಜ ಕಟ್ಟಬಲ್ಲದು, ಬೆಳೆಸಬಲ್ಲದು. ಸಾಂಪ್ರದಾಯಿಕ ಎನ್ನಬಹುದಾದ ಸಚ್ಚಾರಿತ್ರ್ಯದ ನಡವಳಿಕೆ, ಶೀಲ, ಸಂಯಮ ಗುಣಗಳಿರುವ ವ್ಯಕ್ತಿಗಳೇ ಸಮಾಜದ ಮುನ್ನಡೆಗೆ ಅರ್ಹರು. ಕೆರೂರರ ಆದರ್ಶ ಸಮಾಜದ ಕಲ್ಪನೆ ಈ ಮಾದರಿಯದು. ಇದು ಗುಲ್ವಾಡಿಯವರ ವಾಸ್ತವ ಪ್ರಜ್ಞೆಗೆ ಭಿನ್ನವಾದುದಷ್ಟೇ ಅಲ್ಲ, ಸಾಮಾಜಿಕ ಸಂಚಲನವನ್ನು ಸ್ಥಗಿತ ಚಿತ್ರದಿಂದ ಗ್ರಹಿಸುವ ಮಿತಿಯುಳ್ಳದ್ದಾಗಿದೆ.

ಯದುಮಹಾರಾಜ ಐತಿಹಾಸಿಕ ಹಿನ್ನೆಲೆಯುಳ್ಳ ಎರಡನೆಯ ಕಾದಂಬರಿ ರಾಜಕೀಯ ಸಂಸ್ಕೃತಿಯ ಬಗ್ಗೆ ಕೆರೂರರಿಗಿದ್ದ ಆಶಯಗಳನ್ನು ಕಥೆಮಾಡಿ ಹೇಳುತ್ತದೆ. ರಾಜ್ಯಾಧಿಕಾರ ಇರಬೇಕಾದಷ್ಟು ಕುಲೀನರೂ ಚಾರಿತ್ರ್ಯವಂತರೂ ಆದ ಶಕ್ತಿಶಾಲಿಗಳ ಕೈಯಲ್ಲಿ ಹೀನ, ಕುಟಿಲ ವ್ಯಕ್ತಿಗಳ ಕೈಯಲ್ಲಿ ಅಲ್ಲ ಎಂಬುದು ಕಾದಂಬರಿಯ ಆಶಯ. ಮೈಸೂರು ದೊರೆ ಚಾಮರಾಜ ಒಡೆಯರನ್ನು ಸಂಚಿನಿಂದ ಕೊಂದ ದಳವಾಯಿ ಮಾರನಾಯಕ ಸರ್ವಾಧಿಕಾರಿಯಾಗಿ ಮೆರೆಯುತ್ತಿರುವುದನ್ನು ಸಹಿಸದ ವಿಜಯನಗರದ ಯದುವಂಶದ ಕೃಷ್ಣರಾಜರು ನಾನಾ ನಮೂನೆಯ ಸಾಹಸ, ರಾಜಕೀಯ ತಂತ್ರ ಬಳಸಿ ಮೈಸೂರು ಅರಮನೆಯನ್ನು ವಶಪಡಿಸಿಕೊಂಡು ಕ್ಷಾತ್ರಧರ್ಮವನ್ನು ಸ್ಥಾಪಿಸುವ ಕಥಾನಕ ಇಲ್ಲಿಯದು.

ರಾವ್‌ಬಹದ್ದೂರರು ತಮ್ಮ ವಿದ್ಯಾರ್ಥಿ ದೆಸೆಯಿಂದಲೇ ಸಾಹಿತ್ಯಕ ಬರವಣಿಗೆಯನ್ನು ಪ್ರಾರಂಭಿಸಿದರು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿದ್ದಾಗ 'ರನ್ನಯ ದಯಮಾಡಿಲ್ಲಿಂದ' ಎಂಬ ಪದ್ಯದ ಮೂಲಕ ಸಾಹಿತ್ಯ ಲೋಕದಲ್ಲಿ ಕಾಲಿಟ್ಟರೂ ಅದೇ ಮೊದಲ ಮತ್ತು ಕೊನೆಯ ಪದ್ಯವಾಗಿ ಬಾಳಿನುದ್ದಕ್ಕೂ ಗದ್ಯವನ್ನು ಅವಲಂಬಿಸಿದರು. ೧೯೩೩ರಲ್ಲಿ ಬರೆದ 'ರೈತನ ಉದ್ಧಾರ'ವೆಂಬ ಪ್ರಬಂಧ ಅವರ ಮೊದಲ ಗದ್ಯ ಬರಹವಾಗಿದೆ. ನಂತರ ೧೯೩೮ರಲ್ಲಿ 'ಚಂದ್ರಗ್ರಹಣ'ದಂಥ ಅತ್ಯುತ್ತಮ ಕಥೆಯನ್ನು ಬರೆದ ಅವರ ಸೃಜನಾತ್ಮಕ ಪ್ರತಿಭೆ ಪತ್ರಿಕಾರಂಗದಲ್ಲಿ ವರದಿ ಮಾಡುವುದರಲ್ಲಿಯೇ ಕೆಲವು ದಿನ ತೃಪ್ತಿ ಪಡೆದಿತ್ತೇನೋ. ಆದರೆ ಸಾಹಿತ್ಯದ ಸುಗ್ಗಿಗಾಗಿ ಕಾಯುತ್ತಿದ್ದ ಅವರ ಪ್ರತಿಭೆ ಯಾರಿಂದಲೋ ಪ್ರಚೋದನೆ ಸಿಕ್ಕಾಗ ಕಾದಂಬರಿಯಂಥ ಸೃಜನಶೀಲ ಸಾಹಿತ್ಯ ಕೃಷಿಗೆ ತೊಡಗಿತು. ಆರಂಭದ ಪ್ರಯತ್ನವಾಗಿ 'ಗ್ರಾಮಾಯಣ'ದಂಥ ಅದ್ಭುತ ಕಾದಂಬರಿಯನ್ನು ಸೃಜಿಸಿತು.

ರಾವ್‌ಬಹದ್ದೂರರು 'ಗ್ರಾಮಾಯಣ'ದಿಂದ 'ಗೌಡರಕೋಣ'ದವರೆಗೆ ಸುಮಾರು ಹನ್ನೊಂದು ಕಾದಂಬರಿಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಕೆಲವೊಂದು ಧಾರಾವಾಹಿಗಳಾಗಿ ಪ್ರಕಟಗೊಂಡಿದ್ದರೆ, ಇನ್ನೂ ಕೆಲವು ಮೊದಲು ಕಥೆಗಳಾಗಿ ನಂತರ ಕಾದಂಬರಿಗಳಾಗಿ ರಚಿತಗೊಂಡಿವೆ. ಕೆಲವು ಸ್ವತಂತ್ರ ಕಾದಂಬರಿಗಳಾಗಿ ಹೊರಬಂದಿವೆ. ಇವುಗಳಲ್ಲದೆ ರಾವ್‌ಬಹದ್ದೂರರ ಹೆಸರಿನಲ್ಲಿ ತ್ರಿಶಂಕು ಸ್ವರ್ಗ, ಪ್ರಾಯಶ್ಚಿತ್ತ, ಬ್ರಹ್ಮಾಂಡ, ದಾದಾ

ಮುಂತಾದವುಗಳ ಉಲ್ಲೇಖವಿದ್ದರೂ ಒಂದೂ ಪ್ರಕಟವಾಗಿಲ್ಲ. ಇಂದು ಅವುಗಳ ಹಸ್ತಪ್ರತಿಗಳು ಲಭ್ಯವಿಲ್ಲ.

ರಾವ್‌ಬಹದ್ದೂರರ 'ಗ್ರಾಮಾಯಣ'ವು ಒಂದು ಗ್ರಾಮದ ರಾಮಾಯಣವೇ ಸರಿ. ಇಡೀ ಒಂದೂರಿನ ಬದುಕೇ ಕಾದಂಬರಿಯ ಕೇಂದ್ರಬಿಂದುವಾಗಿದೆ. ಇಲ್ಲಿನ ಕಥೆ ಎರಡು ಹಂತದಲ್ಲಿ ಬೆಳೆಯುವುದನ್ನು ಕಾಣುತ್ತೇವೆ.

೧. ಪಾದಳ್ಳಿಯ ಚರಿತೆಯ ಕಥೆ   ೨. ಪಾದಳ್ಳಿಯ ಜನರ ಕಥೆ.

'ಮುತ್ತು ಕಟ್ಟಿದಳು' ಕೃತಿಯಲ್ಲಿ ಗಂಗಾ ಹರಿಜನ ಕನ್ಯೆ. ಕಾಕಾ ನಡೆಸುವ ಕನ್ಯಾಮಂದಿರದಲ್ಲಿದ್ದು ಮ್ಯಾಟ್ರಿಕ್ ಮುಗಿಸಿದಳು. ಸುರಕ್ಷಿತ ಸುಧಾರಣೆಯ ಸಂಸ್ಕಾರಗೊಂಡವಳು. ತನ್ನ ಜನಾಂಗ ದೇವದಾಸಿ ಪದ್ಧತಿಯ ನೆಪದಲ್ಲಿ 'ವೇಶ್ಯಾವೃತ್ತಿ ನಡೆಸುತ್ತಿದ್ದುದರ ಬಗ್ಗೆ ತಿಳಿಹೇಳಿ ತಿದ್ದಿ ಸುಧಾರಿಸುವ ನಿಶ್ಚಯ ಮಾಡಿಕೊಂಡಳು. ಕಾಕಾ ನೀಡಿದ ಉಪದೇಶಗಳನ್ನೆಲ್ಲ ತಲೆಯಲ್ಲಿ ತುಂಬಿಕೊಂಡು, ಜ್ಯೋತಿರಾಮನೊಂದಿಗೆ ಮದುವೆಯಾಗಿ ಆದರ್ಶ ಜೀವನ ನಡೆಸಲು ಕನಸು ಕಟ್ಟಿಕೊಂಡು ತನ್ನ ಶೀಲ ಮತ್ತು ಚಾರಿತ್ರ್ಯಗಳ ಪಾವಿತ್ರ್ಯ ಕಾಪಾಡಿಕೊಳ್ಳುವ ವಚನಕೊಟ್ಟು ಕಾಕಾ ಅವರಿಂದ ಬೀಳ್ಕೊಂಡು ತನ್ನ ಊರು ಕಲ್ಲೂರಿಗೆ ನಡೆದಳು.

ರಾವ್‌ಬಹದ್ದೂರರು ಇಲ್ಲಿ ದೇವದಾಸಿ ಪದ್ಧತಿಯ ನಿಜವಾದ ಅರ್ಥವೇನು? ಎಂಬ ಪ್ರಶ್ನೆಗೆ ಉತ್ತರ ಹುಡುಕಲು ಪ್ರಯತ್ನಿಸಿದ್ದಾರೆ. ಗಂಗಾ ಹರಿಜನರಲ್ಲಿ ಹುಟ್ಟಿದವಳು, ಕಾಕಾನಿಂದ ಸಂಸ್ಕಾರ ಪಡೆದಿದ್ದರೂ, ಕಾಕಾನ ಉಚ್ಚವರ್ಗದ ಸಮಾಜದ ಸಂಸ್ಕೃತಿಗೆ ಒಪ್ಪಲಿಲ್ಲ. ಕೆಳವರ್ಗವೆನಿಸಿಕೊಂಡರೂ ತನ್ನ ಸಮಾಜ ದೇವದಾಸಿ ಪದ್ಧತಿಯ ಮೂಲಕ ಸ್ತ್ರೀಗೆ ನೀಡುವ ಸ್ವಾತಂತ್ರ್ಯವನ್ನು ಮೆಚ್ಚಿದಳು. ಆದರೆ ಮುತ್ತು ಕಟ್ಟುವ ಸಂಸ್ಕಾರದ ಮೂಲಕ ದೇವದಾಸಿ ಎಂದು ಕರೆದು, ಕೀಳು ಕೃತ್ಯಕ್ಕೆ ನೂಕುವ ಕಾಮುಕ ವರ್ಗದ ಕ್ರೂರ ಅಪ್ರಬುದ್ಧ ನಡತೆಗೆ ಹೇಸಿದಳು. ಈ ಅನಿಷ್ಟವನ್ನು ಇಂಥ ವರ್ಗದಿಂದ ಹೋಗಲಾಡಿಸುವ ದೊಡ್ಡ ಆದರ್ಶವನ್ನು ಹೊತ್ತು ಹೋರಾಡುವ ಸಾಂಸ್ಕೃತಿಕ ಹೋರಾಟವೇ ಈ ಕಾದಂಬರಿ ಕಥಾವಸ್ತುವಾಗಿದೆ.

ಜೀವನವನ್ನು ಸಮಗ್ರವಾಗಿ ನೋಡುವ ಧೀರದೃಷ್ಟಿ. ದಿನನಿತ್ಯದ ಅನೇಕ ಸಂಗತಿಗಳ ನಡುವೆ ಇರಬಹುದಾದ ಸಂಬಂಧವನ್ನು ನೋಡುವ ಕುತೂಹಲ ಬದುಕಿನ ಒಡಲಿನಲ್ಲಿಯೇ ಹುಟ್ಟಿ, ಬದುಕನ್ನೇ ನುಂಗಲು ಹವಣಿಸುವ ಸಮಸ್ಯೆಗಳ ರಹಸ್ಯವನ್ನು ಅರಿಯುವ ಆಂತರಿಕ ತಳಮಳ 'ಗ್ರಾಮಾಯಣ' ಕೃತಿಗೆ ಪ್ರೇರಕ ಶಕ್ತಿಯಾಗಿದೆ. ಅದಕ್ಕನುಗುಣವಾಗಿ ಈ ಕಾದಂಬರಿಯ ರಚನೆ ಬಹುಮಟ್ಟಿಗೆ ಮಹಾಕಾವ್ಯಗಳ ರಚನೆಯನ್ನು ಹೋಲುತ್ತದೆ. ಅರವತ್ತು ವರ್ಷಗಳ ಹಿಂದಿನ ಒಂದು ಗ್ರಾಮದ ಜೀವನವನ್ನು ಇಲ್ಲಿ ಚಿತ್ರಿಸಲಾಗಿದೆ. ಒಂದು ಅರ್ಥದಲ್ಲಿ ಇದು ಶುದ್ಧ

ಸಾಮಾಜಿಕ ಕಾದಂಬರಿ. ಸಾಮಾಜಿಕ ಜೀವನವೇ ಇಲ್ಲಿ ವ್ಯವಹರಿಸುತ್ತದಾದರೂ ಒಂದಾದರೂ ವ್ಯಕ್ತಿಯ ಕಾದಂಬರಿಯಂತೆ ಓದುವಾಗ ಪಾದಳ್ಳಿಯ ಸಾರ್ವಜನಿಕ ಜೀವನ ಮೆರವಣಿಗೆಯಂತೆ ನಮ್ಮ ಕಣ್ಮುಂದೆ ಹಾದುಹೋಗುವ ಅನುಭವವಾಗುತ್ತದೆ.

ಕೃತಿಯ ಅಧ್ಯಯನ ಮಾಡುವಾಗ ಅದರ ಮಾದರಿಯ ಪ್ರಧಾನ ಆಶಯಗಳನ್ನು ಪ್ರಾಥಮಿಕವಾಗಿ ಗಮನಿಸಬೇಕು. ಅದರ ಕೇಂದ್ರ ನೆಲೆ ಪಾದಳ್ಳಿ, ಕೇಂದ್ರ ಪ್ರಜ್ಞೆ ಎಲ್ಲರೊಳಗೂ ವಿಚಾರ ಪಡೆಯುವ ದುರಂತ ಧ್ವನಿ, ಬದುಕು ಯಾವಾಗಲೂ ಅನುಕರಣೆಯ ಆಶಯವಾಗಿಯೇ ಬೆಳೆಯುತ್ತದೆ. ಪ್ರತಿಯೊಂದು ಸ್ಥಿರಜೀವನದಲ್ಲಿಯ ಅಸಹಾಯಕತೆಯ ಸಹಜ ಕೇಂದ್ರಿತ ವ್ಯಕ್ತಿಯ ನೆಲೆಯಲ್ಲಿ ಪಲ್ಲಟಗೊಳ್ಳುವ ಸ್ಥಿತಿಯು ಹೊಮ್ಮುತ್ತದೆ. ಈ ಹಿನ್ನೆಲೆಯಲ್ಲಿ 'ಗ್ರಾಮಾಯಣ' ನೆಲೆಯ ಕೇಂದ್ರೀಯ ಚಿಂತನೆ ಸಾಂಸ್ಕೃತಿಕ ಅನನ್ಯತೆಯ ಸಂಘರ್ಷದ ದುರಂತ ಕಾಳಜಿಯುಳ್ಳ ಕನ್ನಡದ ಪ್ರಥಮ ಕೃತಿ.

ಕನ್ನಡ ನಾಡಿನ ಮಲೆನಾಡಿನ ಬದುಕನ್ನು ತೆರೆದ ಕಣ್ಣುಗಳಿಂದ ಅರಿಯಲು ಕುವೆಂಪು ಕಾದಂಬರಿಗಳು ಶ್ರೇಷ್ಠ ಮಾದರಿಗಳಾಗಿವೆ. ಇಲ್ಲಿ ಮನುಷ್ಯನ ಬದುಕಷ್ಟೇ ಪ್ರಾಕೃತಿಕ ಬದುಕಿನ ಲಯವಿನ್ಯಾಸವು ತನ್ನ ನಿಗೂಢತೆಯನ್ನು ಆತನ ಬದುಕಿನೊಡನೆ ಬೆಸೆಯುವುದನ್ನೂ ಪ್ರಧಾನವಾಗಿಸಿಕೊಳ್ಳುತ್ತದೆ. ಈ ಸಾಂಸ್ಕೃತಿಕ ಆಶಯವು ಎರಡೂ ನೆಲೆಯ ಬದುಕನ್ನು ಕುತೂಹಲದ ಕಣ್ಣಿನಿಂದ ಗಮನಿಸುವ ನೆಲೆಗೆ ಧ್ವನಿರೂಪತೆಯನ್ನು ತಂದುಕೊಡುತ್ತದೆ. ಆ ಸ್ತರದಲ್ಲಿ ಬದುಕಿನ ಸ್ಥಿತ್ಯಂತರವನ್ನು ಗಮನಿಸುವಾಗ ಕೃತಿಯು ತನ್ನ ಆವರಣದಲ್ಲಿ ಪ್ರತಿನಿಧಿಸುವ ಗಡಿರೇಖೆಯನ್ನು ಪ್ರಾದೇಶಿಕ ವರ್ತುಲದಲ್ಲಿ ಬಂಧಿಸುತ್ತಲೇ ಅದರ ಆಶಯವು ಕಾಲದೇಶಾದಿಗಳನ್ನು ಮೀರುವುದನ್ನು ಮಹಾವಾಸ್ತವವಾದಿ ಪರಂಪರೆ ಮಾತ್ರ ಪ್ರಕಟಪಡಿಸುತ್ತದೆ. ಇದನ್ನು ಕುವೆಂಪು ಕಾದಂಬರಿಗಳು ತನ್ನದೇ ಆದ ವಿಶಿಷ್ಟ ಮಾರ್ಗಗಳಲ್ಲಿ ಮುಖಾಮುಖಿಯಾಗಿಸುತ್ತವೆ.

ಕುವೆಂಪು ಅವರಿಗೆ ವರ್ಗೀಯ ಆವರಣವು ಸೃಷ್ಟಿಸುವ ಬದುಕಿನ ಸಾಧ್ಯತೆಗಳು ಮತ್ತು ಅವುಗಳು ವಿವಿಧ ವಲಯಗಳಲ್ಲಿ ಜೀವಧಾರಣೆ ಪಡೆಯುವುದು ಬಹಳ ಮುಖ್ಯವಾಗುವುದರಿಂದ, ಒಂದು ನಿರ್ದಿಷ್ಟ ಮೇಲುವರ್ಗದ ನೆಲೆಗಳು ಪ್ರಧಾನವಾಗುವ ಹಾಗೆಯೇ, ಮಾನವ ಸಮುದಾಯದ ಅತ್ಯಂತ ಕೆಳವರ್ಗದ ನೆಲೆಗಳೂ ಪ್ರಧಾನವಾಗುತ್ತವೆ. ಈ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಬದುಕಿನ ಈ ಎರಡೂ ಧಾರೆಗಳು ಏಕಕಾಲದಲ್ಲಿ ಅನಾವರಣಗೊಳ್ಳುವುದು ಕುವೆಂಪು ಅವರಲ್ಲಿ ಮಾತ್ರ ಎದ್ದು ಕಾಣುತ್ತದೆ. ಹೀಗೆ ನಿರ್ದಿಷ್ಟ ಆವರಣದ ಬದುಕಿನ ಸಮಗ್ರ ವಿವರಗಳು ಅವರ ಕಾದಂಬರಿಗಳಲ್ಲಿ ಎಲ್ಲಾ ರೀತಿಯ ಸೃಜನಶೀಲ ಹಠದೊಡನೆ ಮುಖಾಮುಖಿಯಾಗುತ್ತವೆ. ಆದ್ದರಿಂದ ಇಂಥ ಕೃತಿಗಳನ್ನು ಎದುರುಗೊಳ್ಳುವಾಗ ವಿಮರ್ಶಕ ತನ್ನ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚು ಖಚಿತಗೊಳಿಸಿಕೊಳ್ಳಬೇಕಾದ ಅನಿವಾರ್ಯಕ್ಕೆ ಒಳಗಾಗುತ್ತಾನೆ.

ಬದುಕಿನ ದೃಷ್ಟಿಯಿಂದ 'ಮಲೆಗಳಲ್ಲಿ ಮದುಮಗಳು' ಮೊದಲ ಕೃತಿ. ಆದರೆ ಕುವೆಂಪು ಇದನ್ನು 'ಕಾನೂರುಹೆಗ್ಗಡತಿ'ಯ ನಂತರ ರಚಿಸಿದ್ದು. ಆ ಕ್ರಮದಲ್ಲಿ ಅಧ್ಯಯನ ಮಾಡುವುದರಿಂದ ಸಿಗುವ ಒಂದು ಅನುಕೂಲವೆಂದರೆ, ಒಂದು ಸೃಜನಶೀಲ ವ್ಯಕ್ತಿತ್ವ ಪಡೆದುಕೊಳ್ಳುವ ಆಯಾಮಗಳನ್ನು ಕುರಿತು ಯೋಚಿಸುವುದು. 'ಮಲೆಗಳಲ್ಲಿ ಮದುಮಗಳು' ಕೊನೆಗೊಳ್ಳುವ ಸಂಧಿಯಲ್ಲಿ 'ಕಾನೂರು ಹೆಗ್ಗಡತಿ' ಕಾದಂಬರಿಯ ಸೂಚನೆ ಸಿಗುತ್ತದೆ. ಬಹುಶಃ ಗುತ್ತಿ ಒಬ್ಬ ತನ್ನ ಬದುಕನ್ನು ಅರಸುತ್ತ ಎರಡನೆಯ ಕೃತಿಯ ಆವರಣವನ್ನು ಬಿಟ್ಟು ಹೊರ ನಡೆಯುವುದರಿಂದ, ಮೊದಲ ಕೃತಿಯಲ್ಲಿ ಅವರ ಹೆಸರು ಮಾತ್ರ ನಮ್ಮನ್ನು ಎದುರುಗೊಳ್ಳುತ್ತದೆ.

ಶಿವರಾಮ ಕಾರಂತರರದು ವಿಶಿಷ್ಟ ಪ್ರತಿಭೆ. ಅವರು ಒಟ್ಟಾರೆಯಾಗಿ ಕನ್ನಡ ಸಂದರ್ಭದಲ್ಲಿ ದೈತ್ಯ ಪ್ರತಿಭೆ ಹೇಗೋ ಹಾಗೆ ಕಾದಂಬರಿಯಲ್ಲೂ ಅವರ ಸೃಜನಶೀಲ ಪ್ರತಿಭೆ ಪೂರ್ಣಾರ್ಥದಲ್ಲಿ ತನ್ನನ್ನು ತಾನು ತೆತ್ತುಕೊಂಡಿರುವುದು ಕಾದಂಬರಿ ಪ್ರಕಾರದಲ್ಲೇ. "ಒಂದು ಸಂಸ್ಕೃತಿಯು ಒಬ್ಬ ವ್ಯಕ್ತಿಯ ಸೃಜನಶೀಲ ಪ್ರತಿಭೆಯನ್ನು ಅದರೆಲ್ಲ ಸಾಧ್ಯತೆಯಲ್ಲಿ ದುಡಿಸಿಕೊಳ್ಳುವುದು ಕಥಾಮಾಧ್ಯಮದಲ್ಲಿ ಮಾತ್ರ. ಅವರು ಬದುಕಿನ ದೈನಂದಿನ ಘಟಕಗಳನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಾರೆ. ವ್ಯಕ್ತಿಯು ಬಾಳುವ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ ಸ್ತರಗಳನ್ನು ಅದರ ಅನನ್ಯತೆಯಲ್ಲೇ ಹಿಡಿದು ಕೊಡುತ್ತಾರೆ. ಬದುಕು ರೂಪಿಸುವ ಆಶಯಗಳನ್ನು ಸಾಂಸ್ಕೃತಿಕ ವಾಹಕಗಳಾಗಿ ಪರಿವರ್ತಿಸುವಾಗ ಬಹುಶಃ ಕನ್ನಡದಲ್ಲಿ ಅಷ್ಟಾಗಿ ಯಾರೂ ತೋರದ ನಿರ್ಲಿಪ್ತತೆಯನ್ನೂ ಕಟ್ಟೆಚ್ಚರವನ್ನೂ ಮೆರೆಯುತ್ತಾರೆ. ಈ ಹಿನ್ನೆಲೆಯಲ್ಲೇ ಅವರು ಕನ್ನಡಕ್ಕೆ ಕೆಲವು ವಿಶಿಷ್ಟ ಬಗೆಯ ಕಥನ ಕಲೆಯ ಮಾದರಿಗಳನ್ನು ಸೃಷ್ಟಿಸುತ್ತಾರೆ."[೧೧] ಇದರಿಂದಾಗಿ ಕಾರಂತರನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಪ್ರತ್ಯೇಕವಾದ ಹಿನ್ನೆಲೆಯನ್ನು ಒದಗಿಸಿಕೊಳ್ಳುವುದಕ್ಕೆ ಶ್ರಮಪಡಬೇಕಾಗಿಲ್ಲ. ಆ ಕೆಲಸವನ್ನು ಅವರ ಕೃತಿಗಳೇ ಮಾಡುತ್ತವೆ. ಬದುಕಿನಲ್ಲಿ ಪರಂಪರೆಯು ಒಡ್ಡುವ ನಿಕಷಗಳನ್ನು ಒಳಿತು–ಕೆಡುಕಿನ ಸಾಂಸ್ಕೃತಿಕ ಘಟಕಗಳಲ್ಲಿ ವಿಭಜಿಸಿಕೊಂಡು, ಒಳಿತಿನ ಆಶಯಗಳನ್ನು ಸಂಸ್ಕೃತಿಯ ಪ್ರಾಥಮಿಕ ಘಟಕಗಳಾಗಿ ಸ್ವೀಕರಿಸಿ, ಕೆಡುಕನ್ನು ಅದರ ವಿಘಟನ ನೆಲೆಯಲ್ಲಿ ಆಧುನಿಕತೆಯ ಒಳಿತಿನ ಪ್ರತಿ ಆಶಯಗಳಿಗೆ ಮುಖಾಮುಖಿಯಾಗಿಸಿ, ಅವೆರಡರ ಸಂಘರ್ಷದಲ್ಲಿ ಆಧುನಿಕತೆಯನ್ನು ಸ್ವೀಕರಿಸುತ್ತಾರೆ. ಆದರೆ ಪರಂಪರೆಯ ಕೆಡುಕನ್ನು ವಿರೋಧಿಸಲು ಹೋಗಿ, ಆಧುನಿಕತೆಯ ಕೆಡುಕಿಗೆ ತೆಕ್ಕೆಬೀಳುವ ಪ್ರಕ್ರಿಯೆಯನ್ನು ಕಾರಂತರು ತಿರಸ್ಕರಿಸುತ್ತಾರೆ. ಇಂಥದೊಂದು ಪ್ರಕ್ರಿಯೆಯಿಂದ ವ್ಯಕ್ತಿಯನ್ನು ಪೂರ್ಣವಾಗಿ ಎತ್ತುವ ಪ್ರತಿ ಆಶಯದ ಸ್ಥಿತ್ಯಂತರವನ್ನು ಕಾರಂತರು ಅಷ್ಟಾಗಿ ಎದುರಿಸಿಲ್ಲ. ಅದು ಕೆಲವು ಕಡೆ ಸಾಧ್ಯವಾಗಿದ್ದರೂ ಭವಿಷ್ಯದಲ್ಲಿ ಪುನರಾವರ್ತನೆಯಾಗಬಹುದೆಂಬ ಸಾಧ್ಯತೆಯನ್ನು ವ್ಯಕ್ತಿಯ

---

೧೧. ಎನ್.ಕೆ. ಕೋದಂಡರಾಮ, 'ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ', ಪುಟ. ೩೯.

ನಡವಳಿಕೆ ಸ್ವಭಾವದ ವಿವರಣೆಯಲ್ಲೇ ಧ್ವನಿಸುತ್ತಾರೆ. ಆಧುನಿಕತೆಯು ತರುವ ಗೊಂದಲಗಳನ್ನು ಯುವ ಪೀಳಿಗೆಗೆ ಪ್ರಧಾನವಾಗಿ ಮುಖಾಮುಖಿಯಾಗಿಸುತ್ತಾರೆ. ಇಳಿವಯಸ್ಸಿನ ವ್ಯಕ್ತಿಗಳು ತಾವು ನಂಬಿದ ಮೌಲ್ಯಗಳಲ್ಲಿ ನಿರುಮ್ಮಳವಾಗಿ ಬದುಕುವುದನ್ನು ಸ್ಥಾಯಿಯಾಗಿಸುತ್ತಾರೆ. ಇಲ್ಲಿ ಪರಂಪರೆಯ ಸಾಂಸ್ಕೃತಿಕ ಆಶಯಗಳದ್ದೇ ಮೇಲುಗೈಯಾಗುತ್ತದೆ. ಭಾರತೀಯ ಸಮಾಜವು ತನ್ನನ್ನು ವರ್ಗೀಕರಣದಲ್ಲಿ ವಿಭಜಿಸಿಕೊಂಡಿರುವ ಹಿನ್ನೆಲೆಯಲ್ಲಿ ವ್ಯಕ್ತಿಯ ಮೂರು ಆಶಯಗಳು ತರತಮ ಮೌಲ್ಯಗಳನ್ನು ಸೃಷ್ಟಿಸುವುದನ್ನು ಮತ್ತು ಅವುಗಳಿಗೆ ಅರ್ಥ ದೊರಕಿಸುವ ಸಂದರ್ಭದಲ್ಲಿ ವ್ಯಕ್ತಿಯ ಚಹರೆಯು ತನ್ನ ಮೂಲ ತುಡಿತಗಳನ್ನು ಕಳೆದುಕೊಳ್ಳುವ ಸಂಧಿಕಾಲದ ಸ್ಥಿತ್ಯಂತರವನ್ನು ಕಾರಂತರು ಮಾನವೀಯವಾಗಿ ಹಾಗೆಯೇ ನಿಷ್ಠುರವಾಗಿ ದಾಖಲಿಸುತ್ತಾರೆ.

ಭಾರತೀಯ ಸನಾತನ ಮೌಲ್ಯಗಳನ್ನು ಬದುಕಿಗೆ ಅಳವಡಿಸಲು ಪ್ರಯತ್ನಪಟ್ಟವರಲ್ಲಿ ವಿನಾಯಕ ಕೃಷ್ಣ ಗೋಕಾಕರೂ ಒಬ್ಬರು. ಇದನ್ನು ಅವರ ಕಾವ್ಯ ಆಗುಮಾಡುವ ರೀತಿಯಲ್ಲಿಯೇ ಗದ್ಯವೂ ಮಾಡುತ್ತದೆ. ಆದರೆ ಕಾಲಕ್ಕೆ ಅನುಗುಣವಾದ ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳುತ್ತಾರೆ. ಮೂರು ಭಾಗವಾಗಿ ಹರಿದು ಬಂದಿರುವ ಅವರ ಮಹತ್ವಾಕಾಂಕ್ಷೆಯ ಕಾದಂಬರಿ 'ಸಮರಸವೇ ಜೀವನ' ಕನ್ನಡ ಕಾದಂಬರಿ ಪರಂಪರೆಯಲ್ಲಿ ಅಷ್ಟಾಗಿ ಹೆಸರು ಮಾಡದೆ ಮರೆಯಾಗಿಬಿಟ್ಟಿದೆ. ಆದರೆ ಈ ಕೃತಿಯ ಕಾಣ್ಕೆ ಎರಡು ಸಂಸ್ಕೃತಿಗಳ ನಡುವಿನ ಸಂಘರ್ಷದಲ್ಲಿದೆ. ಇಲ್ಲಿ ಭಾರತೀಯ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳಲ್ಲಿ ಬದುಕು ರೂಪುಗೊಳ್ಳುವ ಸಾಧ್ಯತೆಗಳನ್ನು ಶೋಧಿಸುವುದೇ ಪ್ರಧಾನ ಆಶಯವಾಗಿದೆ.

"ಮೊದಲ ತಲೆಮಾರಿನ ಸಂಘರ್ಷದ ಪರಿಕಲ್ಪನೆ ಉನ್ನತ ವಲಯದಲ್ಲಿಯೇ ವ್ಯಕ್ತವಾಗಿದೆ. ಇಲ್ಲಿನ ವೈದಿಕ ಧಾರೆಯ ಶ್ರೇಷ್ಠ ಮಾದರಿಯ ಕಥನಕಲೆಯನ್ನು ಮಾಸ್ತಿ ರೂಪಿಸಿದ್ದಾರೆ. ಅವರ ಸೃಜನಶೀಲತೆ ಆ ಸಂಸ್ಕೃತಿಯ ಮಾನವೀಯ ಸಾಧ್ಯತೆಗಳನ್ನು ಮೈಗೂಡಿಸಿಕೊಂಡಿದೆ. ಆದ್ದರಿಂದ ಅವರು ಪೂರ್ಣ ಪ್ರಮಾಣದ ಸಂಘರ್ಷ ಸ್ವರೂಪವನ್ನು ಅಭಿವ್ಯಕ್ತಿಸಲು ಸಾಧ್ಯವಾಗಲಿಲ್ಲ. ವೈಯಕ್ತಿಕತೆಯನ್ನು ತಿರಸ್ಕರಿಸುವ ಸಂಸ್ಕೃತಿ, ಮಾನವನ ಆಶೋತ್ತರಗಳನ್ನು ಮಾನವೀಯಗೊಳಿಸುವ ಸಂದರ್ಭದಲ್ಲಿ ಸಾರ್ವತ್ರಿಕಗೊಳಿಸುತ್ತದೆ. ವಿಘಟನೆಗಳನ್ನು ಸಮಾಜ ಒಪ್ಪುವ ರೀತಿಯಲ್ಲೇ ಪರಿಹರಿಸುತ್ತದೆ. ಇದಕ್ಕೆ ವಿರುದ್ಧವಾದ ಘಟಕಗಳನ್ನು ಸೃಷ್ಟಿಸುವ ಕುವೆಂಪು, ಶೂದ್ರ ಸಂಸ್ಕೃತಿಯ ಚೈತನ್ಯವನ್ನು ಬದುಕು ವಿರೋಧಿಯಾದ ಎಲ್ಲಾ ಆಶಯಗಳನ್ನೂ ವಿರೋಧಿಸುವುದಕ್ಕಾಗಿ ದುಡಿಸಿಕೊಳ್ಳುತ್ತಾರೆ. ಹಾಗೆಯೇ ಆ ಸಂಸ್ಕೃತಿಯ ಅನನ್ಯತೆಯನ್ನೂ, ಬದುಕು ವಿಘಟನೆಗೊಳ್ಳುತ್ತಿರುವ ಸಂದರ್ಭದಲ್ಲೇ ಎದುರುಗೊಳ್ಳುತ್ತಾರೆ. ಒಂದು ನಿರ್ದಿಷ್ಟ ಆವರಣದ ಸಮಗ್ರ ವಿವರಗಳನ್ನು ಕುವೆಂಪು ಕೊಡುವ ಹಾಗೆ ಈ ತಲೆಮಾರಿನ ಯಾರೂ ಕೊಡುವುದಿಲ್ಲ. ಕಾರಂತರು ಈ ತಲೆಮಾರಿನ ದೈತ್ಯ ಪ್ರತಿಭೆ. ಆದ್ದರಿಂದ ಅವರು ಕಾದಂಬರಿ

ಪ್ರಕಾರಕ್ಕೆ ಹಲವಾರು ಮಾದರಿಗಳನ್ನು ಕೊಟ್ಟಿದ್ದಾರೆ. ಅವರ ಸೃಜನಶೀಲತೆ ಒಂದು ಆವರಣದ ಸೀಮಿತ ವಲಯದ ವಿವರಗಳಲ್ಲಿ ಮಾತ್ರ ಕೇಂದ್ರೀಕೃತಗೊಳ್ಳುತ್ತದೆ. ಆದ್ದರಿಂದ ಅವರು ಅದರ ಪ್ರಾತಿನಿಧಿಕ ಸಕಲ ಅಂಶಗಳನ್ನು ಒಂದು ಕೌಟುಂಬಿಕ ವರ್ತುಲದಲ್ಲಿ ಕೊಡಲು ಪ್ರಯತ್ನಿಸುತ್ತಾರೆ. ಕುವೆಂಪು ಅವರ ಹಾಗೆ ಇವರು ಸೂಕ್ಷ್ಮಗಳನ್ನು ಕೆದಕುವುದಿಲ್ಲ. ಸಂಸ್ಕೃತಿಯ ಪ್ರಾತಿನಿಧಿಕ ಹೊಳಹುಗಳನ್ನು ಮಾತ್ರ ಅದರೆಲ್ಲ ಸಾಧ್ಯತೆಗಳಲ್ಲಿ ವ್ಯಕ್ತಪಡಿಸುತ್ತಾರೆ."[೧೨] ಈ ತಲೆಮಾರಿನಲ್ಲಿ ವಿಘಟನೆಯನ್ನು ಒಂದು ಪರಮ ಮೌಲ್ಯವಾಗಿ ಸ್ವೀಕರಿಸಿದವರು ರಾವ್‌ಬಹದ್ದೂರರು ಮಾತ್ರ. ಈ ದಿಕ್ಕಿನ ಕನ್ನಡದ ಏಕೈಕ ಕೃತಿ ಅದು. ಉದ್ದಕ್ಕೂ ವಿಘಟನೆಯ ಹೊಳಹುಗಳು ಮೈನವಿರೇಳಿಸುವಂತೆ ಹಾಸುಹೊಕ್ಕಾಗಿವೆ. ಆದ್ದರಿಂದ ಅಲ್ಲಿನ ಯಾವ ಪಾತ್ರವೂ ತನ್ನ ಮಹತ್ವಾಕಾಂಕ್ಷೆಯನ್ನು ವ್ಯಕ್ತಪಡಿಸುತ್ತಿಲ್ಲವೇನೋ ಎಂಬ ಅನುಮಾನ ಉಂಟಾಗುತ್ತದೆ. ಈ ತಲೆಮಾರಿನ ಶ್ರೇಷ್ಠ ಸೃಜನಶೀಲ ಪ್ರತಿಭೆಗಳು ಇಂದಿಗೂ ಪ್ರತಿಕ್ರಿಯೆಯನ್ನು ಉನ್ನತ ಮಟ್ಟದಲ್ಲಿ ಅಪೇಕ್ಷಿಸುವುದು ಅದರ ಜೀವಂತಿಕೆಯ ನಿದರ್ಶನವಾಗಿದೆ.

ನವೋದಯ ಸಂದರ್ಭದಲ್ಲಿ ಬಹುತೇಕ ಸಾಹಿತಿಗಳು 'ಕಲೆಗಾಗಿ ಕಲೆ' ಎಂಬ ತತ್ವಕ್ಕೆ ಅಂಟಿಕೊಂಡವರು. ವಚನ ಚಳುವಳಿಯ ನಂತರ ಸಾಮಾಜಿಕ ಸಮಸ್ಯೆಗಳ ನಿವಾರಣೆಯನ್ನೇ ಮುಖ್ಯ ಉದ್ದೇಶವಾಗಿರಿಸಿಕೊಂಡು ಸಾಹಿತ್ಯ ರಚನೆಗೆ ತೊಡಗಿದವರು ಪ್ರಗತಿಶೀಲರೆಂದು ಹೇಳಬಹುದು. ಮಾರ್ಕ್ಸ್‌ವಾದಿ ನಿಲುವುಗಳೊಂದಿಗೆ, ಸಾಮಾಜಿಕ ಉದ್ದೇಶಕ್ಕಾಗಿ ಸಾಹಿತ್ಯ, ಜನಸಾಮಾನ್ಯರಿಗಾಗಿ ಸಾಹಿತ್ಯ ಎಂಬ ಧೋರಣೆಯ ಹಿನ್ನೆಲೆಯಲ್ಲಿ ಸಾಹಿತ್ಯ ರಚನೆಗೆ ತೊಡಗಿದ್ದ ಪ್ರಗತಿಶೀಲರು ಸಮಾಜದ ಹಲವು ತರಹದ ಸಮಸ್ಯೆಗಳಿಗೆ ಸಾಹಿತ್ಯದ ಮೂಲಕ ಸ್ಪಂದಿಸಿದವರು. ಈ ದೃಷ್ಟಿಯಿಂದ ಪ್ರಗತಿಶೀಲ ಚಳವಳಿ ಏಕಕಾಲಕ್ಕೆ ಸಾಮಾಜಿಕ ಚಳುವಳಿಯೂ, ಸಾಹಿತ್ಯಿಕ ಚಳವಳಿಯೂ ಆಗುತ್ತದೆ.

ಸಾಹಿತಿಯಾದವನು ಎಲ್ಲಾ ರೀತಿಯ ದೌರ್ಜನ್ಯ, ದಬ್ಬಾಳಿಕೆ, ಶೋಷಣೆಯನ್ನು ಎದುರಿಸಬೇಕು, ಪ್ರತಿಭಟಿಸಬೇಕು. ಜನಾಂಗೀಯ ದ್ವೇಷ, ವರ್ಣತಾರತಮ್ಯ, ಜಾತೀಯತೆ, ಲಿಂಗತಾರತಮ್ಯ, ಆರ್ಥಿಕ ಅಸಮಾನತೆ ಮುಂತಾದವುಗಳ ವಿರುದ್ಧ ಸಾಹಿತಿಯಾದವನು ಹೋರಾಡಬೇಕು. ಅವುಗಳನ್ನು ಬೇರು ಸಹಿತ ಕಿತ್ತೊಗೆಯಲು ಪ್ರಯತ್ನಿಸಬೇಕು. ಈ ನಿಟ್ಟಿನಲ್ಲಿ ಸಾಹಿತಿಯ ಲೇಖನಿ ಮಹಾಶಸ್ತ್ರವಾಗಬೇಕು. ಸಾಹಿತಿ ಮತ್ತು ಅವನ ಸಾಹಿತ್ಯ ಸಾಮಾಜಿಕ ಸಮಸ್ಯೆಗಳ ಮೂಲೋತ್ಪಾಟನೆಗೆ ಕಂಕಣಬದ್ಧವಾಗಬೇಕು. ವಿಶೇಷವಾಗಿ ಭಾರತೀಯ ಸಮಾಜದ ಪಿಡುಗು ಆಗಿರುವ ಅಸ್ಪೃಶ್ಯತೆಯನ್ನು ತೊಡೆದುಹಾಕುವಲ್ಲಿ ಸಾಹಿತಿಯು ಮುಖ್ಯ ಪಾತ್ರ

೧೨ ಎನ್.ಕೆ. ಕೋದಂಡರಾಮ, 'ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ', ಪುಟ. ೧೦೫, ೧೦೬.

ನಿರ್ವಹಿಸಬೇಕಾಗಿದೆ ಎಂಬುದು ಪ್ರಗತಿಶೀಲರ ಮುಖ್ಯ ತತ್ವವಾಗಿತ್ತು. ಕಾದಂಬರಿಯಲ್ಲಿ ವೇಶ್ಯಾ ಸಮಸ್ಯೆಯನ್ನು, 'ಪುರುಷಾವತಾರ'ದಲ್ಲಿ ಅನಾಥ ಮಕ್ಕಳ ಸಮಸ್ಯೆಯನ್ನು ಹಾಗೂ 'ಬಿಡುಗಡಯ ಬೇಡಿ'ಯಲ್ಲಿ ಪುರುಷಪ್ರಧಾನ ಸಮಾಜದಲ್ಲಿ ಸ್ತ್ರೀಯರ ಶೋಷಣೆ ಹೇಗೆ ನಡೆಯುತ್ತದೆಂಬುದನ್ನು ತ.ರಾ.ಸು. ಚರ್ಚಿಸಿದ್ದಾರೆ.

ಬಸವರಾಜ ಕಟ್ಟೀಮನಿಯವರು ಕನ್ನಡ ಪ್ರಗತಿಶೀಲಪಂಥದ ಪ್ರಮುಖ ಸಾಹಿತಿ. ಬಡತನದ ಬೇಗೆಯಲ್ಲಿ ಬೆಂದಿದ್ದ ಕಟ್ಟೀಮನಿಯವರು ಸಹಜವಾಗಿಯೇ ಸಮಾಜದ ಅಸಮಾನತೆ, ಶೋಷಣೆ, ಅನ್ಯಾಯ, ಡಾಂಭಿಕತೆ, ಮೋಸ, ಭ್ರಷ್ಟತೆಗಳ ಬಗೆಗೆ ತೀವ್ರ ಅಸಹನೆ ಮತ್ತು ಆಕ್ರೋಶಗಳನ್ನು ವ್ಯಕ್ತಪಡಿಸಿದ್ದಾರೆ. ವೃತ್ತಿಯಲ್ಲಿ ಪತ್ರಿಕೋದ್ಯಮಿಯಾಗಿದ್ದ ಕಟ್ಟೀಮನಿಯವರ ಸಾಹಿತ್ಯ ಕೃತಿಗಳು ಅನೇಕ ಸಮಸ್ಯೆಗಳನ್ನು ಚರ್ಚೆಗೆ ಎತ್ತಿಕೊಂಡಿವೆ. 'ಜರತಾರಿ ಜಗದ್ಗುರು' ಮತ್ತು 'ಮೋಹದ ಬಲೆಯಲ್ಲಿ' ಕಾದಂಬರಿಗಳಲ್ಲಿ ಧಾರ್ಮಿಕ ವಲಯದ, ವಿಶೇಷವಾಗಿ ಮಠಗಳ ಮತ್ತು ಜಗದ್ಗುರುಗಳ ಡಾಂಭಿಕತೆ, ಮೋಸ, ಅನೈತಿಕತೆ, ಭ್ರಷ್ಟಾಚಾರ ಮತ್ತು ಸುಲಿಗೆಕೋರತನವನ್ನು ಚಿತ್ರಿಸಲಾಗಿದೆ. 'ಜ್ವಾಲಾಮುಖಿಯ ಮೇಲೆ' ಕಾದಂಬರಿಯು ಬಂಡವಾಳಶಾಹಿ ಮತ್ತು ಕಾರ್ಮಿಕ ವರ್ಗದ ನಡುವಿನ ಸಂಘರ್ಷವನ್ನು ಅಂದರೆ ವರ್ಗ ಹೋರಾಟವನ್ನು ವಸ್ತುವಾಗಿ ಒಳಗೊಂಡಿದೆ. ಅವರ 'ಹರಿಜನಾಯಣ'ವು ಜಾತಿ ಸಮಸ್ಯೆಯನ್ನು ವಿಶ್ಲೇಷಿಸಿದರೆ 'ಬೀದಿಯಲ್ಲಿ ಬಿದ್ದವಳು' ಕೃತಿಯು ವೇಶ್ಯಾಸಮಸ್ಯೆಯನ್ನು ಚರ್ಚೆಗೊಳಪಡಿಸಿದೆ.

ಸಾಹಿತಿಯಾಗಿ ನೂರಕ್ಕೂ ಹೆಚ್ಚು ಕಾದಂಬರಿಗಳನ್ನು ಒಂಭತ್ತು ಕಥಾಸಂಕಲನಗಳನ್ನು ರಚಿಸಿದ ಅ.ನ.ಕೃ. ಕರ್ನಾಟಕದಲ್ಲಿ ಪ್ರಗತಿಶೀಲ ಪಂಥವನ್ನು ಕಟ್ಟಿ ಮುನ್ನಡೆಸಿದವರು. ಕನ್ನಡ ಚಳುವಳಿಗಾರರಾಗಿ, ಸಮಾಜ ಸುಧಾರಕರಾಗಿ ಕನ್ನಡ ನಾಡು ನುಡಿಗೆ ಅಪಾರ ಕೊಡುಗೆ ನೀಡಿದ್ದಾರೆ. ಅ.ನ.ಕೃ. ಮುಖ್ಯವಾಗಿ ವೇಶ್ಯಾಸಮಸ್ಯೆಯ ಕಡೆಗೆ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ. ಸಾಮಾಜಿಕ ಸಮಸ್ಯೆಗಳನ್ನು ನಿರ್ಮೂಲನೆ ಮಾಡಬೇಕೆಂಬ ಅವರ ಕಾಳಜಿ ಸಾಹಿತ್ಯದಲ್ಲಿ ವ್ಯಕ್ತವಾಗಿದೆ. ಅವರ 'ನಗ್ನಸತ್ಯ', 'ಶನಿಸಂತಾನ' ಮತ್ತು 'ಸಂಜೆಗತ್ತಲು' ಈ ಮೂರು ಕಾದಂಬರಿಗಳ ವಸ್ತು ವೇಶ್ಯಾಸಮಸ್ಯೆ. ಪ್ರಗತಿಶೀಲ ಪಂಥದ ತಾತ್ವಿಕತೆಗೆ ಅನುಗುಣವಾಗಿ ಅ.ನ.ಕೃ. ಕೃತಿಗಳಲ್ಲಿ ಸಾಮಾಜಿಕ ಪ್ರಜ್ಞೆ ಮೂಡಿಬಂದಿದೆ.

ಹೀಗೆ ಜನಸಾಮಾನ್ಯರ ಜೀವನ ಮತ್ತು ಸಮಕಾಲೀನ ಸಮಸ್ಯೆಗಳು ವಾಸ್ತವಿಕ ನೆಲೆಯಲ್ಲಿ ಸಾಹಿತ್ಯದಲ್ಲಿ ಚಿತ್ರಿತವಾದವು. ಎಲ್ಲಾ ರೀತಿಯ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಅನ್ಯಾಯ, ದೌರ್ಜನ್ಯ, ಶೋಷಣೆಗಳನ್ನು ಬಯಲಿಗೆಳೆದು ಪ್ರತಿಭಟಿಸಲಾಯಿತು. "ಸಾಹಿತ್ಯದಲ್ಲಿ ಒಂದು ಬಗೆಯ ಸಾಮಾಜಿಕ ಪ್ರಜ್ಞೆಗೆ ಮಹತ್ವ ಬಂದಿತು. ಸಮಾಜದ ಸಮಸ್ಯೆಗಳ ಇರವಿನ ತಿಳುವಳಿಕೆಯಷ್ಟೆ ಸಾಮಾಜಿಕ ಪ್ರಜ್ಞೆಯಲ್ಲ ಎಂಬುದು ನಿಜ. ಆದರೆ ನಾವು ಬಯಸುವ

ನಿರೀಕ್ಷಿಸುವ ಸಾಮಾಜಿಕ ಪ್ರಜ್ಞೆ ಮೂಡಲು ಮೊದಲು ಅಗತ್ಯವಾಗಿರುವುದು ಸಮಾಜದ ಸಮಸ್ಯೆಗಳನ್ನು ಕುರಿತು ನಿರ್ಭಯವಾಗಿ ಬರೆಯುವುದಕ್ಕೆ ಅವಕಾಶವಿರುವ ವಾತಾವರಣ. ಇಂತಹ ವಾತಾವರಣವನ್ನು ನಿರ್ಮಿಸುವುದರಲ್ಲಿ ಪ್ರಗತಿಶೀಲ ಸಾಹಿತ್ಯ ಪ್ರಮುಖ ಪಾತ್ರ ವಹಿಸಿತು"[೧೩] ಎಂಬ ಮಾತುಗಳಿಂದ ಕನ್ನಡ ಪ್ರಗತಿಶೀಲ ಚಳುವಳಿಯ ಸಾಮಾಜಿಕ ಮತ್ತು ಸಾಹಿತ್ಯಿಕ ಕೊಡುಗೆಯನ್ನು ಅರಿಯಬಹುದು. ಇದು ಏಕಕಾಲದಲ್ಲಿ ಸಾಮಾಜಿಕ ಚಳುವಳಿಯೂ ಸಾಹಿತ್ಯಿಕ ಚಳುವಳಿಯೂ ಆಗಿತ್ತು ಎಂಬುದು ತಿಳಿಯುತ್ತದೆ.

ದಲಿತ ಬಂಡಾಯ ಚಳುವಳಿಯು ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಚಳುವಳಿಯಾಗಿ ಸಮಾಜ ಪರಿವರ್ತನೆಯ ಕಾರ್ಯದಲ್ಲಿ ತೊಡಗಿಸಿಕೊಂಡಿತ್ತು. ಪರಿಣಾಮವಾಗಿ ಕೆಳವರ್ಗಗಳು ಸಂವಿಧಾನದತ್ತವಾದ ಹಕ್ಕುಗಳನ್ನು ಬಳಸಿ ತಮ್ಮ ಬದುಕನ್ನು ಸುಧಾರಿಸಿಕೊಂಡರು. ದಲಿತ ಬಂಡಾಯ ಚಳುವಳಿಯು ಏಕಕಾಲಕ್ಕೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಚಳುವಳಿಯಾಗಿದೆ. ಬಂಡಾಯ ಸಾಹಿತ್ಯ ಸಂಘಟನೆ ಇತರ ಸಾಮಾಜಿಕ, ಸಾಂಸ್ಕೃತಿಕ ಸಂಘಟನೆಗಳೊಂದಿಗೆ ನಿರಂತರವಾಗಿ ಸಂಪರ್ಕವಿರಿಸಿಕೊಂಡು ಅಂದರೆ ದಲಿತ ಸಂಘರ್ಷ ಸಮಿತಿ, ಸಮುದಾಯ, ಸಿ.ಪಿ.ಐ., ಸಿ.ಪಿ.ಎಂ. ಮುಂತಾದ ಪ್ರಗತಿಪರ ಸಂಘಟನೆಗಳಲ್ಲಿ ಕಾರ್ಯಕರ್ತರಾಗಿ ಕ್ರಿಯಾಶೀಲರಾಗಿದ್ದು, ಅವುಗಳ ಸಿದ್ಧಾಂತಗಳಿಗೆ ಬದ್ಧವಾಗಿದ್ದಾರಲ್ಲದೆ, ಇಂಥದ್ದೇ ಸೈದ್ಧಾಂತಿಕ ಬದ್ಧತೆಯುಳ್ಳ, ಸಾಮಾಜಿಕ ಕಾಳಜಿಯ ಸಾಹಿತ್ಯ ಸೃಷ್ಟಿಯಲ್ಲಿ ನಿರತರಾದರು.

ಬಂಡಾಯ ಸಾಹಿತ್ಯ ದಲಿತರೂ ಒಳಗೊಂಡಂತೆ ಎಲ್ಲಾ ಜಾತಿ ವರ್ಗದ ಪ್ರಗತಿಗಾಮಿ ಸಾಹಿತಿಗಳು ಸೃಷ್ಟಿಸುವ ಪ್ರತಿಭಟನಾ ಸಾಹಿತ್ಯವಾಗಿದೆ. 'ಪ್ರಗತಿಪರ ಆಶಯಗಳನ್ನು ಸ್ಫೋಟಿಸುವ ಯಾರೇ ಆದರೂ ಬಂಡಾಯ ಸಾಹಿತಿಗಳೆನಿಸುತ್ತಾರೆ' ಎಂಬ ಬರಗೂರರ ವ್ಯಾಖ್ಯೆ ಅರ್ಥಪೂರ್ಣವಾಗಿದೆ.

ದಲಿತ ಬಂಡಾಯ ಸಾಹಿತ್ಯದ ಮುಖ್ಯ ಉದ್ದೇಶ ಎಲ್ಲಾ ರೀತಿಯ ಅಸಮಾನತೆ, ಶೋಷಣೆಗಳ ನಿರ್ಮೂಲನೆ, ಸಾಮಾಜಿಕ ವ್ಯವಸ್ಥೆಯ ಪುನರ್ರಚನೆ. ಈ ನಿಟ್ಟಿನಲ್ಲಿ ದಲಿತ ಬಂಡಾಯ ಚಳವಳಿಗಳ ಅಡಿಯಲ್ಲಿ ನಿರ್ಮಾಣವಾದ ಕಾದಂಬರಿ ಹಾಗೂ ಕಥೆಗಳಲ್ಲಿನ ಆಶಯಗಳನ್ನು ಕೆಲವು ಪ್ರಾತಿನಿಧಿಕ ಕೃತಿಗಳ ಆಧಾರದಿಂದ ನೋಡಬಹುದು. ದಲಿತ ಬಂಡಾಯ ಕಥಾಸಾಹಿತ್ಯದಲ್ಲಿ ಮುಖ್ಯವಾಗಿ ಎರಡು ಮಾದರಿಯ ಬರವಣಿಗೆಯನ್ನು ಗುರುತಿಸಬಹುದು. ಒಂದು ವರ್ಗತಾರತಮ್ಯ, ಶೋಷಕ ವರ್ಗದ ಅಟ್ಟಹಾಸ, ಶೋಷಿತರ ಬವಣೆ, ಇತ್ಯಾದಿಗಳನ್ನು ಚಿತ್ರಿಸಿ, ಶೋಷಿತ ವರ್ಗ ಎಚ್ಚೆತ್ತು, ಶೋಷಕ ವರ್ಗದ ವಿರುದ್ಧ ಬಂಡೆದ್ದು ಬದಲಾವಣೆ

---

೧೩. ಎಲ್.ಎಸ್. ಶೇಷಗಿರಿರಾವ್, 'ಹೊಸಗನ್ನಡ ಸಾಹಿತ್ಯ ಚರಿತ್ರೆ', ೧೯೯೩, ಪುಟ. ೬೧.

ತಂದಂತೆ, ಇಲ್ಲವೆ ಪ್ರತಿಭಟಿಸುವಂತೆ ಚಿತ್ರಿಸುವುದು. ಎರಡನೆಯದು ಶೋಷಕ ವರ್ಗದ ಶಕ್ತಿಗುಂದಿದಂತೆ ಪ್ರತ್ಯಕ್ಷ ಇಲ್ಲವೇ ಅಪ್ರತ್ಯಕ್ಷವಾಗಿ ಸಾಂಕೇತಿಕವಾಗಿ ಸೂಚಿಸುವುದು.

ಮೊದಲನೆಯ ಕಥಾ ಮಾದರಿಯಲ್ಲಿನ ಕಥನಸಾಹಿತ್ಯದ ಆಶಯಗಳುಳ್ಳ ಸಾಹಿತ್ಯವನ್ನು ಇಲ್ಲಿ ಕೆಳಕಂಡಂತೆ ಗಮನಿಸಬಹುದು.

ಬರಗೂರು ರಾಮಚಂದ್ರಪ್ಪನವರ ಕಾದಂಬರಿ ಹಾಗೂ ಸಣ್ಣಕಥೆಗಳು ಸ್ವಾತಂತ್ರ್ಯೋತ್ತರ ಭಾರತದ ಗ್ರಾಮೀಣ ಸಮಾಜದಲ್ಲಿ ಅರೆ ಊಳಿಗಮಾನ್ಯ ವ್ಯವಸ್ಥೆ, ಜಮೀನ್ದಾರಿ ಪದ್ಧತಿ, ಅರೆಪಾಳೇಗಾರಿಕೆಗಳು ಜೀವಂತವಾಗಿದ್ದು, ಅವು ದುರ್ಬಲ ವರ್ಗಗಳನ್ನು ನಿಯಂತ್ರಿಸುತ್ತಾ ಯಾವ ರೀತಿ ಶೋಷಿಸುತ್ತಿವೆ ಎಂಬುದನ್ನು ಬರಗೂರರ ಸಾಹಿತ್ಯಗಳು ಚಿತ್ರಿಸುತ್ತವೆ. 'ಸೂರ್ಯ' ಕಾದಂಬರಿಯು ಬಂಡಾಯ ಧೋರಣೆಯನ್ನೊಳಗೊಂಡ ಕಾದಂಬರಿ. ವರ್ಣ, ವರ್ಗ, ಜಾತಿ ಸಂಕರವನ್ನು ಎತ್ತಿ ಹಿಡಿಯುವ, ಜಮೀನ್ದಾರಿ ಪದ್ಧತಿ ನಾಶಗೊಳ್ಳುತ್ತಿರುವುದನ್ನು ಸೂಚಿಸುತ್ತದೆ. 'ಒಂದು ಊರಿನ ಕಥೆ' ಕಾದಂಬರಿಯಲ್ಲಿ ಗ್ರಾಮೀಣ ಸಮಾಜದಲ್ಲಿನ ಭೂಮಾಲೀಕರ ಪಾಳೇಗಾರಿಕೆ, ಪುರೋಹಿತಶಾಹಿಯ ಪ್ರಾಬಲ್ಯವನ್ನು ಚಿತ್ರಿಸಲಾಗಿದೆ. ಜೊತೆಗೆ ದುರ್ಬಲ, ಶೋಷಿತ ವರ್ಗಗಳ ಪ್ರಾಬಲ್ಯವನ್ನು ಮುರಿಯುವ ಚಿತ್ರಗಳಿವೆ. ಕೆಳವರ್ಗದ ಯುವಕರು ಸುಶಿಕ್ಷಿತರಾಗಿ ಗೌಡ, ಪಟೇಲ ಮತ್ತು ಜೋಯಿಸರ ಪರಮಾಧಿಕಾರವನ್ನು ಪ್ರಶ್ನಿಸುತ್ತಾರೆ. ಮೂಢನಂಬಿಕೆಗಳಲ್ಲಿನ ಹುಸಿತನವನ್ನು ಬಯಲುಗೊಳಿಸುತ್ತಾರೆ. ಇದು ಸಮಕಾಲೀನ ರಾಜಕೀಯ, ಆಡಳಿತ ವ್ಯವಸ್ಥೆಯಲ್ಲಿ ದಲಿತ, ಹಿಂದುಳಿದ ಮತ್ತಿತರ ಶೋಷಿತ ವರ್ಗಗಳು ಪಾಲು ಪಡೆದು ತಮ್ಮ ಹಕ್ಕು ಅಧಿಕಾರ ಚಲಾಯಿಸುತ್ತಿರುವುದನ್ನು ಸೂಚಿಸುತ್ತದೆ. 'ಉಕ್ಕಿನ ಕೋಟೆ', 'ಬೆಂಕಿ', 'ಶಬರಿ' ಮುಂತಾದ ಕಾದಂಬರಿಗಳು ಇಂತಹುದೇ ವಸ್ತುಗಳನ್ನು ಒಳಗೊಂಡ ಕೃತಿಗಳು.

ಅರವಿಂದ ಮಾಲಗತ್ತಿಯವರ 'ಕಾರ್ಯ' ಕೃತಿಯು ದಲಿತ–ಬಂಡಾಯ ಸಾಹಿತ್ಯ ಚಳವಳಿಯ ಪ್ರಾತಿನಿಧಿಕ ಕಾದಂಬರಿ. ದಲಿತರ ಅಜ್ಞಾನ, ಅಂಧಶ್ರದ್ಧೆ ಮತ್ತು ಆಚರಣೆಗಳು ಈ ಕಾದಂಬರಿಯಲ್ಲಿ ಸಮರ್ಥವಾಗಿ ದಾಖಲಾಗಿವೆ. ಈ ಕೃತಿಯಲ್ಲಿ ಅಂತರ್ಗತವಾಗಿರುವ ಜಾತಿ–ವರ್ಣ ಸಂಕರಗಳು ಮತ್ತು ಶೀತಲ ಪ್ರತಿಭಟನೆಗಳು ಸಾಮಾಜಿಕ ಬದಲಾವಣೆಯನ್ನು ಸೂಚಿಸುತ್ತವೆ. ಮಾಲಗತ್ತಿಯವರ ಸಣ್ಣಕಥೆ 'ತೂತಿನ ದುಡ್ಡು' ಕಥೆಯಲ್ಲಿ ನಮ್ಮ ಸಮಾಜದಲ್ಲಿ ಅನೇಕ ರೀತಿಯ ವಿರೋಧಾಭಾಸಗಳನ್ನು ಎತ್ತಿ ತೋರಿಸುತ್ತದೆ ಹಾಗೂ ಸಮಾಜ ಬದಲಾವಣೆಯ ಅಪೇಕ್ಷೆ ಇರುತ್ತದೆ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿನ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸಮಸ್ಯೆಗಳನ್ನು ವಿಶಿಷ್ಟ ರೀತಿಯಲ್ಲಿ ಅನಾವರಣಗೊಳಿಸಿ ವಿಶ್ಲೇಷಿಸುವುದು ಇಲ್ಲಿನ ವೈಶಿಷ್ಟ್ಯ ಓದುಗರನ್ನು ಚಿಂತನೆಗೊಳಪಡಿಸುತ್ತದೆ.

ದಲಿತಾನುಭವದ ಸಮರ್ಥ, ಅಧಿಕೃತ ದಾಖಲೆಯಾದ ದೇವನೂರ ಮಹಾದೇವರ 'ಒಡಲಾಳ' ದಲಿತರು ಸಮಾಜದಲ್ಲಿ ಶತಮಾನಗಳಿಂದಲೂ ಅನುಭವಿಸಿದ, ಅನುಭವಿಸುತ್ತಿರುವ ದಾರಿದ್ರ್ಯ, ಹಸಿವು, ಅವಮಾನ, ದಾಸ್ಯ, ಗುಲಾಮಗಿರಿ ಹಾಗೂ ಈ ಕಾರಣದಿಂದ ಉಂಟಾಗುವ ಸಂಘರ್ಷ, ಜಗಳ, ಮನಸ್ತಾಪ ಇತ್ಯಾದಿಗಳನ್ನು ಈ ಕಿರು ಕಾದಂಬರಿ ದಾಖಲಿಸುತ್ತದೆ. ಮೇಲ್ನೋಟಕ್ಕೆ ಇಲ್ಲಿ ಯಾವುದೇ ಜಾತಿ, ವರ್ಗಸಂಘರ್ಷಗಳಿಲ್ಲ, ವರ್ಣ ಸಂಕರವಿಲ್ಲ. ಶೋಷಕ ವರ್ಗದ ವಿರುದ್ಧ ಕೂಗಾಟ, ಚೀರಾಟಗಳಿಲ್ಲ. ಆದರೂ ಪ್ರತಿಭಟನೆ ಇದೆ. ಸಮಾಜ ಬದಲಾವಣೆಯ ಆಶಯವಿದೆ. 'ಕುಸುಮಬಾಲೆ'ಯಲ್ಲಿ ದಲಿತ ಜೀವನದ ದಾರುಣತೆಯ ಚಿತ್ರಣ ಸಮಾಜ ಬದಲಾವಣೆಯ ಆಶಯ ಅಡಗಿದೆ. ಸಾಮಾಜಿಕ ನಿಯಮ ಮತ್ತು ನಿಷೇಧಗಳ ಉಲ್ಲಂಘನೆಯಲ್ಲಿ ಬದಲಾವಣೆಯ ಆಶಯವಿರುತ್ತದೆ. ಅಂತರ್‌ಜಾತಿ ಲೈಂಗಿಕ ನಿಷೇಧಗಳ ಉಲ್ಲಂಘನೆಯ ಘಟನೆಗಳು ಚಿತ್ರಿತವಾಗಿದೆ. ದೇವನೂರರ 'ಗ್ರಸ್ತರು', 'ಒಂದು ದಹನದ ಕಥೆ', 'ಡಾಂಬರು ಬಂದುದು', 'ಮೂಡಲ ಸೀಮೆಲಿ ಕೊಲೆಗಿಲೆ ಮುಂತಾಗಿ', 'ಅಮಾಸ', 'ಮಾರಿಕೊಂಡವರು' ಕಥೆಗಳಲ್ಲಿ ಶೋಷಣೆಯ ಚಿತ್ರಣವನ್ನು, ದಲಿತರ ಅಂತರಂಗದಲ್ಲಿ ಶೋಷಕ ವರ್ಗದ ವಿರುದ್ಧ ಹೊಗೆಯಾಡುತ್ತಿರುವ ಕೋಪ, ದ್ವೇಷ, ಪ್ರತೀಕಾರ ಭಾವನೆಗಳು ಭವಿಷ್ಯದಲ್ಲಿ ಸ್ಫೋಟಗೊಳ್ಳಲಿದೆ ಎಂಬುದನ್ನು ಪಾತ್ರಗಳ ಮೂಲಕ ಚಿತ್ರಿಸಿದ್ದಾರೆ.

ಕಾಳೇಗೌಡ ನಾಗವಾರರ 'ಬೆಟ್ಟಸಾಲು ಮಳೆ', 'ಅಲೆಗಳು', 'ಈ ಮಂಜಿನೊಳಗೆ', 'ಕಣ್ಣಾಚೆಗೆ' ಕೃತಿಗಳು ಸಾಮಾಜಿಕ ಕಾಳಜಿ, ಬಂಡಾಯ ಪ್ರಜ್ಞೆ, ದಟ್ಟವಾಗಿರುವ ದಲಿತರು, ಶ್ರಮಜೀವಿಗಳು, ರೈತರು ಮತ್ತು ಮಹಿಳೆಯರು ಮುಂತಾದ ದುರ್ಬಲ ವರ್ಗದವರ ಪರವಾದ ಕಾಳಜಿ ಹೊಂದಿರುವ ಕೃತಿಗಳಾಗಿವೆ.

ಕುಂ. ವೀರಭದ್ರಪ್ಪನವರ ಕಥೆ ಕಾದಂಬರಿಗಳಲ್ಲಿಯೂ ಗ್ರಾಮೀಣ ಜೀವನದಲ್ಲಿನ ಬಡತನ, ಹಸಿವು, ಜಾತಿ ವ್ಯವಸ್ಥೆ, ಅನಕ್ಷರತೆ, ವರ್ಗ ವರ್ಣವ್ಯವಸ್ಥೆಯ ಕ್ರೌರ್ಯ, ಜಮೀನ್ದಾರಿ ಪದ್ಧತಿಯ ಕರಾಳಮುಖಗಳು, ಅಸ್ಪೃಶ್ಯತೆ ಇತ್ಯಾದಿಗಳನ್ನು ಒಳಗೊಂಡಿದೆ. 'ಇನ್ನಾದರೂ ಸಾಯಬೇಕು', 'ಡೋಮ ಮತ್ತಿತರ ಕಥೆಗಳು', 'ಭಗವತಿ ಕಾಡು', 'ನಿಜಲಿಂಗ', 'ಅಪೂರ್ವ ಚಿಂತಾಮಣಿ ಕಥೆ', 'ಸೋಲ ಎಂಬ ನಾಯಿಯೂ ವಾಗಿಲಿ ಎಂಬ ಗ್ರಾಮವೂ' ಎಂಬ ಕಥಾಸಂಕಲನಗಳನ್ನು, 'ಕಪ್ಪು', 'ಬೇಲಿ ಮತ್ತು ಹೊಲ', 'ಆಸ್ತಿ', 'ಕೆಡದ ಮಳೆ', 'ಬೇಲಿಯ ಹೂಗಳು', 'ಕೊಟ್ರ ಹೈಸ್ಕೂಲಿಗೆ ಸೇರಿದ್ದು', 'ಯಾಪಿಲ್ಲು' ಮತ್ತು 'ಅರಮನೆ' ಕಾದಂಬರಿಗಳನ್ನು ರಚಿಸಿದ್ದಾರೆ. ಕುಂ.ವೀ. ಅವರ ಸಾಹಿತ್ಯದಲ್ಲಿ ಶ್ರಮಜೀವಿಗಳ ಕರಾಳ ಸ್ಥಿತಿ, ಬಡತನ, ದಟ್ಟ ದಾರಿದ್ರ್ಯ, ಮೇಲ್ವರ್ಗದವರ ಉಳ್ಳವರ ದರ್ಪ, ಅಟ್ಟಹಾಸ, ದೌರ್ಜನ್ಯ, ಶೋಷಿತರ ಆಕ್ರೋಶ ಮತ್ತು ಪ್ರತಿಭಟನೆಗಳು ದಟ್ಟವಾಗಿ ನಿರೂಪಿತಗೊಂಡಿವೆ.

ಜಂಬಣ್ಣ ಅಮರಚಿಂತ ದಲಿತಬಂಡಾಯ ಚಳುವಳಿಯ ಪ್ರಮುಖ ಕಾದಂಬರಿಕಾರರು. ಅವರ 'ಕುರುಮಯ್ಯ ಮತ್ತು ಅಂಕುಶದೊಡ್ಡಿ' ಕಾದಂಬರಿ ಅನಕ್ಷರಸ್ಥರೂ, ಅಜ್ಞಾನಿಗಳೂ, ನಿರ್ಗತಿಕರೂ ಆದ ಕೊರವರ ಬದುಕಿನ ಕರಾಳತೆ ಕಾದಂಬರಿಯ ವಸ್ತು.

ಮ.ನ.ಜವರಯ್ಯನವರು ದಲಿತ-ಬಂಡಾಯ ಸಾಹಿತ್ಯ ಚಳುವಳಿಯ ಸಮರ್ಥ ಲೇಖಕರು. ಶೋಷಣೆ, ಕ್ರೌರ್ಯಗಳು ಮಿತಿಮೀರಿದಾಗ ಶೋಷಿತರು ಪ್ರತಿಭಟನೆಗೆ ಸಿದ್ಧವಾಗುವುದನ್ನು ತಮ್ಮ ಕಥಾಸಾಹಿತ್ಯದಲ್ಲಿ ಚಿತ್ರಿಸಿದ್ದಾರೆ. 'ಎಡೆ ಅನ್ನ', 'ಪ್ರಶ್ನೆ', 'ಕಾಲ', 'ಸ್ಫೋಟ' ಕಥೆಗಳು 'ಮಾಗಿ' ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ.

ಸಿದ್ದಲಿಂಗಯ್ಯನವರ 'ಮತಾಂತರ' ಕಥೆ ದಲಿತ ಚಳುವಳಿಯ ಹಿನ್ನೆಲೆಯಲ್ಲಿ ಸೃಷ್ಟಿಯಾಗಿರುವ ಭಾರತದ ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಗಳು ಆಳವಾಗಿ ಬೇರುಬಿಟ್ಟ ಪಿಡುಗುಗಳು ಎಂಬುದನ್ನು ತಿಳಿಸುತ್ತದೆ.

ಬಿ.ಟಿ. ಲಲಿತಾನಾಯಕ್ ಕನ್ನಡ ಮಹಿಳಾ ಸಾಹಿತಿಗಳಲ್ಲಿ ದಲಿತ-ಬಂಡಾಯ ಸಾಹಿತ್ಯ ಚಳುವಳಿಯೊಂದಿಗೆ ನೇರ ಸಂಪರ್ಕ ಹೊಂದಿರುವ ಪ್ರಮುಖರು. ಬುಡಕಟ್ಟು ಜನರ ಅದರಲ್ಲೂ ವಿಶೇಷವಾಗಿ ಲಂಬಾಣಿ ಜನಾಂಗದ ಸಂಸ್ಕೃತಿಯ ಸಂವೇದನೆಯನ್ನು ದಾಖಲಿಸಿದ ಅವರ 'ಹಬ್ಬ ಮತ್ತು ಬಲಿ' ಕಥಾಸಂಕಲನದ ಬಂಡಾಯ ಧೋರಣೆಯನ್ನು ಸ್ಪಷ್ಟವಾಗಿ ಚಿತ್ರಿಸುತ್ತದೆ. ಅವರ 'ಲೂಟಿ', 'ಕೊಲೆ' ಕಥೆಗಳು ಉಳ್ಳವರ ದಬ್ಬಾಳಿಕೆ, ಅಟ್ಟಹಾಸಗಳು ಮಿತಿಮೀರಿದಾಗ ಬಡವರು ಹಿಂಸಾತ್ಮಕ ಪ್ರತಿಭಟನಾ ಮಾರ್ಗವನ್ನು ಹಿಡಿಯುವುದು ಅನಿವಾರ್ಯವೆಂದು ಸೂಚ್ಯವಾಗಿ ಹೇಳುವ ಕಥೆಗಳಾಗಿವೆ. ಇವರೇ ಅಲ್ಲದೇ ಹೊಸತಲೆಮಾರಿನ ದಲಿತ-ಬಂಡಾಯ ಸಾಹಿತ್ಯದ ಬರಹಗಾರರಾದ ಮೊಗಳ್ಳಿ ಗಣೇಶ್, ಮುಳ್ಳೂರು ನಾಗರಾಜು, ಹನೂರು ಚನ್ನಪ್ಪ, ಅಮರೇಶ ನುಗಡೋಣಿ, ಬಿ.ಎಂ.ಪುಟ್ಟಯ್ಯ, ಹೆಬ್ಬಾಲೆ ನಾಗೇಶ್, ದೇವಯ್ಯ ಹರವೆ, ಹೊನ್ನು ಸಿದ್ದಾರ್ಥ ಹೀಗೆ ಅನೇಕ ದಲಿತ-ಬಂಡಾಯ ಸಾಹಿತಿಗಳು ಸಮಾಜದ ಕ್ರೌರ್ಯಕ್ಕೆ ಮತ್ತು ನಿರ್ಲಕ್ಷಿತ ಸಮುದಾಯವನ್ನೇ ಕೇಂದ್ರವಾಗಿಸಿಕೊಂಡು ಶೋಷಿತ ವರ್ಗದ ಕ್ರೌರ್ಯದ ವಿರುದ್ಧ ಪ್ರತಿಭಟನೆಯನ್ನು ತಮ್ಮ ಕೃತಿಗಳಲ್ಲಿ ವ್ಯಕ್ತಗೊಳಿಸಿದ್ದಾರೆ. ಅನೇಕ ಕೃತಿಗಳಲ್ಲಿ ಸಂಘರ್ಷ ಬಹಿರಂಗವಾಗಿ ನಡೆದರೆ ಇನ್ನು ಕೆಲವು ಕೃತಿಗಳಲ್ಲಿ ಮೇಲುನೋಟಕ್ಕೆ ಸಂಘರ್ಷ ಕಾಣುವುದೇ ಇಲ್ಲ. ತಣ್ಣನೆಯ ಅಂಶವಾಗಿ ಕಂಡುಬರುತ್ತದೆ. ಸಾಮಾಜಿಕ ಅಸಮಾನತೆಯ ವ್ಯವಸ್ಥೆಯಲ್ಲಿ ವ್ಯಕ್ತಿಯ ಮಾನಸಿಕ ಆರೋಗ್ಯವನ್ನು ನೋವಿಗೆ ಗುರಿ ಮಾಡಿದ್ದು ಜಾತಿ ಮತ್ತು ಧರ್ಮ. ಹೀಗೆ ಸಾಮಾಜಿಕ ಶಕ್ತಿಗಳು ಬಂಡವಾಳಶಾಹಿ ಹಿಡಿತದಲ್ಲಿ ಮನುಷ್ಯನನ್ನು ಅಧೀರಗೊಳಿಸಿಕೊಳ್ಳುವ ಕ್ಷುದ್ರಶಕ್ತಿಗಳಿಂದ ನೈತಿಕತೆಯ ಬಿಕ್ಕಟ್ಟನ್ನು ಎದುರಿಸುವ ಮನಸ್ಸುಗಳ ನಡುವೆ ಸಂಘರ್ಷ

ಏರ್ಪಡುತ್ತದೆ. ಹೀಗೆ ಸ್ವಾತಂತ್ರ್ಯೋತ್ತರ ಭಾರತದ ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ವ್ಯಕ್ತಿಗತವಾದ ಪರಿವರ್ತನೆಯ ಸವಾಲುಗಳು ಸಂಘರ್ಷಾತ್ಮಕವಾಗಿ ಅನಿವಾರ್ಯತೆಯೊಂದಿಗೆ ಸಾಹಿತ್ಯ ಕೃತಿಯಲ್ಲಿ ಮೂಡಿಬಂದಿದೆ. ಹಾಗಾಗಿ ಪ್ರಸ್ತುತ ಮಹಾಪ್ರಬಂಧದಲ್ಲಿ ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷವನ್ನು ನೋಡಿರುವುದು ಪ್ರಸ್ತುತ ಪ್ರಬಂಧದ ಮುಖ್ಯ ಶೋಧನೆಯಾಗಿದೆ.

ಅಧ್ಯಾಯ ನಾಲ್ಕು

ಆಲನಹಳ್ಳಿ ಅವರ ಕಥನಸಾಹಿತ್ಯದ ತಾತ್ವಿಕತೆ

ಮನುಷ್ಯನ ಪ್ರತಿಯೊಂದು ಅನುಭವಗಳನ್ನು ಅಭಿವ್ಯಕ್ತಿಗೊಳಿಸಲು ಕಥನಸಾಹಿತ್ಯ ಮಾಧ್ಯಮವು ತುಂಬಾ ಪರಿಣಾಮಕಾರಿಯಾಗಿ ಮೂಡಿದೆ. ಇದಕ್ಕೂ ಮೊದಲು ನವೋದಯ ಸಾಹಿತ್ಯ ಬದುಕಿನಲ್ಲಿ ಹೊಸತನ ತಂದಿತು. ಇದರಿಂದ ಭಾಷೆ ಮತ್ತು ವಸ್ತುಗಳಲ್ಲಿ ಸಾಕಷ್ಟು ಬದಲಾವಣೆಯಾದವು. ಭಾವುಕತೆ, ಕನಸುಗಾರಿಕೆ, ಅತೀಂದ್ರಿಯ ಗ್ರಹಿಕೆ, ನಿಸರ್ಗಪ್ರೇಮ, ದೇಶಾಭಿಮಾನ, ಗೇಯ ಶೈಲಿ ಇವುಗಳು ನವೋದಯ ಕಥನಸಾಹಿತ್ಯದ ಲಕ್ಷಣಗಳಾಗಿದ್ದವು. ಅರವತ್ತು–ಎಪ್ಪತ್ತರ ದಶಕದಲ್ಲಿ ಕಥನಸಾಹಿತ್ಯ ಪ್ರಸಾರದ ಮೂಲ ಸ್ವರೂಪದ ಬದಲಾವಣೆಯಲ್ಲಿ ಮುಖ್ಯವಾದ ಗ್ರಹಿಕೆಗಳು ವ್ಯಕ್ತಿಕೇಂದ್ರಿತ ಪ್ರಶ್ನೆಯನ್ನು ಹೇಳುವ, ವೈಯಕ್ತಿಕ ಅನುಭವಗಳನ್ನು ದಾಖಲಿಸುವ ಮಟ್ಟಕ್ಕೆ ತನ್ನದೇ ದೃಷ್ಟಿಕೋನವನ್ನು ಸೃಷ್ಟಿಸಿಕೊಂಡಿತು. ವಸ್ತುನಿಷ್ಠ, ವ್ಯಕ್ತಿನಿಷ್ಠ, ಪ್ರಗತಿಪರ ಧೋರಣೆಗಳಿಂದ ಅತಿರಂಜಿತ ವರ್ಣನೆಗಳಿಲ್ಲದೆ ಅಚ್ಚುಕಟ್ಟಾಗಿ ನೇರವಾಗಿ ನಿರೂಪಣೆ ಮಾಡುವ ಕಥನಸಾಹಿತ್ಯ ಎಲ್ಲರಿಗೂ ಮೆಚ್ಚುಗೆಯ ಜೊತೆಯಲ್ಲಿಯೇ ವಾಸ್ತವಿಕ ಸಂದರ್ಭದ ಚಿಂತನೆಗಳಿಗೆ ಹೆಚ್ಚು ಒತ್ತುಕೊಟ್ಟಿತು.

ಆಲನಹಳ್ಳಿ ಕೃಷ್ಣ ಅವರು ಕಥೆ, ಕಾವ್ಯ, ಕಾದಂಬರಿಗಳ ಪ್ರಕಾರದಲ್ಲಿ ತಮ್ಮನ್ನು ತೊಡಗಿಸಿಕೊಂಡವರು, ಇವರನ್ನು ಕಥೆಗಾರರೆಂದು ಗುರುತಿಸುವುದಕ್ಕಿಂತ ಕಾದಂಬರಿಕಾರರೆಂದೇ ಗುರುತಿಸಲ್ಪಡುತ್ತಾರೆ. ಇವರ ಕಾದಂಬರಿಗಳಾದ 'ಕಾಡು', 'ಪರಸಂಗದ ಗೆಂಡೆತಿಮ್ಮ' ಮತ್ತು 'ಭುಜಂಗಯ್ಯನ ದಶಾವತಾರ' ಇವುಗಳಲ್ಲಿ 'ಕಾಡು' ಕಾದಂಬರಿಯೂ ವಿಶಿಷ್ಟತೆಯಿಂದಲೂ ವೈವಿಧ್ಯತೆಯಿಂದಲೂ ಕೂಡಿದ ಕೃತಿಯಾಗಿದೆ. 'ಕಾಡು' ಕಾದಂಬರಿಯಲ್ಲಿ ಬಾಲ್ಯದ ಅನುಭವಗಳ ದಟ್ಟತೆಯೊಂದಿಗೆ ಕಮರಿಕೊಳ್ಳುವ ಕತ್ತಲಲ್ಲಿ ನಡೆದುಹೋಗುವ ಹಸಿಹಸಿ ಬದುಕಿನ ಕ್ರೌರ್ಯವನ್ನು ತೆರೆದಿಡುತ್ತದೆ. 'ಪರಸಂಗದ ಗೆಂಡೆತಿಮ್ಮ' ಕಾದಂಬರಿಯೂ ಆಧುನಿಕತೆಯೂ ಭಾರತೀಯ ಸಮಾಜದ ಬೇರುಗಳನ್ನು ಬುಡಸಮೇತ ಅಲ್ಲಾಡಿಸುತ್ತಿರುವುದು ಆಧುನಿಕತೆಯ ಅತಿರೇಕದಿಂದ ಬಾಳಿನ ದುರಂತವನ್ನು ಕಂಡುಕೊಳ್ಳುವುದರ ಚಿತ್ರಣ 'ಕಾಮ'ದ ಮಾದ್ಯಮದಿಂದಲೇ ಹಳ್ಳಿಯ ಬದುಕಿನಲ್ಲಿ ಆಧುನಿಕತೆಯು ಪ್ರವೇಶಿಸುತ್ತಿರುವುದು ಇವುಗಳ ಜೊತೆಗೆ ಪಲ್ಲಟಗೊಳ್ಳುತ್ತಿರುವ ಮನಸ್ಥಿತಿಗಳು ಮೌಲ್ಯಗಳನ್ನು ಕಟ್ಟಿಕೊಡುವಂತಹ ಕಾದಂಬರಿ ಇದಾಗಿದೆ.

'ಭುಜಂಗಯ್ಯನ ದಶಾವತಾರ' ಕಾದಂಬರಿಯಲ್ಲಿ ಭುಜಂಗಯ್ಯನ ಚರಿತ್ರೆಯನ್ನು ಹೇಳುತ್ತಲೇ ಇಡೀ ಸಮಾಜವನ್ನು ವಿಶ್ಲೇಷಣೆ ಮಾಡುತ್ತಿರುವುದು ವ್ಯಕ್ತಿಯ ಮೂಲಕವೇ ಇಡೀ ಸಮಾಜದ ಶೋಧನೆ ಮಾಡುವ ಹೊಸ ನೆಲೆಯನ್ನು ನೋಡಬಹುದು. ವ್ಯಕ್ತಿಕೇಂದ್ರಿತ

ನೆಲೆಯಿಂದಲೇ ಸಮಾಜದ ನೆಲೆಯ ಸ್ವರೂಪವನ್ನು ಗ್ರಹಿಸಬಹುದು. ಈ ಮೂರು ಕಾದಂಬರಿಗಳಿಂದ ಅಲನಹಳ್ಳಿಯವರು ಬದುಕಿಗೆ ಸ್ಪಂದಿಸಿದ, ಶೋಧಿಸಿದ ಮಾದರಿಗಳನ್ನು ಪರಿಚಯಿಸಿಕೊಳ್ಳಬಹುದು. ಮನುಷ್ಯನ ಮಾದರಿಗಳನ್ನು ಜೀವಂತ ಪಾತ್ರಗಳ ಮೂಲಕ ಸಂವೇದನಾಶೀಲವಾಗಿ ತಿಳಿಸುವಿಕೆಯೂ ಬಹಳ ಪರಿಣಾಮಕಾರಿಯಾಗಿದೆ.

ಆಲನಹಳ್ಳಿಯವರ ಕಥೆಗಳಲ್ಲಿ ಮನುಷ್ಯನ ಅಸ್ಥಿತ್ವದ ಬಗೆಗೆ ತಲೆಕೆಡಿಸಿಕೊಂಡಿರುವ ಬಗ್ಗೆ ಮನುಷ್ಯನ ಮಾನಸಿಕ ತೊಳಲಾಟದ ಬಗ್ಗೆ ಅಂತರಂಗದಲ್ಲಿ ಮನೆ ಮಾಡಿರುವ ಅನಾಥಪ್ರಜ್ಞೆ, ಪಾಪಪ್ರಜ್ಞೆ, ಹೊಸದರ ಹುಡುಕುವಿಕೆಗಾಗಿ ಸದಾ ತುಡಿಯುತ್ತಿರುವ ಮನಸ್ಸುಗಳು. ಇವುಗಳನ್ನು ಇವರ ಕಥಾಸಂಕಲನಗಳಾದ 'ತಪ್ತ', 'ಫೀನಿಕ್ಸ್', ಹಾಗೂ ಅವರ ಅಪೂರ್ಣ ಕಥೆಗಳಲ್ಲಿ ಪದರು ಪದರುಗಳ ರೂಪದಲ್ಲಿ ಬಿಚ್ಚಿಕೊಡುತ್ತಾರೆ. "ಕೇವಲ ವರ್ತಮಾನಕ್ಕೆ ಒತ್ತುಕೊಟ್ಟು ಭೂತಕಾಲವನ್ನು ಉಪೇಕ್ಷಿಸುವ ಅಥವಾ ಭವಿಷ್ಯದ ಕನಸುಗಾರಿಕೆಯಲ್ಲಿ ಮಾತ್ರ ವಿಹರಿಸುವಂತಾದರೆ ಆ ಸಾಹಿತ್ಯ ಶ್ರೇಷ್ಠವಾಗುವುದಿಲ್ಲ. ವರ್ತಮಾನದ ಸಾಧ್ಯತೆಗಳಿಗೆಲ್ಲಾ ಅದು ನೀಡಬಹುದಾದ ಅನುಭವ ಸಮಸ್ತಗಳಿಗೆಲ್ಲಾ ಮನಸ್ಸನ್ನು ಮುಕ್ತವಾಗಿ ತೆರೆಯುವುದರ ಜೊತೆಗೆ ಪರಂಪರೆಯಿಂದ ಪಡೆದಿದ್ದನ್ನು ಅರ್ಥಪೂರ್ಣವಾಗಿ ಇದರೊಂದಿಗೆ ಕರಗಿಸಿಕೊಳ್ಳುವ ಚೈತನ್ಯ ಸಂವೇದನಾಶೀಲನಾದ ವ್ಯಕ್ತಿಯ ಸಂದರ್ಭದಲ್ಲಿ ಪ್ರಕಟವಾದಾಗ ಅದು ಇಂದಿನ ಮತ್ತು ಮುಂದಿನ ಮನುಷ್ಯ ಸಮಸ್ತರಿಗೂ ಅರ್ಥಪೂರ್ಣವಾದಂತಹ ರೀತಿಯಲ್ಲಿ ಫಲಿಸುತ್ತದೆ."[೧೪] ಎಂಬ ಮಾತು ಕಥನಗಾರನಲ್ಲೂ ಮೂಲಭೂತವಾಗಿ ಈ ಅಂಶಗಳಲ್ಲಿ ಒಳಗೊಂಡಿರಲೇ ಬೇಕು.

ಆಲನಹಳ್ಳಿಯವರಲ್ಲಿ ಗಟ್ಟಿಯಾದ ವೈಯಕ್ತಿಕ ಅನುಭವಗಳ ದ್ರವ್ಯದಿಂದಲೇ ಅವರ ಕಥನಸಾಹಿತ್ಯ ಶ್ರೇಷ್ಠವೆನಿಸುತ್ತದೆ. ಆಲನಹಳ್ಳಿಯವರು ಕಥನಸಾಹಿತ್ಯ ಬರೆಯುವ ಕಾಲಕ್ಕಾಗಲೇ ಕಾರಂತ, ಕುವೆಂಪು, ಮಾಸ್ತಿ, ಬೇಂದ್ರೆ, ರಾವ್‌ಬಹದ್ದೂರ್ ಮುಂತಾದ ವಾಸ್ತವಮಾರ್ಗದ ಕಾದಂಬರಿಕಾರರು ಕನ್ನಡಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ್ದರು. ತ.ರಾ.ಸು, ನಿರಂಜನ, ಅ.ನ.ಕೃ, ಬಸವರಾಜ ಕಟ್ಟೀಮನಿ ಮುಂತಾದ ಪ್ರಗತಿಶೀಲ ಕಾದಂಬರಿಕಾರರು ಈ ಕ್ಷೇತ್ರವನ್ನು ವಿಸ್ತರಿಸಿದ್ದರು. ಮುಖ್ಯವಾಗಿ ನವ್ಯಸಾಹಿತ್ಯದಲ್ಲಿ ಗುರುತಿಸಲ್ಪಡುವ ಕಥನಸಾಹಿತ್ಯದ ಬರಹಗಾರರೆಂದರೆ ಪಿ.ಲಂಕೇಶ್, ಯು.ಆರ್.ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ರಾಮಚಂದ್ರಶರ್ಮ ಇವರಲ್ಲಿ ಕಥನಸಾಹಿತ್ಯದ ಹೊಸ ಚೈತನ್ಯವನ್ನು ಅದರ ಮೂಲ ಸ್ವರೂಪವನ್ನು ಅನೇಕ ಬದಲಾವಣೆಯ ಮೂಲಕ ಆಲನಹಳ್ಳಿಯವರು ರಚಿಸಿದರು.

---

೧೪. ಜಿ.ಎಸ್.ನಾಯಕ, 'ಅನಿವಾರ್ಯ', ೧೯೮೦, ಪು. ೭೪.

ಈ ಮೇಲಿನ ಕವಿಗಳ ಮಾದರಿಯಲ್ಲಿ ಸಾಹಿತ್ಯ ಕೃಷಿ ನಡೆಸಿದ ಆಲನಹಳ್ಳಿಯವರು ಕಥೆಗಾರರಾಗಿ, ಕಾದಂಬರಿಕಾರರಾಗಿ ಗಳಿಸಿದ ಹೆಸರು ಬಹಳ ಉನ್ನತವಾದದ್ದು. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಚಿಕ್ಕ ವಯಸ್ಸಿನಲ್ಲಿ ಅವರು ಸಾಧಿಸಿದ ಸಾಧನೆಗೆ ಅವರ ಸಮಕಾಲೀನ ಸಾಹಿತ್ಯ ಸಂದರ್ಭ ಸಾಕಷ್ಟು ಕಾರಣವಾಗಿದೆ. ಇವರ ಕತೆಗಳಾಗಲೀ, ಕಾದಂಬರಿಗಳಾಗಲೀ ಒಬ್ಬ ವ್ಯಕ್ತಿಯ ಅಥವಾ ಒಂದು ಕುಟುಂಬದ ಕಥೆಯನ್ನು ಹೇಳುತ್ತಿಲ್ಲ. ಬದಲಾಗಿ ಇಡೀ ಸಮಾಜದ, ಸಾಂಸ್ಕೃತಿಕ ಸ್ಥಿತ್ಯಂತರವನ್ನು ಸಾಂಕೇತಿಕತೆ, ಬಹುಸೂಕ್ಷ್ಮತೆಗಳಿಂದ ಕಥೆಗಳಲ್ಲಿ ನಿರೂಪಿಸುತ್ತಾರೆ. ಇವರ ಕಥನಸಾಹಿತ್ಯದಲ್ಲಿ ಆಧುನಿಕತೆ ಮನುಷ್ಯನ ವ್ಯಕ್ತಿತ್ವವನ್ನು ಯಾವರೀತಿ ದಮನಕ್ಕೊಳಪಡಿಸುತ್ತಾ ಅವನ ಅಸ್ಥಿತ್ವವನ್ನೇ ಪ್ರಶ್ನೆ ಮಾಡುತ್ತಿರುವುದನ್ನು ಮುಖ್ಯವಾಗಿ ಗ್ರಹಿಸಬಹುದು.

ಮೂರು ಕಾದಂಬರಿಗಳು ಹದಿನೇಳು ಕಥೆಗಳಲ್ಲಿ ವ್ಯಕ್ತವಾಗಿರುವ ಮುಖ್ಯ ಗ್ರಹಿಕೆಗಳು ಆಧುನಿಕತೆಯ ಪ್ರಭಾವ, ಬಾಲ್ಯದ ತಳಮಳ, ದಿಗ್ಭ್ರಮೆ, ಕೌತುಕಗಳು ಗ್ರಾಮ ಭಾರತದ ಮುಖ್ಯ ರೂಪಾಂತರಗಳು, ಗಂಡು-ಹೆಣ್ಣಿನ ಸಂಬಂಧಗಳು, ಕುಟುಂಬ ಮತ್ತು ವಿಷಮ ದಾಂಪತ್ಯಗಳು, ಅಂತರ್ಮುಖಿಯ ಶೋಧ, ಜಾತಿ ಮತ್ತು ಸಮಾಜಗಳ ವಾಸ್ತವಿಕತೆಯ ನೆಲೆಯಿಂದಲೇ ಕಥನಸಾಹಿತ್ಯ ನಿರೂಪಿತವಾಗುತ್ತದೆ. ನಗರೀಕರಣದ ಪ್ರಭಾವದಿಂದ ಮನುಷ್ಯನು ಅನುಭವಿಸುವ ಅನಾಥಪ್ರಜ್ಞೆ, ಪಾಪಪ್ರಜ್ಞೆ ಮತ್ತು ದ್ವಂದ್ವ ಹಾಗೂ ಪಲಾಯನವಾದಿ ನೀತಿಗಳು ಇವರ ಬಹುತೇಕ ಬರಹದ ತಿರುಳಾಗಿದೆ. ಜೊತೆಗೆ ಆಲನಹಳ್ಳಿಯವರ ಕಥನಸಾಹಿತ್ಯದಲ್ಲಿ ದಲಿತ ಸಂವೇದನೆಯುಳ್ಳ ಪಾತ್ರಗಳ ಸಂಘರ್ಷದ ನೆಲೆಗಳನ್ನು ಕಾಣಬಹುದು. ಇವರ ಕಥನಸಾಹಿತ್ಯವು ಬದುಕಿನಲ್ಲಿ ಅಸಹಾಯಕರಾಗುವವರ ಹಾಗೂ ಜಾತಿನಿಷ್ಠ ಶೋಷಿತರ ಬಗೆಗೆ ಹೆಚ್ಚಿನ ಒತ್ತುಕೊಡುತ್ತವೆ. 'ಕಾಡು' ಕಾದಂಬರಿಯಲ್ಲಿ ಯಾವುದನ್ನು ಅರ್ಥಮಾಡಿಕೊಳ್ಳಬೇಕು, ಯಾವುದನ್ನು ಬಿಡಬೇಕು ಎಂಬ ಸಂದಿಗ್ಧ ಸ್ಥಿತಿಯಲ್ಲಿ ಅಸಹಾಯಕನಾಗುತ್ತಾನೆ. ಬದುಕಿನ ಶೋಷಣೆಯು ಮಹಿಳೆಯರಲ್ಲಿ ಮತ್ತು ಕಿಟ್ಟಿಯಲ್ಲಿ ಕಂಡುಬರುತ್ತದೆ. ಇದು ಆ ಕೃತಿಯ ಧ್ವನಿಯಾಗಿದೆ. ಈ ಹಿನ್ನೆಲೆಯಲ್ಲಿ ಗಮನಿಸುವುದಾದರೆ 'ಪರಸಂಗದ ಗೆಂಡೆತಿಮ್ಮ' ಪೂರ್ಣವಾಗಿ ಭಿನ್ನವಾಗಿದೆ. ಗಂಡು-ಹೆಣ್ಣಿನ ಸಂದರ್ಭದಲ್ಲಿ ಶೋಧಿಸಲು ಪ್ರಯತ್ನಿಸುತ್ತವೆ. ಅದೇ ರೀತಿ 'ತಪ್ತ' ಮತ್ತು 'ಫೀನಿಕ್ಸ್' ಕಥಾಸಂಕಲನಗಳನ್ನು ಶೋಧಿಸಿದಾಗ ದಲಿತ ಸಂವೇದನೆಯ ನೆಲೆಗಳು ಎದ್ದುಕಾಣುತ್ತವೆ ಹಾಗೂ ಕಥನಸಾಹಿತ್ಯದ ತಾತ್ವಿಕ ನೆಲೆಗಟ್ಟುಗಳು ಇವರ ಸಾಹಿತ್ಯದಲ್ಲಿ ಕಂಡುಬರುತ್ತವೆ. ಈ ರೀತಿಯ ಗ್ರಹಿಕೆಗಳ ನೆಲೆಗಳಿಂದ ಮನುಷ್ಯನ ವ್ಯಕ್ತಿತ್ವಗಳಿಗೆ ಕಾಣಿಸಿಕೊಂಡಿರುವ ಛಿದ್ರತೆಯನ್ನು, ಸಾಮಾಜಿಕ ಮೌಲ್ಯಗಳ ಬಗೆಗಿರುವ ತಿರಸ್ಕಾರಭಾವ, ಎಲ್ಲಾ ಒತ್ತಡಗಳನ್ನು ತನ್ನ ಮೇಲೆಯೇ ಹೇರಿಕೊಂಡು ದುರ್ಬಲವಾದ ಮನಸ್ಸನ್ನು

ಪಡೆದುಕೊಳ್ಳುತ್ತಿವುದನ್ನು ಆಲನಹಳ್ಳಿ ಬರಹದಲ್ಲಿ ಕಾಣುತ್ತೇವೆ. ನಾಯಕರ ದುರ್ಬಲ ಮನಸ್ಸು, ನಾಯಕಿಯರ ಪಲ್ಲಟಗೊಳ್ಳುತ್ತಿರುವ ಮನಸ್ಥಿತಿಗಳಿಗೆ ಕಾರಣ ಆಧುನಿಕತೆಯ ಪ್ರಭಾವವೆಂದು ಇಲ್ಲಿ ಗುರುತಿಸಲು ಸಾಧ್ಯ. ಕಾಮದ ಪರಿಕಲ್ಪನೆಯಿಂದಲೇ ಸಮಾಜದ ಮನುಷ್ಯನ ಸ್ವಭಾವ ಮೂಲ ಪ್ರವೃತ್ತಿಗಳ ಮಾದರಿಗಳನ್ನು ಕಟ್ಟಿಕೊಡುವ ಆಲನಹಳ್ಳಿ ಕೃಷ್ಣ ಅವರು ವಿಶಿಷ್ಟ ಬರಹಗಾರರಾಗಿ ಗುರುತಿಸಲ್ಪಡುತ್ತಾರೆ.

ಆಲನಹಳ್ಳಿಯವರು ಕವಿಯಾಗಿ, ಕಥೆಗಾರರಾಗಿ ಕೆಲವು ಸಾರ್ಥಕ ಕಥೆ–ಕವನಗಳನ್ನು ಬರೆದಿರುವರಾದರೂ ಅವರ ಶ್ರೇಷ್ಠ ಪ್ರತಿಭೆ ಪೂರ್ಣ ಅಭಿವ್ಯಕ್ತಿಯನ್ನು ಪಡೆದಿರುವುದು ಅವರ ಕಾದಂಬರಗಳಲ್ಲೇನೋ ಎನಿಸಿಬಿಡುತ್ತದೆ. ಅವರ ನಿಜವಾದ ಸಾಹಿತ್ಯಕ ಬದುಕು ಸಾರ್ಥಕವಾಗಿರುವುದು ಈ ಕಥನಸಾಹಿತ್ಯದಲ್ಲಿ ಇವರ ಬರಹದ ಮೂಲ ಸತ್ವವೆಂದರೆ ಬಾಲ್ಯದಲ್ಲಿ ಕಂಡುಂಡ ದಟ್ಟವಾದ ಗ್ರಾಮೀಣ ಬದುಕಿನ ವಿವರಗಳು ಕಾಣಿಸಿಕೊಳ್ಳುತ್ತವೆಯಾದರೂ ಬಹುಪಾಲು ಕಥೆಗಳು ನಗರದ, ಮಧ್ಯಮ ವರ್ಗದ ಜನರ ಬದುಕನ್ನೆ ಕುರಿತಂತೆ ರಚಿತವಾಗಿವೆ. ಶ್ರೀಕೃಷ್ಣ ಆಲನಹಳ್ಳಿ ಅವರು ಬರೆದಿರುವ ಕಾದಂಬರಿಗಳು ಬೇರೆ ಬೇರೆ ಭಾಷೆಗಳಿಗೆ ಭಾಷಾಂತರವಾಗಲು ಈ ಮೇಲಿನ ಅಂಶಗಳೇ ಕಾರಣ. ಹಾಗಾಗಿ ಇವರ ಮುಖ್ಯ ಗ್ರಹಿಕೆಗಳನ್ನು ಉಪಅಧ್ಯಾಯಗಳಾಗಿ ಮುಂದೆ ನೋಡಲಾಗಿದೆ.

೪.೧. ಗ್ರಾಮ ಮತ್ತು ನಗರ ಜೀವನ

ಅಸಾಧಾರಣವಾದ ಬಹುಮುಖ ಪ್ರತಿಭೆಯ ಆಲನಹಳ್ಳಿಯವರು ಕವಿಯಾಗಿ ಕಥೆಗಾರರಾಗಿ ದುಡಿದವರಾದರೂ ಅವರ ನಿಜವಾದ ಪ್ರತಿಭೆ ವ್ಯಕ್ತವಾಗಿರುವುದು ಕಾದಂಬರಿಗಳಲ್ಲಿ. ಅತ್ಯಂತ ಸೂಕ್ಷ್ಮಗ್ರಹಿಕೆಯ ಆಲನಹಳ್ಳಿಯವರ ಮೇಲೆ ತಮ್ಮ ಬಾಲ್ಯ ಜೀವನ ಹಾಗೂ ಗ್ರಾಮೀಣ ಬದುಕಿನ ಪರಿಸರ ದಟ್ಟವಾದ ಪ್ರಭಾವ ಬೀರಿದೆ. ವಾಸ್ತವವಾಗಿ ಆಲನಹಳ್ಳಿ ತಮ್ಮ ಬಾಲ್ಯದ ಅನುಭವ ಮತ್ತು ಗ್ರಾಮೀಣ ಬದುಕಿಗೆ ಧುಮುಕಿದಾಗಲೇ ದೊಡ್ಡ ಕಲಾಕಾರರಾಗುತ್ತಾರೆ. ಬಾಲ್ಯದ ಮುಗ್ಧತೆ ಮತ್ತು ಯೌವ್ವನದ ಉತ್ಕರ್ಷ ಇವೆರಡನ್ನು ಸಾಹಿತ್ಯ ಸೃಷ್ಟಿಯಲ್ಲಿ ತುಂಬಾ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. ಒಂದು ಸಾಕ್ಷಿ ಪ್ರಜ್ಞೆಯ ಅಭಿವ್ಯಕ್ತಿ ಕ್ರಿಯೆಯಾಗಿದ್ದರೆ ಇನ್ನೊಂದು ಅನುಭವ ಪ್ರಜ್ಞೆಯ ಅಭಿವ್ಯಕ್ತಿಯಾಗಿದೆ. ಸಾಕ್ಷೀ ಪ್ರಜ್ಞೆಯಲ್ಲಿ ಅವರ ಬಾಲ್ಯದ ದಿನಗಳು, ತಾವು ನೋಡಿ ಕಂಡುಂಡ ಘಟನೆಗಳು, ಪ್ರಭಾವಿತ ವ್ಯಕ್ತಿಗಳು ಹಾಗೂ ಇನ್ನಿತರ ದಟ್ಟ ವಿವರಗಳು, ಹಿನ್ನಲೆಗಳು ಒಳಗೊಳ್ಳುತ್ತವೆ. ಇವರ ಮೂರು ಕಾದಂಬರಿಗಳು ಬಾಲ್ಯದ ಸಾಕ್ಷಿ ಪ್ರಜ್ಞೆಯ ಅಭಿವ್ಯಕ್ತಿ ಕ್ರಿಯೆಗೆ ಸಾಕ್ಷಿಯಾಗಿವೆ.

ನಗರ ಸಂವೇದನೆಯನ್ನು ಅರಗಿಸಿಕೊಳ್ಳಲು ಮನುಷ್ಯನು ತನ್ನ ಮಾನಸಿಕ ಶಾಂತಿಯನ್ನು ಕಳೆದುಕೊಳ್ಳುತ್ತಾ ಹೋಗುತ್ತಾನೆ. ನವ್ಯ ಸಾಹಿತ್ಯದ ಮುಖ್ಯ ತತ್ವವಾದ ವೈಯಕ್ತಿಕ ಅನುಭವಗಳ ಅನಾವರಣವನ್ನು ತಮ್ಮ ಕೃತಿಗಳಲ್ಲಿ ಅಳವಡಿಸಿಕೊಂಡ ಆಲನಹಳ್ಳಿ ಕೃಷ್ಣ ಬದುಕಿನ ಶೋಧನೆಯನ್ನು ಸಾಹಿತ್ಯಕ್ಕೆ ವರ್ಜ್ಯವೆನಿಸಿದ ಕಾಮದ ಪರಿಕಲ್ಪನೆಯಲ್ಲೇ ಗ್ರಹಿಸಿದ ರೀತಿ ವಿಶಿಷ್ಟವಾದದ್ದು. ಹಾಗಾಗಿ ಆಲನಹಳ್ಳಿಯವರಿಗೆ ಬಾಲ್ಯದ ದಟ್ಟವಾದ ಗ್ರಾಮೀಣ ಬದುಕು ಪ್ರಮುಖವಾದ ಪ್ರೇರಣೆಯನ್ನು ನೀಡಿದೆ. ಅವರ ಮೂರು ಕಾದಂಬರಿಗಳು ಸಮೃದ್ಧವಾದ ಗ್ರಾಮೀಣ ಪರಿಸರದಿಂದ ಆವೃತ್ತಗೊಂಡವುಗಳಾಗಿವೆ. ಕಾರಂತ, ಕುವೆಂಪು, ರಾವ್‌ಬಹದ್ದೂರ್ ಮುಂತಾದವರು ಗ್ರಾಮೀಣ ಬದುಕನ್ನು ಕುರಿತಂತೆ ವಾಸ್ತವದ ನೆಲೆಗಟ್ಟಿನಲ್ಲಿ ಕಾದಂಬರಿಗಳನ್ನು ರಚಿಸಿದ್ದಾರೆ. ಈ ಎಲ್ಲಾ ಪ್ರಮುಖ ಕಾದಂಬರಿಕಾರರ ಪ್ರೇರಣೆ, ಪ್ರಭಾವ ಆಲನಹಳ್ಳಿಯವರ ಮೇಲೆ ಇದ್ದೇ ಇದೆ. ಅದರಲ್ಲೂ ಕುವೆಂಪು ಮತ್ತು ರಾವ್‌ಬಹದ್ದೂರರ ಕಾದಂಬರಿಗಳು ಇವರಿಗೆ ಪ್ರಮುಖವಾದ ಪ್ರೇರಣೆಯನ್ನು ಒದಗಿಸಿವೆ.

ತಮ್ಮೊಳಗಿನ ಮಿಂಚಿನ ಪ್ರತಿಭೆ ಹಾಗೂ ಸಮೃದ್ದ ಅನುಭವಗಳಿಂದ ಅವುಗಳೆಲ್ಲವನ್ನು ಅರಗಿಸಿಕೊಂಡು ತಮ್ಮ ಸಮಕಾಲೀನ ಬರಹಗಾರರಲ್ಲೇ ಆಲನಹಳ್ಳಿಯವರು ವಿಶಿಷ್ಟತೆಯನ್ನು ಗಳಿಸಿಕೊಂಡಿದ್ದಾರೆ. ಇವರು ಬರೆಯುವ ಕಾಲದಲ್ಲಿ ನವ್ಯ ಸಾಹಿತ್ಯ ಉಚ್ಛ್ರಾಯ ಸ್ಥಿತಿಯಲ್ಲಿದ್ದುದರಿಂದ ಪ್ರಾರಂಭದ ಹಂತದಲ್ಲಿ ಈ ಬರಹಗಾರರೆಲ್ಲರೂ ಸಹಜವಾಗಿ ನವ್ಯ ಸಾಹಿತ್ಯದ ಪ್ರಭಾವಕ್ಕೂ ಒಳಗಾಗಿದ್ದಾರೆ. ಹಾಗಾಗಿ ನವ್ಯ ಕಾದಂಬರಿಯ ಪ್ರಮುಖ ಲಕ್ಷಣಗಳು 'ಕಾಡು' ಕಾದಂಬರಿಯಲ್ಲಿ ಸ್ಪಷ್ಟವಾಗಿ ಕಂಡುಬರುತ್ತವೆ. ಮುಗ್ಧ ಬಾಲಕನ ದೃಷ್ಟಿಯಲ್ಲಿ ಮಾನವ ಲೋಕದಲ್ಲಿನ ಕ್ರೌರ್ಯವನ್ನು ವಿವರ ವಿವರಗಳಲ್ಲಿ ಅನಾವರಣಗೊಳಿಸುತ್ತಾ ಹೋಗಿರುವುದನ್ನು ಈ ಕೃತಿಯಲ್ಲಿ ಕಾಣುತ್ತೇವೆ. ಆದರೆ ಮುಂದಿನ ದಾರಿಯಲ್ಲಿ ಆಲನಹಳ್ಳಿಯವರು ಭಿನ್ನವಾದ ದಾರಿಯನ್ನೇ ತುಳಿಯುತ್ತಾರೆ. ಟಿ.ಪಿ. ಅಶೋಕ ಅವರು ಹೇಳುವಂತೆ "'ಕಾಡು'ವಿನಲ್ಲಿ ವಾಸ್ತವತೆ, ನವ್ಯತೆಗಳ ಕಿರು ಇಕ್ಕಟ್ಟಿನ ದಾರಿಯಲ್ಲಿ ತಮ್ಮ ಪ್ರಮಾಣ ಆರಂಭಿಸಿದ, ಕೃಷ್ಣ 'ಗೆಂಡೆತಿಮ್ಮ'ದಲ್ಲಿ ರಸ್ತೆಗೆ ಇಳಿದಿದ್ದರೆ, 'ಭುಜಂಗಯ್ಯ'ದಲ್ಲಿ ವಾಸ್ತವತೆಯ ಹೆದ್ದಾರಿಗೆ ಬಂದಿಳಿದಿದ್ದಾರೆ. ಭುಜಂಗಯ್ಯ ಮೂಲಭೂತವಾಗಿ ಒಬ್ಬ ರೈತ ಪರಂಪರಾಗತವಾಗಿ ವ್ಯವಸಾಯ ಮಾಡಿಕೊಂಡು ಬಂದವನು, ಮಳೆಯನ್ನೇ ನಂಬಿಕೂರುವ ಕಷ್ಟ ಅವನಿಗೆ ಗೊತ್ತು. ತನ್ನ ಸ್ಥಿತಿಯನ್ನು ಉತ್ತಮಪಡಿಸಿ–ಕೊಳ್ಳುವುದು ಹೇಗೆ ಎಂದು ಆಗಾಗ ಚಿಂತಿಸುತ್ತಾನೆ. ಅಂದರೆ ನಗರಜೀವನಕ್ಕೆ ಹೊಂದಿಕೊಳ್ಳುವ ಆಧುನಿಕತೆಯನ್ನು ಅವನು ಬಯಸುವಂತೆ ಅದು ಅವನಿಗೆ ಅನಿವಾರ್ಯವೂ ಆಗಿತ್ತು."[೧೫] ನೀತಿಯ ನೆಲೆಗಟ್ಟು ಶಿಥಿಲಗೊಂಡ ಸತ್ವಶಾಲಿ ಬರವಣಿಗೆ ಗ್ರಾಮಜೀವನದ ವಿಘಟನೆ 'ಕಾಡು'

---

೧೫. ಕಾಡಿನ ಹುಡುಗ ಕೃಷ್ಣ(ಸಂ.), 'ಡಿ.ಎಸ್.ನಾಗಭೂಷಣಾ ಮತ್ತು ಇತರರು', ೧೯೯೦, ಪು. ೩೭.

ಕಾದಂಬರಿಯ ಕೇಂದ್ರವಸ್ತು ಬಾಲಕನೊಬ್ಬನ ಕುತೂಹಲದ ಕಣ್ಣುಗಳ ಮೂಲಕ ನಮ್ಮ ಮುಂದೆ ಗ್ರಾಮ ಮತ್ತು ನಗರಜೀವನದ ಕಥೆ ಸಾಗುತ್ತದೆ. ಹಳ್ಳಿಯ ಸಾಹುಕಾರ ಒಬ್ಬ ಪರ ಸ್ತ್ರೀಯೊಬ್ಬರ ಜೊತೆ ಅಕ್ರಮಸಂಬಂಧ ಹೊಂದಿರುವುದರ ನ್ಯಾಯ ಪಂಚಾಯಿತಿಯಲ್ಲಿ ನೆರೆಹಳ್ಳಿಯ ಜನ ಪಂಚರ ವಿರುದ್ಧ ಆರೋಪಿಯನ್ನು ಎತ್ತಿ ಕಟ್ಟುವುದರೊಂದಿಗೆ ಗ್ರಾಮದ ಒಡಕು ಪ್ರಾರಂಭವಾಗುತ್ತದೆ. ಹೊಸಹಳ್ಳಿಯ ಹೆಂಗಸೊಬ್ಬಳನ್ನು ಕಟ್ಟುಕೊಂಡಿರುವ ಚಂದ್ರೇಗೌಡನ ರಾಕ್ಷಸ ಪಂಚಾಯಿತಿಯಿಂದ ಹಬ್ಬುವ ದ್ವೇಷದ ಕಿಚ್ಚು ಗೌಡರ ರಾಗಿಮೆದೆಯನ್ನು ಕಬಳಿಸಿ, ಓಕುಳಿ ಜಿದ್ದಿನಾಟದಲ್ಲಿ ಪರಾಕಾಷ್ಠೆ ಮುಟ್ಟಿ ಕೊನೆಗೆ ಕೊಲೆ, ರಕ್ತಪಾತದಲ್ಲಿ ಕಮಲಮ್ಮನ ಸಾವಿನಲ್ಲಿ ಅಂತ್ಯಗೊಳ್ಳುತ್ತದೆ. ಈ ಮಧ್ಯೆ ಸಿಡಿಮದ್ದಿನಿಂದ ಗೌರಿ ಕಡಸು ಸಾವನ್ನಪ್ಪಿತ್ತು. ನಾಗಿಯ ಅಜ್ಜಿಯ ಭಯಾನಕ ಮರಣ, ಅಕ್ರಮಸಂಬಂಧದ ಫಲ ಹೊತ್ತ ಸಾವಿತ್ರಿಯ ಆತ್ಮಹತ್ಯೆ ಮೊದಲಾದ ದುರಂತಗಳ ಸರಣಿ ಕಾದಂಬರಿಯಲ್ಲಿ ತೆರೆತೆರೆಯಾಗಿ ಬಿಚ್ಚಿಕೊಳ್ಳುತ್ತದೆ. ಗ್ರಾಮೀಣ ನೆಲೆಹೊಂದಿರುವ ಕಾದಂಬರಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಜಿಡ್ಡು ಹಿಡಿದ ವಸ್ತುಗಳನ್ನೊಳಗೊಂಡ ಈ ಕಾದಂಬರಿ ಮುಖ್ಯವಾಗಿ ನಿಂತಿರುವುದು ಶ್ರೀ ಕೃಷ್ಣ ಆಲನಹಳ್ಳಿಯವರ ಬರವಣಿಗೆಯ ಸತ್ಯದ ಮೇಲೆ. ಕಾದಂಬರಿ ಪಾತ್ರಗಳಲ್ಲಿನ ಪುಟಿದೇಳುವ ಸೊಕ್ಕು ಕಸುವು ಆಲನಹಳ್ಳಿಯವರ ಭಾಷೆಗಳಿಗಿದೆ. ಆದರೆ ಒಟ್ಟಾರೆ ನೋಡಿದಾಗ ಈ ಗಟ್ಟಿಮುಟ್ಟಾದ ಭಾಷೆಯೂ ಸುಮ್ಮನೆ ನೆಲಗುದ್ದಿ ಕೈ ನೋಯಿಸಿಕೊಂಡಂತೆಯೇ ಅನ್ನಿಸುತ್ತದೆ ಗ್ರಾಮ್ಯ ಭಾಷೆ ಬಳಕೆಯಲ್ಲಿ ತೀವ್ರ ಎಚ್ಚರಿಕೆ ತೋರಿರುವ ಆಲನಹಳ್ಳಿಯವರು ಭಯ, ಕುತೂಹಲ ಕೆರಳಿಸುವಂತ ಅಮಾನುಷವೆನಿಸುವ ಘಟನೆಗಳನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸಿದ್ದಾರೆ ಇದು ಗ್ರಾಮ ಜೀವನದ ಪರಿಯೇ ಸರಿಯಾಗಿದೆ.

ಜಿ.ಎಸ್. ಆಮೂರ ಅವರು ಹೇಳುವಂತೆ ಕನ್ನಡದ ಶ್ರೇಷ್ಠ ಕಾದಂಬರಿಗಳ ಸಾಲಿನಲ್ಲಿ ಈ 'ಕಾಡು' ಕಾದಂಬರಿಯನ್ನು ಸೇರಿಸಿದ್ದಾರೆ. ಶ್ರೀ ಕೃಷ್ಣ ಆಲನಹಳ್ಳಿ ಅವರು ಇಲ್ಲಿ ಕಥೆಯನ್ನು ರಂಜನೀಯವಾಗಿ ಹೇಳುವ ಹಂಬಲವನ್ನು ಹೊಂದಿಲ್ಲ. ಕಿಟ್ಟಿ ಎಂಬ ಮುಗ್ಧ. ಆದರೆ ತುಂಬಾ ಸಂವೇದನಾಶೀಲನಾದ ಬಾಲಕನ ಮನೋದೃಷ್ಟಿಯಲ್ಲಿ ಕಾದಂಬರಿಯುದ್ದಕ್ಕೂ ಗ್ರಾಮ ಜೀವನದ ಬದುಕನ್ನು ಬಿಚ್ಚುತ್ತ ಹೋಗುತ್ತಾರೆ. ಈ ಮುಗ್ಧ ದೃಷ್ಟಿಕೋನದಲ್ಲಿ ಬದುಕನ್ನು ನೋಡುವ ರೀತಿಗೆ ಕನ್ನಡ ಕಥಾಲೋಕದಲ್ಲಿ ಒಂದು ಸಣ್ಣ ಪರಂಪರೆಯೇ ಇದೆ. ಅದೆಂದರೆ ಅನಂತಮೂರ್ತಿಯವರ 'ಘಟಶ್ರಾದ್ಧ' ತೇಜಸ್ವಿಯವರ 'ಲಿಂಗಬಂದ' ಲಂಕೇಶರ "ಉಮಾಪತಿಯ ಸ್ಕಾಲರ್‌ಶಿಫ್ ಯಾತ್ರೆ' ಕೆ.ಸದಾಶಿವ ಅವರ 'ರಾಮನಸವಾರಿ ಸಂತೆಗೆ ಹೋದದ್ದು' ಈ ರೀತಿಯಾಗಿ ಪಟ್ಟಿಯನ್ನೇ ಮಾಡಬಹುದು. ಆಲನಹಳ್ಳಿಯವರಿಗೆ ಬಾಲಕನ ದೃಷ್ಟಿಕೋನದಿಂದ

ಗ್ರಾಮ ಮತ್ತು ನಗರದ ಬದುಕನ್ನು ನೋಡುವ ತಂತ್ರ ನವ್ಯದವರಿಂದ ದೊರಕಿದೆ ಎಂದು ಹೇಳಿದರೆ ತಪ್ಪಾಗಲಾರದು.

ಗ್ರಾಮಜೀವನವೆಂದರೆ ಅದು ಹೇಗಿರುತ್ತದೆ ಎಂಬುದನ್ನು 'ಕಾಡು' ಕಾದಂಬರಿಯಲ್ಲಿ ವಿವರದೊಂದಿಗೆ ನೋಡುವುದಾದರೆ "ಕಿವಿಗಡಚಿಕ್ಕುವ ಬಾವಲಿಗಳ ಕಚಿಪಿಚಿ ತುಂಬಿದ ತೋಪಿನಲ್ಲಿ ಕತ್ತಲು ಕವಿದುಕೊಂಡಿತ್ತು ತೋಪು ದಾಟುತ್ತಿದ್ದಂತೆ ಉದ್ದನೆ ಷರಟು ಹಾಕಿ ಬಣ್ಣದ ಲುಂಗಿತೊಟ್ಟ ಕೆದರು ತಲೆಯ ವ್ಯಕ್ತಿಯನ್ನು ಕಂಡೊಡನೆ ಕಿಟ್ಟಿ ಗಾಬರಿಯಾದ. ಸ್ವಲ್ಪದೂರ ಹೋದಕೂಡಲೇ ಕಿಟ್ಟಿ 'ಅವನ್ಯಾರೊ ಸಿಳ್ಳ' ಎಂದ. ಸಿಳ್ಳ ಅವ್ರು ಮಾಯಮಂತ್ರ ಮಾಡವ್ರಪ್ಪ. ದಯ್ಯಾನು ಮಾತಾಡ್ಸಿ, ಆಮ್ಯಾಲೆ ಅದು ಅವರು ಯೇಳ್ದಂಗೆಲ್ಲ ಮಾಡದಂತೆ ಎಂದಾಗಿ ಕಿಟ್ಟಿಗೆ ಮೈಜುಂ ಎಂದಿತು. ಏನೂ ಮಾತಾಡದೆ ಬಾಯಿ ಕಟ್ಟಿದವನ ಹಾಗೆ ಬಿಮ್ಮನೆ ಬಿಗಿದುಕೊಂಡು ಮನೆಗೆಬಂದ. ಉಳಿದ ಪಟಾಕಿಗಳನ್ನೆಲ್ಲ ಮತ್ತೆ ಸುಡಲು ತೆಗೆದಾಗ ಮಾವ 'ದನ ಬೆದ್ರವು ಕಣೋ ಕಿಟ್ಟಿ, ವೊತ್ತಾರಿಕೆ ಅತ್ಸುವೆ ಇರು' ಎಂದರು. ಕಿಟ್ಟಿ ಕೋಣೆಗೆ ತೆಪ್ಪಗೆ ನಡೆದ".[೧೬]

ಪ್ರಾಕೃತಿಕ ಸೌಂದರ್ಯದ ಪ್ರತೀಕವಾಗಿ ತೋಪು, ದನದ ಕೊಟ್ಟಿಗೆ ನಗರಜೀವನ ಬಿಡುಗಡೆಯ ಮಾದರಿಯಾದ ಷರಟು, ಪ್ಯಾಂಟು ಗ್ರಾಮದ ಜನರಿಗೆ ಹೊರ ರೀತಿಯ ನೋಟವಾಗಿಯೇ ಕಾಣುತ್ತದೆ. ಆಲನಹಳ್ಳಿಯವರು ಬದುಕಿನ ಕ್ರಮವನ್ನು ಮತ್ತು ಬದುಕನ್ನು ನೋಡುವ ದೃಷ್ಟಿಕೋನವನ್ನು ಅವರ ಅಂತಃಚಕ್ಷುವಿನ ಮೂಲಕ ಕಟ್ಟುತ್ತಾರೆ. ಕಾಲಗರ್ಭದಲ್ಲಿ ನಡೆಯುವ ಎಲ್ಲಾ ರೀತಿಯ ಆಗುಹೋಗುಗಳನ್ನು ನಾವು ಕಾಣಬಹುದು. ಹೊಸೂರು ಮತ್ತು ಕೊಪ್ಪಲಿನ ನಡುವೆ ಏನೋ ಜಿದ್ದು, ದ್ವೇಷ, ಮಾತ್ಸರ್ಯ, ಪ್ರತಿಷ್ಠೆಗಳು ಇದ್ದಿತ್ತಾದರೂ ಇವುಗಳೆಲ್ಲವನ್ನು ಮರೆಸುವಂತೆ ಹೊಸೂರ ಓಕಳಿ ಹಬ್ಬ ಮತ್ತು ಕೊಪ್ಪಲಿನ ನಾಟಕ ಒಟ್ಟಿಗೆ ಬರುತ್ತವೆ. ಕೊಪ್ಪಲು ಮತ್ತು ಹೊಸೂರಿನ ಕಳಚಿಹೋದ ಸಂಬಂಧಗಳು ಹಾಗೆ ಇರಲು ಬಿಡದೆ ಕಾದಂಬರಿಕಾರರು ಮತ್ತೆ ಓಕಳಿ ಹಬ್ಬದಂತಹ ಸಾಂಸ್ಕೃತಿಕ ಹಬ್ಬದಲ್ಲಿ ಕೂಡಿಸಲು ಪ್ರಯತ್ನಿಸುತ್ತಾರೆ. ಆದರೆ ಅದು ಬೇರೆ ತಿರುವನ್ನೇ ಪಡೆಯುತ್ತದೆ. ಹೊಸೂರಿನ ಓಕಳಿ ಹಬ್ಬ ಹೆಗ್ಗಡದೇವನಕೋಟೆಯ ಸರಹದ್ದಿನಲ್ಲೇ ಪ್ರಸಿದ್ಧಿಯಾದದ್ದು. ಓಕಳಿ ಆಟ ಆಡುವುದು ಹಿಂದಿನಿಂದಲೂ ಹೊಸೂರು ಮತ್ತು ಕೊಪ್ಪಲಿನ ನಡುವೆ ನಡೆಯುತ್ತಾ ಬಂದಿದೆ. ಆದರೆ ಚಂದ್ರೇಗೌಡರು ಹಿಂದಿನ ದ್ವೇಷದಿಂದ ಒಪ್ಪಿರುವುದಿಲ್ಲ. ಆದರೆ ಹೊಸೂರಿನ ಹಿರಿಯರೊಬ್ಬರು ಹೀಗೆ ಹೇಳುತ್ತಾರೆ. "ನೋಡು ಚಂದ್ರಪ್ಪ ಊರಂದ್ಮೇಲೆ ವಲಗೇರಿ ಇದ್ದೇ ಇರ್ತದೆ, ಏನೋ ಒಂದು ಇಸಗಳಿಗೇಲಿ ಆಗಬಾರ್ದು ಆಗೋಯ್ತು. ಅದನ್ನೇ ಕಟ್ಕಂಡಿರಬಾರ್ದು. ಕೇಳು ತಲೆ ತಲೀಂದ ನಡಕೊಂಡು ಬಂದಿರೋರು ಇದು. ಹೊಸೂರು ಕೊಪ್ಪಲು ಯಿಂದಕ್ಕೆ ಒಂದು

---

೧೬. ಶ್ರೀ ಕೃಷ್ಣ ಆಲನಹಳ್ಳಿ, 'ಕಾಡು', ೨೦೧೧, ಪು. ೭.

ಊರಾಗಿದ್ದಂತೆ. ಈಗ ಕಲಿಕಾಲ ಬತ್ತು, ಜನಕ್ಕೆ ನಿಯತ್ತಿಲ್ಲ. ಅದ್ಕೆ ಅಲ್ವಾ ಮೂರು ವರ್ಷದಿಂದ ಅನ್ನ ಕಾಣ್ದೆ ಜನ ವಣಗಿದ್ದು ವೋಗ್ಲಿ ನೀ ದೊಡ್ಡ ಮನಸ್ಸು ಮಾಡು."[೧೭] ಇಲ್ಲಿ ಗ್ರಾಮೀಣ ಭಾಗದ ಜನರು ಜಗಳ, ದ್ವೇಷ, ಅಸೂಯೆ, ಮಾತ್ಸರ್ಯಗಳಲ್ಲಿ ಮುಳುಗಿರುವಾಗಲೂ ಭಾವನಾತ್ಮಕ ಸಂಬಂಧಗಳಲ್ಲಿ ತೀರ ಆಪ್ತವಾಗಿಯೇ ನಡೆದುಕೊಳ್ಳಲು ಆಶಿಸುವ ಹೃದಯವಂತಿಕೆಯನ್ನು ಹೊಂದಿರುವುದನ್ನು ಆಲನಹಳ್ಳಿಯವರು ನಿರೂಪಿಸಿದ್ದಾರೆ. ಹಿರಿಯರ ಸಲಹೆಯಂತೆ ಹಂಡೆ ಕಟ್ಟುವುದಕ್ಕೆ ಚಂದ್ರೇಗೌಡ ಒಪ್ಪಿದ್ದು ಇಡೀ ಊರಿಗೆ ಆಶ್ಚರ್ಯ ಹಾಗೂ ಸಂತೋಷವಾಗುತ್ತದೆ. ಕಿಟ್ಟಿಗಂತೂ ತುಂಬಾ ಖುಷಿಯಾಗುತ್ತದೆ. ಇಲ್ಲಿ ಗ್ರಾಮೀಣ ಬದುಕಿನಲ್ಲಿ ಏನೇ ದ್ವೇಷ, ಅಸಹನೆಗಳಿದ್ದರೂ ಹಬ್ಬ ಹರಿದಿನ, ನಾಟಕ, ಮದುವೆಮುಂಜಿ, ಆಚಾರ-ವಿಚಾರಗಳಲ್ಲಿ ಜನರೆಲ್ಲಾ ಒಂದಾಗುವುದನ್ನು ಲೇಖಕರು ಗುರುತಿಸುತ್ತಾರೆ.

ಲೇಖಕರು ಒಂದು ಜಗತ್ತನ್ನು ತನ್ನ ತೆಕ್ಕೆಯೊಳಗಡೆ ತೆಗೆದು ಚಿಂತಿಸಿ ಪರಿಪಾಕವಾಗಿಸುವ ದೃಷ್ಟಿಕೋನ ಈ ಕಾಡಿನೊಳಗೆ ಸಿಗುತ್ತದೆ. 'ಕಾಡು' ಅನನ್ಯವಾಗಿರುವುದು ತನ್ನ ನಿಬಿಡ ಅನುಭವಗಳ ಮೌಲ್ಯ ನಿರಪೇಕ್ಷ ದಾಖಲೆಯಲ್ಲೇ ಮನುಷ್ಯನ ಮೂಲ ಪ್ರಕೃತಿಯ ಲೋಕಕ್ಕೆ ಧ್ಯಾನದ ಮೂಲಕ ಕೈ ಹಾಕಿದಾಗ ಮಾತ್ರ ಇಂತಹ ಕೃತಿಯನ್ನು ಜೀರ್ಣಿಸಿಕೊಳ್ಳಲು ಸಾಧ್ಯವೇನೋ ಎನ್ನಿಸಿಬಿಡುತ್ತದೆ. ಆಲನಹಳ್ಳಿಯವರು ಕಥೆ ಹೇಳುತ್ತಲೇ ಅಭಿಲಕ್ಷಿತಾರ್ಥವನ್ನು ಹೊಳೆಯಿಸಿಬಿಡುತ್ತಾರೆ. ಹೀಗೆ ಪ್ರತೀಕಗಳ ಮೂಲಕ ಮಾತನಾಡುವ ಇವರ ಕೌಶಲ ಕಾದಂಬರಿಯುದ್ದಕ್ಕೂ ಕಾಣುತ್ತದೆ. ಕಾದಂಬರಿ ಒಂದು ನೆಲೆಯಲ್ಲಿ ಪರಿಸರವನ್ನು ಪ್ರತಿನಿಧಿಸುತ್ತಲೇ ಮಾನವನ ಮನಸ್ಸಿನ ಕಾಡನ್ನು ಅರಿವಿಗೆ ತರುತ್ತದೆ. ಯಾರದೋ ಕ್ರೌರ್ಯದಿಂದ ಸಿಡಿಮದ್ದಿಗೆ ಬಾಯೊಡ್ಡಿ ಸಾಯುವ ಹಸುವಿನ ಚಿತ್ರ ಕೊನೆಯಲ್ಲಿ ಅತ್ಯಾಚಾರಕ್ಕೀಡಾದ ಕಮಲಿಯ ಸಾವಿಗೆ ಸಮರ್ಥ ಸಂಕೇತವಾಗುತ್ತದೆ. ಪ್ರಕೃತಿಯ ನಡುವೆ ಬದುಕುವ ಮನುಷ್ಯನ ಇರಾದೆಯು ಊರ ಮತ್ತು ನಗರದ ಚಿಂತನೆಯಲ್ಲಿ ಒಮ್ಮೊಮ್ಮೆ ಗೊಂದಲಕ್ಕೆ ಒಳಗಾದುದು ಉಂಟು. ಈ ರೀತಿಯ ಸಂದಿಗ್ಧ ಚಿಂತನೆಯ ಮೂಸೆಯಲ್ಲಿ ಕಾದಂಬರಿಯ ಪಾತ್ರಗಳಲು ಉಕ್ಕಿ ಸೊಕ್ಕುತ್ತವೆ ಕಾರಣ ನವ್ಯದ ಘಮಲಿನಲ್ಲಿ ಬರೆದ ಕಾರಣ ಆ ನೆಲದ ವಾಸನೆಯನ್ನು ಹಿಡಿಯುವ ತುರ್ತಿಗೆ ಒಳಗಾಗಬೇಕಾದ ಚಿಂತನೆ ಬರಹಗಾರನ ಮೇಲಿನ ಹೊಣೆಯಾಗಿದ್ದ ಕಾಲವದು. ಕಾದಂಬರಿಯಲ್ಲಿ ಗ್ರಾಮೀಣ ಬದುಕಿಗೆ ಪ್ರವೇಶಿಸುವ ಕೋರ್ಟು, ಪೊಲೀಸ್‌ನಂಥ ಹೊರಗಿನ ಸಂಗತಿಗಳು. ಅದಕ್ಕೆ ಹಿರಿಯರ ಪ್ರತಿರೋಧ ಈ ಸಂಘರ್ಷ ತಂದ ದುರಂತ ಇವು ಇಲ್ಲಿ ಪ್ರತಿರೋಧವನ್ನು ಮೀರಿ ಹೊಸ ಮೌಲ್ಯಗಳು ನಡೆಸುವ ದಾಳಿಯನ್ನು ಕಾದಂಬರಿ ಸೂಚಿಸುತ್ತದೆ. ಕ್ರೌರ್ಯವೇ ಸ್ಥಾಯಿಯಾದ 'ಕಾಡು' ಕಾದಂಬರಿಯಲ್ಲಿ ಕಿಟ್ಟಿಯ

---

೧೭. ಶ್ರೀ ಕೃಷ್ಣ ಆಲನಹಳ್ಳಿ, 'ಕಾಡು', ೨೦೧೧, ಪು. ೬೮.

ಕಣ್ಣುಗಳ ಮೂಲಕ ಕಂಡಾಗ ಮತ್ತೂ ಭಯಂಕರವೆನಿಸುತ್ತದೆ. ಆಲನಹಳ್ಳಿಯವರ ಈ ಸೃಜನಶೀಲ ಕೌಶಲ್ಯದ ಬಗೆಗೆ ಜಿ.ಎಸ್.ಆಮೂರರು ಹೇಳುವ ಮಾತುಗಳು ಗಮನಾರ್ಹವಾಗಿವೆ. "ಕಿಟ್ಟಿಯ ಮುಗ್ಧತೆ ಗ್ರಾಮ ಜೀವನದ ನಡವಳಿಕೆ ಮತ್ತು ಅವನ ಮೇಲೆ ಅಪ್ಪಳಿಸುವ ರಾಕ್ಷಸ ಲೋಕದ ಅನುಭವಗಳು ಇವುಗಳ ನಡುವಿನ ವಿರೋಧದಿಂದಾಗಿ ಕಾದಂಬರಿಯಲ್ಲಿ ಸಂಕೀರ್ಣತೆ ಹುಟ್ಟಿಕೊಳ್ಳುತ್ತದೆ. ಕ್ರೌರ್ಯದ ಘಟನೆಗಳನ್ನು ಸೆನ್ಸೇಷನಲ್ ಉದ್ದೇಶಗಳಿಗಾಗಿ ಬಳಸದೆ ಓದುಗರಿಗೆ ಹೊಸ ತಿಳಿವನ್ನು ಕೊಡಲು ಯತ್ನಿಸುವ ಮೂಲಕ ಕಾದಂಬರಿ ಆಧುನಿಕತೆಯನ್ನು ಗಳಿಸಿ ಕೊಳ್ಳುತ್ತದೆ. ಕಿಟ್ಟಿಯ ಮಾನಸಿಕ ಬೆಳವಣಿಗೆ ಕಂಡ ಕಥೆಯ ವಸ್ತುವಿಗೆ ಮುಖ್ಯ ಭಾಗವಾಗಿದೆ. ಕಾದಂಬರಿಯ ಕೊನೆಯಲ್ಲಿ ಕಿಟ್ಟಿಗೆ ಎಳೆ ವಯಸ್ಸಿನಲ್ಲಿಯೇ ಪರಕೀಯತೆಯ ದಟ್ಟವಾದ ಅನುಭವವಾಗುತ್ತದೆ."[೧೮] ಆಲನಹಳ್ಳಿಯವರು ಗ್ರಾಮಜೀವನವನ್ನು ಹಾಸ್ಯ ಪ್ರಸಂಗಗಳಿಗಾಗಿ ಅಥವಾ ಭಾವುಕ ವಿಜೃಂಭಣೆಗಾಗಿ ಬಳಸಿಕೊಂಡ ಕಾದಂಬರಿಗಳಿಗಿಂತ ತೀರ ಭಿನ್ನವಾದ ಕೃತಿಯಾಗಿ 'ಕಾಡು' ಕಾದಂಬರಿಯನ್ನು ಕಟ್ಟುತ್ತಾರೆ. ನಾಗರೀಕತೆಯ ಶೋಧದಲ್ಲಿ ಮಾನವ ಬಹುದೂರ ಬಂದಿದ್ದರೂ ಸಹ ಅವನ ಮೂಲ ಪ್ರವೃತ್ತಿಗಳಾದ ಕಾಮ, ದ್ವೇಷ, ಕ್ರೋಧ, ಕ್ರೌರ್ಯ ಇವೆಲ್ಲವುಗಳು ಇನ್ನೂ ಆದಿಮ ಸ್ಥಿತಿಯಲ್ಲಿಯೇ ಇರುವುದು ಅವನ ಜೀವನದ ದುರಂತ. ಕೊನೆಯಿಲ್ಲದ ಆ ವ್ಯವಸ್ಥೆಯನ್ನೇ ಕೊಪ್ಪಲು, ಹೊಸೂರು ಇಂಥ ಕಾಡಿನ ಮಧ್ಯದ ಗ್ರಾಮಗಳ ಪರಿಸರದಲ್ಲಿ ನಡೆಯುವ ಕ್ರಿಯೆಯ ಮೂಲಕ ಅಭಿನಯಿಸಿ ತೋರಿಸಿದ್ದಾರೆ.

ಶ್ರೀಕೃಷ್ಣ ಆಲನಹಳ್ಳಿಯವರ ಎರಡನೆಯ ಕಾದಂಬರಿ "ಪರಸಂಗದ ಗೆಂಡೆತಿಮ್ಮ" ಕಾದಂಬರಿ ೧೯೭೪ರಲ್ಲಿ ಪ್ರಕಟವಾಗಿದೆ. ಇದು ಮುಗ್ಧ ಗ್ರಾಮೀಣರ ಬದುಕನ್ನೇ ವಸ್ತುವನ್ನಾಗಿ ಒಳಗೊಂಡ ಕೃತಿಯಾಗಿದೆ. ಕಾದಂಬರಿ ಪ್ರಾರಂಭವಾಗುವ ಭಾಗವನ್ನು ಕಾದಂಬರಿಕಾರರು ಈ ರೀತಿಯಾಗಿ ಪರಿಚಯಿಸುತ್ತಾರೆ. ಹತ್ತಿರತ್ತಿರ ನಂಜನಗೂಡು, ಮೈಸೂರು ಆಗಾಗ ಬರುತ್ತವೆ. ಹಳ್ಳಿ ಮತ್ತು ಪೇಟೆಗಳನ್ನು ಸಂಧಿಸುವ ಸಂದರ್ಭ "ಕಂಬ ನೆಡುವ ಶಾಸ್ತ್ರದ ಮೂಲಕ ನಡುವೆ ಸಡಗರ ಪ್ರಾರಂಭವಾಯಿತು. ಜೊತೆಗೆ ಸಾಲುಸಾಲಾಗಿ ಬಂಧುಬಾಂಧವರ ಗಾಡಿಗಳು ಗೌಹಳ್ಳಿಯ ಕಲ್ಲುಬೀದಿಯಲ್ಲಿ ಗಡಗಡನೆ ಸದ್ದುಮಾಡುತ್ತಾ ಬರತೊಡಗಿದವು. ಇಳಿಹೊತ್ತಿಗೆ ಸರಿಯಾಗಿ ಗಂಡಿನ ಕಡೆಯವರ ಸಾಲುಗಾಡಿಗಳನ್ನು ಗೌಹಳ್ಳಿಗೆ ವಿಶಿಷ್ಟವಾಗಿದ್ದ ಕೊಂಬುಕಹಳೆ, ತಮಟೆ, ತಾರಸಿ, ದಿಮ್ಮಿ, ಕೋಣಮಿಣಿ ಇತ್ಯಾದಿ ಕಿವಿಗಿವುಡಾಗಿಸುವಂತಹ ವಾದ್ಯಗಳು ಸಂಭ್ರಮದಿಂದ ಸ್ವಾಗತಿಸಿದವು. ಊರ ಅಂಕದಲ್ಲಿ ಪ್ಯಾಟೆಯವರೆಲ್ಲ ಗಾಡಿಯಿಂದಿಳಿದು ಊರ ಬೀದಿವುದ್ದಕ್ಕೂ ನಡೆದುಕೊಂಡೆ ಬಂದರು"[೧೯] ಎಂಬಲ್ಲಿ ಈ ಜಗತ್ತಿಗೆ ಲಾರಿ, ಬಸ್ಸು ಇನ್ನು

---

೧೮. ಜಿ.ಎಸ್.ಆಮೂರ, 'ಅರ್ಥಲೋಕ', ೧೯೯೦, ಪು. ૩૨.

೧೯. ಶ್ರೀಕೃಷ್ಣ ಆಲನಹಳ್ಳಿ, 'ಪರಸಂಗದ ಗೆಂಡೆತಿಮ್ಮ', ೨೦೧೬, ಪುಟ. ೪.

ಪರಿಚಯವಿಲ್ಲದಿರುವುದು ಅರಿವಿಗೆ ಬರುತ್ತದೆ. ಈ ಕಾದಂಬರಿಯಲ್ಲೂ ಹಳತು-ಹೊಸತರ ಸಂಘರ್ಷವನ್ನು ಈ ಕಾದಂಬರಿ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ.

ಕಾದಂಬರಿಯ ಮುನ್ನುಡಿಯಲ್ಲಿ ಲೇಖಕರೇ ಬರೆಯುವ ಮಾತೆಂದರೆ ನನ್ನ ಬಾಲ್ಯದಲ್ಲಿ ಗಾಢವಾಗಿ ಕಾಡಿನೊಳಗೆ ಅತ್ಯಂತ ಆಪ್ತವಾಗಿ ಉಳಿದು ಸದಾ ಉರಿಯುತ್ತಿರುವ ಹತ್ತಾರು ಮೂರ್ತಿಗಳಲ್ಲಿ ಇವನು ಒಬ್ಬ. ಊರಿನಪಾಲಿಗೆ ಅತಿಸಾಮಾನ್ಯವೆನಿಸಿದ ವ್ಯಕ್ತಿ ಅಂದು ನನ್ನ ಮುಗ್ದಮನಸ್ಸಿಗೆ ಅಸಾಮಾನ್ಯ ಹಾಗೂ ಅದ್ಭುತವೆನಿಸಿದಂತೆ, ಇವತ್ತು ಜ್ವಲಂತವಾಗಿ ಆಗಿಸಿದ್ದೆ ಕೃತಿಯ ಸೃಷ್ಟಿಗೆ ಕಾರಣ ಎಂಬ ತಮ್ಮ ಅಂತರಾಳದ ನುಡಿಯನ್ನು ಮಿಡಿದಿದ್ದರೆ ಈ ಆಧುನೀಕರಣದ ಹೊಸಗಾಳಿ, ಬಣ್ಣ ಗೆಂಡೆತಿಮ್ಮನಹೆಂಡತಿ ಮಾವಳ್ಳಿಯ ಮರಂಕಿ ಜೊತೆ ಬಂದಿತ್ತು. ಅವಳ ಬಯಕೆಗಳು ಗೌಹಳ್ಳಿಯ ಹೆಣ್ಣುಗಳ ಬಯಕೆಗಳಾಗಿ ರೂಪಾಂತರಗೊಂಡಿದ್ದವು. ಗೌಹಳ್ಳಿ ಹೆಣ್ಣುಮಕ್ಕಳ ಉಡುಗೆತೊಡುಗೆಯಲ್ಲಾದ ಬದಲಾವಣೆ ಇಡೀ ವಾತಾವರಣವನ್ನೇ ಬದಲಾಯಿಸುವಷ್ಟು ಬಲಿಷ್ಟವಾಗತೊಡಗಿತ್ತು. "ತಾವು ಸಾಬೂನಿನಿಂದ ಸ್ವಚ್ಛಗೊಳಿಸಿದ ತಮ್ಮ ಸೀರೆ ರವಕೆಗಳಾಗಿ, ಗಂಡಂದಿರ ಅಂಗಿ ಚಡ್ಡಿಗಳಾಗಲಿ ಹೀಗೆ ಮೊದಲ ಹಾಗೇ ಜಿಡ್ಡುಗಟ್ಟುವಂತಿರಲಿಲ್ಲ. ಎಲ್ಲೆಂದರಲ್ಲಿ ಏನಿದ್ದರೂ ಸರಿ ಅದರ ಮೇಲೆ ಕೂತುಬಿಡುತ್ತಿದ್ದರು. ಈಗ ಕೂರುವ ಮುಂಚೆ ನೋಡಿ ಕೂರುತ್ತಿದ್ದಾರೆ. ದಿನಕ್ಕೆ ನಾಲ್ಕು ಸಲವಾದರೂ ಮನೆಗುಡಿಸುತ್ತಿದ್ದರು. ಹೆಣ್ಣುಮಕ್ಕಳು ವಾರಕ್ಕೆರಡು ಸಲ ಸ್ನಾನಮಾಡುವ ದಿನವೂ ತಲೆಬಾಚುವ, ಲಂಗಕಾಣುವಂತೆ ಸೀರೆ ತೊಡುವ ಪದ್ಧತಿಯಲ್ಲಿ ಗೌಹಳ್ಳಿಯಲ್ಲಿ ಜಾರಿಗೆ ಬರುತ್ತಿದ್ದಂತೆ ಹಿರಿಯರು ತುಂಬಾ ತಳಮಳಿಸಿದರು" ಅಷ್ಟರಮಟ್ಟಿಗೆ ಆ ಊರು ಬದಲಾಗಿದೆ. ಗೌಹಳ್ಳಿಯ ಗೆಂಡೆತಿಮ್ಮ ಊರಿಂದೂರಿಗೆ ಎಲೆ ಅಡಿಕೆ ಮಾರಿ ಬದುಕುತ್ತಿದ್ದ ತೀರ ಸಾಮಾನ್ಯವ್ಯಕ್ತಿ. ಮುಗ್ದ ಮಡದಿ ಮರಂಕಿಯಾಗಿ ಬಂದಾಗ ಅವನ ಬದುಕಿನ ಮೇಲೆ ಬೀಸಿದ ಹೊಸಗಾಳಿ ನಿಧಾನವಾಗಿ ಊರನ್ನೆಲ್ಲಾ ಆವರಿಸಿದೆ. ಪೇಟೆ ರುಚಿಕಂಡಿದ್ದ ಮರಂಕಿ ಗಮಲುಎಣ್ಣೆ, ಸ್ನೋ, ಪೌಡರ್, ಸಾಬೂನು, ಲಂಗಬಾಡಿ ಊರಲ್ಲಿ ಕ್ರಾಂತಿಯನ್ನು ಎಬ್ಬಿಸಿ ಅವಳ ಆಗಮನದಿಂದ ಗೆಂಡೆತಿಮ್ಮನ ವೈಯಕ್ತಿಕ ಬದುಕಿನಲ್ಲೂ ಸಾಕಷ್ಟು ಬದಲಾವಣೆಗಳಾದವು. "ಬೆಳಿಗ್ಗೆ ಎದ್ದ ಕೂಡಲೇ ಮರಂಕಿ ಗಂಡನಿಗೆ ನಂಜನಗೂಡು ಹಲ್ಲುಪುಡಿಯಿಂದ ಹಲ್ಲುಜ್ಜುವ ರೂಢಿ ಮಾಡಿಸಿದಳು. ಮದುವೆಗೆ ಮುಂಚೆ ಅವನಿಗೆ ಹಲ್ಲುಜ್ಜುವ ರೂಢಿಯೇ ಇರಲಿಲ್ಲ. ಇವನ ಹಲ್ಲಿನ ಹಸಿಹಳದಿಯ ಪಾಚಿ ಕಳಚಿದ್ದು ಮರಂಕಿಯ ಒತ್ತಾಯದಿಂದ ಎನ್ನಬಹುದು. ವ್ಯಾಪಾರಕ್ಕೆ ಹೋಗಿಬಂದ ತಕ್ಷಣ ಸ್ನಾನಮಾಡಿ ಬಟ್ಟೆ ಬದಲಾಯಿಸುವುದು. ತಲೆಬಾಚಿಕೊಳ್ಳುವುದು ಇತ್ಯಾದಿ ನಿಯಮಗಳು ಕಡ್ಡಾಯವಾಗಿಬಿಟ್ಟವು" ಮನೆಯೊಳಗಡೆ ಇದಾದರೆ ಮನೆಯ ಹೊರಗೆ ಹಳ್ಳಿಯ ಮಕ್ಕಳಲ್ಲಿ ನಾಜೂಕಿನ ಸಂಸ್ಕೃತಿ ಬೆಳೆದು ಹಿರಿಯರ ಸಂಪ್ರದಾಯವನ್ನು ಹೀಯಾಳಿಸಿದಂತೆ

ನಿರ್ಮಾಣವಾಗುತ್ತದೆ. ಮುಂದುವರೆದು ಗೌಹಳ್ಳಿಯ ಗೆಂಡೆತಿಮ್ಮ ಮನೆಯವರ ಮತ್ತು ಊರಿನವರ ದೂರುಗಳು ಹೆಚ್ಚಾದಂತೆ ತನ್ನ ಮನೆಯಲ್ಲಿ ಅಶಾಂತಿಮೂಡಿ ಶಾಂತಿಹೊಂದಲು ಪ್ರಯತ್ನಿಸುವುದು. ಇದು ಅವನ ತಾಯಿಗೆ ಹಿಡಿಸದೆ ಅವಳು ಮಾಡುವ ಆಕ್ಷೇಪ ಅತ್ತೆ ಸೊಸೆಯ ಜಗಳಕ್ಕೆ ನಾಂದಿಯಾಗಿ ಮನೆ ಎರಡು ಪಾಲಾಗುತ್ತದೆ. "ಗೆಂಡೆತಿಮ್ಮ ಪಾಲಾದ ಸುದ್ದಿ ಸಾಲುಂಡಿಯ ಪರಿವಾರದ ಕೇರಿಗೆ ನಂಬಲಾಗದ ಸುದ್ದಿ ಎನಿಸಿತು. ಅಣ್ಣತಮ್ಮಂದಿರು ಎಂದರೆ ಅವರಂಗಿರಬೇಕು. ಒಳ್ಳೆ ರಾಮ ಲಕ್ಷ್ಮಣ ಇದ್ದಂಗವ್ರೆ ಅಂತ ಹೆಸರಾಗಿದ್ದವರು. ಈಗ ಬೇರೆಯಾಗಿ ಮನೆಯಲ್ಲಿ ಎರಡು ಒಲೆಗಳು ಉರಿಯುತ್ತಿವೆ ಅನ್ನುವುದು ಖಚಿತವಾದಾಗ ಸುಮಾರು ಜನ ಛೇ ಈಗಾಗಬಾರದಿತ್ತು ಅಂದುಕೊಂಡರು".

ಹೀಗೆ ಏನೇನೊ ಅಂದುಕೊಂಡರು ಗೆಂಡೆತಿಮ್ಮ ಪಾಲಾಗಿ ಪ್ರತ್ಯೇಕ ಒಲೆ ಹೂಡಿ ತನ್ನ ಜೀವಕ್ಕೆ ಹೊಸ ಆಯಾಮ ತಂದುಕೊಂಡ ಈಗ ಏನು ಮಾಡುವುದಾದರೂ ಅವನಿಗೆ ನಿರ್ಭಯ. ಅವನನ್ನು ಇನ್ನು ಯಾರು ವಕ್ರವಾಗಿ ನೋಡುವಾಗಿಲ್ಲ. ಯಾರ ಕೊಂಕಿನ ಮಾತನ್ನು ಕೇಳಬೇಕಿಲ್ಲ. ನಮ್ಮ ಸುಖಕ್ಕೆ ಯಾರ ಅಡ್ಡಿ ಆತಂಕವು ಇಲ್ಲ ಬೇಕಿದ್ದರೆ ದಿನವೂ ಸ್ನಾನಮಾಡಬಹುದು. ಬೇಕೆನಿಸಿದ್ದನ್ನು ಬಳಸಬಹುದು ಎಂಬ ಕಲ್ಪನೆಯ ಸ್ವರ್ಗ ಅವನಿಗೆ ಸಿಕ್ಕಿಬಿಟ್ಟಿತ್ತು. ಆದರೆ ಇತ್ತ ಗೌಹಳ್ಳಿ ಹಿರಿಯರಿಗೂ ಗೆಂಡೆತಿಮ್ಮನ ಮೇಲೆ ಸಿಟ್ಟುಬಂದು ಪಂಚಾಯಿತಿ ಸೇರಿ "ನಾಕುಜನ ಮಾನ ಮರ್ವಾದಿಗೆ ಬದುಕವ್ರಲ್ಲ ವಸಿ ಕೇಳಿ ಈ ದೇಸ ಕೆಡ್ಸಿ ಬಂದಿರೋ ಸೂಳೆಮಗ ಕುಂತವ್ನೆ ನೋಡಿ....... ಮಳ್ಳಿ ಕುಂತಂಗೆ ಇವು ನಾವ್ಯಾರು ಇಲ್ದ ಹೊತ್ನಲ್ಲಿ ಅರೀದ ಹೆಣ್ಣೈಕಳಿಗೆ ಪ್ಯಾಟಿಯವು ಆಕ್ತಾರೆ ನೋಡಿ ಅಂತ ಮನೆ ಆಳ್ಮಾಡೋ ಸಾಮಾನ್ನೆಲ್ಲ ತಂದ್ಕೊಟ್ಟವ್ನೆ ಅದೆಷ್ಟು ದಿನಸಿ ಕದ್ದು ಸುರಿಸ್ಕಂಡುವೋಗವ್ನೋ.......... ಇವ್ನು ತಂದುಕೊಟ್ಟ ಅನಿಷ್ಟದ ಸಾಮಾನ್ನಿಂದ್ಲೆ ದಿನಾ ನಮ್ಮನೇಲಿ ಅತ್ತಿದ ಜಗಳ ಅರಿದಂಗಾಗಿದೆ..... ಕಡೀಕೆ ನನ್ಮಗ ಪಾಲಕೊಡು ಅಂತ ಅನ್ನಮಟ್ಟಕ್ಕೆ ಬಂದ ಕುಂತವ್ನೆ..... ಇಂಗೆ ಮನೆ ಆಳ್ಮಾಡೋ ಕೆಲ್ಸಮಾಡವ್ನಲ್ಲಾ ಈ ಜಾತ್ಗೆಟ್‌ಬಡ್ಡೀಮಗ ಇವ್ನಿಂದ ನಾವು ಬದುಕಬೇಕೋ ಬ್ಯಾಡ್ವೋ" ಈ ಮಾತಿನಿಂದ ಊರಿಗೆ ತನ್ನಿಂದಾಗಿ ಹೊಸಬೆಳಕು ಬಣ್ಣ ಬಂದವೆಂದು ಹಿಗ್ಗಿದ ಗೆಂಡೆತಿಮ್ಮನ ಅನಿಸಿಕೆ ತಲೆಕೆಳಗಾಯಿತು. ಅವನಿಗೆ ತಾನೀಗ ತಬ್ಬಲಿಯೆನಿಸಿತು. ಕೆಂಗಣ್ಣ ಒದ್ದುದ್ದಕ್ಕಿಂತ ಇಡೀಜನರೆಲ್ಲಾ 'ಮನೆಯಾಳ' ಎಂದು ಬೈದದ್ದು ಸಹಿಸಿಕೊಳ್ಳಲಾಗಲಿಲ್ಲ. ಕನಸಿನಲ್ಲೂ ಬೇರೊಬ್ಬರಿಗೆ ಕೇಡುಬಯಸಿದವನಲ್ಲ, ಯಾರಿಂದಲೂ ಒಂದು ಮಾತು ಪಡೆದವನಲ್ಲ. ಹಾಗಿದ್ದರೂ ಇಂತ ಅಪಮಾನಕ್ಕೆ ಪಾಪಕ್ಕೆ ಒಳಗಾಗುವ ಕೆಲಸಕ್ಕೆ ಕೈ ಹಾಕಿದೆನಲ್ಲಾ ಎಲ್ಲ ಈ ಮರಂಕಿಯಿಂದ ಅಂತ ಅನಿಸಿ ಅನಿಷ್ಟದಮುಂಡೆ ಯಾವ ಇಸಗಳಿಗೆಲಿ ಕಾಲಿಟ್ಟಳೋ ತನ್ನ ಗಾಚಾರ ಹಿಂಗಾಯಿತು ಎಂದು ಮನಸ್ಸಿನಲ್ಲಿ ಶಪಿಸಿದನು.

ಪಂಚಾಯಿತಿಯ ಈ ತೀರ್ಮಾನಕ್ಕೆ ಮರುಕವಿದ್ದರೂ ನೇರವಾಗಿ ವಿರೋಧಿಸಲು ಆಗುತ್ತಿಲ್ಲ. ಯಾವುದೋ ಮದುವೆ ಕಾರ್ಯವಿದ್ದ ಕಾರಣ ಪ್ರಶ್ನಿಸಲಾಗದೆ ಯಜಮಾನರು ಮೌನವಹಿಸುತ್ತಾರೆ. ಈಗ ಮರಂಕಿಯ ಸರದಿ ಗೆಂಡೆತಿಮ್ಮನಿಗೆ ತನ್ನ ಹೆಂಡತಿ ತಂದ ಶಿಷ್ಟತೆ, ನಯಗಾರಿಕೆ, ದಿನದಿಂದದಿನಕ್ಕೆ ಬೆಳೆಯುತ್ತಿದ್ದ ಹೊಸ–ಹೊಸಬಯಕೆಗಳು ಅಸಹನೀಯ ವಾಗುತ್ತಿದ್ದವು. ಶುಚಿತ್ವ, ವ್ಯವಸ್ಥೆ, ಸೌಂದರ್ಯಗಳ ಜೊತೆ ಮರಂಕಿವಿಲಾಸದ ಜೀವನ ಬಂದಿತ್ತು. ಒಟ್ಟಾರೆ ಸಾಲುಂಡಿಯಲ್ಲಿ ಇಷ್ಟುಕಾಲ ಪ್ರಕ್ಷುಬ್ದ ವಾತಾವರಣ ಕವಿದು ಎಲ್ಲರೂ ಒಂದಿಲ್ಲೊಂದು ಬಗ್ಗೆ ಮಾನಸಿಕ ಅಸ್ವಸ್ಥತೆಗೆ ಒಳಗಾಗಿದ್ದರು. ಸದಾ ಮುಚ್ಚುತ್ತಿದ್ದ ಕಿಟಕಿ ಬಾಗಿಲುಗಳು ಮರಂಕಿ ಬಂದಾಗಿನಿಂದ ತೆರೆದುಕೊಂಡಿದ್ದ ಗಾಳಿಬೆಳಕಿನ ಜೊತೆಗೆ ಇಲ್ಲದ ಪೀಡೆಪಿಶಾಚಿಗಳು ಒಳಗೆ ಬಂದು ಈಗಾಯಿತು ಎಂಬುದು ಬೀದಿಯಮ್ಮನ ನಂಬುಗೆಯಾಗಿತ್ತು.

ಕಾಂದಂಬರಿ ಮರಂಕಿಯನ್ನು ವೈಭವೀಕರಿಸುವುದೂ ಇಲ್ಲ ಖಳನಾಯಕಿಯಂತೆಯೂ ಚಿತ್ರಿಸುವುದಿಲ್ಲ. ಅವಳು ಗೆಂಡೆತಿಮ್ಮನಿಗಿಂತ ಆಧುನಿಕವಾಗಿದ್ದಳು ಅಷ್ಟೇ ಗಂಡ ಇದ್ದಾಗ ಆಕೆ ಅವನಿಗೆ ಒಂದುಚೂರು ವಂಚನೆಯನ್ನು ಮಾಡದೆ ಅವನನ್ನು ಖುಷಿಪಡಿಸುತ್ತಾ ಇದ್ದಳು. ಬಾಹ್ಯದಲ್ಲಿ ಗಂಡನನ್ನು ಎಷ್ಟೇ ಪ್ರೀತಿಸಿದರು ಆಂತರ್ಯದಲ್ಲಿ ಬೇರೆಯದೆ ಆಗಿತ್ತು. ಇವನು ಮರಂಕಿಯ ಆಸೆಗಳನ್ನು ಸೂಕ್ಷ್ಮವಾಗಿ ಅರಿಯುವ ಜಾಣತನವಿರಲಿಲ್ಲ. ಗೆಂಡೆತಿಮ್ಮನದು ಮಾಸದ ಮುಗ್ಧತೆ. ಈ ಮುಗ್ದತೆ ಮರಂಕಿಯನ್ನು ಗಾಢವಾಗಿ ಪ್ರೀತಿಸುತ್ತಿತ್ತು. ಆದರೆ ಅದರ ಅಭಿವ್ಯಕ್ತಿಯ ನಯಗಾರಿಕೆ ಅವನಿಗೆ ಗೊತ್ತಿರಲಿಲ್ಲ ಅಷ್ಟೇ.

ಮರಂಕಿಗೆ ತನ್ನ ಗಂಡನ ಬಗ್ಗೆ ಗಾಢವಾದ ಪ್ರೀತಿಯಷ್ಟೇ ಜುಗುಪ್ಸೆಯು ಕೆಲ ಸಮಯದಲ್ಲಿ ಉಂಟಾಗುತ್ತಿತ್ತು. ತಾನೆಷ್ಟೇ ಸಾಹಸಪಟ್ಟರು ತನ್ನ ಗಂಡ ನಂಜನಗೂಡಿನ ಮಹದೇವ ಇಲ್ಲವೇ ಗೌಡರ ಶಿವಣ್ಣನಂತೆ ಡಿಕಾವ್ ಆಗಿ ಕಾಣಲಾರ ಎಂಬುವುದು ಸ್ಪಷ್ಟವಾಗಿತ್ತು. ಒಟ್ಟಾರೆ ಅವನ ಬದುಕು ಯಾವ ಉಬ್ಬರವಿಳಿತಕ್ಕೂ ಸಿಕ್ಕದೆ ಸರಾಗವಾಗಿ ಸಾಗಿತ್ತು. ದಿನಕಳೆದಂತೆ ಮರಂಕಿಗೆ ಬೇಸರ ಆವರಿಸಿತ್ತು.

ಗೆಂಡೆತಿಮ್ಮ ಮರಂಕಿಯರ ಮೂಲಕ ಆಧುನಿಕತೆಗೆ ಕಾಲಿಟ್ಟಿದ್ದು ಸರಿಯೆನಿಸಿದರು ಸಂಪ್ರದಾಯವನ್ನು ಒಪ್ಪಿ ನಿಂತಿರುವ ಸಮಾಜದ ತಾತ್ಕಾಲಿಕ ತಡೆಗೆ ಇವರಿಬ್ಬರು ಬಲಿಯಾಗುವುದನ್ನು ಕಾದಂಬರಿಯ ಅಂತಿಮಘಟ್ಟದಲ್ಲಿ ಲೇಖಕರು ಸ್ಪಷ್ಟಪಡಿಸುತ್ತಾರೆ. ಈ ಕಾದಂಬರಿ ಕುರಿತಂತೆ ಅನಂತಮೂರ್ತಿಯವರು ಪ್ರಸ್ತಾಪಿಸುತ್ತಾ "ನೆಲದ ದಟ್ಟವಾಸನೆ ಇರುವ ತನ್ನ ಬಾಲ್ಯದ ಸಂವೇದನೆಯನ್ನು ತನ್ನ ಬಾಳನ್ನು ವಿವಿಧ ದಿಕ್ಕುಗಳಲ್ಲಿ ವರ್ಣಿಸುತ್ತಿರುವ ಪ್ರಬುದ್ಧ ಜೀವನದ ವೈಚಾರಿಕತೆಯನ್ನು ಒಟ್ಟಿಗೆ ಏಕಕಾಲದಲ್ಲಿ ದುಡಿಸಿಕೊಂಡು ತನ್ನ ನೈಜವಾದ ವ್ಯಕ್ತಿತ್ವಕ್ಕೆ

ಅರ್ಥಪೂರ್ಣವಾದ ರೂಪವನ್ನು ಕೊಡುವುದು ಕೃಷ್ಣರ ಕಲೆಗಾರಿಕೆಯ ಮುಖ್ಯ ಹೋರಾಟವಾಗಿದೆ".

ಟಿ.ಪಿ.ಅಶೋಕ ಅವರ ದೃಷ್ಟಿಯಲ್ಲಿ " 'ಕಾಡು' ತುಂಬಾ ದಟ್ಟವಾದ ಆದರೆ ಸೀಮಿತ ಆಶಯವುಳ್ಳದ್ದು. ಭುಜಂಗಯ್ಯ ಬಹಳ ಮಹತ್ವಾಕಾಂಕ್ಷೆಯುಳ್ಳವ. ಆದರೆ ಸಾಂದ್ರತೆಯನ್ನು ಕಳೆದುಕೊಂಡಿರುವ ಕಾದಂಬರಿ. ಪರಸಂಗದ ಗೆಂಡೆತಿಮ್ಮದಲ್ಲಿ ಎರಡು ಹದವಾಗಿ ಬೆರೆತಿವೆ. ಹಾಗಾಗಿ ಅದು ನಿಸ್ಸಂದೇಹವಾಗಿ ಕೃಷ್ಣರ ಅತ್ಯುತ್ತಮ ಬರವಣಿಗೆ ಕನ್ನಡ ಕಾದಂಬರಿಯ ಮುಖ್ಯ ಆಶಯಗಳನ್ನು ಗರ್ಭದಲ್ಲಿಟ್ಟುಕೊಂಡು ಅವುಗಳಿಗೆ ತನ್ನ ಹೊಸ ಆಯಾಮಗಳನ್ನು ಕೊಡಿಸಿದ ವಿಶಿಷ್ಟ ಕಾದಂಬರಿ ಅಷ್ಟೇ ಅಲ್ಲ ಕನ್ನಡ ಕಾದಂಬರಿಗೆ ಒಂದು ಮುನ್ನೋಟ ಸೂಚಿಸಿದ ಕಾದಂಬರಿಯೂ ಹೌದು. ಈ ಕಾದಂಬರಿಯ ಪ್ರಾದೇಶಿಕ ಆಳಕ್ಕೆ ಹೆಚ್ಚುಹೊತ್ತು ಕೊಡುತ್ತಾರೆ. ಕಾಡಿನ ಕಿಟ್ಟಿ ಆಧುನಿಕತೆಯನ್ನು ಕಂಡುಬೆಚ್ಚುತ್ತಾನೆ. ಗೆಂಡೆತಿಮ್ಮ ಅಳುಕಿನಿಂದ ಪ್ರವೇಶಿಸಿದರೆ ಭುಜಂಗಯ್ಯ ಯೋಚಿಸಿ ಚರ್ಚಿಸಿ ಪ್ರಜ್ಞಾಪೂರ್ವಕ ನಿರ್ಧಾರ ತೆಗೆದುಕೊಳ್ಳುತ್ತಾನೆ"[೨೦]

'ಭುಜಂಗಯ್ಯನ ದಶಾವತಾರ' ೧೯೮೨ರಲ್ಲಿ ಪ್ರಕಟವಾದ ಈ ಕಾದಂಬರಿ ವಾಸ್ತವ ಮಾರ್ಗ ಇನ್ನು ಮುಗಿದಿಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ. ಭುಜಂಗಯ್ಯ ಒಬ್ಬ ರೈತ. ಪರಂಪರಾಗತವಾಗಿ ವ್ಯವಸಾಯ ಮಾಡಿಕೊಂಡು ಬಂದವನು. ಮಳೆಯನ್ನೇ ನೆಚ್ಚಿಕೊಂಡು ಅವನು ಬದುಕನ್ನು ನಡೆಸಿದವನು. ಆದ್ದರಿಂದ ಬದುಕಿನ ಕಷ್ಟದ ಅರಿವಿದೆ. ಇದರಿಂದ ತನ್ನ ಸ್ಥಿತಿಯನ್ನು ಉನ್ನತೀಕರಿಸಿಕೊಳ್ಳುವ ಬಗ್ಗೆ ಚಿಂತಿಸುತ್ತಾನೆ. ಹೊಸದನ್ನೇನಾದರೂ ಮಾಡಬೇಕೆಂಬ ಚಡಪಡಿಕೆಯಲ್ಲಿರುವಾತ ಆಧುನಿಕತೆಯನ್ನು ಬಯಸುವಂತೆ ಅದು ಅವನಿಗೆ ಅನಿವಾರ್ಯವು ಆಗಿದೆ. ಸಂಪ್ರದಾಯನಿಷ್ಠ ದೇವರಪೂಜೆಯು ನಿರಂತರವಾಗಿ ಅವನಿಂದ ಸಾಗಿದೆ. ಆಧುನಿಕತೆ ಈಗಾಗಲೇ ಮಾದಹಳ್ಳಿಗೆ ಬಸ್ಸು ಬಂದಿದೆ. ಸುತ್ತಲ ಹಳ್ಳಿಯವರೆಲ್ಲರಿಗೂ ಅದೇ ಅತ್ತುವ ಇಳಿಯುವ ಕೇಂದ್ರಸ್ಥಾನ ಈ ಪ್ರಯಾಣಿಕರಿಂದ ಒಂದು ಸಾಮಾಜಿಕ ಸಂಸ್ಥೆಯ ನಿರ್ಮಾಣವಾಗುತ್ತದೆ. ಈ ಪ್ರಯಾಣಿಕರಿಗೆ ತಮ್ಮದೇ ಆದ ಸಮಸ್ಯೆಗಳಿವೆ ಪ್ರಯಾಣಿಕರ ಬಾಯಿಂದಲೇ ಅಪೇಕ್ಷಿತ ಸೌಕರ್ಯಗಳು ಹೊರಬೀಳುವುದು. "ಇಷ್ಟರಲ್ಲಾಗಲೇ ಬರಬೇಕಾಗಿದ್ದ ಬಸ್ ಏಕೋ ಇವತ್ತು ಇನ್ನು ಬಂದಿರಲಿಲ್ಲ. ಕೆಲವು ಪ್ರಯಾಣಿಕರು ಬಿಸಿಲ ಝಳಕ್ಕೆ ತೂಕಡಿಸಿದರು. ಕೆಲವರು ಬಾಯಾರಿಕೆಯಿಂದ ಪರದಾಡುತ್ತಾ ಇಲ್ಲೆಲ್ಲೂ ನೀರು ಸಿಕ್ಕುವುದಿಲ್ಲವೆಂದು ತಿಳಿದಿದ್ದರೂ ಬಾಯಿಚಪಲಕ್ಕೆ ಇಲ್ಲೆಲ್ಲಾದರೂ ಕುಡಿಯುವಷ್ಟು ನೀರು ಸಿಕ್ಕೀತಾ?". ತಾವೇ ತೆಪ್ಪಗಾದರು ತುಂಬಾ ಬಾಯಾರಿದ ಇನ್ನೊಬ್ಬ ಇಂಥ ಸುಡುಗಾಡು ಜಾಗ

---

೨೦. ಟಿ.ಪಿ.ಅಶೋಕ, 'ಸಾಹಿತ್ಯ ಸಂದರ್ಭ', ಪುಟ. ೭೪, ೧೯೯೭

ನಾನೆಲ್ಲೂ ನೋಡಿಲ್ಲ ಬುಡ್ರಿ. ಕುಡಿಯಕ್ಕೂ ಒಂದು ತೊಟ್ಟು ನೀರು ಸಿಕ್ಕಲ್ಲ ಎಂದ್ರೆ! ಎಂದು ಉದ್ಗರಿಸಿದ ಎಲ್ಲೆಲ್ಲೂ ಹೋಟ್ಲು ಅಂತ ಇಡ್ತಾವ್ರೆ ಈ ಜಾಗದಲ್ಲಿ ಯಾಕೆ ಇಡಬ್ಯಾಡ್ದು? ದಿನ ಇಷ್ಟೊಂದು ಜನ ಬತ್ತಾರೆ. ಒಂದೊಂದು ಕಾಫಿ ಕುಡುದ್ರು ಸಾಕು ಸರಿಯಾಗೇ ಯಾಪಾರ ಆಯ್ತದಪ್ಪ ಎಂದಾಗ ಭುಜಂಗಯ್ಯನ ಕಿವಿಗಳು ಚುರುಕಾದವು ಪ್ರಯಾಣಿಕರ ಮಾತಿನಲ್ಲಿ ಅರ್ಥವಿತ್ತು. ಅವನ ಮಾತು ಆಲಿಸುತ್ತಿದ್ದಂತೆ ಅವನ ಮಾತಿಗೆ ಬೆಲೆ ಸಿಕ್ಕಂತೆ ಕಂಡು 'ನೋಡಿ ಸ್ವಾಮಿ ಮಾದಾಪುರದ ಕೂಡುರಸ್ತೆ ಇಲ್ವಾ ಅಲ್ಲೂ ಮೊದಲು ಹಿಂಗೆ ಇತ್ತು ಯಾವನೋ ಒಬ್ಬ ಬಂದು ಬರಿ ಜೋಪಡಿ ಹಾಕಿ ಹೋಟ್ಲ ಇಟ್ಟ ನೋಡಿ. ಇವತ್ತು ಯಾರು ಅವನನ್ನು ಹಿಡ್ಕಳಂಗಿಲ್ಲ ಎರಡೇ ವರ್ಷಕ್ಕೆ ಗಟ್ಟಿ ಕುಳ ಆಗ್ಬುಟ್ಟ' ಎಂಬ ಸಂಭಾಷಣೆಯ ಮಾತುಗಳು ಭುಜಂಗಯ್ಯನಿಗೆ ದಿಗ್ದರ್ಶನವಾದಂತಾಯಿತು. ಹಿಂದೆ ಹೇಳಿದಂತೆ ಚರ್ಚಿಸಿ ಯೋಚಿಸಿ ಹೋಟೆಲ್' ಇಡುವ ತೀರ್ಮಾನ ಮಾಡಿದ.

ಗ್ರಾಮೀಣ ಪ್ರದೇಶದ ಜನರ ನಾಡಿಮಿಡಿತವನ್ನು ಅರಿತಿರುವ ಕೃಷ್ಣರವರು ತಮ್ಮ ಸ್ಥಳೀಯ ಭಾಷೆಯಲ್ಲಿ ಕಾದಂಬರಿಯನ್ನು ಕಟ್ಟಿರುವುದನ್ನು ಕಾಣಬಹುದು. ಈ ಕಾದಂಬರಿಯಲ್ಲಿ ಬರುವ ಎಲ್ಲ ಪಾತ್ರಗಳು ನಗರ ಮತ್ತು ಗ್ರಾಮೀಣ ಬದುಕಿಗೆ ತಮ್ಮ ಮೈಮನಸ್ಸುಗಳನ್ನು ಒಡ್ಡಿಕೊಂಡು ವ್ಯತಿರಿಕ್ತವಾಗಿ ಕೆಲವು ಸಂದರ್ಭಗಳಲ್ಲಿ ವಿಲ-ವಿಲ ಒದ್ದಾಡುತ್ತವೆ. ಇದು ಆಲನಹಳ್ಳಿಯವರ ಕಥನಸಾಹಿತ್ಯದ ಮುಖ್ಯಲಕ್ಷಣಗಳಲ್ಲಿ ಒಂದು ಎಂದೇ ಗುರುತಿಸಬಹುದು. ಇನ್ನು ಕೆ.ವಿ.ನಾರಾಯಣರವರು ಹೇಳುವುದನ್ನು ನೋಡಿದರೆ "ಈ ಕಾದಂಬರಿಯನ್ನು ಮತ್ತೆ ಮತ್ತೆ ಓದಿನೋಡಿದರೆ ಇಲ್ಲಿ ನಡುಗನ್ನಡದ ದೇಸಿ ಕಥನಕಾವ್ಯಗಳ ಬಂಧ ಅಡಗಿರುವುದು ಕಾಣತೊಡಗುತ್ತದೆ. ನಾಯಕ ಸಾಹಸಿ ಪರಿಸರದೊಡನೆ ಅವನನ್ನು ಇರಿಸಿ ನೋಡಿದರೆ ಆತ ಎಲ್ಲರಿಂದ ಭಿನ್ನವಾಗಿ ತೋರುತ್ತಾನೆ. ಅವನಿಗೆ ಆರಾಧಕರಿದ್ದಾರೆ. ಜೊತೆಗೆ ಅವನ ಏಳಿಗೆಯನ್ನು ಕಂಡು ಕರುಬುವವರೂ ಇದ್ದಾರೆ. ಆದರೆ ಇವರು ಮಾರ್ಗಕಾವ್ಯಗಳಲ್ಲಿರುವಂತೆ ಪ್ರತಿನಾಯಕರಂತಲ್ಲ. ನಾಯಕನ ಅಭ್ಯುದಯಕ್ಕೆ ಇವರು ವಿರೋಧಿಗಳಾಗಿದ್ದೂ ನೆರವಾಗುವವರು, ಪಾರ್ವತಿ, ರುದ್ರಪ್ಪ, ಮಂಜ ಮೊದಲಾದವರು ಇಲ್ಲಿ ಗಮನಕ್ಕೆ ಬರುವ ಪಾತ್ರಗಳು ಇವರು ನಾಯಕನ ಎದುರು ಕುಬ್ಜರು. ನಾಯಕನ ಒಳಗಿರುವ ನಾಯಕನನ್ನು ಬಯಲಿಗಿಡಲು ತಕ್ಕ ಸಂದರ್ಭಗಳನ್ನು ರೂಪಿಸುತ್ತಾರೆ. ದೇಸಿಕಥನ ಕಾವ್ಯಗಳಲ್ಲಿರುವಂತೆ ಇಲ್ಲಿಯೂ ಕೂಡ ಪಾತ್ರವೆಂಬುದು ವರ್ತನೆಗಳಲ್ಲಿ ತನ್ನ ಸ್ವಭಾವವನ್ನು ಕಂಡುಕೊಳ್ಳುತ್ತದೆ. ಹಾಗಲ್ಲದೆ ಪೂರ್ವನಿರ್ಧಾರಿತ ಸ್ವಭಾವಗಳು ಗ್ರಾಮೀಣ ಬದುಕಿನ ವರ್ತನೆಯನ್ನು ನಿಯಂತ್ರಿಸುವುದಿಲ್ಲ. ಸುಶೀಲ ಭುಜಂಗಯ್ಯ ಇವರ ಸಂಬಂಧ ರೂಪುಗೊಳ್ಳುತ್ತ ಹೋಗುವ ಬಗೆಯನ್ನು ನೋಡಬಹುದು. ಕಥನಕ್ರಮದಲ್ಲಿ ಸುಶೀಲಳನ್ನು ಮಾದಳ್ಳಿಯ ಭುಜಂಗಯ್ಯನ

ಹೋಟೆಲಿನ ಬಳಿಗೆ ಕರೆತರುವಾಗ ನಾಯಕ ಹಾವನ್ನು ಹಿಡಿದು ಅದರೊಳಗೆ ಸರಸವಾಡುತ್ತ ಇರುವುದನ್ನು ನಿರೂಪಿಸುವ ಮೂಲಕ ಆ ಎರಡು ಪಾತ್ರಗಳ ಬಗೆಗೆ ಮತ್ತೇನನ್ನೋ ನಮಗೆ ತಿಳಿಸಲು ನಿರೂಪಕನಿಗೆ ಉತ್ಸಾಹವಿದ್ದರೂ ಸ್ವತಃ ಪಾತ್ರಗಳೇ ಅಂತಹ ಯಾವುದೇ ಉದ್ವಿಗ್ನತೆಯನ್ನು ಪ್ರಕಟಿಸುವುದಿಲ್ಲ. ಅವರಿಬ್ಬರೂ ಒಂದಾಗುವುದು ಇಲ್ಲಿ ಸುಮ್ಮನೆ ಆಗುವ ಘಟನೆ ಹಾಗೆ ಆಗಿದ್ದಕ್ಕೆ ಆ ಪಾತ್ರಗಳ ಪೂರ್ವವರ್ತನೆಯಲ್ಲಿ ಏನೂ ವಿವರಣೆ ಇಲ್ಲ. ಅಂದರೆ ಘಟನೆಯ ಸಾಧ್ಯತೆಗಳು ಮೊದಲೇ ಇರುವುದಿಲ್ಲ. ಹೀಗೆ 'ಇರುವಿಕೆ'ಗಿಂತ 'ಆಗುವಿಕೆ'ಗೆ ದೇಸೀಕಾವ್ಯಗಳು ನೀಡುವ ಒತ್ತು ಅಂದರೆ ಗ್ರಾಮೀಣ ಸೊಗಡು ಈ ಕಾದಂಬರಿಯಲ್ಲಿ ತಾನೇತಾನಾಗಿ ಮೆರೆವ ಗುಣವಾಗುತ್ತದೆ".[೨೧]

ಈ ಕಾದಂಬರಿಯಲ್ಲಿ ಭುಜಂಗಯ್ಯ ಎಂಬ ಮತ್ತೊಬ್ಬ ಮುಗ್ಧ ಹಳ್ಳಿಗನು ತನ್ನ ಬದುಕಿನಲ್ಲಿ ಅನಿವಾರ್ಯವಾಗಿ ಬದಲಾವಣೆಗಳನ್ನು ಕಾಣಬೇಕಾಗಿ ಬಂದು ಹಲವಾರು ಏರುಪೇರುಗಳು ಉಂಟಾಗಿ ಸಂಕಷ್ಟಗಳನ್ನು ಅನುಭವಿಸಿ ನೊಂದು ಕೊನೆಗೆ ಮಾಗುತ್ತಾ ಸಾಗುವ ವಿವರಗಳು ಯಶಸ್ವಿಯಾಗಿ ದಾಖಲಾಗಿದೆ. ಆಲನಹಳ್ಳಿಯವರು ತಮ್ಮ ಅಪಾರ ಗ್ರಾಮೀಣ ಅನುಭವರಾಶಿಯನ್ನು ಸತ್ವಯುತವಾದ ಭಾಷೆಯಲ್ಲಿ ಅದ್ಭುತವಾಗಿ ನೀಡುತ್ತಾರೆ. ಮೌಲಿಕವಾದ ಕೃತಿಗಳು ಜನಪ್ರಿಯವಾಗಲು ಸಾಧ್ಯವೆಂಬುದನ್ನು ಈ ಲೇಖಕರು ಯಶಸ್ವಿಯಾಗಿ ಸಾಬೀತುಗೊಳಿಸಿದ್ದಾರೆ. ಇದು ಕನ್ನಡದ ಪಾಲಿಗೆ ಸಂತೋಷದ ಸಂಗತಿಯಾಗಿದೆ.

ಆಲನಹಳ್ಳಿಯವರು ತಮ್ಮ ಈ ದೊಡ್ಡ ಕಾದಂಬರಿಯಲ್ಲಿ ಬದುಕಿನ ಹಲವು ಹತ್ತು ಸಮಸ್ಯೆಗಳನ್ನು ನಾನಾ ಮುಖಗಳಿಂದ ನೋಡಿ ನಿರ್ಲಿಪ್ತವಾಗಿಯೇ ಚಿತ್ರಿಸಿದ್ದಾರೆ. ಕಾಮುಕ ನಾರಾಯಣನಿಂದ ಆದ ಘಟನೆಯಿಂದ ಗಾಬರಿಯಾದ ಬಳೆಶೆಟ್ಟರು ಮಗಳನ್ನು ಮದುವೆ ಮಾಡಲೆತ್ನಿಸಿ ಬಂದ ಒಬ್ಬ ಗಂಡಿಗೆ ವರದಕ್ಷಿಣೆಯನ್ನು ನೀಡುವ ಚೈತನ್ಯವಿಲ್ಲದೆ ಮದುವೆಯೇ ಬಿದ್ದುಹೋಗಿರುತ್ತದೆ. ಆದರೂ ತಮ್ಮ ಜಾತಿಯವನೊಬ್ಬನಿಗೆ ಎರಡನೆಯ ಮದುವೆಗೆ ವ್ಯವಸ್ಥೆ ಮಾಡುತ್ತಿರುತ್ತಾರೆ. ಸುಶೀಲಮಾತ್ರ ಎರಡನೆಯ ಮದುವೆಗೆ ಒಪ್ಪದೆ ಆ ರೀತಿ ಆಗುವುದಾದರೆ ಭುಜಂಗಯ್ಯನನ್ನೇ ವರಿಸಬಹುದೆಂದು ನಿರ್ಧಾರಮಾಡಿ ಈ ಬಗ್ಗೆ ಭುಜಂಗಯ್ಯನಿಗೆ ಬಸ್ ಡ್ರೈವರ್ ವಿಕ್ಟರ್‌ನ ಮೂಲಕ ಪತ್ರವನ್ನು ಕೊಟ್ಟು ಕಳುಹಿಸಿರುತ್ತಾಳೆ. ಈ ಕಡೆ ಭುಜಂಗಯ್ಯ ಅವ್ವನ ಗೋಳಾಟ ನೋಡಲಾರದೆ ಮಕ್ಕಳನ್ನು ಕರೆತರಲು ಜಕ್ಕಳ್ಳಿಗೆ ಹೋಗುತ್ತಾನೆ. ಅವನ ಹೆಂಡತಿ ಪಾರ್ವತಿಯು ಅದ್ಯಾವುದೋ ನೆಪದಲ್ಲಿ ಗಂಡನನ್ನು ಬೈಯ್ದಾಗ ಭುಜಂಗಯ್ಯ ಪಾರ್ವತಿಯ ತಲೆಗೂದಲನ್ನು ಜಗ್ಗಿದಾಗ ಪಾರ್ವತಿಯ ಕಿರುಚಾಟ ಎಲ್ಲೆ ಮೀರಿ ರಾದ್ಧಾಂತ

---

೨೧. ಕೆ.ವಿ.ನಾರಾಯಣ, 'ಬೇರುಕಾಂಡ ಚಿಗುರು', ಪುಟ. ೩೫೬, ೧೯೯೭.

ಆಗುತ್ತದೆ. ಅವಳ ಅವ್ವ ತಂಗಿಯರೆಲ್ಲ ಸೇರಿ ಕ್ಷಣಾರ್ಧದಲ್ಲಿ ಭುಜಂಗಯ್ಯನ ಕೈಯ್ಯನ್ನೇ ಕಚ್ಚುತ್ತಾಳೆ. ಭುಜಂಗಯ್ಯನಿಗೆ ಇವರೆಂಥ ಕೊಳಕು ಜನರು ಅನ್ನಿಸಿ ಹೇಸಿಗೆಪಟ್ಟು ಹೊರಗೆ ಬಂದ. ಮತ್ತೆ ಆ ಮನೆಯ ಮೆಟ್ಟಲಲ್ಲಿ ಕಾಲಿಡುವುದು ಒಂದೆ ಸಾಯುವುದು ಒಂದೆ ಎಂದುಕೊಂಡವನೇ ಮನೆಬಿಟ್ಟು ಹೊರಬಂದು ಅರಳಿಮರದ ಕೆಳಗೆ ಹೋಗಿ ಕುಳಿತುಕೊಳ್ಳುತ್ತಾನೆ. ಕೊನೆಗೂ ಇವನ ಮಾವ ಬಂದು ಸಮಾಧಾನ ಮಾಡಿದರೂ ಮಕ್ಕಳನ್ನು ಕಳುಹಿಸುವುದಿಲ್ಲವೆಂದು ನಿರಾಕರಿಸುತ್ತಾನೆ. ಭುಜಂಗಯ್ಯನಂತೂ ವ್ಯಗ್ರನಾಗಿ 'ಸರಿ ಇಟ್ಕಳಿ ಅವು ನಂಗುಟ್ಟಿದ್ರೆ ಇವತ್ತಲ್ಲ ನಾಳೆ ಅವೆ ಬತ್ತಾವೆ. ಇಲ್ಲ ಇನ್ಯಾರಿಗಾದ್ರು ವುಟ್ಟಿದ್ರೆ ಯಲ್ಲಾರು ವೋಯ್ತವೆ' ಎಂದು ಹೊರಟೇಬಿಟ್ಟ. ಇವೆಲ್ಲವನ್ನು ಸಹ ಭುಜಂಗಯ್ಯ ಮತ್ತು ಸುಶೀಲರ ಮದುವೆಗೆ ಹಿನ್ನೆಲೆಯಾದ ಕಾರಣವನ್ನು ಉಂಟುಮಾಡುವ ಲೇಖಕರ ತಂತ್ರವಾಗಿದೆ ಎನಿಸುತ್ತದೆ. ಏಕೆಂದರೆ ಭುಜಂಗಯ್ಯ ಈ ಎಲ್ಲ ಬೇಸರದಿಂದ ಹೋಟೆಲ್‌ಗೆ ಬಂದಾಗ ಸುಶೀಲಳ ಪತ್ರ ಮತ್ತೆ ಇವನಲ್ಲಿ ಜೀವನೋತ್ಸಾಹವನ್ನು ತುಂಬುತ್ತದೆ. ಸುಶೀಲಳ ಪತ್ರ ಭುಜಂಗಯ್ಯನಲ್ಲಿ ಗೊಂದಲ, ಹೆದರಿಕೆ, ಆತಂಕಗಳನ್ನು ಹುಟ್ಟುಹಾಕುತ್ತದೆ. ಈ ಬಗ್ಗೆ ತಾನು ಮುನ್ನುಗ್ಗುವುದು ಸರಿಯೇ, ನ್ಯಾಯವೇ, ಅನ್ಯಾಯವಲ್ಲವೇ ಮುಂತಾದ ಕೊನೆಗಾಣದ ಪ್ರಶ್ನೆಗಳ ನಡುವೆಯೇ ಮಂಡ್ರಿ ಹೇಳುವ ರಸಿಕ ಕಥೆಗಳಿಂದ ಪುಳಕಗೊಳ್ಳುತ್ತಾನೆ. ಮೊದಲೇ ಸುಶೀಲಳನ್ನು ನೋಡಿ ವಿಚಲಿತನಾಗಿದ್ದ ಭುಜಂಗಯ್ಯನು ಜಾತಿ, ವಯಸ್ಸು, ಅಂತಸ್ತು, ಹುಸಿ ಪ್ರತಿಷ್ಠೆಗಳನ್ನೆಲ್ಲ ಮೀರಿ ತಾನಾಗಿಯೇ ಒಲಿದು ಬಂದ ತಬ್ಬಲಿಯಾದ ಸುಶೀಲಳನ್ನು ಸಾಮಾಜಿಕ ಕಟ್ಟುಪಾಡುಗಳಿಗೂ ಅಂಜದೆ ಧೈರ್ಯದಿಂದ ಕರೆತಂದು ಗದ್ದಿಗೆಯ ಮಠದಲ್ಲೇ ಮದುವೆಯಾಗುತ್ತಾನೆ. ಇದು ಅವನ ಹೃದಯವಂತಿಕೆ, ದಿಟ್ಟತನ ಮತ್ತು ಎಂದಿನ ಸಾಹಸಮನೋಭಾವವನ್ನು ಪ್ರಕಟಿಸುವ ಕೋಲಾಹಲಕಾರಿಯಾದ ಸಂಗತಿಯಾಗಿ ಪರಿಣಮಿಸುತ್ತದೆ.

ಗ್ರಾಮೀಣ ನೆಲೆಹೊಂದಿರುವ ಕಾದಂಬರಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಜಡ್ಡುಹಿಡಿದ ವಸ್ತುಗಳನ್ನೊಳಗೊಂಡಿರುವ ಕಾದಂಬರಿಗಳು ಮುಖ್ಯವಾಗಿ ನಿಂತಿರುವುದು ಆಲನಹಳ್ಳಿಯವರ ಬರವಣಿಗೆಯ ಸತ್ವದ ಮೇಲೆ ಕಾದಂಬರಿಯ ಪಾತ್ರಗಳಲ್ಲಿನ ಪುಟಿದೇಳುವ ಸೊಕ್ಕು ಕಸುವು ಆಲನಹಳ್ಳಿಯವರ ಭಾಷೆಗಿದೆ. ಜೊತೆಗೆ ಮನುಷ್ಯನು ಅನುಭವಿಸುವ ಗ್ರಾಮೀಣ ಸಂವೇದನೆಗಳ ಸಂಘರ್ಷ ಇಲ್ಲಿದೆ.

ಗ್ರಾಮ್ಯಭಾಷೆಯ ಬಳಕೆಯಲ್ಲಿ ತೀವ್ರ ಎಚ್ಚರಿಕೆ ತೋರಿಸುವ ಆಲನಹಳ್ಳಿಯವರು ಭಯ, ಕುತೂಹಲ ಕೆರಳಿಸುವಂತಹ ಅಮಾನುಷವೆನ್ನುವಂತಹ ಘಟನೆಗಳನ್ನು ಕಣ್ಣಿಗೆ ಕಟ್ಟುವಂತೆ ಕಣ್ಣಿನ ಬ್ಯಾಂಡೇಜನ್ನು ಹೊಸದಾಗಿ ಕಟ್ಟಿದರು. ಬೆಳಿಗ್ಗೆ ಪ್ರಾಣವನ್ನೇ ಮೀಟಿ ತೆಗೆಯುವಂತೆ ಆಗುತ್ತಿದ್ದ ನೋವಿನಿಂದ ಈಗ ಕೊಂಚ ಬಿಡುಗಡೆಯೆನಿಸಿತ್ತು. ಅಯ್ನೋರು ಬಂದಿರುವ ಸುದ್ದಿ ಅರಿವಾಗಿ

ಭುಜಂಗಯ್ಯನ ಮನಸ್ಸು ಸ್ವಲ್ಪ ಚೇತರಿಸಿಕೊಂಡಿತು. ಅವರು ಬೆಳಗಷ್ಟೇ ನೆನಪಾಗಿದ್ದರು. ಅಯ್ನೋರು ಭುಜಂಗಯ್ಯನ ಅವಸ್ಥೆಗೆ ದಿಗ್ಭ್ರಾಂತರಾಗಿ ನಿಂತಲ್ಲೇ ಜಡಗಟ್ಟಿಹೋಗಿದ್ದರು. ಅವರು ಹೇಳಬೇಕೆಂದಿದ್ದ ಮಾತುಗಳು ಗಂಟಲೊಳಗೇ ಇಂಗಿಹೋಗಿದ್ದವು. ಕಡೆಗೆ ಸುಶೀಲ ತಾನೇ ಅಯ್ನೋರನ್ನು ಗಂಡನ ಕಿವಿಯ ಸಮೀಪ ಬಂದು ಮಾತಾಡಲು ಹೇಳಿದಳು. ಏನು ಮಾತಾಡುವುದೋ ಅಯ್ನೋರಿಗೆ ಮಾತೇ ಬರಲಿಲ್ಲ. ಅವರ ವೇದಾಂತದ ಮಾತುಗಳಿಗೆ ಗರ ಬಡಿದಂತಾಗಿತ್ತು. ಏನನ್ನೂ ಹೇಳಲಾಗಲಿಲ್ಲ. ಕಡೆಗೆ ಭುಜಂಗಯ್ಯನ ಕೈಹಿಡಿದುಕೊಂಡು ಮಕ್ಕಳಹಾಗೆ ಅತ್ತುಬಿಟ್ಟರು. ಅಂತೂ ವಾರ್ಡಿನಿಂದ ಹೊರಗೆ ಹೋಗುವ ಮುಂಚೆ ನಿರೂಪಿಸಿದ್ದಾರೆ. ಕಾದಂಬರಿಯಲ್ಲಿ ದಟ್ಟವಾದ ಬರವಣಿಗೆಯ ಬೆಚ್ಚಿ ಬೀಳಿಸುವಂತಹ ದುರಂತಗಳನ್ನೆಲ್ಲಾ ಬೇಧಿಸಿಕೊಂಡು ಒಳನೋಟದ ಹುಡುಕಾಟ ನಡೆಸಿದಾಗ ಎಲ್ಲ ಬಟ್ಟಂಬಯಲು ಮಾಡುತ್ತಾನೆ ಎನ್ನಿಸುತ್ತದೆ.

ಗ್ರಾಮ್ಯ ಭಾಷೆಯಲ್ಲಿ ತೀವ್ರ ಎಚ್ಚರಿಕೆ ತೋರಿಸುವ ಆಲನಹಳ್ಳಿಯವರು ಭಯ ಕುತೂಹಲ ಕೆರಳಿಸುವಂತೆ ನಿರೂಪಿಸಿದ್ದಾರೆ. ಪಾತ್ರ, ಘಟನೆ ಯಾವುದರಲ್ಲೂ ಬೆಳವಣಿಗೆ ಕಾಣಿಸುವುದಿಲ್ಲ. ಕಾದಂಬರಿಯುದ್ದಕ್ಕೂ ಬರುವ ಅಕ್ರಮ ವ್ಯವಹಾರಗಳು ಪಂಚಾಯತಿಯ ಶಿಕ್ಷೆ ಆನಂತರ ಅನುಭವಿಸುವ ದುರಂತಗಳ ಸರಣಿ ಎಲ್ಲವೂ ಮಾನಸಂರಕ್ಷಣೆಗೆ ಉಳಿದ ದಾರಿಯಾಗಿದೆ ಎಂದಿದ್ದಾರೆ.

ಗ್ರಾಮೀಣ ಹಾಗೂ ನಗರಜೀವನದ ಚಿತ್ರಣವು ಆಲನಹಳ್ಳಿಯವರ ಕಥಾಸಾಹಿತ್ಯದಲ್ಲಿ ಯತೇಚ್ಛವಾಗಿ ವ್ಯಕ್ತವಾಗಿರುವುದನ್ನು ಕಾಣಬಹುದು. ಲಿಂಗದೇವರು ಹಳೇಮನೆಯವರು ಗುರುತಿಸುವ ಹಾಗೆ "ಶ್ರೀಕೃಷ್ಣ ಆಲನಹಳ್ಳಿ ಆಕರ್ಷಕ ಬರಹಗಾರ, ಆಕರ್ಷಕ ಕಥೆಗಾರ, ಅಷ್ಟೇ ಅದ್ಭುತವಾದ ವಾಚಾಳಿ, ಎಷ್ಟೋಬಾರಿ ಆಕರ್ಷಕತೆಯೇ ಮುಂದಾಗಿ ವಸ್ತುವಿನ ಸಾಂದ್ರತೆ ಫೇಲವವಾಗಿರುವುದೂ ಉಂಟು. ಆದರೆ ತನ್ನ ಈ ವೈಶಿಷ್ಟ್ಯ ಶೈಲಿಯನ್ನು 'ಕೃಷ್ಣಮಯ'ಗೊಳಿಸಿರುವುದು ಅವರ ಅತ್ಯಂತದೊಡ್ಡ ಸಾಹಿತ್ಯಕ ಸಾಧನೆ ಎನಿಸುತ್ತದೆ. ಶ್ರೀಕೃಷ್ಣ ಆಲನಹಳ್ಳಿಯ ಬರಹದಲ್ಲಿ ಎರಡು ಪ್ರಧಾನ ಗೆರೆಗಳನ್ನು ಗುರುತಿಸಬಹುದು. ಹಿಂದೆ ತಿಳಿಸಿದಂತೆಯೇ ಅವು ಗ್ರಾಮೀಣ ಹಾಗೂ ನಗರ ಪ್ರದೇಶದ ಚಿತ್ರಣಗಳು ಒಂದು ಇನ್ನೊಂದನ್ನು ಪೂರ್ಣ ಆವರಿಸಿಕೊಳ್ಳಲು ಬಿಡದಂತೆ ಎರಡನ್ನು ಒಟ್ಟಿಗೆ ನಡೆಸಿಕೊಂಡು ಹೋಗುವ ಅನಿವಾರ್ಯತೆ ಕೃಷ್ಣ ಅವರಿಗೆ ಪ್ರಾರಂಭಿಕ ಹಂತದಲ್ಲಿ ಇದ್ದಂತೆ ಕಾಣುತ್ತದೆ. ಬಾಲ್ಯದ ಅನುಭವದ ಮೇಲೆ ಎಲ್ಲಿಯವರೆಗೆ ದಟ್ಟವಾಗಿ ನಿಲ್ಲುವುದು ಎಂಬ ಅನಿಶ್ಚಿತತೆ ಕಾಡಿದಾಗಲೆಲ್ಲ

ಮತ್ತೆ ಮತ್ತೆ ಗ್ರಾಮೀಣ ಬದುಕಿನ ಅನುಭವಕ್ಕೆ ಹಾತೊರೆಯುತ್ತಿದ್ದ ಆಲನಹಳ್ಳಿ ಕಡೆಕಡೆಗೆ ನಗರದ 'ಅಳುಕೂಗಿನ ಹಕ್ಕಿಗೆ' ಓಗೊಟ್ಟಿದ್ದರೇನೋ ಎನಿಸುತ್ತದೆ".೨೨

'ತಪ್ತ' ಸಂಕಲನದಲ್ಲಿ ಗ್ರಾಮೀಣ ಪ್ರಜ್ಞೆಯ ಸಂವೇದನೆಗಳನ್ನು 'ಫೀನಿಕ್ಸ್' ಸಂಕಲನದಲ್ಲಿ ನಗರಪ್ರಜ್ಞೆಯ ಸಂವೇದನೆಯನ್ನು ಗುರುತಿಸಬಹುದು. ಕಾದಂಬರಿಗಳಲ್ಲಿ ಗ್ರಾಮೀಣ ಸಂವೇದನೆಗಳು ಬಾಲ್ಯದ ಅನುಭವಗಳ ದಟ್ಟತೆಯನ್ನು, ಮೌಲ್ಯಗಳ ಸಂಘರ್ಷವನ್ನು ತೆರೆದಿಡುತ್ತಾ ಹೋಗುತ್ತಾರೆ. ಈ ಸಂವೇದನೆಗಳ ನಡುವಿನ ಬದುಕು ಮನುಷ್ಯನು ಯಾವ ರೀತಿಯಲ್ಲಿ ಸಮಾಜಕ್ಕೆ ಸ್ಪಂದಿಸುತ್ತಿದ್ದಾನೆ ಎಂಬುದನ್ನು ಕಥೆಗಳ ಮೂಲಕ ಪರಿಚಯಿಸುತ್ತಾರೆ.

ಮನುಷ್ಯನು ಅನುಭವಿಸುವ ನಗರ ಹಾಗೂ ಗ್ರಾಮೀಣ ಸಂವೇದನೆಗಳ ಸಂಘರ್ಷದಿಂದ ಸಮಸ್ಯೆಗಳು ಯಾವ ರೀತಿಯ ಸ್ವರೂಪದಲ್ಲಿ ಕೂಡಿದೆ. ಅವುಗಳು ವೈಯಕ್ತಿಕತೆಯ ಅನುಭವಗಳಲ್ಲಿ ಬದುಕಿನ ವೈಖರಿಗಳನ್ನು, ಬದುಕನ್ನು ಶೋಧಿಸುವಿಕೆ, ಮನುಷ್ಯನು ಇವುಗಳನ್ನು ಬಹಳ ಗಂಭೀರವಾಗಿ, ಸೂಕ್ಷ್ಮವಾಗಿ ಸಂಕೀರ್ಣತೆಯಿಂದ ಗ್ರಹಿಸುವುದು ಆಲನಹಳ್ಳಿಯವರ ಬರಹಗಳಲ್ಲಿ ತೀಕ್ಷ್ಣತೆಯಿಂದ ಮೂಡಿಬಂದಿವೆ.

ಸಾಹಿತ್ಯ ಎನ್ನುವುದು ಹುಟ್ಟುಕೊಳ್ಳುವುದು ಇಹದ ಬದುಕಿನ ಸಂವೇದನೆಗಳಿಂದಲೇ ಲೇಖಕನ ಸುತ್ತುವರಿದಿರುವ ಪರಿಸರ, ಮತಧರ್ಮಗಳು, ಬದುಕಿನಲ್ಲಿ ಇಲ್ಲದುದರ ಕಡೆಗೆ ಕಾತರಿಸುವುದು ಅದರ ಅರ್ಥ ಹುಡುಕುವಿಕೆ. ಇವುಗಳಿಗೆಲ್ಲಾ ತನ್ನನ್ನು ತಾನು ಶೋಧಿಸಿಕೊಳ್ಳುವುದು ಅಥವಾ ತೊಡಗಿಸಿಕೊಳ್ಳುವಿಕೆಯಿಂದ ಶ್ರೇಷ್ಠಸಾಹಿತ್ಯ ಕೃತಿಗಳನ್ನು ಕಾಣಲು ಸಾಧ್ಯ. ಆಧುನಿಕ ಬದುಕು, ಹಳೆಯ ಬದುಕಿನ ನಡುವೆ ಸಾಗುತ್ತಿರುವ ಮನುಷ್ಯನ ಬದುಕು ಅವನ ಜಂಜಾಟಗಳು, ಸಾಮಾಜಿಕ ತುಡಿತಗಳು ವೈಯಕ್ತಿಕ ನೆಲೆಯಲ್ಲಿ ಸ್ವಾತಂತ್ರ್ಯ ಹುಡುಕುವಿಕೆ ಆತ್ಮಸಾಕ್ಷಿಯ ಶೋಧನೆ, ಭೂತಕಾಲದ ನೆನಪುಗಳು ಇವುಗಳ ಮೇಲೆ ತಮ್ಮದೇ ದೃಷ್ಟಿಕೋನವನ್ನು ಕೊಡುವುದು ಆಲನಹಳ್ಳಿಯವರ ಶೈಲಿಯಾಗಿದೆ. ಇದರಿಂದಲೇ ವಿಶಿಷ್ಟ ಕಥೆಗಾರರೆಂದು ಅವರನ್ನು ಗುರುತಿಸಲು ಸಾಧ್ಯವಾಗುವುದು. 'ತಪ್ತ' 'ನೆಲಗುಮ್ಮ', 'ಹುತ್ತ', 'ಫೀನಿಕ್ಸ್' ಕಥೆಗಳಲ್ಲಿ ನಗರ ಹಾಗೂ ಗ್ರಾಮೀಣ ಸಂವೇದನೆಗಳ ತಾಕಲಾಟಗಳ ಸ್ವರೂಪದ ನೆಲೆಯನ್ನು ಗುರುತಿಸಬಹುದು.

ನಾಗರಿಕ ಪ್ರಜ್ಞೆಯಕಾರಣ ಮನುಷ್ಯನು ಬದುಕಲ್ಲಿ ಯಾವುದೇ ನಿಶ್ಚಿತತೆಯನ್ನು ಕಾಣಲು ಸಾಧ್ಯವಾಗಿರುವುದು. ಸಾಂಪ್ರದಾಯಿಕದಲ್ಲಿ ಜಡ್ಡುಗಟ್ಟಿರುವ ನಂಬಿಕೆಗಳಿಗೆ ಪ್ರತಿರೋಧ

೨೨. ಲಿಂಗದೇವರು ಹಳೇಮನೆ, 'ಸಂಸ್ಕೃತಿಯ ಸ್ಥಿತ್ಯಂತರ ಮತ್ತು ಶ್ರೀಕೃಷ್ಣ ಆಲನಹಳ್ಳಿಯವರ ಸಾಹಿತ್ಯ', ಪುಟ. ೯೪೫, ೧೯೯೧.

ವ್ಯಕ್ತಪಡಿಸುತ್ತಾನೆ. ಆದರೆ ಪ್ರತಿರೋಧದಲ್ಲಿ ಗಟ್ಟಿಯಾದ ಬಲವಿರದ ಕಾರಣ ಸೋಲನ್ನು ಕಾಣುತ್ತಾನೆ. ಸಂದರ್ಭಕ್ಕನುಗುಣವಾಗಿ ಬದಲಾಗುತ್ತಿರುವ ಮನುಷ್ಯನು ಹಳೆಯ ಮೌಲ್ಯಗಳಲ್ಲಿ ತನ್ನ ನಂಬಿಕೆಗಳನ್ನು ಬಲವಾಗಿ ಇಟ್ಟಿರುವುದು ಒಂದು ವಿಪರ್ಯಾಸವೇ ಸರಿ.

ನಗರಪ್ರಜ್ಞೆಯ ಶಿಕ್ಷಿತ ಸಂವೇದನೆ ಪ್ರಗತಿಪರ ಧೋರಣೆಗಳಿಂದ ರೂಪುಗೊಂಡ ನಾಯಕ ಹಳ್ಳಿಯ ಬದುಕಿಗೆ ಸ್ಪಂದಿಸುವಲ್ಲಿ ವಿಫಲವಾಗುವುದು ತನ್ನ ಭವಿಷ್ಯದಲ್ಲಿ ತಾನು ತೆಗೆದುಕೊಂಡ ಯಾವುದೇ ತೀರ್ಮಾನಗಳು ಅವನು ಪೂರೈಸಿಕೊಳ್ಳಲು ಪರದಾಡುವ ಸ್ಥಿತಿ ಇಂದಿನ ಸಮಾಜದಲ್ಲಿ ಕಾಣುತ್ತದೆ. ಪ್ರಗತಿಪರ ಧೋರಣೆಗಳನ್ನು ಅವನು ಒಪ್ಪಿಕೊಳ್ಳಲು ಮತ್ತು ಜಾರಿಗೆ ತರಲು ಅವನ ಮನಸ್ಥಿತಿಯೂ ಇನ್ನೂ ಗಟ್ಟಿಯಾಗಿ ರೂಪುಗೊಳ್ಳಬೇಕಾಗಿರುವುದನ್ನು ಕಾಣಬಹುದು. ಮನುಷ್ಯನ ಅತಂತ್ರ ಮನಸ್ಥಿತಿಯಲ್ಲಿ ಸಾಂಪ್ರದಾಯಿಕ ಆಧುನಿಕ ಮೌಲ್ಯಗಳ ತಿಕ್ಕಾಟದಲ್ಲಿ ಯಾವುದೇ ಖಚಿತವಾದ ತೀರ್ಮಾನಕ್ಕೆ ಬರಲು ಅವನಿಂದ ಸಾಧ್ಯವಾಗುವುದಿಲ್ಲ.

ಗ್ರಾಮೀಣ–ನಗರ ಸಂವೇದನೆಗಳಲ್ಲಿ ಪ್ರಧಾನವಾದ ಅಂಶ 'ಕಾಮ'ವಾಗಿರುವುದು ಆಲನಹಳ್ಳಿಯವರ ಕಥೆಗಳಲ್ಲಿ ಕಾಣುತ್ತೇವೆ. ವ್ಯಕ್ತಿಯ ಇಚ್ಛೆಯಂತೆ ಅವನ ಬಯಕೆಗಳು ಈಡೇರದೇ ಇತರರ ಇಚ್ಛೆಯ ಪೂರೈಕೆಗಳಿಗೆ ವ್ಯಕ್ತಿ ಬಳಕೆಯಾಗುವುದನ್ನು ಈ ಸಂವೇದನೆಗಳ ಮುಖ್ಯವಾದ ಗ್ರಹಿಕೆಗಳಲ್ಲಿ ಒಂದಾಗಿದೆ. ಮಗನನ್ನು ವಿದ್ಯಾವಂತನಾಗಿ ಒಬ್ಬ ಜವಾಬ್ದಾರಿಯುತ ಮನುಷ್ಯನಾಗಿ ರೂಪಿಸುವುದು ಅದಕ್ಕೆ ಪ್ರತಿಫಲವಾಗಿ ಅವನು ಅವರ ಚಿಂತನೆಗಳಿಗೆ ಆಲೋಚನೆಗಳಿಗೆ ಪೂರಕವಾಗಿರಬೇಕು.

"ಮಿದುಳ ಬಚ್ಚಲಲ್ಲಿ ಯೋಚನೆಯ ಹುಳುಗಳು ಏನುಮಾಡುವುದು? ಬೆಳಿಗ್ಗೆ ಎದ್ದು ಅವ್ವನ ಜೊತೆ ಕಟುಕನಂತೆ ಮನಸ್ಸಿನಲ್ಲಿರುವುದನ್ನೆಲ್ಲ ಕಕ್ಕಿ ಪ್ರಭಾಳನ್ನೇ ಮದುವೆಯಾಗುವುದೆಂದು ಹೇಳಿ ನಿಮ್ಮ ಮನೆ, ಆಸ್ತಿ, ಬಂಧು ಬಳಗ ಏನೂಬೇಡ............ ನಾನು ಪರಕೀಯ.......... ನಿಮ್ಮ ಬದುಕಿಂದ ಹೊರಗಾದ ಏನೊಂದನ್ನು ತಿರುಗಿ ನೋಡದೆ ಹೋಗಿಬಿಡುವುದೆ? ಹಾಗೆ ಮಾಡಿದರೆ ಅವ್ವ ಸಾಯುತ್ತಾಳೆ. ಮನೆತನ ಮಣ್ಣುಗೂಡುವುದರ ಜೊತೆಗೆ ನನ್ನ ಅಪಕೀರ್ತಿ ಸ್ಮಾರಕವಾಗುತ್ತದೆ. ಮುಂದಿನದೆಲ್ಲ ಯಾಕೆ ಈಗ ಸುಖವಾಗಿದ್ದರಷ್ಟೇ ಸಾಕಲ್ಲವೆ ಎನ್ನಿಸಿದ್ದರೂ ರುಗ್ಣ ಶಯ್ಯೆಗೆಯಲ್ಲಿರುವ ಅವ್ವ ಶೋಕತಪ್ತಳಾದ ಗೌರಿ ಇವರನ್ನು ನೋಡಿದಾಗ ನಿರ್ಧಾರ ಕುಸಿಯುತ್ತದೆ. ಏನು ಮಾಡುವುದು? ಪ್ರಭಾಳಿಗೆ ಅನ್ಯಾಯ ಮಾಡಬೇಕು ಇಲ್ಲವೆ ಅವ್ವ ಗೌರಿಯನ್ನು ಕಡೆಗಣಿಸಬೇಕು. ಏನೂ ಹೊಳೆಯುತ್ತಿಲ್ಲ ಪ್ರಶ್ನೆ–ಪ್ರಶ್ನೆಯಾಗಿಯೇ ಉಳಿದಿದೆ...."[೨೩]

೨೩. ಆಲನಹಳ್ಳಿ ಕೃಷ್ಣ, 'ಸಮಗ್ರ ಕಥೆಗಳು', ಪುಟ. ೧೧, ೧೯೮೬.

ಶಿಕ್ಷಿತ ಸಂವೇದನೆಯೂ ಗ್ರಾಮೀಣ ಸಂವೇದನೆಯನ್ನು ಸ್ಪಂದಿಸಿ ಅದರಿಂದ ತನ್ನ ಶಾಂತಿಯನ್ನು ಕಳೆದುಕೊಂಡ ನಾಯಕನ ಸ್ವಗತವಿದು. ಇಲ್ಲಿ ಅವನು ಸಂಪೂರ್ಣವಾಗಿ ನಗರ ಸಂವೇದನೆಯನ್ನು ಅಪ್ಪುವುದಿಲ್ಲ ಸಂಪೂರ್ಣವಾಗಿ ಗ್ರಾಮೀಣ ಸಂವೇದನೆಯನ್ನು ಅಪ್ಪಲು ಇಷ್ಟಪಡದೆ ದ್ವಂದ್ವ ನಿಲುವಿಗೆ ಕಾರಣಕರ್ತನಾಗಿದ್ದಾನೆ. ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಮನಸ್ಥಿತಿಯನ್ನು ಅವನು ಅನುಭವಿಸುತ್ತಾ ತನ್ನ ಮಾನಸಿಕ ನೆಲೆಯಲ್ಲಿ ನೆಲೆಯೂರಿರುವ ಪ್ರಶ್ನೆಗಳೆಷ್ಟು ಅಗಣಿತ ಪ್ರಶ್ನೆಗಳು ಸಮಾಜವನ್ನು ಆವರಿಸಿರುವುದು ಸೂಕ್ಷ್ಮವಾಗಿ ಪರಿಗಣನೆಗೆ ತಂದುಕೊಳ್ಳಬಹುದು. ಇಲ್ಲಿ ಗ್ರಾಮೀಣ ಸಂವೇದನೆಗಳಿಂದ ತನ್ನ ಬದುಕಿನ ನಿಶ್ಚಿತತೆಯನ್ನು ಕಳೆದುಕೊಂಡಿರುವ ಮುಖಗಳನ್ನು ಗುರುತಿಸಬಹುದು. "ಅಪ್ಪ ಹಳ್ಳಿಯಲ್ಲಿ ತೋಟ ನೋಡಿಕೊಂಡಿರುವುದು, ಇದ್ದೊಬ್ಬ ಅಣ್ಣ ಪೋಲಿಯಾಗಿ ತಿರುಗಿ ವ್ಯಾಪಾರ ಮಾಡುತ್ತೇನೆಂದು ಮುಂಬಯಿಯಲ್ಲೇ ಇರುವುದು. ಅಮ್ಮ ಹಳ್ಳಿಯ ಬದುಕಿಗೆ ಇಷ್ಟಪಡದೆ ತನ್ನ ತಂದೆ ಕೊಟ್ಟ ಆಸ್ತಿಯೇ ಸಾಕೆಂದು ನಗರ ಬದುಕಿಗೆ ಜೋತು ಬಿದ್ದಿರುವುದು, ಅಪ್ಪನ ಕೂಡ ಮಾತು ಬಿಟ್ಟು ಎಷ್ಟೋ ವರ್ಷವಾದುವು. ಚಿಕ್ಕಂದಿನಲ್ಲಿ ಒಬ್ಬಳೇ ಮಗಳಾಗಿ ತಡೆಯಿಲ್ಲದೆ ನಡೆದ ಹಾಗೆ ಈಗ ಕೂಡ ನಡೆಯಲು ದಡಬಡಿಸುವುದು ಮೂರು ನಾಕು ತಿಂಗಳಿಗೊಮ್ಮೆ ತಾನೇ ಹಳ್ಳಿಗೆ ಹೋಗಿ ತೋಟದ ಮನೆ ಪಾಲಾದ ತನ್ನ ಬದುಕಿನ ಚಿತ್ರ ವಿಚಿತ್ರಗಳನ್ನು ಹೇಳುತ್ತಾ ಹೊರಟ ಸುಮಿತ್ರಳ ಕಣ್ಣಲ್ಲಿ ನೀರು ತುಂಬಿತ್ತು."[೨೪]

ಆಲನಹಳ್ಳಿಯವರು 'ಹುತ್ತ' ಕಥೆಯಲ್ಲಿ ಗ್ರಾಮೀಣ ಸಂವೇದನೆಗಳಿಂದ ಬಂದಿರುವ ನಾಯಕನೊಂದಿಗೆ ನಗರ ಸಂಸ್ಕೃತಿಯ ಸಂವೇದನೆಗಳನ್ನು ಬಿಚ್ಚುಕೊಳ್ಳುವಿಕೆಯನ್ನು ಕಾಣಬಹುದು. ಅಪಕ್ವ ಮೌಲ್ಯಗಳ ಅಳವಡಿಕೆಗಳಿಂದ ಪಲ್ಲಟಗೊಳ್ಳುತ್ತಿರುವ ಮನಸ್ಸುಗಳ ವಿವಿಧ ಮಾದರಿಗಳನ್ನು ತಿಳಿಯಬಹುದು. ನಗರ ಸಂವೇದನೆಗಳಿಂದಲೂ ಅವನ ನಿಶ್ಚಿತ ಬದುಕು ಸಾಧ್ಯವಾಗದೇ ತತ್ತರಿಸುವುದು. ಹಳ್ಳಿಯ ಮತ್ತು ನಗರ ಬದುಕಿನಲ್ಲಿ ಸಮಾನವಾಗಿಯೇ ಹುದುಗಿರುವ ಕ್ರೌರ್ಯಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲದಿರುವುದು ಗ್ರಾಮೀಣ ಕ್ರೌರ್ಯಗಳಿಗಿಂತ ನಗರ ಸಂವೇದನೆಯ ಕ್ರೌರ್ಯಗಳೇ ಹೆಚ್ಚು ಆಘಾತಕಾರಿಯಾಗಿ ಪರಿಣಮಿಸಿರುವುದು. 'ಹುತ್ತ' ಕಥೆಯ ಸಾರದಲ್ಲಿ ಕಂಡುಕೊಳ್ಳು ಸಾಧ್ಯ. ಈ ಬದುಕು ಸಂದೇಹ, ಅವಮಾನಗಳ ಪ್ರತಿರೂಪ ಅವುಗಳನ್ನು ಸಹಿಸಿಕೊಳ್ಳುತ್ತಾ ತಮ್ಮ ಸ್ಪಂದನೆಗಳಲ್ಲಿಯೇ ಬದಲಾವಣೆಯನ್ನು ಕಂಡುಕೊಳ್ಳುತ್ತಾ ಬದುಕಿನಲ್ಲಿ ಭರವಸೆಯ ದೃಷ್ಟಿಯನ್ನು ಕಾಣಲು ಯತ್ನಿಸುತ್ತಾನೆ.

---

೨೪. ಶ್ರೀ ಕೃಷ್ಣ ಆಲನಹಳ್ಳಿ 'ಸಮಗ್ರ ಕಥೆಗಳು', ೧೯೮೭, ಪು. ೬೯.

ಗ್ರಾಮೀಣ ಸಂವೇದನೆಯ ವಿಭಿನ್ನ ಮುಖಗಳನ್ನು ನಗರ ಸಂವೇದನೆಯ ವಿಭಿನ್ನ ಮುಖಗಳನ್ನು ಸಾಂಕೇತಿಕ ಪ್ರತಿಮೆಗಳಲ್ಲಿ ತರುವುದು ನವ್ಯ ಸಾಹಿತ್ಯ ಘಟ್ಟದ ಹೊಸ ಬೆಳವಣಿಗೆಯಾಗಿದೆ. ಗ್ರಾಮೀಣ ಬದುಕನ್ನು ಆವರಿಸಿರುವ ಕಾಡು, ಪರಿಸರ, ಪ್ರಕೃತಿ, ಮಳೆಯ ಆರ್ಭಟಗಳು ನಗರಬದುಕನ್ನು ಆವರಿಸಿರುವ ಸಿನಿಮಾ, ಟಾರುರಸ್ತೆಗಳು, ಸ್ವಚ್ಛಂದ ಜೀವನ, ಮಟ ಮಟ ಮಧ್ಯಾಹ್ನದ ಬಿಸಿಲು, ಪುಸ್ತಕಗಳು ಮನುಷ್ಯನ ಸಂಕೀರ್ಣತೆಗಳನ್ನು, ಪ್ರಜ್ಞೆಗಳನ್ನು ಮನಸ್ಥಿತಿಗಳ ಪ್ರತಿರೂಪವಾಗಿ ಕಂಡುಬರುವುದು 'ತಪ್ತ' ಸಂಕಲನದಲ್ಲಿ ನೋಡಬಹುದು.

'ನೆಲಗುಮ್ಮ' ಮತ್ತು 'ಸಂಬಂಧ' ಕಥೆಗಳಲ್ಲಿ ನಗರ ಸಂವೇದನೆಯ ಸೋಲನ್ನು ಗುರುತಿಸಬಹುದು. ಸಾವಿನ ಮೂಲಕ ವ್ಯಕ್ತಿತ್ವ ಮತ್ತು ಅಸ್ಥಿತ್ವದ ಜಿಜ್ಞಾಸೆಗಳು ಏರ್ಪಡುವುದು ನಾಯಕನಿಗೆ ಕಾಡುವ ಭೂತದ ನೆನಪುಗಳು ಸಾಂಪ್ರದಾಯಿಕ ಮೌಲ್ಯಗಳ ಅಟ್ಟಹಾಸವು ಅವನ ಅಸ್ತಿತ್ವವನ್ನು ಅಲ್ಲಾಡಿಸುತ್ತಿರುವುದು 'ಸಂಬಂಧ' ಕಥೆಯ ಲಲಿತ ನಗರ ಸಂವೇದನೆಯನ್ನು ಪೂರ್ಣವಾಗಿ ಗ್ರಹಿಸುವ ಮೊದಲೇ ಇಲ್ಲಿನ ಕ್ರೌರ್ಯಗಳಿಗೆ ಬಲಿಯಾಗುವುದರ ಚಿತ್ರವನ್ನು ಕೊಡುತ್ತದೆ.

ಈ ಸಾಹಿತ್ಯದ ಸಂದರ್ಭದಲ್ಲಿ ಗ್ರಾಮೀಣ ಸಂವೇದನೆಯ ಸತ್ಯ ಮುಖಗಳನ್ನು ನಗರ ಸಂವೇದನೆಯ ಸತ್ಯ ಮುಖಗಳನ್ನು ಎಲ್ಲ ಕಥೆಗಾರರಲ್ಲೂ ಗುರುತಿಸಬಹುದು. ಆಲನಹಳ್ಳಿಯವರ ಸಮಕಾಲೀನರಾದ 'ಪಿ.ಲಂಕೇಶ್', 'ತೇಜಸ್ವಿ', 'ದೇವನೂರ ಮಹಾದೇವ' ಇವರ ಕೃತಿಗಳಲ್ಲಿ ಈ ಎರಡು ಸಂವೇದನೆಗಳನ್ನು ವಿವಿಧ ನೆಲೆಗಳಲ್ಲಿ ಕಾಣಬಹುದು. ಮನುಷ್ಯನ ಬದುಕಿನ ವಿಭಿನ್ನ ಮುಖಗಳತ್ತ ಪರಿಚಯಿಸುತ್ತಾರೆ. ಕನ್ನಡದ ಅತ್ಯಂತ ಸಾರ್ಥಕ ಕತೆಗಳ ಸಾಲಿನಲ್ಲಿ ನಿಲ್ಲಬಲ್ಲ ಕಥೆಯೆಂದರೆ 'ಆಗಂತುಕ' ಬದುಕನ್ನು ಬಾಲಕನ ಮುಗ್ಧ ದೃಷ್ಟಿಕೋನದಲ್ಲಿ ನೋಡಿರುವ ಈ ಕಥೆಯು ಇವರ ಒಟ್ಟು ಕಥೆಗಳಲ್ಲೇ ಭಿನ್ನವಾಗಿ ಉಳಿಯುತ್ತದೆ. ಬದುಕನ್ನು ಮುಗ್ಧ ದೃಷ್ಟಿಕೋನದಲ್ಲಿ ನೋಡುತ್ತ ಹೋಗುವುದು ನವ್ಯ ಕಥೆಗಳ ಒಂದು ಪ್ರಮುಖ ತಂತ್ರವೇ ಸರಿ. ಅನಂತಮೂರ್ತಿಯವರ 'ಘಟಶ್ರಾದ್ಧ'ದಲ್ಲಿ ಬರುವ ಮಾಣಿ ತೇಜಸ್ವಿಯವರ 'ಲಿಂಗಬಂದ' ಕಥೆಯಲ್ಲಿ ಬರುವ ಕಿಟ್ಟಿ ಕೂಡ ಇಂತಹ ಪಾತ್ರಗಳೇ ಆಗದೆ ಪ್ರಮುಖ ನವ್ಯ ಕಥೆಗಾರರಿಂದ ಪ್ರಭಾವಿತರಾದ ಆಲನಹಳ್ಳಿಯವರು ಈ ಕಥೆಯಲ್ಲಿ ಮೇಲಿನ ತಂತ್ರವನ್ನು ಅಳವಡಿಸಿಕೊಂಡಿರುವುದು ಸಹಜವಾಗಿದೆ. ಸಾವಿನ ಸುತ್ತಮುತ್ತಲಿನ ವಿವರಗಳ ನಡುವೆ ಕಥೆಯು ಹರಡಿಕೊಂಡಿದೆ. ಗ್ರಾಮೀಣ ಬದುಕಿನ ವಿವರಗಳು ಒಂದಕ್ಕೊಂದು ಹೊಂದಿಕೊಂಡು ಬೆಳೆಯುತ್ತ ಹೋಗುವ ವಿವರಗಳ ಧ್ವನಿಪೂರ್ಣವಾದ ಘಟನೆಗಳ ಈ ಕಥೆಯ ಶಿಲ್ಪ ಕವನದ್ದಾಗಿದೆ. ಎಲ್ಲೂ ಕಥೆಯ ಒಟ್ಟು ಪರಿಣಾಮದ ಏಕಾಗ್ರತೆಗೆ ಭಂಗಬಾರದಂತೆ ಇಡೀ ಒಂದು ಹಳ್ಳಿಯ ಜೀವನ ಸೂಚ್ಯವಾಗಿ ವ್ಯಕ್ತವಾಗುತ್ತದೆ. ಮುಗ್ಧ ಬಾಲಕನ ಸಾಕ್ಷಿ ಪ್ರಜ್ಞೆಯಲ್ಲಿ

ಇಡೀ ಕಥೆ ನಡೆಯುತ್ತದೆ. ದೊಡ್ಡವರ ಲೋಕವು ಕಿಟ್ಟಿಯ ಕುತೂಹಲದ ಕಣ್ಣಿನ ಮೂಲಕ ಕತೆಯಲ್ಲಿ ಬಿಚ್ಚುಕೊಳ್ಳುತ್ತಾ ಹೋಗುತ್ತದೆ. ಕಿಟ್ಟಿಯ ಮನಸ್ಸಿನಲ್ಲಿ ಹುಟ್ಟುವ ಸಾವಿನ ಮುನ್ನಳುಕು ಗಾಢವಾಗಿ ಮುಂದೆ ಬೆಳೆದು ಮೃತ್ಯು ಪ್ರಜ್ಞೆಯಾಗಿ ಕಾಡಬಹುದಾದ ಸೂಚನೆಯೊಂದಿಗೆ ಈ ಕಥೆಯು ಮುಕ್ತಾಯವಾಗುತ್ತದೆ.

'ಸುಟ್ಟ ತಿಕದ ದೇವರು' ಆಲನಹಳ್ಳಿಯವರ ನೀಳ್ಗತೆಯಾಗಿದೆ. ಆಲನಹಳ್ಳಿಯವರ ಒಟ್ಟು ಕಥೆಗಳಲ್ಲೇ ಇದು ವಿಶಿಷ್ಟ ಹಾಗೂ ಅತ್ಯುತ್ತಮ ಕಥೆಯಾಗಿದೆ. ವಸ್ತು, ವಿಷಯ, ದೃಷ್ಟಿ ಧೋರಣೆಗಳಲ್ಲಿ ಇತರ ಕಥೆಗಳಿಗಿಂತ ಭಿನ್ನವಾಗಿದೆ. ಇಲ್ಲಿ ರಂಜನೀಯವಾಗಿ ಆಕರ್ಷಕವಾಗಿ ಕಥೆ ಹೇಳುವ ಉತ್ಸಾಹ ಇಲ್ಲ. ಶ್ರೀ ಕೃಷ್ಣ ಅವರು ತಮ್ಮ ಜೀವನದಲ್ಲಿ ಹೇಗೆ ಮಾಗುವಿಕೆಯನ್ನು ಕಂಡುಕೊಳ್ಳುತ್ತಿದ್ದರೋ ಹಾಗೆ ಸಾಹಿತ್ಯದಲ್ಲಿನ ಮಾಗುವಿಕೆಯೂ ಈ ಕಥೆಯಲ್ಲಿ ಕಂಡುಬರುತ್ತದೆ. ಜೀವನದ ಬಗ್ಗೆ ಅತ್ಯಂತ ನಿರ್ಲಿಪ್ತತೆಯಿಂದ, ಬದುಕಿನ ಒಳಸೂಕ್ಷ್ಮತೆಗಳನ್ನು ನಿಗೂಢತೆಯನ್ನು ದುರಂತವನ್ನು ಕಟ್ಟಿಕೊಡುವ ಈ ಕತೆ ಬದುಕಿನ ಬಗ್ಗೆ ಹೆಚ್ಚಿನ ಅರಿವನ್ನು ಮೂಡಿಸುತ್ತದೆ. ಓದುಗರನ್ನು ಆಲೋಚನೆಗೆ ಹಚ್ಚುತ್ತದೆ. ವಾಸ್ತವವಾಗಿ ಒಂದು ಕಾದಂಬರಿ ಕಟ್ಟಿಕೊಡಬಹುದಾದ ಬದುಕಿನ ವಿವರಗಳನ್ನು ಈ ನೀಳ್ಗತೆ ಕಟ್ಟಿಕೊಡುತ್ತದೆ. ಇಲ್ಲಿನ ಪಾತ್ರಗಳು ಯಾವುವು ಪ್ರಧಾನವಾದವು ಯಾವುವು ಅಪ್ರಧಾನವಾದವುಗಳು ಎಂದು ಗುರುತಿಸಲಾಗದ ಮಟ್ಟಿಗೆ ಆಯಾ ಸಂದರ್ಭ ಸನ್ನಿವೇಶಗಳಿಗೆ ತಕ್ಕಂತೆ ಪ್ರಮುಖವಾಗುತ್ತದೆ. ಕಥೆಯ ಉದ್ದಕ್ಕೂ ನಿರೂಪಕನು ಒಂದು ಮುಖ್ಯ ಪಾತ್ರವಾಗಿಯೇ ಬೆಳೆದು ಬಂದಿರುವುದು ಈ ಕತೆಯ ಒಂದು ವಿಶೇಷ. ನಿರೂಪಕನ ಜೀವನದ ಮೂರು ಘಟ್ಟಗಳಲ್ಲಿ ಈ ಕಥೆಯು ಬೆಳವಣಿಗೆಯನ್ನು ಕಾಣುತ್ತದೆ. ಒಂದು ಇವನ ಬಾಲ್ಯ, ಎರಡನೆಯದು ಇವನು ಮೈಸೂರಿನಲ್ಲಿ ಓದುತ್ತ ಪ್ರಬುದ್ಧತೆಯನ್ನು ಗಳಿಸಿಕೊಂಡು ಅಂತರ್ಜಾತಿ ವಿವಾಹವಾಗಿ ಬದುಕುತ್ತಿದ್ದ ಘಟ್ಟ, ಕೊನೆಯದಾಗಿ ಇವನು ತೋಟ ಮಾಡಿಕೊಂಡು ಪ್ರಗತಿಪರ ಕೃಷಿಕನಾಗಿ ಬದುಕುತ್ತಿದ್ದ ಘಟ್ಟ, ಕೊನೆಯದಾಗಿ ಇವನು ತೋಟ ಮಾಡಿಕೊಂಡು ಪ್ರಗತಿಪರ ಕೃಷಿಕನಾಗಿ ಬದುಕುತ್ತಿರುವುದು. ನಿರೂಪಕನು ಜೀವನದ ಎರಡು ಘಟ್ಟಗಳನ್ನ ದಾಟಿ ತೋಟ ಮಾಡಿ ಊರಿನ ಜನಕ್ಕೆ ಹತ್ತಿರವಾದ ಸಂದರ್ಭದಿಂದ ಕಥೆಯು ಆರಂಭವಾಗುತ್ತದೆ.

ಮೇಲಿನ ಕಥೆಗಳಲ್ಲಿ ಕಥೆಗಾರರ ದಟ್ಟವಾದ ಹಳ್ಳಿಯ ಸಂಬಂಧಗಳು ಅದರಿಂದ ಪಡೆದ ಅನುಭವಗಳು ನಿಜ ಅನ್ನಿಸುತ್ತವೆ. ಆದರೆ ಈ ಸಂಕಲನದ 'ಸೀಮಂತ', 'ಶ್ರಾವಣ' ಮತ್ತು 'ಹುತ್ತ' ಕಥೆಗಳ ಪರಿಸರ, ಸನ್ನಿವೇಶ, ಘಟನೆಗಳು ಹಾಗೂ ವ್ಯಕ್ತಿಗಳು ನಗರಕ್ಕೆ ಸಂಬಂಧಿಸಿದವು ಇವೆಲ್ಲದರ ಸಂಬಂಧಗಳು ಕಥೆಗಾರರ ದೃಷ್ಟಿಯಿಂದ ಮತ್ತು ಅಭಿವ್ಯಕ್ತಿಯ ಕ್ರಮದಿಂದ ಗಟ್ಟಿ ಅನುಭವಗಳಾಗಿ ಕಾಣಿಸುವುದಿಲ್ಲ. 'ಸೀಮಂತ'ದಲ್ಲಿ ಪದ್ಮ ಪಾಪ ಪ್ರಜ್ಞೆಯಿಂದ ತಲ್ಲಣಿಸಿದ್ದಾಳೆ.

ತನ್ನ ಗಂಡನ ವಿದ್ಯಾರ್ಥಿಯಾದ ಶ್ರೀಧರನ ಸಂಪರ್ಕದಿಂದಾಗಿಯೇ ಗರ್ಭವತಿಯಾದದ್ದೆಂಬ ಕಾರಣದಿಂದ ಗಂಡ ನರಹರಿಗೆ ಪದ್ಮ-ಶ್ರೀಧರನ ಸಂಬಂಧದ ಅರಿವಿದೆ. ಆದರೂ ನಿರ್ಲಿಪ್ತದಿಂದಿದ್ದಾನೆ ಅಂದಾಗ ಇಲ್ಲಿ ಪದ್ಮಾಳ ನರಳಾಟ ಯಾವುದೇ ಪರಿಣಾಮ ಬೀರುವುದಿಲ್ಲ. ನೈತಿಕತೆಯ ಬಗ್ಗೆ ಕಥೆಗಾರರಿಗೆ ಲಿಬರಲ್ ಮನೋಧರ್ಮ ಇರುವುದು ಗೊತ್ತಾಗುತ್ತದೆ. 'ಹುತ್ತ'ದ ಯುವಕ ವಯಸ್ಸಾದ ಹೆಣ್ಣೊಬ್ಬಳ ಕಾಮ ಪ್ರೇಮಕ್ಕೆ ಬಲಿಯಾಗಿ ತತ್ತರಿಸುವ ಚಿತ್ರಣವಿದೆ. ವಯಸ್ಸಾದವಳ ವಿರಹಕ್ಕೆ ಕಾರಣವಾಗುವ ಅಂಶಗಳು ಮತ್ತು ಆಕೆಗೆ ಬಲಿಯಾಗಲು ಯುವಕನಿಗಿರುವ ಪರಿಸ್ಥಿತಿಯನ್ನು ಕುರಿತು ಗಂಭೀರವಾಗಿ ಬರೆಯಬಹುದಾದ ಕಥೆಯನ್ನು ಅನವಶ್ಯಕ ಹಿಗ್ಗಿಸಲಾಗಿದೆ. ವಯಸ್ಸಾದವಳ ಮಗಳ ಜತೆಗಿನ ಯುವಕನ ಪ್ರೇಮ ಸಂಬಂಧ ಕೇವಲ ನೆಪವಾಗಿ ಉಳಿಯುತ್ತದೆ. 'ಶ್ರಾವಣ' ಕಥೆಯ ಹೆಸರೇ ಸೂಚಿಸುವಂತೆ ಹಾದಿ ತಪ್ಪಿದ ಬದುಕಿನಿಂದ ಪುನಃ ಹಾದಿ ಸೇರುವ ಸಂಬಂಧದ ವಸ್ತು. ಅಧ್ಯಾಪಕಿ ಶಕುಂತಲೆ ವಿದ್ಯಾರ್ಥಿನಿ ಸವಿತಾ ಇವರಿಬ್ಬರ ನಡುವೆ ವಯಸ್ಸಿನಲ್ಲಿ ಸಣ್ಣ ಅಂತರವಿದ್ದರೂ ಅವರು ಸ್ನೇಹಿತರು ಮತ್ತು ಯೌವ್ವನದ ಕನಸುಗಳನ್ನು ಕಾಣುವ ತರುಣಿಯರು ಶಕುಂತಲೆ ಈಗಾಗಲೇ ಪ್ರೀತಿಸಿರುವವನಿಂದ ವಂಚಿತಳಾಗಿದ್ದಾಳೆ. ಸವಿತಾ ಈಗ ತಾನೇ ಪ್ರೀತಿಸಿದವನ ಜತೆ ಕನಸನ್ನು ಹಂಚಿಕೊಳ್ಳುತ್ತಿದ್ದಾಳೆ. ಶಕುಂತಲೆಗೆ ಭೂತವಾದದ್ದು ಸವಿತಾಗೆ ವರ್ತಮಾನ 'ಭೂತವಾದದ್ದನ್ನು 'ವರ್ತಮಾನ'-ವಾಗಿಸಿಕೊಳ್ಳಲು ಶಕುಂತಲೆ ಪ್ರಯತ್ನಿಸುತ್ತಾಳೆ. ಸವಿತಾಳ ವರ್ತಮಾನ ಶಕುಂತಳೆಗೆ ಪ್ರೇರಣೆ ನೀಡುತ್ತದೆ ಎಂಬಂತೆ ಕಾಣುತ್ತದೆ. ಮದುವೆಯಾಗಲು ಮುಂದೆ ಬಂದ ಬ್ರಾಹ್ಮಣ ಹುಡುಗನಿಗೆ ಒಪ್ಪಿಗೆ ಸೂಚಿಸಿ ಪತ್ರ ಬರೆಯುವುದರ ಮೂಲಕ ಶಕುಂತಳೆ 'ಭೂತ'ದ ಯಾತನೆಯಿಂದ ದೂರ ಸರಿಯುತ್ತಾಳೆ. ಕಥೆಯಲ್ಲಿ ಶಕುಂತಳೆ ಮತ್ತು ಸವಿತಾ ಕೂಡಿ ಮಳೆಯಲ್ಲಿ ನೆನೆಯುತ್ತ ಮನೆ ಸೇರುವ ಮುನ್ನ ಹಾದಿಗುಂಟ ನಡೆವಾಗ ಅವರಿಬ್ಬರ ಮನಸ್ಸಿನಲ್ಲಿ ಉಂಟಾಗುವ ಸಂತೋಷ, ವಿಷಾದ ನೋವುಗಳ ವಿನಿಮಯದ ಸನ್ನಿವೇಶವು ಲವಲವಿಕೆಯಿಂದ ಕೂಡಿದೆ.

ಈ ಸಂದರ್ಭದಲ್ಲಿ ಮತ್ತೊಂದು ಅಂಶವನ್ನು ಗುರುತಿಸಬಹುದು. ಪುರುಷ ಕೇಂದ್ರಿತ ಸಮಾಜದಲ್ಲಿ ಜಾಗೃತಗೊಳ್ಳುತ್ತಿರುವ ಸ್ತ್ರೀ ಮನೋಧರ್ಮ ಸಮಾಜದ ಚಲನಶೀಲತೆಯನ್ನು ಕಾಣುತ್ತದೆ. ಅವರ ಬದುಕಿನ ಶೈಲಿಯಲ್ಲಿ ಪರಿವರ್ತನೆಗಳು ಹೊಸ ಬದುಕಿಗೆ ಸ್ಪಂದಿಸುವುದು ಸ್ತ್ರೀ ಸಮಾಜದಲ್ಲಿ ತಮಗೆ ಮೀಸಲಾಗಿರುವ ಕಟ್ಟಳೆಗಳನ್ನು ಪ್ರಶ್ನಿಸುವುದು ಸ್ತ್ರೀ ಮನೋಧರ್ಮದ ವಿಕಾಸವನ್ನು ಕಂಡುಕೊಳ್ಳಬಹುದು.

ಆಲನಹಳ್ಳಿಯವರು ನಗರ, ಗ್ರಾಮೀಣ ಸಂವೇದನೆಗಳನ್ನು ತಮ್ಮ ಕಥಾಸಂಕಲನದಲ್ಲಿ ಹಾಗೂ ಕಾದಂಬರಿಗಳಲ್ಲಿ ಹಿಡಿದಿಟ್ಟಿದ್ದಾರೆ. ಈ ಸಂವೇದನೆಗಳ ನೆಲೆಯನ್ನು ಕಾಮದ ಮಾಧ್ಯಮದಿಂದಲೇ ಗ್ರಹಿಸುವುದು ಕನ್ನಡ ಸಾಹಿತ್ಯದಲ್ಲಿಯೇ ವಿಭಿನ್ನವಾಗಿದೆ. ನಗರ

ಸಂವೇದನೆಯೂ ನಗರದ ತೋರಿಕೆಯ ಜೀವನ ಆಕರ್ಷಣೀಯ ಸೆಳತಗಳು, ಸ್ವಚ್ಛಂದ ಸಂಬಂಧಗಳ ಸ್ವರೂಪ ಮನುಷ್ಯನ ಪ್ರವೃತ್ತಿಗಳು ಸ್ವಭಾವಗಳನ್ನು ಎತ್ತಿ ತೋರಿಸುತ್ತವೆ. ಗ್ರಾಮೀಣ ಸಂವೇದನೆಯೂ ಜಡವಾಗಿರುವ ಸಂಪ್ರದಾಯ, ಮೌಲ್ಯಗಳು, ಕಟ್ಟು ಪಾಡಿನ ಜೀವನಶೈಲಿ, ಅರ್ಥವಿಲ್ಲದ ವಿಚಾರಧಾರೆಗಳು ಇಲ್ಲಿಯೂ ಮನುಷ್ಯ ಮೂಲಪ್ರವೃತ್ತಿಗಳ ಚಹರೆಗಳನ್ನು ತೋರಿಸಲಾಗುತ್ತದೆ. ಬದುಕಿನ ಎರಡು ವ್ಯಂಗ್ಯ ಪರವಾದ ದುರಂತದ ಬದುಕನ್ನು ಪರಿಚಯಿಸುತ್ತಿರುವುದು ಆಲನಹಳ್ಳಿಯವರ ಕಥಾ ವೈಶಿಷ್ಟ್ಯವಾಗಿದೆ.

೪.೨. ಗಂಡು–ಹೆಣ್ಣಿನ ಸಂಬಂಧ

ಆಲನಹಳ್ಳಿಯವರ ಕಾದಂಬರಿಗಳಾದ 'ಕಾಡು', 'ಪರಸಂಗದ ಗೆಂಡೆತಿಮ್ಮ' ಮತ್ತು 'ಭುಜಂಗಯ್ಯನ ದಶಾವತಾರ'ಗಳು. ಈ ಕಾದಂಬರಿಗಳಲ್ಲಿ ಗಂಡು–ಹೆಣ್ಣಿನ ಸಂಬಂಧ ಭಿನ್ನವಾಗಿದೆ ಎಂದು ಹೇಳಬಹುದು. 'ಕಾಡು' ಕಾದಂಬರಿ ಗಾತ್ರದಲ್ಲಿ ಚಿಕ್ಕದು ಕಥೆ ನಡೆಯುವುದು ಕೊಪ್ಪಲು ಮತ್ತು ಹೊಸೂರು ಎಂಬ ಗ್ರಾಮಗಳ ಪರಿಸರದಲ್ಲಿ. ಇಲ್ಲಿ ಪ್ರಧಾನವಾಗಿ ಒಕ್ಕಲಿಗ ಜನಾಂಗದ ಬದುಕಿನ ಸುತ್ತಮುತ್ತ ಕಥೆ ಹರಡಿಕೊಂಡಿದೆ. ಇದಕ್ಕೆ ಪೂರಕವಾಗಿ ಲಿಂಗಾಯಿತರು, ದಲಿತರು, ಬ್ರಾಹ್ಮಣರು ಬರುತ್ತಾರೆ. ಕಾದಂಬರಿಯಲ್ಲಿ ನಡೆಯುವ ಘಟನೆಗಳು ಒಂದಕ್ಕೊಂದು ಪೂರಕವಾದ ಸಾವಯವ ಸಂಬಂಧವನ್ನು ಪಡೆದುಕೊಂಡಿದೆ. ಪರಂಪರೆಯಿಂದ ಶ್ರೀಮಂತಿಕೆ ಮತ್ತು ಯಜಮಾನಿಕೆಯನ್ನು ಉಳಿಸಿಕೊಂಡು ಬಂದಿರುವ ಪ್ರತಿಷ್ಠಿತ ರೈತನಾದ ಚಂದ್ರೇಗೌಡ ತನಗೆ ಮಕ್ಕಳಿಲ್ಲದ್ದರಿಂದ ಅಕ್ಕನ ಮಗನನ್ನು ತಂದು ಸಾಕಿಕೊಂಡಿದ್ದಾನೆ. ಆದರೆ ಚಂದ್ರೇಗೌಡ ತನ್ನ ಹೆಂಡತಿಯನ್ನು ಯಾವತ್ತೂ ಮಾನವೀಯವಾಗಿ ನೋಡುವುದಿಲ್ಲ. ಇನ್ನು ಊರಿನಲ್ಲಂತೂ ಇವನನ್ನು ಪ್ರಶ್ನೆ ಮಾಡುವವರು ಹುಟ್ಟಿಯೇ ಇಲ್ಲ. ಈ ಎಲ್ಲಾ ಹಮ್ಮಿನಿಂದ ಪಕ್ಕದ ಹೊಸೂರ ಬಸಕ್ಕನ ಜೊತೆಗೆ ಲೈಂಗಿಕ ಸಂಪರ್ಕ ಹೊಂದಿರುತ್ತಾನೆ. ಇದು ತನ್ನ ಯಜಮಾನಿಕೆಯ ಪ್ರತಿಷ್ಠೆಗೆ ದಕ್ಕಿರುವ ಮಾನ್ಯತೆಯೆಂದು ಈತ ಭಾವಿಸುತ್ತಾನೆ. ಮುಗ್ಧೆ ಕಮಲಮ್ಮನಂತೂ ಗಂಡನನ್ನು ಪ್ರಶ್ನಿಸುವುದಿರಲಿ ಅವನೆದುರು ನಿಂತೂ ಮಾತಾಡಲಾರಳು ಇವರಿಬ್ಬರೂ ಕಿಟ್ಟಿಯ ಮೂಲಕವೇ ಮಾತಾಡುವುದು. ಕಿಟ್ಟಿಗಂತೂ ಮಾವನು ಪ್ರತಿದಿನ ರಾತ್ರಿ ಊಟದ ನಂತರ ಜಿರಕಿ ಜೋಡು ಮೆಟ್ಟಿ ಎಲ್ಲಿಗೋ ಹೊರಡುವುದು. ಅತ್ತೆ ಬುಳು ಬುಳು ಅಳುವುದು. ಒಂದೂ ಅರ್ಥವಾಗುವುದಿಲ್ಲ. ಈ ಎಲ್ಲಾ ಅನುಭವಗಳಿಗೆ ಈತ ಪರಕೀಯನಾಗಿಯೇ ಉಳಿಯುತ್ತಾನೆ.

ಕಮಲಮ್ಮ ಮುಗ್ಧಳಾಗಿ ಬೇಯುತ್ತಲೆ ಗಂಡನನ್ನು ಬಸಕ್ಕನ ಸಂಪರ್ಕದಿಂದ ತಪ್ಪಿಸಲು ಹಾಗೂ ಗಂಡನ ಒಳಿತಿಗಾಗಿ ದೇವರ ಪೂಜೆ ಮಾಡಿಸುವುದರಲ್ಲಿ ತಲ್ಲೀನಳಾಗುತ್ತಾಳೆ. ಗಂಡನನ್ನು ಪ್ರತಿಭಟಿಸಲು ಸಾಧ್ಯವಾಗದು ಮಾತಾಡಿದರೆ ಸಾಯ ಬೀಳ ಹೊಡೆತ. ಆದರೆ ಜೀತದಾಳು ಕೆಂಚ

ತನ್ನ ಕೇರಿಯ ದೇವಿಯ ಜೊತೆ ಲೈಂಗಿಕ ಸಂಬಂಧ ಇಟ್ಟುಕೊಂಡಿದ್ದು ಪಂಚಾಯ್ತಿಗೆ ಬರುತ್ತದೆ. ಈ ಪಂಚಾಯಿತಿಯಲ್ಲಿ ವ್ಯಕ್ತಿ ಪಾವಿತ್ರವನ್ನು ಕಾಪಾಡಿಕೊಳ್ಳದ ಗುಡಿ ಅಯ್ನೋರು ಮತ್ತು ಇದೇ ತಪ್ಪನ್ನು ತಾನು ಮಾಡಿದರೆ ಸರಿ ಇನ್ನೊಬ್ಬರು ಮಾಡಿದರೆ ತಪ್ಪು ಎಂದು ಭಾವಿಸುವ ಚಂದ್ರೇಗೌಡರೇ ಮುಂದಾಳುಗಳಾಗಿರುತ್ತಾರೆ. ಈ ನ್ಯಾಯದಲ್ಲಿ ಚಂದ್ರೇಗೌಡನ ಪ್ರತಿರೂಪ ದಂತೆಯೇ ಇರುವ ಹೊಸೂರಿಗೆ ಶಿವಗಂಗ ತನ್ನ ಹುಳುಕನ್ನು ಕೆದಕಲು ಯತ್ನಿಸಿದಾಗ ಚಂದ್ರೇಗೌಡನ ಪ್ರತಿಷ್ಠೆಗೆ ಧಕ್ಕೆಯಾಗಿ 'ಅಪರಾಧಿ' ಕೆಂಚನನ್ನು ಸಾಯಬೀಳ ಹೊಡೆಯುತ್ತಾನೆ. ಜೊತೆಗೆ ಶಿವಗಂಗನ ಕುಮ್ಮಕ್ಕು ಇದಕ್ಕೆಲ್ಲ ಕಾರಣ ಎಂದು ಅವನನ್ನು ಹೀನಮಾನ ಬೈಯ್ಯುತ್ತಾನೆ. ಇದರಿಂದ ದೊಡ್ಡ ರಾದ್ಧಾಂತವಾಗಿ ಶಿವಗಂಗನು ಚಂದ್ರೇಗೌಡನ ಮೇಲೆ ದ್ವೇಷ ಕಾರುತ್ತಾ ಚಂದ್ರೇಗೌಡನ ರಾಗಿ ಮೆದೆಗೆ ಬೆಂಕಿ ಹಚ್ಚಿಸುತ್ತಾನೆ. ನಂತರ ಓಕುಳಿಯಂತಹ ಸಾಂಸ್ಕೃತಿಕ ಹಬ್ಬದಲ್ಲೂ ಹಳೆಯ ವೈರದಿಂದ ಪರಸ್ಪರ ರಾಕ್ಷಸರಂತೆ ಬಡಿದಾಡುತ್ತಾರೆ. ಉಳ್ಳವರ ಈ ಬಿರುಕಿನಿಂದ ಅರ್ಥವಿಲ್ಲದ ಪ್ರತಿಷ್ಠೆ ಮತ್ತು ಮಾರಾಮಾರಿತನದಿಂದ ದ್ವೇಷ ಬೆಳೆಯುತ್ತಲೇ ಹೋಗುತ್ತದೆ. ಪೊಲೀಸರ ಮೊರೆಹೊಕ್ಕರೂ ಇವರ ಪಶುತ್ವದಿಂದ ಅಮಾಯಕ ಮುಗ್ಧೆ ಕಮಲಮ್ಮನ ಮೇಲೆ ಅತ್ಯಾಚಾರ ನಡೆಯುತ್ತದೆ. ಕನಸು ಮನಸ್ಸಿನಲ್ಲೂ ಈ ದುರಂತವನ್ನು ಯೋಚಿಸದ ಚಂದ್ರೇಗೌಡ ಅಪಮಾನ ಹಿಂಸೆ ರೋಷದಿಂದ ಕುದಿಯುತ್ತಾನೆ. ಕೊನೆಗೆ ಇದರ ಪ್ರತೀಕಾರವಾಗಿ ಶಿವಗಂಗನನ್ನು ಬಲಿ ತೆಗೆದುಕೊಳ್ಳುತ್ತಾನೆ. ಇದೆಲ್ಲವನ್ನು ಕಾದಂಬರಿಕಾರರು ಸ್ಪಷ್ಟವಾಗಿ ಕಟ್ಟಿಕೊಡುತ್ತಲೇ ಅಲ್ಲಿನ ಜನರ ಬದುಕು, ಅವರು ನಂಬಿದ್ದ ಮೌಲ್ಯಗಳು, ಕುರುಡು ನಂಬಿಕೆಗಳು ಹಾಗೂ ಆಚಾರ–ವಿಚಾರಗಳನ್ನು ಪರಿಚಯಿಸುತ್ತಾರೆ. ಕಾದಂಬರಿಯಲ್ಲಿ ನಡೆಯುವುದೆಲ್ಲವೂ ದೊಡ್ಡವರ ಲೋಕದ ಆಗುಹೋಗುಗಳೇ ಆಗಿದೆ. ಆದರೆ ಕಾದಂಬರಿಕಾರರು ಮುಗ್ಧ ಪಾತ್ರಗಳ ಒಳನೋವುಗಳನ್ನು ಇಲ್ಲಿ ನಡೆಯುವ ಕಿಟ್ಟಿಯ ಕಣ್ಣಿನ ಮೂಲಕ ಅನಾವರಣಗೊಳಿಸುತ್ತಾರೆ. ಇಲ್ಲಿ ಮನುಷ್ಯನಲ್ಲಿ ಅಡಗಿರುವ ರಾಕ್ಷಸ ಪ್ರವೃತ್ತಿ, ಅಜ್ಞಾನ, ಸೊಕ್ಕು, ದ್ವೇಷ, ಅಸೂಯೆ ಎಲ್ಲವುಗಳ ಪರಿಚಯ ನಮಗಾಗುವುದಲ್ಲದೆ ಇದೆಲ್ಲದರ ಪರಿಣಾಮವಾಗಿ ಬದುಕು ವಿನಾಶದತ್ತ ಸಾಗುತ್ತಿರುವುದನ್ನು ಕಾಣುತ್ತೇವೆ.

'ಕಾಡು' ಕಾದಂಬರಿಯಲ್ಲಿ ಕಿಟ್ಟಿ ಅಂಜುವುದು ದೊಡ್ಡವರ ಲೋಕದಲ್ಲಿರುವ ಕಾಡುತನಕ್ಕೆ ಚಂದ್ರೇಗೌಡನ ಅನ್ಯೆತಿಕ ಸಂಬಂಧದ ಬಗೆಗೆ ಪ್ರತಿಯಾಡಲಾರದೆ ಅವನ ಪ್ರೇಮದಿಂದ ವಂಚಿತಳಾದ ಕಮಲಮ್ಮನ ಬರಡು ಬದುಕಿಗೆ ಕಿಟ್ಟಿಯೊಬ್ಬನೇ ಆಸರೆಯಾಗಿರುವವನು. ಅತ್ತೆಯು ಪೂಜೆಹಾಕಿಸಿದ್ದು, ಮಾವ ಅತ್ತೆಗೆ ದನಕ್ಕೆ ತರಿದ ಹಾಗೆ ತರಿಯುವುದು, ಪ್ರತಿನಿತ್ಯ ಮಾವ ಊಟವಾದ ಮೇಲೆ ಜಿರಕಿ ಜೋಡು ಮೆಟ್ಟಿಕೊಂಡು ಹೋಗುವುದು ಲೋಂಪಿಯನ್ನು ಕೇಳಿದಾಗ ದೊಡ್ಡವರ ವಿಚಾರ ನಿಮಗ್ಯಾಕ್ರಯ್ಯ' ಅನ್ನುವುದು ಇವುಗಳೆಲ್ಲವೂ ಎಳೆಯ ವಯಸ್ಸಿನ ಕಿಟ್ಟಿಗೆ ಬಿಡಿಸಲಾಗದ ಕಗ್ಗಂಟುಗಳಾಗಿವೆ. ಊರಿನ ಪ್ರಧಾನ ವ್ಯಕ್ತಿಯಾದ ಚಂದ್ರೇಗೌಡನ

ದೌರ್ಬಲ್ಯದಿಂದ ಇಡೀ ಊರೇ ತತ್ತರಿಸಿ ಹೋಗುತ್ತದೆ. ಇವನು ಕಾಡಿನ ಪ್ರಾಣಿಗಳು ಹೇಗೆ ತಮ್ಮ ಎಲ್ಲೆಯಲ್ಲಿ ಸರ್ವಾಧಿಕಾರತ್ವದಿಂದ ಮೆರೆಯುತ್ತವೆಯೋ ಹಾಗೆ ಮೆರೆದು ಊರ ಅವನತಿಗೆ ಕಾರಣನಾಗುತ್ತಾನೆ. ಲೇಖಕರು ಊಳಿಗಮಾನ್ಯ ವ್ಯವಸ್ಥೆಯಲ್ಲಿ ಹೆಣ್ಣು, ಭೂಮಿ ಮತ್ತು ಜಾತಿಗಳು ಹೇಗೆ ಪ್ರಮುಖ ಆಧಾರ ಸ್ಥಂಭಗಳಾಗಿರುತ್ತವೆ ಈ ವ್ಯವಸ್ಥೆಗೆ ಕಿಂಚಿತ್ ಧಕ್ಕೆ ಬಂದರೂ ಅದರ ದುಷ್ಪರಿಣಾಮ ಇಡೀ ಬದುಕನ್ನು ಹೇಗೆ ದುರಂತಕ್ಕೊಯ್ಯುತ್ತದೆ ಎಂಬುದನ್ನು ಚಿತ್ರಿಸಿದ್ದಾರೆ. ಇಲ್ಲಿ ಚಂದ್ರೇಗೌಡ ಬಸಕ್ಕನ ಸಖ್ಯ ಬೆಳೆಸುವುದು, ಗುಡಿ ಅಯ್ನೋರು ಹೊಲೇರ ಕಾಳಿ ಜೊತೆ ಲೈಂಗಿಕ ಸಂಬಂಧವನ್ನಿಟ್ಟುಕೊಳ್ಳುವುದು ಪ್ರಶ್ನಾತೀತ ಸಂಗತಿಗಳಾಗುತ್ತವೆ. ಗುಡಿ ಅಯ್ನೋರ ತಂಗಿ ಕದ್ದು ಬಸುರಾಗಿ ನೇಣು ಹಾಕಿಕೊಂಡು ಸತ್ತಾಗ ರಾತ್ರೋರಾತ್ರಿ ಚಂದ್ರೇಗೌಡ ಆಕೆಯ ಹೆಣವನ್ನು ಸುಡಿಸಿ ಹಾಕುತ್ತಾನೆ. ಸಿಂಗಪ್ಪಣ್ಣನ ಹೆಂಡತಿ ಹೊಲೇರ ಹುನುಮನ ಜೊತೆ ಕದ್ದು ಓಡಿ ಹೋದಾಗ 'ಅವಳೋದ್ರೆ ಇನ್ನೊಬ್ಬಳು ಬರ್‍ತಾಳೆ' ಎಂಬ ತನ್ನ ದರ್ಪದ ಮನೋಭಾವವನ್ನೇ ಮೆರೆಯುತ್ತಾನೆ. ಹೀಗೆ ಲೇಖಕರು ಲೈಂಗಿಕ ಸಂಬಂಧಗಳಲ್ಲಿ ಜಾತಿಯ ಮಡಿವಂತಿಕೆಯನ್ನು ದಾಟಿ ಅನಿವಾರ್ಯವಾಗಿ ಸಹಜವಾಗಿರುವುದನ್ನು ಕಾದಂಬರಿಗಳಲ್ಲಿ ವಿವರವಾಗಿ ಗುರುತಿಸುತ್ತಾರೆ. ಆದರೆ ಅದನ್ನೇ ದಲಿತನೊಬ್ಬನು ಮಾಡಿದಾಗ ಇಲ್ಲಿನ ಊಳಿಗಮಾನ್ಯ ವ್ಯವಸ್ಥೆಯು ಪ್ರಕರಣವನ್ನು ಪಂಚಾಯ್ತಿಗೆ ತಂದು ದಂಡ ವಿಧಿಸಲೇಬೇಕೆಂಬ ಒತ್ತಾಯ ತರುತ್ತದೆ. ಇಲ್ಲದಿದ್ದರೆ ಪ್ರಸಿದ್ಧವಾದ ಕೊಪ್ಪಲ ಪ್ರತಿಷ್ಠೆಗೆ ಧಕ್ಕೆ ಬರುತ್ತದೆ ಎಂದು ಭಾವಿಸುತ್ತದೆ. ಪಂಚಾಯ್ತಿ ಹೇಗೆ ನಡೆಯುತ್ತದೆ. ಎಂದರೆ ಗುಡಿ ಅಯ್ನೋರು, ಸೀತಾರಾಮಯ್ಯನವರು ಚಂದ್ರೇಗೌಡ ಇವರೆಲ್ಲ ನ್ಯಾಯಕಟ್ಟೆಯ ಮೇಲೆ ಕೂರುವವರು. ಉಳಿದವರೆಲ್ಲ ಕೆಳಗೆ ಕುಕ್ಕರುಗಾಲಿನಲ್ಲೇ ಕಲ್ಲು ಮೇಲೆ ಕೂರುತ್ತಾರೆ. ಪಂಚಾಯ್ತಿಗೆ ಹೊಸೂರ ಶಿವಗಂಗ ಕೂಡ ಬಂದಿರುವುದು ಚಂದ್ರೇಗೌಡನಿಗೆ 'ನಮ್ಮೂರ ಉಳುಕು ಬೇರೆ ಊರಿಗೆ ಗೊತ್ತಾಗುತ್ತದಲ್ಲ' ಎಂಬ ಆತಂಕಕ್ಕೆ ಕಾರಣವಾಗುತ್ತದೆ. ದುರಂತ ಎಂದರೆ ಇಡೀ ಪಂಚಾಯ್ತಿಯ ಮುಂದೆ ದೇವಿಯ ಗಂಡನಾದ ಗಡಿಗೆಸುಬ್ಬ ತನ್ನ ಹೆಂಡತಿಯ ಅಕ್ರಮ ಸಂಬಂಧವನ್ನು ಕುರಿತು ತಾನೆ ರಸವತ್ತಾಗಿ ಅಲ್ಲಿ ಸೇರಿಸುವ ಎಲ್ಲರಿಗೂ ಸಂತೋಷವಾಗುವಂತೆ ಹೇಳಬೇಕು.

ಲೇಖಕರು ಕಿಟ್ಟಿಯ ಮೂಲಕ ಮಾನವೀಯ ಸಂಬಂಧಗಳನ್ನು ಹೇಗೆ ಗುರುತಿಸುತ್ತಾರೆಂದರೆ ಕಿಟ್ಟಿಯು ದೇವಿ ಎಷ್ಟು ಚೆನ್ನಾಗಿ ಹಾಡುತ್ತಾಳೆ, ಬಾಯಿ ತುಂಬಾ 'ಕಿಟ್ಟಪ್ಪರೇ' ಎನ್ನುತ್ತಾಳೆ. 'ಪಾಪ ಅತ್ತೆ ಬಂದಿದ್ದರೆ ದೇವಿಗೆ ಹೊಡೆಯುವುದನ್ನು ತಪ್ಪಿಸಬಹುದಿತ್ತೇನೋ' ಎಂದು ಮನಸ್ಸಿನಲ್ಲೇ ಅಂದುಕೊಳ್ಳುತ್ತಾನೆ. ಭೂಮಿ ಮತ್ತು ಹೆಣ್ಣಿನ ಸಂಬಂಧದಲ್ಲಿ ಆರಂಭವಾಗುವ ಮಾತ್ಸರ್ಯ ದ್ವೇಷ ಅಂತಿಮವಾಗಿ ಎಂತಹ ನೀಚ ಪ್ರವೃತ್ತಿಗೆ ಎಳೆದೊಯ್ಯುತ್ತವೆ ಎಂಬುದನ್ನು ಲೇಖಕರು ಈ ಬಗೆಯ ದುರಂತ ಚಿತ್ರಗಳ ಮೂಲಕ ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ. ಅಮಾಯಕಳಾದ ಕಮಲಮ್ಮ ಇಡೀ ಜೀವನದಲ್ಲಿ ಅತೃಪ್ತಿಯಿಂದ ನೊಂದು ಕೊನೆಗೆ ಗಂಡನ ನಿರ್ಲಕ್ಷ್ಯ ಮತ್ತು ಅಹಂಕಾರಗಳಿಂದಾಗಿ ಎದುರಾಳಿಗಳ ಅತ್ಯಾಚಾರಕ್ಕೆ

ಒಳಗಾದದ್ದು ದುರಂತಮಯವಾಗಿದೆ. ಚಂದ್ರೇಗೌಡ ಕೋಟೆಯಿಂದ ಬಂದವನೆ ಪರಿಸ್ಥಿತಿಯನ್ನು ಅರಿತುಕೊಂಡು ಭಗಭಗನೆ ಉರಿಯುತ್ತಾನೆ. ಅಪಮಾನ, ಹಿಂಸೆ, ರೋಷ, ಕೋಪ, ತಾಪಗಳಿಂದ ಉಕ್ಕುತ್ತಿದ್ದ ಆತ ಒಮ್ಮೆಲೇ 'ಕಮಲೀ' ಎಂದು ಕೂಗಿದರು. ಅದರ ಮೂಲಕವೇ ತನ್ನೆಲ್ಲ ಯಾತನೆಯನ್ನು ಪ್ರಕಟಿಸುವುದನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

"ಇದ್ದಕ್ಕಿದ್ದ ಹಾಗೆ ಅತ್ತೆ ಜೋರಾಗಿ ನರಳಿ ಥಟ್ಟನೆ ನರಳುವುದನ್ನು ನಿಲ್ಲಿಸಿಬಿಟ್ಟರು. ಇನ್ನೊಮ್ಮೆ ಹಟ್ಟಿಯನ್ನೇ ಎತ್ತೆಸೆದು ಬಿಟ್ಟಂಥ ಗೋಳಾಟ ಬೆಳಗಾದರೂ ಕಿಟ್ಟಿಯ ಕಣ್ಣಿಗಿಳಿದಿದ್ದ ರಾಕ್ಷಸಲೋಕ ಕರಗಲಿಲ್ಲ. ಇನ್ನೂ ನಡುಗುತ್ತಲೇ ಇದ್ದ. ಬೇಡವಾಗಿದ್ದ ತನ್ನ ಊರು ಈಗ ಬೇಕೆನಿಸಿತು. ಅವ್ವ, ಅಜ್ಜಿ, ಸುಶಿ, ಚಿಕ್ಕಪ್ಪರ ಮುಖಗಳು ಮುಂದೆ ಬಂದವು. ಈ ರಾಕ್ಷಸಲೋಕದಿಂದ ಈ ಕ್ಷಣದಲ್ಲೇ ಪಾರಾಗಿಬಿಡುವ ಅವಸರದಿಂದ ಅವರು ಬರುವ ದಾರಿಯತ್ತಲೇ ಕಣ್ಣು ನೆಟ್ಟಿಸಿ ಕೂತ"[೨೫] ಲೇಖಕರು ಮಾನವನಲ್ಲಡಗಿರುವ ಪಶುತ್ವವನ್ನು ಕ್ರೌರ್ಯವನ್ನು, ಕಾಮವನ್ನು ದಬ್ಬಾಳಿಕೆಯ ಮನೋವೃತ್ತಿಯನ್ನು ಮುಗ್ಧ ಬಾಲಕನ ಮೂಲಕ ಅತ್ಯಂತ ಪರಿಣಾಮಕಾರಿಯಾಗಿ ಎಲ್ಲ ಸಂಕೀರ್ಣತೆಗಳೊಂದಿಗೆ ಕಟ್ಟಿಕೊಡುತ್ತಾರೆ. ಈ ದೃಷ್ಟಿಯಿಂದ ಶ್ರೀಕೃಷ್ಣ ಅಲನಹಳ್ಳಿಯವರು ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ವಿಶಿಷ್ಟವಾದ ಸ್ಥಾನವನ್ನು ಗಳಿಸಿದ್ದಾರೆ.

ಶ್ರೀ ಕೃಷ್ಣ ಆಲನಹಳ್ಳಿ ಅವರ ಎರಡನೇ ಕಾದಂಬರಿ 'ಪರಸಂಗದ ಗೆಂಡೆತಿಮ್ಮ' ಸಾಕಷ್ಟು ಜನಪ್ರಿಯತೆಯನ್ನು ಗಳಿಸಿದೆ. ಜನಪ್ರಿಯ ಕೃತಿಗಳೆಲ್ಲವೂ ಶ್ರೇಷ್ಠವಾಗದಿದ್ದರೂ ಜನಪ್ರಿಯತೆಯು ಲೇಖಕನ ದೋಷ ಎಂದು ಪರಿಗಣಿತವಾಗುತ್ತಿದ್ದ ಕಾಲದಲ್ಲಿ ಜನಪ್ರಿಯತೆ ಎಂಬುದು ಸತ್ವಶಾಲಿ ಲೇಖಕನ ಗುಣವೂ ಆಗಬಹುದು ಎಂಬುದನ್ನು ಸಾಧಿಸಿದ ವಿರಳ ಕಾದಂಬರಿಕಾರರ ಸಾಲಿಗೆ ಆಲನಹಳ್ಳಿ ನಿಸ್ಸಂದೇಹವಾಗಿ ಸೇರುತ್ತಾರೆ. 'ಪರಸಂಗದ ಗೆಂಡೆತಿಮ್ಮ' ಕಾದಂಬರಿಯು ಇವರ ಇನ್ನಿತರ ಕಾದಂಬರಿಗಳಂತೆಯೇ ಮುಗ್ಧ ಗ್ರಾಮೀಣರ ಬದುಕನ್ನೇ ವಸ್ತುವನ್ನಾಗಿ ಒಳಗೊಂಡಿದೆ. ಜೊತೆಗೆ 'ಕಾಡು'ವಿಗಿಂತ ತೀರ ಭಿನ್ನವಾದ ಕಾದಂಬರಿಯಾಗಿದೆ. ಕಾದಂಬರಿಗೆ ಹೆಸರು ಕೊಟ್ಟವನು ಗೆಂಡೆತಿಮ್ಮನಾದರೂ ಅವನು ಮದುವೆಯಾದ ಹೆಣ್ಣು ಮರಂಕಿಯೇ ಅದರ ಕೇಂದ್ರದಲ್ಲಿದ್ದಾಳೆ. ಕಾದಂಬರಿಯ ದ್ವಿಮುಖ ವಸ್ತುವಾದ ಕಾದಂಬರಿಯ ಆಧುನೀಕರಣ ಹಾಗೂ ಲೈಂಗಿಕತೆಯನ್ನು ಪ್ರತಿನಿಧಿಸುವವಳು ಅವಳೇ. ಕಾಡುವಿನಲ್ಲಿ ಹೆಣ್ಣು ನಿಷ್ಕ್ರಿಯವಸ್ತು. ಆದರೆ ಇಲ್ಲಿ ಅವಳೊಬ್ಬ ಕ್ರಿಯಾಶೀಲ ವ್ಯಕ್ತಿ ಒಂದು ಪಾತಳಿಯ ಮೇಲೆ ಈ ಕಾದಂಬರಿಯನ್ನು ನಗರ ಹಾಗೂ ಅದರ ಮೌಲ್ಯಗಳು ಸಂಪ್ರದಾಯಬದ್ಧವಾದ ಹಾಗೂ ವರ್ಗದಿಂದ ದೂರ ಇರುವ ಹಳ್ಳಿಯನ್ನು ಪ್ರವೇಶಿಸಿ ಅದರ ನಿವಾಸಿಗಳನ್ನು ಆಧುನೀಕರಣದ ಕ್ರಿಯೆಗೆ ಒಳಪಡಿಸುವ ಕಥನವೆಂದು ಓದಬಹುದು. ಇನ್ನೊಂದು ಪಾತಳಿಯ ಮೇಲೆ ಅದು ಸ್ತ್ರೀ ಲೈಂಗಿಕತೆಯ ಶೋಧ ಹಾಗೂ

೨೫. ಶ್ರೀ ಕೃಷ್ಣ ಅಲನಹಳ್ಳಿ, 'ಕಾಡು', ೧೯೮೭, ಪು. ೯೭.

ಅದು ಗಂಡು ಹೆಣ್ಣುಗಳೆನ್ನದೆ ಎಲ್ಲಾ ಭಯಕ್ಕೆ ಕಾರಣವಾಗುವುದರ ಕಥನವೆಂದೂ ಓದಬಹುದು. 'ಚಿನುವಾ ಅಚಿಬೆ'ಯವರ 'Things fall apart' ಕಾದಂಬರಿಯಲ್ಲಿದ್ದಂತೆ ಆಲನಹಳ್ಳಿಯವರು ಆಧುನೀಕತೆಯನ್ನು ಪರಿಶೀಲಿಸುವ ದೃಷ್ಟಿಯಲ್ಲಿ ಸಂದಿಗ್ಧತೆಯಿದೆ.

ಕಾದಂಬರಿಯಲ್ಲಿ ಉಳಿಮಾವಿನವನಾದ ಶಿಕ್ಷಕ ಶಿವಣ್ಣನೊಡನೆ ಮರಂಕಿಯ ಲೈಂಗಿಕ ಸಂಬಂಧ ಬೆಳೆಯುವುದು ಏನೋ ಸಾಧಾರಣ ಎಂಬಂತೆ ಈ ಸಂಬಂಧದ ಬಗ್ಗೆ ಅವಳಲ್ಲಿ ಯಾವ ಅಪರಾಧ ಭಾವನೆಯೂ ಇರುವುದಿಲ್ಲ. ಉಚ್ಚಜಾತಿಯವನೊಬ್ಬನು ತನ್ನ ಪ್ರೇಮಿಯಾಗಿರುವುದು ಅವಳಿಗೆ ಗರ್ವದ ವಿಷಯವೇ. ಮದುವೆಯ ಮೊದಲೇ ಅವಳಿಗೆ ಮಹದೇವಪ್ಪನೊಡನೆ ಸಂಬಂಧವಿತ್ತು. ಈ ಸಂಬಂಧಗಳ ಸುದ್ದಿ ಗೆಂಡೆತಿಮ್ಮನಿಗೆ ಬಂದರೂ ಅವನು ಮನೆಗೆ ಮರಳಿದಾಗ ಮರಂಕಿ ಶಿವಣ್ಣನೊಡನೆ ತನ್ನ ಮನೆಯಲ್ಲಿಯೇ ಇರುವುದನ್ನು ನೋಡಿದಾಗ ಅವನಿಗೆ ಸತ್ಯದ ಮನವರಿಕೆಯಾಗುತ್ತದೆ. ಗೌವ್ವಳ್ಳಿಯ ಪಂಚಾಯಿತಿಯಿಂದ ಆದ ಅವಮಾನದ ಹಿಂದೆಯೇ ಬಂದ ಈ ಅನುಭವದಿಂದ ಹತಾಶನಾಗಿ ಅವನು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಈ ಘಟನೆಯಿಂದ ತತ್ತರಿಸಿದ ಮರಂಕಿಯೂ ಆತ್ಮಹತ್ಯೆಗೆ ಶರಣಾಗುತ್ತಾಳೆ. ಕಾದಂಬರಿಯಲ್ಲಿ ಆಲನಹಳ್ಳಿಯವರು ತಟಸ್ಥ ನೈತಿಕ ಧೋರಣೆಯನ್ನು ತೋರಿಸುವುದು ಅವರ ಒಂದು ವೈಶಿಷ್ಟ್ಯವಾಗಿದೆ.

ಗೆಂಡೆತಿಮ್ಮನನ್ನು ಆ ಊರಿನ ಜನ ರೇಗಿಸುತ್ತಿದ್ದರು. ಆ ರೇಗಿಸುವ ರೀತಿಯನ್ನು ಕಂಡ ಗೆಂಡೆತಿಮ್ಮ ತನ್ನೊಳಗೆ ಕೊರಗುತ್ತಿದ್ದನು. "ಮಾರಿಗುಡಿಯ ಹಂತಗಳನ್ನು ಇಳಿದು ಹೊರಟಾಗ ಇಲ್ಲಿಗೆ ಯಾಕಾದರೂ ಬಂದೆ ಅನ್ನಿಸಿತು. ಮನಸ್ಸು ಇನ್ನೂ ಭಾರವಾಗಿತ್ತು. ತನ್ನ ಜೊತೆಯವರು ತಮಾಷೆಯ ಮಾತುಗಳ ನಡುವೆ ಮನಸ್ಸನ್ನು ಗೀರುವ ಮಾತುಗಳನ್ನು ಆಡಿದ್ದರು. ಗೆಂಡೆತಿಮ್ಮನಿಗೆ ಅವರ ಬಾಯಿಂದ ತನ್ನ ಹೆಂಡತಿಯನ್ನು ಕುರಿತು ಹೊರಬಿದ್ದ ಮಾತುಗಳು ತುಂಬಾ ನೋವನ್ನು ನಾಚಿಕೆಯನ್ನು ಉಂಟು ಮಾಡಿದ್ದವು. ಬೆಟ್ಟನ ಹೊಲಸು ಬಾಯಿ ಮರಂಕಿಯ ಮೊಲೆಗಳು ಗಡಿಗೆ ಮೊಲೆಗಳು ಎಂದಾಗ ಮತ್ತೆ ಇನ್ನೂ.... ಇನ್ನೂ.... ಅದೆಲ್ಲ ನೆನಪಾಗಿ ಗೆಂಡೆತಿಮ್ಮ ಕ್ಯಾಕರಿಸಿ ಉಗಿದ".[೨೬]

ಆಲನಹಳ್ಳಿಯವರು ಬದುಕಿನ ಅತೀ ಸೂಕ್ಷ್ಮ ಸಂವೇದನೆಗಳನ್ನು ಸ್ತ್ರೀ ಪಾತ್ರಗಳ ಮೂಲಕ ಆ ಪಾತ್ರಗಳ ನಾಡಿಮಿಡಿತವನ್ನು ಹಿಡಿಯುತ್ತಾರೆ. ಮರಂಕಿಯ ಸ್ಥಾನವನ್ನು ಅತ್ಯಂತ ಬೌದ್ಧಿಕವಾಗಿ ಚಿತ್ರಿಸುತ್ತಾರೆ. ಇದೊಂದು ಸಾಂಸ್ಕೃತಿಕ ಬದುಕಿನ ಅನನ್ಯತೆಯೆಂದೆ ಗುರುತಿಸಬಹುದು. ಏಕೆಂದರೆ ಹಳ್ಳಿಯ ಮುಗ್ಧ ಪರಿಸರದಲ್ಲಿ ಉಂಟಾಗುವ ಒಂದು

೨೬. ಶ್ರೀಕೃಷ್ಣ ಆಲನಹಳ್ಳಿ, 'ಪರಸಂಗದ ಗೆಂಡೆತಿಮ್ಮ', ಪುಟ. ೩೩, ೨೦೧೬.

ಸ್ಥಿರತೆಯನ್ನು ಸಾವಧಾನವನ್ನು ತರಲು ಪ್ರಯತ್ನಿಸುತ್ತಾರೆ. ಆದರೆ ಒಬ್ಬ ವ್ಯಕ್ತಿ ತನ್ನ ಬದುಕನ್ನು ಸ್ವೀಕರಿಸುವಾಗ ಅದನ್ನು ಅದೇ ಆಕಾರದಲ್ಲಿ ಇರಿಸದೇ ತನ್ನ ಅಭಿರುಚಿಗೆ ಅನುಗುಣವಾಗಿ ಪರಿವರ್ತಿಸಿಕೊಳ್ಳಲು ಹೇಗೆ ಹೆಣಗುತ್ತಾನೆ ಎಂಬುದನ್ನು ಆಲನಹಳ್ಳಿ ತಮ್ಮ ಬರಹದಲ್ಲಿ ತರುತ್ತಾರೆ. ಅದು ಆ ವ್ಯಕ್ತಿಯ ಬದುಕಿನ ಎಲ್ಲಾ ಪೂರೈಕೆಗಳು. ಮರಂಕಿ ತನಗೆ ಅನಿಸಿದ ರೀತಿಯಲ್ಲಿ ಬದುಕಲು ಗಂಡನ ಅವಿಭಕ್ತ ಕುಟುಂಬದಲ್ಲಿ ಸಾಧ್ಯವಿಲ್ಲದಿರುವುದರಿಂದ, ಪಾಲು ಮಾಡಿಕೊಳ್ಳುವ ವಿಷಯದಲ್ಲಿ ಗಂಡನನ್ನು ಒತ್ತಾಯಿಸಿ ಆತನ ಮಾನಸಿಕ ಖಿನ್ನತೆಗೂ ಕಾರಣಳಾಗುತ್ತಾಳೆ. ಆಕೆಯ ಮಾದಕತೆಯ ಮೋಡಿಗೆ ಒಳಗಾಗಿ ಬಿಟ್ಟಿರಲಾರದ ಸ್ಥಿತಿಯಲ್ಲಿರುವ ಗೆಂಡೆತಿಮ್ಮ ಬಲವಂತವಾಗಿ ಪಾಲು ತೆಗೆದುಕೊಳ್ಳುತ್ತಾನೆ. ಕೌಟುಂಬಿಕ ಗ್ರಹಿಕೆಗಳು ಭಿನ್ನವಾಗುವ ಸಂದರ್ಭದಲ್ಲಿ ಅವರವರ ಬದುಕಿಗೆ ಯಜಮಾನರಾಗುವ ನಿರೀಕ್ಷೆ ಒಳ ಒತ್ತಡದ್ದಾದಾಗ ಈ ರೀತಿ ಪ್ರತ್ಯೇಕವಾಗುವುದು ಅನಿವಾರ್ಯವಾಗುತ್ತದೆ. ಅವಿಭಕ್ತ ಕುಟುಂಬದ ರೇಜಿಗೆಗಳಿಂದ ಮುಕ್ತಳಾಗುವ ಮರಂಕಿಯಲ್ಲಿ ಸಹಜವಾಗಿ ಲವಲವಿಕೆ ಮೂಡುತ್ತದೆ. ಮನೆಯನ್ನು ತನ್ನ ಅಭಿರುಚಿಗೆ ತಕ್ಕನಾಗಿ ರಚಿಸುವ, ಗಂಡನ ಸ್ವಭಾವವನ್ನು ತನಗೆ ಪ್ರಿಯವಾಗುವ ಹಾಗೆ ಬದಲಾಯಿಸುವ ಜೀವನವನ್ನು ಆಧುನಿಕತೆಯ ಸೌಲಭ್ಯಗಳಲ್ಲಿ ಕೇಂದ್ರೀಕರಿಸಿಕೊಳ್ಳುವ ಅವಸರವನ್ನು ತೋರೆಯುತ್ತಾಳೆ. ಈ ಬದಲಾವಣೆಗೆ ಗೆಂಡೆತಿಮ್ಮ ಬೆರಗಿನಮಟ್ಟದಲ್ಲಿ ಮಾತ್ರವೇ ಪ್ರತಿಕ್ರಿಯಿಸಿದ್ದಾನೆ ಅನಿಸುತ್ತದೆ. ಮೇಲುನೋಟಕ್ಕೆ ಆತ ಒಪ್ಪಿಕೊಂಡಂತೆ ಕಂಡರೂ ಕೆಲವೊಮ್ಮೆ ಈ ಬಿರುಸಿಗೆ ಸಿಲುಕಿ ಏನನ್ನೋ ಕಳೆದುಕೊಳ್ಳುತ್ತಿದ್ದೇನೆ ಎಂಬ ಆತಂಕ. ಇದು ಇಲ್ಲಿಗೆ ಕರೆದೊಯ್ಯಬಹುದು ಎಂಬ ತಲ್ಲಣ ಇದೆ. ಅದು ಎದುರಿಸುವ ಆವರಣವನ್ನು ಅಸಡ್ಡೆಯಿಂದ ಕಾಣುತ್ತ ಆಕ್ರಮಣದ ರೂಪದಲ್ಲಿ ಧಾವಿಸುತ್ತಿದೆ. ಮರಂಕಿ ತನ್ನ ಶಕ್ತಿಯನ್ನು ಮೀರಿ ಅದನ್ನು ಸ್ವಾಗತಿಸುವ ಪ್ರಯತ್ನ ಮಾಡುತ್ತಿದ್ದಾಳೆ. ಅವಳ ದುರಂತ ಈ ಸಂದರ್ಭದಲ್ಲಿದೆ ಅನಿಸುತ್ತದೆ. ಸಾಂದರ್ಭಿಕವಾಗಿ ಸಂಸ್ಕೃತಿ ರೂಪಿಸುವ ಘಟಕವು ಒಂದು ಸ್ಥಿರತೆಯನ್ನು ಸಾವಧಾನವನ್ನು ತರಲು ಪ್ರಯತ್ನಿಸುತ್ತದೆ. ಆದರೆ ವ್ಯಕ್ತಿ ತನ್ನ ಬದುಕಿಗೆ ಸ್ವೀಕರಿಸುವಾಗ ಅದನ್ನು ಅದೇ ಆಕಾರದಲ್ಲಿ ಇರಿಸದೇ ತನ್ನ ಅಭಿರುಚಿಗೆ ಅನುಗುಣವಾಗಿ ಪರಿವರ್ತಿಸಿಕೊಳ್ಳುತ್ತಾನೆ. ಈ ಘಟ್ಟದಲ್ಲಿ ಸಾಂಸ್ಕೃತಿಕ ಅನಿವಾರ್ಯತೆಯು ವೈಯಕ್ತಿಕ ಅನಿವಾರ್ಯತೆಯಾಗುತ್ತದೆ. ವ್ಯಕ್ತಿ ತನ್ನದೇ ಆಶಯದ ಘಟಕಗಳನ್ನು ಸೃಷ್ಟಿಸಿಕೊಳ್ಳಲು ಇಚ್ಛಿಸುತ್ತಾನೆ. ಈ ಹಿನ್ನೆಲೆಯಲ್ಲಿ ಮರಂಕಿ ಶಿವಣ್ಣನನ್ನು ಕೇವಲ ಗಂಡು ಮಾತ್ರವಾಗಿಯಲ್ಲದೆ ಆಧುನಿಕತೆಯನ್ನು ಮೈಗೂಡಿಸಿಕೊಳ್ಳುತ್ತಿರುವವನು ಆಗಿರುವುದರಿಂದ ಮತ್ತು ಗಂಡನಿಗೆ ಹೋಲಿಸಿದರೆ ಆ ವಿಷಯದಲ್ಲಿ ಈತ ಮುಂದುವರಿದವನಾದ್ದರಿಂದ ಲೈಂಗಿಕವಾಗಿ ಸ್ವೀಕರಿಸುವ ಬಯಕೆಯುಂಟಾಗುತ್ತದೆ. ನಂಜನಗೂಡಿನ ಮಾವನಮಗ ಮಾದೇವ ಮತ್ತು ಶಿವಣ್ಣ ಇವರನ್ನು ಗಂಡನಿಗಿಂತ ಲೈಂಗಿಕ ಚಟುವಟಿಕೆಯಲ್ಲಿ ಹೆಚ್ಚು ಪ್ರೀತಿಸುತ್ತಾಳೆ. ಆತ್ಮೀಯವಾಗಿ ತೆರೆದುಕೊಳ್ಳುತ್ತಾಳೆ. ಅಲ್ಲಿನ ಒರಟು ಮತ್ತು ಆಕ್ರಮಣ ಸ್ವಭಾವ ಅವಳಿಗೆ ಪ್ರಿಯವಾಗುತ್ತದೆ. ತನ್ನನ್ನು ಕೂಡುವ ಸಂದರ್ಭದಲ್ಲಿ ಗಂಡ ಒಳ ಉಡುಪುಗಳಿಗೆ ಬೆರಗಾಗಿ ಅವಸರದಲ್ಲಿ

ಉದ್ರೇಕವನ್ನು ಕಳೆದುಕೊಂಡು ಬಿಡುತ್ತಿದ್ದುದು ಸದಾ ಉಕ್ಕುವ ಮರಂಕಿಗೆ ಬೇಸರವಾಗಿದೆ ಮತ್ತು ಅಪಹಾಸ್ಯದ ನಗೆಗೆ ಗುರಿಯಾಗುತ್ತದೆ. ಆದರೆ ಮಾನವೀಯವಾಗಿ ಸ್ಪಂದಿಸುವ ಶಕ್ತಿ ಮಾದೇವ, ಶಿವಣ್ಣ ಇವರಿಗಿಂತ ಗೆಂಡೆತಿಮ್ಮನಲ್ಲಿ ಅಪಾರವಾಗಿತ್ತು ಎಂಬುದನ್ನು ಆಕೆ ಗುರುತಿಸಿಕೊಳ್ಳದೇ ಹೋದದ್ದು ಒಂದು ದೊಡ್ಡ ದುರಂತವೇ ಸರಿ.

ಆಕೆಯ ಆಧುನಿಕ ಕಲ್ಪನೆಗೆ ವಿವಾಹೇತರ ಸಂಬಂಧ ಗಂಡನಿಗೆ ಮೋಸ ಮಾಡಿದಂತಾಗಬಹುದೇ ಎಂಬುದು ಅಷ್ಟೂ ತೀವ್ರವಾಗಿ ಕಾಡುತ್ತಿಲ್ಲ. ಈ ಬಗೆಯ ಸಂಬಂಧ ಗಂಡನಿಗೆ ತಿಳಿಯದ ಹಾಗೆ ಮುಂದುವರಿಯಲಿ ಎಂಬುದಕ್ಕೆ ಒತ್ತುಕೊಟ್ಟಿದ್ದಾಳೆ. ಆದರೆ ಅನಿರೀಕ್ಷಿತವಾಗಿ ತನ್ನ ಗುಟ್ಟು ಸ್ಫೋಟಗೊಂಡಾಗ ಗಂಡನನ್ನು ಇದಿರಿಸುವ ಶಕ್ತಿಯನ್ನು ಕಳೆದುಕೊಳ್ಳುತ್ತಾಳೆ. ಹೆಣ್ಣು-ಗಂಡು ಪರಸ್ಪರ ಒಪ್ಪಿಗೆಯಲ್ಲಿ ಕೂಡಿ ಬದುಕುವಾಗ ವ್ಯಕ್ತಿಯ ಆಶಯಗಳು ಇನ್ನೊಂದು ಸ್ಥಿತಿಯಲ್ಲಿ ಪೂರಕವಾಗಿದ್ದಾಗ ತನಗೆ ಆ ಬಗೆಯ ಆಶಯ ಇಲ್ಲದಿದ್ದಾಗಲೂ ಒಳಗಾಗುತ್ತಿರುವ ಸಂಧಿಕಾಲದಲ್ಲಿ ಈ ಪ್ರಕ್ರಿಯೆ ಬಹಳ ಅಪರೂಪವಾದುದು. ಇನ್ನೂ ಪುರುಷಪ್ರಧಾನ ಗ್ರಹಿಕೆಗಳು ಉಳಿದುಕೊಂಡಿರುವ ಸಂದರ್ಭದಲ್ಲಿ ಈ ಹಿನ್ನೆಲೆಯಲ್ಲಿ ಹೆಣ್ಣಿನ ಚಲನೆ ಅಸಾಧ್ಯವಾಗುತ್ತದೆ ಅಥವಾ ದುರಂತವಾಗುತ್ತದೆ. ಈ ಬಗೆಯ ಬದುಕಿಗೊಲಿಯುವ ತಾತ್ವಿಕ ಬದ್ಧತೆಯ ಸಾಮರ್ಥ್ಯ ಮರಂಕಿಯಲ್ಲೂ ಇಲ್ಲ. ಗೆಂಡೆತಿಮ್ಮನಲ್ಲಿಯೂ ಇಲ್ಲ. ನಿರ್ಧಾರಕ ಪಾತ್ರವಾಗಿರುವ ಗೆಂಡೆತಿಮ್ಮ ಘಟನೆಯ ಭಾವಸ್ತರದಲ್ಲಿ ಸ್ಪಂದಿಸುವುದರಿಂದ ಮರಂಕಿಯ ನಡೆಯನ್ನು ಸಹಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆಧುನಿಕತೆಯ ಮೋಹವು ಯಥೇಚ್ಛವಾಗಿರುವ ಮರಂಕಿ ಪರಂಪರೆಯ ಬಂಧನದಲ್ಲಿಯೂ ಇರುವುದರಿಂದ ಅವಳ ತೀರ್ಮಾನ ಗಂಡನ ಪರವಾಗುತ್ತದೆ. ಯಾಕೆಂದರೆ ಮೋಹವು ಅಂತಿಮಘಟ್ಟವನ್ನು ಎದುರಿಸುವಾಗ ಪಲಾಯನವಾಗುತ್ತದೆ. ತಾನು ಇರುವ ಸ್ಥಿತಿಯು ಆಕೆಯ ಸುಪ್ತ ಆಶಯಕ್ಕೆ ಬದ್ಧವಾಗಿದೆಯಾದರೂ ಕೌಟುಂಬಿಕ ಆವರಣವು ಅದನ್ನು ಸ್ವಾಗತಿಸುವುದಿಲ್ಲ. ಕೌಟುಂಬಿಕ ಆವರಣವು ಕೊಟ್ಟಿರುವ ಭದ್ರತೆಯ ಹಿನ್ನೆಲೆಯಲ್ಲಿ ಅವಳ ಆ ವಿಘಟನೆ ಬೇರುಬಿಟ್ಟಿದೆ. ಅದು ಈಗ ತನ್ನನ್ನು ತೋರುತ್ತಿರುವ ಲಕ್ಷಣ ತೋರಿರುವುದರಿಂದ ಮರಂಕಿಯ ಪ್ರಜ್ಞೆ ಮತ್ತೆ ಪರಂಪರೆಯ ಮತ್ತು ಆಧುನಿಕತೆಯ ಸಂಘರ್ಷವನ್ನು ಆಲನಹಳ್ಳಿ ನಿಖರವಾಗಿ ಈ ಕೃತಿಯಲ್ಲಿ ತಿಳಿಸುತ್ತಾರೆ. ಇದು ಲೇಖಕರು ಕಂಡುಕೊಂಡಂತಹ ಅನುಭವ ಪರಿಪಾಕವೇ ಹಾಗಿದೆ.

ಗೆಂಡೆತಿಮ್ಮನ ಬದುಕಿನ ಚಾಳಿಯ ಪ್ರಭಾವದಲ್ಲಿ ತುಂಬಿಕೊಂಡಿರುವ ರೀತಿ ಆತನ ಬದುಕನ್ನು ತನ್ನ ಇರುವಿನ ಪ್ರತಿನಿಧಿಯಾಗಿ ಸ್ವೀಕರಿಸುವ ಹಾಗೆಯೇ ಅದು ಹೇಗೆ ಇರಬೇಕೆಂಬುದರ ಸಾಂಪ್ರದಾಯಿಕ ಚಿಂತನೆಯನ್ನು ಸ್ವೀಕರಿಸಿದ್ದಾನೆ. ಮರಂಕಿಗೆ ಪುರುಷನು ಆಧುನಿಕತೆಯ ಮೋಹವಾಗಿಯೋ ಲೈಂಗಿಕ ತೆವಲಾಗಿಯೋ ಕಂಡುಬರುತ್ತಾನೆ. ಆದರೆ ಗೆಂಡೆತಿಮ್ಮ ಹೆಣ್ಣನ್ನು ಅನ್ಯ ಪ್ರಭಾವದ ಕಕ್ಷೆಯಲ್ಲಿ ಒಪ್ಪಿಕೊಳ್ಳಲು ನಿರಾಕರಿಸುತ್ತಾನೆ. ಆಕೆಯ

ಬದುಕಿಗೆ ತೀರಾ ಅನಿವಾರ್ಯ ಅನಿಸದ ಆಕರಗಳನ್ನು ಕೊಡುವ ಸಂದರ್ಭದಲ್ಲಿ ಬೆರಗಿನಿಂದ ಸ್ಪಂದಿಸುತ್ತಾನೆ. ನಾವು ಬದುಕುತ್ತಿರುವ ರೀತಿಗೆ ಯಾವುದು ಅನಿವಾರ್ಯವಾಗಿರುವುದಿಲ್ಲವೋ ಹಾಗೂ ತೀರ ಹೊಸದು ಅನಿಸುತ್ತದೆಯೋ ಅದರ ಬಗೆಗೆ ಬೆರಗಿನಿಂದ ಪ್ರತಿಕ್ರಿಯಿಸುತ್ತೇವೆ. ಗೆಂಡೆತಿಮ್ಮನದು ಈ ರೀತಿಯ ಸ್ವಭಾವವಾಗಿದೆ. ಮರಂಕಿಯ ಒಳಉಡುಪುಗಳು ವಸ್ತುಸಾಮಗ್ರಿಗಳು ಸಾಂಸ್ಕೃತಿಕವಾಗಿ ಅನ್ಯ ನೆಲೆಯಿಂದ ಪ್ರವೇಶಿಸುತ್ತಿರುವುದು ಅವನ ಆತಂಕಕ್ಕೆ ಕಾರಣವಾಗಿದೆ. ಯಾಕೆಂದರೆ ಅವನ ಆವರಣ ಅಂಥದ್ದನ್ನು ಇನ್ನೂ ಸ್ವೀಕರಿಸಿಲ್ಲ. ತನ್ನ ಹೆಂಡತಿ ಮತ್ತು ತನ್ನ ಮೂಲಕ ಅದು ಚಾಲ್ತಿಗೆ ಬರುತ್ತಿರುವುದರಿಂದ ಅವನು ಸಾಮಾಜಿಕ ಪರಿಣಾಮದ ಬಗೆಗೆ ಯೋಚಿಸುತ್ತಾನೆ.

ವ್ಯಕ್ತಿಯ ಸಾಂಸ್ಕೃತಿಕವಾದಂಥ ನೀತಿನಿಯಮಗಳನ್ನು ಬದುಕಿನ ನಿರ್ಧಾರಕ ಕ್ಷಣಗಳಲ್ಲಿ ಹೇಗೆ ವರ್ತಿಸುತ್ತವೆ ಎಂಬುದರ ಬಗೆಗೆ ಖಚಿತವಾದ ಮಾತುಗಳನ್ನು ಹೇಳಲು ಸಾಧ್ಯವಾಗುವುದಿಲ್ಲ. ಯಾಕೆಂದರೆ ಅವು ಸಂದರ್ಭದ ಅನಿವಾರ್ಯತೆಯಲ್ಲಿ ಉದ್ಭವಿಸುತ್ತವೆ. ಆ ಸಂದರ್ಭವು ಹೇಗೆ ನೆಲೆಯೂರಲು ಪ್ರಯತ್ನಿಸುತ್ತಿವೆ ಎಂಬುದು ಅವನ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಗ್ರಹಿಕೆಗೆ ಒಳಪಡುತ್ತದೆ. ಹೀಗೆ ಸಂಭವಿಸುವ ಘಟಕಗಳನ್ನು ವ್ಯಕ್ತಿತ್ವದ ಬೆಳವಣಿಗೆಯೊಡನೆ ಏಕಕೇಂದ್ರದಲ್ಲಿ ಗುರುತಿಸುವ 'ಭುಜಂಗಯ್ಯನ ದಶಾವತಾರಗಳು' ವೈಯಕ್ತಿಕ ಪಾತಳಿಯಲ್ಲಿ ಸಮೂಹದ ಪ್ರಕ್ರಿಯೆಯನ್ನು ಹಿಡಿಯುವ ಪ್ರಯತ್ನಮಾಡಿದೆ. ಆಲನಹಳ್ಳಿಯವರ ಹಿಂದಿನ ಎರಡು ಕೃತಿಗಳಿಗಿಲ್ಲದ ಪೂರ್ಣ ಸಮೂಹದ ಕಲ್ಪನೆ ಇಲ್ಲಿ ಜೀವಂತವಾಗಿ ಮೂಡಿಬಂದಿದೆ. ಭುಜಂಗಯ್ಯನ ವೈಯಕ್ತಿಕ ಪಾತ್ರದಂತೆ ಈ ಸಮೂಹವೂ ಒಂದು ಪಾತ್ರವಾಗಿ ಧ್ವನಿಪಡೆಯುತ್ತದೆ. ಸೃಜನಶೀಲ ಸಂದರ್ಭದಲ್ಲಿ ಸಮೂಹ ಪಾತ್ರವಾಗುವುದು, ಪಾತ್ರಸಮೂಹ–ವಾಗುವುದು ಸಹಜ ಸಂಭವನೀಯವಾದುದರಿಂದ ಮತ್ತು ಒಂದು ಸ್ಥಿತ್ಯಂತರದ ಬೀಡು ಇಂಥ ಮುಖಾಮುಖಿಯ ಹಿನ್ನೆಲೆಯಲ್ಲಿ ಹೆಚ್ಚು ಸ್ವೀಕಾರ ಯೋಗ್ಯವಾದುದರಿಂದ ಅದು ಸಾಮಾಜಿಕ ಚಲನಶೀಲ ಆಶಯವಾಗಿ ದಾಖಲಾಗುತ್ತದೆ.

ಇದೊಂದು ಸಾಂಸ್ಕೃತಿಕ ಸಂಘರ್ಷದ ಪರಿಯೇ ಹಾಗಿದೆ. ವಿಭಿನ್ನ ಆಸಕ್ತಿಯ ವ್ಯಕ್ತಿತ್ವವನ್ನು ಪರಿಚಯಿಸುವುದಕ್ಕಾಗಿ ಹಲವು ಹಾಸ್ಯ ಪ್ರಸಂಗಗಳನ್ನು ದೀರ್ಘವಾಗಿಯೇ ತರುತ್ತಾರೆ. ಹಾಸ್ಯಪಾತ್ರವಾದ ಪುಂಡ್ರಿಯು ಇವನ ಆಪ್ತನಾಗಿದ್ದು ಇವನು ಊರಿನಲ್ಲಿ ನಡೆಯುವ ಎಲ್ಲ ಘಟನೆಗಳನ್ನು ಭುಜಂಗಯ್ಯನಿಗೆ ಹೋಟೆಲ್‌ನಲ್ಲಿ ರಾತ್ರಿ ಹೊತ್ತು ಹೇಳುತ್ತಾ ಹರಟೆ ಹೊಡೆಯುತ್ತಿರುತ್ತಾನೆ. ಅದರಲ್ಲೂ ಗಂಡು–ಹೆಣ್ಣುಗಳ ಸಂಬಂಧವಾದ ಲೈಂಗಿಕ ಪ್ರಸಂಗಗಳನ್ನು ಶ್ಯಾನುಭೋಗ, ಗುಂಡಪ್ಪನವರು ತಮಗೆ ಕಾಳಿ ಕೊಡುವ ಮೈಸುಖದ ಸಲುವಾಗಿ ಅವಳಿಗೆ ದರಖಾಸ್ತಿನಲ್ಲಿ ಜಮೀನು ಕೊಡಿಸುವುದು, ಮಂಚಯ್ಯನ ಹೆಂಡತಿಯನ್ನು ಪಿಲ್ಲಿ ಹಿಡಿದುಕೊಳ್ಳಲು

ಹೋಗಿ ಉಗಿಸಿಕೊಂಡು ಬಂದದ್ದು ಮುಂತಾದ ರೋಚಕ ಘಟನೆಗಳನ್ನು ಭುಜಂಗಯ್ಯನ ಮುಂದೆ ಹೇಳಿದಾಗ, ಭುಜಂಗಯ್ಯ ಬಿಗುಮಾನ ಬಿಟ್ಟು ಸಂತೋಷಪಡುತ್ತಾನೆ. ಐನೂರು ಪುಟಕ್ಕೂ ಮೀರಿರುವ ಈ ಕಾದಂಬರಿಯನ್ನು ಲೇಖಕರು ಒಂದು ಮಹಾಕಾದಂಬರಿಯನ್ನಾಗಿ ಮಾಡಬೇಕೆಂಬ ಹಂಬಲದಿಂದ ಈ ಬಗೆಯ ಹಲವಾರು ಚಿತ್ರಣಗಳನ್ನು ಕೊಡಲು ಪ್ರಯತ್ನಿಸುತ್ತಾರೆ.

ಭುಜಂಗಯ್ಯನು ದೊಡ್ಡಮಠದ ಸ್ವಾಮೀಜಿಯ ಸಖ್ಯವನ್ನು ಬೆಳೆಸುವುದರ ಜೊತೆಗೆ ಸಾಮಾನ್ಯರೊಡನೆಯೂ ಪ್ರೀತಿಯಿಂದ ಬೆರೆಯುವ ತನ್ನ ಸದ್ಗುಣದಿಂದಾಗಿ ಇಡೀ ಊರಿನ ಉಸಾಬರಿಯನ್ನೇ ಹೊತ್ತ ವ್ಯಕ್ತಿಯಾಗಿ ಕಂಡುಬರುತ್ತಾನೆ. ಹೀಗಾಗಿ ಬಳೆಶೆಟ್ಟರು, ತಂಬೂರಿ ಅಯ್ನೋರು ಮುಂತಾದ ಹೊರಗಿನವರು ಸಹ ಈತನಿಗೆ ಆತ್ಮೀಯರೇ ಆಗುತ್ತಾರೆ. ಈ ಬಗೆಯ ಆತ್ಮೀಯತೆಯ ಮೂಲಕವೇ ಕೊನೆಗೆ ಭುಜಂಗಯ್ಯ ಬಳೆಶೆಟ್ಟರ ಮಗಳು ಸುಶೀಲಳನ್ನು ಮದುವೆಯಾಗುವುದು ಆತನ ಬದುಕಿನ ಪ್ರಮುಖ ಘಟನೆಯಾಗುತ್ತದೆ. ತಮ್ಮ ಮೊದಲ ಹೆಂಡತಿ ತೀರಿಕೊಂಡ ನಂತರ ಬಳೆಶೆಟ್ಟರು ಎರಡನೆಯ ಮದುವೆಯನ್ನು ಮಾಡಿಕೊಳ್ಳುತ್ತಾರೆ. ತಬ್ಬಲಿಯಾದ ಸುಶೀಲೆಯು ಮಲತಾಯಿಯ ಕಾಟಗಳನ್ನು ತಡೆಯಲಾರದೆ ಮಳೆಗಾಳಿ, ಬಿಸಿಲು, ಬೇಸಿಗೆಯೆನ್ನದೆ ಹಳ್ಳಿಗಳ ಮೇಲೆ ಅಪ್ಪನ ಜೊತೆ ಬಳೆ ಮಾರಲು ಹೊರಡುತ್ತಾಳೆ. ಮೈಸೂರಿನಲ್ಲಿ ಹುಟ್ಟಿ ಬೆಳೆದ ಸುಂದರಿಯಾದ ಈಕೆಯು ಮಾದಳ್ಳಿಗೆ ತಂದೆಯೊಡನೆ ಬಂದಾಗ ಕರೀಗೌಡನ ಜಗುಲಿ ಮೇಲೆ ಉಳಿಯುತ್ತಿದ್ದಳು. ಬಸ್ಸು ಹತ್ತಲು ಹೋಟೆಲಿನ ಹತ್ತಿರ ಬರುತ್ತಿದ್ದಾಗ ಭುಜಂಗಯ್ಯನಿಗೆ ಸುಶೀಲಳ ಸೌಂದರ್ಯ ಮೋಡಿಹಾಕುತ್ತಿತ್ತು. ಈ ನಡುವೆ ಕಾಮುಕನಾದ ನಾರಾಯಣ ಸುಶೀಲಳ ಸೌಂದರ್ಯ, ಮೈಮಾಟಕ್ಕೆ ಮಾರುಹೋಗಿ ಅವರ ಜಗಲಿಯ ಮೇಲೆ ಸುಶೀಲ ಮಲಗಿದ್ದಾಗ ಬೋಗಿಸುವ ಸಾಹಸಕ್ಕೆ ಕೈಹಾಕಿ ವಿಫಲನಾಗಿರುತ್ತಾನೆ. ಈ ವಿಷಯವು ಭುಜಂಗಯ್ಯನಿಗೆ ತಿಳಿದಾಗ ನೊಂದುಕೊಂಡು ತಂಗುವ ಅನಿವಾರ್ಯವಿದ್ಧಾಗ ತನ್ನ ಹೊಟೇಲಿನಲ್ಲಿ ತಂಗಲು ತಿಳಿಸುತ್ತಾನೆ. ಇದು ಭುಜಂಗಯ್ಯನ ಹೃದಯವಂತಿಕೆಗೆ ಸಾಕ್ಷಿಯಾಗಿದೆ. ಭುಜಂಗಯ್ಯನ ಹೊಟೇಲಿನ ಇಸ್ಪೀಟಾಟದಲ್ಲಿ ಬಳೆಶೆಟ್ಟರು ಪಾಪರ್ ಆಗಿ ಒಳ್ಳೆಯ ವ್ಯಾಪಾರಕ್ಕೂ ಹಣವಿಲ್ಲದಂತಾಗುತ್ತದೆ. ಈ ಸ್ಥಿತಿಯಲ್ಲಿ ಭುಜಂಗಯ್ಯ ಸುಶೀಲಳಿಗೆ ಹಣದ ಸಹಾಯ ಮಾಡುತ್ತಾನೆ. ಹೀಗೆ ಶೆಟ್ಟರಿಗೆ ಆಪ್ತನಾಗಿದ್ದ ಭುಜಂಗಯ್ಯ ಮೈಸೂರಿನಲ್ಲಿ ಸುಶೀಲ ಮತ್ತು ಶೆಟ್ಟರೊಡನೆ ನಾಟಕ ನೋಡಲು ಹೋಗಿದ್ದಾಗ ಪಕ್ಕದಲ್ಲಿ ಕುಳಿತಿದ್ದ ಸುಶೀಲಳ ಮೇಲೆ ಕೈಹಾಕಿ ಇಬ್ಬರು ತಮಗರಿವಿಲ್ಲದಂತೆ ಸುಖವನ್ನು ಅನುಭವಿಸುತ್ತಾರೆ. ಹೊಟೇಲ್ ಮಂಜನ ಮೂಲಕ ಭುಜಂಗಯ್ಯನ ಪತ್ನಿ ಪಾರ್ವತಿಗೆ ವಿಷಯ ತಿಳಿದು ಆಕೆಯು ಗಂಡ ಮತ್ತು ಸುಶೀಲರ ಬಗ್ಗೆ ಸಾಕ್ಷಾತ್ ರಣಚಂಡಿಯೇ ಆಗುತ್ತಾಳೆ. ಭುಜಂಗಯ್ಯನ ಏಳಿಗೆಯನ್ನು ಕಂಡರೆ

ಸಹಿಸಲಾಗದ್ದವರಿಗಂತೂ ಈ ಪ್ರಕರಣ ಹೆಚ್ಚು ಸಂತೋಷವನ್ನು ನೀಡುತ್ತದೆ. ಇದೆಲ್ಲದರಿಂದ ಬೇಸತ್ತ ಪಾರ್ವತಿಯು ತನ್ನ ಗಂಡ ಮನೆಗೆಬಂದು ಊಟಕ್ಕೆ ಕುಳಿತಿದ್ದಾಗ 'ನಿಮ್ಗೇನು ಮಾನಮರ್‍ವಾದೆ ಇಲ್ವ? ಅವ್ಳು ಯಾವಳೋ ಗುಡಸೆಟ್ಟಿ ಜೊತೆ ಹೋಟ್ಲಲ್ಲಿ ಚಕ್ಕಂದ ಆಡೋಕೆ' ಎಂದು ಪ್ರತಿಭಟಿಸುವುದು ಸಹಜವಾಗಿ ಬಂದಿದೆ. ಭುಜಂಗಯ್ಯ ಕಾದಂಬರಿ ಸಾಗಿದಂತೆ ಕಣ್ಣು ಕಳೆದುಕೊಳ್ಳುತ್ತಾನೆ. ತಾನು ಕಣ್ಣು ಕಳೆದುಕೊಂಡಿರುವುದು ತಾನು ಮಾಡಿದ ಆ ಎಲ್ಲಾ ದುರಾಸೆಗಳ ಫಲದಿಂದಲೇ ಇರಬೇಕು ಎಂಬ ಜಿಜ್ಞಾಸೆಗೆ ಒಳಗಾಗುತ್ತಾನೆ. ಕಣ್ಣಿಲ್ಲದ ಗಂಡನೆಂದು ಸುಶೀಲಳು ಯಾವತ್ತೂ ತಾತ್ಸಾರದಿಂದ ನೋಡಿದವಳಲ್ಲ. ಹೃದಯಾಂತರಾಳದಿಂದ ಮಾಡಿದ ಪ್ರೀತಿಯಿಂದಲೇ ನೋಡಿಕೊಳ್ಳುತ್ತಾಳೆ. ಭುಜಂಗಯ್ಯನ ಬೇಕುಬೇಡಗಳನ್ನು ಸಹನೆಯಿಂದಲೇ ಅರಿತುಕೊಳ್ಳುತ್ತಾಳೆ. ಲೇಖಕರು ಸುಶೀಲಳು ನಗರದಲ್ಲಿ ಹುಟ್ಟಿಬೆಳೆದವಳಾದರೂ ಹಳ್ಳಿಯ ಬದುಕಿಗೆ ತನ್ನನ್ನು ಒಗ್ಗಿಸಿಕೊಂಡು ಸುಸಂಸ್ಕೃತವಾದ, ಮಾನವೀಯವಾದ ಗುಣಗಳನ್ನೊಳಗೊಂಡ ಹೃದಯವಂತ ಮಹಿಳೆಯಾಗಿ ಕಂಡುಬರುವುದನ್ನು ಗುರುತಿಸುವುದು ಮಹತ್ವವೆನಿಸುತ್ತದೆ. ಏಕೆಂದರೆ ಭುಜಂಗಯ್ಯನಿಗೆ ಈಗ ಬದುಕಿನ ಎಲ್ಲಾ ಸಾಧ್ಯತೆಗಳು ವ್ಯಾಮೋಹಗಳಂತೆ ಕಂಡು ದಿನನಿತ್ಯ ಕುಳಿತುಕೊಳ್ಳುತ್ತಾನೆ. ಸುಶೀಲ ಮದುವೆಯಾಗಿ ಅವನಿಂದ ಸುಖಪಡುವುದಕ್ಕಿಂತ ಹೆಚ್ಚು ಕಷ್ಟವನ್ನೇ ಅನುಭವಿಸುತ್ತಾಳೆ. ಆದರೂ ಗಂಡನನ್ನು ಯಾವುದೇ ಕೊಂಕಿಲ್ಲದೆ ಅತ್ಯಂತ ಪ್ರೀತಿ, ಮಮತೆಯಿಂದ ಸಾಕುವ ಸುಶೀಲಳ ಹೃದಯವಂತಿಕೆಯು ಮಹತ್ವವೆನಿಸುತ್ತದೆ. ಇದಕ್ಕೆ ತದ್ವಿರುದ್ಧವಾಗಿ ಪಾರ್ವತಿ ಗಂಡನ ಈ ಸ್ಥಿತಿಯನ್ನು ಕಂಡು 'ಮಾಡಬಾರದ್ದ ಮಾಡಿದ್ರೆ ಆಗಬಾರದ್ದೆ ಆಗುತ್ತೆ' ಎಂದು ಹಂಗಿಸುತ್ತಾಳೆ. ಪಾರ್ವತಿಯು ಎಷ್ಟು ಕ್ರೂರಿಯಾಗುತ್ತಾಳೆಂದರೆ ತನ್ನ ಗಂಡನಿಗಾದ ಈ ದುರಂತ ಅವಳಿಗಾದರೂ (ಸುಶೀಲ) ಆಗಬಾರದಿತ್ತೇ ಎಂದು ಸವತಿ ಮತ್ಸರವನ್ನು ಕಾರುತ್ತಾಳೆ. ಅಲ್ಲದೆ ಸುಶೀಲಳು ಸಾಯಲೆಂದು ಅಮವಾಸ್ಯೆಯ ದಿನವೇ ಕಾಡುಕುರುಬನಿಂದ ಮಾಟಮಾಡಿಸುತ್ತಾಳೆ. ಆದರೆ ಅವುಗಳು ಸುಶೀಲಳ ಮೇಲೆ ಪರಿಣಾಮವನ್ನು ಬೀರುವುದಿಲ್ಲ. ಮನುಷ್ಯನ ಮಾತ್ಸರ್ಯ ಅವನನ್ನು ಎಷ್ಟು ಕೀಳುಮಟ್ಟಕ್ಕೆ ಇಳಿಸುತ್ತದೆ ಎಂಬ ಒಳಸೂಕ್ಷ್ಮ ವಿವರಗಳನ್ನು ಈ ಮೂಲಕ ಪರಿಚಯಿಸುವುದೂ ಸಹಜವಾಗಿ ಬಂದಿದೆ.

ಆಲನಹಳ್ಳಿಯವರ ಈ ಮೂರು ಕಾದಂಬರಿಗಳನ್ನು ವಿಶ್ಲೇಷಣೆ ಮಾಡಿದಾಗ ಹಲವಾರು ವಿಶಿಷ್ಟ ಅನುಭವಗಳು ಗಂಡು-ಹೆಣ್ಣಿನ ಸಂಬಂಧಗಳಲ್ಲಿ ಕಾಣಿಸುತ್ತವೆ. ಇನ್ನು ಸಣ್ಣ ಕಥೆಗಳ ಭಾಗಕ್ಕೆ ಬಂದರೆ ಲೈಂಗಿಕ ವಿಷಯಗಳೇ ಪ್ರಧಾನವಾದ ವಸ್ತುವನ್ನು ಆಯ್ದುಕೊಂಡು ಕಥೆ ರಚಿಸುವ ಆಲನಹಳ್ಳಿಯವರು ಅಲ್ಪಕಾಲೀನವಾದ ಉತ್ಕಟತೆಯನ್ನು ಅಭಿವ್ಯಕ್ತಿಸುತ್ತಾರೆ. ಹಳ್ಳಿ-ನಗರಗಳ ಸಾಂಸ್ಕೃತಿಕ ಸಾಧ್ಯತೆ ಗಂಡು-ಹೆಣ್ಣಿನ ಸಂಬಂಧಗಳು ಬದುಕು ಪರಂಪರೆಯೊಡನೆ

ಆಧುನಿಕತೆಯ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರಕ್ರಿಯೆಯನ್ನು ವಿಶೇಷವಾಗಿ ಚಿತ್ರಿಸುತ್ತಾರೆ. ಹೆಣ್ಣುಗಂಡಿನ ಸಂಬಂಧವು ಲೈಂಗಿಕವಾಗಿ ಅಭಿವ್ಯಕ್ತಿಸುವಾಗ ಅನಂತಮೂರ್ತಿಯವರ ರಚನೆಯ ರೀತಿಯನ್ನು ನೆನಪಿಗೆ ತರುತ್ತದೆ. ಜೊತೆಗೆ ಅವುಗಳ ಸಂಬಂಧದ ನೆಲೆಯನ್ನು ಮೀರಿ ಬದುಕಿನ ಅನಂತತೆಯನ್ನು ಶೋಧಿಸುವ ಛಲವನ್ನು ಆಲನಹಳ್ಳಿಯವರಲ್ಲಿ ತೋರುವುದಿಲ್ಲ. ಕೆಲವು ಸನ್ನಿವೇಶಗಳಲ್ಲಿ ಗಂಡು ಕಾಮಕ್ಕಾಗಿಯೇ ತನ್ನ ಅಸ್ತಿತ್ವವನ್ನು ಬೆಳೆಸಿಕೊಳ್ಳುವ ರೀತಿ ಗಂಡುಪಾತ್ರಗಳಲ್ಲಿ ಎನಿಸುತ್ತದೆ. ಹೆಣ್ಣು ಪಾತ್ರಗಳಲ್ಲಿ ಗಂಡು ಬಯಸುವ ಪರಿಸ್ಥಿತಿಗೆ ಒಪ್ಪಿಗೆ ಇದ್ದೋ, ಇಲ್ಲದೆಯೋ ತನ್ನನ್ನು ಬಿಟ್ಟುಕೊಡುವಂತೆ ಕಾಣುತ್ತಾಳೆ. ಇಂತಹ ಸನ್ನಿವೇಶದಲ್ಲಿ ಅವನ ಅಪ್ಪುಗೆಯಲ್ಲಿದ್ದರು. ಅನಾಥ ಸ್ಥಿತಿಯಲ್ಲಿ ನೈತಿಕತೆಯನ್ನು ಮೀರಿದ ರೀತಿ ಪರಿತಪಿಸುತ್ತಾಳೆ. ಆದರೂ ಅನೈತಿಕ ನೆಲೆಯಲ್ಲೂ ಮಾನವೀಯತೆ ಮೆರೆಯುವುದನ್ನು ಮರೆಯುವುದಿಲ್ಲ. ಅವರ 'ಗೀಜನಗಗೂಡು' ಪ್ರಸಿದ್ಧ ಕಥಾಸಂಕಲನವಾಗಿದೆ. 'ಇನ್ನೊಂದು ಪ್ರಣಯ ಪ್ರಸಂಗ', 'ಅಂಟಿದನಂಟಿನ ಕೊನೆ', 'ತಪ್ತ', 'ನೆಲಗುಮ್ಮ', 'ತೊರೆ', 'ಸಂಬಂಧ', 'ಆಗಂತುಕ' ಮುಂತಾದ ಕಥೆಗಳಲ್ಲಿ ಹೆಚ್ಚು ವಿಚಾರಗಳನ್ನು ಬಿಟ್ಟುಕೊಡುತ್ತಾರೆ.

'ಗೀಜಗನಗೂಡು' ಇದೊಂದು ಆಧುನಿಕ ಚಿಂತನೆಯನ್ನಾಧರಿಸಿದ ಕಾಮ ಪಾತಳಿಯ ಚಿತ್ರಣವಿರುವ ಕಥೆ ವಯಸ್ಸಾಗಿರುವ ಪೊವೆಲ್, ರಷ್ಯನ್ ಹೆಣ್ಣಿನ ಬಯಕೆಯನ್ನು ಪೂರೈಸಲಾಗದೆ ಅನಾಸಕ್ತನಾಗುವುದು ಸಹಜವಾಗಿ ಕಥಾನಾಯಕನಾದ ಯುವಕನ ಕಡೆ ಗಮನಹರಿಸುವುದು. ನಾಯಕನು ಕೂಡ ಅವಳಿಗಾಗಿ ಪರಿತಪಿಸುವುದು ಅವರಿಬ್ಬರ ಚೆಲ್ಲಾಟದಲ್ಲಿ ದುರಂತವನ್ನು ಅನುಭವಿಸುವವನು. ಪೊವೆಲ್ ಅನಿವಾರ್ಯವಾಗಿ ಇಬ್ಬರೊಡನೆಯೂ ರಾಜೀಮಾಡಿಕೊಳ್ಳುವುದು, ಸಿಕ್ಕಷ್ಟನ್ನು ದಕ್ಕಿಸಿಕೊಳ್ಳುವುದಕ್ಕೋಸ್ಕರ ಇರಬಹುದು ಅನಿಸುತ್ತದೆ. ಈಗಿದ್ದರೂ ನಾಯಕ ಮತ್ತು ರಷ್ಯನ್ ಹೆಂಗಸಿನಿಂದ ಅನುಭವಕ್ಕಾಗುವ ವಿಷಯವೇನು ಲಭಿಸುವುದಿಲ್ಲ. ಕಥೆಯಲ್ಲಿ ಬದುಕಿನ ಚೌಕಟ್ಟನ್ನು ಕಳೆದುಕೊಂಡಂತೆ ಭಾಷವಾಗುತ್ತದೆ. ಮುಂದಿನ ಕಥೆ ಪ್ರಣಯ ಪ್ರಸಂಗದಲ್ಲಿ ಇದೇ ಕಥಾಂಶವಿದ್ದರು ಸ್ವಲ್ಪ ವ್ಯತ್ಯಾಸವಿದೆ. ಕಥಾನಾಯಕ ನಿರೂಪಕನೂ ಆಗಿರುವುದರಿಂದ ಪಲ್ಲವಿ ತನ್ನ ಗಂಡು ಸ್ವಭಾವವನ್ನು ಸಮರ್ಥಿಸಿಕೊಳ್ಳುವುದು ಅದು ಸಾಧ್ಯವಿಲ್ಲದಾಗ ಪಲ್ಲವಿ ಆಕೆಯ ಹತ್ತಿರದಿಂದ ಸಿಕ್ಕದ್ದರಲ್ಲೇ ಸಮಾಧಾನ ಪಡೆದುಕೊಂಡ ತೃಪ್ತಿ. ನೀಗಿಸಿಕೊಳ್ಳುವುದು ಈ ಕಥೆಯಲ್ಲಿ ಇಬ್ಬರ ಬಯಕೆಗಳು ಒಂದೇ ಧನಾತ್ಮಕವಾಗಿರುವುದರಿಂದ ಅಂತಹ ಸ್ವಾರಸ್ಯ ಅಂಶ ಲಭಿಸುವುದಿಲ್ಲ. ಏಕೆಂದರೆ ವ್ಯವಸ್ಥೆಯು ಏರಿರುವ ಸಂಪ್ರದಾಯದ ಕಟ್ಟುಪಾಡಿನಿಂದ ಹೆಣ್ಣಿನ ಪಾವಿತ್ರ್ಯದ ಕಲ್ಪನೆಯು ಗಂಭೀರವಾಗಿರುವ ಸಂದರ್ಭದಲ್ಲಿ ಹೆಣ್ಣು ಹೇಗೇಗೋ ಕಾಮವನ್ನು ಅನುಭವಿಸುವುದರ ಬದಲು ನಿರ್ದಿಷ್ಟವಾಗಿ ಪೂರೈಸಿಕೊಳ್ಳುವುದು ತಪ್ಪೇನಿಲ್ಲ ಎಂಬ ಅಭಿಪ್ರಾಯ ಮೂಡುತ್ತದೆ.

ಇದು ವ್ಯವಸ್ಥೆಯಲ್ಲಿ ಒಪ್ಪಿತ ಮೌಲ್ಯಗಳನ್ನು ಒಂದು ರೀತಿಯಲ್ಲಿ ಒಪ್ಪಿಯು, ಒಪ್ಪದೆಯು ಮರೆಯಲ್ಲಿ ಸಾಧಿಸುವ ಬಂಡಾಯವಾಗುತ್ತದೆ. ಆದರೆ ಇಂತಹ ನಿರ್ಬಂಧ ಗಂಡಿನ ಮಟ್ಟಿಗಷ್ಟೇ ಸೀಮಿತವಾಗುವುದು ಕಂಡುಬರುವ ಅಂಶ ಪುರುಷಪ್ರಧಾನ ವ್ಯವಸ್ಥೆಯು ಸ್ಥಾಪಿಸಿರುವ ಹೆಣ್ಣಿನ ಹಿಡಿತವನ್ನು ಮತ್ತೆ ಬದಲಾದ ಸಂದರ್ಭದಲ್ಲಿ ಗಂಡು ಮರುಹೊಂದಾಣಿಕೆಯ ದುರಂತದತ್ತ ಸಾಗುತ್ತಾನೆ. ಪಲ್ಲವಿಗೆ ನಾಯಕನೊಡನೆ ಕೂಡುವ ಆಸೆ ಇಲ್ಲದಿದ್ದರೂ ಆತ ನೂರಾರು ಮೈಲಿ ಅಲೆದು ಬಂದಿರುವುದರಿಂದ ಅಂತಃಕರಣ ಕರಗಿ ಅನಿವಾರ್ಯವಾಗಿ ಒಪ್ಪಿಕೊಳ್ಳುತ್ತಾರೆ. ಇಲ್ಲಿ ಸೋಲಿನಲ್ಲಿಯೂ ತನ್ನ ಇಚ್ಛೆ ಸಾಧಿಸಿಕೊಳ್ಳುವ ಗಂಡು, ತನ್ನ ಹಿಡಿತಕ್ಕೆ ಬಂದನಂತರ ಪುರುಷತ್ವವನ್ನು ಮತ್ತೆ ಹೆಣ್ಣಿನ ಮೇಲೆ ಏರುವ ರೀತಿ ಒಂದು ರೀತಿಯ ಹುನ್ನಾರ ಇಲ್ಲಿ ಹೆಣ್ಣು ಗಂಡಿನ ಗುಲಾಮಳಾಗುತ್ತಿರುವುದು ಸೂಚ್ಯವಾಗಿ ಕಾಣುತ್ತದೆ. ಆದರೆ ಕತೆ ಆ ರೀತಿ ಹೇಳುವ ಪ್ರಯತ್ನ ಮಾಡಿಲ್ಲವೆಂದು ಕಥೆಗಾರರು ಹೇಳುವ ಪ್ರಯತ್ನವು ಇದೆ.

'ಅಂಟಿದ ನಂಟಿನಕೊನೆ ಬಲ್ಲವರಾರು' ಈ ಕಥೆಯನ್ನು ಶೂದ್ರ, ಬ್ರಾಹ್ಮಣ ಎಂಬ ಕಲ್ಪನೆಗಳನ್ನು ಸಾಮಾಜಿಕ ನೆಲೆಯಲ್ಲಿ ಸೇರಿಸುವ ಪ್ರಯತ್ನ ನಡೆದಿದೆ. ಇದು ಪೂರ್ವಗ್ರಹ ಪೀಡಿತವಾದ ಅಪಾಯಕಾರಿ ಆಲೋಚನೆಯನ್ನಾದರೂ ಬ್ರಾಹ್ಮಣ ಹೆಣ್ಣಿನ ದುರಂತದಲ್ಲಿ ಮಾನವೀಯಗೊಳಿಸುವ ಸಂಕಲ್ಪ ಮಾಡಿದೆ. ಇದು ಲೇಖಕರ ಆರೋಗ್ಯಕಾರಿ ಚಿಂತನೆಯನ್ನು ತಿಳಿಸುತ್ತದೆ. ಕಾಲಾಂತರದಿಂದ ಬ್ರಾಹ್ಮಣಗಂಡು ಶೂದ್ರಹೆಣ್ಣಿನ ಮೇಲೆ ತನ್ನ ಅಧಿಕಾರ ನಡೆಸಿಕೊಂಡೆ ಬಂದಿದ್ದಾನೆ. ಅಂತಹ ಸಂಪ್ರದಾಯವನ್ನು ಮುರಿಯುವ ಉದ್ದೇಶವೋ ಏನೋ ಎಂಬಂತೆ ಇಲ್ಲಿಯ ಶೂದ್ರನಾಯಕ ಬ್ರಾಹ್ಮಣ ಕನ್ಯೆಯನ್ನು ಕೆಡಿಸುವುದೆ ತನ್ನ ಬದುಕಿನ ಪ್ರಬಲ ಕಾಳಜಿಯಾಗಿ ಮಾಡಿಕೊಂಡಿದ್ದಾನೆ. ಇವನ ಅತಿ ಬುದ್ಧಿವಂತಿಕೆಯನ್ನು ಬಹಳ ಸರಳ ರೀತಿಯಲ್ಲಿ ಸ್ವೀಕರಿಸುವ ಶಾಲಿನಿ ತನ್ನ ಜಾತಿಯ ಬದುಕಿನ ನೆಲೆಯಿಂದ ದೂರ ನಿಂತು ಶುದ್ಧ, ಆಚರಣೆ, ಶಾಸ್ತ್ರಸಂಪ್ರದಾಯಗಳನ್ನು ತಿರಸ್ಕರಿಸುತ್ತಲೇ ಒಪ್ಪಿಕೊಳ್ಳುತ್ತಾಳೆ. ಏಕೆಂದರೆ ಕಾಲೇಜಿನಲ್ಲಿ ಓದುವಾಗಲೇ ಅವನ ಅತಿ ಬುದ್ಧಿವಂತಿಕೆಗೆ ಮರುಳಾಗಿ ಇವನನ್ನು ಪರಿಚಯ ಮಾಡಿಕೊಂಡ ಎಲ್ಲ ಹೆಣ್ಣುಗಳು ಮದುವೆಯ ಬಗ್ಗೆ ಒತ್ತಾಯಿಸಿದಾಗಲೂ ಆತ ಒಪ್ಪುವುದಿಲ್ಲ. ಮದುವೆಯಾಗದಿದ್ದರೂ ಚಿಂತೆಯಿಲ್ಲ. ಅವನು ಇರುವ ಕಡೆ ಸುಮ್ಮನೆ ಇದ್ದುಬಿಡುತ್ತೇನೆ ಎಂಬ ಶಾಲಿನಿಯ ನಿಲುವು ಇಬ್ಬರನ್ನು ಕೂಡಿಸಿದೆ. ಆದರೆ ಮನೆಯವರ ಒತ್ತಾಯಕ್ಕೆ ಮಣಿದು ಮದುವೆಯಾಗುವುದರಿಂದ ಅವರು ಅಂದುಕೊಂಡಂತೆ ಸಾಧನೆ ಏನು ಆಗುವುದಿಲ್ಲ. ಯಾವುದನ್ನು ನೇರವಾಗಿ ಎದುರಿಸಲು ಸಿದ್ದಳಲ್ಲದ ಹಿಂಜರಿಕೆಯ ಆಕೆ ತನ್ನ ಭವಿಷ್ಯವನ್ನು ಮನೆಯವರೊಡನೆ ಹೋರಾಡುತ್ತಿದ್ದಾಳೆ ಎಂಬ ಅಂಶ ನಿಜವಾದರೆ ಬರೆ ಅನುಮಾನ ಉಳಿಯುತ್ತದೆ.

'ತಪ್ತ' ಕಥೆಯ ನಾಯಕನ ನಿರ್ಧಾರವನ್ನು ಹಳ್ಳಿಯಭಾವ ಪ್ರಪಂಚವು ಸೃಷ್ಟಿಸಿರುವ ಅಂತಃಕರಣವನ್ನು ಮೀರಿ ಬೌದ್ಧಿಕ ನಿಲುವಿನಲ್ಲಿ ಚರ್ಚಿಸುವ ಪ್ರಭಾವಗಳಿಂದ ಮೌನದಲ್ಲೇ ಅಲ್ಲಿಯ ನೆಲೆಯಲ್ಲಿ ಭದ್ರವಾಗಿ ಗೌರಿಯ ನೆಲೆಯನ್ನು ಪ್ರಭಾಳ ತಾತ್ವಿಕ ನಿಲುವಿನ ಅಭದ್ರ ಸ್ಥಿತಿಯನ್ನು ಈ ಕಥೆ ಪರಿಚಯಿಸುತ್ತದೆ. 'ನೆಲಗುಮ್ಮ'ದಲ್ಲೂ ಇದೇ ಕಥಾ ಅಂದರವನ್ನು ಹೊಂದಿದೆಯಾದರೂ ತಪ್ತಕ್ಕಿಂತ ತನ್ನ ಆಶಯವನ್ನು ಹಿಗ್ಗಿಸಿಕೊಂಡು ಪರಕೀಯ ಸ್ಥಿತಿಯನ್ನು ಅನುಭವಿಸುವ ನಾಯಕ ಅವನ ಆ ಸ್ಥಿತಿಗಿಂತಲೂ ಸಂಪ್ರದಾಯಕವಾದ ಆವರಣವು ಓದುಗರ ಅಂತಃಕರಣವನ್ನು ಕಲಕುತ್ತದೆ. ಆದರೂ ಬದುಕಿನ ಆಶಯಗಳು ಇಲ್ಲಿ ಅರ್ಥಪೂರ್ಣವಾಗಿವೆ. ಹಾಗೆಯೇ 'ಸಂಬಂಧ' ಕಥೆಯಲ್ಲಿ ಹೆಣ್ಣು-ಗಂಡುಗಳ ಸಂದರ್ಭದಲ್ಲಿ ಉತ್ಕಟತೆಯನ್ನು ಮೆರೆಯುವುದಾದರೆ ಈ ಕಥೆಯಲ್ಲಿ ತಾಳ್ಮೆ ಸಂಯಮದ ಮಹತ್ವವನ್ನು ಪ್ರತಿಬಂಧಿಸಿದ್ದಾರೆ. ಇಲ್ಲಿಯ ನಾಯಕ ಶೂದ್ರ ತನ್ನ ಬಾಲ್ಯ ಸ್ನೇಹಿತೆ ಬ್ರಾಹ್ಮಣ ಹೆಣ್ಣು ಮಗಳು ಇವಳ ಆಶಯಗಳು ದುರಂತಕ್ಕೆ ತಿರುಗುತ್ತಿರುವುದನ್ನು ಮಾನವೀಯ ದೃಷ್ಟಿಯಿಂದ ಗ್ರಹಿಸುವ ನಾಯಕ ಶೂದ್ರ ವರ್ಗದಿಂದ ಬಂದವನಾಗಿದ್ದಾನೆ. ಲಲಿತ ಮತ್ತು ನಾಯಕರ ನಡುವೆ ಜಾತಿ ಗೋಡೆ ಅಡ್ಡ ಬಂದಿರುವುದರಿಂದ ಅವರಿಬ್ಬರೂ ಅಪರಿಚಿತರಂತಾಗಿದ್ದಾರೆ. ಆಕೆಯನ್ನು ಆಕಸ್ಮಿಕವೆಂಬಂತೆ ಆಸ್ಪತ್ರೆಯಲ್ಲಿ ಭೇಟಿಯಾಗುವ ನಾಯಕ ಅವಳ ಬದುಕಿನ ಸ್ಥಿತಿಯನ್ನು ಕಂಡು ಸಹಾಯ ಹಸ್ತ ನೀಡಲು ಮನೆ ಹುಡುಕಿಕೊಂಡು ಹೋಗುವುದು. ಆಕೆಯ ಮಗುವನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿಬರಲು ಹೇಳಿ ಹಣ ನೀಡಿಬರುತ್ತಾನೆ. ಈ ಸಹಾಯ ಅಂತಃಕರಣದಿಂದ ಬಂದದ್ದಾಗಿದೆ. ಇಲ್ಲಿ ಜಾತಿಯಿಂದ ಮೇಲು ಕೀಳೆಂಬ ಭಾವನೆ ಸಾಮಾಜಿಕವಾಗಿರಬಹುದು. ಆದರೆ ಕೇವಲ ವರ್ಗದಲ್ಲೂ ಮೇಲೂ ವರ್ಗದ ಮನಸ್ಥಿತಿಯಷ್ಟೇ ಪರಿಣಾಮಕಾರಿಯಾದ ಸಾಮಾಜಿಕ ಸಂಬಂಧ ಇದೆ ಎಂಬುದನ್ನು ಕಥೆಯಲ್ಲಿ ನಿರೂಪಿಸಿದ್ದಾರೆ. ಹೆಣ್ಣು ಪರ ಪುರುಷನೊಡನೆ ಸ್ನೇಹದಿಂದಿರುವುದನ್ನು ಸಂಪ್ರದಾಯಿಕ ಮನಸ್ಸು ಲೈಂಗಿಕ ನೆಲೆಯಲ್ಲಿ ಅನುಮಾನಿಸುತ್ತದೆ. ಹೆಣ್ಣು-ಗಂಡುಗಳು ಪರಸ್ಪರ ಅರಿತುಕೊಳ್ಳುವ ಆರೋಗ್ಯಕಾರಿಯಾದ ಮುಕ್ತ ವಾತಾವರಣ ಸಂಪ್ರದಾಯಿಕ ನೆಲೆಯಲ್ಲಿ ಸಾಂಸ್ಕೃತಿಕಗೊಳ್ಳುತ್ತಿರುವುದು ವಿಷಾದನೀಯ ವಿಷಯ. ಶೂದ್ರನಾಯಕನಂಥ ಸಂಸ್ಕೃತಿನಿಷ್ಟ ವ್ಯಕ್ತಿ ತನ್ನ ನೋವುಗಳನ್ನು ಮರೆಯುತ್ತಲೇ ಇಂಥ ಪ್ರವೃತ್ತಿಯನ್ನು ಮಾನವೀಯ ನೆಲೆಯಲ್ಲಿ ಮುಂದುವರೆಸುವುದು ಅನಿವಾರ್ಯವಾಗಿದೆ.

ಪ್ರಬುದ್ಧ ಮನಸ್ಸನ್ನು ಪಡೆದಿರುವ ನಾಯಕ ತಾಯಿ, ಅಕ್ಕರೊಂದಿಗೆ ಸಾಮರಸ್ಯದ ಸಂಬಂಧವನ್ನು ಕಾಣಲು ಯತ್ನಿಸುತ್ತಿದ್ದಾನೆ. ಅವನ ಯತ್ನಗಳು ಫಲಕೊಡುವುದಿಲ್ಲ. ಅವನನ್ನು ಇವುಗಳಿಗೆಲ್ಲ ಕಾರಣಗಳೇನು ಎಂದು ಬದುಕಿನ ಅರ್ಥವನ್ನು ಹುಡುಕುವುದಕ್ಕೆ ಪ್ರೇರಣೆ ನೀಡುತ್ತದೆ. ತಾನು ಈ ಸಂಬಂಧದಲ್ಲಿ ಇಲ್ಲಿ ಜಾರಿದೆ ಎಂದು ತನ್ನ ಆತ್ಮವನ್ನು

ಶೋಧಿಸಿಕೊಳ್ಳುತ್ತಾನೆ. ಅವನ ಪ್ರಗತಿಪರ ಧೋರಣೆಗಳು, ಆಧುನಿಕ ಮನೋಧರ್ಮಗಳು ಅವನ ಮನಸ್ಸಿನಲ್ಲಿ ಇನ್ನೂ ಪರಿಪಕ್ವಗೊಳ್ಳದೆ ದ್ವಿಮುಖ ನೀತಿಯಲ್ಲಿ ನಿಂತಿದೆ. ಈ ಚಿಂತನೆ ಆಲನಹಳ್ಳಿಯವರಿಗೆ ಮೂಡಲು ಕಾರಣ ಅರವತ್ತು-ಎಪ್ಪತ್ತರ ದಶಕದಲ್ಲಿ ಭಾರತೀಯ ಸಮಾಜವು ಸ್ವಾತಂತ್ರ್ಯ ಪಡೆದು ತನ್ನನ್ನು ತಾನು ಸಿಂಹಾವಲೋಕನ ಮಾಡಿಕೊಳ್ಳುವಂತಹ ಸಂಕ್ರಮಣ ಸ್ಥಿತಿ ಈ ಕಾಲದಲ್ಲಿ ಅಭಿವ್ಯಕ್ತಗೊಂಡ ಸಾಹಿತ್ಯ ಕೃತಿಗಳಲ್ಲಿ ಭಾರತೀಯ ಜಮೀನ್ದಾರಿ ಪದ್ಧತಿ, ಪಾಶ್ಚಾತ್ಯದ ಬಂಡವಾಳಶಾಹಿ ವ್ಯವಸ್ಥೆಯನ್ನು ಸಮಾನಾಂತರವಾಗಿ ಅರಗಿಸಿಕೊಂಡು ಅವುಗಳಿಂದ ಸಮಾಜದಲ್ಲಿ ಹೆಚ್ಚುತ್ತಿರುವ ಹಿಂಸೆ ಕ್ರೌರ್ಯಗಳ ಸ್ವರೂಪಗಳನ್ನು ಮನುಷ್ಯನ ಚಹರೆಗಳ ಮೂಲಕ ಹಾಗೂ ಸಂಬಂಧಗಳಲ್ಲಿನ ಹೊಸ ದೃಷ್ಟಿಕೋನಗಳಿಂದ ಅನಾವರಣಗೊಳ್ಳುವುದು ಸಾಧ್ಯವಾಯಿತು. ಈ ಕಾರಣದಿಂದ ಆಲನಹಳ್ಳಿಯವರು ಒಟ್ಟು ಮನುಷ್ಯ ಸಂಬಂಧಗಳನ್ನು ಗ್ರಹಿಸುವ ಚಿಂತನೆಗೆ ನೆರವಾಗಲು ಕಾರಣವಾಯಿತು.

'ತಪ್ತ' ಕಥೆಯಲ್ಲಿನ ನಾಯಕ ಈ ಧೋರಣೆಗಳಿಂದ ರಕ್ತ ಸಂಬಂಧಗಳಿಂದ ಪರಕೀಯತೆಯನ್ನು ಅನುಭವಿಸುತ್ತಿರುತ್ತಾನೆ. ಪರಕೀಯ ಪ್ರಜ್ಞೆ ಇವನಲ್ಲಿ ಆಳವಾಗಿ ಬೇರುಬಿಟ್ಟಿದೆ. ಇದರಿಂದ ಹಳ್ಳಿಯ ಬದುಕು ಅಲ್ಲಿನ ಮೌಲ್ಯಗಳ ಬಗ್ಗೆ ಬೇಸರ ತರುವುದು ಇವುಗಳನ್ನು ಪರಿವರ್ತಿಸಿ ತಾನೊಬ್ಬ ಆದರ್ಶ ವ್ಯಕ್ತಿ ಎಂದು ಹೆಸರು ಪಡೆಯಲು ಸಿದ್ಧನಿಲ್ಲ. ಅವನಿಗೆ ವೈಯಕ್ತಿಕ ಮೌಲ್ಯಗಳಿಗೆ ಪ್ರಾಮಾಣಿಕ ಬೆಲೆಯನ್ನು ಕೊಡುವಂತಹ ಸಮಾಜದ ಸೃಷ್ಟಿಯಲ್ಲಿಯೇ ಅವನ ಆಸಕ್ತಿ. 'ತಪ್ತ'ದ ನಾಯಕ ತನ್ನ ಆಸೆ ಆಕಾಂಕ್ಷೆಗಳನ್ನು ಬದಿಗೊತ್ತಿ ಗೌರಿಯನ್ನು ಮದುವೆಯಾದಾಗ ಅಕ್ಕನಿಗೆ ಶಾಂತಿ ಅವ್ವನಿಗೆ ಸಮಾಧಾನ ಸಿಗುವುದು. ಇದರೊಂದಿಗೆ ಸಂಬಂಧದಲ್ಲಿ ಸಾಮರಸ್ಯ ಕಾಣಲು ಸಾಧ್ಯವಾಗುತ್ತದೆ. ಈ ಕಥೆಯಲ್ಲಿ ನಾಯಕನ ಅವ್ವ, ಅಕ್ಕ ಪಾತ್ರಗಳಲ್ಲಿ ಹೆಣ್ಣಿನ ಒಂದು ಮುಖವನ್ನು ಗೌರಿಯ ಪಾತ್ರದ ಮೂಲಕ ಹೆಣ್ಣಿನ ಇನ್ನೊಂದು ಮುಖವನ್ನು ನೋಡಬಹುದು. ಅವ್ವ, ಅಕ್ಕರ ಆರ್ಭಟದ ಮಾತುಗಳು ಒತ್ತಡದ ತಂತ್ರಗಳು ನಾಯಕನ ಮನಸ್ಸಿನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಆದರೆ ಗೌರಿಯ ಮೌನವನ್ನೆಲ್ಲ ಮನೋಭಿಲಾಷೆಗಳು ಅಲ್ಲಾಡುವಂತೆ ಮಾಡುತ್ತದೆ. ಗೌರಿಯ ಸಮಗ್ರ ಮಾನಸಿಕ ತೊಳಲಾಟಗಳನ್ನು ಗುರುತಿಸಲು ಸಾಧ್ಯವಾಗದಿರುವುದು ಕಥೆಯ ದೌರ್ಬಲ್ಯ.

ಪುರುಷಕೇಂದ್ರಿತ ಸಮಾಜದಲ್ಲಿ ಪುರುಷನಿಗೆ ಹೆಚ್ಚಿನ ಪ್ರಾಧಾನ್ಯತೆ ಸ್ತ್ರೀಯರ ಇಷ್ಟಾನಿಷ್ಟಗಳ ಕಡೆ ಅಷ್ಟಾಗಿ ಗಮನಕೊಡುವುದು ತುಂಬಾ ಕಡಿಮೆ. ಆದರೂ ಹೆಣ್ಣಿನ ಮೌನಶಕ್ತಿ ಗಂಡಿನ ಮನೋಬಲವನ್ನು ತನ್ನ ಸೀಮಿತ ಅವಕಾಶದಲ್ಲಿಯೇ ಕುಸಿಯುವಂತೆ ಮಾಡುವುದು ಹೆಣ್ಣಿನ ಶಕ್ತಿ ಎಂದೇ ಗುರುತಿಸಬಹುದು.

"ಮನುಷ್ಯ ತನ್ನ ನಡೆವಳಿಕೆಯಲ್ಲಿ ಸಮಾಜ ಮತ್ತು ಸಂಪ್ರದಾಯದ ಬಳುವಳಿಯಾಗಿ ಬಂದ ಕೆಲವು ಪಾತ್ರಗಳನ್ನು ಆಯ್ದುಕೊಳ್ಳುವ ಮೂಲಕ ಜೀವನದಲ್ಲಿ ಅರ್ಥಮಾಡಿಕೊಳ್ಳುತ್ತಾನೆ. ಅಂದರೆ ಒಬ್ಬ ಮಗನಾಗಿ ಅವನು ಒಂದು ಸ್ವೀಕೃತ ಪಾತ್ರವಹಿಸಿದರೆ ಗಂಡನಾಗಿ ಇನ್ನೊಂದು ಪಾತ್ರವನ್ನು ವಹಿಸುತ್ತಾನೆ. ತನ್ನ ವೈಯಕ್ತಿಕ ಬದುಕಿಗೂ ಈ ಪಾತ್ರಗಳಿಗೂ ಆದಷ್ಟುಮಟ್ಟಿಗಿನ ತಾದಾತ್ಮ್ಯ ಪಡೆಯುವುದರಲ್ಲಿಯೇ ಕೃತಾರ್ಥತೆ ಪಡೆಯುತ್ತಾನೆ. ಆದರೆ ಸಾಂಪ್ರದಾಯಿಕ ಮೌಲ್ಯ ಕಲ್ಪನೆಯಿಂದ ಹುಟ್ಟಿಕೊಳ್ಳುವ ಈ ಪಾತ್ರ ಕಲ್ಪನೆಗಳ ಮೂಲಗಳನ್ನು ಅವನು ಪ್ರಶ್ನಿಸುವಂತಿಲ್ಲ".[೨೭]

ತಮ್ಮ ವೈಯಕ್ತಿಕ ಬದುಕನ್ನು ಬರವಣಿಗೆಯ ರೂಪದಲ್ಲಿ ತರುವ ಲೇಖಕನು ಈ ಸಂಬಂಧಗಳ ಮೇಲೆ ಪ್ರಶ್ನಿಸುವ ಹಕ್ಕನ್ನು ಕಳೆದುಕೊಳ್ಳುತ್ತಾನೆ. ರಕ್ತಸಂಬಂಧಗಳಿಂದ ನುಣುಚಿಕೊಳ್ಳಲು ಅವನು ಪ್ರಯತ್ನಿಸುತ್ತಿರುತ್ತಾನೆ. ಭಾರತೀಯ ಸಮಾಜದಲ್ಲಿ ಈ ಸಂಬಂಧಗಳು ಸಂಕೀರ್ಣತೆ, ಸಹಾನುಭೂತಿಗಳಿಂದ ಕೂಡಿದೆ. ಈ ಕಾರಣಗಳಿಂದಲೇ ಅವನು ಜವಾಬ್ದಾರಿಯಿಂದ ತೋರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಪರಂಪರಾನುಗತದಿಂದ ಅವನ ಪ್ರಜ್ಞೆಯಲ್ಲಿ ಬೆಳೆದಿರುವ ಈ ಮೌಲಿಕ ಅಂಶಗಳಿಂದ ಮುಕ್ತನಾಗಲು ಸಾಧ್ಯವಿಲ್ಲ.

'ನೆಲಗುಮ್ಮ' ಕಥೆಯಲ್ಲಿ ಮತ್ತೆ ಮಾನವೀಯತೆ ಮೌಲಿಕ ಅಂಶಗಳು ಕಥಾನಾಯಕನಲ್ಲಿ ಆಳವಾಗಿ ಬೇರುಬಿಟ್ಟಿದೆ. ತಬ್ಬಲಿಯಾದ ಮೊಮ್ಮಗನನ್ನು ನಾ ಸಲುಹಿದ ಕಾರಣ ನಿನಗೆ ಆಸರೆಯಾಗಿರಲಿ ಎಂಬ ವ್ಯವಹಾರಜ್ಞಾನ. ಈ ವ್ಯವಹಾರಕ್ಕೆ ಕುಂದುಬಂದಾಗ ರಕ್ತಸಂಬಂಧದಲ್ಲಿ ಸರಿಪಡಿಸಲಾಗದ ಬಿರುಕುಗಳು ಕಾಣುತ್ತವೆ. ಸಂಬಂಧಗಳನ್ನು ಬಲವಾಗಿ ನಿರಾಕರಿಸಲು ಅವನು ಸೋಲುತ್ತಾನೆ. ಎಲ್ಲ ಒತ್ತಡಗಳನ್ನು ತನ್ನ ಮೇಲೆ ತಂದುಕೊಂಡು ತನ್ನ ಅಸ್ತಿತ್ವದ ತೀವ್ರತೆಯನ್ನು ಸ್ವತಃ ತಂದುಕೊಳ್ಳುತ್ತಾನೆ.

'ತಪ್ತ' ಮತ್ತು 'ನೆಲಗುಮ್ಮ' ಕಥೆಯಲ್ಲಿ ಗಂಡು-ಹೆಣ್ಣುಗಳ ರಕ್ತಸಂಬಂಧದ ಪಾತ್ರದಲ್ಲಿ ಹೆಣ್ಣಿನ ಪ್ರಧಾನತೆಯೂ ಗಂಡಿನ ಮನಸ್ಸಿಗೆ ಬಲವಾದ ಹೊಡೆತವಾಗಿ ಪರಿಣಮಿಸಿದೆ. ಸಾಂಪ್ರದಾಯಿಕ ಮೌಲ್ಯಗಳಲ್ಲಿ ನಂಬಿಕೆ ಇಟ್ಟಿರುವ ಸ್ತ್ರೀಪಾತ್ರಗಳೇ ಗೆಲುವು ಪಡೆಯುವುದು. ಆಧುನಿಕತೆಯ ಮೌಲ್ಯಗಳಲ್ಲಿ ನಂಬಿಕೆ ಇಟ್ಟು ಅದು ಇನ್ನು ಪರಿಪಕ್ವಗೊಳ್ಳದಿರುವಾಗ ಗಂಡಿನ ಸೋಲು ಇಲ್ಲಿ ಮನುಷ್ಯನ ಸಂಕ್ರಮಣ ಸ್ಥಿತಿಯೇ ಭಾರತೀಯ ಸಮಾಜದ ಸಂಕ್ರಮಣ ಸ್ಥಿತಿಯೇ ಎಂಬ ಪ್ರಶ್ನೆ ಹೇಳುತ್ತದೆ. "ಆತ್ಮಶಾಂತಿ ಇಲ್ಲದೆ ಅಕ್ಕ ದೆವ್ವವಾಗಿ ಅಲೆಯುತ್ತಿದ್ದಾಳೆ. ಮತ್ತೆ ಯಾರನ್ನೋ ಕೈಬೀಸಿ ಕರೆಯುತ್ತಿದ್ದಾಳೆ. ಅಷ್ಟರಲ್ಲಿ ಪ್ರಭಾಳ ಜೊತೆ ನಾನು ಬಂದು ಹೋಗುತ್ತಿರುವ ವ್ಯಕ್ತಿಯನ್ನು ಬಿಗಿಯಾಗಿ ಹಿಡಿದುಕೊಂಡಿದ್ದೇನೆ. ಪ್ರಭಾ ಅತ್ತೆ ಎನ್ನುತ್ತಾ

---

೨೭. ರಾಜೇಂದ್ರ ಚೆನ್ನಿ, 'ಅಧ್ಯಯನ', ಪುಟ. ೩೪, ೧೯೮೭

ಕಾಲಿಗೆರಗುತ್ತಾಳೆ. ಆ ವ್ಯಕ್ತಿ ಪ್ರಭಾಳನ್ನು ಜಾಡಿಸಿ ಒದ್ದು ನನ್ನ ಹಿಡಿತವನ್ನು ಸಡಿಲಿಸಿಕೊಂಡು ಅಕ್ಕನತ್ತ ನಡೆಯುತ್ತಿದೆ. ನಾನು ಕೂಗಿಕೊಳ್ಳುತ್ತಿದ್ದೇನೆ. ಹಿಂಡುಹಿಂಡು ದೆವ್ವಗಳು ಬಂದು ಕೆಂಡದಂತಹ ಕಣ್ಣುಗಳಿಂದ ನನ್ನನ್ನು ತಿನ್ನುವಂತೆ ನೋಡಿ ಪ್ರಭಾಳತ್ತ ಬೀಳುತ್ತಿವೆ. ಪ್ರಭಾ ಕೆಳಗುರುಳುತ್ತಾಳೆ. ಅವಳನ್ನು ತಿರುಗು ಮುರುಗು ಪಾದಗಳಿಂದ ತುಳಿಯುತ್ತದೆ. ಅಷ್ಟರಲ್ಲಿ ಗೌರಿ ಓಡಿಬಂದು ನನ್ನನ್ನು ಎಳೆದು ತಬ್ಬಿಕೊಂಡು ಅವುಗಳತ್ತ ಜೋಡನ್ನು ತೋರಿಸುತ್ತಾಳೆ. ಅವು ಓಡಿಹೋಗುತ್ತವೆ. ನಡುಗುತ್ತಾ ನಾನು ಗೌರಿಯ ತೊಡೆಯಮೇಲೆ ಬಿಕ್ಕಿಬಿಕ್ಕಿ ಅಳುತ್ತಿದ್ದೇನೆ"[೨೮] ದುರ್ಬಲ ಮನಸ್ಸಿನ ನಾಯಕ ಯಾವುದೇ ಮೌಲ್ಯವನ್ನು ಸ್ವೀಕರಿಸಲು ಅಸಮರ್ಥನಾಗಿಸುವ ಸ್ಥಿತಿ ಸಾಂಕೇತಿಕವಾಗಿ ದೆವ್ವಗಳನ್ನು ತರುತ್ತಿರುವುದು. ತಾನು ಸೃಷ್ಟಿಸಿಕೊಂಡ ಸಂಬಂಧ ಸಮಾಜಗಳ ಚೌಕಟ್ಟುಗಳು ದೆವ್ವಗಳಷ್ಟು ಭಯಂಕರವಾಗಿರುವುದನ್ನು ಹೇಳುತ್ತಿದೆ. ಅವನ ಅಪಕ್ವ ಮನಸ್ಥಿತಿಯ ಪ್ರಜ್ಞೆಗಳನ್ನು ಇಲ್ಲಿ ದೆವ್ವಗಳು ನಿರೂಪಿಸುತ್ತಿರಬಹುದು. ರಕ್ತಸಂಬಂಧಗಳಲ್ಲಿ ಕೂಡಿಕೊಳ್ಳುತ್ತಿರುವ ಬಿರುಕುಗಳು ಕಡಿಮೆಯಾಗದೇ ಜಜ್ಜಾಗುತ್ತಿರುವುದು ಭಾರತೀಯ ಸಾಮಾಜಿಕತೆಯಲ್ಲಿನ ಪಲ್ಲಟವನ್ನು ತಿಳಿಸುತ್ತದೆ.

'ಫೀನಿಕ್ಸ್' ಕಥಾಸಂಕಲನದಲ್ಲಿನ ಕಥೆಯಲ್ಲಿ ಗಂಡು-ಹೆಣ್ಣುಗಳ ದೈಹಿಕ ಸಂಬಂಧಗಳಿಗೆ ಹೆಚ್ಚಿನ ಪ್ರಾಮುಖ್ಯತೆಕೊಟ್ಟಿದೆ. ಈ ಸಂಬಂಧಗಳಲ್ಲಿ ಸೃಷ್ಟಿಯಾಗುವ ಹೆಣ್ಣು ಆಲನಹಳ್ಳಿ ಕಥೆಗಳ ಪಾತ್ರಗಳಿಗಿಂತ ತೀರಾ ಭಿನ್ನ. ಹೆಣ್ಣಿನ ಮನಃಸ್ಥಿತಿಯಲ್ಲಿ ಅವಳ ಜೀವನ ಶೈಲಿಯಲ್ಲಿ ಅವಳ ಬದುಕಿನಲ್ಲಿ ಅವಸ್ಥಾಂತರಗಳಲ್ಲಿ ಇಲ್ಲಿ ಕಾಣಬಹುದು. ಕಾಮ ಮಾಧ್ಯಮದಿಂದಲೇ ಗಂಡು-ಹೆಣ್ಣಿನ ಸಂಬಂಧಗಳ ಸ್ವರೂಪಗಳನ್ನು ಈ ಎಲ್ಲ ಕಥೆಗಳಲ್ಲೂ ಕಟ್ಟಿಕೊಡುತ್ತಾರೆ.

ಫ್ಯೂಡಲ್ ಪರಿಸರದಲ್ಲಿ ರೂಪುಗೊಂಡ ಗಂಡಿನ ಮನಸ್ಸು ಆಧುನಿಕತೆಯ ನೆಪದಲ್ಲಿ ಮುಕ್ತತೆಗೆ ಮಾರುಹೋದಾಗ ಹೆಣ್ಣಿನ ದೇಹವನ್ನು ಅನಾವರಣಗೊಳಿಸುವಲ್ಲಿ ತೋರಿದ ಉತ್ಸಾಹವನ್ನು ಆಸಕ್ತಿಯನ್ನು ಅವಳ ಹೃದಯ ಮನಸ್ಸನ್ನು ಅನಾವರಣಗೊಳಿಸಲು ತೋರಲಿಲ್ಲ. ಅಲ್ಲಿ ಹೆಂಡತಿ ಎಂದರೆ ಅವಳ ಸುಂದರದೇಹ. ಸಂಕ್ರಮಣಕಾಲದಲ್ಲಿ ಹೆಣ್ಣಿನ ಮೇಲೆ ಸ್ನೇಹದ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆಗಳನ್ನು ಫೀನಿಕ್ಸ್ ಇನ್ನಿತರ ಕಥೆಗಳಲ್ಲಿ ಕಾಣುತ್ತೇವೆ. ಇಲ್ಲಿ ಗಂಡಿನ ತಪ್ಪುಗಳನ್ನು ಗುರುತಿಸಲು ಸಾಧ್ಯವಿಲ್ಲ. ಗಂಡು-ಹೆಣ್ಣುಗಳು ತಮ್ಮ ತಮ್ಮ ಒಪ್ಪಿಗೆಯ ಮೇರೆಗೆ ದೈಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದು ಆಧುನಿಕತೆಯ ಮತ್ತೊಂದು ಮುಖದ ಪರಿಚಯವೇ ಸರಿ.

---

೨೮. ಆಲನಹಳ್ಳಿ ಕೃಷ್ಣ 'ಸಮಗ್ರ ಕಥೆಗಳು', ಪುಟ. ೧೨, ೧೯೮೬.

ಗಂಡು-ಹೆಣ್ಣುಗಳ ಸಂಬಂಧಗಳು ಒಂದು ಚೌಕಟ್ಟಿನೊಳಗೆ ಇರಬೇಕು ಎಂಬುದನ್ನು ತಿರಸ್ಕರಿಸುವುದು. ಇವುಗಳನ್ನು ಮೀರಿ ಬದುಕಿನ ಅನುಭವಗಳನ್ನು ಹೆಚ್ಚಿಸಿಕೊಳ್ಳಬೇಕೆಂಬ ಹೆಬ್ಬಯಕೆಯಿಂದಲೇ ಕಾಮದ ಮಾಧ್ಯಮದಿಂದಲೇ ಬದುಕನ್ನು ಶೋಧಿಸುವ ಕೆಲಸಕ್ಕೆ ಕೈಹಾಕುವ ಹುಚ್ಚುಸಾಹಸವನ್ನು ಲೇಖಕರು ತಮ್ಮ ಬರಹಗಳಲ್ಲಿ ಪಡಿಮೂಡಿಸಿದ್ದಾರೆ.

'ಫೀನಿಕ್ಸ್' ಕಥೆಯಲ್ಲಿ ಅತಿಯಾದ ಪ್ರಜ್ಞೆಯ ನಾಯಕರನ್ನು ತನ್ನ ದೌರ್ಬಲ್ಯದಿಂದ ದುರ್ಬಲನಾಗಿ ರೂಪುಗೊಳ್ಳುವುದು. ಅವನು ಯಾವುದೇ ತೀರ್ಮಾನಗಳನ್ನು ನಿಖರವಾಗಿ ಅಥವಾ ಖಚಿತವಾಗಿ ಮಂಡಿಸಲು ಸೋಲುತ್ತಾನೆ. ನಾಯಕನ ಅಸ್ವಸ್ಥ ಮನಸ್ಸಿನ ಪ್ರೇಮಕಾಮಗಳಂಥ ಭಾವನೆಗಳಿಗೆ ಮದುವೆ ಕುಟುಂಬಗಳಂತಹ ಸಾಮಾಜಿಕ ಸಂಸ್ಥೆಗಳಿಂದ ಏರ್ಪಡುವ ವಿರೋಧಿ ಜಿಜ್ಞಾಸೆಗಳನ್ನು ಸಮರ್ಥವಾಗಿ ನಾಯಕನ ಮನಸ್ಸು ಪ್ರತಿಬಿಂಬಿಸುತ್ತದೆ. ಆಲನಹಳ್ಳಿಯವರ ಇತರ ಕಥೆಗಳಲ್ಲಿ ಹೆಣ್ಣು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ವ್ಯರ್ಥ ಪ್ರಯತ್ನಮಾಡುತ್ತಿರುವುದು. ಕ್ಷಣಿಕ ಸುಖಲಾಲಸೆಗಳಲ್ಲಿಯೇ ತನ್ನನ್ನು ಸಮರ್ಪಿಸಿಕೊಳ್ಳುವುದು. ಪುರುಷನಿಗೆ ಪೂರಕವಾಗಿಯೇ ನಡೆದುಕೊಳ್ಳುವಿಕೆ ಪುರುಷಕೇಂದ್ರಿತ ಸಮಾಜದ ಅಹಂಕಾರವನ್ನು ಪ್ರಶ್ನಿಸಲು ಸಮರ್ಥಳಾಗಿ ಅವನ ಅಹಂಕಾರದ ವಿಜೃಂಭಣೆಗೆ ಪ್ರೇರಕವಾಗಿ ನಿಲ್ಲುತ್ತಾಳೆ. ಅವಳು ತನ್ನನ್ನು ಯಾವಾಗಲೂ ಗಂಡಿನ ದೈಹಿಕ ಸಂಬಂಧಗಳ ಮೂಲಕವೇ ಗುರುತಿಸಿಕೊಳ್ಳಲು ಇಷ್ಟಪಡುತ್ತಾಳೆ. ಗಂಡು ಆಧುನಿಕ ಮೌಲ್ಯಗಳನ್ನು ಎಷ್ಟು ಆಕರ್ಷಕವಾಗಿ ಅರ್ಥಮಾಡಿಕೊಂಡನೋ ಹಾಗೆಯೇ ಆಧುನಿಕತೆಯನ್ನು ಹೆಣ್ಣು ಅರ್ಥಮಾಡಿಕೊಳ್ಳಲು ಅಸಮರ್ಥಳಾದಳು ಎಂಬುದು ಅವಳ ಸ್ವಾತಂತ್ರ್ಯದ ಸ್ವಚ್ಛಂದ ಬದುಕಿಗೆ ಮಾತ್ರ ಮೀಸಲಾಯಿತು.

ಈ ಎಲ್ಲಾ ಕಥೆಗಳಲ್ಲಿ ಹೆಣ್ಣು-ಗಂಡಿನ ಮಾತುಕತೆ ಡಿಬೇಟ್ ಮಟ್ಟದ ಮಾತುಕತೆಯಾಗಿ ಕೇಳುತ್ತದೆ. ಈ ಕತೆಗಳ ನಾಯಕನಿಗೆ ಆ ಸಮಯದಲ್ಲಿ ಅವಳ ಜೊತೆ ಮಲಗಲು ಒಂದು ಹೆಣ್ಣು ಮಾಂಸದ ಮುದ್ದೆಬೇಕು. ಆ ಹೆಣ್ಣುಗಳು ಅಷ್ಟೇ ಅಲ್ಲ, ಆ ಮಾಂಸದ ಮುದ್ದೆಗಳೂ ಅಷ್ಟೇ ಅವನು ಕೇಳಿದ ತಕ್ಷಣ ಮಲಗಿ ನಲುಗಿಹೋಗುತ್ತವೆ. ಇವು ಪ್ರೇಮವನ್ನು ಹೊರತುಪಡಿಸಿ ಕಾಮದ ಸಮರ್ಥ ಚಿತ್ರಣ ಕೂಡ ಆಗುವುದಿಲ್ಲ. ಹೆಣ್ಣನ್ನು ಪುರುಷನೇ ಸ್ವತಂತ್ರ ಅಸ್ತಿತ್ವ ಹಾಗೂ ವ್ಯಕ್ತಿತ್ವವುಳ್ಳ ಮಾನವಜೀವಿ ಎಂಬಂತೆ ಕೂಡಿಸಿದ್ದು ಅಪರೂಪ.

"ಬರಬರುತ್ತಾ ಯಾವ ವಸ್ತು ಹಾಗೂ ಯಾವ ಬಗೆಯ ನಿರೂಪಣೆ ಓದುಗರಲ್ಲಿ ಕ್ಲಿಕ್ ಆಗುತ್ತದೆ ಎಂಬ ಜಾಡು ಹಿಡಿದು ಹೊರಟ ಆಲನಹಳ್ಳಿ ಕೃಷ್ಣ ಉತ್ತಮ ಲೇಖಕನೊಬ್ಬ ಸಾಮಾನ್ಯವಾಗಿ ಬೀಳಬಾರದ ಆತ್ಮ ವಂಚನೆಯ ಬಲೆಗೆ ಬಿದ್ದರು. ಒಳ್ಳೆಯ ಕವಿತೆಯಂತಿದೆ ಎಂದು ಹೊಗಳಿಕೊಂಡಿದ್ದ 'ಫೀನಿಕ್ಸ್' ಕತೆ ಕೂಡ ಕೃಷ್ಣರ ತಲೆಯಲ್ಲಿದ್ದ ಪರಿಣಾಮಕೇಂದ್ರಿತ

ಬರವಣಿಗೆಯ ಪರಿಕಲ್ಪನೆಯ ಫಲ. ಈ ಕಥೆಯಲ್ಲಿ ಉನ್ಮತ್ತನಾದ ತರುಣನೆದುರು ನಗ್ನಳಾಗಿ ನಿಂತ ನಾಯಕಿ ಓದುಗರಿಗೆ ಶಾಕ್ ನೀಡಬಹುದೆಂಬ ಭ್ರಮೆಗೆ ಕೃಷ್ಣ ಒಳಗಾಗಿದ್ದು ಕೂಡ ಈ ಪರಿಕಲ್ಪನೆಯ ಫಲವೇ......."[೨೯] ಕಾಮದ ಹಸಿ ಹಸಿ ಅನುಭವಗಳನ್ನು ಓದುಗನಿಗೆ ಕೊಡಬೇಕು ಎಂಬ ಕಾರಣದಿಂದ ಲೇಖಕರು ತಮ್ಮ ಕಥೆಗಳಲ್ಲಿ ಕಾಮದ ವಿವಿಧ ಚಹರೆಗಳನ್ನು ಈ ಪರಿಕಲ್ಪನೆಯಲ್ಲಿ ಗಂಡು-ಹೆಣ್ಣುಗಳ ಮುಖವಾಡಗಳನ್ನು ತೆರೆಸರಿಸಿಕೊಡಬೇಕೆಂಬ ಇವರು ಇಂತಹ ಜಾಳು ಜಾಳು ಕಥೆಗಳನ್ನು ಸೃಷ್ಟಿಮಾಡಿದರೆಂದರೆ ತಪ್ಪಾಗುವುದಿಲ್ಲ. ಸಮಾಜವು ನನ್ನಿಂದ ಹೊಸದನ್ನು ಬಯಸುತ್ತಿದೆ. ಅದನ್ನು ತನ್ನ ವೈಯಕ್ತಿಕ ಅನುಭವಗಳ ಸ್ಪಂದನೆಗಳಿಂದಲೇ ಕೊಡಬೇಕು ಎಂಬ ದೃಷ್ಟಿಯಿಂದ ಮಾತ್ರ ಸ್ತ್ರೀಯರ ಮನಸ್ಸಿನ ಅತೃಪ್ತಬಯಕೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ಅವರಿಗೆ ಸ್ವತಂತ್ರ್ಯವನ್ನು ಕೊಟ್ಟಾಗಮಾತ್ರ ಈ ಬಯಕೆಗಳ ಸ್ವರೂಪವನ್ನು ಅನಾವರಣಗೊಳಿಸಲು ಸಾಧ್ಯವಾಯಿತು ಎಂಬ ಪ್ರಶ್ನೆಯೂ ಈ ಕಥೆಗಳಲ್ಲಿ ಮೂಡುತ್ತದೆ.

ಆಲನಹಳ್ಳಿಯವರು ಗಂಡು-ಹೆಣ್ಣುಗಳ ಸಂಬಂಧದಲ್ಲಿ ಈಗಾಗಲೇ ನಿರ್ಮಿತಗೊಂಡಿರುವ ಗೋಡೆಯನ್ನು ಉರುಳಿಸುತ್ತಾರೆ. ತಮ್ಮದೇ ಆದ ಮತ್ತೊಂದು ಬಿಗಿಯಾದ ಗೋಡೆಯನ್ನು ನಿರ್ಮಿಸಿಕೊಳ್ಳುವತ್ತ ಗಮನವನ್ನು ಕೇಂದ್ರೀಕರಿಸುತ್ತಾ ಈ ಸಂಬಂಧಗಳ ನೆಲೆಯಿಂದ ಯಾವುದೇ ಸಾಮಾಜಿಕ ಗುರಿಯನ್ನು ಸಾಧಿತವಾಗದೇ ವೈಯಕ್ತಿಕ ಅನುಭವಗಳ ಅನಾವರಣವೇ ಸಾಧಿತವಾಗುವ ಗುರಿಯಾಗುತ್ತದೆ. ಸಮಾಜದಲ್ಲಿರುವ ವ್ಯಕ್ತಿಗಳ ಚಹರೆಗಳನ್ನು ಸಮರ್ಥವಾಗಿ ಕೊಡಲು ಈ ಕಥೆಗಳು ನಿಷ್ಫಲವಾಗುತ್ತವೆ. ಕತೆಗಳಲ್ಲಿ ಕಾಮದ ಪರಿಕಲ್ಪನೆಗಳು ಗಂಡುಹೆಣ್ಣು ಸಂಬಂಧಗಳಲ್ಲಿ ಮುಂದಿನ ಪೀಳಿಗೆಯ ಅಥವಾ ತಮ್ಮ ವಂಶಪಾರಂಪರ್ಯದ ಮುಂದುವರಿಕೆಗೆ ಗಮನಕೊಡದೇ ಕ್ಷಣಿಕಸುಖ, ದೇಹದ ಲಾಲಸೆ, ಅತೃಪ್ತ ಬಯಕೆಗಳ ಈಡೇರಿಕೆಗಾಗಿ ಕಾಮ ಸೀಮಿತವಾಗುವುದು ದುರದೃಷ್ಟಕರವಾಗಿದೆ.

ಆಲನಹಳ್ಳಿಯವರ ಕಥೆಗಳಲ್ಲಿ ಗಂಡು-ಹೆಣ್ಣಿನ ಸಂಬಂಧಗಳಲ್ಲಿ ವೈವಾಹಿಕ ಸಂಬಂಧಗಳ ಗ್ರಹಿಕೆಯು ಮುಖ್ಯವಾದುದು ಮದುವೆ ಘಟ್ಟವು ಮನುಷ್ಯನ ಬದುಕಿನಲ್ಲಿ ಬಹಳ ಪ್ರಮುಖ ಪಾತ್ರವಹಿಸುತ್ತದೆ. ಹೆಣ್ಣು-ಗಂಡುಗಳು ತಮ್ಮ ಜೀವನದಲ್ಲಿ ಒಂದೇ ಬಾರಿ ಮದುವೆಯ ಘಟ್ಟಕ್ಕೆ ಪ್ರವೇಶಿಸಲು ಸಾಧ್ಯ. ಭಾರತೀಯ ಸಮಾಜದಲ್ಲಿ ಇಂತಹ ಅನೇಕ ಕಟ್ಟುಪಾಡುಗಳು ಚೌಕಟ್ಟುಗಳನ್ನು ಕಾಣಬಹುದು. ಅನಾದಿಕಾಲದಿಂದಲೂ ಗಂಡು-ಹೆಣ್ಣುಗಳ ದೈಹಿಕ

---

೨೯. ಪಿ. ಲಂಕೇಶ್, 'ಟೀಕೆ ಟಿಪ್ಪಣಿ-೨', ಪು. ೩೦೨, ೧೯೯೮.

ಸಂಬಂಧಗಳಿಗೆ ಮದುವೆ ಎಂಬ ಚೌಕಟ್ಟನ್ನು ಹಾಕಿಕೊಟ್ಟು ಅದರಲ್ಲಿಯೇ ಮನುಷ್ಯನು ಸಹ ನೆಮ್ಮದಿಗಳನ್ನು ಕಾಣಲು ಅನುವು ಮಾಡಿಕೊಟ್ಟಿದೆ.

ಆಲನಹಳ್ಳಿಯವರ ಕಥೆಗಳಲ್ಲಿ ಮತ್ತು ಕಾದಂಬರಿಗಳಲ್ಲಿ ನಾವು ವೈವಾಹಿಕ ಸಂಬಂಧಗಳ ಮಾದರಿಗಳನ್ನು ಕಾಣಬಹುದು. ಆಧುನಿಕತೆಯ ಪ್ರಭಾವದಿಂದ ಭಾರತೀಯ ಸಮಾಜದಲ್ಲಿ ಕಂಡ ಪರಿಣಾಮಗಳನ್ನು ಕುಟುಂಬ ಹಾಗೂ ಮನುಷ್ಯನ ವೈವಾಹಿಕ ಬದುಕಿನ ಪಲ್ಲಟಗಳನ್ನು ಗುರುತಿಸಲು ಸಾಧ್ಯ. ಈ ಪಲ್ಲಟಗಳ ಸ್ವರೂಪಗಳನ್ನು ವಿಷಮ ವೈವಾಹಿಕ ಸಂಬಂಧಗಳಲ್ಲಿ ವಿವಾಹಬಾಹಿರ ಸಂಬಂಧಗಳನ್ನೂ ಹೊಂದುವಂತೆ ಮನುಷ್ಯನನ್ನು ಪ್ರೇರೇಪಿಸುವಿಕೆಯನ್ನು ಸಮರ್ಥವಾಗಿ ಚಿತ್ರಿಸಿದ್ದಾರೆ. ಒಂದು ಕುತೂಹಲದ ಅಂಶವೆಂದರೆ ಆಲನಹಳ್ಳಿ ಎಲ್ಲ ಕಥೆಗಳಲ್ಲೂ ಹೆಣ್ಣು-ಗಂಡುಗಳ ಸುತ್ತ ಇರುವ ಪ್ರೇಮ, ಕಾಮ, ಮದುವೆ ಇವುಗಳ ಸುತ್ತಲೇ ಕಟ್ಟಿಕೊಳ್ಳುತ್ತದೆ. ಈ ಎಲ್ಲ ಕಥೆಗಳಲ್ಲಿ ಮದುವೆ ಒಂದು ಕ್ರೈಸಿಸ್ ಆಗಿದೆ. ನಾಯಕನನ್ನು ತಪ್ತ ಸ್ಥಿತಿಗೆ ದೂಡಿದೆ. 'ತೊರೆ' ಕಥೆಯ ಲಕ್ಷ್ಮಿ ಪ್ರಭು ಪರಸ್ಪರ ಇಷ್ಟಪಟ್ಟು ಮದುವೆಯಾಗದೇ ಹೋಗುತ್ತಾರೆ. ಗಂಡ ತೀರ ಹೋದಲಕ್ಷ್ಮಿ ಉರಿಯುತ್ತ ಉಳಿದರೆ ತಾರಾಳೊಂದಿಗೆ ಪ್ರಭು ಇನ್ನೊಂದು ರೀತಿ ಉರಿಯುತ್ತ ಉಳಿಯುತ್ತಾನೆ. 'ಸೀಮಂತ'ದ ಪದ್ಮಳಿಗೆ ಮದುವೆಯಲ್ಲಿ ಫಲವಿಲ್ಲ. ಮದುವೆಯಾಚೆಗಿನ ಸಂಬಂಧದಲ್ಲಿ ಶ್ರೀಧರನಿಂದ ಫಲವತಿಯಾದ ಅವಳ ಮನಸ್ಸಿನಲ್ಲಿ ಅನೈತಿಕತೆಯ ಮುಳ್ಳು ಸತತ ಚುಚ್ಚುತ್ತಲೇ ಇರುತ್ತದೆ. 'ಸಂಬಂಧ' ಕಥೆಯ ಲಲಿತಳ ದುರಂತಮಯ ಬದುಕು ಅವಳನ್ನು ಮದುವೆಯ ಮೂಲಕವಾಗಿಯೇ ಆವರಿಸಿಕೊಂಡಿದ್ದು 'ಹುತ್ತ' ಕತೆಯ ಸುಮಿತ್ರಾಳ ತಾಯಿಯ ವಿಕ್ಷಿಪ್ತ ನಡವಳಿಕೆಗಳಿಂದ ನಿಷ್ಫಲಗೊಂಡ ಮದುವೆಯೇ ಇದ್ದಿರಬೇಕು. 'ಶ್ರಾವಣ' ಕಥೆ ಕೂಡ ಈ ವಸ್ತುವನ್ನೇ ಹೊಂದಿದ್ದರೂ ಸ್ವಲ್ಪ ಬೇರೆಯಾಗಿದೆ. ಈ ದೇಹಕ್ಕೆ ಮನಸ್ಸಿಗೆ ಫಲಿಸುವ ಪ್ರೇಮ, ಸ್ವಲ್ಪ ತಡವಾಗಿಯಾದರೂ ಸರಿಯೇ ಶ್ರಾವಣದಂತೆ ಬರಬೇಕೆನ್ನುವುದು ಮದುವೆ ಅಂಥ ಶ್ರಾವಣವಾಗಬೇಕೆನ್ನುವುದು ಈ ಕಥೆಯ ಆಶಯವಾಗಿದೆ. ಈ ಶ್ರಾವಣ ಮಧ್ಯಮ ವರ್ಗೀಯ ನೀತಿಯ ಕಟ್ಟನ್ನು ಗಮನಿಸುವುದಿಲ್ಲ. ಇದು ಪರಸ್ಪರ ಅರಳಿಸುವ ಸಂಬಂಧ ಸ್ಥಾಪಿಸುತ್ತದೆ. ಮಧ್ಯವಯಸ್ಸನ್ನು ತಲುಪುತ್ತಿರುವ ಶಕುಂತಲೆ ಇಂಥ ಶ್ರಾವಣವನ್ನು ಸ್ವೀಕರಿಸಲು ಸನ್ನದ್ಧಳಾಗುತ್ತಾಳೆ.

ಆಲನಹಳ್ಳಿಯವರ ಸಮಗ್ರ ಕಥೆಗಳಲ್ಲಿ ನಾವು ವಿಷಮ ವೈವಾಹಿಕ ಬದುಕಿನಲ್ಲಿ ಕಾಣಿಸಿಕೊಂಡಿರುವ ಸಮಸ್ಯೆಗಳು ಮನುಷ್ಯನ ಅಸ್ವಸ್ಥತೆ ಮತ್ತು ಅವನ ಅಸ್ತಿತ್ವದ ಕಾಡುವಿಕೆಯೂ ಬಹಳ ಸಂಕೀರ್ಣತೆಯಿಂದ ಕೂಡಿದೆ. ತನ್ನ ಕಲ್ಪನೆಯ ವೈವಾಹಿಕ ಬದುಕನ್ನು ಬಯಸುವುದು ಇಲ್ಲಿನ ಸಮಾಜವು ನಿರಾಕರಿಸುತ್ತದೆ. ಮನುಷ್ಯನ ಜವಾಬ್ದಾರಿಗಳು ಅವನು ಕೈಗೊಳ್ಳುವ ತೀರ್ಮಾನಗಳು ಸಮಾಜಕ್ಕೆ ಪೂರಕವಾಗಿರಬೇಕು. ಅವನ ತೀರ್ಮಾನಗಳು ಇತರರಿಗೆ

ಸಂತೋಷವನ್ನುಂಟುಮಾಡಬೇಕು. ಅವನ ವೈಯಕ್ತಿಕ ಅಭಿಲಾಷೆಗಳಿಗೆ ಯಾವುದೇ ಬೆಲೆಯನ್ನು ಸಮಾಜ ನೀಡುವುದಿಲ್ಲ. ವೈವಾಹಿಕ ಬದುಕಿನಲ್ಲಿ ಗಂಡು–ಹೆಣ್ಣಿನ ಪಾತ್ರ ಸಮಾನ–ವಾಗಿರುವಂತಹುದು. ಗಂಡು–ಹೆಣ್ಣುಗಳು ಸುಖದುಃಖಗಳನ್ನು ಹಂಚಿಕೊಂಡು ಸಾಮರಸ್ಯದ ಜೀವನವನ್ನು ನಡೆಸಿದಾಗ ವೈವಾಹಿಕ ಬದುಕು ಯಶಸ್ವಿಯಾಗುತ್ತದೆ. ತನ್ನ ಕಲ್ಪಿತಕುಟುಂಬವನ್ನು ವಾಸ್ತವಿಕತೆಯಲ್ಲಿ ಕಟ್ಟಲು ಸಾಧ್ಯವಾಗದಿದ್ದಾಗ ಅವನು ಗೊಂದಲ ಮನುಷ್ಯನಾಗುತ್ತಾನೆ. ಯಾವುದೇ ನೈತಿಕ ತೀರ್ಮಾನಗಳನ್ನು ಅವನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಆಲನಹಳ್ಳಿಯವರ ಒಟ್ಟು ಬರಹದಲ್ಲಿ ಕಾಮದ ಪರಿಕಲ್ಪನೆ ಮತ್ತು ಮಾನಸಿಕ ಅಸ್ವಸ್ಥಗಳ ಗಮನ ಕೇಂದ್ರೀಕರಿಸಿದರು. ಇವುಗಳಿಗೆಲ್ಲ ವೈವಾಹಿಕ ಸಂಬಂಧಗಳಲ್ಲಿ ಕಾಣಿಸುವ ಬಿರುಕುಗಳ ಸ್ವರೂಪದಿಂದ ಮನುಷ್ಯನು ಅಸಹಾಯಕ ಸ್ಥಿತಿಯನ್ನು ಅನುಭವಿಸಲು ಕಾರಣ.

ವೈವಾಹಿಕ ಸಂಬಂಧಗಳ ಬಿರುಕಿಗೆ ಮನುಷ್ಯನ ದೌರ್ಬಲ್ಯಗಳೇ ಕಾರಣವಾಗಿರುವುದನ್ನು ಈ ಕಥೆಗಳಲ್ಲಿ ಕಾಣುತ್ತೇವೆ. ತನ್ನ ಮನಸ್ಸನ್ನು ಸ್ಥಿಮಿತಕ್ಕೆ ತಂದುಕೊಳ್ಳಲು ಅವನಿಂದ ಸಾಧ್ಯವಾಗದಿರುವುದು. ಮನಸ್ಸಿನ ಚಂಚಲತೆಯೂ ಪ್ರಪಂಚದ ಇತರೆ ಆಕರ್ಷಣೆಗಳಲ್ಲಿ ಅವನು ಸದಾ ಮನಸ್ಸು ಸೆಳೆಯುತ್ತಿರುತ್ತದೆ. ಇವುಗಳ ನಗರೀಕರಣದ ಪರಿಣಾಮ, ಕೈಗಾರೀಕರಣದ ಪರಿಣಾಮ ವಸಾಹತು ಬಂಡವಾಳಶಾಹಿಗಳ ಪರಿಣಾಮಗಳಾಗಿಯೂ ಪರಿಗಣನೆಗೆ ತಂದುಕೊಳ್ಳಬಹುದು. ಮನುಷ್ಯನ ಬದುಕಿನಲ್ಲಿ ಆಧುನಿಕತೆ ಪ್ರವೇಶಿಸಿದಂತೆಲ್ಲ ತನ್ನಜೀವನದ ಚೌಕಟ್ಟುಗಳನ್ನು ಪ್ರಶ್ನಿಸಲು ಪ್ರಾರಂಭಿಸುತ್ತಾನೆ. ವಿದ್ಯಾವಂತ, ವಿಚಾರವಂತನಾದ ನಾನು ನನ್ನ ಮನಃಸ್ಥಿತಿಗೆ ಹೊಂದುವಂತಹ ಸಂಗಾತಿಯನ್ನು ಆರಿಸಿಕೊಳ್ಳುವುದು ಸಮಾಜಕ್ಕೆ ದ್ರೋಹಮಾಡಿದಂತೆಯೇ ಎಂದು ಇಲ್ಲಿನ ಕಟ್ಟುಪಾಡುಗಳಿಗೆ ಬೇಸರ ತಿರಸ್ಕಾರವನ್ನು ವ್ಯಕ್ತಪಡಿಸುತ್ತಾನೆ. ತನ್ನ ಬದುಕಿನ ತೀರ್ಮಾನಗಳನ್ನು ಅವನು ತೆಗೆದುಕೊಳ್ಳಲು ಅವನನ್ನು ಸಮರ್ಥನಾಗದೆ ಅವನ ಮನಸ್ಸು ಸಂಕ್ರಮಣ ಸ್ಥಿತಿಯಲ್ಲಿರುವುದನ್ನು ಪ್ರತಿಬಿಂಬಿಸುತ್ತದೆ.

ವೈವಾಹಿಕ ಸಂಬಂಧಗಳಲ್ಲಿ ಹೆಣ್ಣು–ಗಂಡುಗಳ ನಿಷ್ಠೆಯನ್ನು ಇಲ್ಲಿ ಗಮನಿಸಬಹುದು. ಹೆಣ್ಣು ತನ್ನ ದಾಂಪತ್ಯ ನೀತಿಯನ್ನು ಯಾವ ರೀತಿ ಉಲ್ಲಂಘಿಸುವುದಿಲ್ಲವೋ ಹಾಗೆಯೇ ಗಂಡು ಉಲ್ಲಂಘಿಸಬಾರದು. ನೀತಿಯ ಉಲ್ಲಂಘನೆಯಿಂದ ಮನುಷ್ಯನು ಪ್ರಜ್ಞೆಗಳ ಸುಳಿಯಲ್ಲಿ ಸಿಕ್ಕಿಕೊಂಡು ತನ್ನ ಮಾನಸಿಕ ಶಾಂತಿಯನ್ನು ಕಳೆದುಕೊಂಡು ತೊಳಲಾಡುತ್ತಿರುತ್ತಾರೆ. 'ಸ್ಪರ್ಶಕ್ಕೆ ಭೂಮಿಯ ಗಂಧಕ್ಕೆ ಬಿಸಿಯಾದ ಮೈ ಅರಳುತ್ತದೆ. ಭಾವನೆಗಳು ಉತ್ಕಟವಾಗುತ್ತದೆ. ತಪ್ಪುಮಾಡುತ್ತಿರುವಂತೆ ಕೈಯಾಕೋ ನಡುಗುತ್ತದೆ. ಬಿಸಿಮುಟ್ಟಿದ ಕೈಯಾಕೋ ನನ್ನದಲ್ಲ ಅನ್ನಿಸಿ ತಟ್ಟನೆ ಅಲ್ಲಿಂದೆತ್ತುಕೊಂಡುಬಿಡುತ್ತೇನೆ. ನಗುತ್ತಾಳೆ ಬಿಕ್ಕಿ ಬಿಕ್ಕಿ ನಗುತ್ತಾಳೆ. ಬಡಬಡಿಸುತ್ತೇನೆ.

ನನ್ನ ಹತ್ತಿರ ತೀರ ಹತ್ತಿರ ಮೈಗೆ ಮೈ ಹೀಗಿದ್ದೂ ಇವಳನ್ನು ಮುಟ್ಟಲಿಲ್ಲ ಅನ್ನಿಸಿ ಹಲಬುತ್ತೇನೆ. ನನ್ನ ಕಿರುಕುಳ ಇವಳಿಗಿಲ್ಲ. ಸುಖದ ಹಾಡುಗಳ ಗುಣುಗುತ್ತಾಳೆ. ಆ ಅಲೆಯಲ್ಲಿ ತೇಲುತ್ತಾಳೆ. ನೀರ ಬೆರಳುಗಳನ್ನು ಕೂದಲೊಳಗೆ ಆಡಿಸುತ್ತಾಳೆ. ಅವಳ ತುಂಬ ತೊಡೆಯ ಮೇಲಿಟ್ಟಿದ್ದ ಮುಖವನ್ನು ಕಿಬ್ಬೊಟ್ಟೆಯ ಬೆತ್ತಲಿಗೆ ಒತ್ತಿ ಮಾತುಬೇಡ. ಆ ಮಾತುಗಳೆಲ್ಲ ಸಾಯಲಿ. ಹೂ ನಗುವ ಗಿಡ ಹನಿಯೊಡೆವ ಮೋಡ ಮಾತಾಡುವುದಕ್ಕೆ ಮಾತಿಲ್ಲ. ಮಾತು ಬೇಕೂ ಇಲ್ಲ.' ಇವಳ ನನ್ನ ಸಂಬಂಧ ಬಿಚ್ಚಲಾಗದ್ದು ಬಿಚ್ಚುವ ತವಕ ನನಗೆ ಇವಳಿಗಿದು ಬೇಕ? ಇವಳಿಗೆ ಯಾವುದು ಸಾಧ್ಯ. ನನ್ನ ಹಾಗಲ್ಲ ಎಂದು ಉತ್ಕಟವಾಗುತ್ತಾಳೆ. ಮತ್ತೆ ಕ್ಷಣ ಅಷ್ಟೆ ಕರಗಿ ನೀರಾಗುತ್ತಾಳೆ. ಕಡೆಗೆ ಏನೂ ಆಗಿಲ್ಲವೆಂಬಂತೆ ಅದೇ ಜುಳಜುಳನೆ ಹರಿವ ಲವಲವಿಕೆ. ಇದರ ವಿರುದ್ಧ ನಾನು ಬರೀ ಸಿಕ್ಕು ಬಿಡಿಸಿಕೊಂಡಂತೆಲ್ಲ ಬರೀ ತೊಡಕು.

ನಿರೂಪಕ ಹಾಗೂ ಗೆಳತಿಯ ಸಂಬಂಧವು ಬಹಳ ವೈಚಿತ್ರದಿಂದ ಕೂಡಿದೆ. ಇಲ್ಲಿ ಇಬ್ಬರ ಅನೇಕ ವೈರುಧ್ಯಗಳನ್ನು ಎತ್ತಿತೋರಿಸುತ್ತದೆ. ನಿರೂಪಕನಿಗೆ ಪರಿಚಯವಾದ ಕಥಾನಾಯಕಿ ತನ್ನ ಸಂಬಂಧಿಕರಲ್ಲಿ ಒಬ್ಬಳನ್ನು ಅವನಿಗೆ ಪರಿಚಯಿಸುತ್ತಾಳೆ. ಇವರಿಬ್ಬರ ಪರಿಚಯ ಸ್ನೇಹವಾಗಿ ಪ್ರಣಯದ ಪರಾಕಾಷ್ಠೆಯನ್ನೂ ಕಂಡಿದೆ. ಆದರೆ ನಿರೂಪಕನಿಗೆ ಇದರಿಂದ ತೃಪ್ತಿಯಿಲ್ಲ. ಸುಲಭವಾಗಿ ಸಿಗುವುದರಲ್ಲಿ ಆಸಕ್ತಿ ಕಡಿಮೆ ಕಷ್ಟಪಟ್ಟರೂ ಕೈಗೆಟುಕುವುದಿಲ್ಲ ಎಂದು ತಿಳಿದಿದ್ದರೂ ಅದರ ಮೇಲೆಯೇ ಹೆಚ್ಚಿನ ಆಸಕ್ತಿಯನ್ನು ಕಾಣುವುದು ಮನುಷ್ಯನ ಸಹಜವಾದ ಧರ್ಮ. ಹಾಗೆಯೇ ನಿರೂಪಕನು ತನ್ನ ಗೆಳತಿಯನ್ನು ತನ್ನ ಅನುಭವಗಳಿಗೆ ಸ್ಫೂರ್ತಿಯನ್ನು ಕೊಡಲು ನಿನ್ನಿಂದ ಮಾತ್ರ ಸಾಧ್ಯವೆಂದು ತನ್ನ ಗೆಳತಿಯನ್ನು ಒಲಿಸಿಕೊಳ್ಳುವುದರಲ್ಲಿ ವ್ಯರ್ಥಪ್ರಯತ್ನ ಮಾಡುತ್ತಾನೆ. ಕಥೆಯ ಕೊನೆಯಲ್ಲಿ ನಾಯಕಿ ಪಾತ್ರಧಾರಿ ತನ್ನ ನಗ್ನರೂಪದಲ್ಲಿ ನಿಂತಾಗ ನಿರೂಪಕನ ಮನಃಸ್ಥಿತಿಯೂ ನಾನು ಹುಡುಕುತ್ತಿದ್ದ ಇವಳನ್ನು ಕಾಡುತ್ತಿದ್ದ ಇದಕ್ಕಾಗಿಯೇ ಎಂಬ ಪ್ರಶ್ನೆಯ ಮೂಲಕ್ಕೆ ಶರಣಾಗುತ್ತಾನೆ.

ವಿವಾಹದ ಚೌಕಟ್ಟನ್ನು ತಿರಸ್ಕರಿಸುವ ನಾಯಕನಾಯಕಿಯರಲ್ಲಿ ಅದರ ಬಳಕೆಗಳ ತೃಪ್ತಿಗಾಗಿ ವಿವಾಹಬಾಹಿರ ಸಂಬಂಧಗಳನ್ನು ಶೋಧಿಸಲು ಆರಂಭಿಸುತ್ತಾರೆ. ಇಂತಹ ಸಂಬಂಧಗಳಲ್ಲಿ ಅವರಿಬ್ಬರ ಮನಃಸ್ಥಿತಿಗಳನ್ನು ತಮ್ಮದೇ ವಿಶಿಷ್ಟ ಭಾಷಾಶೈಲಿಯಿಂದ ಕಟ್ಟಿಕೊಡುವಿಕೆ ಆಲನಹಳ್ಳಿಯವರಲ್ಲಿ ಸಹಜವಾಗಿ ಮೈಗೂಡಿರುವುದನ್ನು ಇಲ್ಲಿ ಕಾಣಬಹುದು. ಇಲ್ಲಿ ಹೆಣ್ಣು-ಗಂಡುಗಳ ಮನಸ್ಸುಗಳಷ್ಟೇ ದೇಹಗಳು ಪ್ರಾಮುಖ್ಯತೆ ಪಡೆದುಕೊಳ್ಳುತ್ತವೆ. ವಿವಾಹಬಾಹಿರ ಸಂಬಂಧಗಳಲ್ಲಿ ಬದುಕಿನ ಹುಡುಕುವಿಕೆಯನ್ನು ಕಂಡುಕೊಳ್ಳಲು ಪ್ರಯತ್ನಿಸುವುದು. ಇಲ್ಲಿ ಸಮಾಜ, ಕುಟುಂಬ ಯಾವುದೇ ಅಡ್ಡಿಆತಂಕಗಳಿರದೇ ಮನುಷ್ಯನ ವೈಯಕ್ತಿಕ ಬಯಕೆಗಳ ತೃಪ್ತಿಯೂ ಸ್ವಚ್ಛಂದವಾಗಿ ತನ್ನ ಗುರಿಯನ್ನು ಸಾಧಿಸಿಕೊಳ್ಳುತ್ತದೆ.

'ಅಂಟದನಂಟಿನ ಕೊನೆಬಲ್ಲವರಾರು' ಕಥೆಯಲ್ಲಿ ವಿವಾಹಬಾಹಿರ ಸಂಬಂಧದ ನೆಲೆಯೇ ಪ್ರಧಾನವಾಗಿದೆ. ಇಲ್ಲಿನ ನಾಯಕಿ ಶಾಲಿನಿ ಈ ಸಂಬಂಧವನ್ನು ಎಷ್ಟು ಸಹಜವಾಗಿ ಸ್ವೀಕರಿಸುತ್ತಾಳೆ ಎಂದರೆ ಆಧುನಿಕತೆಯನ್ನು ದಂಗುಬಡಿಸುವಂತಿರುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಭಾರತೀಯ ಸಂಪ್ರದಾಯವನ್ನು ತಿರಸ್ಕರಿಸುವ ಇವಳು ಪಾಶ್ಚಾತ್ಯ ಸಂಸ್ಕೃತಿಯ ಪ್ರಬಲವಾದ ಪ್ರಭಾವಕ್ಕೆ ಒಳಗಾದವಳು. ಕಥಾನಾಯಕನೊಂದಿಗೆ ದೇಹಸಂಬಂಧವನ್ನು ಹೊಂದಿರುವ ಅವಳಿಗೆ ತನ್ನ ತಪ್ಪು ಕಾಣಿಸುವುದಿಲ್ಲ. ಈ ಕಥೆಯಲ್ಲಿ ನಾಯಕನ ಎಲ್ಲ ಗುಣಗಳಿಗೂ ಶಾಲಿನಿಪೂರಕವಾಗಿಯೇ ನಿಲ್ಲುತ್ತಾಳೆ. ನಾಯಕ ಅವಳಿಗೆ ಚಿಕನ್ ತಿನ್ನಿಸುವಾಗಲೂ ಅದಕ್ಕೆ ಪ್ರತಿರೋಧ ವ್ಯಕ್ತಪಡಿಸದೇ ಸ್ವೀಕರಿಸುತ್ತಾಳೆ. ಭಾರತದಲ್ಲಿ ಹೆಣ್ಣಿನ ಲಿಬರಲ್ ಮನೋಧರ್ಮ ಯಾವ ರೀತಿ ಎನ್ನುವುದನ್ನು ಇಲ್ಲಿ ಸೂಕ್ಷ್ಮವಾಗಿ ತಿಳಿಯಬಹುದು. "ಏನೋ ಭಯಪಡೋದು ಬೇಡ ಅನಾಹುತ ಏನೂ ಆಗಿಲ್ಲ. ತನ್ನದೇ ತಪ್ಪು ಆಗೋದನ್ನು ತಪ್ಪಿಸಿಕೊಳ್ಳೋ ವಿಧಾನ ಎಲ್ಲಾ ಗೊತ್ತಿದ್ದೂ ಮರೆತು ಕೂತೆ. ನಾನು ನಾಳೇನೇ ಪೂನಾಕ್ಕೆ ಹೋಗ್ತೀನಿ. ಅಲ್ಲಿ ನನ್ನ ಅಕ್ಕ ಇದ್ದಾಳೆ ಅವಳಿಗಾಗಲೇ ಇದನ್ನೆಲ್ಲಾ ಬರೆದು ತಿಳಿಸಿದ್ದೇನೆ ಬಾ ಅಂದಿದ್ದಾಳೆ. ನಿನಗೆ ಹೇಳದೆ ಹೋಗಬೇಕಲ್ಲ ಅಂತ ಟೆಲಿಗ್ರಾಂ ಮಾಡಿದೆ. ಶಾಲಿನಿಗೆ ಅಬಾರ್ಷನ್ ಅಂದ ಅಷ್ಟೆ ಕಷ್ಟ ಅನ್ನೋದು ಗೊತ್ತಿದ್ರೆ ಇಷ್ಟು ಸಲೀಸಾಗಿ ಮಾತಾಡ್ತಾ ಇರಲಿಲ್ಲ ಅನ್ನಿಸಿತು. ಅವಳಿಗೆ ಅದರ ಕಷ್ಟವನ್ನು ನನ್ನಿಂದಾಗಿ ಅವಳು ಅನುಭವಿಸಬೇಕಾಗಿರುವುದನ್ನು ಹೇಳಿ ನಾನೊಬ್ಬ ಮೂರ್ಖ ಅಂದೆ. ಶಾಲಿನಿ ನಗುತ್ತ ಅಲ್ಲಿ ಅಷ್ಟೆಲ್ಲ ಸುಖ ಪಡೆದು ಒಂದಿಷ್ಟು ಕಷ್ಟ ಅನುಭವಿಸ್ದೆ ಹೋದ್ರೆ........ ಇದು ಒಂದು ಥರ ಅನುಭವಬಿಡಿ. ಅದಕ್ಕೆ ನಿಮಗ್ಯಾಕಿಷ್ಟು ದುಃಖ ಎಂದು ನನ್ನನ್ನು ಸಂತೈಸಿದಳು......"[೩೦]

ಇಲ್ಲಿನ ಸಂಬಂಧಗಳಲ್ಲಿ ಹೆಣ್ಣು ಯಾವ ರೀತಿ ತನ್ನ ಲಿಬರಲ್ ಮನೋಧರ್ಮದಿಂದ ಪರಿಸ್ಥಿತಿಗಳನ್ನು ಎದುರಿಸುತ್ತಿದ್ದಾಳೆ. ಅವಳಲ್ಲಿ ಪಾಪಪ್ರಜ್ಞೆಯೇ ಇಲ್ಲದಿರುವುದು 'ಸೀಮಂತ' ಕಥೆಯ ಪದ್ಮ ಅನುಭವಿಸಿದ ಆಳವಾದ ಪಾಪಪ್ರಜ್ಞೆ ಭಾರತೀಯ ಸಮಾಜದಲ್ಲಿ ಹೆಣ್ಣಿನ ಮನಸ್ಥಿತಿಗಳು ಕಾಲಕ್ಕೆ ತಕ್ಕಂತೆ ಪಲ್ಲಟಗೊಳ್ಳುತ್ತಿರುವುದನ್ನು ಕಾಣಬಹುದು. ಆಲನಹಳ್ಳಿಯವರ ಉಳಿದ ಕಥೆಗಳಲ್ಲಿ ಬರುವ ಪದ್ಮ, ಗೌರಿ, ಲಕ್ಷ್ಮೀ, ಲಲಿತ ಈ ಸ್ತ್ರೀಪಾತ್ರಗಳು ಹೆಣ್ಣಿನ ಪ್ರಬುದ್ಧತೆಯೊಂದಿಗೆ ವಾಸ್ತವಿಕ ಸತ್ಯಗಳನ್ನು ಕಟ್ಟಿಕೊಡುತ್ತಿರುವುದು ಒಂದು ಮುಖದ ಪರಿಚಯವನ್ನು ಸಮರ್ಥವಾಗಿ ಬಿಂಬಿಸುತ್ತಿದೆ. 'ಶಾಲಿನಿ', 'ಪಲ್ಲವಿ', 'ಫೀನಿಕ್ಸ್' ಕಥೆಯ ನಾಯಕಿ ರಷ್ಯನ್ ಮಹಿಳೆ ಇವರಲ್ಲಿ ಸ್ತ್ರೀಯ ಇನ್ನೊಂದು ಮುಖದ ಪರಿಚಯವನ್ನು ಕಟ್ಟಿಕೊಡುತ್ತಿದ್ದಾಳೆ. ಒಂದು ಕಾಲದ ಹೆಣ್ಣು ಕಾಮದ ಬಗ್ಗೆ ಬಯಕೆಗಳ ಬಗ್ಗೆ ಯೋಚಿಸಲು ಸಾಧ್ಯವಾಗುವುದಿಲ್ಲ.

---

೩೦. ಆಲನಹಳ್ಳಿ ಕೃಷ್ಣ, 'ಸಮಗ್ರ ಕಥೆಗಳು', ಪುಟ. ೧೦೩, ೧೯೮೬.

ಆದರೆ ಇನ್ನೊಂದು ಕಾಲದ ಹೆಣ್ಣಿನಲ್ಲಿ ತನ್ನ ಸ್ವಾರ್ಥದ ಕಡೆಗೆ ಹೆಚ್ಚಿನ ಗಮನಕೊಡುವುದನ್ನು ನೋಡಬಹುದು. ಗಂಡು-ಹೆಣ್ಣುಗಳ ಸಮಾಜದಿಂದ ರೂಪಿಸಲ್ಪಟ್ಟವರು ಆ ಚೌಕಟ್ಟನ್ನು ಮೀರಲು ಅವರಿಂದ ಸಾಧ್ಯವಿಲ್ಲ. ಆಲನಹಳ್ಳಿ ಕಥೆಗಳ ಹೆಣ್ಣು-ಗಂಡುಗಳಲ್ಲಿ ವೈಯಕ್ತಿಕ ನಿಯಮ, ಮೌಲ್ಯಗಳಿಗೆ ಒತ್ತುಕೊಟ್ಟು ಚೌಕಟ್ಟನ್ನು ಮೀರಲು ಅವರಲ್ಲಿ ಯಾವುದೇ ಸಮಸ್ಯೆಯಾಗಿ ಪರಿಣಮಿಸಿಲ್ಲ.

ಇಂದಿನ ಆಧುನಿಕ ಸಮಾಜದಲ್ಲಿ ಮೌಲ್ಯಗಳು ಕೆಲವರ ಪಾಲಾಗಿದ್ದು ಎಲ್ಲ ಕಡೆಯಲ್ಲೂ ಮೌಲ್ಯಾಧಾರಿತ ಎಂಬುದು ನಗೆಪಾಟಲಾಗಿದೆ. ಸಮಾಜದಲ್ಲಿರುವ ಇಂತಹ ಸಂಬಂಧಗಳನ್ನು ಒಪ್ಪಿಕೊಳ್ಳುವಂತಹ ಮನೋಧರ್ಮ ಮನುಷ್ಯರಲ್ಲಿ ಕಾಣುವುದು ಕಷ್ಟ. ಆದರೆ ತಾವು ತಮ್ಮ ವೈಯಕ್ತಿಕ ಜೀವನದಲ್ಲಿ ಅನುಭವಿಸಿದ ಎಲ್ಲ ಅನುಭವಗಳನ್ನು ಹೇಳಿಕೊಳ್ಳುವಂತಹ ಎದೆಗಾರಿಕೆ ಇರುವುದು ಅವನು ನಿಜವಾದ ಒಬ್ಬ ನಿಷ್ಠಾವಂತ ಮನುಷ್ಯ ಎನಿಸಿಕೊಳ್ಳುತ್ತಾನೆ. ಆದರೂ ಅವನ ದೌರ್ಬಲ್ಯಗಳು ಮನುಷ್ಯನನ್ನು ಎಂತಹ ಸಂದಿಗ್ಧ ಸಂಕೀರ್ಣಾವಸ್ಥೆಗೆ ತಳ್ಳುತ್ತದೆ ಎಂಬುದನ್ನು ಆಲನಹಳ್ಳಿಯವರು ಸೂಕ್ಷ್ಮವಾಗಿ ತಿಳಿಸುತ್ತಾರೆ.

೪.೩. ಕುಟುಂಬ ಮತ್ತು ವಿಷಮದಾಂಪತ್ಯ

ಆಲನಹಳ್ಳಿಯವರ ಕಾದಂಬರಿಗಳಲ್ಲಿ ಕೌಟುಂಬಿಕ ಚಿತ್ರಣ ಊರು, ನಗರಗಳಲ್ಲಿ ಬದುಕಿನ ಚಿಂತನೆಗಳು ವಿಷಮದಾಂಪತ್ಯಗಳು ಮೇಳೈಸಿಕೊಂಡು ಬರುವುದನ್ನು ಕಾಣಬಹುದು. 'ಕಾಡು' ಕಾದಂಬರಿಯಲ್ಲಿ ಅತ್ತೆ ಕಮಲಮ್ಮಳು ತನ್ನ ಸಾಕುಮಗ ಕಿಟ್ಟಿಯನ್ನು ಪ್ರಾಣಕ್ಕಿಂತ ಹೆಚ್ಚಾಗಿ ನೋಡಿಕೊಳ್ಳುತ್ತಾಳೆ. ಕಿಟ್ಟಿಯು ತನ್ನ ಸ್ವಂತ ಮಗನೆಂದು ಭಾವಿಸಿರುತ್ತಾಳೆ. ತನ್ನ ನೋವನ್ನೆಲ್ಲಾ ಕಿಟ್ಟಿಯ ಪ್ರೀತಿಯ ಮರೆಯಲ್ಲಿ ಮರೆಯುತ್ತಾಳೆ. ಕಿಟ್ಟಿಗೆ ಎಲ್ಲಾ ಅನ್ಯಾಯಗಳನ್ನು ತಿಳಿದುಕೊಳ್ಳಬೇಕೆಂಬ ಕುತೂಹಲದಿಂದ ತಾನು ಯಾವಾಗ ದೊಡ್ಡವನಾಗುತ್ತೇನೋ ಎಂದು ಹಂಬಲಿಸುತ್ತಾನೆ. ತನ್ನ ಅತ್ತೆಗೆ ಆಗುತ್ತಿರುವ ಅನ್ಯಾಯದ ವಿರುದ್ಧ ತಿರುಗಿ ಬೀಳುವ ಮನಸ್ಸಿದ್ದರೂ ಕೂಡ ತಾನು ಏನೂ ಮಾಡಲಾಗದ ಸ್ಥಿತಿಯಲ್ಲಿರುತ್ತಾನೆ. ಕಾರಣ ಕಿಟ್ಟಿ ಚಿಕ್ಕ ಹುಡುಗ. ಚಂದ್ರಯ್ಯಗೌಡರು ಊರಿನ ನ್ಯಾಯಾಧೀಶರಾಗಿರುತ್ತಾರೆ. ಪಂಚಾಯಿತಿಯಲ್ಲಿ ನ್ಯಾಯ ಹೇಳುವ ಚಂದ್ರಯ್ಯಗೌಡರು ತಾವೇ ತಪ್ಪನ್ನು ಮಾಡಿರುತ್ತಾರೆ. ಈ ಕಾದಂಬರಿಯಲ್ಲಿ ಸ್ಥಾಯಿಯಾದ ಕ್ರೌರ್ಯ ಅನೇಕ ವಿಧದಲ್ಲಿ ಕಾಣಿಸಿಕೊಳ್ಳುತ್ತದೆ. ಭೂಮಿಯ ನೆವದಿಂದ ಹುಟ್ಟಿಕೊಂಡ ಕೊಪ್ಪದ ಚಂದ್ರೇಗೌಡ ಮತ್ತು ಹೊಸೂರಿನ ಶಿವಗಂಗ ಇವರ ನಡುವಿನ ದ್ವೇಷ, ಕೆಂಚ ಮತ್ತು ದೇವಿಯರ ಪ್ರಸಂಗದಿಂದಾಗಿ ಉಲ್ಬಣಗೊಳ್ಳುತ್ತದೆ. ಚಂದ್ರೇಗೌಡ ಊರಲ್ಲಿಲ್ಲದಾಗ ಶಿವಗಂಗ ಅವನ ರಾಗಿ ಮೆದೆಗಳಿಗೆ ಬೆಂಕಿ ಹಿಡುತ್ತಾನೆ. ಹೊಸೂರು ಓಕಲಿಯ ಸಂದರ್ಭದಲ್ಲಿ ನಡೆದ ಬಡಿದಾಟದಲ್ಲಿ ಚಂದ್ರೇಗೌಡ ಗಾಯಗೊಳ್ಳುತ್ತಾನೆ. ಪೊಲೀಸರು ಚಂದ್ರೇಗೌಡನನ್ನು

ಕೋಟೆಗೆ ಕರೆದೊಯ್ದಾಗ ಅವನ ಹೆಂಡತಿ ಕಮಲಮ್ಮಳ ಮೇಲೆ ಅತ್ಯಾಚಾರ ನಡೆಯುತ್ತದೆ. ಈ ಮೂಲ ಕತೆಗೆ ಸಂಬಂಧಿಸಿದಂತೆ ಕಮಲಮ್ಮನ ನಿರಂತರ ಯಾತನೆ, ಕೆಂಚನ ದೈಹಿಕ ಶಿಕ್ಷೆ, ಕಲ್ಯಾಣಿ ತನ್ನ ಅತ್ತೆಯ ಮನೆಯಲ್ಲಿ ಅನುಭವಿಸುವ ನೋವು ಸಾವಿತ್ರಮ್ಮನ ಆತ್ಮಹತ್ಯೆ ಇಂಥ ಸಾವು–ನೋವಿನ ಅಂಶಗಳು ಕಾದಂಬರಿಯಲ್ಲಿ ಬರುತ್ತವೆ. 'ಕಾಡು' ಕಾದಂಬರಿಯಲ್ಲಿ ಕಿಟ್ಟಿ ಪ್ರಮುಖ ಪಾತ್ರಧಾರಿಯಾಗಿರುತ್ತಾನೆ. ಮನೆಯ ತುಂಬಾ ಸಡಗರವಿರುತ್ತದೆ. ಸಿದ್ಧತೆ ನಡೆಯುತ್ತಿರುವುದನ್ನು ಕಂಡು ಕಿಟ್ಟಿಗೆ ತುಂಬಾ ಖುಷಿಯಾಗಿರುತ್ತದೆ. ಬಾಗಿಲು ಕಂಬಿಗಳಿಗೆಲ್ಲ ನೀಲಿ ಬಣ್ಣ ಹಚ್ಚಿರುತ್ತಾರೆ. ಕಿಟ್ಟಿ ಬಾಗಿಲು ಮುಟ್ಟಿ ನೋಡುತ್ತಾನೆ. ಇನ್ನೂ ಬಣ್ಣ ಚೆನ್ನಾಗಿ ಒಣಗಿರುವುದಿಲ್ಲ. ಬಣ್ಣ ಕೈಗಂಟಿಕೊಂಡಿರುತ್ತದೆ. ಮನೆಯೊಳಗೆ ಕಾಲಿಟ್ಟ ತಕ್ಷಣ ಗೋಡೆಗಳಿಗೆಲ್ಲಾ ಬಳಿದಿದ್ದ ಸುಣ್ಣದ ವಾಸನೆ ರಪ್ಪನೆ ಮೂಗಿಗೆ ಬಡಿಯುತ್ತದೆ.

ಅಂಗಳದಲ್ಲಿ ಕಲ್ಲು ಚಪ್ಪಡಿಗಳ ಸಂದಿಗೆ ಸಿಳ್ಳ ಮರುಳುಬಿಡುತ್ತಾ ಕುಳಿತಿದ್ದ ಹಜಾರವನ್ನೆಲ್ಲಾ ತೊಳೆದು ಅಕ್ಕಿ ಹಿಟ್ಟಿನ ರಂಗೋಲೆ ಬರೆಯುತ್ತ ಕೂತಿದ್ದ. ಅತ್ತೆಯ ಹತ್ತಿರ ಹೋಗುತ್ತಿದ್ದ ಹಾಗೆ ತುಳಿಬ್ಯಾಡ ಕಿಟ್ಟಿ, ವಸಿ ತಡಿ ಬಂದೆ ಎಂದು ನುಗ್ಗುತ್ತಿದ್ದ ಕಿಟ್ಟಿಯನ್ನು ತಡೆದರು. ಹೀಗೆ ಈ ಕಾದಂಬರಿಯಲ್ಲಿ ಹಳ್ಳಿಯ ಸೊಗಡನ್ನು ಕಾಣಬಹುದು. ಇಲ್ಲಿ ಬಳಸಿರುವ ಭಾಷೆಯನ್ನು ಗಮನಿಸಬಹುದು. ಕಿಟ್ಟಿ ಸ್ಕೂಲಿಂದ ಬರುವಾಗ ಪಟಾಕಿಯನ್ನು ಮಾವನ ಹತ್ತಿರ ತೆಗೆಸಿಕೊಂಡು ಬಂದಿರುತ್ತಾನೆ. ಪುಸ್ತಕದ ಚೀಲವನ್ನು ಮಂಚದ ಮೇಲೆ ಎಸೆದು ರಂಗಲೋಲಿಯನ್ನು ತುಳಿಯದೆ ಮೆಲ್ಲಗೆ ಅತ್ತೆಯ ಹತ್ತಿರ ಬಂದು ಉಬ್ಬಿಕೊಂಡಿದ್ದ ಚಡ್ಡಿಯ ಜೇಬನ್ನು ತೋರಿಸುತ್ತಾನೆ. ಅತ್ತೆಯೊಡನೆ ಬೆಳೆಸಿಕೊಂಡು ಬರುವ ಸಂಬಂಧದ ಮೂಲಕ ಪ್ರೌಢ ಜಗತ್ತಿನ ವ್ಯವಹಾರಗಳನ್ನು ಸಮೀಪದಿಂದ ಅನುಭವಿಸುವುದರಿಂದಾಗಿ ಪ್ರಬುದ್ಧತೆಯ ಹಾದಿಯಲ್ಲಿದ್ದ ಕಿಟ್ಟಿ ತನ್ನ ಬಾಲಾವಸ್ಥೆಗೆ ಮರಳಬಯಸುವ ವಿಫಲ ಕ್ರಿಯೆ ಇಲ್ಲಿ ಸಾಂಕೇತಿಕವಾಗಿದೆ. ಕಾಡು ಸಂಕೇತವನ್ನು ಬಳಸಿಕೊಳ್ಳುವ ನವ್ಯ ವಿಧಾನಗಳೂ ತುಂಬಾ ಯಶಸ್ವಿಯಾಗಿದೆ. ಕಾದಂಬರಿಯ ಹೆಸರಿನಲ್ಲಿಯೇ ಅವರ ಮುಖ್ಯ ಪ್ರತೀಕವಿದೆ.

'ಕಾಡು' ಕಾದಂಬರಿಯಲ್ಲಿ ಚಂದ್ರಯ್ಯಗೌಡನು ಈಗಾಗಲೇ ಅನೈತಿಕ ಸಂಬಂಧವನ್ನು ಇರಿಸಿಕೊಂಡಿದ್ದಾನೆ. ಕೆಳವರ್ಗದ ಜನ ಇಂತಹ ಸಂಬಂಧಗಳನ್ನು ಹೊಂದಿರುವುದು ಅವನಿಗೆ ಕೋಪ ತರಿಸುತ್ತದೆ. ತನಗೆ ಒಂದು ನ್ಯಾಯ, ಸಮಾಜದ ಇತರ ವರ್ಗಗಳ ಜನರಿಗೊಂದು ನ್ಯಾಯ ಸಾಮಾಜಿಕ ಅಸಮಾನತೆಯನ್ನು ಹೇಳುತ್ತದೆ. ಬಡವರ್ಗದ ಜನರು ಈ ಸಂಬಂಧವನ್ನು ಪ್ರಶ್ನಿಸಿದರೆ ಅವರಿಗೆ ಬಹಿಷ್ಕಾರ, ದಂಡನೆಯ ಶಿಕ್ಷೆ, ಪ್ರತಿಯೊಬ್ಬ ಮನುಷ್ಯನಲ್ಲಿ ಇರುವ ನೈತಿಕ ನಿಯಮಗಳನ್ನು ಕಾಲದಿಂದ ಕಾಲಕ್ಕೆ ರೂಢಿಸಿಕೊಳ್ಳುತ್ತಿರುವುದು ಚಾರಿತ್ರಿಕ ಸತ್ಯವಾಗಿದೆ. ವಿವರಗಳಲ್ಲಿಯೂ ಕೂಡ ಇಂಥ ವಿಧಾನಗಳು ಸಮರ್ಥವಾಗಿ ಕೆಲಸ ನಿರ್ವಹಣೆಯಾಗಿದೆ.

ಕೆಲವು ಉದಾಹರಣೆಗಳನ್ನು ನೋಡುವುದಾದರೆ ಗೌರಿಯ ಕಡಸು ಸಿಡಿಮದ್ದಿನಿಂದ ಗಾಯಗೊಂಡು ಸಾಯುವ ಘಟನೆಯನ್ನು ನೋಡಬಹುದು. ತನ್ನ ಅತ್ತೆಯನ್ನು ಪ್ರೀತಿಸುವಂತೆ ಕಿಟ್ಟಿ ಗೌರಿಯನ್ನು ಪ್ರೀತಿಸುತ್ತಿರುತ್ತಾನೆ. ಅದರ ಭಯಾನಕ ಸಾವು ಅವನಿಗೆ ಮರೆಯಲಾಗದ ಅನುಭವ. ಕಡಸಿನ ಮುಸುಡಿಯ ಕೆಳಭಾಗವೆಲ್ಲಾ ಕಳಚಿ ನೇತಾಡುತ್ತಿದೆ. ಕೆಳದವಡೆ, ನಾಲಿಗೆ, ಕಟಬಾಯಿ ಎಲ್ಲಾ ಕಲಸಿಕೊಂಡು ಮಾಂಸದ ಮುದ್ದೆಯಾಗಿ ಕೆಳಗೂ ಬಿದ್ದು ಹೋಗಿ ಜೋತು ಬಿದ್ದು ಅದರಿಂದ ಹಸಿ ಹಸಿ ರಕ್ತ ತೊಟ್ಟಿಕ್ಕುತ್ತಿದೆ ಅದರ ಕಣ್ಣಲ್ಲೂ ನೀರು, ಸುತ್ತ ನಿಂತವರೆಲ್ಲಾ ಅಯ್ಯೋ ಪಾಪ ಎಂದು ಈಗಾರು ಸಿಡಿಮದ್ನೇ ಇಕ್ಕಿರೋದು ಎಂದು ವಿಚಾರಿಸತೊಡಗಿದರು. ಕುಟುಂಬ ನಿರ್ವಹಣೆಯ ಸಂದರ್ಭಗಳನ್ನು ಆಲನಹಳ್ಳಿಯವರು ಕಡುಕಷ್ಟದ ಬದುಕಿನ ನಿದರ್ಶನದೊಂದಿಗೆ ಚಿತ್ರಿಸಿದ್ದಾರೆ. ಗೌರಿಯ ಯಾತನೆ, ಅದರ ಸಾವು ಕಾದಂಬರಿಯ ಕೊನೆಯಲ್ಲಿ ಬರುವ ಕಮಲಮ್ಮನ ಸಾವಿನ ಪ್ರತೀಕವಾದಾಗ ಅವುಗಳ ಅರ್ಥವಂತಿಕೆ ಇನ್ನೂ ಹೆಚ್ಚಾಗುತ್ತದೆ. ಕಮಲಮ್ಮನೇ ಈ ಪ್ರತೀಕದ ಮೂಲಕ ತನ್ನ ಕೊನೆಯನ್ನು ಕಾಣುವುದು ಕಾದಂಬರಿಯಲ್ಲಿ ಅಭಿವ್ಯಕ್ತಿಗೊಂಡ ಕಲಾಪ್ರಜ್ಞೆಯ ಗುಣದ ನಿದರ್ಶನವಾಗಿದೆ.

ಅತ್ತೆ ಕಮಲಮ್ಮ ನೋವನ್ನು ಮನಸ್ಸಿನಲ್ಲೇ ಇಟ್ಟುಕೊಂಡು ಅಳುವುದನ್ನು ಕಿಟ್ಟಿ ನೋಡುತ್ತಿರುತ್ತಾನೆ. ಅಳುವುದು ಹೆಂಗಸರ ಹಣೆಯ ಬರಹವೆಂದು ಕಮಲಮ್ಮ ತಿಳಿದುಕೊಂಡಿರುತ್ತಾಳೆ. ಹೆಂಗಸರು ಎಲ್ಲವನ್ನು ಸಹಿಸಿಕೊಂಡಿರಬೇಕು ಎಂದು ಅಳುತ್ತಾಳೆ. ಕಾರಣ ಕುಟುಂಬದ ಜವಾಬ್ದಾರಿಯನ್ನು ಅವಳೊಬ್ಬಳೇ ಒತ್ತಿರುತ್ತಾಳೆ. ಕಮಲಮ್ಮನಿಗೆ ತನ್ನ ಗಂಡ ಚಂದ್ರಯ್ಯಗೌಡ ಕೈತಪ್ಪಿ ಹೋಗುತ್ತಾನೆ. ರಾತ್ರಿ ಹೊತ್ತು ಹೊಸೂರಿನ ಬಸಕ್ಕನ ಮನೆಗೆ ಹೋಗುತ್ತಿರುತ್ತಾನೆ ಎಂದು ಬಾಗಿಲ ಬಳಿ ನಿಂತು ಅಳುತ್ತಾ ಇರುತ್ತಾಳೆ. ಕಿಟ್ಟಿಯು ಅತ್ತೆಯ ಸಂಕಟವನ್ನು ನೋಡಿ ಏನೂ ತಿಳಿಯದೆ ತಾನೂ ಸಹ ಅತ್ತೆಯೊಡನೆ ಅಳುತ್ತಾನೆ. ಕಿಟ್ಟಿಗೆ ಅತ್ತೆಯು ಮಾವ ಹೊಸೂರಿಗೆ ರಾತ್ರಿ ಹೊತ್ತು ಹೋದರೆ ಏಕೆ ಅಳಬೇಕು? ಎಂಬ ಗೊಂದಲ ಕಾಡುತ್ತದೆ. ಅತ್ತೆಯನ್ನು ಮತ್ತೆ ಕೇಳಿದರೆ ಅತ್ತು ಬಿಡುತ್ತಾಳೆಂದು ಮತ್ತೆ ಮತ್ತೆ ಕಿಟ್ಟಿ ಅದರ ಬಗ್ಗೆ ಮಾತಾಡುವುದಿಲ್ಲ. ಕಿಟ್ಟಿಯ ಅತ್ತೆ ಮಾವರನ್ನು ಗಮನಿಸುತ್ತಲೇ ಇರುತ್ತಾನೆ. ಕಮಲಮ್ಮನು ಯಾವತ್ತೂ ಸಹ ತನ್ನ ಗಂಡನಿಗೆ ಎದುರು ಮಾತಾಡುವುದಿಲ್ಲ. ಸ್ತ್ರೀಯರ ಅಸಹಾಯಕತನವನ್ನೇ ಪುರುಷ ಪ್ರಧಾನ ಸಮಾಜ ದುರ್ಬಳಕೆ ಮಾಡಿ ಕೊಳ್ಳುತ್ತಿದೆ. ಎಂದು ಹೇಳಬಹುದಾಗಿದೆ. ಇಲ್ಲಿ 'ಭೋಗಿ' ಎಂಬ ಹೆಂಗಸಿನ ಪತ್ರವನ್ನು ಆಲನಹಳ್ಳಿ ತರುತ್ತಾರೆ. ಕೆಂಚ ಮತ್ತು ದೇವಿಯನ್ನು ಪಂಚಾಯಿತಿಗೆ ಕರೆದು ತಂದಿದ್ದರು. ಕೆಂಚ ಮತ್ತು ದೇವಿಯ ಪ್ರಸಂಗವೇ ದೊಡ್ಡ ಸಂಗತಿಯಾಗಿತ್ತು. ಭೋಗಿಯು ಕಮಲಮ್ಮನ ಹತ್ತಿರ ಬಂದು ದೇವೀನ ನೋಡಿದ್ರವ್ವ ಇತ್ಲಾಗೆ ವಸಿದಿನದ ಹಿಂದೆ ಬಂದಿದ್ಲು ಅವಳು. ಅಂಥವಳ ಭೋಗಿ ಸುಳ್ಳಾಗಿದ್ರೆ ಪಂಚಾಯ್ತಿಗ್ಯಾಕ್ರವ ಬತ್ತಿತ್ತು ನಿಮ್ಮಗೇಳದೇ ಮರ್‍ತಿದ್ದೆ ನೋಡವ್ವ ದೇವಿಗಾಗ್ಲೆ ನಾಕು ತಿಂಗಳು ಎನ್ನುತ್ತಾಳೆ. ಕಮಲಮ್ಮಳು

ನೋಡವಳು ನನ್ನತ್ರ ಯೇಳ್ದನೆ ವೋಗವ್ಳೆ ನಾನೂ ಸರಿಗೆ ನೋಡ್ನಿಲ್ಲ ಹೀಗೆ ಭೋಗಿ ಎಂಬ ಹೆಂಗಸು ಕಮಲಮ್ಮನ ಬಳಿ ಬಂದು ದೇವಿಯ ಬಗ್ಗೆ ಮಾತಾಡುತ್ತಾಳೆ.

ಅಲ್ಲ ಕಣ್ರವ್ವ ಗಂಡುಳ್ಳ ಗರತಿ ಅಂಗೆಲ್ಲ ಮಾಡೋದ? ಕಟ್ಕೊಂಡವನ ಅತ್ರ ನಿಭಾಯಿಸಕ್ಕೆ ಆಗ್ದೆ ಇದ್ರೆ ಬುಟ್ಬುಡು ನಿಕಾಲಾಗಿ ಕೆಂಚನ ಜೊತೆ ವೊಂಟೋಗ್ಬೇಕು ಅಂಗಿಲ್ಲ ಗರತಿಯಾಗೆ ವಕ್ತಾನ ಮಾಡ್ಕಂಡಿರಬೇಕು ಅದೂ ಬೇಕು ಇದು ಬೇಕು ಅಂದ್ರೆ ಯಂಗ್ರವ್ವ ಎನ್ನುತ್ತಾಳೆ. ಹೀಗೆ ಹಳ್ಳಿಯಲ್ಲಿನ ಕುಟುಂಬ ಮತ್ತು ವಿಷಮದಾಂಪತ್ಯದ ಚಿತ್ರಣವನ್ನು ನೈಜ ಘಟನೆಗಳನ್ನೇ ಆಲನಹಳ್ಳಿಯವರು ಚಿತ್ರಿಸಿದ್ದಾರೆ. ಇಲ್ಲಿ ಯಾವುದೇ ಒಂದು ಸುದ್ಧಿಯಾದರೂ ಇಡೀ ಹಳ್ಳಿಗೆ ತಿಳಿಯುತ್ತದೆ. ಸ್ವಾಮೇಗೌಡ್ರು ತಮ್ಮ ಹೊಲದಲ್ಲಿ ಗೆಣಸು ಹಾಕಿರುತ್ತಾರೆ. ಹಂದಿಗಿಂದಿ ಬತ್ತವೆ ಅಂತ ಸಿಡಿಮದ್ದನ್ನು ಇಟ್ಟಿರುತ್ತಾರೆ. ಗೌರಿ ಕಡಸು ಮೇಯಲು ಹೋಗಿದ್ದಾಗ ಗೌರಿ ಕಡಸಿನ ಮುಸುಡಿಗೆ ಸಿಡಿಮದ್ದು ಸಿಡಿಯುತ್ತದೆ. ಮುಸುಡಿಯ ಕೆಳಭಾಗವೆಲ್ಲ ಕಳಚಿ ನೇತಾಡುತ್ತದೆ. ಕೆಳದವಡೆ, ನಾಲಿಗೆ, ಕಟವಾಯಿ ಎಲ್ಲ ಕಲಸಿಕೊಂಡು ಮಾಂಸದ ಮುದ್ದೆಯಾಗಿ ಕೆಳಗೂ ಬಿದ್ದು ಹೋಗದೆ ಜೋತು ಬಿದ್ದು ಅದರಿಂದ ಹಸಿ ಹಸಿ ರಕ್ತ ತೊಟ್ಟಿಕ್ಕುತ್ತದೆ. ಕಣ್ಣಲ್ಲಿ ನೀರು ತೊಟ್ಟಿಕ್ಕುತ್ತಿರುತ್ತದೆ. ಗೌರಿ ಕಡಸಿನ ಸುತ್ತ ನಿಂತಿರುವವರೆಲ್ಲ ಮುಂಗಾರಲ್ಲಿ ಕಡಲೆಕಾಯಿ ಹಾಕಿದಾಗ ಮಾತ್ರ ಸಿಡಿಮದ್ದಿಡೋದು ಇನ್ನೇನು ಬೇಸ್ಗೆ ಬಂದು ಬುಡ್ತು ಈಗ ಸಿಡಿಮದ್ದಿಡದ? ಎಂದು ಸ್ವಾಮೇಗೌಡರನ್ನು ಒಳಗೊಳಗೇ ಬೈಯ್ಯುತ್ತಾರೆ. ಕೊನೆಗೆ ಗೌರಿಕಡಸು ಸತ್ತು ಹೋಗುತ್ತದೆ. ಬಸುರಿಮರದ ಹೊಲದಲ್ಲಿ ಭಯಂಕರ ರಣಹದ್ದು ಕಾಗೆಗಳು ಹಾರಾಡುತ್ತಿದ್ದವು. ಮರದ ಕೆಳಗೆ ಹಿಂಡು ಹಿಂಡಾಗಿ ಮಾದಿಗರ ಹೆಂಗಸು ಮಕ್ಕಳು ಗುಂಪು ಕಟ್ಟಿದ್ದರು. ಅವರೆಲ್ಲ ಗೌರಿಯನ್ನು ಕುಯ್ದು ಬಾಡು ಪಾಲು ಮಾಡುವುದನ್ನು ಕಿಟ್ಟಿ ಯೋಚಿಸುತ್ತಾನೆ, ಅಳುತ್ತಾನೆ ಇಲ್ಲಿ ಹಸಿವಿನ ಕ್ರೂರತೆಯನ್ನು ಈ ಕಾದಂಬರಿಯಲ್ಲಿ ಕಾಣಬಹುದು.

ನಾಗಿಯು ಕಿಟ್ಟಿಯ ಗೆಳತಿ, ನಾಗಿಯ ಚಿಕ್ಕಮ್ಮ ಕಲ್ಯಾಣಿಗೆ ನಾಗಿಯ ಅಪ್ಪ ಯವಾಗಲೂ ಹೊಡೆಯುತ್ತಾನೆ. ಸಾಲದ್ದಕ್ಕೆ ಅಜ್ಜಿಯೂ ಸಹ ಹೊಡೆಯುತ್ತಾಳೆ. ಕೇಳಿದರೆ ಪ್ರಶ್ನೆ ಮಾಡಿದರೆ, ನಾಗಿಗೂ ಏಟು ಬೀಳುತ್ತವೆ. ನಾಗಿ ಅಳುತ್ತಾ ಕೂತಿರುವಾಗ ಕಿಟ್ಟಿ ಬರುತ್ತಾನೆ. ಸಮಾಧಾನ ಮಾಡುತ್ತಾನೆ. ಗಂಡಸರೂ ಏನೇ ತಪ್ಪು ಮಾಡಿದರೂ ಸಹ ಅದನ್ನು ಯಾರು ಪ್ರಶ್ನೆ ಮಾಡುವಂತಿಲ್ಲ. ಇದು ಪುರುಷ ಪ್ರಧಾನ ಸಮಾಜವಾಗಿರುವುದರಿಂದ ಗಂಡಸರು ಏನೇ ತಪ್ಪು ಮಾಡಿದರೂ ಕೇಳುವುದಿಲ್ಲ. ಇದೊಂದು ವಿಷಮದಾಂಪತ್ಯ ಜೀವನ ಪದ್ಧತಿಯ ಒಂದು ಘಟನೆಯಾಗಿ ಕಂಡುಬರುತ್ತದೆ. ದ್ವೇಷ, ಪ್ರತೀಕಾರ, ಕೊಲೆ ಹಾನಿಗಳ ಗ್ರಾಮ ಜೀವನ ಕುರಿತ ಕಾದಂಬರಿಗಳಿಗೆ ಕನ್ನಡದಲ್ಲಿ ಬರವಿಲ್ಲ ಇದೆಲ್ಲದರ ಹಿಂದಿನ ಮನಸ್ಸು, ಮೂಲ ಭೂತ ಪ್ರವೃತ್ತಿ, ವಿಭಿನ್ನ ಸೆಳೆತಗಳು ತಲೆಮಾರುಗಳ ತಿಕ್ಕಾಟ, ಅಂತರ ಮೊದಲಾದ ವಿಚಾರ ವಿಶ್ಲೇಷಣೆಗಳ ಕಲಾತ್ಮಕ ಅಭಿವ್ಯಕ್ತಿ ಕಡಿಮೆ. ಆಲನಹಳ್ಳಿಯವರು ಒಂದಾದಮೇಲೊಂದರಂತೆ ಕಣ್ಣಿಗೆ ಕಟ್ಟುವ

ರೀತಿಯಲ್ಲಿ ಸಮರ್ಥವಾಗಿ ಘಟನೆಗಳನ್ನು ಹೇಳಿಬಿಡುತ್ತಾರೆ. ತಪ್ಪಿಗೆ ಮೀರಿದ ವಿಶಾಲ ಹರಿವಿನ ಬದುಕನ್ನು ಉದ್ದೇಶಪೂರ್ವಕವಾಗಿಯೋ ಎಂಬಂತೆ ಘಟನಾವಳಿಗಳ ಹಂತದಲ್ಲೇ ಸಂಕುಚಿತಗೊಳಿಸಿಬಿಡುತ್ತಾರೆ ಎಂಬುದು ನನ್ನ ಸಂಶೋಧನಾ ಬರವಣಿಗೆಯಲ್ಲಿ ಕಂಡುಕೊಂಡಿರುವ ಮಿತಿ ಇದು.

ಆದರೂ ಆಸಕ್ತಿಯಿಂದ ಓದಿಸಿಕೊಳ್ಳುವ ಈ ಕಾದಂಬರಿಯ ಗುಣವೆಂದರೆ ಆಲನಹಳ್ಳಿಯವ ಉತ್ತಮ ಬರವಣಿಗೆ ಸಿನಿಮಾ ದೃಶ್ಯಗಳಂತೆ ಅವರು ಘಟನೆಗಳನ್ನು ಚಿತ್ರಿಸುತ್ತಾರೆ. ಆದರೆ ಈ ಸತ್ವಶಾಲಿ ಬರವಣಿಗೆ ಕಾದಂಬರಿಯ ಅನುಭವದ ವಿವಿಧ ಸ್ಥರಗಳನ್ನು ಮೀಟಿ ಅರ್ಥ ಹೊರಡಿಸದಿದ್ದರೆ ಬೇರು ಮಾತ್ರ ಇಳಿದಿದ್ದರೆ 'ಕಾಡು' ನಿಜಕ್ಕೂ ಮರೆಯಲಾಗದ ಉತ್ತಮ ಕಾದಂಬರಿಗಳ ಪಂಕ್ತಿಗೆ ಸೇರುತ್ತಿತ್ತು ಎನ್ನಬಹುದು.

'ಪರಸಂಗದ ಗೆಂಡೆತಿಮ್ಮ' ಕಾದಂಬರಿಯಲ್ಲಿ ಕೌಟುಂಬಿಕ ಚಿತ್ರಣ ಹಾಗೂ ವಿಷಮ ದಾಂಪತ್ಯವನ್ನು ಗುರುತಿಸಬಹುದು ಮರಂಕಿಯೂ ಗೆಂಡೆತಿಮ್ಮನ ಪ್ರೀತಿಯನ್ನು ಅವನ ಕಾಳಜಿಯನ್ನು ಲೆಕ್ಕಿಸದೆ ಈ ಮೊದಲೇ ಮದುವೆಗಿಂತ ಮುಂಚೆಯೇ ಮಾದೇವನೊಡನೆ ಸಂಬಂಧವನ್ನಿಟ್ಟುಕೊಂಡಿರುತ್ತಾಳೆ. ಗೆಂಡೆತಿಮ್ಮ ಅಸಹಾಯಕ ಮುಗ್ಧ ಮನುಷ್ಯ. ಶಿವಣ್ಣನಿಗಿಂತ ಸುಂದರನಲ್ಲ ಹಳ್ಳಿಯವನು ಪೇಟೆಯವರ ಹಾಗೆ ಇರಲು ಸಾಧ್ಯವೇ? ಸಾಧ್ಯವಿದ್ದರೂ ಸಹ ಎಲ್ಲೋ ಒಂದಿಬ್ಬರೂ ಆಗಿರುತ್ತಾರೆ. ಆದರೂ ಸಹ ಮರಂಕಿಯು ಶಿವಣ್ಣನೊಡನೆ ಸಂಬಂಧವನ್ನು ಇಟ್ಟುಕೊಂಡಿರುವುದು ಅವಳಿಗೆ ತಪ್ಪು ಎಂದೆನಿಸುವುದಿಲ್ಲ. ಮರಂಕಿಯು ಹಾಗೆ ಮಾಡಬಾರದಿತ್ತು ಎಂಬುದು ಓದುಗರ ಮನಸ್ಸಿಗೆ ಬರುತ್ತದೆ. ಈ ಕಾದಂಬರಿಯನ್ನು ಓದುತ್ತಾ ಓದುತ್ತಾ ನೈಜತೆ ಕಣ್ತುಂಬುತ್ತದೆ. ಪ್ರಸ್ತುತ ನಡೆಯುತ್ತಿದೆ ಎನ್ನುವ ಹಾಗೆ ದೈನಂದಿನ ಸಾಮಾಜಿಕ ಜೀವನ ಕಣ್ಣಮುಂದೆ ಕಾಣಿಸುತ್ತದೆ. ಹಾಗೆ ಆಲನಹಳ್ಳಿಯವರು ಚಿತ್ರಿಸಿದ್ದಾರೆ.

ಶಿವಣ್ಣನೊಡನೆ ಮರಂಕಿಯು ಉಳಿಮಾವಿಗೆ ಹೊರಡುತ್ತಾಳೆ. ಹೋಗುವಾಗ ಮಧ್ಯಾಹ್ನ ಸಿನಿಮಾವನ್ನು ನೋಡಿ ಹೋಗೋನ ಸಂಜೆ ಬಸ್ಸಿಗೆ ಹೊರಡೋಣ ಎಂದು ಮರಂಕಿಯನ್ನು ಶಿವಣ್ಣ ಒಪ್ಪಿಸುತ್ತಾನೆ. 'ನಾಗಿನ್' ಸಿನಿಮಾಕ್ಕೆ ಹೋಗುತ್ತಾರೆ. ಅಲ್ಲಿ ಶಿವಣ್ಣನು ಮರಂಕಿಯ ಅಂಗಾಂಗಗಳನ್ನು ಮುಟ್ಟಿ ತನ್ನ ಆಸೆಯನ್ನು ವ್ಯಕ್ತಪಡಿಸುತ್ತಾನೆ. ನಂತರ ರಾತ್ರಿವೇಳೆ ಉಳಿಮಾವಿನ ದಾರಿಯಲ್ಲಿ ನಡೆದು ಹೋಗುವಾಗ ಏನೋ ಜೋರಾಗಿ ಓಡಿದ ಸದ್ದು ಕೇಳಿ ಶಿವಣ್ಣನನ್ನು ಮರಂಕಿ ತಬ್ಬಿಕೊಳ್ಳುತ್ತಾಳೆ. ಆಗ ಶಿವಣ್ಣನು ತನ್ನ ಆಸೆಯನ್ನೆಲ್ಲಾ ಪೂರೈಸಿಕೊಳ್ಳುತ್ತಾನೆ. ಮರಂಕಿಗೂ ಸಹ ತಾನು ಮಾಡಿದ್ದು ತಪ್ಪು ಎನಿಸದೆ ಅವನಿಗೆ ಸಹಕರಿಸುತ್ತಾಳೆ. ಮರಂಕಿಗೆ ತನ್ನ ಗಂಡ ಗೆಂಡೆತಿಮ್ಮನಿಗೆ ಮೋಸ ಮಾಡುತ್ತಿದ್ದೇನೆಂದು ಯಾವತ್ತೂ ಅನ್ನಿಸಲೇ ಇಲ್ಲ. ತನ್ನ ಪಾಡಿಗೆ ತಾನು ಶಿವಣ್ಣನೊಡನೆ ಸಂಬಂಧವನ್ನು ಮುಂದುವರಿಸುತ್ತಾಳೆ. ಗರ್ಭಿಣಿಯಾಗುತ್ತಾಳೆ.

ಗೆಂಡೆತಿಮ್ಮ ರತ್ನಿಯ ಮದುವೆಗೆ ಹೋಗಬೇಕೆಂದು ಮರಂಕಿಯನ್ನು ಕರೆತರಲು ಹೋದಾಗ ಮನೆಯ ಬಾಗಿಲು ತಟ್ಟುತ್ತಾನೆ. ಗುಸುಗುಸು ಶಬ್ದ ಒಳಗಿನಿಂದ ಕೇಳಿಸುತ್ತದೆ. ಮರಂಕಿ ಬಾಗಿಲು ತೆರೆದು ತಟಸ್ಥವಾಗಿ ನಿಂತಿರುತ್ತಾಳೆ. ಬಾಗಿಲಿನಿಂದ ಯಾರೋ ಗಂಡಸು ಹೊರಗೆ ಹೋಗುತ್ತಾನೆ. ಗೆಂಡೆತಿಮ್ಮನಿಗೆ ಸಿಡಿಲು ಬಡಿದಂತಾಗುತ್ತದೆ. ಮರಂಕಿಯ ಮೇಲೆ ಗೆಂಡೆತಿಮ್ಮ ಇಟ್ಟಿದ್ದ ನಂಬಿಕೆ ಹೊರಟುಹೋಗುತ್ತದೆ. ಅವಮಾನವನ್ನು ತಡೆಯಲಾಗದೆ ಮರಂಕಿಯ ಮೇಲಿನ ಅತಿಯಾದ ಪ್ರೀತಿ, ದ್ರೋಹ, ವಂಚನೆ ಗೆಂಡೆತಿಮ್ಮನನ್ನು ಬಲಿ ತೆಗೆದುಕೊಳ್ಳುತ್ತದೆ. ಮೊದಲೇ ಗೊತ್ತಿದ್ದರೆ ಮರಂಕಿ ಇಂಥ ತಪ್ಪು ಮಾಡುತ್ತಿರಲಿಲ್ಲವೇನೋ ಎಂಬುದು ಓದುಗರ ಮನಸ್ಸಿಗೆ ಅನ್ನಿಸುತ್ತದೆ. ಮರಂಕಿಯೂ ಸಹ ಗೆಂಡೆತಿಮ್ಮನಿಗೆ ಮೋಸ ಮಾಡಿದ ಪಾಪಪ್ರಜ್ಞೆ ಕಾಡಿ ಕೊನೆಗೆ ತೊಲೆಗೆ ನೇಣು ಬಿಗಿದುಕೊಳ್ಳುತ್ತಾಳೆ. ಇಲ್ಲಿಗೆ ಹಳ್ಳಿಯ ಬದುಕು ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿ ಮುಗ್ಧ ಜನರನ್ನು ಹೇಗೆ ಬಲಿ ತೆಗೆದುಕೊಳ್ಳುತ್ತದೆ ಎಂದು ಹೇಳಬಹುದು.

"ಯಾವುದೇ ನೈತಿಕ ಮೌಲ್ಯಗಳು ಮರಂಕಿಗೆ ಕಾಡುವುದಿಲ್ಲ. ಮಾದನಾಯಕ ಶಿವಣ್ಣನ ಜೊತೆ ಲೈಂಗಿಕ ಸಂಪರ್ಕ ಬೆಳಸಿದರೂ ಅವಳಲ್ಲಿ ಪಾಪಪ್ರಜ್ಞೆಯಿಲ್ಲ. ಆದರೆ ಗೆಂಡೆತಿಮ್ಮನಿಗೆ ತನ್ನ ವ್ಯಾಪಾರದಿಂದ ಊರು ತುಂಬುತ್ತಿದ್ದ ಆಧುನಿಕ ವಸ್ತುಗಳಿಂದ ಆಗುವ ಪರಿಣಾಮದ ಬಗ್ಗೆ ಮೆಲ್ಲನೆ ಏನೋ ತಪ್ಪು ಮಾಡುತ್ತಿದ್ದೇನೆ ಎಂದು ಅನ್ನಿಸತೊಡಗುತ್ತದೆ. ಹೆಂಡತಿಯ ಬೆಂಬಲದಿಂದ ಮಾತ್ರ ಧೈರ್ಯ ಹೊಂದಿದ್ದನೇ ಹೊರತು ಸ್ವಂತ ಧೈರ್ಯದಿಂದಲ್ಲ. ಅವನ ಕಳ್ಳುಬಳ್ಳಿಗಳೇ ವಿರೋಧ ಒಡ್ಡುತ್ತವೆ. ದಿನ ಕಳೆದಂತೆ ಊರ ಹಿರಿಯರಿಗೆ ತಮ್ಮ ಮನೆಯ ಹೆಂಗಸು ಬದಲಾಗುತ್ತಿರುವುದನ್ನು ಕಂಡೇ ಏನೋ ಕಳೆದುಕೊಂಡಂತೆ ಯಾವುದೋ ಅನಿಷ್ಟ ಮನೆ ಸೇರಿದೆಯೆಂದು ಅನ್ನಿಸಿ. ಅದಕ್ಕೆ ಕಾರಣನಾದ ಗೆಂಡೆತಿಮ್ಮನನ್ನು ಕರೆದು ಛೀಮಾರಿ ಹಾಕಿ ಅವಮಾನಗೊಳಿಸುತ್ತಾರೆ ಗೌವ್ವಳ್ಳಿಯ ಜನರು. ಶಿವಣ್ಣನ ಜತೆಗಿನ ಮರಂಕಿಯ ಸಂಪರ್ಕ ವನ್ನು ಕಣ್ಣಾರೆ ಕಂಡು ಗೆಂಡೆತಿಮ್ಮ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಮರಂಕಿಯೂ ಪಶ್ಚಾತ್ತಾಪದಿಂದ ಅವನ ದಾರಿ ಹಿಡಿಯುತ್ತಾಳೆ. ಮರಂಕಿಯ ನಾಗರೀಕತೆಯು ಮುಗ್ಧ ಗೆಂಡೆತಿಮ್ಮನಿಗಿರುವ ಸಾಂಪ್ರದಾಯಿಕ ಮನಸ್ಸೇ ಕಾರಣ. ಮರಂಕಿ ಗಂಡನ ಮುಗ್ಧತೆಗೆ ಸೋಲಲೂ ಇದೇ ಕಾರಣವಾಗುತ್ತದೆ ಎಂದು ಅನ್ನಿಸುತ್ತದೆ."[೩೧] ಅಮರೇಶನುಗಡೋಣಿ ಅವರ ಮಾತುಗಳು ಅರ್ಥಪೂರ್ಣವಾಗಿವೆ.

'ಭುಜಂಗಯ್ಯನ ದಶಾವತಾರಗಳು' ಕೃತಿಯಲ್ಲಿ ಈ ರಚನೆ ತನ್ನ ಪೂರ್ಣ ಸ್ವರೂಪವನ್ನು ಪಡೆದುಕೊಂಡಿದೆ. ಸಾಲ್‌ಬೆಲ್ಲೊನ Adventures of Augiemarch ಕಾದಂಬರಿಯಂತೆ ಭುಜಂಗಯ್ಯನ ದಶಾವತಾರಗಳು ಕೂಡ ಸಾಮಾಜಿಕ ಆವರಣ ವಿಶಾಲವಾದುದಾದರೂ

೩೧. ಅಮರೇಶನುಗಡೋಣಿ, 'ಶ್ರೀಕೃಷ್ಣ ಆಲನಹಳ್ಳಿ', ಪು.೧೬, ೧೯೯೫.

ಭುಜಂಗಯ್ಯನ ಅಸಾಮಾನ್ಯ ಜೀವನದ ವಿವರಗಳ ಕಲೆಗೆ ಆಕಾರ ಕೊಟ್ಟಿವೆ. ಮಾದಳ್ಳಿಯಂತ ಚಿಕ್ಕ ಗ್ರಾಮದಲ್ಲಿ ಒಂದು ಅನುಕೂಲಸ್ಥ ಮನೆಯಲ್ಲಿ ಹುಟ್ಟಿದ ಭುಜಂಗಯ್ಯ ಉಳಿದವರಂತೆ ಸಾಮಾನ್ಯ ಬದುಕಿನಲ್ಲಿ ತೃಪ್ತನಾಗಬಹುದಿತ್ತು. ಆದರೆ ಮೊದಲಿನಿಂದಲೂ ಕ್ರಿಯಾಶೀಲ ಪ್ರಕೃತಿಯು ಅವನಿಗೆ ತೃಪ್ತಿ ತರಲಿಲ್ಲ. ಯಾವ ಸುಖವನ್ನು ಕಾಣದ ನಾನೇಕೆ ದುಡಿಯಬೇಕು ಎನ್ನುವ ಅಸಮಾಧಾನ ಅವನನ್ನು ಸುಖದ ದಾರಿಗಳಲ್ಲಿ ಹುಡುಕಲು ಪ್ರೇರೇಪಿಸುತ್ತದೆ. ತನ್ನಂತೆ ಶಿವಾಚಾರದವನೇ ಆದ ಅಜ್ಜಪ್ಪ ಕೂಡಾ ವ್ಯಾಪಾರದಲ್ಲಿ ಹಣಗಳಿಸಬಹುದು ಎಂಬ ವಿಚಾರದಿಂದ ಕೂಡು ರಸ್ತೆಯಲ್ಲಿ ಹೊಟೇಲ್ಲು ತೆರೆಯುತ್ತಾನೆ. ಇದಕ್ಕೆ ಹೆಂಡತಿ ಪಾರ್ವತಿ ಮಾವ ಪರ್ವತಪ್ಪ ಹಾಗೂ ಜಾತಿಯವರ ವಿರೋಧವಿದ್ದರೂ ಅವರು ಲೆಕ್ಕಿಸುವುದಿಲ್ಲ. ಆ ವಿರೋಧಿಗಳ ನಡುವೆಯೂ ಅವನಿಗೆ ತಂಬೂರಿ ಅಯ್ನೋರ ಅಜ್ಜಪ್ಪನ ಶರಿಗೌಡರಂತ ಬೇರೆ ಜಾತಿಯವರ ಸಮರ್ಥನೆ ದೊರೆಯುತ್ತದೆ. ಹೊಟೇಲ್‌ನಿಂದ ತುಂಬ ಆದಾಯ ಬಂದು ಭುಜಂಗಯ್ಯ ಆಸ್ತಿ ಮಾಡಿಕೊಳ್ಳುತ್ತಾನೆ. ಆದರೆ ಅವನ ಜೀವನದಲ್ಲಿ ಸುಶೀಲಳ ಆಗಮನ ಅದನ್ನು ಮತ್ತೆ ನೆಲೆ ತಪ್ಪಿಸುತ್ತದೆ. ಸುಶೀಲ ಬೇರೆ ಜಾತಿಯವಳಾದರೂ ಅವಳನ್ನು ಪ್ರೀತಿಸಿ ಭುಜಂಗಯ್ಯ ಮದುವೆಯಾಗುತ್ತಾನೆ. ಇದರಿಂದ ಅವನ ಮೊದಲ ಹೆಂಡತಿ ಪಾರ್ವತಿ ಗೃಹತ್ಯಾಗ ಮಾಡಿದರೂ ಅವನಿಗೆ ಪರಿವೆಯೇ ಇಲ್ಲ. ಸುಶೀಲ ತನ್ನ ಪ್ರೀತಿಯಿಂದ ಭುಜಂಗಯ್ಯನ ಬದುಕನ್ನೇ ಬದಲಿಸುತ್ತಾಳೆ. ಹಿಂದಿನ ದಿನದ ಹಾಗೆ ಇದೊಂದು ದಿನ ಕಳೆದರೆ ಸಾಕು ಎನ್ನುವ ಹಿಂಸೆಯಾಗುವುದರ ಬದಲು ಹೊಸ ಆಕಾಂಕ್ಷೆಗಳು ತೆರೆದುಕೊಳ್ಳುವ, ತುಂಬಿಕೊಳ್ಳುವ ಮಧುರವಾದ ದಿನಗಳಾಗತೊಡಗಿದವು. ಆದರೆ ಈ ಸುಖ ಬಹಳ ದಿನ ಉಳಿಯಲಿಲ್ಲ. ತನ್ನಷ್ಟಕ್ಕೆ ಬದುಕಲು ಬಿಡದೆ ಏನೋ ಒಳಸಂಚು ಪಿತೂರಿ ಇಲ್ಲದೆ ಆರೋಪಗಳಿಂದ ತನ್ನನ್ನೇಕೆ ಹೀಗೆ ಕಾಡುತ್ತಿದೆ? ಎಂದು ಪ್ರಶ್ನೆಗಳಿಂದ ಜರ್ಜರಿತನಾದರೂ ಭುಜಂಗಯ್ಯ ಸುಶೀಲಳ ಸಹಾಯದಿಂದ ಮತ್ತೆ ಎದ್ದೇಳುತ್ತಾನೆ. ಹೊಟೇಲಿದ್ದ ಜಾಗದಲ್ಲಿಯೇ ಅಂಗಡಿ ತೆರೆಯುತ್ತಾನೆ. ಮತ್ತೆ ಹಣ ಗಳಿಸುತ್ತಾನೆ. ಇಷ್ಟಕ್ಕೆಯೇ ನಿಲ್ಲದೆ ನರಸಿಂಹಯ್ಯನಿಂದ ಸ್ಫೂರ್ತಿ ಪಡೆದು ಬಾವಿ ತೋಡಿಸಿ ತೋಟ ಮಾಡುತ್ತಾನೆ. ಇಲ್ಲಿಯೂ ಅವನು ಯಶಸ್ವಿಯಾಗುತ್ತಾನೆ. ಅವನು ಬಾವಿ ತೋಡಿ ಬೆಳೆ ತೆಗೆವ ಸಾಹಸಕ್ಕೆ ಹುಚ್ಚುತನದ ಪರಮಾವಧಿಯೆಂದೇ ಆಡಿಕೊಂಡಿದ್ದ ಊರ ಮಂದಿ ಈಗ ಬೆಕ್ಕಸಬೆರಗಾಗಿದ್ದರು. ಹೀಗೆ ಬಿಸಿಲು ಬಂದರೆ ಮಳೆ ಬಂದೇ ಬರುತ್ತದೆ ಅನ್ನುವ ಪ್ರಕೃತಿಯ ರಹಸ್ಯ ರಾಜನಿಗೆ ಚಿಕ್ಕಂದಿನಿಂದ ಅನುಭವ ವೇದ್ಯವಾಗಿತ್ತು. ಮರದ ಮೇಲೆ ಹಕ್ಕಿಗಳ ದಾಂಧಲೆ ರಾಕ್ಷಸಾಕಾರದ ಆ ಮರದಡಿಯಲ್ಲಿ ತಮ್ಮ ಹಾಗೆಯೇ ಇನ್ನೂ ಅನೇಕರು ಮೌನವಾಗಿ ಕೂತಿದ್ದರು. ಒಬ್ಬೊಬ್ಬರ ಮುಖದಲ್ಲೂ ಒಂದೊಂದು ರೀತಿ ಅಚ್ಚೊತ್ತಿದ್ದ ದುಃಖ ಮತ್ತು ಆತಂಕ ರಾಜ ಮತ್ತು ಸುಶೀಲರ ಮೌನ ವ್ರತವನ್ನು ಭಗ್ನಗೊಳಿಸಲೋ ಎಂಬಂತೆ ಹಂಪಾಪುರದ

ಅಯ್ನೋರು ಅವರ ನಡುವೆ ಉದ್ಭವಿಸಿದರು. ಅವರು ಯಾವ ಕಡೆಯಿಂದ ಹೇಗೆ ಬಂದರೂ ಇಬ್ಬರಿಗೂ ಗೊತ್ತಾಗಲಿಲ್ಲ. ಯಥಾ ಪ್ರಕಾರ ದೇಹದ ಅನಿವಾರ್ಯ ಅಂಗದಂತೆ ತಂಬೂರಿ ಅವರನ್ನು ಅಂಟಿಕೊಂಡೇ ಇತ್ತು. ಅವರಿಗೆ ನೆನ್ನೆಯಷ್ಟೇ ಸುದ್ದಿ ತಿಳಿದು ಹೋಗಿದ್ದ ಸುಶೀಲಳನ್ನು ಕಂಡು ಅಯ್ನೋರಿಗೆ ದುಃಖ ಉಮ್ಮಳಿಸಿತು. ಸುಶೀಲ ಕುಳಿತಲ್ಲೆ ಕಟ್ಟಿಗೆಯಾದಳು ಅವಳ ಮೌನದಡಿಯಲ್ಲಿ ಹೊಗೆಯಾಡುತ್ತಿದ್ದ ದುಃಖದ ಜ್ವಾಲಾಮುಖಿ ಅಯ್ನೋರಿಗೆ ತೀವ್ರವಾಗಿ ತಟ್ಟಿತು ಮತ್ತೇನೂ ಮಾತಾಡದೆ ಅವರು ತುಟಿಕಚ್ಚಿ ಕೂತರು. ಅಯ್ನೋರ ಬೆನ್ನ ಹುರಿಯಲ್ಲೇನೋ ತಣ್ಣಗೆ ಹರಿದಂತೆ ಬಾಯಿಬಿಟ್ಟು ಏನನ್ನು ಕೇಳುವುದಕ್ಕೂ ಭಯ, ಭಯಂಕರ ಸೆಕೆ, ಗಾಳಿ ಬೀಸುತ್ತಿಲ್ಲ. ಮರದ ಎಲೆಗಳ ನಡುವಿಂದ ತೂರಿದ ಸೂರ್ಯನ ಕಿರಣಗಳು, ಬೆಂಕಿಯ ಸರಳುಗಳಂತೆ ಮೈತುಂಬ ಬೆವರಿಳಿಯುತ್ತಿರುವ ಅನುಭವ. ಸುಮಾರು ಹೊತ್ತು ಹೀಗೆ ಕೂತು ಕೂತು ರಾಜನಿಗೆ ಕೈಕಾಲುಗಳು ಜೋಮು ಹಿಡಿದುಕೊಂಡು ಬಿಟ್ಟಂತೆ ಅನ್ನಿಸಿ ಎದ್ದು ನಿಂತ. ಅವನ ಜೊತೆ ಅಯ್ನೋರು ತಾವು ಎದ್ದು ನಿಂತರು. ಸುಶೀಲ ಮಾತ್ರ ಕೂತ ಭಂಗಿಯನ್ನು ಕಿಂಚಿತ್ತು ಸಡಿಸಲಿಲ್ಲ.

ಭುಜಂಗಯ್ಯ-ಸುಶೀಲರ ಅನುರಾಗದ ಆರಂಭದ ಘಟ್ಟದಲ್ಲಿ ಕರೀಗೌಡರ ಕಿರಿಯ ಮಗ ನಾರಾಯಣ ಸುಶೀಲಳನ್ನು ಲೈಂಗಿಕವಾಗಿ ಪಡೆಯುವ ಪಾರ್ಶ್ವಿಕ ಇಚ್ಛೆ ವ್ಯಕ್ತಪಡಿಸುತ್ತಾನೆ. ಇದು ಭುಜಂಗಯ್ಯನಿಗೆ ಅಪಾರ ಸಿಟ್ಟು ತರಿಸುತ್ತದೆ. ಇದು ಅನಾವಶ್ಯಕ ಯಾಕೆಂದರೆ ಮಧ್ಯ ವಯಸ್ಸಿನ ಭುಜಂಗಯ್ಯ ಏನೇನೂ ಸಂಬಂಧವಿಲ್ಲದ ಆಕೆಯನ್ನು ಲೈಂಗಿಕ ದೃಷ್ಟಿಯಲ್ಲಿ ಬಯಸುವುದಾದರೆ ನಾರಾಯಣ ಯಾಕೆ ಬಯಸಬಾರದು? ನಾರಾಯಣ ಈಗಾಗಲೇ ಹೆಣ್ಣಿನ ವಿಷಯದಲ್ಲಿ ಕೆಟ್ಟ ಹೆಸರು ಪಡೆದಿದ್ದಾನೆ. ನಿಜ ಆದರೆ ಅದೇ ಕಾರಣಕ್ಕಾಗಿ ಆತ ಚಂದ ಕಾಣುವ ಹೆಣ್ಣನ್ನು ಬಯಸುವುದು ತಪ್ಪು ಎಂದು ತೀರ್ಮಾನಿಸಿದರೂ ಅದು ಸರಿಯಲ್ಲ. ಲೈಂಗಿಕ ಆಯ್ಕೆಯು ವೈಯಕ್ತಿಕವಾದದು. ನಾರಾಯಣನನ್ನು ಒಪ್ಪಿಕೊಳ್ಳುವುದು ಅಥವಾ ತಿರಸ್ಕರಿಸುವುದು ಸುಶೀಲಳಿಗೆ ಸಂಬಂಧಪಟ್ಟ ಸಮಸ್ಯೆ. ಆದರೆ ಅವಳು ತಿರಸ್ಕರಿಸಿದಳೆಂಬ ಕಾರಣಕ್ಕೆ ನಾರಾಯಣ ಉದ್ದಕ್ಕೂ ಹಗೆ ಸಾಧಿಸಿ ಸಂದರ್ಭ ಸಿಕ್ಕಾಗ ಅವಳ ಮೇಲೆ ಅತ್ಯಾಚಾರವೆಸಗುವುದನ್ನು ಒಪ್ಪಲು ಸಾಧ್ಯವಿಲ್ಲ. ನಾರಾಯಣ ಇಲ್ಲಿ ಒಬ್ಬ ಕ್ರೂರಿಯೇ. ಅನುಮಾನವಿಲ್ಲ, ಸಾಂಸ್ಕೃತಿಕ ವಿಘಟನೆಯನ್ನು ಹುಟ್ಟು ಹಾಕಲು ಪ್ರಯತ್ನಿಸುತ್ತಿರುವ ಆತ ಯಾರಿಗೂ ಮೆಚ್ಚಿಕೆಯಾಗುವುದಿಲ್ಲ. ಸುಶೀಲಳ ಮೇಲೆ ನಡೆದ ಆಕ್ರಮಣದ ನಂತರ ಆ ಕುಟುಂಬ ಉದ್ದಕ್ಕೂ ಅಸಹಾಯಕ ಸ್ಥಿತಿಯಲ್ಲೇ ಉಸಿರಾಡುತ್ತದೆ. ಯಾಕೆ ಈ ಪ್ರಕೃತಿ ಹೆಣ್ಣನ್ನು ಇಷ್ಟೊಂದು ಮೋಸಗೊಳಿಸಿದೆ ಅನ್ನಿಸುತ್ತದೆ. ನಾರಾಯಣ ಗಂಡು ಸಾಮರ್ಥ್ಯದೆದುರು ಸುಶೀಲ ದೈಹಿಕವಾಗಿ ಸೋಲೊಪ್ಪಿಕೊಳ್ಳುತ್ತಾಳೆ. ಈ ಕಾರಣದಿಂದ ಅವಳ ಮೇಲಿನ ಆಕ್ರಮಣ ಸುಲಭವಾಗುತ್ತದೆ. ಹಾವಿನ ವಿಷದಿಂದ ಭುಜಂಗಯ್ಯನ ಪ್ರಯತ್ನದಲ್ಲಿ

ಪ್ರಾಣಾಪಾಯದಿಂದ ಪಾರಾದ ನಾರಾಯಣ ಮನುಷ್ಯನಾಗುತ್ತಾನೆಯೇ ಎಂಬ ಅನುಮಾನವಿದೆ. ಆದರೆ ಕೃತಿಗೆ ಅದು ಮುಖ್ಯವಾಗುವುದಿಲ್ಲ. ಯಾಕೆಂದರೆ ಅವನ ವಿಷವನ್ನು ತಾನು ಎಳೆದುಕೊಂಡು ಭುಜಂಗಯ್ಯ ಸಾಯುತ್ತಾನೆ.

ಈ ಕೃತಿಗೆ ಭುಜಂಗಯ್ಯನೇ ಮುಖ್ಯವಾಗುವುದರಿಂದ ಕಾದಂಬರಿ ಇಲ್ಲಿಗೆ ಅಂತ್ಯವಾಗುತ್ತದೆ. ಕುಟುಂಬ ಮತ್ತು ವಿಷಮದಾಂಪತ್ಯದ ಬದುಕು ಹೇಗೆ ಅನಾವರಣವಾಗಿದೆ ಎಂಬುದನ್ನು ಈ ಕಾದಂಬರಿಯಲ್ಲಿ ಆಲನಹಳ್ಳಿಯವರು ಚಿತ್ರಿಸಿದ್ದಾರೆ.

ಅರವತ್ತು ಎಪ್ಪತ್ತರ ದಶಕದಲ್ಲಿ ಭಾರತೀಯ ಸಮಾಜವು ಪಾಶ್ಚಿಮಾತ್ಯ ಅಂಶಗಳನ್ನು ಇನ್ನೂ ಅರಗಿಸಿಕೊಳ್ಳುತ್ತಿದ್ದ ಕಾಲ. ಆಧುನಿಕ ಮೌಲ್ಯಗಳು ಈ ಸಂಕ್ರಮಣ ಸ್ಥಿತಿಯಲ್ಲಿ ಮನುಷ್ಯನನ್ನು ಬಲವಾಗಿಯೇ ಆವರಿಸಿಕೊಳ್ಳಲಾರಂಭಿಸಿತು. ಸಮಷ್ಟಿ ಪ್ರಜ್ಞೆಯ ಸಮಾಜವು ವ್ಯಕ್ತಿ ಕೇಂದ್ರಿತ ನಿಲುವುಗಳ ಸಮಾಜವಾಗಿ ರೂಪುಗೊಳ್ಳಲಾರಂಭಿಸಿತು. ಆಗಲೇ ಭಾರತೀಯ ಸಮಾಜದಲ್ಲಿನ ಅನಾಗರೀಕತೆಯ ಅಂಶ ದೋಷಗಳು ಜನರಿಗೆ ಕಾಣಲಾರಂಭಿಸಿತು. ವಿದ್ಯಾಭ್ಯಾಸದ ಗುರಿಯು ಸಂಪೂರ್ಣವಾಗಿ ತನ್ನ ಪರಿಣಾಮವನ್ನು ತೋರಲಾರಂಭಿಸಿತು. ಸಮಾಜದ ಎಲ್ಲಾ ವರ್ಗಗಳಲ್ಲೂ ಪಲ್ಲಟಗಳನ್ನೂ ನೋಡುತ್ತಿದ್ದ ಈ ದಶಕಗಳಲ್ಲಿ ಕುಟುಂಬ ನೆಲೆಯಲ್ಲಿ ಸಾಕಷ್ಟು ಪರಿವರ್ತನೆಯಾದವು. ಒಟ್ಟು ಕುಟುಂಬದ ವ್ಯವಸ್ಥೆಯನ್ನು ಅನುಸರಿಸುತ್ತಿದ್ದ ಸಮಾಜವು ಆಧುನಿಕ ಮೌಲ್ಯಗಳಿಂದ, ನಗರೀಕರಣದ ಪ್ರಭಾವದಿಂದ ವಿಘಟಿತ ಕುಟುಂಬಗಳಾಗಿ ಒಡೆದು ತಮ್ಮ ಹುಸಿ ಅಸ್ಥಿತ್ವವನ್ನು ಕಂಡುಕೊಳ್ಳಲು ಆರಂಭಿಸಿದವು. ಆಘಾತಕಾರಿ ಎನ್ನುವ ಮಟ್ಟಕ್ಕೆ ಕುಟುಂಬಗಳ ಪಲ್ಲಟಗಳು ಸಮಾಜದ ಮೇಲೆ ಪರಿಣಾಮ ಬೀರಲಾರಂಭಿಸಿದವು. ಅವು ವಿಷಮ ದಾಂಪತ್ಯಗಳಾಗಿ ಸೃಷ್ಟಿಯಾಗಲು ಕಾರಣವಾದವು.

ಈ ರೀತಿಯ ಸಾಮಾಜಿಕಪಲ್ಲಟ ಭಾರತೀಯ ಸಮಾಜದ ಸ್ಥಿತ್ಯಂತಕ್ಕೆ ಕಾರಣವಾಯಿತು. ಇವುಗಳನ್ನು ಪ್ರತಿಬಿಂಬಿಸುವಂತಹ ಅನೇಕ ಸಾಹಿತ್ಯ ಕೃತಿಗಳು ಇತಿಹಾಸ ಕೃತಿಗಳು ಹೊರಬಂದವು. ಕನ್ನಡ ಸಾಹಿತ್ಯದಲ್ಲಿ ಇಂತಹ ಪಲ್ಲಟಗಳನ್ನು ನವ್ಯ ಸಾಹಿತ್ಯ ಘಟ್ಟದಲ್ಲಿ ಕಾಣಬಹುದು. ಈ ಸಾಹಿತ್ಯದಲ್ಲಿ ನಾವು ವಿಘಟಿತ ಪ್ರಪಂಚವನ್ನು ಅದರ ಆಳ ಅಗಲಗಳೊಂದಿಗೆ ವಿಶ್ಲೇಷಣೆಗೆ ತೊಡಗುವುದನ್ನು ನೋಡಬಹುದು. ಇಂತಹ ಸಂಕ್ರಮಣ ಸ್ಥಿತಿಯಲ್ಲಿ ತಮ್ಮ ಸಾಹಿತ್ಯ ಬರವಣಿಗೆಯನ್ನು ಆರಂಭಿಸಿದ ಆಲನಹಳ್ಳಿ ಕೃಷ್ಣ ಇವರ ಸಾಹಿತ್ಯ ವಸ್ತುಗಳನ್ನು ಮನುಷ್ಯನ ವಿಘಟಿತ ಮನಸ್ಸುಗಳ ಸ್ವರೂಪ ಮನುಷ್ಯನ ಅನುಭವಗಳಲ್ಲಿ ಮತ್ತು ಹುಡುಕುವಿಕೆಯಲ್ಲಿ ಬಹಳಷ್ಟು ಬದಲಾವಣೆಗಳನ್ನು ಕಂಡುಕೊಳ್ಳಬಹುದು.

ಆಲನಹಳ್ಳಿಯವರ ಕಥೆ ಹಾಗೂ ಕಾದಂಬರಿಗಳಲ್ಲಿ ಆದರ್ಶ ಕುಟುಂಬ ವ್ಯವಸ್ಥೆಯಾಗಲೀ ಆದರ್ಶನಾಯಕ ನಾಯಕಿಯರಾಗಲೀ ಆದರ್ಶವನ್ನು ಪ್ರತಿಪಾದಿಸುವ ವಸ್ತುಗಳನ್ನು ಕಾಣಲು

ಸಾಧ್ಯವಿಲ್ಲ. ಮನುಷ್ಯ ಮನುಷ್ಯನ ನಡುವಿನ ಸಂಬಂಧ ಯಾವ ರೀತಿಯಲ್ಲಿ ರೂಪುಗೊಳ್ಳುತ್ತಿದೆ. ಈ ಸಂಬಂಧಗಳ ಮೂಲ ಸ್ವರೂಪಗಳೇನು? ಎಂಬ ಪ್ರಶ್ನೆಗಳನ್ನು ಸೃಷ್ಟಿಮಾಡುತ್ತಾ ಬದುಕಿನ ಶೋಧನೆಯನ್ನು ಕಾಣುತ್ತೇವೆ. ಸಮಾಜವನ್ನು ಪರಿವರ್ತಿಸಬೇಕು ಎಂಬ ಧೋರಣೆಯನ್ನು ಹೊಂದಿದವರು ಭುಜಂಗಯ್ಯನ ದಶಾವತಾರ ಕಾದಂಬರಿಯಲ್ಲಿ ವಿಘಟಿತ ಕುಟುಂಬ ಮನಸ್ಸುಗಳ ವಿವಿಧ ಮಾದರಿಗಳನ್ನು ಪರಿಚಯಿಸಿಕೊಳ್ಳಬಹುದು. ಭುಜಂಗಯ್ಯನ ಪಾತ್ರದ ಮೂಲಕವೇ ಇಡೀ ಸಮಾಜದ ಪಲ್ಲಟವನ್ನು ಹೇಳುತ್ತಿರುವ ಭುಜಂಗಯ್ಯನ ವ್ಯಕ್ತಿನಿಷ್ಠ ಪ್ರಜ್ಞೆಯಲ್ಲಿ ಸಮಷ್ಠಿ ಪ್ರಜ್ಞೆಯನ್ನು ಅವಗಾಹನೆಗೆ ತಂದುಕೊಳ್ಳುವುದು. ಈ ವಿಘಟನೆಗಳು ಕಾಣಲು ಕಾರಣಗಳೇನು? ಇದಕ್ಕೆ ಮನುಷ್ಯನಲ್ಲಿ ಉಳಿದುಕೊಂಡು ಬಂದಿರುವ ಯಜಮಾನ ಸಂಸ್ಕೃತಿಯ ಪ್ರವೃತ್ತಿಯಾಗಿರಬಹುದು ಮತ್ತು ಆಧುನಿಕತೆಯ ಪ್ರಭಾವದಿಂದ ಈ ಪ್ರವೃತ್ತಿಯೂ ಬೆಳವಣಿಗೆಯನ್ನು ಪಡೆದಿರಬಹುದೇ ಎಂಬುದು ಗಮನಾರ್ಹವಾದುದು.

ಆಲನಹಳ್ಳಿಯವರ ಸಮಗ್ರ ಕಥೆಗಳಲ್ಲಿ ನಾವು ಒಟ್ಟು ಕುಟುಂಬದ ವ್ಯವಸ್ಥೆಯನ್ನು ಕಾಣಲು ಸಾಧ್ಯವಿಲ್ಲ. ಮನುಷ್ಯ ಕಲ್ಪಿತ ಕುಟುಂಬ ವ್ಯವಸ್ಥೆ ರೂಪುಗೊಳ್ಳದೇ ಅದು ಅವನ ಕನಸಾಗಿ ಉಳಿದಿರುವುದನ್ನು ನೋಡುತ್ತೇವೆ. ಭಾರತೀಯ ಸಮಾಜದ ಕುಟುಂಬಗಳಲ್ಲಿ ಕಾಣುತ್ತಿದ್ದ ಹೊಂದಾಣಿಕೆ, ಬಯಕೆಗಳ ನಿಗ್ರಹ ನಿಸ್ವಾರ್ಥಪರ ಆಲೋಚನೆಗಳು, ಹಿರಿಯರಿಗೆ ಗೌರವ ಕೊಡುವಿಕೆಗಳಲ್ಲಿ ಬಹುತೇಕ ಪಲ್ಲಟಗೊಂಡವು. ವಿದ್ಯಾಭ್ಯಾಸದಿಂದ ಎಚ್ಚೆತ್ತ ಮನುಷ್ಯನು ಕುಟುಂಬದಲ್ಲಿ ಒಬ್ಬ ಪ್ರತಿಷ್ಠಿತ ವ್ಯಕ್ತಿಯಾಗಿ ಬೆಳೆಯಲಾರಂಭಿಸಿದನು. ಇದರ ಪರಿಣಾಮ ಮತ್ತೊಂದು ರೀತಿಯ ಯಜಮಾನಿಕೆ ಬೆಳೆದು ಕುಟುಂಬದ ಅಸ್ತಿತ್ವದಲ್ಲಿಯೇ ವಿಘಟನೆಯ ಬಿರುಕುಗಳು ಕಂಡವು.

ಕೆಲವು ಕಥೆಗಳಲ್ಲಿ ಮನುಷ್ಯನ ಅಸ್ಪಷ್ಟತೆ ಹೊಸದರ ಬಯಕೆ ಮಾನಸಿಕ ತೊಳಲಾಟ ಬದುಕಿನ ಅರ್ಥ ಹುಡುಕುವಿಕೆಗಾಗಿ ವ್ಯರ್ಥ ಪ್ರಯತ್ನ ಮಾಡುವುದು. ಪಾಪಪ್ರಜ್ಞೆಯಲ್ಲಿ ನರಳುವಿಕೆ, ಅನಾಥಪ್ರಜ್ಞೆಯನ್ನು ಸೃಷ್ಟಿಸಿಕೊಳ್ಳುವುದು ಇವುಗಳಿಗೆಲ್ಲಾ ಕಾರಣ ಸಂಕ್ರಮಣ ಸ್ಥಿತಿಯಲ್ಲಿ ಹೊಸದಾಗಿ ರೂಪುಗೊಳ್ಳುತ್ತಿದ್ದ ಕುಟುಂಬ ವ್ಯವಸ್ಥೆ. ಇಲ್ಲಿನ ಕಥಾ ನಾಯಕರುಗಳು ಕುಟುಂಬ ವ್ಯವಸ್ಥೆಯನ್ನು ತಿರಸ್ಕರಿಸಿದವರಲ್ಲ. ಆದರೆ ತಮ್ಮದೇ ಕುಟುಂಬ ವ್ಯವಸ್ಥೆಯ ಕಲ್ಪನೆಯನ್ನು ಸಾಕಾರಗೊಳಿಸಿಕೊಳ್ಳಲು ಪ್ರಯತ್ನಿಸಿದವರು. ಕುಟುಂಬಕ್ಕೆ ಯಾವುದೇ ಚೌಕಟ್ಟನ್ನು ನಿರ್ಮಿಸಿಕೊಳ್ಳಲು ಅವರು ತಯಾರಿಲ್ಲ. ನಗರ ಸಂಸ್ಕೃತಿಯಿಂದ ಪ್ರಭಾವಿತಗೊಂಡ ನಾಯಕನು ಹಳ್ಳಿಗೆ ಮರಳಿದಾಗ ಅಲ್ಲಿನ ಪರಿಸರ, ವಾತಾವರಣದಿಂದಲೇ ಪಲಾಯನ ಮಾಡಬೇಕೆಂಬ ಮನೋಧರ್ಮದವನು. ಈಗಾಗಲೇ ತಾನು ಅಂಟಿಕೊಂಡಿರುವ ಪ್ರಗತಿಪರ ಧೋರಣೆಗಳಿಗೆ ಪ್ರಬಲವಾದ ಪರಿಸ್ಥಿತಿಗಳಾಗಿ ಹಳ್ಳಿಯ ವ್ಯವಸ್ಥೆ ರೂಪುಗೊಂಡಿದೆ. ನಾಯಕನು ಮೆಚ್ಚಿಕೊಂಡ ಹುಡುಗಿಯೊಂದಿಗೆ ಮದುವೆಯಾಗಲು ಬರುವ ಆತಂಕಗಳು ಅಜ್ಜಿ, ಅವ್ವ, ಅಕ್ಕ ಇವರುಗಳ

ಸಂಬಂಧದಿಂದ ಋಣಮುಕ್ತರಾಗಲು ಪರಿತಪಿಸುವುದು, ಆದರೆ ಅವನ ಕಲ್ಪನೆಗಳು ನಿರಾಶೆಯನ್ನು ಹೊಂದುತ್ತವೆ. 'ತಪ್ತ' ಕಥೆಯ ನಾಯಕನು ತನ್ನ ತಾಯಿಯ ಒತ್ತಾಯದ ಜೊತೆಗೆ ಗೌರಿಯ ನಿರ್ಲಿಪ್ತ ಮನೋಭಾವವು ಅವನನ್ನು ಪರಿವರ್ತಿಸುವಲ್ಲಿ ಯಶಸ್ವಿಯಾಗುತ್ತವೆ. ಪ್ರಭಾಳು ಗೌರಿಯಷ್ಟು ನಾಯಕನನ್ನು ಕಾಡಲು ಸಾಧ್ಯವಾಗುವುದಿಲ್ಲ. ಪ್ರಭಾಳೊಂದಿಗೆ ತನ್ನ ಕುಟುಂಬವನ್ನು ಕಲ್ಪಿಸಿಕೊಂಡಿದ್ದ ನಾಯಕನೊಂದಿಗೆ ಕುಟುಂಬವು ಕೈಜಾರುತ್ತದೆ. "ಕೃಷ್ಣ ಕುಟುಂಬ ಪ್ರೇಮಿ ಮತ್ತು ಕಾಮುಕ ಎರಡೂ ಆಗಿದ್ದೆನೆಂದು ಕಾಣುತ್ತದೆ. ಈತನನ್ನು ನೆನೆಯುವಾಗ ಕಾಮಪ್ರೇಮ ವ್ಯಭಿಚಾರ, ವಿಷಮದಾಂಪತ್ಯ, ಸ್ತ್ರೀ ದರ್ಶನ, ಭ್ರಮೆ ಮುಂತಾದುವೆಲ್ಲ ಒಂದರೊಡನೊಂದು ಸೇರಿಕೊಳ್ಳುತ್ತವೆ. ಇಲ್ಲಿ ಕೂಡ ಕೃಷ್ಣನಿಗೆ ಅನ್ಯಾಯ ಮಾಡುವುದು ತಪ್ಪು, ಹೆಣ್ಣುಗಳನ್ನು ಇಷ್ಟಪಡದ ಗಂಡಸು ಒಬ್ಬನೂ ಇರಲಾರ. ಆದರೆ ಕೃಷ್ಣ ಹೇಳಿಕೊಳ್ಳುವ ಸ್ವಭಾವದವನು ಅಷ್ಟೇ ಪ್ರೇಮಕ್ಕಿರುವ ಬಿಂಕ, ಶೈಲಿ, ವಿರಹದ ಬಗ್ಗೆ ಅಷ್ಟು ಗಮನಕೊಡದವನು...."[೩೨]

ಆಲನಹಳ್ಳಿಯವರ ಕಥೆಗಳಲ್ಲಿ ನಾವು ಆದರ್ಶ ತತ್ವವನ್ನು, ಆದರ್ಶನಾಯಕ, ನಾಯಕಿಯರನ್ನು ಹುಡುಕಲು ಸಾಧ್ಯವಿಲ್ಲ, ಇಲ್ಲಿ ಯಾರೂ ಸಮಾಜದ ಮಾರ್ಗದರ್ಶಕರಾಗಲು ತಯಾರಿಲ್ಲ. ಇಲ್ಲಿನ ಕಥಾನಾಯಕನು ತಾನೇ ನಿರ್ಮಿಸಿಕೊಂಡ ಭ್ರಮೆ, ದಂದ್ವಗಳಿಂದ ಮುಕ್ತನಾಗಲು ಹೆಣಗುತ್ತಿರುವ ಚಿತ್ರಗಳೇ ಸಿಗುತ್ತವೆ. ಬದುಕಬೇಕೆಂಬ ಹೆಬ್ಬಯಕೆ ಮಾತ್ರ ಕಿಂಚಿತ್ತೂ ಕಡಿಮೆಯಾಗದೆ ಈ ಸಮಸ್ಯೆಗಳ ನಡುವೆಯೇ ಬದುಕಬೇಕು ಎಂದು ನಾಯಕನು ಸಮಸ್ಯೆಗಳನ್ನು ಎದುರಿಸುವ ಎದೆಗಾರಿಕೆಯು ಸಮರ್ಥನೀಯವಾಗಿ ನಿರೂಪಣೆಗೊಂಡಿದೆ. ಭ್ರಮೆ, ದ್ವಂದ್ವ ನಿಲುವುಳೊಂದೇ ಗಂಡು-ಹೆಣ್ಣುಗಳ ಸಂಬಂಧಗಳಲ್ಲಿ ಕಾಣಸಿಗುವ ವಿವಾಹಬಾಹಿರ ಸಂಬಂಧಗಳಿಗೆ ನಾಯಕನು ತನ್ನನ್ನು ತಾನು ತೊಡಗಿಸಿಕೊಂಡು ಅವುಗಳ ಸ್ವರೂಪಗಳ ಎಳೆಯನ್ನು ಬಿಚ್ಚುತ್ತಾ ಹೋಗುತ್ತಾನೆ. ಸಾಂಪ್ರದಾಯಿಕ ಕಟ್ಟುಪಾಡುಗಳನ್ನು, ಚೌಕಟ್ಟುಗಳನ್ನು ಮೀರುವುದೇ ತಮ್ಮ ಪ್ರಮುಖ ಗುರಿ ಅದನ್ನು ಸಾಧಿಸಲು ತಾವು ತುಳಿಯುತ್ತಿರುವ ದಾರಿ ಅನೈತಿಕವಾದುದು. ಆದರೂ ಪರವಾಗಿಲ್ಲ ಇಲ್ಲಿ ತನ್ನ ಸುಖದ ಕಡೆಯೇ ಹೆಚ್ಚಿನ ಪ್ರಾಧಾನ್ಯ ಸಂಪ್ರದಾಯಮೌಲ್ಯಗಳಿಗೆ ಪ್ರಶ್ನೆ ಹಾಕುವುದು ಇದರ ಮನೋಧರ್ಮವಾಗಿ ರೂಪುಗೊಂಡಿದೆ. ಬದುಕನ್ನು ನಂಬಿಕೆಗಳಿಂದ ನಂಬದೇ ಪ್ರತಿಯೊಂದು ಅನುಭವವನ್ನು ಪ್ರಯೋಗಾತ್ಮಕವಾಗಿಯೇ ಅನುಭವಿಸಬೇಕು ಎಂಬ ದೃಷ್ಟಿಕೋನದವರು. ಅದು ಗಂಡು-ಹೆಣ್ಣಿನ ಲೈಂಗಿಕ ಸಂಬಂಧವಾಗಿರಬಹುದು ರಕ್ತ ಸಂಬಂಧವಾಗಿರಬಹುದು. ಅಥವಾ ಗಾಢವಾಗಿ ಕಾಡುವ ಸಾವಿನ ಪ್ರಜ್ಞೆ ಆಗಿರಬಹುದು. 'ತಪ್ತ' ಕಥೆಯ ನಾಯಕ ಗೌರಿಯ ನಿರ್ಲಿಪ್ತ ಭಾವದಿಂದ ತಾನು

---

೩೨. ರಾಘವೇಂದ್ರ ಪಾಟೀಲ(ಸಂ), 'ಕಾಡಿನ ಹುಡುಗ ಕೃಷ್ಣ', ೧೯೯೦, ಪು. ೫೯.

ಇಷ್ಟಪಟ್ಟ ಪ್ರಭಾಳನ್ನು ಮರೆಯಲು ಸಾಧ್ಯವಾಗದೇ ಕೊನೆಯಲ್ಲಿ ಗೌರಿಯನ್ನು ಒಪ್ಪಿಕೊಳ್ಳುವನು ಅವರ ಬದುಕಿನ ವೈವಾಹಿಕ ಸಂಬಂಧಗಳು ಎಷ್ಟು ಗಟ್ಟಿಯಾಗಿ ನಿಲ್ಲುತ್ತವೆ. 'ತೊರೆ'ಯ ಪ್ರಭು ಮತ್ತು ಲಕ್ಷ್ಮೀ ಇವರುಗಳ ಬದುಕು ತಲ್ಲಣಗಳಿಂದ ಕೂಡಿದ್ದ ವೈವಾಹಿಕ ಬದುಕು ಲಕ್ಷ್ಮೀಗೆ ಕನಸಿನ ರೂಪದಲ್ಲಿದೆ. ಪ್ರಭುವಿಗೆ ಒಪ್ಪಿಗೆಯಿಲ್ಲದ ತಾರಾಳೊಂದಿಗೆ ಅಪ್ರಮಾಣಿಕ ಬದುಕನ್ನು ನಡೆಸುತ್ತಿದ್ದಾನೆ. ಇಲ್ಲಿ ಲಕ್ಷ್ಮೀ ಮತ್ತು ಪ್ರಭು ಒಬ್ಬರನ್ನೊಬ್ಬರು ಪ್ರೀತಿಸಿದ್ದರೂ ಅವರ ಮದುವೆ ಕನಸಾಗಿಯೇ ಉಳಿದು ಸುಖೀ ಕುಟುಂಬ ಎನಿಸಿಕೊಳ್ಳಬಹುದಾಗಿದ್ದ ಅವರ ಸಂಸಾರಗಳು ದುಃಖದಿಂದ ಪರಿತಪಿಸುವಂತಹ ನೆಲೆಗಳಾದವು. ಲಕ್ಷ್ಮೀದೇವಿಯ ಬದುಕು ಪ್ರಭುವಿಗೆ ಇಷ್ಟವಿಲ್ಲದ ತಾರಾಳೊಂದಿಗೆ ಬದುಕುತ್ತಿರುವಾಗ ಸುಖೀ ಕುಟುಂಬ ನೋಡಲು ಸಾಧ್ಯವೇ.

'ಸೀಮಂತ' ಕಥೆಯ ಪದ್ಮ ಪಾಪಪ್ರಜ್ಞೆಯಿಂದ ನರಳುತ್ತಿರುವುದು, ತನ್ನ ಗಂಡನಾದ ನರಹರಿಯ ದೌರ್ಬಲ್ಯ ಸದಾ ಕಾಡುತ್ತ ಸುಖವಾದ ವೈವಾಹಿಕ ಸಂಬಂಧ ಏರ್ಪಡದಿರುವುದು ಅವರಿಗೆ ಅಸಾಧ್ಯವಾಗುತ್ತದೆ. ಪದ್ಮಳು ಕುಟುಂಬ ವ್ಯವಸ್ಥೆಯಲ್ಲಿ ಸುಖವಾಗಿ ಸಂಸಾರ ಮಾಡಲು ಸಾಧ್ಯವೇ ಗಂಡು-ಹೆಣ್ಣುಗಳ ಸಮಾನ ಮನಸ್ಥಿತಿಯ ಹೊಂದಾಣಿಕೆಯಿಂದಲೇ ಅವರು ಮಾನಸಿಕ ಶಾಂತಿ ಕಾಣಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಕುಟುಂಬ ವ್ಯವಸ್ಥೆಯ ನಿರಾಸಕ್ತಿಯಿಂದ ತಮ್ಮ ತನಗಳನ್ನು ಕಳೆದುಕೊಳ್ಳಲು ಪ್ರೇರಕಗಳಾಗುತ್ತವೆ. ಭೂತದ ನೆನಪುಗಳು ಕಾಡುವಿಕೆ, ವರ್ತಮಾನದ ಸಮಾಜದಲ್ಲಿನ ಸ್ಪಂದನೆಗಳು ಮನುಷ್ಯನ ಯಾವುದೇ ಒಂದು ನೆಲೆಯನ್ನು ಗುರುತಿಸಲು ಕಷ್ಟವಾಗುತ್ತದೆ. ಕ್ಷಣಿಕ ಸುಖ ಲಾಲಸೆಗಳಿಗಾಗಿ ತಮ್ಮ ವ್ಯಕ್ತಿತ್ವಗಳನ್ನು ಕಡೆಗಣಿಸುತ್ತಾ ಬದುಕಿನ ದ್ವಂದ್ವಗಳಲ್ಲಿ ತಮ್ಮನ್ನು ಗುರುತಿಸಿಕೊಳ್ಳುವಿಕೆಯಲ್ಲಿ ಮನುಷ್ಯನ ವ್ಯರ್ಥ ಪ್ರಯತ್ನವನ್ನು ಕಾಣಬಹುದು 'ಶ್ರಾವಣ' ಕಥೆಯ ಶಾಕುಂತಲಾ ಸಮಾಜದ ಅಪಹಾಸ್ಯಕ್ಕೆ ಗುರಿಯಾಗಿ ಕುಟುಂಬದವರಿಂದ ಕಡೆಗಣಿಸಲ್ಪಟ್ಟವಳು. 'ಹುತ್ತ' ಕಥೆಯಲ್ಲು ವಿಘಟಿತ ಕುಟುಂಬದ ಫಲವಾಗಿ ಸುಮಿತ್ರ ಮತ್ತು ಅವಳ ತಾಯಿ ಅನುಭವಿಸುತ್ತಿರುವ ಮಾನಸಿಕ ಹಿಂಸೆಗಳು ಅತೃಪ್ತ ಬಯಕೆಗಳು ಅವರನ್ನು ಅನೈತಿಕ ಮಾರ್ಗಗಳಿಗೆ ಪ್ರೇರಣೆ ನೀಡುತ್ತಿರುವುದು. ಜೊತೆಗೆ ಸುಮಿತ್ರಳ ತಾಯಿ ವೈವಾಹಿಕ ಚೌಕಟ್ಟನ್ನು ಮೀರಿ ಬದುಕು ನಡೆಸುತ್ತಿರುವವಳು. ಅವಳ ಕಂಗೆಟ್ಟ ಸ್ಥಿತಿಯಿಂದ ಬದುಕಿನಲ್ಲಿ ಜೀವಂತತೆಯನ್ನು ಕಾಣಲು ಸಾಧ್ಯವೇ ಎಂಬ ಪ್ರಶ್ನೆ ಮೂಡುತ್ತದೆ.

ಭಾರತೀಯ ಸಮಾಜದಲ್ಲಿರುವ ಮದುವೆ, ಸಂಸಾರ, ಮಕ್ಕಳು ಎಂಬ ಬಂಧನಗಳು ವ್ಯಂಗ್ಯವಾಗಿ ನಗೆಪಾಟಲಿನ ವಸ್ತುಗಳಾಗಿ ಕಂಡುಬರುತ್ತವೆ. ಗಂಡು-ಹೆಣ್ಣುಗಳು ತಮ್ಮ ಕ್ಷಣಿಕ ತೃಪ್ತಿಗಾಗಿ ಹಾತೊರೆಯುವುದು ಮುಖ್ಯವಾಗಿದೆ. ಇಲ್ಲಿ ತಮ್ಮ ಮುಂದಿನ ಪೀಳಿಗೆಯ ಬಗ್ಗೆ ಆಲೋಚನೆಯೂ ಮೂರ್ಖತನ. ನಾಯಕ, ನಾಯಕಿಯರು ಒತ್ತಾಯಕ್ಕೆ ಒತ್ತಡಕ್ಕೆ ಮಣಿದು ಕುಟುಂಬ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದಾರೆ. ಅವರುಗಳು ಮನಃಪೂರ್ವಕವಾಗಿ ಈ

ವ್ಯವಸ್ಥೆಯನ್ನು ಒಪ್ಪಿಕೊಂಡಿಲ್ಲ. ದೌರ್ಬಲ್ಯಗಳನ್ನು ಮುಚ್ಚಿಕೊಳ್ಳಲು ದುರ್ಬಲ ಮನಸ್ಥಿತಿಯ ಅಸಹಾಯಕತೆಯಿಂದ ಕುಟುಂಬದ ನೆಲೆಯನ್ನು ಅಪ್ಪಿಕೊಂಡಿರುವುದು ಕಾಣುತ್ತದೆ. ಕುಟುಂಬ ವ್ಯವಸ್ಥೆಯಲ್ಲಿರುವ ವಿಘಟಿತ ವ್ಯಕ್ತಿತ್ವಗಳು ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗುವ ಮನಸ್ಥಿತಿಗಳು, ಪಲ್ಲಟಗೊಳ್ಳುತ್ತಿರುವ ಸಾಮಾಜಿಕ ವ್ಯವಸ್ಥೆಗಳಲ್ಲಿ ಮನುಷ್ಯನಿಗೆ ಯಾವುದೇ ಪ್ರಾಮುಖ್ಯತೆ ಇಲ್ಲದಿರುವುದು, ಕೈಗಾರೀಕರಣ, ನಗರೀಕರಣ ಎಂಬ ಆಧುನಿಕ ಮೌಲ್ಯಗಳಿಂದ ಸ್ಥಿರವಾದ ದೃಢವಾದ ಕಟುಂಬದ ನೆಲೆಯನ್ನು ಮನುಷ್ಯನು ಹುಡುಕುತ್ತಿದ್ದಾನೆ. ಆಲನಹಳ್ಳಿಯವರ ಕಥೆಗಳಿಗೆ ವಿವಾಹಬಾಹಿರ ಸಂಬಂಧಗಳ ವಿಜೃಂಭಣೆಯನ್ನು ಕಾಣಬಹುದು. ಮನುಷ್ಯನ ಮೂಲ ಪ್ರವೃತ್ತಿಗಳಾದ ಕಾಮವು ಮನುಷ್ಯನನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು ಅವನ ಮೇಲೆ ತನ್ನ ಪ್ರಭುತ್ವವನ್ನು ತೋರಿಸುತ್ತಲೇ ಬೆಳೆಯುತ್ತಿರುವುದು ಇದು ಮನುಷ್ಯನಿಗೆ ಎಚ್ಚರಿಕೆಯನ್ನು ನಾಶ ಮಾಡಿರುವುದನ್ನು ಕಾಣಲು ಸಾಧ್ಯ.

ನಿಜ ಜೀವನದಲ್ಲೂ ಆಲನಹಳ್ಳಿಯವರು ಬಹಳಷ್ಟು ದ್ವಂದ್ವಗಳಿಂದ ಬದುಕನ್ನು ಅನುಭವಿಸುತ್ತಿದ್ದುದನ್ನು ನೋಡಿದಾಗ ಅದರ ಕೃತಿಯಲ್ಲಿ ಈ ಅಂಶಗಳು ಅನಾವರಣಗೊಂಡಿರುವ ಸಾಧ್ಯತೆ ಹೆಚ್ಚಾಗಿದೆ. ವಿವಾಹ ಬಾಹಿರ ಸಂಬಂಧಗಳ ಗ್ರಹಿಕೆಯಿಂದಲೇ ಹೆಣ್ಣಿನ ರಹಸ್ಯ ಮನಸ್ಥಿತಿಗಳನ್ನು ತಿಳಿಯಲು ಪ್ರಯತ್ನಿಸುತ್ತಾರೆ. ಆದರೆ ಈ ರಹಸ್ಯಗಳು ಕಾಮ ಪರಿಕಲ್ಪನೆಯಲ್ಲಿ ಯಶಸ್ವಿಯಾಗಿ ಭೇದಿಸಿದರು. ಹೆಣ್ಣಿನ ಇನ್ನೊಂದು ಮುಖದ ಪರಿಚಯವನ್ನೇ ಕೊಡುವುದಿಲ್ಲ.

'ಫೀನಿಕ್ಸ್' ಕಥೆಯಲ್ಲಿ ಎರಡು ಹೆಣ್ಣು ಒಂದು ಗಂಡು ಇವರ ನಡುವಿನ ಸಂಬಂಧವನ್ನು ತಿಳಿಸುವ ಕಥೆಯಾಗಿದೆ. ಈ ಸಂಬಂಧಗಳಿಗೆ ಯಾವುದೇ ಹೆಸರನ್ನು ಕೊಡಲು ಈ ಗಂಡು-ಹೆಣ್ಣುಗಳು ಒಪ್ಪುವುದಿಲ್ಲ. ಸಮಾಜವು ಇಂತಹ ಸಂಬಂಧಗಳನ್ನು ಅನೈತಿಕವೆಂದು ಗುರುತಿಸುತ್ತದೆ. ಆದರೆ ಇಲ್ಲಿನ ನಿರೂಪಕ, ನಾಯಕಿಯರೂ ಈ ಸಂಬಂಧವನ್ನು ಅನೈತಿಕವೆಂದು ಒಪ್ಪಲು ಸಿದ್ಧವಿಲ್ಲ. ಗಂಡಿನ ಅಹಂ ಹೆಣ್ಣಿನ ತಾಳ್ಮೆ ಪ್ರೇಮ ಮಮತೆಯ ಅಂಶಗಳ ಇತರ ಮುಖಗಳನ್ನು ಈ ಕಥೆಯಲ್ಲಿ ನೋಡಬಹುದು. ಪ್ರಬುದ್ಧ ಮನಸ್ಥಿತಿಗಳನ್ನು ಹೊಂದಿರುವ ಈ ಕಥಾ ಪಾತ್ರಗಳಲ್ಲಿ ಅವರುಗಳದೇ ಆದ ತೊಳಲಾಟ, ತಾಕಲಾಟಗಳಿಗೆ ಪ್ರಮುಖ ಸ್ಥಾನವನ್ನು ಕಲ್ಪಿಸಿದೆ. ಹೆಣ್ಣಿನ ಪ್ರೇರಿತವಾದ ನಡೆನುಡಿಗಳು ಗಂಡಿನ ಮನೋಭಾವವನ್ನು ಕಸಿಯಲು ಕಾರಣವಾಗಿರುವುದು. ಅವರುಗಳ ಅಪಕ್ವ ಮನಸ್ಥಿತಿಗಳು ಮತ್ತು ಸಾಮಾಜಿಕ ಮೌಲ್ಯಗಳ ಬಗ್ಗೆ ಅವರುಗಳಿಗಿರುವ ಸಿಟ್ಟನ್ನು ತಮ್ಮದೇ ಇಂತಹ ಸಂಬಂಧಗಳನ್ನು ನಿರ್ಮಿಸಿಕೊಳ್ಳುವುದರ ಮೂಲಕ ಸಿಟ್ಟನ್ನು ಪರಿಹರಿಸಿಕೊಳ್ಳುವುದು ಜೀವನ ಇರುವುದೇ ಇಂತಹ ಅನೈತಿಕ ಸಂಬಂಧಗಳ ಅನುಭವಗಳನ್ನು ಪಡೆಯಲು ಎಂಬ ದೃಢವಾದ ನಿಲುವು ಹೊಂದಿರುವುದು. ಮನುಷ್ಯನ ಮನಸ್ಸಿನಲ್ಲಿ ಆಳವಾಗಿರುವ ಇಂತಹ ಶೂನ್ಯ ಪ್ರಜ್ಞೆಗಳು ಅವನ

ದುರ್ಬಲ ಮನಸ್ಥಿತಿಯ ಪರಿಣಾಮ ತಮ್ಮ ಅಟ್ಟಹಾಸವನ್ನು ತೋರಿಸಲು ಅವಕಾಶಗಳನ್ನು ಹುಡುಕುವುದರಲ್ಲಿ ತಲ್ಲೀನವಾಗಿರುತ್ತವೆ. ಈ ಕಥೆಯಲ್ಲಿ ಗಂಡಿನ ಅಹಂಮಿಕೆಯೊಂದಿಗೆ ಹೆಣ್ಣಿನ ಮನೋಸ್ಥೈರ್ಯದ ಗ್ರಹಿಕೆಗಳ ನೆಲೆಯನ್ನು ಹುಡುಕಲು ಸಾಧ್ಯ.

ನಿರೂಪಕ ಮತ್ತು ಅವನ ಗೆಳತಿ ಪ್ರಬುದ್ಧ ಮನಸ್ಕರಾಗಿರುವವರು. ಅವರಲ್ಲಿ ಸ್ನೇಹವಿದೆ, ಸಲಿಗೆ ಇದೆ. ಸ್ಪಂದನೆಗಳಿವೆ. ಹಂಚಿಕೊಳ್ಳುವಂತಹ ಭಾವನೆಗಳಿವೆ. ಆದರೆ ನಾಯಕಿಯದು ತನ್ನ ಪರಿಪೂರ್ಣತೆ ಯನ್ನು ನಿರೂಪಕನಿಗೆ ಧಾರೆಯೆರೆಲು ಇಷ್ಟಪಡುವುದಿಲ್ಲ. ಅವಳಿಗೆ ಅವನನ್ನು ಮಗನಂತೆ ಮುದ್ದಿಸಲು ಮಾತ್ರ ಸಿದ್ಧಳಾಗುವಳು. ಇಲ್ಲಿ ಹೆಣ್ಣಿನ ಮನಸ್ಸಿನ ರಹಸ್ಯಗಳನ್ನು ಸಂಪೂರ್ಣವಾಗಿ ತೆರೆದಿಡಲು ನಿರೂಪಕನು ಅಸಮರ್ಥನಾಗುವುದು. ಈ ರಹಸ್ಯಗಳನ್ನು ಅರ್ಥಮಾಡಿಕೊಳ್ಳದೇ ಮನುಷ್ಯನ ಈ ಹುಡುಕುವಿಕೆ ನಿರರ್ಥಕವೆನ್ನಬಹುದು.

'ಫೀನಿಕ್ಸ್' ಕಥೆಯಲ್ಲಿ ಕುಟುಂಬ, ಗಂಡ, ಹೆಂಡತಿಯ ಪರಿಕಲ್ಪನೆಗಳಿಗೆ ಇಲ್ಲಿನ ನಾಯಕ ನಾಯಕಿಯರಿಗೆ ಅಪಹಾಸ್ಯಕ್ಕೆ ಗುರಿಯಾಗುತ್ತವೆ. ಇಲ್ಲಿ ನಾಯಕನು ತನ್ನ ದೈಹಿಕ ಬಯಕೆಗಳನ್ನು ತೃಪ್ತಿಗೊಳಿಸಿಕೊಳ್ಳಲು ಅನ್ಯ ಮಾರ್ಗಗಳನ್ನು ಹುಡುಕಿಕೊಂಡಿರುವುದನ್ನು ನೋಡಬಹುದು. 'ಗೀಜಗನ ಗೂಡು' ಕಥೆಯಲ್ಲಿ ದೇಹಗಳಿಗೆ ಬಹಳ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಇಲ್ಲಿಯೂ ಕುಟುಂಬ ಸಮಾಜ ವ್ಯವಸ್ಥೆಗಳಲ್ಲಿ ವ್ಯಂಗ್ಯಕ್ಕೆ ಗುರಿಯಾಗುವುದು. 'ಅಂಟಿದ ನಂಟಿನ ಕೊನೆಯ ಬಲ್ಲವರಾರು' ಕಥೆಯ ನಾಯಕನಿಗೆ ಮತ್ತು ನಾಯಕಿಯಾದ ಶಾಲಿನಿ ಸಮಾಜದ ಕಟ್ಟುಪಾಡುಗಳನ್ನು ಮೀರುವುದೇ ಅವರ ಗುರಿಯಾಗಿರುವುದು. ಕೊನೆಯಲ್ಲಿ ಬೇರೊಬ್ಬನೊಂದಿಗೆ ಮದುವೆಯಾದರೂ ಅವಳ ವೈವಾಹಿಕ ಬದುಕಿನಲ್ಲಿ ನೆನಪುಗಳು ಕಾಡುವುದಿಲ್ಲ. ಅವಳು ಎಷ್ಟರಮಟ್ಟಿಗೆ ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂಬುದೇ ಇಲ್ಲಿ ನಿಗೂಢ. 'ಇನ್ನೊಂದು ಪ್ರೇಮ ಪ್ರಸಂಗ' ಕಥೆಯಲ್ಲಿ ಪಲ್ಲವಿಯು ಗಂಡ, ಮಕ್ಕಳೊಂದಿಗೆ ಉತ್ತಮ ವೈವಾಹಿಕ ಜೀವನ ನಡೆಸುತ್ತಿದ್ದಾಳೆ. ನಿರೂಪಕನೊಂದಿಗೆ ಮದುವೆಯ ಮುಂಚೆ ಅನುಭವಿಸಿದ ಲೈಂಗಿಕ ಅನುಭವಗಳು ಅವಳಿಂದ ಸಂಪೂರ್ಣವಾಗಿ ಅಳಿಸಿಲ್ಲ. ಅವಳು ನಿರೂಪಕರಿಂದ ಈ ರೀತಿಯ ಸಂಬಂಧಗಳನ್ನು ಸೃಷ್ಟಿಸಿಕೊಳ್ಳುವಿಕೆಯು ಅವಳು ವೈವಾಹಿಕ ಬದುಕಿನಿಂದ ತೃಪ್ತಿಯನ್ನು ಹೊಂದಿದ್ದಾಳೆಯೇ ಎಂಬ ಪ್ರಶ್ನೆ ಕಾಡುತ್ತದೆ. ಇಲ್ಲಿನ ಕಥೆಗಳೆಲ್ಲವು ವೈವಾಹಿಕ ಬದುಕಿನ ವಿಷಯ ಸ್ಥಿತಿಯನ್ನು ಸಾಕ್ಷಿಪೂರಕವಾಗಿ ಕಟ್ಟಿಕೊಡುವಿಕೆಯಲ್ಲಿ ಸಫಲವಾಗುತ್ತದೆ. 'ಆಗಂತುಕ' ಕಥೆಯೂ ಕಿಟ್ಟಿಯ ಮನಸ್ಸಿನ ಮೇಲೆ ಮಾವ ಯಕ್ಕನ ಮಗಳ ವೈವಾಹಿಕ ಬದುಕು ಗಾಢವಾಗಿ ಕಾಡುವುದು. ಅವಳ ಈ ಬುದಕಿಂದಲೇ ಅವಳ ಕುಟುಂಬವು ಅಸ್ಥಿರಗೊಳ್ಳುವುದು 'ನೆಲಗುಮ್ಮ' ಕಥೆಯ ನಾಯಕನು ಅಜ್ಜಿಯ ಅಂತಿಮ ಆಸೆಯನ್ನು ಈಡೇರಿಸಲು ತನ್ನ ಅಸ್ತಿತ್ವವನ್ನು

ಕೊನೆಗಾಣಿಸಿಕೊಳ್ಳಬೇಕು ಎಂಬ ನಿರ್ಧಾರಕ್ಕೆ ಬರುವುದು. ಈ ವೈವಾಹಿಕ ಸಂಬಂಧಗಳ ನೆಲೆಗಳ ವಿವಿಧ ಸ್ವರೂಪಗಳನ್ನು ಪರಿಚಯಿಸುತ್ತದೆ.

"ಪ್ರೇಮ-ಕಾಮಗಳಂಥಹ ಅತ್ಯಂತ ವೈಯಕ್ತಿಕವಾದ ಅಗತ್ಯಗಳನ್ನು ಪರಂಪರಾನುಗತವಾದ ನಿಯಮಗಳಿಗೆ ತಕ್ಕಂತೆ ನೆರವೇರಿಸಬೇಕೆಂದು ಬಯಸುವುದರಿಂದ ಪ್ರೇಮ-ಕಾಮಗಳ ಸುತ್ತ ಅತ್ಯಂತ ಜಟಿಲವಾದ ಸಂಕೋಚಗಳು ಅನಿವಾರ್ಯವಾಗಿ ನಮ್ಮ ಸಮಾಜ ವ್ಯವಸ್ಥೆಯಲ್ಲಿ ಬೆಳೆದುಕೊಳ್ಳುತ್ತವೆ. ಇಂತಹ ಸಮಾಜದಲ್ಲಿ ಪ್ರೇಮಕಾಮದ ಅವಶ್ಯಕತೆಗಳು ಪರ್ಯಾಯ ವ್ಯವಸ್ಥೆಯೊಂದನ್ನು ಹುಡುಕಿಕೊಳ್ಳುವುದನ್ನು ಸಹ ಸಮಾಜ ಅನೈತಿಕ ಎಂದು ಗುರುತಿಸುತ್ತದೆ. ವಿವಾಹೇತರ ಸಂಬಂಧದಲ್ಲಿ ಕಾಮದ ಕಲ್ಪನೆಯನ್ನೇ ತಿರಸ್ಕರಿಸುತ್ತದೆ...."[೩೩]

ಇಲ್ಲಿನ ಕಥೆಗಳಲ್ಲಿ ವೈವಾಹಿಕ ಬದುಕು ತಮ್ಮ ವಂಶದ ಕುಡಿಯನ್ನು ಬೆಳೆಸುವುದಕ್ಕೆ ಮಾತ್ರ ಹೆಚ್ಚು ಒತ್ತು ಕೊಡುತ್ತದೆ. ಇಲ್ಲಿ ಮನುಷ್ಯನ ಇಷ್ಟ-ನಿಷ್ಟಗಳು ನಡೆಯುವುದಿಲ್ಲ. ಅದರ ಕಾಮದ ಕಲ್ಪನೆಯನ್ನು ಬದಿಗೊತ್ತಿ ಸಮಾಜಕ್ಕಾಗಿ ಬದುಕಬೇಕಾಗಿರುವುದು. ಅವನು ಅವನಿಗಾಗಿ ಬದುಕುವುದು ಇಲ್ಲಿ ಮುಖ್ಯವಾಗಿರುತ್ತದೆ. ಸುಖವಾದ ವೈವಾಹಿಕ ಬದುಕನ್ನು ನಡೆಸುತ್ತಿದ್ದರೂ ಅವನು ಇಟ್ಟುಕೊಳ್ಳುವ ಅನೈತಿಕ ಸಂಬಂಧಗಳಿಗೆ ಕಾರಣಗಳನ್ನು ಹುಡುಕುವುದು ಕಷ್ಟವಾಗುತ್ತದೆ. ಆದರೆ ಇಲ್ಲಿನ ಕಥೆಗಳೆಲ್ಲವೂ ವಿಷಮ ವೈವಾಹಿಕ ಸಂಬಂಧಗಳೇ ಆಗಿ ಕಾಣಸಿಗುತ್ತವೆ.

೪.೪. ಜಾತಿ ಮತ್ತು ಸಮಾಜ

ಆಲನಹಳ್ಳಿಯವರು ಸೂಕ್ಷ್ಮಸಂವೇದನೆಯ ಬರಹಗಾರರಾಗಿ ಎಲ್ಲವನ್ನು ತಮ್ಮ ಬರಹದಲ್ಲಿ ತೋರಿಸಲು ಪ್ರಯತ್ನಿಸಿದ್ದಾರೆ. ಅವರ ಕಾಡು ಕಾದಂಬರಿಯಲ್ಲಿ ಲೇಖಕರು ನೇರವಾಗಿ ಕಥೆ ಹೇಳುವುದಿಲ್ಲ. ಒಬ್ಬ ಮುಗ್ಧ ಎಂದರೆ ತುಂಬಾ ಸಂವೇದನಾಶೀಲನಾದ ಎಳೆವಯಸ್ಸಿನ ಬಾಲಕನ ಪ್ರಜ್ಞೆಯ ಮುಖಾಂತರ ನಮಗೆ ತಲುಪಿಸುತ್ತಾರೆ. ಕಿಟ್ಟಿಯ ಮುಗ್ಧತೆ ಮತ್ತು ಅವನ ಮೇಲೆ ಅಪ್ಪಳಿಸುವ ರಾಕ್ಷಸಲೋಕದ ಅನುಭವಗಳು ಇವುಗಳ ನಡುವಿನ ವಿರೋಧದಿಂದಾಗಿ ಕಾದಂಬರಿಯಲ್ಲಿ ಸಂಕೀರ್ಣತೆ ಹುಟ್ಟಿಕೊಳ್ಳುತ್ತದೆ. ಕಿಟ್ಟಿಯ ಮಾನಸಿಕ ಬೆಳವಣಿಗೆ ಕೂಡ ಕಥೆಯ ವಸ್ತುವಿನ ಮುಖ್ಯಭಾಗವಾಗಿದೆ. ಕಾದಂಬರಿಯ ಕೊನೆಯಲ್ಲಿ ಕಿಟ್ಟಿಗೆ ಎಳೆವಯಸ್ಸಿನಲ್ಲಿಯೇ ಪರಕೀಯತೆಯ ದಟ್ಟವಾದ ಅನುಭವವಾಗುತ್ತದೆ. ಕನ್ನಡ ಕಾದಂಬರಿಯ ಇತಿಹಾಸದಲ್ಲಿ ಕಥೆ ಅಥವಾ ಕಾದಂಬರಿಯಲ್ಲಿ ಮುಗ್ಧರ ಮೂಲಕ ಹೇಳಿರುವ ತಾಂತ್ರಿಕ ಕೌಶಲ ಬಳಕೆಯಾದದ್ದು ಕೆ.ಸದಾಶಿವ ಅವರ 'ರಾಮನ ಸವಾರಿ ಸಂತೆಗೆ ಹೋದದ್ದು' ಕಥೆಯಿಂದ ಪ್ರಾರಂಭಗೊಂಡು ಆಲನಹಳ್ಳಿಯವರಿಗಿಂತ ಹಿಂದೆ ಅಭಿವ್ಯಕ್ತಿಗೆ ಅನುಕೂಲವಾಗಿದೆ. ಇದೇ ತಂತ್ರವನ್ನು

---

೩೩. ಯು.ಆರ್.ಅನಂತಮೂರ್ತಿ, 'ಪ್ರಜ್ಞೆ ಮತ್ತು ಪರಿಸರ', ೧೯೭೩, ೧೮೦.

ಯು.ಆರ್.ಅನಂತಮೂರ್ತಿಯವರ 'ಘಟಶ್ರಾದ್ಧ', ಪಿ.ಲಂಕೇಶರ 'ಉಮಾಪತಿಯ ಸ್ಕಾಲರ್‌ಷಿಪ್ ಯಾತ್ರೆ' ಇನ್ನು ಮುಂತಾದ ಕಥೆಗಳಲ್ಲಿ ಪರಿಣಾಮಕಾರಿಯಾಗಿ ಈ ತಂತ್ರವನ್ನು ಬಳಸಿಕೊಂಡಿದ್ದಾರೆ. ಆಲನಹಳ್ಳಿಯವರ 'ಕಾಡು' ಕಾದಂಬರಿಯಲ್ಲಿ ಉಳ್ಳವರ ನಡುವಣ ಸಂಘರ್ಷದಲ್ಲಿ ಯಾವಾಗಲೂ ಸಾಮಾನ್ಯ ಜನರ ಬದುಕು ನಗ್ಗಿ ನಲುಗಿಹೋಗುತ್ತದೆ. ಇಲ್ಲಿ ಬರುವ ಬಹುಪಾಲು ದಲಿತಪಾತ್ರಗಳು ಗೌಡರ ಮನೆಯ ಜೀತದಾಳಾಗಿದ್ದಾರೆ. ಕಿಟ್ಟಿಯನ್ನು ಸಿಳ್ಳ, ಲೋಂಪಿ, ದೇವಿ ಮತ್ತು ವಯಸ್ಸಾದ ಕರಿಯ ಇವರೆಲ್ಲರೂ 'ಕಿಟ್ಟಪ್ಪರೇ' ಎಂದು ಕರೆಯುತ್ತಾರೆ. ಕಿಟ್ಟಿ ಮಾತ್ರ ಚಿಕ್ಕವನಾದರೂ ಅವರನ್ನೆಲ್ಲ ಏಕವಚನದಲ್ಲೇ ಕರೆಯುತ್ತಾನೆ. ಕಾರಣ ಇವರೆಲ್ಲರೂ ದಲಿತರು. ಚಂದ್ರೇಗೌಡನಂತೂ ದಲಿತರನ್ನು ಮಾತನಾಡಿಸುವ ಬಗೆ ವಿಚಿತ್ರ ದರ್ಪದಿಂದ ಕೂಡಿರುತ್ತದೆ. ಆಲನಹಳ್ಳಿಯವರ ಕಾದಂಬರಿಗಳಲ್ಲಿ ದಲಿತರ ಬದುಕು, ದೇವನೂರ ಮಹಾದೇವರ ಸಾಹಿತ್ಯದಲ್ಲಿ ಕಂಡುಬರುವಂತೆ ದಟ್ಟ ಹಾಗೂ ಸೂಕ್ಷ್ಮ ಒಳವಿವರಗಳ ಸಮೇತ ಬರದೇ ಇದ್ದರೂ ತಾವು ಕಂಡುಂಡ ದಲಿತರ ಬದುಕನ್ನು ಸಾಂದರ್ಭಿಕವಾಗಿ, ಸಹಜವಾಗಿ ಪಾತ್ರಗಳ ಮೂಲಕ ಚಿತ್ರಿಸಿದ್ದಾರೆ.

ಆಲನಹಳ್ಳಿಯವರ ಬರಹದಲ್ಲಿ ಜಾತಿ ಮತ್ತು ಸಾಮಾಜಿಕ ಸಂಘರ್ಷ ಹೇಗೆ ವ್ಯಕ್ತವಾಗಿದೆ ಎಂಬುದನ್ನು ಎನ್.ಕೆ.ಕೋದಂಡರಾಮರವರು ಹೀಗೆ ಹೇಳುತ್ತಾರೆ. "ಬದುಕನ್ನು ಸಾಂಸ್ಕೃತಿಕವಾಗಿ ಗ್ರಹಿಸುವ ಸಂದರ್ಭದಲ್ಲಿ ಆಲನಹಳ್ಳಿ ನಿಷ್ಠುರ ಮಾನದಂಡಗಳ ಮೂಲಕ ಅದರ ಸ್ಥಗಿತತೆಯನ್ನು ಚಲನಶೀಲತೆಯನ್ನು ಅರ್ಥಪೂರ್ಣವಾಗಿ ಮರು ಅಭಿನಯಿಸುವ ಕಾಯಕವನ್ನು ಕಲಾತ್ಮಕವಾಗಿ ತರುತ್ತಾರೆ. ಬಹುಶಃ ಇಂಥ ಸೃಜನಶೀಲ ಸವಾಲು ಅವರ ಕತೆಗಳಿಗಿಂತ ಕಾದಂಬರಿಗಳಲ್ಲಿ ಪೂರ್ಣವಾಗಿ ಯಶಸ್ವಿಯಾಗಿದೆ. ಕಥೆಗಳಲ್ಲಿ ಅನುಭವಗಳೊಡನೆ ಕೆಲವು ಸೈದ್ಧಾಂತಿಕ ಆಶಯಗಳು ಬೆರೆತುಕೊಳ್ಳುತ್ತವೆ. ಇದರಿಂದಾಗಿ ಕತೆಯ ಬದುಕಿನ ಆವರಣಕ್ಕೂ ಸಿದ್ಧಾಂತದ ಉದ್ದೇಶಪೂರ್ವಕ ಗ್ರಹಿಕೆಗೂ ನಡುವೆ ಒಂದು ಸ್ಪಷ್ಟವಾದ ದೂರ ನಿರ್ದೇಶಿತವಾಗುವುದರಿಂದ, ಕತೆ ಎದುರುಗೊಳ್ಳುವ ಸವಾಲು ಸೀಮಿತವಾಗಿಬಿಡುತ್ತದೆ. ಕಾದಂಬರಿಗಳು ಈ ಬಗೆಯ ಪೂರ್ವ ನಿರ್ಧರಿತ ಆಸಕ್ತಿಗಳಿಂದ ಬಿಡುಗಡೆಗೊಂಡಿವೆ. ಅಲ್ಲಿ ಬದುಕು ತನ್ನ ಆವರಣದಲ್ಲಿ ಸಹಜವಾಗಿ ಬಿಚ್ಚಿಕೊಳ್ಳುವುದೇ ಕಾದಂಬರಿಯ ಮೂಲಭಿತ್ತಿಯಾಗುವುದರಿಂದ ಹೊರಗಿನಿಂದ ಬರುವ ಯಾವುದೇ ವಿಚಾರಧಾರೆಗೆ ಅವಕಾಶವಿಲ್ಲವಾಗಿದೆ. ಸ್ಥಳಿಯತೆಯ ದಟ್ಟ ವಿವರಗಳೊಡನೆ ಇಡೀ ಕೃತಿ ಮೈತುಂಬಿಕೊಳ್ಳುತ್ತದೆ."[೩೪]

೩೪. ಡಾ. ಎನ್.ಕೆ.ಕೋದಂಡರಾಮ, 'ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ', ೧೯೯೭, ಪು. ೩೩೧.

ಆಲನಹಳ್ಳಿಯವರ ಸಾಹಿತ್ಯ ಮೂಲಭೂತವಾಗಿ ಸಂಕ್ರಮಣ ಸ್ಥಿತಿಯ ಸಾಹಿತ್ಯ. ಅದರಲ್ಲಿ ಪರಿವರ್ತನೆ, ಬೆಳವಣಿಗೆ, ನಾಗರೀಕತೆಯ ಶೋಧನೆ ಮುಂತಾದವುಗಳ ತುಡಿತವಿದ್ದು ಪ್ರಗತಿಪರವಾದ ಬದುಕಿನ ಕಡೆ ಹೊರಳುವ ಆಶಯವಿದೆ. ಹಾಗಾಗಿ ಅನಿವಾರ್ಯವಾಗಿ ಜಾತಿ, ಮತ, ಧರ್ಮಗಳ ಕಟ್ಟುನಿಟ್ಟನ್ನು ಮೀರಿ ಮಾನವೀಯವಾಗಿ ಬದುಕಲೆತ್ನಿಸುವ ಧೋರಣೆಯಿದೆ. ಜಾತೀಯತೆ, ಅಸಮಾನತೆ, ಶೋಷಣೆ, ಸಣ್ಣತನ, ಊಳಿಗಮಾನ್ಯ ಮನೋಭಾವ ಮುಂತಾದವುಗಳು ತುಂಬಿತುಳುಕುತ್ತಿರುವ ಗ್ರಾಮೀಣ ಬದುಕನ್ನು ಇವರು ಕಟ್ಟಿಕೊಡುವ ಸಂದರ್ಭದಲ್ಲಿ ಬದಲಾವಣೆಯನ್ನು ಬಯಸಿದಾಗ ಸಹಜವಾಗಿಯೇ ವಿಘಟನೆಗಳು ಪ್ರಾರಂಭವಾಗುತ್ತವೆ ಎಂಬುದನ್ನು ಓದುಗರಿಗೆ ಮನಗಾಣಿಸುತ್ತಾರೆ. ಪ್ರತಿಷ್ಠಿತ ವ್ಯಕ್ತಿಗಳು ತಮ್ಮ ಬೇರುಗಳು ಸಡಿಲವಾದುದರಿಂದ ಹೌಹಾರಿ ಅವುಗಳನ್ನು ಉಳಿಸಿಕೊಳ್ಳಲು ಹೆಣಗುವ ವಿವರಗಳು ಕಾದಂಬರಿಯಲ್ಲಿ ಬರುತ್ತವೆ. ಲೇಖಕರ ಬಾಲ್ಯದ ದಟ್ಟ ಅನುಭವಗಳ ಸಂವೇದನೆ ಹಾಗೂ ಪ್ರಕೃತಿಯ ಸೂಕ್ಷ್ಮ ವಿವರಗಳೊಡನೆ ಒಡಮೂಡಿಸುವ ಈ ಕಾದಂಬರಿ ಸಾಮಾನ್ಯನೊಬ್ಬನ ಬದುಕನ್ನು ಬಗೆಯುತ್ತದೆ. ಅದು ಸಾಧಾರಣವೆನ್ನಿಸಿ ಅಪೂರ್ವ ಅನುಭವವನ್ನುಂಟು ಮಾಡುವಂತಹ ವಸ್ತುಗಳನ್ನುಳ್ಳ ಈ ಕಾದಂಬರಿ ಸಾಮಾನ್ಯನೊಬ್ಬನ ಬದುಕಿನ ಮಹಾಕಾವ್ಯ ಎಂದರೆ ತಪ್ಪಾಗಲಾರದು ಎನಿಸುತ್ತದೆ. ವ್ಯಕ್ತಿಯು ಒಂದು ಬಗೆಯ ಅನಿವಾರ್ಯ ಪರಿಸ್ಥಿತಿಯಲ್ಲಿ ಕೃಷ್ಣ ಸಂಸ್ಕೃತಿಯಿಂದ ವ್ಯಾಪಾರ ಸಂಸ್ಕೃತಿಯನ್ನು ಸೇರಬಯಸುವುದರಿಂದ ಊಳಿಗಮಾನ್ಯ ವ್ಯವಸ್ಥೆ ಮತ್ತು ವ್ಯಾಪಾರಿ ಸಂಸ್ಕೃತಿಗಳ ಸಮನ್ವಯ ವಸ್ತುಗಳನ್ನೊಳಗೊಂಡ ಕಾದಂಬರಿಗಳನ್ನು ಆಲನಹಳ್ಳಿಯವರು ಬರೆದಿದ್ದಾರೆ.

'ಭುಜಂಗಯ್ಯನ ದಶಾವತಾರ' ಕಾದಂಬರಿಯಲ್ಲಿ ಸಾಂಸ್ಕೃತಿಕ ಘಟಕಗಳು ಯಾವ ವ್ಯವಸ್ಥೆಯಲ್ಲಿ ಸ್ಥಾಯಿಯಾಗುತ್ತವೋ ಅಲ್ಲಿ ಹೆಣ್ಣು-ಗಂಡಿನ ಗ್ರಹಿಕೆಗಳು ಸಾಂಪ್ರದಾಯಿಕ ಆವರಣದಲ್ಲಿ ಮಾತ್ರ ನೆಲೆಯಾಗಲು ಪ್ರಯತ್ನಿಸುತ್ತದೆ. ಹಾಗೆ ಆಗಲು ಒತ್ತಾಯಿಸಲಾಗುತ್ತದೆ. ಸಮೂಹದೊಳಗೆ ಬದುಕುವ ವ್ಯಕ್ತಿ ಕೆಲವು ವಿಚಾರಗಳಲ್ಲಿ ರಾಜಿಮಾಡಿಕೊಳ್ಳುತ್ತಾನೆ. ಭುಜಂಗಯ್ಯನಿಗೂ ಕೂಡ ಆ ಬಗೆಯ ನಿಯಂತ್ರಣಗಳಿವೆ. ಬಸವಣ್ಣನ ತತ್ವವನ್ನು ಆಧರಿಸಿ ಆತ ಜಾತಿಯನ್ನು ನಂಬುವ ಸ್ಥಿತಿಗೆ ಬರುತ್ತಾನೆ. ಆದರೆ ಹೊಲೆಯರಿಗೆ ತನ್ನ ಹೋಟೆಲ್ ಪ್ರವೇಶವನ್ನು ನಿರಾಕರಿಸುತ್ತಾನೆ. ಇಲ್ಲಿ ವ್ಯಕ್ತಿಯ ಆಂತರಿಕ ನಿರೀಕ್ಷಣೆಯು ಸತ್ವಶಾಲಿಯಾಗಿ ಬಹಿರಂಗವಾಗುವುದನ್ನು ತಡೆಯಲಾಗಿದೆ. ಯಾಕೆಂದರೆ ಈ ಬಗೆಯ ಕಾರ್ಯದಿಂದ ಸಮೂಹದ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಅಂಥ ಸ್ಥಿತಿಯನ್ನು ಭುಜಂಗಯ್ಯ ನಿರಾಕರಿಸುತ್ತಾನೆ. ಇಲ್ಲಿ ಸುಧಾರಣೆಯ ಮನಸ್ಸು ಇರುವ ಮತೀಯ ಪ್ರತಿನಿಧಿಯನ್ನೇ ಸಮೂಹ ತಿರಸ್ಕರಿಸುತ್ತದೆ. ಭುಜಂಗಯ್ಯ ಇವನ್ನು ಮೀರಿ ಮುಂದೆ ಹೋಗುವುದು ಸಾಧ್ಯವಾಗುವುದಿಲ್ಲ. ಅದು ಸಾಧ್ಯವಾಗದಿರುವುದರಿಂದಲೇ ತನ್ನ ಹಿತಕ್ಕಾಗಿ ಮಠವನ್ನು ಬಳಸಿಕೊಳ್ಳುತ್ತಾನೆ.

ಪ್ರಬಲವಾದದ್ದು ಯಾವುದೋ ಅದರ ಹಿಂದೆ ನಿಂತರೆ ತನ್ನ ಕೆಲಸಗಳನ್ನು ಸರಾಗವಾಗಿಸಬಹುದು ಎಂಬುದು ಭುಜಂಗಯ್ಯನ ನಂಬಿಕೆ. ಭುಜಂಗಯ್ಯ ಎಂಬ ಸಾಮಾನ್ಯ ರೈತನೊಬ್ಬನ ಬದುಕನ್ನು ಉತ್ತಮವಾಗಿ ಬದುಕಬೇಕೆಂದು ಬಯಸುತ್ತಾನೆ. ಅನಿಶ್ಚಿತ ಮಳೆಯ ಕಾರಣದಿಂದ ಆರಕ್ಕೇರದೆ ಮೂರಕ್ಕಿಳಿಯದೇ ಬದುಕನ್ನು ದಾಟಬೇಕೆಂಬ ಮನಸ್ಸು ಮಾಡುತ್ತಾನೆ. ವ್ಯವಸಾಯದ ಜೊತೆಗೆ ಇನ್ನೇನಾದರೂ ಮಾಡಬೇಕೆಂಬ ಹಂಬಲ ಇವನಿಗೆ ಮೂಡುತ್ತದೆ. ಇದಕ್ಕೆ ಅವನು ಬದುಕುತ್ತಿರುವ ನೆಲದ ಸ್ಥಿತಿಗತಿಗಳು ಅನಿವಾರ್ಯತೆಗಳು, ಹೋಟೆಲು ಇಡಲು ಪ್ರೇರೇಪಿಸುತ್ತದೆ. ಆದರೆ ಅದು ಅಷ್ಟು ಸುಲಭವಾಗುವುದಿಲ್ಲ. ಹೆಂಡತಿ ಅವ್ವ ಮತ್ತು ಮಾವ ಮುಂತಾದ ಹತ್ತಿರದವರೆಲ್ಲ ಜಾತಿಗೆಡುತ್ತೇವೆಂಬ ಭಯದಿಂದ ಈ ನಿಲುವನ್ನು ವಿರೋಧಿಸಿದರೆ ವೀರಶೈವ ಸಮಾಜ ಕೂಡ ಇದನ್ನು ಒಪ್ಪುವುದಿಲ್ಲ. ಆದರೆ ಆಲನಹಳ್ಳಿಯವರ ಭುಜಂಗಯ್ಯನು ಗೆಂಡೆತಿಮ್ಮನಂತೆ ಬೆರಗುಗಣ್ಣಿನಿಂದ ನಾಗರೀಕತೆಯನ್ನು ನೋಡುವುದಿಲ್ಲ. ಪೂರ್ವಾಪರವೆಲ್ಲ ಆಲೋಚಿಸಿಯೇ ಯಾವ ಅಡೆತಡೆಗಳಿಗೂ ಜಗ್ಗದೆ ಹೋಟೆಲಿಟ್ಟು ತಾನು ಉದ್ಧಾರವಾಗುವುದರ ಜೊತೆಗೆ ತಾನು ಬದುಕಿದ ಪರಿಸರವನ್ನು ಸುಧಾರಿಸಬೇಕೆನ್ನುವ ಹಂಬಲ ಹೊತ್ತವನಾಗಿದ್ದಾನೆ. ಇವನ ಈ ಪ್ರಯತ್ನಗಳಿಗೆ ಊರಿನ ಪಟ್ಟಭದ್ರ ಹಿತಾಸಕ್ತಿಗಳು ತಂದೊಡ್ಡುವ ಅಡ್ಡಿ ಆತಂಕಗಳನ್ನು ತನ್ನ ನೈತಿಕ ಹಾಗೂ ಬೌದ್ಧಿಕವಾದ ಸಾಮರ್ಥ್ಯದಿಂದಲೇ ಎದುರಿಸುತ್ತಾನೆ. ಇಲ್ಲಿ ಆಲನಹಳ್ಳಿಯವರು ಬದುಕಿನ ಸ್ಥಿತ್ಯಂತರಗಳನ್ನು ಸೂಕ್ಷ್ಮವಾಗಿ ನಿರೂಪಿಸಿರುವುದನ್ನು ಕಾಣುತ್ತೇವೆ ವಾಸ್ತವವಾಗಿ ಭುಜಂಗಯ್ಯ ಕ್ರಾಂತಿಕಾರಿಯೂ ಅಲ್ಲ, ಜಡ್ಡುಗಟ್ಟಿದ ಸಂಪ್ರದಾಯಕ್ಕೆ ಅಂಟಿಕೊಳ್ಳುವವನೂ ಅಲ್ಲ. ಬದುಕು ಬಂದಹಾಗೆ ವಾಸ್ತವ ನೆಲೆಗಟ್ಟಿನಲ್ಲಿ ಅದನ್ನು ಸ್ವೀಕರಿಸುತ್ತಾನೆ. ಹೀಗಾಗಿ ಈತನು ತನ್ನ ಪ್ರವೃತ್ತಿ ಮತ್ತು ಸಾಹಸಗಳಿಂದ ಮರಳ್ಳಿ ಮತ್ತು ಸುತ್ತಮುತ್ತಲಿನ ಊರಿಗೆಲ್ಲ ವಿಶಿಷ್ಟವಾಗಿಯೇ ಉಳಿಯುತ್ತಾನೆ. ಆದ್ದರಿಂದಲೇ ಭುಜಂಗಯ್ಯ ಸಾಮಾನ್ಯ ರೈತನಾಗಿ, ಹೋಟೆಲ್ ಮಾಲೀಕನಾಗಿ ಕಂಟ್ರಾಟುದಾರನಾಗಿ, ತೋಟದ ಒಡೆಯನಾಗಿ ಹಲವು ವೈರುಧ್ಯಗಳ ನಡುವೆಯೂ ಮಾನವೀಯವಾದ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾನೆ.

ಅನ್ಯಜಾತಿಯ ಹಿರಿಯರಾದ ಕರೀಗೌಡ ಹಾಗೂ ಮುದ್ದೇಗೌಡರಿಗೆ ಆಪ್ತನಾದ ಹಾಗೆ ಇವನ ವ್ಯಾಪಾರಕ್ಕೆ ಸಹಾಯಕರಾದ ಲಿಂಗ, ಜಾಂಬವ ಮತ್ತು ಬಸ್ಸಿನ ಡ್ರೈವರ್ ವಿಕ್ಟರ್‌ನಿಗೂ ಸ್ನೇಹಿತನಾಗುತ್ತಾನೆ. ಹಾಗೆಯೇ ತನ್ನ ಜಾತಿಯ ಧಾರ್ಮಿಕ ಗುರುಗಳಾದ ಸ್ವಾಮೀಜಿಯವರ ಸಾನಿಧ್ಯವನ್ನು ಗಳಿಸುತ್ತಾನೆ. ಜೊತೆಗೆ ತನ್ನ ಸಮಕಾಲೀನರಾದ ಪುಂಡ್ರಿ, ಚೆನ್ನಮ್ಮರಂತಹ ಸಾಮಾನ್ಯ ಮನುಷ್ಯರ ಆಪ್ತನೂ ಆಗುತ್ತಾನೆ. ತನ್ನನ್ನು ಪ್ರೀತಿಸಿ ಬಂದವಳ ಜೊತೆಗೆ ಜಾತಿ, ವಯಸ್ಸು, ಅಂತಸ್ತು ಮುಂತಾದವುಗಳನ್ನೆಲ್ಲಾ ಮೀರಿ ಬದುಕುವ ವಿವೇಕದ ಮನುಷ್ಯನಾಗಿಯೂ ಕಂಡುಬರುತ್ತಾನೆ. ಅಲ್ಲದೆ ತಾನು ಕಟ್ಟಿಕೊಂಡ ಹೆಂಡತಿಯೂ ತನ್ನ ಮಿತಿಯನ್ನು ಮೀರಿ ಮಾತಾಡಿದಾಗ ತಾಳ್ಮೆ ಕಳೆದುಕೊಳ್ಳುತ್ತಾನೆ. ಬಾಲ್ಯದಲ್ಲಿ ಅಪ್ಪನ ಜೊತೆ ಮುನಿಸಿಕೊಂಡು

ಹೊರಗೆ ಹೋಗಿ ತಿರುಗಿ ಬಂದ ಅನುಭವಗಳು ಇವೆ. ಅದರಲ್ಲೂ ಇವನು ಹಾವು ಕಚ್ಚಿದವರಿಗೆ ಕೊಡುವ ಔಷಧಿಯಿಂದ ಸುತ್ತಮುತ್ತಲಿನವರ ಪಾಲಿಗೆ ದೈವಾಂಶಸಂಭೂತನಾಗಿದ್ದಾನೆ. ಇವನ ಪ್ರವೃತ್ತಿಗಳು ಕೂಡ ವಿಚಿತ್ರವಾಗಿದೆ. ಸಣ್ಣಮಕ್ಕಳ ಹಾಗೆ ಗೋಲಿ ಆಡುತ್ತಾನೆ. ಮಕ್ಕಳಿಗೆ ಬುಗರಿ ಮಾಡಿಕೊಡುತ್ತಾನೆ. ಎಷ್ಟೇ ಆಳವಾದ ಬಾವಿಯನ್ನು ಮುಳುಗಿ ಬಿದ್ದ ಕೊಡಗಳನ್ನು ತೆಗೆಯುತ್ತಾನೆ. ನ್ಯಾಯಕ್ಕೆ ಕೂತರಂತೂ ಲಾಯರ್ ಪಾಯಿಂಟ್ ಹಾಕಿ ಮಾತಾಡುತ್ತಾನೆ. ಈ ಎಲ್ಲ ಆಸಕ್ತಿಯ ಬಗೆಗಳನ್ನು ಕುರಿತಂತೆ ಹಿರಿಯರಾದ ಕರೀಗೌಡರು ಇವನೊಬ್ಬ ಕಲಿಪುರುಷ ಕಣ್ರೋ ಎಂದು ಹೊಗಳುತ್ತಾರೆ. ಹೊಟೇಲ್ ಇಡುವುದರ ಮೂಲಕ ಮಾನವೀಯ ಸಂಬಂಧಗಳನ್ನು ಹುಟ್ಟುಹಾಕಿದ ಇವನು ಬಾವಿಗಳನ್ನು ತೋಡಿಸುವುದರ ಮೂಲಕ ಇಡೀ ಸುತ್ತಮುತ್ತ ಊರುಗಳಿಗೆಲ್ಲ ಈ ರೀತಿಯ ಆಧುನಿಕ ಸೌಲಭ್ಯದ ಸಾರ್ಥಕತೆಯ ಬದುಕಿಗೆ ಮುಖ್ಯ ಪ್ರೇರಕನಾಗುತ್ತಾನೆ. ಧರ್ಮ ಮತ್ತು ದೈವ ಶಕ್ತಿಯಲ್ಲಿ ನಂಬಿಕೆ ಇರುವ ಇವರನು ವೀರಶೈವ ಧರ್ಮದ ಬಗ್ಗೆಯೂ ಜಿಜ್ಞಾಸೆ ನಡೆಸುತ್ತಾನೆ. ಅದರಲ್ಲೂ ಇವನು ಕಣ್ಣು ಕಳೆದುಕೊಂಡ ನಂತರ ಅದಕ್ಕೆ ಸಂಪೂರ್ಣವಾಗಿ ತನ್ನನ್ನು ಅರ್ಪಿಸಿಕೊಳ್ಳುತ್ತಾನೆ. ಹೀಗೆ ಭುಜಂಗಯ್ಯ ಅನೇಕ ವೈರುಧ್ಯಗಳನ್ನು ಒಳಗೊಂಡನಾಗಿದ್ದರೂ ಪ್ರಗತಿಪರವಾದ ಬದುಕಿನ ಆಶಯವಿದ್ದ ಈತ ತೀರ ಸಾಮಾನ್ಯನೂ ಆಗದೆ ಅಸಾಮಾನ್ಯನೂ ಆಗದೆ ಎಲ್ಲ ಇತಿಮಿತಿಗಳನ್ನೊಳಗೊಂಡ ನೆಲದ ಮೇಲೆ ನಿಂತು ಬದುಕನ್ನು ನೋಡುವ ಧೀರೋದಾತ್ತ ನಾಯಕನಾಗಿ ಕಂಡುಬರುತ್ತಾನೆ.

ಇನ್ನು 'ಪರಸಂಗದ ಗೆಂಡೆತಿಮ್ಮ' ಕಾದಂಬರಿಯಲ್ಲಿ ಭೌಗೋಳಿಕ ಅಂಶಗಳಿಗೆ ವಿಶೇಷ ಮಹತ್ವವಿದೆ. ಸಾಲುಂಡಿ, ಗೌವ್ವಳ್ಳಿ ಹಾಗೂ ಉಳಿಮಾವು. ಈ ಮೂರು ಗ್ರಾಮಗಳು ತಮ್ಮದೇ ಆದ ವೈಶಿಷ್ಟ್ಯಗಳನ್ನು ಹೊಂದಿವೆ. ಮೈಸೂರು ಮಾನಂದವಾಡಿ ರಸ್ತೆಯ ಮೇಲಿರುವ ಸಾಲುಂಡಿ ಮೈಸೂರಿನೊಡನೆ ಸತತ ಸಂಪರ್ಕದಲ್ಲಿದೆ ಉಳಿಮಾವು ಕೂಡ ನಂಜನಗೂಡಿಗೆ ಸಮೀಪವಾಗಿರುವುದರ ಕಾರಣವಾಗಿ ಶಹರದ ಪ್ರಭಾವದಿಂದ ದೂರವಾಗಿಲ್ಲ. ನಂಜನಗೂಡಿನ ದೇವಸ್ಥಾನದಲ್ಲಿ ಚಾಕರನಾಗಿರುವ ಮಹದೇವಪ್ಪನ ಸ್ಥಾನ ಅವನ ನೀಟಾದ ಸಮವಸ್ತ್ರ ಹಾಗೂ ಅವನು ತೋರಿಸುವ ಮೂವಿಗಳು ಮರಂಕಿಗೆ ಬಲವಾದ ಆಕರ್ಷಣೆಗಳಾಗುತ್ತವೆ. ಉಳಿಮಾವಿಗೆ ಹೋಲಿಸಿದರೆ ಸಾಲುಂಡಿ ಹಿಂದುಳಿದ ಗ್ರಾಮವೇ ಕೆಲಪ್ರದೇಶದಲ್ಲಿ ಕಟ್ಟಿರುವ ಗೌವ್ವಳ್ಳಿ ಒಕ್ಕಲುತನವನ್ನೇ ಅವಲಂಭಿಸಿರುವ ದೂರದಹಳ್ಳಿ. ಇಲ್ಲಿ ಇನ್ನೂ ಚಕ್ಕಡಿನೇ ಮುಖ್ಯ ವಾಹನ ಹಾಗೂ ಅದರ ಅರ್ಥ ವ್ಯವಸ್ಥೆ ಕೂಡ ಹಳೆಯದೇ. ಜಾತಿಪದ್ಧತಿ ಈ ಗ್ರಾಮಗಳಿಗೆ ಬಲವಾಗಿದೆ. ಆದರೆ ಅದು ಸಂಘರ್ಷಕ್ಕೆ ಕಾರಣವಾಗುವುದಿಲ್ಲ. ಗೆಂಡೆತಿಮ್ಮ ಹಾಗೂ ಕಾಳ ಇತರರ ನಡುವಿನ ಕಾಳಗದಲ್ಲಿ ಜಾತಿ ಸಂಘರ್ಷವಿಲ್ಲ.

"ಸಾಲುಂಡಿಯ ನಿವಾಸಿ ಗೆಂಡೆತಿಮ್ಮ ಪರಿವಾರ ಜಾತಿಗೆ ಸೇರಿದ ಒಂದು ಒಕ್ಕಲುತನದ ಕುಟುಂಬಕ್ಕೆ ಸೇರಿದವ. ಆದರೆ ಭೂಮಿಯ ಉತ್ಪನ್ನದ ಮೇಲೆಯೇ ಕುಟುಂಬದ ನಿರ್ವಹಣೆ

ಸಾಧ್ಯವಾಗದುದರಿಂದ ಗೆಂಡೆತಿಮ್ಮ ಒಕ್ಕಲುತನವನ್ನು ತನ್ನ ಅಣ್ಣನಿಗೆ ಬಿಟ್ಟುಕೊಟ್ಟು ಬೇರೊಂದು ಉದ್ಯೋಗವನ್ನು ಆಯ್ದುಕೊಳ್ಳಬೇಕಾಗುತ್ತದೆ. ಅವನೊಬ್ಬ ಚಿಕ್ಕ ವ್ಯಾಪಾರಿಯಾಗಿ ತನ್ನ ಗೂಡೆಯನ್ನೇ ಅಂಗಡಿಯಾಗಿ ಪರಿವರ್ತಿಸಿ ವಾರಕ್ಕೊಮ್ಮೆ ಗೌವ್ವಳ್ಳಿಗೆ ಹೋಗಿ ವ್ಯಾಪಾರ ನಡೆಸುತ್ತಾನೆ. ಮೊದಮೊದಲು ಹಳ್ಳಿಗರಿಗೆ ಬೇಕಾದ ವಿಳ್ಳೆದೆಲೆ ವಸ್ತುಗಳಿಗೆ ಸೀಮಿತವಾಗಿದ್ದ ಅವನ ವ್ಯಾಪಾರ ಮರಂಕಿಯ ಪ್ರಭಾವದಲ್ಲಿ ಶಹರೀ ವಸ್ತುಗಳಾದ ಬ್ರಾ, ಒಳುಡುಪುಗಳು ಮೊದಲಾದವುಗಳನ್ನು ಸೇರಿಸಿಕೊಳ್ಳುತ್ತದೆ. ಸಾಂಪ್ರದಾಯಿಕ ವಸ್ತುಗಳ ಮಾರಾಟ ಬಹಿರಂಗವಾಗಿಯೇ ನಡೆಯುತ್ತದೆ. ಆದರೆ ಹಿರಿಯರು ಒಪ್ಪದ ಬ್ರಾ ಮೊದಲಾದ ವಸ್ತುಗಳ ಮಾರಾಟ ಮಾತ್ರ ಕಳವಿನದು. ತನಗೆ ಗೊತ್ತಿಲ್ಲದಂತೆಯೇ ಗೆಂಡೆತಿಮ್ಮ ಹಿರಿಯರು ಕಿರಿಯರ ನಡುವೆ ಜಗಳಕ್ಕೆ ಕಾರಣವಾಗುತ್ತಾನೆ. ಈ ಹೊಸ ವಸ್ತುಗಳು ಹಿರಿಯರ ಅಧಿಕಾರಕ್ಕೆ ಆಹ್ವಾನವಾಗಿ ಅವರಲ್ಲಿ ಭಯ ಹುಟ್ಟಿಸುತ್ತದೆ. ಇದರ ಪರಿಣಾಮವಾಗಿ ಗೆಂಡೆತಿಮ್ಮ ಗ್ರಾಮ ಪಂಚಾಯಿತಿಗಳಿಂದ ಶಿಕ್ಷೆಗೆ ಗುರಿಯಾಗುತ್ತಾನೆ. ಆದರೆ ಅವನು ಪ್ರಾರಂಭಿಸಿದ ಪ್ರಕ್ರಿಯೆ ಮುಂದುವರಿಯುತ್ತಲೇ ಹೋಗುತ್ತದೆ. ಇದು ಮಾಲೇಗೌಡರ ಸಾಂಪ್ರದಾಯಿಕ ಮನೆತನವನ್ನು ಪ್ರಭಾವಿಸುವಷ್ಟು ಪ್ರಬಲವಾಗುತ್ತ ದೇವೀರವ್ವನಿಗೆ ತನ್ನ ಮಗಳನ್ನು ಹಳ್ಳಿಯ ವರನಿಗೆ ಕೊಡುವ ಮನಸ್ಸಿರುವುದಿಲ್ಲವಾದ್ದರಿಂದ ಅವಳು ಶಹರದ ವ್ಯಾಪಾರಿಯೊಬ್ಬನ ಮಗನನ್ನೇ ಒಪ್ಪಿಕೊಳ್ಳುತ್ತಾಳೆ. ಶಹರದ ವರನಿಂದ ವಧುವಿನ ಉಡುಗೆ-ತೊಡುಗೆಗಳಿಗಾಗಿ ದೇವೀರವ್ವ ಗೆಂಡೆತಿಮ್ಮನನ್ನೇ ಅವಲಂಭಿಸಬೇಕಾಗುತ್ತದೆ.”[೩೫]

ಸಾಲುಂಡಿಯ ಕುರುಬಗೇರಿಯ ಕಾಡನ ಮೇಲೆ ಬರುತ್ತಿದ್ದ ಶನಿದೇವರ ಸನ್ನಿಧಿಯಲ್ಲಿ ಊರಿನ ಎಲ್ಲ ತಪ್ಪುನೆಪ್ಪುಗಳು, ಅಷ್ಟೇಕೆ ಸ್ವಯಂ ಪಂಚಾಯ್ತಿಯಲ್ಲೂ ತೀರ್ಮಾನವಾಗದ ಜಗಳಗಳು ಬಗೆಹರಿಯುತ್ತಿದ್ದುದು ಹಾಗೆಯೇ ಈ ದೇವರ ಬಗ್ಗೆ ಜನರು ಇಟ್ಟುಕೊಂಡಿದ್ದ ಭಯ, ಭಕ್ತಿ, ಪೂಜೆ, ಪುನಸ್ಕಾರ ಮುಂತಾದವುಗಳೆಲ್ಲ ಸಹಜವಾಗಿ ದಾಖಲಾಗಿವೆ.

ಹೊಸ ಮನೆಯನ್ನು ಸಜ್ಜುಗೊಳಿಸುವುದರಲ್ಲಿ ಮರಂಕಿ ತನ್ನ ಆಧುನಿಕ ಅಭಿರುಚಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಡುತ್ತಾಳೆ. ಈ ಮನೆಗೆ ಬಂದ ಗ್ರಾಮಫೋನ್ ಎಲ್ಲರಿಗೂ ಜನಪ್ರಿಯವಾಗುತ್ತ ಹೆಂಗಸರಿಗೆ ಪ್ರಿಯವಾಗುವ ಹೊಸ ಹೊಸ ವಸ್ತುಗಳನ್ನು ಸೇರಿಸಿ ತನ್ನ ವ್ಯಾಪಾರ ಹೆಚ್ಚಾಗುವಂತೆ ನೋಡಿಕೊಳ್ಳಲು ಮರಂಕಿ ತನ್ನ ಗಂಡನನ್ನು ಪ್ರಚೋದಿಸುತ್ತಾಳೆ. ಆದರೆ ಅವಳು ಸ್ವತಃ ಗೌವ್ವಳ್ಳಿಗೆ ಹೋಗುವುದಿಲ್ಲ. ಯಾಕೆಂದರೆ ತನ್ನನ್ನು ಒಕ್ಕಲಿಗರಂಥ ಮೇಲುಜಾತಿಯವರು ಕೀಳಾಗಿ ನೋಡುವುದನ್ನು ಅವಳು ಸಹಿಸಲಾರಳು. ಉಳಿಮಾವಿನವನಾದ ಶಿಕ್ಷಕ ಶಿವಣ್ಣನೊಡನೆ ಅವಳ ಲೈಂಗಿಕ ಸಂಬಂಧ ಬೆಳೆಯುತ್ತದೆ. ಈ ಸಂಬಂಧದ ಬಗ್ಗೆ ಅವಳಲ್ಲಿ

---

೩೫. ಜಿ.ಎಸ್.ಆಮೂರ, ‘ಕನ್ನಡ ಕಥನಸಾಹಿತ್ಯ’, ಕಾದಂಬರಿ, ೨೦೧೬, ಪು. ೩೯೭

ಯಾವ ಅಪರಾಧ ಭಾವನೆಯೂ ಇರುವುದಿಲ್ಲ. ಉಚ್ಚ ಜಾತಿಯವನೊಬ್ಬನು ತನ್ನ ಪ್ರೇಮಿಯಾಗಿರುವುದು ಅವಳಿಗೆ ಗರ್ವದ ವಿಷಯವೇ. ಮದುವೆಯ ಮೊದಲೇ ಅವಳಿಗೆ ಮಹದೇವಪ್ಪನೊಡನೆ ಸಂಬಂಧವಿತ್ತು ಈ ಸಂಬಂಧಗಳ ಸುದ್ದಿ ಗೌವ್ವಳ್ಳಿಯಿಂದ ಅನೀರಿಕ್ಷಿತವಾಗಿ ಮನೆಗೆ ಮರಳಿದಾಗ ಮರಂಕಿ ಶಿವಣ್ಣನೊಡನೆ ತನ್ನ ಮನೆಯಲ್ಲಿಯೇ ಇರುವುದನ್ನು ನೋಡಿದಾಗ ಅವನಿಗೆ ಸತ್ಯದ ಮನವರಿಕೆಯಾಗುತ್ತದೆ. ಗೌವ್ವಳ್ಳಿಯ ಪಂಚಾಯಿತಿಯಿಂದ ಆದ ಅವಮಾನದ ಹಿಂದೆಯೇ ಬಂದ ಈ ಅನುಭವದಿಂದ ಹತಾಶನಾಗಿ ಅವನು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಈ ಘಟನೆಯಿಂದ ತತ್ತರಿಸಿದ ಮರಂಕಿಯೂ ಆತ್ಮಹತ್ಯೆಗೆ ಶರಣಾಗುತ್ತಾಳೆ. ಕಾದಂಬರಿಯಲ್ಲಿ ಆಲನಹಳ್ಳಿಯವರು ತಟಸ್ಥ ನೈತಿಕ ಧೋರಣೆಯನ್ನು ತೋರಿಸಿರುವುದು ಅವರ ಒಂದು ವೈಶಿಷ್ಟ್ಯವಾಗಿದೆ.

ಆಲನಹಳ್ಳಿಯವರು ಕಾಮ, ಜಾತಿ, ಸಮಾಜದ ವಿಭಿನ್ನ ಅಂಗಗಳಾಗಿ ನೋಡುವ ಪರಿಯನ್ನು ಅವರ ಸಮಗ್ರ ಕಥೆಗಳಲ್ಲಿ ಕಾಣಬಹುದು. ಕಾಮದ ವಿಷಯದ ಬಗ್ಗೆಯೇ ವಿಭಿನ್ನ ಮಾದರಿಗಳಲ್ಲಿ ಸಾಹಿತ್ಯ ಕೃತಿಗಳನ್ನು ರಚಿಸಿದ ಆಲನಹಳ್ಳಿಯವರ ಕೃತಿಗಳಲ್ಲಿ ಗಂಡಿಗಾಗಲೀ, ಹೆಣ್ಣಿಗಾಗಲೀ ಭಾವನೆಗಳನ್ನು, ಸ್ಪಂದನೆಗಳನ್ನು ಅರ್ಥಮಾಡಿಕೊಳ್ಳುವಂತಹ ಸಂವೇದನಾಶೀಲ ಮನಸ್ಸುಗಳ ಕೊರತೆ ಎದ್ದು ಕಾಣುವುದು. 'ಫೀನಿಕ್ಸ್', 'ಗೀಜಗನಗೂಡು', 'ಅಂಟುನಂಟಿನ ಕೊನೆಯ ಬಲ್ಲವರಾರು', 'ಇನ್ನೊಂದು ಪ್ರಣಯ ಪ್ರಸಂಗ', ಕಥೆಗಳಲ್ಲಿ ದೇಹಗಳ ಪ್ರಾಮುಖ್ಯತೆ ಹೆಚ್ಚಾಗಿದೆ. ಇಲ್ಲಿ ಗಂಡು-ಹೆಣ್ಣುಗಳು ತಮ್ಮ ದೈಹಿಕ ತೃಪ್ತಿಗಷ್ಟೇ ಗಮನ ಕೇಂದ್ರೀಕರಿಸುತ್ತಾರೆ. ಅದು ಜಾತಿ, ಸಮಾಜ ಇವುಗಳನ್ನು ಲೆಕ್ಕಿಸದೇ ಭಿನ್ನವಾಗಿ ನೋಡುವ ಪ್ರಕ್ರಿಯೆ ಇಲ್ಲಿ ನಡೆಯುತ್ತದೆ.

ಕುಟುಂಬಗಳ ಬಿಗಿಯಾದ ಚೌಕಟ್ಟುಗಳಿಂದಲೇ ಬಂದಿರುವ ಇಲ್ಲಿನ ಕಥಾ ಪಾತ್ರಗಳೆಲ್ಲವೂ ಅತೃಪ್ತಿಯನ್ನು ಹೋಗಲಾಡಿಸಿಕೊಳ್ಳುವ ಸಂದರ್ಭ, ಅವಕಾಶಗಳಿಗೆ ಹೊಂಚು ಹಾಕುತ್ತಿರುತ್ತಾರೆ. 'ಕಾಮ' ಪ್ರವೃತ್ತಿ ಮನುಷ್ಯನ ಸ್ವಭಾವದ ಅತಿರೇಖಗಳಲ್ಲಿ ಒಂದೆಂದು ಹೇಳಬಹುದು. ದೇಹಗಳ ಅಂಗಾಂಗಳ ವರ್ಣನೆಯೂ ನಗರೀಕರಣವೂ ಮನುಷ್ಯನ ಮನಸ್ಥಿತಿಯನ್ನು ಕ್ಷುಲ್ಲಕಗೊಳಿಸುತ್ತಿರುವುದನ್ನು ಪಾತ್ರಗಳಲ್ಲಿ ನೋಡಬಹುದು. ವೈಯಕ್ತಿಕ ತೃಪ್ತಿಗಾಗಿಯೇ ಬದುಕನ್ನು ನಡೆಸುತ್ತಿದ್ದಾರೆ. ಎಂಬ ಅನುಮಾನ ಸಂದೇಹಗಳು ಕಾಡುತ್ತವೆ. ಮನುಷ್ಯನು ರೂಢಿಸಿಕೊಂಡಿರುವ ವೈಯಕ್ತಿಕ ಮೌಲ್ಯ ಹೊಸ ನೈತಿಕ ನಿಯಮಗಳು ಕಾರಣ. ಇದರಿಂದ ಅವನ ಕ್ರಮಬದ್ಧವಲ್ಲದ ಜೀವನಕ್ರಮ, ಅಶಿಸ್ತುಗಳನ್ನು ತೋರಿಸುತ್ತದೆ. ಅವನು ಅಳವಡಿಸಿಕೊಂಡ ಮೌಲ್ಯಗಳೇ ಅವನ ಇಂದಿನ ಜೀವನ ಕ್ರಮದ ಅಪ್ರಸ್ತುತಕ್ಕೆ ಕಾರಣ ಊಹಾಪೋಹಗಳಿಗೆ ಸಮರ್ಥ ಉದಾಹರಣೆಯಾಗಿ ನಿಲ್ಲುವ ಈ ಕಥೆಗಳಲ್ಲಿ ಕಾಮದ ವಿಪರೀತತೆಯನ್ನು ಕಾಣುತ್ತೇವೆ.

ಇದರಾಚೆಯ ಬದುಕು ಮನುಷ್ಯನಲ್ಲಿ ಸಾಧ್ಯವಿಲ್ಲವೇ ಎಂಬ ಪ್ರಶ್ನೆ ತಲೆ ಎತ್ತುತ್ತದೆ. ಇಲ್ಲಿನ ಪಾತ್ರಗಳಲ್ಲಿ ಸ್ವತಂತ್ರವಾದ ವ್ಯಕ್ತಿತ್ವವನ್ನು ಗುರುತಿಸುವುದು ಕಷ್ಟ. ಅವರದೇ ಆದ ಸೃಜನ ಮನಸ್ಸುಗಳಿರುವುದೇ ಮದುವೆಯ ಚೌಕಟ್ಟನ್ನು ಬಯಸದೇ ಸ್ವಚ್ಛಂದವಾದ ಬದುಕನ್ನು ನಡೆಸುತ್ತಿರುವ ಗಂಡು-ಹೆಣ್ಣುಗಳಲ್ಲಿ ದೈಹಿಕ ಬಯಕೆಗಳ ಆಸಕ್ತಿ ಮಾನಸಿಕವಾಗಿ ಅವರುಗಳು ಒಬ್ಬರಿಗೊಬ್ಬರು ಅರ್ಥ ಮಾಡಿಕೊಳ್ಳುವುದಿಲ್ಲ ಮತ್ತು ಅವಕ್ಕೆ ಅವರು ತಯಾರಿಲ್ಲ. ಎಲ್ಲಾ ಸಾಹಿತ್ಯ ಘಟ್ಟದಲ್ಲಿ ಪುರುಷಕೇಂದ್ರಿತ ಸಮಾಜದ ಮೇಲೆಯೇ ಸಾಹಿತ್ಯ ಕೃತಿಗಳ ಚಿಂತನೆಗಳು ಹರಿದಾಡುತ್ತವೆ. ಪುರುಷನ ಪರಿಸ್ಥಿತಿ ಅಹಂಮಿಕೆ, ದ್ವಂದ್ವ, ಅನಾತಪ್ರಜ್ಞೆ, ಅಸಹಾಯಕತೆ ಇವುಗಳು ಬಹಳಷ್ಟು ಚರ್ಚಿತವಾಗುತ್ತವೆ. ಈ ಪರಿಸ್ಥಿತಿಗಳಿಗೆ ಹೆಣ್ಣು ಕಾರಣವಾಗಿರುವುದನ್ನು ಗುರುತಿಸಬಹುದು. ಆದ್ದರಿಂದಲೇ ನವ್ಯ ಸಾಹಿತ್ಯ ಘಟ್ಟದಲ್ಲಿ ಹೆಣ್ಣಿಗೆ ಜೀವಂತವಾದ ಪಾತ್ರವನ್ನು ಸೃಷ್ಟಿಸಿದರೆ ಗಂಡಿಗೆ ಪೂರಕವಾದ ಪಾತ್ರ ಮಾತ್ರ ಹೆಣ್ಣನ್ನು ಸೃಷ್ಟಿಸುತ್ತಾರೆ. ಇಲ್ಲಿ ಅವಳು ಒಂದು ವಸ್ತುವಾಗಿಯೇ ಮಾರ್ಪಟ್ಟಿದ್ದಾಳೆ. ಎನ್ನಬಹುದು.

ಸಮಾಜದಲ್ಲಿರುವ ಎಲ್ಲ ಪಾತ್ರಗಳನ್ನು ಅವರ ವಾಸ್ತವಿಕ ನೆಲೆಯಲ್ಲಿಯೇ ತಂದುಕೊಡಬೇಕು ಈ ಕಾರಣದಿಂದಲೇ ಹೆಣ್ಣಿನ ವಿವಿಧ ಮುಖಗಳನ್ನು ಪರಿಚಯಿಸುತ್ತಾರೆ. ನವೋದಯ ಸಾಹಿತ್ಯದಲ್ಲಿ ಹೆಣ್ಣಿನ ಒಂದು ಮುಖವನ್ನು ಮಾತ್ರ ಗುರುತಿಸಿದರು. ನವ್ಯದಲ್ಲಿ ಹೆಣ್ಣಿಗೆ ಸಾಕಷ್ಟು ಸ್ವಾತಂತ್ರ್ಯವನ್ನು ಕೊಟ್ಟರು. ಅವಳ ಮನಸ್ಥಿತಿಗಳಲ್ಲಿನ ಬದಲಾವಣೆಯ ಸ್ವರೂಪವನ್ನು ತಿಳಿಯಲು ಪ್ರಯತ್ನಿಸಿದರು. ಗಂಡಿನಷ್ಟೇ ಸಮಾನವಾದ ಸ್ವಾತಂತ್ರ್ಯವನ್ನು ಕಲ್ಪಿಸಿದ ಸಮಾಜದಲ್ಲಿ ಹೆಣ್ಣಿನ ನಡವಳಿಕೆಯಲ್ಲಿ ಸ್ಥಿತ್ಯಂತರವನ್ನು ಗುರುತಿಸಬಹುದು. ತನ್ನ ಅತೃಪ್ತ ಕಾಮನೆಗಳನ್ನು ಬೇರೆಯವರಲ್ಲಿ ತೃಪ್ತಿಗೊಳಿಸಿಕೊಳ್ಳಲು ಅವಳು ಮುಂದಾಗುವುದು ಸಾಮಾಜಿಕ ಸಂದರ್ಭದ ಬದಲಾವಣೆಯನ್ನು ತಿಳಿಸುತ್ತದೆ.

'ತಪ್ತ' ಮತ್ತು 'ಫೀನಿಕ್ಸ್' ಕಥಾ ಸಂಕಲನದಲ್ಲಿ ನಾವು ಹೆಣ್ಣು ಗಂಡುಗಳ ಬೆಳವಣಿಗೆಯಲ್ಲಿ ರೂಪಾಂತರಗಳನ್ನು ಕಾಣುತ್ತೇವೆ. 'ತಪ್ತ' ಸಂಕಲನದಲ್ಲಿ ಸಂಕ್ರಮಣ ಸ್ಥಿತಿಯ ಹೆಣ್ಣು-ಗಂಡುಗಳನ್ನು ಗುರುತಿಸುತ್ತೇವೆ. 'ಫೀನಿಕ್ಸ್' ಸಂಕಲನದಲ್ಲಿ ಸಂಕ್ರಮಣ ಸ್ಥಿತಿಯನ್ನು ದಾಟಿ ಸಂಪೂರ್ಣವಾಗಿ ಆಧುನಿಕತೆಯನ್ನು ಅಪ್ಪಿಕೊಳ್ಳುವಿಕೆಯನ್ನು ಕಾಣುತ್ತೇವೆ. 'ತಪ್ತ' ಸಂಕಲನದಲ್ಲಿ ಆಲನಹಳ್ಳಿಯವರು ಹೆಣ್ಣಿಗೆ ಕೊಡುವ ಗೌರವವನ್ನು 'ಫೀನಿಕ್ಸ್' ಸಂಕಲನದಲ್ಲಿ ಕಾಣಲು ಸಾಧ್ಯವಿಲ್ಲ. 'ತಪ್ತ'ದಲ್ಲಿ ಮನಸ್ಸಿನ ಆಂತರಂಗಿಕ ಭಾವನೆಗಳಿಗೆ ಪ್ರಾಮುಖ್ಯತೆಯನ್ನು ನೀಡಿದರೆ 'ಫೀನಿಕ್ಸ್' ಸಂಕಲನದಲ್ಲಿ ದೈಹಿಕ ಬಯಕೆಗಳ ತೃಪ್ತಿಗೆ ಹೆಣ್ಣಿನ ಗಮನ ಕೊಡುತ್ತಾರೆ. ಅವರ ಜೀವನ ದೃಷ್ಟಿಯಲ್ಲಿನ ಪಲ್ಲಟವನ್ನು ಗುರುತಿಸಬಹುದು. ಇಲ್ಲಿ ಹೆಚ್ಚು ಸಮಸ್ಯೆಗಳನ್ನು ತರುವ ವಸ್ತುವಾಗಿದ್ದಾಳೆ. ಮನಸ್ಸಿನ ಸ್ಥಿರತೆಯನ್ನು ಚಂಚಲಗೊಳಿಸಲು ಬರುವ ಭೋಗವಸ್ತುವಾಗಿ

ಮಾರ್ಪಟ್ಟಿದ್ದಾಳೆ. ತನ್ನದೇ ಅಸ್ಥಿತ್ವ ಮತ್ತು ವ್ಯಕ್ತಿತ್ವವನ್ನು ಕಂಡುಕೊಳ್ಳುವುದು ಮರೆತಿದ್ದಾಳೆ ನಿರಾತಂಕದ ಜೀವನ ನಮಗೆ ಬೇಕಿಲ್ಲ. ನಮಗೆ ಅನುಭವಗಳನ್ನು ಗಳಿಸಿಕೊಳ್ಳುವ ಸಮಸ್ಯೆಗಳಿಂದ ಕಂಡಿರುವ ಜೀವನವೇ ಬೇಕು ಎಂಬ ಮನಸ್ಥಿತಿಯ ನಾಯಕರುಗಳನ್ನು ಈ ಸಂಕಲನಗಳಲ್ಲಿ ಕಾಣುತ್ತೇವೆ. ವೈಯಕ್ತಿಕ ಸುಖಕ್ಕಾಗಿ ಅವರುಗಳು ತೊಡುವ ವೇಷಗಳು ನಾನಾ ರೀತಿಯವರು ಇಬ್ಬರೂ ಒಬ್ಬರಿಗೊಬ್ಬರು ಆಕರ್ಷಿಸಿಕೊಳ್ಳುವುದರಲ್ಲಿ ಬದುಕಿನ ದಿನಗಳನ್ನು ಮುಡುಪಾಗಿಡುವುದು. ದುರ್ಬಲ ಮನಸ್ಸನ್ನು ಸೃಷ್ಟಿಸಿಕೊಟ್ಟಿರುವ ಆಧುನಿಕತೆಯ ಭಾರತೀಯ ಸಮಾಜಕ್ಕೆ ಬೇಕೇ ಎಂಬ ಪ್ರಶ್ನೆ ಏಳುತ್ತದೆ.

ದೇಹಗಳ ಪ್ರಾಮುಖ್ಯತೆಯು ಹೆಚ್ಚಾಗಿ ಕಂಡುಬರುವ ಕೆಲವು ಕಥೆಗಳಲ್ಲಿ ಸಾಮಾಜಿಕ ಕಟ್ಟುಪಾಡುಗಳನ್ನು ಮುರಿಯುವುದಕ್ಕಾಗಿಯೇ ಬಳಸಿಕೊಳ್ಳಲಾಗಿದೆ. ದೈಹಿಕ ಸಂಬಂಧಗಳನ್ನು ಬೆಳೆಸುವಾಗ ಅವರ ವೈಯಕ್ತಿಕ ಕಷ್ಟ ಸುಖಗಳ ಬಗ್ಗೆ ಗಮನಕೊಡುವುದಿಲ್ಲ. ಕ್ಷಣಿಕವಾದ ಸುಖದ ತೃಪ್ತಿಯೇ ಅವರಿಗೆ ಮುಖ್ಯವಾಗಿರುತ್ತದೆ. ಭಾವನೆಗಳು ಅರಳುವಾಗಲೇ ಬರಡಾಗುವಂತೆ ಅವುಗಳ ಮೇಲೆ ಒತ್ತಡವನ್ನು ಹೇರುವುದನ್ನು ಕಾಣುತ್ತೇವೆ. ಗಂಡಿನ ಧೋರಣೆಗಳಲ್ಲಾಗಲೀ ಹೆಣ್ಣಿನ ಧೋರಣೆಗಳಲ್ಲಾಗಲೀ ತಪ್ಪನ್ನು ಹುಡುಕುವುದು ಸಾಧ್ಯವಾಗುವುದಿಲ್ಲ. ಇಬ್ಬರೂ ಸಮಾನಾಂತರವಾಗಿ ತಪ್ಪುಗಳಿಗೆ ಕಾರಣರಾಗಿದ್ದಾರೆ. ದೇಹ ತೃಪ್ತಿಯನ್ನು ಗಮನದಲ್ಲಿಟ್ಟುಕೊಂಡು ರಚನೆಗೊಂಡಿರುವ ಈ ಕಥೆಗಳಲ್ಲಿ ಕಾಮದ ಮಾದರಿಗಳನ್ನು ವಾಸ್ತವಿಕ ನೆಲೆಯಲ್ಲಿ ಕಟ್ಟಿಕೊಡುತ್ತಾರೆ. ಸ್ಥಿತ್ಯಂತರ ಹೊಂದುತ್ತಿರುವ ಸಮಾಜದಲ್ಲಿ ಹೆಣ್ಣು–ಗಂಡುಗಳಿಗೆ ಆಗುತ್ತಿರುವ ಬದಲಾವಣೆಯನ್ನು ಅದರ ಸ್ವರೂಪಗಳನ್ನು ಪರಿಚಯಿಸುತ್ತಾರೆ. ಇಲ್ಲಿ ನಾಯಕರೆಲ್ಲ ಮದುವೆಯಾಗಿ ಹೊರದೇಶಗಳಿಗೆ ಹೋಗಿ ಗಂಡನೊಂದಿಗೆ ಸಂಸಾರ ನಡೆಸುತ್ತಿರುವವರು ಸ್ವದೇಶಕ್ಕೆ ಹಿಂದಿರುಗಿದಾಗ ಹಳೆಯ ಪ್ರಿಯಕರನ ನೆನಪು ಕಾಮತೃಪ್ತಿಗಾಗಿ ಕಾಡುವುದು ಇವುಗಳನ್ನು ನೋಡಿದಾಗ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವನ್ನು ಗುರುತಿಸಲು ಸಾಧ್ಯ. ಆಧುನಿಕ ವಿದ್ಯಾಭ್ಯಾಸಗಳಿಂದ ತಮ್ಮ ಬದುಕನ್ನು ರೂಪಿಸಿಕೊಳ್ಳಲು ಸ್ವತಂತ್ರರಾಗುವ ಗಂಡು–ಹೆಣ್ಣುಗಳಿಗೆ ತಮ್ಮದೇ ಆಲೋಚನೆ, ಚಿಂತನೆಗಳಿಂದ ಬುದಕಿನ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಈ ತೀರ್ಮಾನಗಳಲ್ಲಿ ತನ್ನ ಸುಖಕ್ಕೆ ಪ್ರಾಮುಖ್ಯತೆ. "ಸಾಹಿತ್ಯ ಕೃತಿಗಳನ್ನು ನಿರ್ಮಿಸುವಷ್ಟಕ್ಕೆ ಅವನ ಆಸಕ್ತಿ ಸೀಮಿತವಾಗಿರಲಿಲ್ಲ ಸಾಹಿತ್ಯದ ಪರಿಸರ ನಿರ್ಮಾಣದಲ್ಲೂ ಅವನು ಅಷ್ಟು ಆಸಕ್ತನಾಗಿದ್ದ ಹಳೆಯ ಕಾಲಘಟ್ಟದ ಕುರಿತಾಗಿ ಹುಸಿ ಭ್ರಮೆಗಳನ್ನು ಇರಿಸಿಕೊಂಡಿರಲಿಲ್ಲ. ಬದಲಾವಣೆಯ ಅನಿವಾರ್ಯತೆಯನ್ನು ಒಪ್ಪಿಕೊಂಡೇ ಅದರಿಂದ ಬಡುಮೇಲಾಗುವ ಜನಾಂಗ ಸಂಸ್ಕೃತಿಯನ್ನು ಚಿತ್ರಿಸುವುದು ಬಹಳ ಮುಖ್ಯವಾಗಿತ್ತು. ಆಲನಹಳ್ಳಿಯವರ ಕಥಾ ಪ್ರಪಂಚದಲ್ಲಿ ಬೌದ್ಧಿಕ ತಿಕ್ಕಾಟಗಳಾಗಲೀ ಚರ್ಚೆಗಳಾಗಲೀ ಜಿಜ್ಞಾಸೆಯಾಗಲೀ ಕಾಣಿಸಲು ಅದಕ್ಕೆ ಬದಲಾಗಿ ನಾವು ಕಾಣುವುದು ಬದಲಾಗುತ್ತಿರುವ ಗ್ರಾಮೀಣ ಪರಿಸರದ ಆಂತರಿಕ ಘರ್ಷಣೆಗಳನ್ನು ಚಾರಿತ್ರಿಕವಾಗಿ

ಕೃಷ್ಣರ ಕೃತಿಗಳು ಮುಖ್ಯವಾಗುವುದು.... ಆದರೆ ಈ ಜಿಜ್ಞಾಸೆಗಳಲ್ಲಿ ಬದುಕಿನ ಹಸಿ ಹಸೀ ಅನುಭವಗಳ ಮೂಲಕ ಬಂದುದು...."೩೬

ಮನುಷ್ಯ ಮಾದರಿಗಳನ್ನು ಕಥೆಗಳಲ್ಲಿ ಹೇಳುತ್ತಾರೆ. ಮನಸ್ಸು ಮತ್ತು ದೇಹಗಳ ಪ್ರಾಮುಖ್ಯತೆಯ ಜಿಜ್ಞಾಸೆಯಲ್ಲಿ ಪ್ರಮುಖವಾದ ಅಂಶಗಳು ಮನಸ್ಸಿಗೆ ಪ್ರಾಮುಖ್ಯತೆಯನ್ನು ಕೊಟ್ಟಾಗ ಮನುಷ್ಯನ ಅಸ್ಥಿತ್ವದ ಛಿದ್ರತೆಯನ್ನು ದೇಹಕ್ಕೆ ಪ್ರಾಮುಖ್ಯತೆ ಕೊಟ್ಟಾಗ ವ್ಯಕ್ತಿತ್ವದ ಛಿದ್ರತೆಯನ್ನು ಕಾಣಬೇಕಾಗಿರುವ ವಾಸ್ತವಿಕ ಸತ್ಯವಾಗಿದೆ. ಮನುಷ್ಯನು ಎರಡನ್ನು ಸಮನ್ವಯವಾಗಿ ದೇಹ ಮತ್ತು ಮನಸ್ಸಿಗೆ ಪ್ರಾಮುಖ್ಯತೆ ಕೊಡಬೇಕು. ಆಲನಹಳ್ಳಿಯವರಲ್ಲಿ ಈ ಎರಡು ಛಿದ್ರತೆಗಳನ್ನು ತಮ್ಮ ಕಥೆಗಳಲ್ಲಿ ಪಾತ್ರಗಳ ಮೂಲಕ ಕಟ್ಟಿಕೊಡುತ್ತಾರೆ. 'ತಪ್ತ' ಸಂಕಲನದಲ್ಲಿ ಮನುಷ್ಯನ ಅಸ್ಥಿತ್ವದ ಛಿದ್ರತೆಯ ಮಾದರಿಗಳನ್ನು 'ಫೀನಿಕ್ಸ್' ಸಂಕಲನದಲ್ಲಿ ವ್ಯಕ್ತಿತ್ವದ ಛಿದ್ರತೆಯ ಸ್ವರೂಪಗಳನ್ನು ಕೊಟ್ಟಿದ್ದಾರೆ. 'ತೊರೆ' ಮತ್ತು 'ಸಂಬಂಧ' ಕತೆಗಳು ಮನುಷ್ಯನ ಬದುಕಿನ ಅಂತಿಮಘಟ್ಟದಲ್ಲಿ ಉಳಿಯುವುದು ಏನು ಎಂಬುದನ್ನು ಸಮರ್ಥವಾಗಿ ಹೇಳಲು ಪ್ರಯತ್ನಿಸಿವೆ. 'ತಪ್ತ' ಕಥೆಯಲ್ಲಿ ಹಳತು ಹೊಸತರ ನಡುವಿನ ಸಂಘರ್ಷವನ್ನು ಚಿತ್ರಿಸುವ ಪ್ರಯತ್ನವಿದ್ದು ಗೌರಿ ಮತ್ತು ಪ್ರಭಾಳ ಪ್ರೀತಿ ಮತ್ತು ರಕ್ತ ಸಂಬಂಧಗಳ ಮೂಲಕ ಕಥಾನಾಯಕ ಜಾತಿಯ ಅಡ್ಡಗೋಡೆಯ ಅತ್ತ ಮತ್ತು ಇತ್ತಗಳ ನಡುವೆ ಸಿಕ್ಕಿ ನರಳುತ್ತಾನೆ. 'ಆಗಂತುಕ' ಕಥೆಯ ಕಿಟ್ಟಿ ಬೇರೆ ಜಾತಿಯವರನ್ನು ಮದುವೆಯಾಗಲು ಮುಂದಾದಾಗ ಅವನ ಅಜ್ಜಿ ಸಾಯುವ ಮಾತನ್ನು ಆಡುತ್ತಾಳೆ. ಜಾತಿ ಮತ್ತು ಸಾಮಾಜಿಕ ಸಂಕೋಲೆಗಳು ಹೆಣೆದುಕೊಂಡ ಬಗೆಯನ್ನು ಈ ಕಥೆಯ ಪಾತ್ರಗಳಲ್ಲಿ ಶೋಧಿಸಲಾಗಿದೆ. 'ಶ್ರಾವಣ' ಕಥೆಯ ಶಕುಂತಲೆ, ಸವಿತಾಳ ಪಾತ್ರಗಳು ಪ್ರೇಮವಿರಹಗಳ ಸಾಫಲ್ಯ ಮತ್ತು ವೈಫಲ್ಯಗಳ ಸುತ್ತ ಜಾತಿಯ ಕಾರಣಕ್ಕೆ ಹೆಣೆದುಕೊಂಡಿವೆ. 'ಹುತ್ತ' ಕಥೆಯ ಪಾತ್ರವಾದ ಸುಮಿತ್ರಳು ಕಥಾನಾಯಕನಲ್ಲಿ ಬಡತನ ಮತ್ತು ಶ್ರೀಮಂತಿಕೆಯಲ್ಲಿ ಒಂದಾಗುವ ರೀತಿಯನ್ನು ಆಲನಹಳ್ಳಿಯವರು ತರುತ್ತಾರೆ. 'ಅಂಟಿದ ನಂಟಿನ ಕೊನೆಯ ಬಲ್ಲವರಾರು?' ಕಥೆಯಲ್ಲೂ ಶೂದ್ರ ನಾಯಕ ಮತ್ತು ಬ್ರಾಹ್ಮಣ ತರುಣಿ ಶಾಲಿನಿಯ ಪ್ರಣಯ ಪ್ರಸಂಗವನ್ನು ಚಿತ್ರಿಸಿದ್ದಾರೆ. ಜಾತಿ ಪ್ರಜ್ಞೆಯನ್ನು ವೈಚಾರಿಕ ನೆಲೆಯಲ್ಲಿ ನೋಡಬೇಕೆಂಬ ಹಂಬಲ ಆಲನಹಳ್ಳಿಯವರ ಕಥೆಗಳಲ್ಲಿ ಇದೆ. 'ತೊರೆ' ಕಥೆಯ ಲಕ್ಷ್ಮೀ ಹಾಗೂ ಪ್ರಭುವಿನ ಪಾತ್ರದ ಮೂಲಕ ಬಾಲ್ಯದಿಂದಲೂ ಪ್ರೀತಿಸುತ್ತಿದ್ದ ಇವರು ಪ್ರೀತಿ ಕಡಿದುಹೋಗಲು ಜಾತಿ ಅಡ್ಡಬಂದುದೇ ಕಾರಣವೆಂಬುದನ್ನು ನೋಡಬಹುದು. ಲಕ್ಷ್ಮೀಯ ಬದುಕಿಗೆ ಮತ್ತೇನೂ ಹೊಸದಾಗಿ ಅಷ್ಟೇ ಲವಲವಿಕೆಯಿಂದ ಪ್ರವೇಶಿಸಲಾರದು ಎಂಬ ಕಟುಸತ್ಯಕ್ಕೆ ಭೂತವು ಸ್ವಲ್ಪಮಟ್ಟಿಗೆ ಸಮಾಧಾನ ಕೊಡುತ್ತದೆ. ವಿಧವೆ ಲಕ್ಷ್ಮೀ ಗತಿಸಿದ ಕಾಲದ ಸಂಘರ್ಷದಲ್ಲಿ

---

೩೬. ಕೆ.ವಿ.ತಿರುಮಲೇಶ್, 'ಕಾಡಿನ ಹುಡುಗ ಕೃಷ್ಣ – ಕಾಲಾಂತರದಲ್ಲಿ ಕೃಷ್ಣ', ೧೯೯೧, ಪುಟ. ೧೪.

ವರ್ತಮಾನದ ಅಳಲನ್ನು ಸಹ್ಯವಾಗಿಸಿಕೊಳ್ಳುವ ಪ್ರಯತ್ನದಲ್ಲಿ ಮಗ್ನವಾಗುವುದು ಒಂದು ರೀತಿಯಲ್ಲಿ ನೋವಿನ ಸಂಗತಿ. ಆಶಯಗಳು ಕೂಡಿದ್ದರೆ ಲಕ್ಷ್ಮೀ ಮತ್ತು ಪ್ರಭು ನೆಮ್ಮದಿಯಿಂದ ಬದುಕುತ್ತಿದ್ದ ಸಾಧ್ಯತೆಯನ್ನು ಹಿರಿಯರ ಅವಿವೇಕ ಹಾಳು ಮಾಡುತ್ತದೆ. ತಾರಾಳ ಸಹವಾಸ ಗಂಡ ಮತ್ತು ಅತ್ತೆಯ ಮನೆಯ ಬದುಕಿಗೆ ಪ್ರಾಮಾಣಿಕವಾಗಿ ಒಲಿಯಲಿಲ್ಲ. ಇಬ್ಬರಲ್ಲೂ ಆ ನಿರಾಸೆಯಿದೆ. ಲಕ್ಷ್ಮೀಯ ಎದುರಿನಲ್ಲಿ ಆ ದುಃಖ ಮತ್ತೂ ಆಳವಾಗುತ್ತದೆ. ಕೌಟುಂಬಿಕ ಸ್ಥಿರತೆಯನ್ನು ಕಾಯ್ದುಕೊಳ್ಳುವ ಸಲುವಾಗಿ ಅವರು ಪರಸ್ಪರ ದೂರವಾಗಿದ್ದಾರೆ. ಭೂತವನ್ನು ವರ್ತಮಾನದಲ್ಲಿ ಅರಗಿಸಿಕೊಳ್ಳುತ್ತ ಸದ್ಯದ ಬದುಕಿಗೆ ಗೌರವ ಸಲ್ಲಿಸುವ ಲಕ್ಷ್ಮೀಯ ಹತಾಶೆಯು, ಉದ್ದಕ್ಕೂ ನಿಟ್ಟುಸಿರನ್ನು ತನ್ನ ಆಸರೆಯಾಗಿ ಮಾಡಿಕೊಳ್ಳುತ್ತದೆ.

ಕೌಟುಂಬಿಕ ಘಟನೆಯು ಮನುಷ್ಯನ ತಪ್ಪು ನಡೆಯಲ್ಲಿ ರೂಪುಗೊಳ್ಳುತ್ತಿರುವುದನ್ನು 'ಸಂಬಂಧ' ಕತೆಯಲ್ಲಿ ಹೇಳುತ್ತದೆ. ಶೂದ್ರ ನಾಯಕನಿಗೂ ಬ್ರಾಹ್ಮಣ ಹುಡುಗಿ ಲಲಿತಳಿಗೂ ಇರುವ ಸಂಬಂಧವನ್ನು ಸೂಕ್ಷ್ಮವಾಗಿ ತಂದಿದ್ದಾರೆ. ಜಾತಿಯ ಹಿನ್ನೆಲೆಯಲ್ಲಿ ಪಾತ್ರಗಳನ್ನು ಸೃಷ್ಟಿಸಿರುವ ಆಲನಹಳ್ಳಿಯವರು ಮಾನವೀಯತೆಯನ್ನು ಶ್ರೇಷ್ಠ ಮೌಲ್ಯವಾಗಿಸಿಕೊಳ್ಳುವ ಬಗೆಯನ್ನು ಲಲಿತಾಳ ಪಾತ್ರದ ಮೂಲಕ ತಂದಿದ್ದಾರೆ. ಇಲ್ಲಿ ಜಾತಿ ತನ್ನ ಸಾಂಕ್ರಾಮಿಕ ಸ್ವರೂಪವನ್ನು ವ್ಯಕ್ತಪಡಿಸಿರುವುದರಿಂದ ಶೂದ್ರ ನಾಯಕನ ಗ್ರಹಿಕೆಗಳು ಸಾಂಸ್ಕೃತಿಕಗೊಳ್ಳುತ್ತ ಬ್ರಾಹ್ಮಣ ಹೆಣ್ಣಿನ ಆಶಯಗಳು ದುರಂತಕ್ಕೆ ತಿರುಗುತ್ತವೆ ಎಂಬುದನ್ನು ಕತೆ ವಿಷಾದದಲ್ಲಿ ಗಮನಿಸಿದೆ. ಜಾತಿಯ ಅಡ್ಡಗೋಡೆ ಇಲ್ಲದಿದ್ದರೆ ಇವರಿಬ್ಬರೂ ಕೂಡಿ ಬದುಕುವ ಸಾಧ್ಯತೆಯು ಕತೆಯ ವಿಷಾದದೊಡಲಿನ ಕೇಂದ್ರ ಆಶಯವಾಗಿದೆ. ಇಂಥ ಸಂದರ್ಭದಲ್ಲೂ ಕಷ್ಟ ಸುಖಕ್ಕೆ ಸ್ಪಂದಿಸುವುದರಿಂದ ಜಾತಿಯನ್ನು ಮೀರಿದ ತನ್ನ ನೆಲೆಯನ್ನು ಆ ಆಶಯವು ಕಂಡುಕೊಳ್ಳುತ್ತದೆ. ಲಲಿತಳ ಕೌಟುಂಬಿಕ ಸಮಸ್ಯೆಯನ್ನು ಪೂರ್ಣವಾಗಿ ಶೂದ್ರ ನಾಯಕ ಪರಿಹರಿಸಲಾರ. ಆದರೆ ತನ್ನಿಂದ ಸಾಧ್ಯವಾಗುವ ನೆರವನ್ನು ಕೊಡಲು ಆತ ಶಕ್ತನಿದ್ದಾನೆ. ಅದನ್ನು ಬಾಲ್ಯದ ಸಖ ಎಂಬ ಆತ್ಮೀಯತೆಯಿಂದ ಲಲಿತಳೂ ಸ್ವೀಕರಿಸುತ್ತಾಳೆ. ಇಲ್ಲಿ ವಿಘಟನೆಯು ಮೂಲಧಾತು ಅಡ್ಡಿಯಾಗುತ್ತದೆ. ಹೆಣ್ಣು ಪರಪುರುಷರೊಡನೆ ಸ್ನೇಹದಿಂದಿರುವುದನ್ನು ಸಾಂಪ್ರದಾಯಿಕ ಮನಸ್ಸು ಲೈಂಗಿಕ ನೆಲೆಯನ್ನು ಗುರುತಿಸುತ್ತದೆ. ಹೆಣ್ಣು ಗಂಡುಗಳು ಪರಸ್ಪರರನ್ನು ಅರಿತುಕೊಳ್ಳುವ ಆರೋಗ್ಯಕಾರಿಯಾದ ಮುಕ್ತ ವಾತಾವರಣ ಸಾಂಪ್ರದಾಯಿಕ ನೆಲದಲ್ಲಿ ಸಾಂಸ್ಕೃತಿಕಗೊಳ್ಳುವುದು ವಿಘಟನ ಮಾದರಿಗಳಲ್ಲಿ ಮಾತ್ರ. ಶೂದ್ರ ನಾಯಕನಂಥ ಸಂಸ್ಕೃತಿನಿಷ್ಠ ವ್ಯಕ್ತಿ ತನ್ನ ನೋವುಗಳನ್ನು ಮರೆಯುತ್ತಲೇ ಇಂಥ ಪ್ರಕ್ರಿಯೆಯನ್ನು ಮಾನವೀಯ ಪಾತಳಿಯಲ್ಲಿ ಮುಂದುವರಿಸುವುದು ಅನಿವಾರ್ಯವಾಗಿದೆ. ಹೆಣ್ಣು-ಗಂಡಿನ ಸಂದರ್ಭದಲ್ಲಿ ಉತ್ಕಟವಾಗಿ ಉರಿದು ಬೂದಿಯಾಗುವ ಬಿಸಿ ನೆತ್ತರಿನ ಲೇಖಕ ತಾಳ್ಮೆ ಸಂಯಮದ ಒಡಲನ್ನೇ ದಕ್ಕಿಸಿಕೊಂಡವನಂತೆ ಇಂಥ ಕತೆ ಕೊಟ್ಟಿರುವುದು ನಿಜಕ್ಕೂ ಅಚ್ಚರಿಯ ಸಂಗತಿ.

ಆಲನಹಳ್ಳಿಯವರು ಸುಮಾರು ಕಾಲುಶತಮಾನದ ಅವಧಿಯಲ್ಲಿ ಸೃಷ್ಟಿಸಿರುವ ಒಟ್ಟು ಕಥೆಗಳಲ್ಲಿ ಕೆಲವು ಮಹತ್ವದ ಕಥೆಗಳಿರುವಂತೆ ಸಾಮಾನ್ಯ ಕಥೆಗಳೂ ಇವೆ. ಒಬ್ಬ ಲೇಖಕ ಬರೆದುದೆಲ್ಲವೂ ಅತ್ಯಂತ ಶ್ರೇಷ್ಠಮಟ್ಟದ್ದಾಗುವುದು ಸಾಧ್ಯವಿಲ್ಲ. ಈ ಮಾತು ಆಲನಹಳ್ಳಿಯವರ ಕಥೆಗಳಿಗೂ ಅನ್ವಯಿಸುತ್ತದೆ. ಒಟ್ಟಾರೆ ದಟ್ಟವಾದ ಜೀವನ ಪ್ರೀತಿಯುಳ್ಳ ಕಥೆಗಾರರಾದ ಆಲನಹಳ್ಳಿಯವರು ಬದುಕಿನ ಆಳ-ಅಗಲಗಳನ್ನು ತನ್ನೆಲ್ಲ ಮಿತಿಗಳೊಡನೆ ಪರಿಚಯಿಸುವ ಜಿಜ್ಞಾಸೆಗೆ ಮರುಚಿಂತನೆಗೆ ಹಚ್ಚುವ ಹೆಚ್ಚಿನ ತಿಳುವಳಿಕೆಯನ್ನು ನೀಡುವ ಕಥೆಗಳನ್ನು ರಚಿಸಿದ್ದಾರೆ. ಈ ವಿಷಯಗಳೆಲ್ಲವನ್ನು ಆಯಾಯ ಕಥೆಗಳನ್ನು ಕುರಿತು ವಿಶ್ಲೇಷಿಸುವಾಗ ಚರ್ಚಿಸಿದ್ದೇನೆ. ಒಟ್ಟು ಇವರ ಕಥೆಗಳ ಮುಖ್ಯ ಸತ್ವ ಕಾಮವೇ ಆಗಿದ್ದು ಯುವ ಮನಸ್ಸುಗಳ ಎಲ್ಲಾ ರೀತಿಯ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸಿದಂತಿದೆ ಅಲ್ಲದೆ ಹಳತು ಮತ್ತು ಹೊಸತುಗಳ ನಡುವಣ ಸಂಘರ್ಷ ಇವರ ಬಹುಪಾಲು ಕಥೆಗಳಲ್ಲಿ ಕಂಡುಬರುತ್ತವೆ. ಜೀವನವನ್ನು ಉತ್ಕಟವಾಗಿ ಅನುಭವಿಸುವ ಮುಕ್ತ ಮನಸ್ಸಿನ ಇವರ ಕಥಾನಾಯಕ ನಾಯಕಿಯರು ಹೊಸ ಬದುಕಿನ ಸೆಳೆತದಿಂದ ಜಾತಿ, ಮತ, ಧರ್ಮ, ವಯಸ್ಸು, ಅಂತಸ್ತು, ಮಡಿವಂತಿಕೆ, ಇವುಗಳೆಲ್ಲವನ್ನು ದಾಟಿ ಬದುಕಲು ಹವಣಿಸುತ್ತಾರೆ. ಜಾತೀಯತೆ, ಅಸಮಾನತೆ ಹಾಗೂ ಶೋಷಣೆಯ ಬಗೆಗಳನ್ನು ಕಂಡರೆ ವ್ಯಗ್ರವಾಗುತ್ತಿದ್ದ ಆಲನಹಳ್ಳಿಯವರು ತಮಗೆ ಉಸಿರಾಟದಷ್ಟು ಸಹಜವಾಗಿದ್ದ ಅತ್ಯುತ್ಸಾಹದಿಂದಲೇ ಈ ರಚನೆಗಳನ್ನು ನೀಡಿದ್ದಾರೆ. ಸಮಕಾಲೀನ ಕಥೆಗಾರರಲ್ಲೇ ತೀರ ಭಿನ್ನವಾಗಿ ಬೆಳೆಯಬೇಕೆಂಬ ಮಹತ್ವಾಕಾಂಕ್ಷೆಯ ಬರಹಗಾರರಾದ ಆಲನಹಳ್ಳಿ ಅವರಿಗೆ ನವ್ಯ, ದಲಿತ-ಬಂಡಾಯ ಸಾಹಿತ್ಯ ಪಂಥಗಳು, ಅದರ ಪ್ರಭಾವಗಳು ಇವರ ಕಥೆಗಳಲ್ಲಿ ಕಂಡುಬರುತ್ತವೆ. ಈ ಎಲ್ಲ ದೃಷ್ಟಿಯಿಂದ ಇವರ ಕಥೆಗಳನ್ನು ಅಧ್ಯಯನ ಮಾಡಿದಾಗ ಹಲವಾರು ಮಿತಿಗಳು ಕಂಡುಬರುತ್ತವೆ. ಕೆಲವು ಕಥೆಗಳಲ್ಲಿ ಮಾತಿನ ದುಂದುಗಾರಿಕೆ ಇದ್ದು ಅನಾವಶ್ಯಕವಾದ ವರ್ಣನೆಗಳು ಬರುತ್ತವೆ. ಕಾಮದ ವಿವರಗಳು ಬಂದಾಗ ಹಲವು ಸಲ ವಿವೇಚನೆಯನ್ನು ಮೀರಿ ಒಂದು ಬಗೆಯ ಯಾಂತ್ರಿಕ ಚಟದ ರೀತಿಯ ಬರವಣಿಗೆಯನ್ನು ಸಹ ನೀಡಿದ್ದಾರೆ. ಈ ಬಗೆಯ ಇತಿಮಿತಿಗಳನ್ನು ಈ ಕಥೆಗಾರರ ಕಥೆಗಳಲ್ಲಿ ಧಾರಾಳವಾಗಿ ಕಾಣಬಹುದಾಗಿದೆ. ಆಲನಳ್ಳಿಯವರು ಕಥೆಗೆ ಯಾವುದೇ ವಸ್ತುವನ್ನು ಆಯ್ದುಕೊಂಡರೂ ತಮ್ಮ ಅದ್ಭುತವಾದ ಕಥೆಗಾರಿಕೆಯಿಂದ ಯಾವುದೇ ಒಂದು ಸಂದರ್ಭವನ್ನು ಕಟ್ಟಿಕೊಡುವಾಗ ಭಾಷೆಯ ಎಲ್ಲ ಕಸುವನ್ನು ಸಾರವನ್ನು ಹೀರಿಕೊಂಡು ವಿಶಿಷ್ಟವಾದ ರೀತಿಯಲ್ಲಿ ತಮ್ಮ ಬರಹಗಳನ್ನು ನೀಡಿರುವುದರಿಂದ ಕನ್ನಡದ ಆಧುನಿಕ ಕಥೆಗಾರರಲ್ಲಿ ಗಮನಾರ್ಹವಾದ ಸ್ಥಾನವನ್ನು ಗಳಿಸಿಕೊಂಡಿದ್ದಾರೆ.

ಅಧ್ಯಾಯ ಐದು

ತೇಜಸ್ವಿ ಅವರ ಕಥನಸಾಹಿತ್ಯದ ತಾತ್ವಿಕತೆ

ಹೊಸಗನ್ನಡ ಸಾಹಿತ್ಯದ ನವ್ಯ ಹಾಗೂ ನವ್ಯೋತ್ತರ ಕಾಲಘಟ್ಟದಲ್ಲಿ ಅತ್ಯಂತ ವಿಶಿಷ್ಟವೆನ್ನಿಸಿಕೊಳ್ಳುವ ಲೇಖಕರುಗಳಲ್ಲಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರಮುಖರಾಗಿದ್ದಾರೆ. ನವ್ಯದ ಪ್ರಭಾವದಿಂದಾಗಿ ವ್ಯಕ್ತಿಕೇಂದ್ರಿತ ನೆಲೆಯಿಂದ ಬರವಣಿಗೆಯನ್ನು ಆರಂಭಿಸಿದ ಲೇಖಕರು ಸಾಮಾಜಿಕ ಸ್ಥಿತ್ಯಂತರಗಳಲ್ಲಿ ಸಾಹಿತ್ಯದ ಅಗತ್ಯತೆ ಹಾಗೂ ಸಾರ್ಥಕತೆ ಮನಗಂಡು ಭಿನ್ನ ಬರವಣಿಗೆಯ ಜಾಡನ್ನು ಹಿಡಿದವರು. ಭಾಷೆಯನ್ನು ಹೊಸ ರೀತಿಯಲ್ಲಿ ದುಡಿಸಿಕೊಳ್ಳುವ ತಂತ್ರಗಾರಿಕೆ ಮೈಗೂಡಿದ್ದು ಮಾನವೀಯ ಮೌಲ್ಯ, ಕಾಳಜಿಗಳಿಂದಾಗಿ ಇವರ ಕಥನಸಾಹಿತ್ಯವು ಇತರೆ ಸಾಹಿತಿಗಳಿಗಿಂತ ತುಂಬಾ ಭಿನ್ನವಾದ ಧೋರಣೆಗಳನ್ನು ವ್ಯಕ್ತಪಡಿಸುತ್ತದೆ. ಆಧುನಿಕತೆಯ ಭರಾಟೆಯ ಮಧ್ಯೆಯೂ ಬದುಕಿನ ಅನನ್ಯತೆಗಾಗಿ ಹಪಹಪಿಸುವ ತೇಜಸ್ವಿಯವರು ಜನಸಾಮಾನ್ಯರಿಗೆ ತೀರ ಹತ್ತಿರರಾಗುತ್ತಾರೆ. ಇವರ ಬಹುಮುಖ ವ್ಯಕ್ತಿತ್ವ ಸಾಹಿತ್ಯದ ಚಲನಶೀಲತೆ ಆಧುನಿಕಕನ್ನಡ ಸಾಹಿತ್ಯಕ್ಕೆ ದೊರಕಿದ ಬಹುದೊಡ್ಡ ಚಾರಿತ್ರಿಕ ಕಾಣಿಕೆಯಾಗಿದೆ. ವಿಭಿನ್ನ ಸಾಂಸ್ಕೃತಿಕ ನೆಲೆಗಟ್ಟಿನಿಂದ ಬಂದ ನವ್ಯ ಹಾಗೂ ನವ್ಯೋತ್ತರ ಕಾಲಘಟ್ಟದ ಪ್ರಮುಖ ಬರಹಗಾರರಾದ ತೇಜಸ್ವಿಯವರ ಸಾಧನೆಯು ತುಂಬಾ ವಿಶಿಷ್ಟವಾದುದು.

ತೇಜಸ್ವಿಯವರು ಲೋಹಿಯಾ ಹಾಗೂ ಜೆ.ಪಿ ಅವರ ತಾತ್ವಿಕ ನೆಲೆಯಿಂದ ಸಮಾಜವಾದದ ಚಿಂತನೆಗಳತ್ತ ಸಾಗಿದವರು. ತಮ್ಮ ವಿದ್ಯಾರ್ಥಿ ಜೀವನದ ಸ್ನೇಹಿತರಾಗಿದ್ದ ಎಂ.ಡಿ.ನಂಜುಂಡಸ್ವಾಮಿ, ಕೋಣಂದೂರು ಲಿಂಗಪ್ಪ, ಬಿ.ಕೆ.ಸುಂದರೇಶ್ ಮುಂತಾದವರು ಸಹ ಸಮಾಜವಾದಿ ಒಲವು ಉಳ್ಳವರಾಗಿದ್ದರು. ತೇಜಸ್ವಿ ಅವರ ಚಿಂತನೆ, ಬರಹಗಳು, ಪಟಭದ್ರ ಹಿತಾಸಕ್ತಿಗಳ, ರಾಜಕೀಯ ಕುಯುಕ್ತಿಗಳ, ಸಾಮಾಜಿಕ ಕಂದಾಚಾರಗಳ, ಪರಂಪರಾಗತ ಮೌಢ್ಯ, ವರ್ಗ, ವರ್ಣಗಳ ವಿರುದ್ಧ ಅಘೋಷಿತ ಧಿಕ್ಕಾರವನ್ನು ಪ್ರತಿಹಂತದಲ್ಲೂ ಪ್ರತಿಪಾದಿಸಿವೆ. ದೇಶ ಬದಲಾವಣೆಯಾಗುವುದು ವ್ಯವಸ್ಥೆ ಹೊಸ ರೂಪಪಡೆದು ವ್ಯಕ್ತಿಗಳ ವ್ಯಕ್ತಿತ್ವ ಸಕಾರಾತ್ಮಕವಾಗುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿರುತ್ತದೆ ಎಂಬುದು ತೇಜಸ್ವಿಯವರ ಗಾಢವಾದ ನಂಬಿಕೆಯಾಗಿತ್ತು. ಅವರ ಕಥನಸಾಹಿತ್ಯದಲ್ಲಿ ಸಾಮಾಜಿಕತೆಯ ಬಗ್ಗೆ ಅವರಿಗಿದ್ದ ನಂಬಿಕೆಯನ್ನು ಬರೆಯುತ್ತಾರೆ. ಜೊತೆಗೆ ಗಾಂಧೀಜಿ, ಅಂಬೇಡ್ಕರ್, ಮಾರ್ಕ್ಸ್, ಲೋಹಿಯಾ, ಜಯಪ್ರಕಾಶನಾರಾಯಣ ಮುಂತಾದ ಸಮಾಜವಾದಿ ನಾಯಕರ ಸಮಾಜ ಸುಧಾರಣೆ, ಅಸ್ಪೃಶ್ಯತಾ ನಿವಾರಣೆ ಸಾಮಾಜಿಕ ಅಸಮಾನತೆಯ ನಿವಾರಣೆ ಶ್ರಮಿಕ ಸಂಸ್ಕೃತಿಯ ಮೌಲ್ಯ ಪ್ರತಿಪಾದನೆಯ ಅಂಶಗಳಿಂದ ಪ್ರೇರಣೆ ಪಡೆದ ತೇಜಸ್ವಿಯವರು ತಮ್ಮ ಬರಹದ ತಾತ್ವಿಕತೆಯಲ್ಲಿ ನೈಜವಾಗಿ ಬಿಂಬಿಸಿದ್ದಾರೆ. ಶೋಷಿತ ಜನತೆಯ ಪರವಾದ ನಿಲುವು ಜಾತಿಪದ್ಧತಿ, ಅಸ್ಪೃಶ್ಯತೆ,

ವರ್ಗ, ಲಿಂಗಭೇದನೀತಿಯ ವಿರುದ್ಧ ಹೋರಾಟವನ್ನು ರೂಪಿಸುವುದು ಪ್ರತಿಯೊಬ್ಬರ ಸಾಮಾಜಿಕ ಕರ್ತವ್ಯವೆಂದು ಅವರು ಭಾವಿಸಿದ್ದರು. ಸಮಾಜದೊಳಗೆ ವರ್ಗ ಅಸಮಾನತೆಗಾಗಿ ಬಡವ ಶ್ರೀಮಂತರಿಂದ ಹಲವು ರೀತಿಯ ಶೋಷಣೆಗಳಾಗುತ್ತಿದ್ದು ತನ್ನ ಚೈತನ್ಯವನ್ನೇ ಕಳೆದುಕೊಳ್ಳುತ್ತಿದ್ದಾರೆ. ಆರ್ಥಿಕ ಸಬಲತೆ ಅವರನ್ನು ಸಾಮಾಜಿಕವಾಗಿ ಸಬಲೀಕರಣಗೊಳಿಸುತ್ತದೆ. ಸಮಾನತೆಯ ಅರ್ಥವ್ಯವಸ್ಥೆಗಾಗಿ ಆಶಿಸುವ ಅವರು ಉದ್ಯೋಗ, ವ್ಯಾಪಾರ ಜೀವನಮಟ್ಟವನ್ನು ಬದಲಾಯಿಸುವುದಲ್ಲದೆ ಲೋಕಜ್ಞಾನವನ್ನು ನೀಡುತ್ತದೆ. ತೇಜಸ್ವಿಯವರು ಈ ಆಧುನಿಕ ಸಮಾಜಕ್ಕಾಗಿ ತಮ್ಮ ಕಥನಸಾಹಿತ್ಯದಲ್ಲಿ ಪ್ರೇರೇಪಿಸಿರುವುದನ್ನು ಕಾಣಬಹುದು. ತೇಜಸ್ವಿಯವರು ತಮ್ಮ ಸಾಹಿತ್ಯದ ಮೂಲಕ ಜಾತ್ಯಾತೀತವಾದ, ವರ್ಗಾತೀತವಾದ, ಲಿಂಗಾತೀತವಾದ ಹಾಗೂ ಶ್ರೀಸಾಮಾನ್ಯರ ಸಮಾಜವನ್ನು ಸೃಷ್ಟಿಸಿರುವುದನ್ನು ಕಾಣುತ್ತೇವೆ. ಸೃಷ್ಟಿಯ ವಿಸ್ಮಯವನ್ನು ನಿಗೂಢವನ್ನು ಅವರು ಕುತೂಹಲದಿಂದ ನೋಡಿದ್ದಾರೆ. ಸಮಾಜ ಮತ್ತು ಪ್ರಕೃತಿ ಇವೆರಡರ ತೀವ್ರವಾದ ಮುಖಾಮುಖಿ ತೇಜಸ್ವಿಯವರ ಕೃತಿಗಳಲ್ಲಿ ಕಾಣಿಸಿಕೊಂಡಿವೆ. ಆಧುನಿಕತೆ ಜಾಗತೀಕರಣ ಹಾಗೂ ರಾಜಕಾರಣದ ಸಿದ್ಧಾಂತಗಳ ಆಗುಹೋಗುಗಳ ಬಗ್ಗೆ ತಮ್ಮದೇ ಆದ ವ್ಯಕ್ತಿನಿಷ್ಠ ನೆಲೆಯಲ್ಲಿ ಆಲೋಚಿಸಿದವರು. ತಾವೇ ಸ್ವತಃ ಸಮಾಜವಾದಿ ಚಳವಳಿಗಳಲ್ಲಿ ಜಾತಿ ವಿನಾಶ ಸಮ್ಮೇಳನಗಳಲ್ಲಿ ತೇಜಸ್ವಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ವಿಷಾದ, ತಮಾಷೆ, ಹಾಸ್ಯ, ವಿನೋದ, ನಿರೂಪಣಾ ಕೌಶಲ ಇವು ಇವರ ಸಾಹಿತ್ಯಕ ಚಿಂತನೆಗಳಾಗಿವೆ. ಈ ಕಾರಣಕ್ಕೆ ಇವರ ಬಹುಪಾಲು ಬರಹಗಳು ಅಂದರೆ ಕಥೆ–ಕಾದಂಬರಿಗಳು ಇಂಗ್ಲಿಷ್, ಜಪಾನೀಸ್, ಹಿಂದಿ, ಮಲೆಯಾಳಂ, ತಮಿಳು, ಮರಾಠಿ ಮುಂತಾದ ಭಾಷೆಗಳಿಗೆ ಅನುವಾದಗೊಂಡಿವೆ. ತೇಜಸ್ವಿಯವರು ಕೇವಲ ಕಥೆ–ಕಾದಂಬರಿ ಶೈಲಿಗೆ ಅಂಟಿಕೊಳ್ಳದೆ ವೈಜ್ಞಾನಿಕ ಮತ್ತು ಪ್ರಕೃತಿ ಬರಹಗಳ ಮೂಲಕ ಓದುಗರನ್ನು ಮುಟ್ಟಿದ ಅತಿ ಎತ್ತರದ ಲೇಖಕರಾಗಿದ್ದಾರೆ. ಆಕಾಶ, ತಾರಾಮಂಡಲಗಳು, ನದಿ, ಸಮುದ್ರಗಳು, ನಾಗರಿಕತೆಗಳ ಕುರಿತಾದ ಬರಹಗಳು, ಹಕ್ಕಿಲೋಕದ ವಿಸ್ಮಯಗಳು ಪ್ರವಾಸದ ಸಾಹಸಗಳು ಹೀಗೆ ಕಠಿಣವಾದ ವಿಷಯಗಳನ್ನು ಕನ್ನಡ ಭಾಷೆಯಲ್ಲಿ ಜಟಿಲಗೊಳಿಸದೆ ಸರಳವಾಗಿ ನಿರೂಪಿಸಿರುವುದು ಅವರ ಶೈಲಿಯ ವೈಶಿಷ್ಟ್ಯವಾಗಿದೆ. ತೇಜಸ್ವಿಯವರ ಚಿಂತನೆ ಮತ್ತು ಬರವಣಿಗೆಗಳ ಒಂದು ನಿರಂತರ ಮುಖ್ಯ ಕಾಳಜಿ ಎಂದರೆ ಸಾಕ್ಷರತೆ, ವಿದ್ಯಾಭ್ಯಾಸ, ಶಿಕ್ಷಣ ಮತ್ತು ಸಂವಹನ, ಅವರು ತಮ್ಮೆಲ್ಲ ಕ್ರಿಯಾಶೀಲ ಪ್ರಯೋಗಗಳಿಗೆ ಕನ್ನಡವನ್ನು ಕೇಂದ್ರವಾಗಿಟ್ಟುಕೊಂಡಿರುವುದು ಕನ್ನಡ ಭಾಷೆ, ಅನುಭವ ಮತ್ತು ತಿಳುವಳಿಕೆಗಳ ವಿಕಾಸದ ದೃಷ್ಟಿಯಿಂದ ತುಂಬಾ ಮೌಲಿಕವಾದ ಕನ್ನಡಿಗರೆಲ್ಲರೂ ಕೃತಜ್ಞರಾಗಬೇಕಾದ ಸಂಗತಿ. "ಕನ್ನಡದಲ್ಲಿ ಏನೂ ಇಲ್ಲ, ಇರುವುದೆಲ್ಲಾ ಬೂಸಾ ಎನ್ನುವವರು ಕನ್ನಡದಲ್ಲಿ ಸರ್ವ ಸಮಸ್ತವೂ ಇದೆ ಎನ್ನುವವರು ಕೊಂಚ ವಿವೇಕ ತೋರಿ ಮೌನ ವಹಿಸಿದರೆ ನಮ್ಮ ಮುಂದಿರುವ ಅಗಾಧ

ರಚನಾತ್ಮಕ ಜವಾಬ್ದಾರಿಗಳನ್ನು ನಿರ್ವಹಿಸಲು ತುಂಬಾ ಅನುಕೂಲವಾಗುತ್ತದೆ. ಕನ್ನಡ ಭಾಷೆಯ ಏಳಿಗೆಗೂ ಅಪಾರ ಸಹಾಯವಾಗುತ್ತದೆ."[೩೭] ಎಂದು ತೇಜಸ್ವಿಯವರು 'ಮಿಸ್ಸಿಂಗ್ ಲಿಂಕ್'ನ ಲೇಖಕರ ಮಾತುಗಳಲ್ಲಿ ಹೇಳಿರುವುದು ಅವರ ಬರವಣಿಗೆಯ ಹಿಂದಿನ ಪ್ರೇರಣೆಗಳು, ಬರವಣಿಗೆಯ ಸ್ವರೂಪ, ತೇಜಸ್ವಿಯವರ ಆದ್ಯತೆಗಳ ಬಗ್ಗೆ ಅವರೇ ನೀಡಿರುವ ಸೂಚನೆಗಳಂತಿದ್ದು ಅವರ ಸಾಹಿತ್ಯಾಭ್ಯಾಸಿಗಳಿಗೆ, ಸಂಶೋಧಕರಿಗೆ ಕೀಲಿಕೈಗಳಂತಿವೆ.

ತೇಜಸ್ವಿಯವರ ಬಹುತೇಕ ಕಥನಸಾಹಿತ್ಯ ಮೂರನೇ ತಲೆಮಾರಿನ ಸಾಂಸ್ಕೃತಿಕ ಅನಿವಾರ್ಯತೆಯಲ್ಲಿ ಮೂಡಿ ಬಂದಿದೆಯಾದರೂ ಈ ಬರಹದ ಒಡಲಿನಲ್ಲಿರುವ ಎಲ್ಲಾ ಘಟಕಗಳ ನಿಗೂಢತೆಯ ಅರಿವು ಪ್ರತಿಯೊಂದು ಕೃತಿಯನ್ನು ಸ್ವತಂತ್ರ ಆಶಯದಿಂದ ಕಡೆಯಲು ಪ್ರಯತ್ನಿಸಿವೆ. ಬದುಕಿನೊಳಗಿನ ಪ್ರಾಕೃತಿಕ ಸ್ಥಿತಿಯ ಸಂಘರ್ಷವನ್ನು ಸ್ಥಳೀಯ ಪ್ರತಿಕ್ರಿಯೆಯೊಳಗೆ ತಿಳಿಸುವ ಪ್ರಯತ್ನ ಈ ಪುಟ್ಟ ಬರಹಗಾರರಿಗೆ ಸವಾಲಾಗಿ ಎದುರಾದದ್ದು ತೇಜಸ್ವಿಯವರಲ್ಲಿಯೇ. ಒಮ್ಮೆ ಸಾಹಿತ್ಯಚರಿತ್ರೆಯನ್ನು ಅವಲೋಕಿಸಿದರೆ ತಿಳಿಯುತ್ತದೆ. ತೇಜಸ್ವಿ ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ಯಶವಂತ ಚಿತ್ತಾಲ, ಶಾಂತಿನಾಥ ದೇಶಾಯಿ, ಎಸ್.ಎಲ್.ಭೈರಪ್ಪ ಮುಂತಾದ ಬರಹಗಾರರು ಹೊಸಗನ್ನಡ ಕಥನಸಾಹಿತ್ಯದ ಮೂರನೇ ತಲೆಮಾರಿನ ಮುಖ್ಯ ಲೇಖಕರೆಂದು ಗುರುತಿಸಲಾಗಿದೆ. ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಶ್ರೀ ಸಾಮಾನ್ಯರ ಸಾಂಸ್ಕೃತಿಕ ಗ್ರಹಿಕೆಗಳನ್ನು ಅದರ ಚಲನಶೀಲ ಪ್ರಕ್ರಿಯೆಯೊಡನೆ ಮೊದಲ ತಲೆಮಾರು ಅರ್ಥಪೂರ್ಣವಾಗಿ ಮುಖಾಮುಖಿಯಾಗಿದೆ. ಇದರ ಶ್ರೇಷ್ಠ ನಿದರ್ಶನಗಳು ಕುವೆಂಪು, ಕಾರಂತ, ಮಾಸ್ತಿ ಇವರಲ್ಲಿ ವಿಫುಲವಾಗಿ ಕಂಡುಬರುತ್ತದೆ. ಇದರ ಸಂಕೀರ್ಣ ಆಯಾಮಗಳನ್ನು ನಿರಾಕರಣೆಯ ಸ್ತರದಲ್ಲಿ ಗ್ರಹಿಸಿದ ಎರಡನೇ ತಲೆಮಾರು ತಾನು ನೊಂದ ಜೀವಿಗಳಿಗೆ ಅರ್ಥಪೂರ್ಣವಾದ ಗೌರವ ಕೊಡುವುದೇ ತನ್ನ ಪ್ರಥಮ ಆದ್ಯತೆ ಎಂದು ಅಭಿವ್ಯಕ್ತಿ ಮಾಧ್ಯಮವನ್ನು ಸರಳೀಕರಸಿಕೊಂಡು ಆ ಮಿತಿಯಲ್ಲಿ ಸಾಧ್ಯವಾದ ಸಾಧನೆ ಮಾಡಿದೆ. ಅ.ನ.ಕೃ, ನಿರಂಜನ, ಬಸವರಾಜಕಟ್ಟೀಮನಿ, ಚದುರಂಗ, ತ.ರಾ.ಸು. ಮುಂತಾದವರ ಕಥನಸಾಹಿತ್ಯದಲ್ಲಿ ಪುರಾವೆಗಳಿವೆ. ಆದರೆ ಮೊದಲ ತಲೆಮಾರಿನ ಸಾಂಸ್ಕೃತಿಕ ಆಶಯಗಳನ್ನು ಗಂಭೀರವಾಗಿ ಸ್ವೀಕರಿಸಿದ ಮೂರನೇ ತಲೆಮಾರಿನ ಲೇಖಕರು ಅವರೆಲ್ಲ ಸಾಧ್ಯತೆಗಳಲ್ಲಿ ಶೋಧಿಸುವ ಪ್ರಯತ್ನ ಮಾಡಿದ್ದಾರೆ.

ತೇಜಸ್ವಿಯವರ ಬರಹ ತೆರೆದಿಡುವ ಸಮಾಜವನ್ನು ನಾವಿಲ್ಲಿ ನೋಡುವುದಷ್ಟೇ ಅಲ್ಲ, ಅದರ ಜೊತೆ ಜೊತೆಗೆ ಸಮಕಾಲೀನ ಸಮಾಜದ ವಿಶ್ವರೂಪವೂ ನಮ್ಮ ಅನುಭವಕ್ಕೆ ಬರುತ್ತವೆ.

---

೩೭. ಕೆ.ಪಿ.ಪೂರ್ಣಚಂದ್ರ ತೇಜಸ್ವಿ 'ಮಿಸ್ಸಿಂಗ್ ಲಿಂಕ್', ೨೦೧೬, ಪು. ೨.

ಸ್ವಾತಂತ್ರ್ಯೋತ್ತರ ಭಾತರದ ಜೀವಂತ ಚಿತ್ರಣ ನಮಗೆ ಇವರ ಬರಹದಲ್ಲಿ ಕಂಡುಬರುತ್ತದೆ. ಅತ್ಯಂತ ನಾಗರೀಕ ಸಂವೇದನೆಯ ವ್ಯಕ್ತಿಗಳಿಂದ ಹಿಡಿದು ಅಷ್ಟೇ. ಸೂಕ್ಷ್ಮ ನಡವಳಿಕೆಯ ಪಶು ಸಮಾನ ಮಾನವ ಪ್ರಾಣಿಗಳವರೆಗೆ ಎಲ್ಲ ಬಗೆಯ ಮನುಷ್ಯರನ್ನು ನಾವಿಲ್ಲಿ ಕಾಣಬಹುದು. ತೇಜಸ್ವಿಯವರು ನವ್ಯಸಾಹಿತ್ಯದ ಉತ್ಕರ್ಷದಲ್ಲಿ ತಮ್ಮ ಬರವಣಿಗೆಯನ್ನು ಪ್ರಾರಂಭಿಸಿ, ಅವರಿಂದ ವಿಭಿನ್ನವಾಗಿ ಬರೆಯತೊಡಗಿದ್ದರಿಂದ ಅವರ ಬರಹದಲ್ಲಿ ಆಂತರಂಗಿಕ ಸಂಶೋಧನೆಗಿಂತ ಹೆಚ್ಚಾಗಿ ಬಾಹ್ಯಗೋಚರ ಚಟುವಟಿಕೆಗಳಿಗೆ ಪ್ರಾಧಾನ್ಯತೆ ಕೊಟ್ಟವರು ತೇಜಸ್ವಿ ಇದರ ಪರಿಣಾಮವಾಗಿ ಮನುಷ್ಯ-ಮನುಷ್ಯರ ಸಂಬಂಧಗಳ ಮೇಲುನೋಟದ ಪದರಗಳಲ್ಲಿ ವೈಪರೀತ್ಯಗಳು ಮುಖ್ಯ ಕಾಳಜಿಯಾಗಿ ಈ ಬರಹದಲ್ಲಿ ಕಾಣಿಸಿಕೊಳ್ಳುತ್ತದೆ. ಅಂದರೆ ಮಾನವ ತನ್ನ ಸಾಮಾಜಿಕ ಪರಿಸರದಲ್ಲಿ ನಡೆದುಕೊಳ್ಳುವ ರೀತಿ ಇಡೀ ಸಾಮಾಜಿಕ ಚೌಕಟ್ಟಿನ ಚಿಂತನೆಗಳಾಗುತ್ತವೆ. ಅಲ್ಲದೆ ಸಾಮಾನ್ಯ ಮನುಷ್ಯನ ಜೀವನಕ್ರಮದ ಹಿಂದಿರುವ ಶಕ್ತಿಗಳ ವಸ್ತುನಿಷ್ಠ ಗ್ರಹಿಕೆಯು ತೇಜಸ್ವಿಯವರ ಕಥನದ ಹಿಂದಿರುವ ಪ್ರಮುಖ ಆಶಯ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕನ್ನಡ ಕಥನಸಾಹಿತ್ಯದ ದಿಕ್ಕುಗಳನ್ನು ಅದರ ಅನುಭವಕ್ಷೇತ್ರ ಹಾಗೂ ಅಭಿವ್ಯಕ್ತಿಯ ಸಾಧನೆಗಳನ್ನು ವಿಸ್ತರಿಸುವ ಪ್ರಯತ್ನಗಳಾಗಿಯೂ ತೇಜಸ್ವಿಯವರ ಕಥನಸಾಹಿತ್ಯದಲ್ಲಿ ಕಾಣಿಸಿಕೊಳ್ಳುತ್ತವೆ. ಜೀವನಮುಖಿಯಾದ ಹೊಸಸಾಹಿತ್ಯವನ್ನು ರೂಪಿಸುವುದರ ಕಡೆಗೆ ತೇಜಸ್ವಿಯವರು ಸಾಗಿರುವುದನ್ನು ಅವರ ಕಥನಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಮನುಷ್ಯನನ್ನು ಒಂದು ತಾತ್ವಿಕ ಅನನ್ಯತೆಯ ಪ್ರತೀಕವಾಗಿಯೂ ನೋಡುವ ಮನೋಧರ್ಮ ತೇಜಸ್ವಿಯವರ ಕಥನಸಾಹಿತ್ಯದ ಮೂಲಭಿತ್ತಿಯಾಗಿದೆ. ಪ್ರೇಮ, ವಿವಾಹ, ಸ್ವಾತಂತ್ರ್ಯ, ಕಾಮ, ಸಾಹಿತ್ಯ, ಸೃಷ್ಟಿ, ಸಾವು, ಧರ್ಮ, ದರ್ಶನ, ಸಮಾಜ, ವ್ಯಕ್ತಿ, ಪರಿಸರ, ತತ್ವ, ಪ್ರಜಾಪ್ರಭುತ್ವ, ಜೀವನ ಪುರುಷಾರ್ಥ ಮುಂತಾದವುಗಳ ಬಗ್ಗೆ ತೇಜಸ್ವಿಯವರ ಪರಿಕಲ್ಪನೆಗಳು ಅವರದೇ ಆದ ವ್ಯಕ್ತಿ ವಿಶಿಷ್ಟವಾದ ಸಿದ್ಧಾಂತಗಳಾಗಿವೆ. ಬದುಕಿನ ಬಗೆಗೆ ತಾತ್ವಿಕ ನೋಟ ಹಾಗೂ ಸಾಮಾಜಿಕ ಅರ್ಥಪೂರ್ಣತೆಯನ್ನು ಆಕೃತಿಯೊಳಗೆ ಅಂತಃಸತ್ವವಾಗಿ ಮೂಡಿಸುವ ಬೆಸೆಯುವ ಪ್ರವೃತ್ತಿ, ಇವರ ಕಥನಸಾಹಿತ್ಯದ ಮುಖ್ಯಕೇಂದ್ರ ಕಾಳಜಿ, ಅನುಭವ ಮತ್ತು ಅಭಿವ್ಯಕ್ತಿ ಎರಡಕ್ಕೂ ಸಂಬಂಧಿಸಿದಂತೆ ತೇಜಸ್ವಿ ಹೊಸ ವ್ಯಾಖ್ಯ, ಹೊಸ ಸಾಧ್ಯತೆಗಳನ್ನು ತಮ್ಮ ಸೃಜನಶೀಲ ವ್ಯಕ್ತಿತ್ವದ ಸಂದರ್ಭಲ್ಲಿಯೇ ಕಂಡುಕೊಳ್ಳುವ ಅವರ ಪ್ರಾಮಾಣಿಕ ನಿಷ್ಠೆಯೂ ಇದಕ್ಕೆ ಮತ್ತೊಂದು ವಿಶೇಷ ಕಾರಣ. ಈ ಎರಡೂ ಬಗೆಯ ಸೃಜನಶೀಲ ಪ್ರಯೋಗಗಳಿಗೆ ತೇಜಸ್ವಿಯವರು ಸಾಧಿಸಿರುವ ಕತೆಯ ಯಶಸ್ಸು ಅವರ ಕಥನಸಾಹಿತ್ಯದ ಅಸ್ತಿತ್ವದಲ್ಲಿದೆ. ತೇಜಸ್ವಿಯವರ ಕಥನಸಾಹಿತ್ಯದ ತಾತ್ತ್ವಿಕ ವಿಚಾರಗಳನ್ನು ಹಾಗೂ ಇವರ ಬರವಣಿಗೆಯನ್ನು ಸಾಂಸ್ಕೃತಿಕ ಅವಶ್ಯಕತೆಯಾಗಿ

ದುಡಿಸಿಕೊಂಡದ್ದು 'ಹುಲಿಯೂರಿನ ಸರಹದ್ದು' ಸಂಕಲನದಲ್ಲಿ. ಹಾಗೆಯೇ ನಿರ್ಲಕ್ಷ್ಯಕ್ಕೆ ಗುರಿಯಾಗಿದ್ದ ಘಟಕಗಳನ್ನು ಹಲವು ಬಾರಿ ಮುಗ್ಧ ಸನ್ನಿವೇಶದಲ್ಲಿ ಕೆಲವು ಬಾರಿ ಅರೆ ತಿಳುವಳಿಕೆಯ ಸಂದರ್ಭದಲ್ಲಿ ಎದುರುಗೊಳ್ಳುವ ಸಾಹಸ ಮಾಡಿದರು. ಇದು 'ಅಬಚೂರಿನ ಪೋಸ್ಟಾಫೀಸು' ಸಂಕಲನದಲ್ಲಿ ಮುಂದುವರೆದಿದೆಯಾದರೂ ಅದು ಅಲ್ಲಿ ಪಡೆದುಕೊಳ್ಳುವ ಆಯಾಮವು ಸಂಪೂರ್ಣವಾಗಿ ಭಿನ್ನವಾಗಿದೆ. ವ್ಯಕ್ತಿಗತ ಶೋಧನೆಯು ಸಾಮಾಜಿಕ ಕ್ರಿಯೆ-ಪ್ರಕ್ರಿಯೆಯೊಳಗೆ ಕಾರಣವಾಗುವುದು ಅಲ್ಲಿನ ಪ್ರಮುಖ ಸಂಗತಿಯಾಗಿದೆ. ಹಾಗೆಯೇ ಮಾನವ ಬದುಕು ಮತ್ತು ಪ್ರಾಕೃತಿಕ ಬದುಕಿನ ನಿಗೂಢಗಳನ್ನು ಅವುಗಳ ನಡುವೆ ನಡೆಯುವ ಸಂಘರ್ಷಗಳನ್ನು ಸಂಸ್ಕೃತಿಗೆ ಪ್ರಕ್ರಿಯೆಯ ರೂಪದಲ್ಲಿ ಕ್ರಿಯಾತ್ಮಕವಾಗಿ ಧಾರಣೆ ಮಾಡಿಸಿದ್ದು ಅವರ ಸಾಧನೆಯೇ. ಕನಿಷ್ಟವೆಂದು ತಿರಸ್ಕಾರಕ್ಕೆ ಒಳಗಾಗಿದ್ದ ಸಾಮಾನ್ಯನನ್ನು ಅವನೊಳಗಿನ ಸುಪ್ತಪ್ರತಿಭೆಯನ್ನು ಹೊರಗೆಳೆಯುವುದರ ಮೂಲಕ ಸಾಮಾಜಿಕವಾಗಿ ಹೊಸ ಸಾಧ್ಯತೆಗಳನ್ನು ಸೃಷ್ಟಿಸಿದರು. ಈ ರೀತಿಯ ಸೂಕ್ಷ್ಮಸಂವೇದನೆಯ ಬರಹದಲ್ಲಿ ಕಥನಸಾಹಿತ್ಯದ ವಿಚಾರಗಳನ್ನು ಶೋಧಿಸಲಾಗಿದೆ. ಇವುಗಳನ್ನು ವಿಸ್ತೃತವಾಗಿ ಪರಿಶೀಲಿಸುವ ಉದ್ದೇಶವನ್ನು ಮುಂದಿನ ಉಪ ಅಧ್ಯಾಯಗಳು ಒಳಗೊಂಡಿದೆ.

೫.೧. ವ್ಯಕ್ತಿ ವಿಶಿಷ್ಟತೆ ಮತ್ತು ನಿರೂಪಣಾ ವಿಧಾನ

ತೇಜಸ್ವಿಯವರು ವ್ಯಕ್ತಿವಿಶಿಷ್ಟತೆಯನ್ನು ಕಥನಸಾಹಿತ್ಯದಲ್ಲಿ ಭಿನ್ನ ನಿರೂಪಣಾ ವಿಧಾನದಲ್ಲಿ ದಾಖಲಿಸಿರುವುದನ್ನು ಕಾಣಬಹುದು. 'ಸ್ವರೂಪ' ತೇಜಸ್ವಿಯವರು ನವ್ಯಸಾಹಿತ್ಯದ ಜಾಡಿನಲ್ಲಿ ಬರೆದಂತಹ ಪ್ರಸಿದ್ಧ ಕಾದಂಬರಿ ಲೇಖಕರ ಸೂಕ್ಷ್ಮದೃಷ್ಟಿಕೋನ ಈ ಕಾದಂಬರಿಯಲ್ಲಿ ಅನಾವರಣವಾಗಿರುವ ಬಗೆಯನ್ನು ಮತ್ತು ವಿಶಿಷ್ಟತೆಯನ್ನು ನೋಡಬಹುದು. 'ಶ್ರೀನಿವಾಸ' ನಗರದಿಂದ ಬಂದವನು. ಈತನನ್ನು ಮಲೆನಾಡಿನ ಮೌನ ಏಕಾಂಗಿಯನ್ನಾಗಿಸಿದೆ. ಗವಿಗುಡ್ಡದ ವಾತಾವರಣ ಜನರೊಂದಿಗೆ ಬೆರೆಯಲಾಗದ ಮರಸುಬೇಟ ಕುಳಿತಲ್ಲಿಯೇ ತನ್ನ ಜೀವನ ವೃತ್ತಾಂತವನ್ನು ತೆರೆದಿಡುತ್ತಾನೆ. ಇಲ್ಲಿ ಮೌನವೇ ಸ್ಥಾಯಿಯಾಗಿದ್ದು ಕೆಲವು ಕ್ಷಣಗಳಿಂದಲಾದರೂ ಬಿಡುಗಡೆ ಬಯಸುತ್ತಾ ಮಾತಿಗಿಳಿಯುತ್ತಾನೆ. ನನಗೆ ಈ ತರದ ಏಕಾಂತ, ಮೌನವನ್ನು ಕಂಡರೆ ಆಗೋದಿಲ್ಲ. ಮಾತನಾಡಬೇಕೆಂದು ಹಲವು ದಿನಗಳಿಂದ ಬೆಂಬೆತ್ತಿರುವ ಮೌನದಿಂದ ಕೆಲವು ಕ್ಷಣಗಳಾದರೂ ಬಿಡುಗಡೆ ಆಗುತ್ತೇನೆ ಸಹಾಯಮಾಡು ಎಂದು ಕೇಳಿಕೊಳ್ಳುವಲ್ಲಿ ಆತನ ತಲ್ಲಣ ಅನುಭವ ವೇದ್ಯವಾಗುತ್ತದೆ. "ಮೌನದಿಂದ ಬಿಡುಗಡೆ ಪಡೆಯಲೆಂದು ಮಾತಿಗೆ ತೊಡಗುವ ಶ್ರೀನಿವಾಸ-ಹೇಮಂತ ಉದ್ದಕ್ಕೂ ಮೌನವಾಗಿರುವ ಹಿನ್ನೆಲೆಯನ್ನು ನೋಡಿದಾಗ ಮೌನದೊಡನೆಯೇ ಮಾತನಾಡುತ್ತಿರುವ ಮಾತನಾಡಬೇಕಾಗಿರುವ ಅನಿವಾರ್ಯದಿಂದ ಅಸಂಬದ್ಧ

ಸ್ಥಿತಿಯಲ್ಲಿದ್ದಾರೆ"[೩೮] ಎಂಬ ಜಿ.ಹೆಚ್.ನಾಯಕ್‌ರವರ ಅಭಿಪ್ರಾಯ ಗುರುತರವಾದದ್ದು. ಶ್ರೀನಿವಾಸ ತನ್ನ ಬದುಕನ್ನು ತಾನೇ ವಿಶ್ಲೇಷಿಸುತ್ತಾ ಸಾಗುತ್ತಾನೆ. ತನ್ನನ್ನು ಆವರಿಸಿರುವ ದಟ್ಟಮೌನವನ್ನು ಮೆಟ್ಟಿನಿಲ್ಲಲು ಗೆಳೆಯನಾದ ಹೇಮಂತನಿಗೆ ತನ್ನ ಬದುಕಿನ ಕಥೆಯ ಸುರುಳಿಯನ್ನು ಬಿಚ್ಚುತ್ತಾನೆ. ಶ್ರೀನಿವಾಸ ತನ್ನ ಚಿಕ್ಕಪ್ಪನ ಆಸ್ತಿಗೆ ವಾರಸುದಾರನಾಗಿ ಮಲೆನಾಡಿನ ಅಂಗಡಿ ಎಂಬ ಗ್ರಾಮಕ್ಕೆ ಬಂದು ಸ್ವಂತ ಕೃಷಿ ಮಾಡಿಕೊಂಡು ವಾಸಿಸುತ್ತಿರುತ್ತಾನೆ. ಎಂ.ಡಿ.ಪದವೀಧರನಾಗಿ ನಗರದಲ್ಲಿ ವಾಸಿಸುತ್ತಿರುವ ಹೇಮಂತ ತನ್ನ ಸ್ನೇಹಿತ ಶ್ರೀನಿವಾಸನನ್ನು ನೊಡಲು ಅಂಗಡಿಗ್ರಾಮಕ್ಕೆ ಬರುತ್ತಾನೆ. ಶ್ರೀನಿವಾಸನೂ ಪಿಎಚ್.ಡಿ. ಪದವಿ ಪಡೆದ ವಿದ್ಯಾವಂತನಾಗಿರುತ್ತಾನೆ. ತನ್ನ ಅನುಭವ ಛಿದ್ರಗಳನ್ನೆಲ್ಲ ಒಟ್ಟುಹಾಕಿ ಒಂದು ವಿಕಾರ ಸ್ವರೂಪವನ್ನು ಮಾಡುತ್ತೇನೆ ಎನ್ನುವ ಶ್ರೀನಿವಾಸ ವ್ಯಕ್ತಿ ವಿಶಿಷ್ಟ ಸಿದ್ಧಾಂತದ ಮೂಲಕ ಬದುಕನ್ನು ನೋಡುವ ಪ್ರಯತ್ನವನ್ನು ಮಾಡುತ್ತಿದ್ದಾನೆ ಅನಿಸುತ್ತದೆ. "ನನ್ನ ಯೋಗ್ಯತೆ ಏನೆಂದು ನಾನು ಕಂಡುಕೊಳ್ಳಬೇಕಾದ ಘಟನೆಯನ್ನು ಹಿಡಿದೆತ್ತಿ ನನ್ನ ಸ್ವರೂಪವನ್ನು ನಾನು ನಿರ್ಮಾಣ ಮಾಡಬೇಕಾಗಿದೆ. ನನ್ನ ಯೋಗ್ಯತೆಯ ಬಗ್ಗೆ ಆಲೋಚಿಸಬೇಕಾದರೆ ಇಷ್ಟೊಂದು ತೊಂದರೆ ಕೊಡುತ್ತದೆಂದರೆ ಈಗ ಓಡಿ ಗಲ್ಲಿಗಲ್ಲಿಗಳಲ್ಲೆಲ್ಲಾ ಹುಡುಕಿ ಆಕೆ ಯಾರೆಂದು ತಿಳಿಯೋಣವೇ ಎನಿಸುತ್ತದೆ."[೩೯] ಎಂದು ತನ್ನ ಬದುಕಿನ ಸುರಳಿ ಬಿಚ್ಚುವ ಶ್ರೀನಿವಾಸನ ನೆನಪಿನ ಯಾನ ತೇಜಸ್ವಿಯವರ ಕಿರುಕಾದಂಬರಿ ಸ್ವರೂಪದ್ದಾಗಿದೆ. ತನ್ನ ಪರಿಸ್ಥಿತಿಗೆ ಯಾರನ್ನೂ ಹೊಣೆ ಮಾಡದೆ, ಸಮಾಜವನ್ನು ದೂಷಿಸದೆ ತನ್ನೆಲ್ಲ ಬದುಕಿನ ಹೊಣೆ ತನ್ನದೆನ್ನುವ ಶ್ರೀನಿವಾಸನ ಮನೋಧರ್ಮ ಕಾದಂಬರಿಯ ವೈಶಿಷ್ಟ್ಯ ಕಾಲುಶತಮಾನದ ಹಿಂದಿನ ಹೊಸ ಸಂವೇದನೆ ಕೃತಿಗಳ ನಾಯಕರಲ್ಲಿ ಹೆಚ್ಚಿನವರು ತಮ್ಮ ಅವನತಿಗೆ ಸಮಾಜವನ್ನೋ, ಮತ್ತೊಬ್ಬರನ್ನೋ ಬೆರಳು ಮಾಡುವುದೇ ಹೆಚ್ಚು. ಆ ದೃಷ್ಟಿಯಿಂದ ಇದು ಭಿನ್ನ ನಿರೂಪಣಾಶೈಲಿಯಾಗಿದೆ. ಮಾನವನ ಅಸಂಬದ್ಧ ದುರಂತ ಸ್ಥಿತಿಯನ್ನು ಸೃಜನಾತ್ಮಕ ಸಂದರ್ಭದಲ್ಲಿ ಕಾಣಿಸುವ "ಸ್ವರೂಪದ ಅನುಭವ ದ್ರವ್ಯ ಮತ್ತು ಅಭಿವ್ಯಕ್ತಿಯ ವಿಧಾನ ಕನ್ನಡದಲ್ಲಿ ಮೊಟ್ಟಮೊದಲಿಗೆ ಹೊಚ್ಚಹೊಸ ರೀತಿಯದಾಗಿದೆ"[೪೦]

'ನಿಗೂಢ ಮನುಷ್ಯರು' ಕಾದಂಬರಿಯಲ್ಲಿ ಅನುಭವ ಅರಸಿ ಬರುವ ಜಗನ್ನಾಥ ಆತನ ಜೊತೆಗಾರ ರಂಗಪ್ಪ, ಊರಗಡಿಯ ಗೋಪಾಲಯ್ಯ ಶಾರಿ ಈ ಪಾತ್ರಗಳ ಮೇಲೆ ಏಕಾಂಗಿತನ ಪ್ರಭಾವ ಬೀರಿದೆ. ಜಗನ್ನಾಥ ಹಾಗೂ ರಂಗಪ್ಪ ಕೆಟ್ಟುನಿಂತ ಕಾರಿನಿಂದಾಗಿ ತಾವು ತಲುಪಬೇಕಿದ್ದ

---

೩೮. ಜಿ.ಹೆಚ್.ನಾಯಕ, 'ಮೌಲ್ಯಮಾರ್ಗ-೧', ಪುಟ. ೧೬೯, ೨೦೧೧.
೩೯. ಕೆ.ಪಿ. ಪೂರ್ಣಚಂದ್ರತೇಜಸ್ವಿ, 'ಸ್ವರೂಪ', ಪುಟ. ೧೭, ೧೯೮೧.
೪೦. ಜಿ.ಹೆಚ್. ನಾಯಕ, 'ಸಮಕಾಲೀನ', ಪುಟ. ೭೧, ೧೯೯೧.

ಸ್ಥಳ ತಲುಪದೆ ಗೋಪಾಲಯ್ಯನ ಪರಿಚಯವಾಗಿ ಆ ರಾತ್ರಿ ಅಲ್ಲೇ ತಂಗಿದ್ದು ಬೆಳಗ್ಗೆ ಎದ್ದು ಹೋಗುವುದೆಂದು ಬಂದಿದ್ದ ಅವರು ತಮ್ಮ ನಿಜಸ್ವರೂಪ ಮರೆಮಾಚಿಕೊಳ್ಳುತ್ತಾರೆ. ಜಡಿಮಳೆ, ಭೂಕಂಪ, ಉಗ್ರಗಿರಿ ಪ್ರಕೃತಿಯಲ್ಲಾದ ಅಘೋರ ಬದಲಾವಣೆಯಿಂದಾಗಿ ದಟ್ಟವಾದ ಭಯ, ಮೌನ ಆವರಿಸುತ್ತದೆ. ಗೋಪಾಲಯ್ಯ ರಂಗಪ್ಪ, ಜಗನ್ನಾಥ ಒಬ್ಬರಿಗೊಬ್ಬರು ನಿಗೂಢವಾಗಿರುವುದು ಮಾತ್ರವಲ್ಲ ಗೋಪಾಲಯ್ಯ ತನಗೆ ತಾನೇ ನಿಗೂಢನಾಗಿದ್ದಾನೆ. ಅವನು ತನ್ನ ಬಲಗಾಲಿನ ಪಾದದಲ್ಲಿ ಆಗಿರುವ ಮಾರ್ಪಾಡನ್ನು ಕಂಡು ಚಕಿತನಾಗುವುದು. ಇದು ತನ್ನ ಕಾಲೇ ಎಂದು ಅಪ್ರತಿಭನಾಗುವುದು ರಂಗಪ್ಪ ಜಗನ್ನಾಥರಿಗೆ ತಾನು ಯಾರೆಂದು ಪರಿಚಯಿಸಿಕೊಳ್ಳಬೇಕೆಂಬುದೂ ಅವನಿಗೆ ಗೊತ್ತಾಗದಿರುವುದು, ಅವನ ದೇಹದಲ್ಲಿ ನೂರಾರು ಮಂದಿ ಆಗಿಹೋಗಿರುವುದರಿಂದ ತನ್ನ ಗುರುತು ತನಗೇ ಇಲ್ಲದಂತಾಗಿರುವುದು ರಂಗಪ್ಪ, ಗೋಪಾಲಯ್ಯ ಪರಸ್ಪರರನ್ನು ಅನುಕರಿಸುತ್ತಿರುವಂತೆ ರಂಗಪ್ಪನಿಗೆ ಕಾಣಿಸುತ್ತಿದ್ದರೂ ತನ್ನಲ್ಲಿಯೇ ಇದ್ದಿರಬಹುದಾದ ಆ ಅಂಶ ಗೋಪಾಲಯ್ಯನಿಗೆ ನಿಗೂಢವಾಗಿರುವುದು ಮುಂತಾದ ವಿವರಗಳು ಕಾದಂಬರಿಯಲ್ಲಿವೆ. ಗೋಪಾಲಯ್ಯ ಗೋಪಾಲಯ್ಯನಿಗೆ ನಿಗೂಢವಾಗಿದ್ದಾನೆ. ಹೀಗೆ ಒಬ್ಬ ವ್ಯಕ್ತಿ ಇತರರಿಗೆ ನಿಗೂಢವಾಗಿ ಕಾಣಿಸುವುದು ತನಗೆ ತಾನೇ ನಿಗೂಢವಾಗುವುದು ಆತನ ಏಕಾಂಗಿತನವನ್ನು ಧ್ವನಿಸುತ್ತದೆ ಮತ್ತು ವ್ಯಕ್ತಿವಿಶಿಷ್ಟತೆಯನ್ನು ತಿಳಿಸುತ್ತದೆ. ಹಾಗೆಯೇ ಶಾರಿಯನ್ನು ಕಾಡುವ ಏಕಾಂತ ಉಗ್ರಗಿರಿಯಂತೆ ಕೊನೆಗೊಳ್ಳದ ಕುತೂಹಲವಾಗಿ ಕಾಡುತ್ತಾಳೆ. ಗೆಳೆಯರಿಗೆ ಗೋಪಾಲಯ್ಯ ಉಗ್ರಗಿರಿಯಷ್ಟೇ ನಿಗೂಢವಾಗಿ ತೋರುತ್ತಾನೆ. ಇವರು ಬರಹಗಾರ, ವಿಜ್ಞಾನಿ, ವೈದ್ಯ, ಗುಪ್ತಚಾರ ಹೀಗೆ ಒಂದೇ ದೇಹದಲ್ಲಿ ಅಸಂಖ್ಯ ವ್ಯಕ್ತಿತ್ವವುಳ್ಳವರು ಅಸಂಖ್ಯಾತ ಅನುಭವಗಳು ಎದ್ದೆದ್ದು ಮುಳುಗುವ ಕಡಲು ಈ ಪ್ರಜ್ಞೆ ನಾನೆಂಬುದು ಇದನ್ನೆಲ್ಲ ಸೇರಿದರೆ ಜ್ಞಾಪಕ ಒಂದಕ್ಕೂ ಒಂದರ್ಥವೂ ಇಲ್ಲ. ಜಾದವ್, ಕಾಮತ್, ನರೋನ, ರಾಯಪ್ಪ – ಹೀಗೆ ನೂರಾರು ಮಂದಿ ಆಗಿಹೋಗಿದ್ದಾರೆ ಈ ದೇಶದಲ್ಲಿ. ಇವರಲ್ಲಿ ಯಾರನ್ನು ನಾನೆಂದು ಅರಸಲಿ ಎಂದು ಪ್ರಶ್ನಿಸುವ ಗೋಪಾಲಯ್ಯ ಗೆಳೆಯರಿಗೆ ಆಲೋಚಿಸಿದಷ್ಟೂ ಗೂಢಾರ್ಥಗಳಿರುವ ಯಂತ್ರದಂತೆ ಕಾಣತೊಡಗಿದರು.

"ಮಳೆ, ಬಿರುಗಾಳಿ, ಸಾಲದ್ದಕ್ಕೆ ಭೂಕಂಪ, ಕಣ್ಣೆದುರೇ ಕಳಚಿಬಿದ್ದ ಗಿರಿಶಿಖರ ಉಕ್ಕೇರಿದ ಎಣ್ಣೆಹೊಳೆ, ಹಲವಾರು ಸಾವುಗಳು ಮಗನನ್ನು ಮಣ್ಣುಮಾಡದೆ ಎಸೆಯುವ, ಮಂಗನನ್ನು ತಿನ್ನುವ ಮುರಸರ ಕಳ್ಳಸಾಗಣೆದಾರರ ರಹಸ್ಯ ತಿಳಿದ್ದದ್ದಕ್ಕೆ ನಾಲಿಗೆ ಕಳೆದುಕೊಂಡು ನಿಗೂಢಳಾಗೇ ಉಳಿಯುವ ಶಾರಿ ಈ ಅನುಭವ ಪ್ರಳಯಕ್ಕೆ ಸಿಕ್ಕಿ ನುಗ್ಗು ನುರಿಯಾಗುತ್ತಾನೆ. ಜಗನ್ನಾಥ ಎಲ್ಲೆಲ್ಲಿ ಸುತ್ತು ಹಾಕಿದರೂ ಗಿರಿಯ ಮೃತ್ಯುಛಾಯೆಯ ಆಡಿಯೋ ಇದ್ದಂತೆ ಅದರ ಅಯಸ್ಕಾಂತ

ಕ್ಷೇತ್ರದಲ್ಲಿ ಸತತ ಬಂದಿಯಾದಂತೆ ಭ್ರಮಿಸಿ ಬೆದರುತ್ತಾನೆ. ಅನುಭವ ಹುಡುಕಿ ಹೊರಟವನು ಅದರ ಕರಾಳ ರಹಸ್ಯಗಳಿಗೆ ಹೆದರಿ ಓಡುತ್ತಾನೆ"[೪೧]

'ಕರ್ವಾಲೋ' ಕಾದಂಬರಿಯ ಮಂದಣ್ಣನಿಗೆ ನಾರ್ವೆಯ ರಾಮಯ್ಯನ ಮಗಳನ್ನು ಮ್ಯಾರೇಜ್ ಆಗದಿದ್ದಾಗ ಆತನಲ್ಲಿ ಪರಕೀಯ ಭಾವನೆ ಕಾಡುತ್ತದೆ. ಆತನಿಗೆ ಸಹಾಯ ಮಾಡದ ಕರ್ವಾಲೋ ಶಿಷ್ಯ ವೃತ್ತಿಯೂ ಒಂದು ಹಂತದಲ್ಲಿ ತೋಟ ಮಾರಿ ಬೇರೆ ಏನಾದರೂ ಮಾಡುವ ಹವಣಿಕೆಯಲ್ಲಿರುತ್ತಾನೆ. 'ಕಾಡಿನಮೌನ, ಏಕಾಂತ, ಗ್ರಾಮಜೀವನ, ಕಷ್ಟಕಾರ್ಪಣ್ಯಗಳು ಪೇಟೆಯ ಗಲೀಜು, ಹೊಗೆ, ಜನಜಂಗುಳಿಯಂತೆಯೇ ಏಕತಾನವಾಗಿ ಬೇಸರ ತರತೊಡಗಿದ್ದವು. ಕಾಡುಮೊದಲಿನಂತೆ ಗೋಪ್ಯ ಕುತೂಹಲ ರಹಸ್ಯಗಳನ್ನು ಕೆರಳಿಸದೆ ಜಡವಸ್ತುವಿನಂತೆ ಕಾಣತೊಡಗಿತು. ನನ್ನೊಳಗೆ ನಾನೇ ಮುಳುಗಿಹೋದೆ' ಎನ್ನುವಲ್ಲಿ ನಿರೂಪಕರನ್ನು ಕಾಣದ ಮೌನ ಏಕಾಂಗಿತನ ಅರಿವಿಗೆಬರುತ್ತದೆ. ಲೇಖಕರ ಸೂಕ್ಷ್ಮತೆ ಮತ್ತು ವಿಶಿಷ್ಟ ಚಿಂತನೆ ಹಾಗೂ ನಿರೂಪಣೆ ಇಲ್ಲಿ ಭಿನ್ನವಾಗಿ ಬೇರೂರಿದೆ. ಭೂಮಿ ತನ್ನ ಕಕ್ಷೆಯ ಆವರ್ತನಗತಿಯ ನಕ್ಷೆಯಲ್ಲಿ ಜನ್ಮ ನೀಡಿದ ಜೀವಸಂಕುಲದೊಡನೆ ಬೆರೆತು ಅನಂತಕಾಲ ವಿಕಾಸದ ಹಾದಿಯಲ್ಲಿ ಮುನ್ನಡೆದು ಮಾನವನಾಗಿ ರೂಪುಗೊಂಡದ್ದು ವೈಜ್ಞಾನಿಕಸತ್ಯ ಜೀವತತ್ವದ ಸಾಧನೆಯಹಾದಿಯಲ್ಲಿ ಮಹೋನ್ನತ ಪ್ರಶ್ನೆಯ ಸ್ಥಾನದಲ್ಲಿ ನಿಂತ ಮಾನವ ಸೃಷ್ಟಿಯ ಉಗಮದಿಂದ ಮಾನವತ್ವಕ್ಕೆ ಏರಿ, ತನ್ನ ಭೂತಕಾಲದ ನಿಗೂಢರಹಸ್ಯಗಳ ಬೆನ್ನುಹತ್ತಿ ಮೌಲ್ಯಗಳ ಅನ್ವೇಷಣೆಗೆ ಮುಂದಾಗುವುದು ಸಹಜ. ಅಷ್ಟುಮಾತ್ರವಲ್ಲದೆ ಪ್ರಸ್ತುತ ಮಾನವಪ್ರಜ್ಞೆ ಮತ್ತು ಪ್ರಕೃತಿಯ ಧೋರಣೆಗಳು ಒಂದಕ್ಕೊಂದು ಮೂರ್ತ ಅಮೂರ್ತ ಸೆಳೆತಗಳ ಸಂಬಂಧಗಳನ್ನು ಏರ್ಪಡಿಸಿಕೊಂಡಿರು–ವುದರಿಂದ 'ಕರ್ವಾಲೋ' ಕಾದಂಬರಿ ಗಣನೀಯವಾದಂತಹ ಅರ್ಥಾಂಶಗಳನ್ನು ಹೊರಹಾಕುತ್ತದೆ. ಇದು ವ್ಯಕ್ತಿವಿಶಿಷ್ಟತೆಯ ನಿರೂಪಣಾ ಶೈಲಿಯಾಗುತ್ತದೆ. ಹಲವು ಸಾದೃಶ್ಯ ವೈದೃಶ್ಯಗಳ ವೈವಿಧ್ಯಲೋಕವೊಂದರ ಪ್ರತಿರೂಪ ನಮ್ಮ ಅರಿವಿನ ಹಾದಿಗೆ ಕೈದೀವಿಗೆಯಾಗುತ್ತದೆ. ಸಾಹಿತ್ಯದ ಸೃಜನಾತ್ಮಕ ಅಂಶಗಳಲ್ಲಿ ವೈಜ್ಞಾನಿಕ, ವೈಚಾರಿಕ ದೃಷ್ಟಿಕೋನ ಸಹಜವೆಂಬಂತೆ ಸಂಮಿಶ್ರಣಗೊಂಡಿರುವುದು ಬೆರಗು ಹುಟ್ಟಿಸುವುದರ ಜೊತೆಗೆ ಭಿನ್ನ ಅಭಿವ್ಯಕ್ತಿ ದೃಷ್ಟಿಧೋರಣೆಗೆ ಸಮರ್ಪಕ ಉತ್ತರವೂ ಆಗುತ್ತದೆ.

ನವ್ಯದ ಅತಿರೇಕ ಅಂಶಗಳೆನಿಸುವ ವ್ಯಗ್ರತೆ, ಪರಕೀಯತೆ, ವ್ಯಕ್ತಿಕೇಂದ್ರಿತ ಅನುಭವಗಳು, ಮಾನಸಿಕ ಸಂದಿಗ್ಧತೆ ಮುಂತಾದ ಅಸಂಗತ ನೆಲೆಗಳನ್ನು ಮೀರಿ ವ್ಯಕ್ತಿವಿಶಿಷ್ಟತೆಯ ತಂತ್ರಗಳನ್ನು ಕಂಡುಕೊಳ್ಳುವ ಪರಿಸರದ ಸೂಕ್ಷ್ಮಾತಿಸೂಕ್ಷ್ಮ ಸಂಬಂಧಗಳ ಜಟಿಲತೆಯನ್ನು ಗುರುತಿಸಿಕೊಳ್ಳುವಲ್ಲಿ

---

೪೧. ಡಾ. ಕೆ. ವಿಜಯಶ್ರೀ, 'ಕನ್ನಡ ನವ್ಯಕಾದಂಬರಿಗಳು', ಪುಟ. ೧೧೦, ೨೦೦೨.

'ಕರ್ವಾಲೊ' ಕಾದಂಬರಿ ನವ್ಯಧೋರಣೆಗಿಂತ ಭಿನ್ನವಾದ ಕೃತಿ ತೀವ್ರವಾದ ಅನುಭವಸಾಂದ್ರತೆ ಸಮಷ್ಟಿಜೀವನದ ಪರಿಭಾಷೆಯಾಗಿ ರೂಪುಗೊಂಡದ್ದನ್ನು ಕಾದಂಬರಿಯಲ್ಲಿ ಗಮನಿಸಬಹುದು. ಇಲ್ಲಿ ನವ್ಯಮಾರ್ಗದ ಭ್ರಮಾತ್ಮಕ ಮೌಲ್ಯಗಳ ಬಗ್ಗೆ ಲೇಖಕರು ಕಟ್ಟಿಕೊಡುತ್ತಾರೆ. ಜೀವನಿಷ್ಠ ಆದರ್ಶಗಳ ಸಾಂಸ್ಕೃತಿಕ ಮೌಲ್ಯಗಳು ಸಾಹಿತ್ಯದ ಕ್ರಿಯಾಶೀಲತೆಯ ಬೆಸುಗೆಯಲ್ಲಿ ನಂಟನ್ನು ಬೆಸೆಯುತ್ತವೆ. ಜ್ಞಾನದ ಪರಿಧಿಯಲ್ಲಿ ಅನಕ್ಷರಸ್ಥರಾದ ಮಂದಣ್ಣ ಮತ್ತು ವಿಜ್ಞಾನಿಯಾದ ಕರ್ವಾಲೋ ಅವರನ್ನು ಒಂದೇ ಕೇಂದ್ರಸ್ಥಾನದಲ್ಲಿಟ್ಟು ಸಮನ್ವಯ ಸಾಧಿಸುವಲ್ಲಿ ಕಾದಂಬರಿಯ ಸಮತೋಲನವಿದೆ. ಮಾನವ ತನ್ನ ಅಪ್ರಬುದ್ಧ ಮನಃಸ್ಥಿತಿಯ ಆಲೋಚನೆಗಳನ್ನು ಅಲಕ್ಷಿಸಿ ಊರ್ಧ್ವಮುಖ ಚೇತನವನ್ನು ಗುರುತಿಸಿಕೊಳ್ಳದ ಹೊರತು ಒಂದು ಜಗತ್ತಿನಿಂದ ಮತ್ತೊಂದು ಜಗತ್ತಿಗೆ ಜಿಗಿಯುವುದು ಅಸಂಭವ ವೈಯಕ್ತಿಕ ನೆಲೆಯನ್ನು ಮೀರಿದವರಿಂದ ಮಾತ್ರ ಸತ್ಯದರ್ಶನದ ಅನುಭವ ಪಡೆಯಲು ತೇಜಸ್ವಿ ವಿಶಿಷ್ಟ ನಿರೂಪಣಾಕ್ರಮವನ್ನು ತಂದಿದ್ದಾರೆ. ಹಾಗಾಗಿ ಈ ಕಾದಂಬರಿಯು ಬದುಕಿನ ವಿಸ್ಮಯವನ್ನು ಕುರಿತ ಕಾದಂಬರಿಯಾಗಿದೆ. ಮನುಷ್ಯ–ಪ್ರಕೃತಿ, ಮನುಷ್ಯ–ಸಮಾಜ, ಮನುಷ್ಯಮನುಷ್ಯರ ಸಂಬಂಧಗಳ ಸಂಕೀರ್ಣತೆಯಲ್ಲ. ಅವುಗಳನ್ನು ಕೇವಲ ಬೌದ್ಧಿಕವಾಗಿ ಅರ್ಥೈಸಿಕೊಳ್ಳಲಾಗದ ಅನಿವಾರ್ಯತೆಯಲ್ಲಿ ಬುದ್ಧಿಯನ್ನು ಮೀರಿದ ನಿಗೂಢತೆಯಲ್ಲಿ ಬದುಕು ನಮ್ಮೆಲ್ಲ ವಿಶ್ಲೇಷಣೆಗಳನ್ನು ಮೀರಿನಿಲ್ಲುತ್ತದೆ. ಸಮಕಾಲೀನ ವಿಚಾರಗಳನ್ನು ಸಂವೇದನಾತ್ಮಕ ಸೂಕ್ಷ್ಮ ಅನುಭವಗಳನ್ನು ತೇಜಸ್ವಿ ತಮ್ಮ ಕೃತಿಗಳಲ್ಲಿ ಪರಿಣಾಮಕಾರಿಯಾಗಿ ತರಬಲ್ಲರೆಂಬುದಕ್ಕೆ ಈ ಬರಹವೇ ಉತ್ತಮ ಉದಾಹರಣೆ. ಅರವತ್ತು ಕೋಟಿ ವರ್ಷಗಳ ಹಿಂದೆ ಜೀವಿಸಿದಂತಹ ಹಾರಾಡುವ ಓತಿಯೊಂದರ ಶೋಧನೆಗೆ ಹೊರಟ ಕೀಟ ಹಾಗೂ ಸಸ್ಯವಿಜ್ಞಾನಿ ಪ್ರೊ. ಕರ್ವಾಲೋ ಅವರನ್ನು ಹಿಂಬಾಲಿಸಿದ ಭಿನ್ನ ಭಿನ್ನ ಜೀವನಾಸಕ್ತಿಯ ವ್ಯಕ್ತಿಗಳು ಪಡೆಯುವ ವಿಶಿಷ್ಟ ಅನುಭವಗಳೇ ಕರ್ವಾಲೋ ಕಾದಂಬರಿಯ ಕಥಾಹಂದರದಲ್ಲಿ ಕಂಡುಬರುವ ಅಪೂರ್ವ ವಸ್ತು ವೈವಿಧ್ಯವಾಗಿದೆ. ಓತಿಯೊಂದರ ಹುಡುಕಾಟದ ಅಂಗವಾಗಿ ಮನುಷ್ಯ ಜೀವಿಗಳ ಮನಸ್ಸುಗಳ ವಿಕಾಸ ಈ ಕಾದಂಬರಿಯಲ್ಲಿ ಚರ್ಚಿತಗೊಂಡಿದೆ. ವಿಜ್ಞಾನದ ಚಕ್ಷುವಿನಿಂದ ವ್ಯಕ್ತಿಯನ್ನು ನೋಡುವ ಪರಿಕರದ ಮಧ್ಯೆ ಬದುಕಿರುವ ವ್ಯಕ್ತಿಯ ಮನುಷ್ಯತ್ವವನ್ನು ಗುರುತಿಸುವ ವಿಶಿಷ್ಟ ಪ್ರಯತ್ನವನ್ನು ಈ ಕೃತಿ ನಿರ್ವಹಿಸಿದೆ. ವಿಜ್ಞಾನ, ಕೃಷಿ, ಜೇನುಸಾಕಣೆ ಕಾಡಿನ ಒಳವಲಯಗಳು ಅಭಿವ್ಯಕ್ತಿಯ ಸಾಣೆಗೆ ಸಿಕ್ಕಿ ಹೊಳೆಯುತ್ತಿವೆ. ಒಂದು ಯಶಸ್ವೀ ಅಭಿವ್ಯಕ್ತಿಯ ಕೃತಿಯಾಗಿ 'ಕರ್ವಾಲೋ' ತೇಜಸ್ವಿಯವರ ಸೃಜನಶೀಲ ಬರವಣಿಗೆಗಳಲ್ಲಿ ಗಮನಾರ್ಹ ಸ್ಥಾನ ಪಡೆದುಕೊಂಡಿದೆ.

'ಕರ್ವಾಲೋ' ಕಾದಂಬರಿಯ ಒಂದು ತುದಿ ವಿಜ್ಞಾನವಾದರೆ ಇನ್ನೊಂದು ತುದಿ ಪ್ರಕೃತಿ ಇಪ್ಪತ್ತೊಂದನೇ ಶತಮಾನಕ್ಕೆ ಕಾಲಿರಿಸುತ್ತಿರುವ ಮನುಷ್ಯ ಮಹತ್ತರ ವೈಜ್ಞಾನಿಕ ಸಾಧನೆಯ

ತುತ್ತತುದಿಯ ಘಟ್ಟದಿಂದ ಆರಂಭವಾಗುವ ಈ ಕಾದಂಬರಿ ಬಂದು ನಿಲ್ಲುವುದು ಈ ಸಾಧನೆಯ ಅಲ್ಪತೆಯನ್ನು ತೇಲಿಸುವ ಹಂತದಲ್ಲಿ ನಾಗರಿಕ ಬದುಕಿನ ಧಾವಂತದಲ್ಲಿ ತೀರ ಕ್ಷುಲ್ಲಕವಸ್ತು ಎನ್ನುವಂತೆ ಉಪೇಕ್ಷೆಗೆ ಒಳಗಾಗಿರುವ ಪ್ರಕೃತಿ ಕಾದಂಬರಿ ಬೆಳೆದಂತೆ ತನ್ನ ನಿಗೂಢತೆಯ ಸ್ವರೂಪವನ್ನು ಎಳೆಎಳೆಯಾಗಿ ಬಿಚ್ಚುತ್ತಾ ನಿಗೂಢವೇ ಆಗಿ ಉಳಿಯುವುದು ಅದ್ಭುತಗಳನ್ನು ತೋರಿಸುತ್ತಲೇ ವಿಸ್ಮಯವಾಗಿ ಉಳಿಯುವುದು ಪ್ರಕೃತಿ ಮನುಷ್ಯನ ಅಹಂಕಾರಕ್ಕೆ ಸವಾಲಾಗುವುದು ಈ ಕೃತಿಯ ವಿಶೇಷ.

ವಿಜ್ಞಾನ ಮತ್ತು ಪ್ರಕೃತಿಗಳ ಈ ಎರಡು ತುದಿಗಳ ನಡುವೆ ಕಾದಂಬರಿಯ ಪಾತ್ರಗಳು ಅನಾವರಣಗೊಳ್ಳುತ್ತವೆ. ಈ ಪಾತ್ರಗಳೂ ಕೂಡ ಎರಡು ವಿರುದ್ಧ ತುದಿಗಳಾಗಿ ಗೋಚರಿಸುತ್ತವೆ. ವಿಜ್ಞಾನಿ ಕರ್ವಾಲೋ ಒಂದು ತುದಿಯಾದರೆ ಮಂದಣ್ಣ ಮತ್ತೊಂದು ತುದಿ. ಕರ್ವಾಲೋ ಅವರ ಅಸ್ತಿತ್ವದ ಬೇರು ಗಳಿರುವುದು ವಿಜ್ಞಾನಕ್ಷೇತ್ರದ ನೆಲೆಯಲ್ಲಾದರೆ ಮಂದಣ್ಣನ ಅಸ್ತಿತ್ವವಿರುವುದು ಪ್ರಕೃತಿಯಲ್ಲಿ ವಿಜ್ಞಾನ–ಪ್ರಕೃತಿಗಳ ನಡುವಣ ಕೊಂಡಿಯಾಗಿ, ಜೀವತಂತುವಾಗಿ, ಜೀವವಿಕಾಸ ಪಥದ ಅವಶೇಷವಾಗಿ ಕರ್ವಾಲೋ–ಮಂದಣ್ಣನ ನಡುವಣ ಸಂವಹನ ಕ್ರಿಯೆಯಾಗಿ ಆಸಕ್ತಿಯ ಕೇಂದ್ರವಾಗಿ ಹಾರುವ ಓತಿ ಇದೆ. ಹೀಗೆ ಒಂದರೊಳಗೊಂದು ಬೆರೆಯುತ್ತ ಇತಿಹಾಸ–ವರ್ತಮಾನ–ಭವಿಷ್ಯತ್ತುಗಳನ್ನೂ ಬೆಸೆಯುತ್ತಾ, ವಿಜ್ಞಾನ ಆಧ್ಯಾತ್ಮವೆನಿಸುತ್ತಾ ವಾಸ್ತವ ಕಾಳಜಿಯಿಂದ ನಡೆಸಿದ ತತ್ವ ಜಿಜ್ಞಾಸೆಯಂತಿದೆ. ಜೀವಪರ ಧೋರಣೆಯ ಕಲಾಕಾರನೊಬ್ಬ ಹಿಡಿದಿಟ್ಟ ಹೆಜ್ಜೆ ಜೀವನದ ವಿವರಗಳಂತಿವೆ. ವಿಸ್ಮಯಗಳ, ವಿಶಿಷ್ಟತೆಗಳ ಬೆನ್ನುಹತ್ತಿದ ವಿಜ್ಞಾನಾಸಕ್ತನೊಬ್ಬ ಮಂಡಿಸಿದ ದಾಖಲೆಗಳ ಪುಸ್ತಕದಂತೆಯೂ ಇದೆ. 'ಕರ್ವಾಲೋ' ಕೃತಿಯ ಮಹತ್ವ ಇರುವುದು ಅದು ಬದುಕನ್ನು ಗ್ರಹಿಸುವ ಕ್ರಮದಲ್ಲಿ ಅದು ಕಟ್ಟಿಕೊಡುವ ಸಣ್ಣಸಣ್ಣ ವಿವರಗಳಲ್ಲಿ ಅದು ಸೃಷ್ಟಿಸುವ ಅಥೆಂಟಿಕ್ ಪ್ರಪಂಚದಲ್ಲಿ ಇಲ್ಲಿನ ಮಂದಣ್ಣ ಅವನ ಮಾವ ನಾರ್ವೆಯರಾಮಯ್ಯ ಅವರ ಕಳ್ಳಭಟ್ಟಿಯ ವ್ಯವಹಾರ, ಪೋಲೀಸು–ಕೋರ್ಟು–ಜೈಲು–ಲಾಯರು, ಮಂದಣ್ಣನ ಕಾಡು–ಮೇಡು, ಹುಳುಹುಪ್ಪಟೆ, ಬಿರ್ಯಾನಿ ಕರಿಯಪ್ಪ, ಅವನ ಅಡುಗೆಯ ಕಲೆ, ಶಿಕಾರಿಯ ಜಾಣ್ಮೆ, ಮರಹತ್ತುವ ಚಾಕಚಕ್ಯತೆ, ಅವನಗರ್ಮಿ ಸಾಮಾನುಗಳು, ಅದರ ಪರಿಣಾಮಗಳು ಹಾವುಗೊಲ್ಲರ ಎಂಗ್ಟ, ಹಾವನ್ನು ಹಿಡಿದು ವಿಷತೆಗೆಯುವ ಧರ್ಮ ಸುಲಿಯುವ ಅವನ ವಿದ್ಯೆ ಕಾಡುಪ್ರಾಣಿಗಳ ಚರ್ಮತೆಗೆದು ಮಾರಿ ಬದುಕುವ ಅವನ ಜೀವನಶೈಲಿ, ಫಾರೆಸ್ಟು ಗಾರ್ಡುಗಳೊಂದಿಗೆ, ವ್ಯವಹರಿಸುವ ಎಂಗ್ಟನ ಹೆಂಡತಿಯ ಜೀವನಧರ್ಮ ಮತ್ತು ನೀತಿ ಕಾಡಿನೊಂದಿಗಿನ ಅವರ ಗಾಢಸಂಬಂಧ ಕರ್ವಾಲೋ ಅವರ ಸಂಶೋಧನೆಗಳು ಕಾದಂಬರಿಯ ಮುಖ್ಯ ಪಾತ್ರದಂತೆ ಚಿತ್ರಿತಗೊಂಡಿರುವ ಕಿವಿ ಅವರ ನಡವಳಿಕೆಗಳು ಆಹಾರಕ್ರಮ, ರೋಗ–ರುಜಿನ ಒಂದೊಂದು ಪ್ರಪಂಚವೇ ಆಗಿವೆ. ಈ ಎಲ್ಲಾ

ಪಾತ್ರಗಳು ಬದುಕಿನ ಒಂದೇ ಮೂಲದಿಂದ ಒಂದೇ ಸ್ಥರದಿಂದ ಬಂದ ಅವುಗಳ ವರ್ಗಗಳು ಜಾತಿಗಳು ಬೇರೆ ಬೇರೆ. ಅವರು ಅನುಸರಿಸುವ ರೀತಿ–ನೀತಿಗಳು ಜೀವನಧರ್ಮಗಳು ಧೋರಣೆಗಳು ಬೇರೆ ಬೇರೆ. ಕರಿಯಪ್ಪನ ತಿಳುವಳಿಕೆಗೆ ಎಟುಕುವ ಅವನ ಸೀಮಿತ ಅರ್ಥದ ತರ್ಕಕ್ಕೆ ಸಿಕ್ಕುವ ಅವನ ನಂಬಿಕೆಯ ದೇವರು ಒಂದು ಬಗೆಯಾದರೆ; ಕರ್ವಾಲೋ ಅವರ ತಿಳುವಳಿಕೆ ಇನ್ನೊಂದು ಬಗೆ. ಹೀಗೆ ವ್ಯಕ್ತಿವಿಶಿಷ್ಟತೆ ನಿರೂಪಣಾಕ್ರಮಗಳ ಮೂಲಕ ಪ್ರತಿಯೊಂದು ಪಾತ್ರಕ್ಕೂ ಜೀವತುಂಬಿರುವ ಪರಿಯನ್ನಿಲ್ಲಿ ಗಮನಿಸಬಹುದು.

ಇಷ್ಟೇ ಮುಖ್ಯವಾಗಿ ಓದುಗರಿಗೆ ವೇದ್ಯವಾಗುವುದು ಕಾದಂಬರಿಯ ಅಥೆಂಟಿಸಿಟಿ ಇದು ಕಾಣುವುದು ಪುಟ್ಟಪುಟ್ಟ ಸಂಗತಿಗಳಲ್ಲಿ ಅವುಗಳ ಸೂಕ್ಷ್ಮ ವಿವರಗಳಲ್ಲಿ ಜೇನುಸಾಕಣೆ, ಗುರುಗಿ ಹೂ, ಅದು ಎಂಟು ವರ್ಷಗಳಿಗೊಮ್ಮೆ ಹೂ ಬಿಡುವ ಸಂಗತಿ ಸಿಹಿಹೆಚ್ಚಾಗಿ ಅದರ ತುಪ್ಪ ಹರಳುಕಟ್ಟುವ ಮಾಹಿತಿ ಮಡಕೆ ಜೇನಿನ ವಿವರ, ಪೆಟ್ಟಿಗೆಗೆ ಜೇನನ್ನು ಕೂರಿಸುವ ವಿಧಾನ ರಾಣಿಜೇನಿನ ಮಾರ್ಗದರ್ಶನ ಇತ್ಯಾದಿ. ಹಾಗೆಯೇ ಗದ್ದೆ ನಾಟಿಯ ವಿಚಾರ. ಭತ್ತದ ಗದ್ದೆಗೆ ಬೀಳುವ ಹುಳುಗಳ ವಿವರ – ಇವೆಲ್ಲ ಮಾಹಿತಿ ಪೂರ್ಣವಾಗಿದೆ. ಲೋಹಿಯಾ ಅವರ ತತ್ವಚಿಂತನೆಯ ಪ್ರಭಾವಕ್ಕೆ ಒಳಗಾದ ಬರಹಗಾರನೊಬ್ಬ ಗ್ರಾಮೀಣ ಭಾರತವನ್ನು ಕಂಡ, ಅನುಭವಿಸಿದ, ವಿವೇಚಿಸಿದ ಪುರಾವೆಗಳಲ್ಲಿವೆ. ಈ ರೀತಿಯಾಗಿ ವ್ಯಕ್ತಿವಿಶಿಷ್ಟತೆಯ ವಿಧಾನವನ್ನು ನಿರೂಪಿಸಿರುವ ಲೇಖಕರು ಸೂಕ್ಷ್ಮಸಂವೇದನೆಯನ್ನು ಉಳ್ಳವರಾಗಿದ್ದಾರೆ.

'ಚಿದಂಬರರಹಸ್ಯ' ಕಾದಂಬರಿಯು ಭಿನ್ನ ಸಾಂಸ್ಕೃತಿಕ ದೃಷ್ಟಿಕೋನ ಹಾಗೂ ವ್ಯಕ್ತಿವಿಶಿಷ್ಟ ನೆಲೆಯಲ್ಲಿ ಒಳಗೊಂಡ ಕಾದಂಬರಿ ಇದು ಕೆಸರೂರು ಎನ್ನುವ ಊರಿನ ಸುತ್ತಮುತ್ತ ನಡೆಯುವ ಘಟನೆಗಳ ಆಧಾರದಿಂದ ಒಂದು ಸಂಸ್ಕೃತಿಯ ಸಾಂಸ್ಕೃತಿಕ ಅಭಿವ್ಯಕ್ತಿಯನ್ನು ಲೇಖಕರು ಭಿತ್ತರಿಸಿದ್ದಾರೆ. ಮನುಷ್ಯ ತನ್ನ ಬದುಕು ಯಾವನೆಲೆಯಲ್ಲಿ ಸ್ಥಿತಿಬದ್ಧವಾಗುತ್ತದೆ ಎಂಬುದನ್ನು ಸೂಕ್ಷ್ಮವಾಗಿ ಗ್ರಹಿಸಿ ತನ್ನ ಅನುಕೂಲದ ನೆಲೆಯಲ್ಲಿ ಭದ್ರವಾಗಿಸಿಕೊಳ್ಳುತ್ತ ಪರಿಸ್ಥಿತಿಗೆ ಪ್ರತಿಕ್ರಿಯಿಸುವುದು. ಮೂಲತಃ ಇದು ತನ್ನ ಬದುಕು ಮತ್ತು ಅಸ್ತಿತ್ವ ಇತರರಿಂದ ಭಿನ್ನ ರೀತಿಯದು ಎಂಬ ತಿಳಿವಿನ ಸ್ವಾರ್ಥಮೂಲ ನೆಲೆಯಿಂದ ಉಗಮವಾಗುವಂಥದು. ಆದ್ದರಿಂದ ಬದುಕಿನ ಮೂಲಭೂತ ಆಶಯವನ್ನು ವೈಯಕ್ತಿಕ ಮತ್ತು ಸಾಮಾಜಿಕ ಸ್ಥಿತಿಯ ಅಸ್ತಿತ್ವವನ್ನು ಅದರ ಸಾಂಸ್ಕೃತಿಕ ಭಿತ್ತಿಯಲ್ಲಿ ಅನಾವರಣಮಾಡುತ್ತದೆ. ಕೆಸರೂರಿನ ಸಾಂಸ್ಕೃತಿಕ ಛಿದ್ರೀಕರಣವನ್ನು ಅದರ ವಸ್ತು ಸ್ಥಿತಿಯ ನೆಲೆಯಲ್ಲಿ ಗ್ರಹಿಸಲು ಸಾಧ್ಯವಾಗದ ಕ್ರಾಂತಿಕಾರಿಗಳು ವ್ಯಂಗ್ಯವಾಗಿ ಭಾಸವಾಗಿ ಕಂಡುಬರುತ್ತಾರೆ. ಇವರ ಕ್ರಾಂತಿಕಲ್ಪನೆ ಸಿನಿಕತನದ ನೆಲೆಯಿಂದ ಪ್ರೇರಣೆ ಪಡೆದದ್ದು, ರಾಮಚಂದ್ರನ ಮಾರ್ಗದರ್ಶನವನ್ನು ಪೂರ್ಣಪ್ರಮಾಣದಲ್ಲಿ ಬಳಸಿಕೊಳ್ಳಲು ಅಸಹಾಯಕರಾಗುತ್ತಾರೆ. ಪಾಟೀಲರಂಥ ವ್ಯಕ್ತಿಯನ್ನು ಅರ್ಥಮಾಡಿಕೊಳ್ಳುವ ಸೂಕ್ಷ್ಮ

ಆಲೋಚನಾ ಶಕ್ತಿ ಕೂಡ ಇಲ್ಲವಾಗಿರುವುದರಿಂದ ರಾಮಚಂದ್ರನ ಮಾರ್ಗದರ್ಶನ ಮತ್ತು ಪ್ರೇರಣೆ ಕೆಸರೂರಿನ ಪ್ರಭಾವವೋ ಎಂಬಂತೆ ಬೇರೊಂದು ನೆಲೆಯನ್ನು ಗ್ರಹಿಸುವುದು ಕೋಮುಗಲಭೆಯಲ್ಲಿ ಮುಸ್ಲೀಮರನ್ನು ವಿರೋಧಿಗಳೆಂದು ತಿಳಿಯುವುದೇ ಹಿಂದುಕಲ್ಪನೆಯ ಮೋಹ ಇದು ಅವರಿಂದ ಪೂರ್ಣವಾಗಿ ತೊಲಗಿಲ್ಲ ಎಂಬುದನ್ನು ತಿಳಿಸುತ್ತದೆ. ಇಂಥ ದ್ವಂದ್ವ ಮನೋವೃತ್ತಿ ಪರಿಣಾಮದ ನಿಕಷದಲ್ಲಿ ಬಲುದೊಡ್ಡ ಬೆಲೆ ತೆರಬೇಕಾಗಿರುವುದರಿಂದ ಇದು ಈ ನೆಲೆಯ ಸಾಂಸ್ಕೃತಿಕ ಸಂಘರ್ಷಕ್ಕೆ ವಿಘಟನಕಾರಿಯಾದ ಮೂಲಧಾತುವಾಗುತ್ತದೆ. ಆದ್ದರಿಂದ ಕ್ರಾಂತಿಕಾರಿಗಳು ತಮ್ಮ ನಡೆ ಮತ್ತು ನುಡಿಯಿಂದ ಹಿಂದೂ ಮತ್ತು ಮುಸ್ಲಿಮರ ನಡುವಿನ ದ್ವಂದ್ವ ಭಿತ್ತಿಯನ್ನು ಪ್ರತಿನಿಧಿಸುತ್ತಾರೆ. ಸಾಹಿತಿ ಜಯರಾಂ ಕೂಡ ಇವರ ವಿಷಯವಾಗಿ ನಕಾರಾತ್ಮಕ ನೆಲೆಯಲ್ಲಿ ಮಾತನಾಡುತ್ತಾನೆ. ಇವರಿಗೆ ಮೂಲ ಆಕರವನ್ನು ಒದಗಿಸುವ ರಾಮಚಂದ್ರ ಪ್ರಶ್ನಿಸಬಹುದಾದ ಯಾವ ಘಟನೆಗಳು ಮುಖಾಮುಖಿಯಾಗದೆ ಕ್ರಾಂತಿಕಾರಿಗಳಿಗೂ ಆ ಘಟನೆಗೂ ನಡುವೆ ಒಂದು ದೂರವನ್ನು ಸೃಷ್ಟಿಸುತ್ತಾರೆ ಮತ್ತು ಸೃಷ್ಟಿಸಿಕೊಳ್ಳುತ್ತಾನೆ. ಹೇಳುವುದಾದರೆ ರಾಮಚಂದ್ರ, ಜಯರಾಂ ಹೆಗ್ಡೆ ಹಾಗೂ ಸಿದ್ದಪ್ಪ – ಈ ನಾಲ್ವರ ಬೌದ್ಧಿಕ ಗುಂಪು ತಮ್ಮ ತಮ್ಮ ನೆಲೆಯಲ್ಲಿ ಎದುರಿಸಬೇಕಾದ ಸ್ಥಿತಿಯಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ ಅನಿಸುತ್ತದೆ. ರಾಮಚಂದ್ರ ಕೆಸರೂರಿನ ಯಾವ ಕ್ರಿಯೆಗೂ ಹತ್ತಿರದಿಂದ ಸ್ಪಂದಿಸುವುದಿಲ್ಲ ತನ್ನ ಶಿಷ್ಯರಾದ ಕ್ರಾಂತಿಕಾರಿಗಳನ್ನು ಮುಂದೆತಳ್ಳುತ್ತಾನೆ. ಅವರು ಪರಿಸ್ಥಿತಿಯನ್ನು ಎದುರಿಸಲು ಸಮರ್ಥರಲ್ಲ ಎಂದು ತಿಳಿದಾಗಲೂ ತನ್ನ ಹೊಣೆಗಾರಿಕೆಯನ್ನು ಅರಿತುಕೊಳ್ಳುವುದೇ ಇಲ್ಲ. ಆದರೆ ತಾತ್ವಿಕಮಟ್ಟದಲ್ಲಿ ಕೂತಲ್ಲೇ ಘಟನೆಗಳಿಗೆ ಪ್ರತಿಕ್ರಿಯಿಸುತ್ತಾನೆ. ಪರಿಸ್ಥಿತಿ ಸುಧಾರಿಸದೇ ಇದ್ದಾಗ ತನ್ನಲ್ಲೇ ಜುಗುಪ್ಸೆಪಡುತ್ತಾನೆ. ಇಲ್ಲಿ ವಸ್ತುಸ್ಥಿತಿಗೂ ತನ್ನ ಸೈದ್ಧಾಂತಿಕ ಕಾಳಜಿಗೂ ಸಾಂಸ್ಕೃತಿಕ ಅವನತಿಯನ್ನು ಜೋಗಿಹಾಳರ ಸಾವಿನ ಹಿನ್ನೆಲೆಯಲ್ಲಿ ಅರ್ಥೈಸಲು ಒಂದು ಕತೆ ಸೃಷ್ಟಿಸುತ್ತಾನೆ. ಈಕತೆ ನಡೆದಿರುವ ಒಂದು ದುರಂತದ ಹಿಂದೆಯೇ ಪ್ರಸ್ತುತ ಘಟನೆಗಳನ್ನು ಭವಿಷ್ಯದಲ್ಲಿ ಮತ್ತೊಂದು ದುರಂತವೊಂದಕ್ಕೆ ಅಡಿಪಾಯ ಹಾಕುತ್ತಿವೆ ಎಂಬ ಬೌದ್ಧಿಕ ಗುಂಪಿನ ನಿರೀಕ್ಷೆಯನ್ನು ಸಮರ್ಥಿಸಲೆಂಬಂತೆ ಪಾಟೀಲರ ಆಕಸ್ಮಿಕ ಕೊಲೆಯಾಗುತ್ತದೆ. ಅಲ್ಲದೇ ಈ ಗುಂಪು ಆ ನಿರೀಕ್ಷಿತ ಭವಿಷ್ಯದ ದುರಂತವನ್ನು ಅತ್ಯಂತ ಕಾತರದಿಂದ ಸ್ವಾಗತಿಸುತ್ತಿರುವಂತೆ ಕಾಣಿಸಿಕೊಳ್ಳುತ್ತದೆ.

ಹೀಗೆ ಗ್ರಾಮಜೀವನದ ಜಟಿಲತೆ ಅದರ ವಿಘಟನೆಯನ್ನು ಕೆಸರೂರಿನ ಮೂಲಕ ಇಡೀ ವ್ಯವಸ್ಥೆಯನ್ನು ದರ್ಶಿಸುತ್ತದೆ. ಜಾತೀಯತೆ, ವರ್ಗಸಂಘರ್ಷ, ಸ್ವಾರ್ಥರಾಜಕೀಯ ಮುಂತಾದ ಸಾಮಾಜಿಕ ಪಿಡುಗುಗಳಿಂದ ವಿಜ್ಞಾನಿ ಡಾ. ಜೋಗಿಹಾಳ, ಡಾ. ಪಾಟೀಲರನ್ನು ಕಳೆದುಕೊಂಡದ್ದಲ್ಲದೆ ಇಡೀ ಊರು ಬೆಂಕಿಗೆ ಆಹುತಿಯಾಗುವುದು ದುರದೃಷ್ಟಕರವಾಗಿದೆ.

ತೇಜಸ್ವಿಯವರ ಈ 'ಚಿದಂಬರರಹಸ್ಯ' ಕಾದಂಬರಿಯು ನವ್ಯೋತ್ತರ ಕಾಲಘಟ್ಟದ ಮುಖ್ಯ ಆಶಯಗಳನ್ನು ವಾಸ್ತವನೆಲೆಗಟ್ಟಿನ ಮೇಲೆ ರಹಸ್ಯಗಳನ್ನು ಭೇಧಿಸುತ್ತಾ ಸಾಂಸ್ಕೃತಿಕವಾಗಿ ನಾನಾಸ್ತರದ ಜನರನ್ನು ಅವರ ವ್ಯಕ್ತಿವೈಶಿಷ್ಟ್ಯಗಳನ್ನು ಓದುಗರ ಮುಂದಿರಿಸುತ್ತಾ ಸಾಗುತ್ತದೆ. ಎಪ್ಪತ್ತನೆ ದಶಕದಲ್ಲಿ ಕರ್ನಾಟಕದಲ್ಲಿ ನಡೆದ ರಾಜಕಾರಣದ ಧೃವೀಕರಣ ಹಾಗೂ ಸಾಂಸ್ಕೃತಿಕ ಚಳವಳಿಗಳ ಪ್ರಭಾವ ಸಹ ಈ ಕಾದಂಬರಿಯನ್ನು ಕಟ್ಟುವಲ್ಲಿ ಕಾದಂಬರಿಕಾರರಿಗೆ ನೆರವಾಗಿದೆ. ಜಾತಿವಿನಾಶ ಸಮ್ಮೇಳನ, ಸಮಾಜವಾದಿ ಚಳವಳಿ, ರೈತಚಳವಳಿ, ಸಮಕಾಲೀನ ಶಿಕ್ಷಣದ ಪ್ರಭಾವ ಇವೆಲ್ಲಾ ಈ ಕಾದಂಬರಿಯಲ್ಲಿ ಹಲವು ಸನ್ನಿವೇಶಗಳನ್ನು ತನ್ನ ಪಾತಳಿಯಲ್ಲಿ ಕಾಣಿಸಿಕೊಳ್ಳುತ್ತದೆ. ಮನುಷ್ಯರ ಆತ್ಮ ಮತ್ತು ಪರಿಸರ ಕಲುಷಿತವಾಗಿರುವುದರ ಬಗ್ಗೆ ಸಂಸ್ಕೃತಿ ನಾಶದ ಕಡೆಗೆ ಸಾಗುತ್ತಿರುವುದರ ಬಗ್ಗೆ ಕಾದಂಬರಿ ಶೋಧಿಸುತ್ತದೆ. ವ್ಯಾಪಾರ, ವಾಣಿಜ್ಯ, ರಾಜಕೀಯ, ಜಾತೀಯತೆ ಮುಂತಾದ ಕ್ಷೇತ್ರಗಳಲ್ಲಿ ನಡೆಯುವ ಹುನ್ನಾರ, ಕ್ಷುದ್ರತೆಗಳ ಬಗ್ಗೆ ದನಿ ಎತ್ತದೆ, ಜಾತಿವಿನಾಶದ ವಿಫಲತೆ ಹಾಗೂ ವಿಚಾರವಾದಿಗಳ ಪರದಾಟವನ್ನು ಕಾದಂಬರಿಯು ಪ್ರತಿಬಿಂಬಿಸುತ್ತದೆ. ಹೀಗೆ ಒಕ್ಕಲಿಗರು, ಹೊಲೆಯರು, ಮುಸಲ್ಮಾನರು, ಕ್ರಿಶ್ಚಿಯನ್ನರು ಇತ್ಯಾದಿ ಜಟಿಲತೆಯನ್ನು ಸಮಾಜದ ಅಶಾಂತಿ, ರಾಜಕೀಯ, ಸಾಮಾಜಿಕತೆ, ಸಾಂಸ್ಕೃತಿಕ ಸಂಬಂಧಗಳನ್ನು ಕಾದಂಬರಿ ವಿಶ್ಲೇಷಿಸುತ್ತವೆ. ಇಲ್ಲಿ ಉಪನ್ಯಾಸಕ ರಾಮಚಂದ್ರರ ಮಾರ್ಗದರ್ಶನದಲ್ಲಿ ಜಾತಿವಿನಾಶ ಸಂಘ ವಿಚಾರವಾದಿಗಳ ಸಂಘದ ಕೆಸರೂರಿನ ಯುವಕರು ಸಾಮಾಜಿಕ ಪರಿವರ್ತನೆಗೆ ಆಶಿಸಿದರೂ ಹಿರಿಯ ತಲೆಮಾರಿನವರ ಸ್ವಾರ್ಥದಿಂದಾಗಿ ಎಲ್ಲಾ ರೂಪರೇಷೆಗಳು ಮಣ್ಣುಗೂಡುತ್ತವೆ. ದಲಿತರನ್ನು ಮತವಾಗಿ ಮಾತ್ರ ಗುರುತಿಸುವ ಕೃಷ್ಣೇಗೌಡ, ಆಚಾರಿ, ಸುಲೇಮಾನ್ ಬೇರಿಯಂತವರು ದೈಹಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ನಿರಂತರವಾಗಿ ಶೋಷಿಸಿದ್ದಾರೆ. ದಲಿತರ ಶಾಂತಿಯ ಕಟ್ಟೆಯೊಡೆದು ಅವರು ಮತಾಂತರ ಹೊಂದಲು ಬಯಸುವುದು ಅಸಹಾಯಕತೆಯ ಸಂಕೇತವಾಗಿದೆ. ಗೋಸಾಯಿ ಸಮುದಾಯದ ಹೆಣ್ಣುಗಳು ಭೋಗದ ವಸ್ತುಗಳೆಂದು ತಿಳಿದ ಆಚಾರಿ, ಕೃಷ್ಣೇಗೌಡರು ತಮ್ಮ ಸ್ಥಾನ ಭದ್ರತೆಗಾಗಿ ಅವರಿಗೆ ಗೋಮಾಳದಲ್ಲಿ ನೆಲೆಯೊದಗಿಸಲು ಮುಂದಾಗುತ್ತಾರೆ. ವರ್ಗ, ವರ್ಣ, ಜಾತೀಯತೆಯ ಸಂಘರ್ಷ, ನಿಗೂಢ-ಜಗತ್ತಿನ ಕೈವಾಡದಿಂದ ಕೆಸರೂರಿನ ಲಂಟಾನಕ್ಕೆ ಬೆಂಕಿಬೀಳುತ್ತದೆ. ಕೊಲೆ, ಪ್ರತಿಕೊಲೆ, ದೊಂದಿ ಆರಂಭವಾಗಿ ಊರಿಗೆ ಊರೆ ನಾಶವಾದಾಗ ಕೆಸರೂರಿನ ಸಂಸ್ಕೃತಿ ಮೌಲ್ಯ ಎಲ್ಲರಿಗೂ ಅರಿವಾದರೂ ಕಾಲ ಮೀರಿರುತ್ತದೆ. "ಕೆಸರೂರಿನ ಸಮಾಜ ಸುಟ್ಟುಹೋಗಿ ಹೊಸ ಜೀವಪರವಾದ, ಜಾತ್ಯಾತೀತವಾದ ಸಮಾಜ ಮೂಡುತ್ತದೆಂಬ ಆಶಾವಾದ ಇಲ್ಲಿ ಧ್ವನಿತವಾಗುತ್ತದೆ. ಇಡೀ ಕೆಸರೂರಿಗೆ ಬೆಂಕಿಬಿದ್ದು ಬೆಂದು ಹೋಗುತ್ತಿರುವಾಗ ಆ ದಟ್ಟ ಕಪ್ಪನೆಯ ಹೊಗೆಯಿಂದ ತಪ್ಪಿಸಿಕೊಳ್ಳುವವರು ರಫಿ ಮತ್ತು ಜಯಂತಿ ಮಾತ್ರ. ಇಲ್ಲಿ ಪಾರಂಪರಿಕ ಕುಟುಂಬದ ವಿರುದ್ಧ ಎದುರುನಿಲ್ಲುವ ಮತ್ತು ಪಾರಂಪರಿಕ ಸಮಾಜದ ಹಿಂಸೆಯನ್ನು ನಿರಾಕರಿಸುವ ಜೀವಗಳು ಹೊಸ ಸಮಾಜದ ನಿರ್ಮಾಣಕ್ಕೆ ಪ್ರತಿನಿಧಿಗಳಾಗುವುದು

ಮುಖ್ಯ ಪ್ರತಿಮೆಯಾಗಿದೆ."[೪೨] ಎಂಬ ಕರೀಗೌಡ ಬೀಚನಹಳ್ಳಿಯವರ ಅಭಿಪ್ರಾಯ ಆಶಾವಾದವನ್ನು ಮೂಡಿಸುತ್ತದೆ.

ಕ್ರಿಯಾಶೀಲ ಬದುಕಿನ ಮೂಲಕವೇ ಬದುಕನ್ನು ಆವರಿಸಿರುವ ಪರಸ್ಪರ ಸಂಬಂಧವುಳ್ಳ ಜಾತಿ, ಮತ, ವರ್ಗ, ಬದುಕು ಹೀಗೆ ವಿವಿಧ ಅಂಶಗಳ ಮಥನ ತೇಜಸ್ವಿ ಅವರ ಬಹುಮುಖ್ಯ ಕಾಳಜಿಯಾಗಿದ್ದು ಸಂಶೋಧನೆಯ ನಂತರದ ಸ್ಥಾನಪಡೆದಿದೆ. ಬದುಕಿನ ವಿವಿಧ ಸಾಧ್ಯತೆ, ಪ್ರೀತಿ-ಉತ್ಸಾಹ ಆಶಾವಾದ ಮುಖ್ಯವೆಂದು ಭಾವಿಸುವ ಲೇಖಕರು ಸಮಾನತೆಯ ಸಮಾಜಕ್ಕಾಗಿ ಆಶಿಸಿದ್ದಾರೆ. ಈ ರೀತಿಯೂ ವ್ಯಕ್ತಿ ವಿಶಿಷ್ಟತೆಯನ್ನು ನಿರೂಪಿಸಿರುವ ಕೃತಿಯ ಮೌಲಿಕತೆ ಬದುಕಿಗೆ ಪೂರಕವಾಗಿ ಮೂಡಿಬಂದಿರುವುದನ್ನು ಕಾಣಬಹುದು. ಆಧುನಿಕತೆಯ ಭರಾಟೆಯಲ್ಲಿ 'ಜುಗಾರಿಕ್ರಾಸ್' ದೇವಪುರದಂತಹ ಗ್ರಾಮಗಳು ಹತ್ತು ಹಲವು ಸೌಕರ್ಯಗಳ ಜೊತೆಗೆ ನೂರಾರು ಸಮಸ್ಯೆಗಳನ್ನು ತನ್ನ ತೆಕ್ಕೆಯಲ್ಲಿರಿಸಿಕೊಂಡು ಮುನ್ನುಗ್ಗುತ್ತಿರುವ ಸಾಮಾಜಿಕ ಚಿತ್ರಣವನ್ನು ತೇಜಸ್ವಿಯವರು 'ಜುಗಾರಿಕ್ರಾಸ್' ಕಾದಂಬರಿಯಲ್ಲಿ ವಿವರಿಸಿದ್ದಾರೆ. ಕಾದಂಬರಿಕಾರರ ವೈಚಾರಿಕ ಜಗತ್ತಿನೊಳಗೆ ವ್ಯಕ್ತಿ ಸಮಾಜಗಳ ರಾಜಕೀಯ, ಸಾಮಾಜಿಕ, ನೈತಿಕ ತಾತ್ವಿಕ ಸಂಬಂಧಗಳ ಸೆಣಸಾಟವಿದೆ. ಅನುಭವಕಕ್ಷೆಯಲ್ಲಿ ಚಲಿಸುವ ಯಾಂತ್ರಿಕ ಹಾಗೂ ನೈತಿಕ ಬಿಕ್ಕಟ್ಟುಗಳನ್ನು ಅನ್ವೇಷಿಸುವಲ್ಲಿ ಮಾನವೀಯತೆ ಮೈತಳೆದು ನಿಂತಿದೆ. ಅನುಭವ ಪ್ರಪಂಚ ಬದುಕಿನ ಸೀಮಿತ ಎಲ್ಲೆಯ ಪ್ರಜ್ಞೆಯನ್ನು ವಿಸ್ತರಿಸಿ ಹೊಸ ದೃಷ್ಟಿಕೋನವೊಂದನ್ನು ತೆರೆದಿಡುತ್ತದೆ. ತೇಜಸ್ವಿಯವರು ವ್ಯಕ್ತಿವಿಶಿಷ್ಟತೆಯ ನೆಲೆಗಳನ್ನು ನಿರೂಪಿಸುತ್ತಾರೆ. ವಿಶಿಷ್ಟಬಗೆಯ ಸಾಹಸ ಪ್ರವೃತ್ತಿಯ ದಂಪತಿಗಳಾದ ಗೌರಿ ಮತ್ತು ಸುರೇಶ್ ಅವರು ಭೀಕರತೆಯ ಜಗತ್ತಿನ ಉಕ್ಕಿನ ಬೇಲಿಗಳನ್ನು ಜಿಗಿದು, ಅಮೂರ್ತ ಲೋಕದ ಬಲೆಯಿಂದ ಬಿಡಿಸಿಕೊಳ್ಳಲು ತೊಳಲಾಡುತ್ತಾರೆ. ಮಾನಸಿಕ ಅಸ್ತವ್ಯಸ್ತತೆಯಿಂದ ಕೂಡಿರುವ ವ್ಯವಸ್ಥೆಯಲ್ಲಿ ವರ್ತಮಾನದ ಪ್ರತ್ಯಯಗಳ ಮೂಲಕ ಭವಿಷ್ಯದ ಹೊಸ ಮನಃಸ್ಥಿತಿಯ ಚಿಂತನೆಗಳು ಮೂಡಿರುವುದನ್ನು ಕಾಣಬಹುದು.

ತೇಜಸ್ವಿಯವರು ಕಾಡನ್ನು ಆವರಿಸಿರುವ ಭೂಗತಲೋಕವೊಂದರ ಪರಿಚಯವನ್ನು ಈ ಕಾದಂಬರಿಯಲ್ಲಿ ಮಾಡಿಕೊಡುತ್ತಾರೆ. "'ಜುಗಾರಿಕ್ರಾಸ್' ಎಂಬುದು ಒಂದು ಅಂಕಿತನಾಮ ಸಾವಿರಾರು ಚದರಮೈಲಿಯ ವಿಸ್ತಾರವಾದ ಸಹ್ಯಾದ್ರಿ ಅರಣ್ಯದ ನಡುವೆ ಗೋಚರಿಸುವ ನಾಲ್ಕಾರುದಾರಿ ಕೂಡುವ ಸರ್ಕಲ್ಲನ್ನೇ ಜುಗಾರಿಕ್ರಾಸ್ ಎಂದು ಕರೆಯಲಾಗಿದೆ. ಈ ಕೂಡು ರಸ್ತೆಯಲ್ಲಿ ಧರ್ಮಸ್ಥಳ, ಸುಬ್ರಹ್ಮಣ್ಯ, ಕೊಲ್ಲೂರು, ಉಡುಪಿ, ಕಾರ್ಕಳ ಮುಂತಾದಕಡೆ ಹೋಗುವ ಕವಲುದಾರಿಗಳಿವೆ. ಈ ಕ್ರಾಸಿನಲ್ಲಿಯೇ ಒಂದು ಫಾರೆಸ್ಟ್ ಚೆಕ್‌ಪೋಸ್ಟ್ ಇದ್ದು ಇದರ ಉಸ್ತುವಾರಿಯನ್ನು ಫಾರೆಸ್ಟರ್ ಇಕ್ಬಾಲ್ ಮತ್ತು ಗಾರ್ಡ್ ಗುರುಪ್ಪ ನೋಡಿಕೊಳ್ಳುತ್ತಾರೆ.

೪೨. ಡಾ. ಕರೀಗೌಡ ಬೀಚನಹಳ್ಳಿ, 'ವ್ಯಷ್ಟಿ ಮತ್ತು ಸಮಷ್ಟಿ', ಪುಟ. ೬೭, ೧೯೯೧.

ಹೋಗಿಬರುವ ವಾಹನಗಳನ್ನು ನಿಲ್ಲಿಸಿ ತಪಾಸಣೆ ಮಾಡುವ ನೆಪದಲ್ಲಿ ಲಂಚಕೇಳುವುದು ಇವರ ಗುರಿಯಾಗಿರುತ್ತದೆ."[೪೩] ಜುಗಾರಿಕ್ರಾಸ್ ಈಗದು ಆಧುನಿಕತೆಗೆ ಸಿಲುಕಿ ನಾನಾ ಕಾರಣಗಳಿಂದಾಗಿ ಜಗತ್ತಿನ ಅನೇಕಭಾಗಗಳಿಗೆ ಕನೆಕ್ಷನ್‌ಕೊಡುವ ತಾಣವಾಗಿ ಬಿಟ್ಟಿದೆ. ಸುತ್ತುಮುತ್ತಲಿನ ದೇವಪುರ, ಮೇದರಹಳ್ಳಿ ಇತ್ಯಾದಿ ಊರುಗಳ ಜನರ ಬದುಕು ಒಂದು ಕಾಲಕ್ಕೆ ಸರಳವಾಗಿದ್ದು ನಿರಾತಂಕವಾದುದು. ಈಗ ಆತಂಕ ತಲ್ಲಣಗಳಿಂದ ಕೂಡ ಸಂಕೀರ್ಣವಾಗಿಬಿಟ್ಟಿದೆ. ಜುಗಾರಿಕ್ರಾಸ್‌ನ ಪಕ್ಕದ ದೇವಪುರದಲ್ಲಿ ಒಂದು ಕಾಲಕ್ಕೆ ಏಲಕ್ಕಿ ವ್ಯಾಪಾರ ಬಿಟ್ಟರೆ ಹೆಸರು ಹೇಳುವುದಕ್ಕೂ ಮತ್ತೊಂದು ವಹಿವಾಟು ಇರಲಿಲ್ಲ. ಆದರೆ ದೇವಪುರದ ಅದೃಷ್ಟವೋ ದುರಾದೃಷ್ಟವೋ ಬೆಂಗಳೂರಿನಿಂದ ಮಂಗಳೂರಿಗೆ ಹೋಗುವ ರೈಲುಮಾರ್ಗದಲ್ಲಿ ಆಗಿದ್ದುದು ಮಂಗಳೂರಿಗೆ ಎಸ್.ಟಿ.ಡಿ. ಕನೆಕ್ಷನ್ ಕೊಡಲು ದೇವಪುರದ ಪಕ್ಕದ ದಿಣ್ಣೆಯಲ್ಲಿ ಎಸ್.ಟಿ.ಡಿ. ಗೋಪುರ ನಿರ್ಮಾಣವಾದದ್ದು – ಹೀಗೆ ಆಕಸ್ಮಿಕಗಳು ಮತ್ತು ವಿಶಿಷ್ಟತೆಗಳು ಸೇರಿ ದೇವಪುರದ ಸ್ಥಿತಯೇ ಬದಲಾಯಿಸಿಬಿಟ್ಟಿತು. ಫೋನುಬರುವ ಮೊದಲು ಎಲ್ಲಾ ಸಲೀಸಾಗಿ ಸಾಗುತ್ತಿದ್ದ ವ್ಯವಹಾರ ಫೋನುಬಂದ ನಂತರ ಅನೇಕ ರೀತಿಯ ಕುತೂಹಲಗಳಿಗೆ ಕಾರಣವಾಗಿಬಿಟ್ಟಿತು. ಈ ರೀತಿಯ ಭಿನ್ನತೆಗಳು ಹಲವಾರು ಘಟನೆಗಳು ಕಾದಂಬರಿಯಲ್ಲಿವೆ. 'ಜುಗಾರಿಕ್ರಾಸ್'ನ ಒಂದೊಂದು ಅಧ್ಯಾಯವನ್ನು ಒಂದೊಂದು ಕತೆಯಂತೆ ಓದಬಹುದೆಂದು ಆರಂಭದಲ್ಲಿ ಅನ್ನಿಸುತ್ತದೆ. ಆದರೆ ನಂತರ ಓದಿನಲ್ಲಿ ಈ ಪ್ರಜ್ಞಾ ಪ್ರವಾಹದ ಆಳದಿಂದ ಸಂಚರಿಸುವ ರಭಸವೊಂದಿದ್ದು ಅದೇ ಈ ಕಾದಂಬರಿಯ ಓಟ ಮತ್ತು ಓಟದ ನಿಯಂತ್ರಕನೆಂಬುದು ಅರಿವಾಗುತ್ತದೆ. ನವ್ಯೋತ್ತರ ಜಗತ್ತಿನಲ್ಲಿ ಬದಲಾವಣೆಗೆ ಹೊರಳಬೇಕಾದ ಅನಿವಾರ್ಯತೆಗೆ 'ಜುಗಾರಿಕ್ರಾಸ್' ಒಂದು ಮಜಲನ್ನು ಸೃಷ್ಟಿಸಿದೆ ಎನ್ನಬಹುದು.

ಇಂದಿನ ಜಾಗತೀಕರಣ, ಉದಾರೀಕರಣ, ಆಧುನಿಕಮಾರುಕಟ್ಟೆ ಸಾಂಸ್ಕೃತಿಕ ಕೊಡುಕೊಳ್ಳುವಿಕೆಯಿಂದಾಗಿ ಭಾಷೆ, ಧರ್ಮ, ಜಾತಿ, ಕಲೆ, ಸಾಹಿತ್ಯ ಒಂದನ್ನು ಮತ್ತೊಂದು ಪ್ರಭಾವಿಸುತ್ತದೆ. ತೇಜಸ್ವಿ ಅವರ 'ಮಾಯಾಲೋಕ' ಕಾದಂಬರಿ ಅವೆಲ್ಲವನ್ನು ಸಮರ್ಥವಾಗಿ ಸೆರೆಹಿಡಿದಿದ್ದು ಪ್ರತಿಯೊಂದು ಘಟನೆ ದೃಶ್ಯ, ವರ್ಣನೆ, ಸಂಗತಿಗಳು ಒಂದರೊಳಗೊಂದು ಮಿಳಿತವಾಗುತ್ತಾ ಪ್ರತಿಮಾಜಗತ್ತನ್ನೇ ಸೃಷ್ಟಿಸಿದೆ. ಆಧುನಿಕ ವಿದ್ಯಾಮಾನಗಳಿಂದಾಗಿ ಹಳ್ಳಿಗಳಲ್ಲೂ ನಡೆಯುವ ಬಿಕ್ಕಟ್ಟೂ ಗೊಂದಲಗಳು ಸಂಘರ್ಷಕ್ಕೆ ಅನುವು ಮಾಡಿಕೊಟ್ಟಿದ್ದು ಎಲ್ಲವೂ ಕುತೂಹಲ, ವಿಸ್ಮಯ, ನಿಗೂಢತೆ ಮತ್ತು ವ್ಯಗ್ರತೆಯನ್ನು ಒಳಗೊಂಡಿವೆ. ಎಪ್ಪತ್ತರ ದಶಕದಲ್ಲಿ ತೇಜಸ್ವಿ 'ಹೊಸದಿಗಂತದ' ಕಡೆಗೆ ತಮ್ಮ ಕಣ್ಣು ಹಾಯಿಸಿದಂತೆ ಇಪ್ಪತ್ತೊಂದನೆ ಶತಮಾನದಲ್ಲಿ 'ಜಾಗತೀಕರಣ'ದತ್ತ ತಮ್ಮ ದೃಷ್ಟಿಹರಿಸಿದ್ದಾರೆ. ಕಾದಂಬರಿಯಲ್ಲಿ ನವ್ಯೋತ್ತರ ಸಂವೇದನೆಗಳಾದ

---

೪೩. ಡಾ. ಎಂ.ಎಚ್.ಮಹೇಶ್ವರಯ್ಯ, 'ಪೂರ್ಣಚಂದ್ರತೇಜಸ್ವಿ', ಪುಟ. ೫೨, ೨೦೦೫.

ದಲಿತ, ಬಂಡಾಯ, ಮುಸ್ಲಿಂ, ಸ್ತ್ರೀ ಸಂವೇದನೆಗಳನ್ನು ಪ್ರಬುದ್ಧವಾಗಿ ಬೆಳೆಸುತ್ತಾ ಸಾಗುತ್ತಾರೆ. 'ಮಾಯಾಲೋಕ' ಜಾಗತೀಕರಣದತ್ತ ಮುಖಮಾಡಿದೆ ಎಂದ ಮಾತ್ರಕ್ಕೆ ಅದು ಜಾತಿಜನಾಂಗ, ಪದ್ಧತಿ, ಆಚರಣೆ, ಸ್ತ್ರೀಸಂವೇದನೆ, ಬಂಡಾಯ ಮುಂತಾದವುಗಳನ್ನು ನಿರಾಕರಿಸಿದೆ ಎಂದಲ್ಲ ಇವೆಲ್ಲವುಗಳ ಮಧ್ಯೆ ಜಾತಿ-ಲಿಂಗ, ವರ್ಗಗಳನ್ನು ಮೀರಿ ಬದುಕುವ ಕಲೆಯನ್ನು ಸಹಜವಾಗಿ ಮೈಗೂಡಿಸಿಕೊಳ್ಳುವಂತೆ ಮಾಡಿದೆ. ಸತ್ಯಗಳು ಜಾತ್ಯಾತೀತ ಪರಿಸರ ನಿರ್ಮಾಣವಾಗಲು ಪ್ರತಿನಿಧಿಗಳಾಗಿದ್ದು ಬದಲಾವಣೆ ಜೊತೆಗೆ ತಲ್ಲಣಗಳ ವಿಶ್ವರೂಪವನ್ನು ಕೃತಿ ದರ್ಶನಮಾಡಿಸುತ್ತದೆ. ಊರಳ್ಳಿ ವಾತಾವರಣದಲ್ಲಿ ಜಾತಿಗಿಂತ ವಿಶ್ವಾಸ ಮುಖ್ಯ. ಮೇಲ್ಜಾತಿಯ ಅಣ್ಣಪ್ಪ, ದಲಿತರ ಮಂಜ, ಭಂಢಾರಿಬಾಬು, ಮುಸ್ಲಿಂ ಜಲೀಲ ಮುಂತಾದವರೊಂದಿಗೆ ಆತ್ಮೀಯಸ್ನೇಹ ಇರಿಸಿದ್ದವನು. ಊರಿನ ಒಕ್ಕಲಾಟದ, ಕೃಷಿಯ ಸಮಸ್ಯೆಗಳನ್ನು ಪರಸ್ಪರ ಸಹಕಾರಗಳಿಂದ ಪರಿಹರಿಸಿಕೊಳ್ಳುವ ಮನೋಭಾವದವರು. "ಊರಳ್ಳಿ ಗೌಡರು ಬಿಲ್ಲವರು ಅಪ್ಪಣ್ಣನ ಜೊತೆ ಸಮಾಲೋಚನೆ ಮಾಡಿ ಹಕ್ಕಿಪಿಕ್ಕಿಯವರಿಗೆ ಹೇಳಿ ಹುಂಡುಕೋಳಿ ಹಿಡಿಸಿಬಿಟ್ಟರೆ ಮತ್ತೇ ತಮ್ಮ ಜಮೀನುಗಳಲ್ಲಿ ಭತ್ತದ ಕಣಜಗಳಾಗುತ್ತವೆ ಎಂದು ತೀರ್ಮಾನಿಸಿದರು".[೪೪] ಹೀಗೆ ಹಕ್ಕಿಪಿಕ್ಕಿಯವರು ಸರಾಯಿ, ಮಾಂಸ ಹಾಗೂ ಭತ್ತದ ಆಸೆಯಿಂದ ಒಂದು ಮರಿಯನ್ನು ಬಿಡದೆ ನಾಮಾವಶೇಷ ಮಾಡಿದ್ದರಿಂದ ಸಿಟ್ಟಿಗೆದ್ದ ನಿರೂಪಕ ಅವರನ್ನು ತರಾಟೆಗೆ ತೆಗೆದುಕೊಳ್ಳಲು ಗುಡಿಸಲು ಬಳಿಗೆ ಹೋದಾಗ ಅವರ ಮಕ್ಕಳ ಸ್ಥಿತಿ ನೋಡಿ ಮರುಗುತ್ತಾನೆ. ಅವರ ದೈನ್ಯಾವಸ್ಥೆ, ಕೃಶಶರೀರ, ಹರಕಲು ಬಟ್ಟೆ ಇವನ್ನೆಲ್ಲಾ ನೋಡಿ ನನಗೆ ಅವರ ಮೇಲಿನ ಸಿಟ್ಟೆಲ್ಲಾ ಸಂಪೂರ್ಣ ಇಳಿದುಹೋಯ್ತು ಅವರ ಸ್ಥಿತಿ ನಾಶವಾಗುತ್ತಿರುವ ವನ್ಯಜೀವಿಗಳಿಗಿಂತ ಭಿನ್ನವಾಗೇನೂ ನನಗೆ ಕಾಣಲಿಲ್ಲ. ಅವರ ಮೇಲೆ ಮುಯ್ಯಿ ತೀರಿಸಲು ಹೊರಟ ನನ್ನ ಬಗ್ಗೆ ನನಗೆ ಜುಗುಪ್ಸೆಯಾಯ್ತು ಎಂದು ಜಾತಿ ಮತ ಮೀರಿದ ಮಾನವೀಯತೆಯಿಂದ ಅವರ ಸ್ಥಿತಿಗತಿಗಳನ್ನು ನಿರೂಪಿಸಿದ್ದಾರೆ. ಜಾತಿಮತಗಳನ್ನು ಮೀರಿ ಊರಳ್ಳಿ, ಮಕ್ಕಿಗದ್ದೆ, ಗೊಂದಲಗೇರಿ ಜನ ದಲಿತ ಮಾರಪ್ಪನನ್ನು ಎಂ.ಎಲ್.ಎ. ಮಾಡಿದ್ದರು. ಆತನ ಅಧಿಕಾರ ವ್ಯಾಪ್ತಿ ಅರಿತು ಆತನೊಂದಿಗೆ ಸಹಕರಿಸುತ್ತಾ ಭಾಂದವ್ಯದ ವಾತಾವರಣ ಸೃಷ್ಟಿಸಿದ್ದರು. ಹೀಗೆ ತೇಜಸ್ವಿಯವರು ವ್ಯಕ್ತಿವಿಶಿಷ್ಟತೆಯನ್ನು ಇಲ್ಲಿ ತರುತ್ತಾರೆ.

ತೇಜಸ್ವಿಯವರು ಸ್ತ್ರೀ ಸಮುದಾಯವನ್ನು ಬೌದ್ಧಿಕ ಕಸರತ್ತಿಗೆ ಒಳಪಡಿಸದೆ ಸಾಮಾಜಿಕವಾಗಿ ಆರ್ಥಿಕವಾಗಿ ಕುಟುಂಬವನ್ನು ಸದೃಢಗೊಳಿಸುವ ವ್ಯಕ್ತಿಗಳಾಗಿ ಗುರುತಿಸುತ್ತಾರೆ. ಜಾತೀಯತೆ ಮೀರಿ ವರ್ತಿಸುವ ಸ್ತ್ರೀಯರ ಮತಾಂತರಕ್ಕೆ ಭಂಡಾರಿಬಾಬು ತಿರುಗಿದನೆಂದು ತಿಳಿದಾಗ ಆತನ ಹೆಂಡತಿ ಉಗ್ರರೂಪ ತಳೆಯುತ್ತಾಳೆ. ಬಾಯಮ್ಮ ತನ್ನ ಆರ್ಥಿಕತೆಗಾಗಿ

೪೪. ಕೆ.ಪಿ.ಪೂರ್ಣಚಂದ್ರತೇಜಸ್ವಿ, 'ಮಾಯಾಲೋಕ-೧', ಪುಟ. ೧೧. ೨೦೦೫.

ಬಾಯಿಬುಡಕಿಯಾಗಿ ಪರಿವರ್ತಿತಳಾಗಿರುತ್ತಾಳೆ. ಲೇಖಕರು ಕಾದಂಬರಿಯಲ್ಲಿ ಸ್ತ್ರೀಪಾತ್ರಗಳಿಗೆ ಉತ್ತಮ ಸ್ಥಾನಮಾನವನ್ನು ನೀಡಿರುವಂತೆ ಮುಸ್ಲಿಂ ಸಂವೇದನೆಗಳನ್ನು ಅಷ್ಟೆ ಸೊಗಸಾಗಿ ಹೊರಹಾಕುತ್ತಾರೆ. ಜಲೀಲ್ ಸಾಬಿಯೊಂದಿಗೆ ಅಣ್ಣಪಣ್ಣ ವ್ಯವಹರಿಸಿದರೆ ಫಾತಿಮಾಳ ಬಜ್ಜಿ ವ್ಯಾಪಾರ ಸಾಂಗವಾಗಿ ನಡೆಯುವಂಥ ವಾತಾವರಣ ಊರಳ್ಳಿಯಲ್ಲಿದೆ. ಹೀಗೆ ತೇಜಸ್ವಿ ವ್ಯಕ್ತಿ ವೈಶಿಷ್ಟತೆಯನ್ನು ಅದರ ನಿರೂಪಣೆಯೊಳಗೆ ಈ ಕಾದಂಬರಿಯಲ್ಲಿ ಭಿತ್ತರಿಸಿದ್ದಾರೆ. ಇನ್ನು ಕಥಾಸಂಕಲನಗಳಲ್ಲಿ ಹೇಗೆ ವ್ಯಕ್ತವಾಗಿದೆ ಎಂಬುದನ್ನು ನೋಡುವುದಾದರೆ ತಮ್ಮ ಮೊದಲ ಹೆಜ್ಜೆಗಳಲ್ಲಿ ತೇಜಸ್ವಿ ಸಂಕೇತದ ಮೂಲಕವೇ 'ಹುಲಿಯೂರಿನಸರಹದ್ದು' ಕಥಾಸಂಕಲನದಲ್ಲಿ ವ್ಯಕ್ತವಾದ ಆಶಯಗಳ ಬಗೆಯನ್ನು ನೋಡುವುದಾದರೆ ವರ್ತಮಾನದ ಸಂವೇದನೆಗಳ ಸ್ವರೂಪ ಯಾವುದು? ಎಂಬ ಪ್ರಶ್ನೆಗೆ ಯಾವೊಂದು ಕಥೆಯೂ ನೇರವಾಗಿ ಉತ್ತರ ಒದಗಿಸದು. ಬದಲಿಗೆ ಅವರ ಬರವಣಿಗೆಯ ಕೇಂದ್ರದಲ್ಲಿಯೇ ವರ್ತಮಾನದ ತಳಮಳಗಳು ಬದುಕಿನ ಪ್ರಶ್ನೆಗಳು ಕಳೆದುಕೊಳ್ಳುತ್ತಿರುವ ನಮ್ಮ ವ್ಯಕ್ತಿತ್ವದ ವಿಶಿಷ್ಟತೆಗಳು, ಒಂದರೊಡನೊಂದು ಸೆಣಸಾಡುತ್ತಿರುವ ಚಿತ್ರಗಳು ಗೋಚರಿಸುತ್ತವೆ. ಸಂವೇದನೆ ಎನ್ನುವುದು ಒಂದು ಕ್ರಿಯೆಯಾಗಿ ಗೋಚರವಾಗುವುದು ನಮ್ಮ ಚಿಂತನೆ ಮತ್ತು ಅನುಭವಗಳು ಏಕೀಕರಣಗೊಂಡಾಗ ನಮ್ಮ ಪ್ರಜ್ಞೆಯ ಮಹತ್ವದ ಭಾಗವಾದ ಸಂವೇದನೆ ಬದುಕಿನ ಅನೇಕ ಸ್ಥರಗಳಲ್ಲಿ ವ್ಯಕ್ತವಾಗುತ್ತಾ ಹೋಗುತ್ತದೆ. ತೇಜಸ್ವಿ ವರ್ತಮಾನದ ಮೇಲೆ ನಿಂತು ಬದುಕನ್ನು ತಾವು ಗ್ರಹಿಸಿದಂತೆ ಬಿಚ್ಚಿಡಲು ಪ್ರಯತ್ನಿಸಿದ್ದಾರೆ. ಅವರ ಕಥೆಗಳಲ್ಲಿ ಬದುಕಿನ ನಿಗೂಢತೆ ಮತ್ತು ಸರಳತೆಗಳ ಮುಖಾಮುಖಿಗಳು ಎದುರಾಗುವುದನ್ನು ಗಮನಿಸಬಹುದು. 'ಲಿಂಗಬಂಧ' ಕಥೆ ಭಯವನ್ನು ಸ್ಥಾಯಿಯಾಗಿಸಿಕೊಂಡ ಕಥೆಯಾಗಿದೆ. ಚಿಕ್ಕಮಕ್ಕಳಲ್ಲಿ ಭಯದ ಕಲ್ಪನೆ ಹೇಗೆ ಮೊಳಕೆಯೊಡೆಯುತ್ತದೆ, ಚಿಗುರುತ್ತದೆ, ಬೆಳೆಯುತ್ತದೆ, ಬೇರೂರುತ್ತದೆ ಎಂಬುದನ್ನು ಕಥಾಹಂದರದ ಮೂಲಕ ಮನೋವೈಜ್ಞಾನಿಕವಾಗಿ ತೇಜಸ್ವಿಯವರು ಚಿತ್ರಿಸಿದ್ದಾರೆ. ಗೌಡರ ಆಳು ಲಿಂಗ ಕಿಟ್ಟಿಗೆ ಹೇಳಿದ ಕಥೆಯೇ ಹುಡುಗನಾದ ಕಿಟ್ಟಿ ಮತ್ತು ಅವನ ತಂಗಿ ಸುಭದ್ರೆಯಲ್ಲಿ ಉಂಟುಮಾಡುವ ಭಯ ತಮ್ಮನಾದ ಸದಾನಂದನನ್ನು ಅನುಮಾನದಿಂದ ನೋಡುವ ಅವರ ಭ್ರಮೆ ಸ್ವಾರಸ್ಯಕವಾಗಿ ಈ ಕಥೆಯಲ್ಲಿ ಚಿತ್ರಿತವಾಗಿದೆ.

'ಗುಡುಗುಹೇಳಿದ್ದೇನು'? ಎಂಬುದು ಮಲೆನಾಡಿನ ಹಿನ್ನೆಲೆಯಲ್ಲಿಯೇ ಬರೆದ ಮತ್ತೊಂದು ಸ್ವಾರಸ್ಯಕರವಾದ ಕಥೆ ಇಬ್ಬರು ಸೋಮಾರಿ ಅಣ್ಣ–ತಮ್ಮಂದಿರು ತಮ್ಮ ಅಜ್ಜಿಯ ದುರಂತ ಸಾವಿಗೆ ಕಾರಣರಾಗುವ ವಸ್ತು ಈ ಕಥೆಯಲ್ಲಿದೆ. ಆದರೆ ಈ ದುರಂತತೆಯ ತೀವ್ರತೆ ಕಥೆಯಲ್ಲಿ ಸಫಲವಾಗಿಲ್ಲ. ಈ ಕಥೆಯಲ್ಲಿ ಬರುವ ಸೋಮಾರಿ ಅಣ್ಣ–ತಮ್ಮಂದಿರುಗಳಾದ ಸೋಮ ಮತ್ತು ಲಕ್ಕರು ಚಿಕ್ಕನೂರು ಸುಬ್ಬೇಗೌಡರ ಒಕ್ಕಲುತನವನ್ನು ಬಿಟ್ಟು ಕಡಿದಾಳು ಶಾಮಣ್ಣಗೌಡರ ಬಳಿ

ಹೊಗುವ ಸಿದ್ಧತೆಯಲ್ಲಿರುವಾಗ ಮಂಜಪ್ಪನ ಅಪ್ಪ ಬಸ್ಸಿಗೆ ಸಿಕ್ಕಿ ಸತ್ತದ್ದಕ್ಕೆ ಕೋರ್ಟು ಎರಡುನೂರು ರೂಪಾಯಿಗಳ ಪರಿಹಾರ ಕೊಡಿಸಿದ ಸಂಗತಿಯಿಂದ ಪ್ರೇರಣೆಗೊಂಡು ತಮ್ಮನ್ನು ಸಾಕಿದ್ದ ಅಜ್ಜಿಯನ್ನು ಕಾರಿನ ಗಾಲಿಗೆ ನೂಕಿ ಎರಡುನೂರು ರೂಪಾಯಿ ಪಡೆಯಲು ಮುಂದಾಗಿ ಪರಿಹಾರ ಸಿಗದೆ ಶಪಿಸಿಕೊಳ್ಳುವ ಈ ಕಥೆಯ ನಿರೂಪಣಾ ಶೈಲಿಯಾಗಿದೆ. 'ಪಂಜ್ರೋಳ್ಳಿ ಪಿಶಾಚಿಯ ಸವಾಲು' ಕಥೆಯು ಹಾಸ್ಯ, ಮನಸ್ತಾಪ, ಸೋಮಾರಿತನ, ಕಳ್ಳತನ ಮುಂತಾದ ಸುಂದರ ಚಿತ್ರಣಗಳ ಪ್ರಪಂಚವನ್ನು ಈ ಕಥೆಯಲ್ಲಿ ಕಾಣಬಹುದು. ಪರೀಕ್ಷೆಗೆಂದು ನಡುರಾತ್ರಿಯವರೆಗೂ ಎಚ್ಚರದಿಂದ ಓದುತ್ತಿರುವ ವಿದ್ಯಾರ್ಥಿಗಳು ಅಜ್ಜಿಯ ಮನೆಗೆಹೋಗಿ ಕಾಫಿಯನ್ನು ಕದ್ದು ಬೇಸ್ತುಬಿದ್ದ ಪ್ರಸಂಗ ಈ ಕಥೆಯವಸ್ತು. ಇಲ್ಲಿ ರಂಗಪ್ಪನ ಪ್ರಜ್ಞೆಯ ಮೂಲಕ ಕಥೆಯನ್ನು ನಿರೂಪಿಸಲಾಗಿದೆ. ಕಥೆಯಲ್ಲಿ ರಂಗಪ್ಪ, ಎಡ್ಡಿ, ಶಾಮಣ್ಣ ಈ ಮೂವರು ಕಾಫಿ ಕದಿಯಲು ಹೋಗುತ್ತಾರೆ. ಎಡ್ಡಿ ಕದ್ದ ಕಾಫಿಯನ್ನು ಸ್ವೀಕರಿಸುವುದಿಲ್ಲ. ಕದ್ದಪಾಲು ಬಹಳ ಸುಲಭವಾಗಿ ರಂಗಪ್ಪನಿಗೆ ದಕ್ಕಿದ್ದರ ಬಗ್ಗೆ ಎಡ್ಡಿ ಮತ್ತು ನಿರೂಪಕನಿಗೆ ಅಸಮಾಧಾನ. ಆದರೆ ತಾವು ಕದ್ದುತಂದ ಡಬ್ಬಿ ತಮ್ಮ ಮಾವನ ಮನೆಯ ಆಳುಗಳು ಕಕ್ಕಸಿಗೆ ನೀರು ತೆಗೆದುಕೊಂಡು ಹೋಗಲು ಇಟ್ಟುಕೊಂಡಿದ್ದು ಎಂದು ಗೊತ್ತಾದಾಗ ಒಂದು ರೀತಿ ಅಸಹ್ಯ ಭಾವನೆ ಅವರಲ್ಲಿ ಮೂಡುತ್ತದೆ. ಅಂತಿಮವಾಗಿ ಕಳ್ಳತನ ಮಾಡಿದವರಿಗೆ ಪಂಜ್ರೋಳ್ಳಿ ಪಿಶಾಚಿ ಸುಮ್ಮನೆ ಬಿಡುವುದಿಲ್ಲ ಎಂಬ ಭಯದ ನಂಬಿಕೆಯಲ್ಲಿ ಕಥೆಯು ಮುಗಿಯುತ್ತದೆ. ವ್ಯಕ್ತಿವಿಶಿಷ್ಟತೆಯ ಮೂಲಕ ಬದುಕಿನ ಅಸಂಬದ್ಧತೆಯ ವಿರುದ್ಧ ಹೋರಾಡುವ ಆಸಕ್ತಿಯ ಎಳೆಯೊಂದು ಈ ಕಥೆಯ ಪ್ರಮುಖ ಧ್ವನಿಯಾಗಿದೆ.

'ಗಾಂಧೀಜಿ ದೆಸೆಯಿಂದ' ಕಥೆಯ ನಾಯಕ ಒಬ್ಬ ಪ್ರೌಢಶಾಲಾ ವಿದ್ಯಾರ್ಥಿ ಗಾಂಧೀಜಿಯಂತಾಗಲಿ ಎಂದು ಮೋಹನ್‌ದಾಸ್ ಎಂಬ ಹುಡುಗನಿಗೆ ಹೆಸರಿಟ್ಟಿರುತ್ತಾರೆ. ರಜಾದಿನ ಗಾಂಧೀಜಿಯ ಪುಸ್ತಕಗಳನ್ನು ಓದುತ್ತಿರುತ್ತಾನೆ. ಆದರೆ ಮನೆಯಲ್ಲಿ ಅವನ ತಂದೆಗೆ ಅಸಾಧ್ಯವಾದ ಜ್ವರ, ಶೀತ, ನೆಗಡಿ, ಕೆಮ್ಮು, ತಾಯಿ ತೀರ್ಥಹಳ್ಳಿಗೆ ಹೋಗಿ ತಮ್ಮ ಪರಿಚಿತ ಡಾಕ್ಟರ್‌ರಿಂದ ಔಷಧತರಲು ಚೀಟಿ ಬರೆದು ಕಳಿಸುವಳು. ಮಾತುಮಾತಿಗೆ ಹೊಡೆಯುವ ಅವ್ವ, ಸುಳ್ಳಾಡುವ ತಂಗಿ ಸುಶೀಲ, ರೇಗಾಡುವ ಅಪ್ಪ, ಇವರನ್ನು ನೆನೆದು ಮೋಹನದಾಸನಿಗೆ ಅಸಾಧ್ಯ ಸಿಟ್ಟು ತೀರ್ಥಹಳ್ಳಿಗೆ ಬರುವ ಹಾದಿಯಲ್ಲಿ ಕೈಯಲ್ಲಿದ್ದ ಚೀಟಿ ಕಳೆದುಹೋಗುತ್ತದೆ. ಮಿತ್ರನ ತೆರಳಿ ಅಲ್ಲಿಂದ ತನ್ನ ತಂದೆಗೆ ಗಾಂಧೀಜಿ ರೀತಿ ಸತ್ಯವನ್ನೇ ತಿಳಿಸಬೇಕೆಂದು ನಿರ್ಧರಿಸಿ ತಾನು ಮಾಂಸ ಮಧ್ಯಗಳ ಸೇವನೆ ಮಾಡಿದ್ದರಿಂದ ಹಿಡಿದು, ಪೆನ್ಸಿಲ್ ಕದ್ದಿದ್ದು, ಸುಳ್ಳು ಹೇಳಿದ್ದು ಎಲ್ಲವನ್ನು ಪತ್ರದಲ್ಲಿ ಬರೆದು ಅಂಚೆಗೆ ಹಾಕುತ್ತಾನೆ. ಎರಡು ದಿನಬಿಟ್ಟು ಮನೆಗೆ ಮರಳಿದಾಗ ಅವನ ಪತ್ರ ಓದಿದ್ದ ತಂದೆ ಸಿಟ್ಟಿನ ಮುದ್ದೆಯಾಗುತ್ತಾನೆ. ಮಗನ ಹವ್ಯಾಸಗಳಿಂದ ದಿಗಿಲುಗೊಂಡಿದ್ದ ತಂದೆ

ಹತಾಶನಾಗುತ್ತಾನೆ. ಮೋಹನನ ಮುಗ್ಧ ಪ್ರಾಮಾಣಿಕತೆಯು ಆತ ಗಾಂಧೀಜಿ ಕಥೆ ಓದಿದ್ದರ ಪ್ರಭಾವದಿಂದ ಹೊರಗೆ ಬಂದಂತಿತ್ತು. ಸತ್ಯ ಹೇಳಿ ಸಂಕಟಕ್ಕೆ ಸಿಲುಕಿಕೊಳ್ಳದೆ ಮುಗ್ಧ ಮೋಹನನ ಚಿತ್ರ ವರ್ತಮಾನದಲ್ಲಿ ವ್ಯಂಗ್ಯಕ್ಕೆ ಗುರಿಯಾಗುವುದನ್ನು ಇಲ್ಲಿ ಗುರುತಿಸಬಹುದು.

'ಊರ್ವಶಿ' ಕಥೆಯಲ್ಲಿ ಊರ್ವಶಿ, ಪುರೂರವ ಇವರ ಪ್ರಖ್ಯಾತವಾದ ಪುರಾಣದ ಪ್ರೇಮಕಥೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಸೋಮು ಮತ್ತು ಸುಭದ್ರೆಯರ ಕಥೆಯನ್ನು ರಚಿಸಲಾಗಿದೆ. 'ಹುಲಿಯೂರಿನ ಸರಹದ್ದು' ಇಲ್ಲಿ ಗರುಡನ ಸಂಕೇತವಾಗಿ ತೇಜಸ್ವಿ ಕಥೆಯಲ್ಲಿ ಹೇಳುತ್ತಾರೆ. ಮನುಷ್ಯ ಬಯಸುವ ಸ್ವಚ್ಛಂದತೆ ಮತ್ತು ಕಥಾಹಂದರದಲ್ಲಿ ಕಟ್ಟಿಕೊಡುವ ಸರಹದ್ದುವಿನ ಚೌಕಟ್ಟಿನಲ್ಲಿಯೇ ದಾಟಬೇಕೆನ್ನುವ ಆದರೆ ದಾಟಲಾರದ ಮನುಷ್ಯನ ಎಲ್ಲೆಗಳ ಚಿತ್ರಣ ಅರ್ಥಪೂರ್ಣವಾಗಿ ಮೂಡಿಬಂದಿದೆ. "ಹುಲಿಯೂರಿನ ಸರಹದ್ದನ್ನು ದಾಟಿ ಹೋಗಬೇಕೆನ್ನುವ ತನ್ನ ಬಂಧಿಸಿ ಹಿಡಿದಿರುವ ಶಕ್ತಿಯನ್ನು ಕಿತ್ತೊಗೆದು ತಾನು ಪ್ರೀತಿಸಿರುವ ನಳಿನಾಕ್ಷಿ ಎಂಬ ಹುಡುಗಿ ಜೊತೆ ಓಡಿಹೋಗಬೇಕೆಂಬ, ಗರುಡನ ತರ ಹಾರಬೇಕೆಂಬ ಬಯಕೆ ಅವನದು. ಆದರೆ ಸುತ್ತಲಿನ ವಾತಾವರಣ, ಸಮಾಜದ ಬಂಧನ, ಜಾತಿಯ ಸಂಕೋಲೆ, ತಂದೆಯದರ್ಪ, ತಂದೆ ತನಗೆ ಮದುವೆ ಮಾಡಬೇಕೆಂದಿರುವ ಹುಡುಗಿ ಇವೆಲ್ಲಾ ಅವನಿಗೆ ಬಂಧನದ ಬೇಲಿಗಳಾಗಿವೆ. ಹಾಗಾಗಿ ಅವನ ಸಮಸ್ಯೆ ವೈಯಕ್ತಿಕ ಅನ್ನಿಸಿ ಬರೀ ಅವನ ಭ್ರಾಂತಿಯಾಗಿಯೇ ಉಳಿಯುತ್ತದೆ".[೪೫] ಇಲ್ಲಿ ಸೀಮಿತ ಅನುಭವಗಳ ಸಂಕೀರ್ಣತೆಯನ್ನೂ ಸ್ವಾರಸ್ಯವನ್ನು ಯಶಸ್ವಿಯಾಗಿ ಕಥೆಗಾರರು ನಿರೂಪಿಸಿದ್ದಾರೆ.

'ಅಬಚೂರಿನ ಪೋಸ್ಟಾಫೀಸು' ಕಥಾಸಂಕಲನವು ಕನ್ನಡ ಕಥಾಸಾಹಿತ್ಯದ ದಿಕ್ಕುಗಳನ್ನು ಅದರ ಅನುಭವ ಕ್ಷೇತ್ರ ಹಾಗೂ ಅಭಿವ್ಯಕ್ತಿಯ ಸಾಧ್ಯತೆಗಳನ್ನು ವಿಸ್ತರಿಸುವ ಪ್ರಯತ್ನಗಳನ್ನು ತೇಜಸ್ವಿಯವರು ಈ ಸಂಕಲನದಲ್ಲಿ ಮಾಡಿದ್ದಾರೆ. ಅವರು ಈ ಸಂಕಲನಕ್ಕೆ ಬರೆದ ಹೊಸ ದಿಗಂತದೆಡೆಗೆ ಎಂಬ ಅತ್ಯಂತ ಮೌಲಿಕವಾದ ಮುನ್ನುಡಿ ಬದಲಾದ ತೇಜಸ್ವಿಯವರ ಬರಹದ ಪ್ರತೀಕದಂತಿದೆ. ಅಬಚೂರಿನ ಪೋಸ್ಟಾಫೀಸು ಕಥೆಯಲ್ಲಿ ಪ್ರಮುಖವಾಗಿ ಎರಡು ವ್ಯಕ್ತಿಗಳ ದುರಂತವನ್ನು ಗಮನಿಸುತ್ತೇವೆ. ಇದು ಎರಡು ಬಗೆಯ ದುರಂತವೂ ಹೌದು. ಮೊದಲನೆಯದು ಬೋಬಣ್ಣನದು. ಬೇಲಾಯದನಿಗೆ ಬಂದ ಪತ್ರದಿಂದಾಗಿ ಗೊಂದಲ ತನ್ನ ವಿರುದ್ಧವೇ ವಿಪರೀತ ಮಟ್ಟದಲ್ಲಿ ತಿರುಗಿದಾಗ ಬೋಬಣ್ಣ ಆತ್ಮರಕ್ಷಣಾ ಕ್ರಮಕ್ಕೆ ಮುಂದಾಗುತ್ತಾನೆ. ಅವನ ಕೈಯ ಮುಷ್ಟಿಯಿಂದ ಮುಸುಡಿಗೆ ಗುದ್ದಿಸಿಕೊಂಡು ಮೂಗೂರಿನ ಮೇಸ್ತ್ರಿ ಬಿದ್ದಾಗ ಎಲ್ಲರೂ ಅವನ ಆಪ್ತರು ತಾವೆಂಬಂತೆ ಆರೋಪಿಸಿಕೊಂಡು 'ಅಯ್ಯಯ್ಯೋ ಹೋದ್ಯೇನೋ!

---

೪೫. ಡಾ. ಕರೀಗೌಡ ಬೀಚನಹಳ್ಳಿ, 'ತೇಜಸ್ವಿ ಕಥೆಗಳ ಕುರಿತು', ಪುಟ. ೮, ೨೦೧೭.

ಬರ್ತರಲ್ಲೋ ಪೋಲೀಸ್ನೋರು ನಾಳೆ' ಎಂದು ಒರಲತೊಡಗುತ್ತಾರೆ. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದನ್ನು ಅರಿತ ಬೋಬಣ್ಣ ಗುಂಪು ಬಿಟ್ಟು ಓಡತೊಡಗುತ್ತಾನೆ. ಅಡ್ಡ ಬಂದವರಿಗೆ ಮುಷ್ಟಿಯಿಂದ ಮೋರೆಗೆ ಅಪ್ಪಳಿಸುತ್ತ ಹಿಂದಿರುಗಿ ನೋಡದೆ ಕತ್ತಲಲ್ಲಿ ಕರಗಿಹೋಗುತ್ತಾನೆ. ಅವನು ಕತ್ತಲಲ್ಲಿ ಕರಗಿ ಅನೂಹ್ಯ ಲೋಕಕ್ಕೆ ಹೋಗುವ ಈ ದೃಶ್ಯ ದುರಂತಮಯವಾದುದು. ಅವನಿಗೆ ಅವನ ಸಂಕಟಗಳು ಅರ್ಥವಾಗುವುದೇ ಇಲ್ಲ. ಹೆಣ್ಣಿನ ಬಗ್ಗೆ ಅವನಲ್ಲಿದ್ದ ಮೂಲ ಪ್ರವೃತ್ತಿಗಳು ಅರೆನಗ್ನ ಪೋಟೋ ನೋಡಿದಾಗ ಕೆರಳುತ್ತವೆ. ಅದೇ ಅವನ ನಡವಳಿಕೆಯ ಬದಲಾವಣೆಗೆ ಕಾರಣವಾಗುತ್ತದೆ.

ದುರಂತಕ್ಕೆ ತುತ್ತಾದ ಮತ್ತೋರ್ವ ವ್ಯಕ್ತಿಯೆಂದರೆ ಬೋಬಣ್ಣನ ಹೆಂಡತಿ ಕಾವೇರಿ. ಆದರೆ ಅದರ ಬಗ್ಗೆ ತಿಳುವಳಿಕೆಯೇ ಇಲ್ಲದೆ ಅದನ್ನೇ ಅನಾಯಾಸವಾಗಿ ಒಪ್ಪಿಕೊಂಡಿರುವುದಿದೆಯಲ್ಲಾ ಅದು ಅವಳ ದುರಂತದ ಪರಾಕಾಷ್ಠೆಯಾಗಿದೆ. ಮನುಷ್ಯನ ಅಂತರಾಳದಲ್ಲಿರುವ ಸಾಮರಸ್ಯ ಬದುಕಿನ ಆಕಾಂಕ್ಷೆ, ಆಧುನಿಕ ಜೀವನದ ಪ್ರವೇಶದಿಂದಾಗಿ ಮನುಷ್ಯನಲ್ಲಿರುವ ಇತ್ಯಾತ್ಮಕ ಗುಣಗಳಿಂದ ಪ್ರೀತಿ, ಪ್ರೇಮ, ಜವಾಬ್ದಾರಿ, ನೆಮ್ಮದಿ, ಸಂಘಟನೆ, ಸಹಕಾರ ಎಲ್ಲವನ್ನು ನುಂಗಿಹಾಕಿತು. ಪೋಸ್ಟಾಫೀಸು ಬೋಬಣ್ಣ ಮತ್ತು ಕಾವೇರಿಯರ ಜೀವನದ ದುರಂತತೆಗೆ ಹೇಗೆ ಕಾರಣವೋ ಹಾಗೆ ನಮ್ಮ ಹಳ್ಳಿಗಳ ಪರಿಸರವು ಕಾರಣವೇ ಹೊಸತೊಂದು ಸಂಸ್ಕೃತಿ ಮತ್ತೊಂದು ಸಂಸ್ಕೃತಿಯೊಂದಿಗೆ ಮುಖಾಮುಖಿಯಾದಾಗ ಕೆಲವೊಮ್ಮೆ ಸಾಮರಸ್ಯ ಉಂಟಾಗಿ ಪ್ರಗತಿ ಏರ್ಪಡಬಹುದಾದರೂ ಈ ಕಥೆಯಲ್ಲಿ ಅದು ನಮ್ಮ ಗ್ರಾಮೀಣ ಬದುಕಿನ ದುರಂತಕ್ಕೆ ಕಾರಣವಾಗುತ್ತದೆ. ತೇಜಸ್ವಿಯವರು ಪೋಸ್ಟಾಫೀಸಿನ ಆಗಮದಿಂದಲೇ ಇಷ್ಟೆಲ್ಲಾ ಅನಾಹುತ ಎಂದು ಎಲ್ಲೂ ಹೇಳುವುದಿಲ್ಲ. ಆದರೆ ಅದರ ಆಗಮನ ಮೌಢ್ಯ ತುಂಬಿರುವ ಅನಕ್ಷರಸ್ಥ ಸಮಾಜದಲ್ಲಿ ಉಂಟುಮಾಡಿದ ಗದ್ದಲ ಹಾಗೂ ಅದರ ಪರಿಣಾಮಗಳನ್ನು ಸ್ಪಷ್ಟವಾಗಿ ಹೇಳುತ್ತಾರೆ. ಹಳ್ಳಿಯ ಜೀವನದೊಳಗೆ ಇರುವ ಶೋಷಿತ ಮುಖಗಳನ್ನು ಪರಿಚಯಿಸುತ್ತಾರೆ. ಮುಗ್ಧ ವ್ಯಕ್ತಿಯೊಬ್ಬ ಹಳ್ಳಿಯ ಶೋಷಣೆಗೆ ಆಧುನಿಕತೆಯ ಆಗಮನದ ಸಂಕೇತವಾಗಿ ಪೋಸ್ಟಾಫೀಸಿನ ಮೂಲಕ ಈಡಾಗುವ ದುರಂತವನ್ನು ತೇಜಸ್ವಿ ನಿರೂಪಿಸಿದ್ದಾರೆ.

'ಕುಬಿ ಮತ್ತು ಇಯಾಲ' ಕಥೆಯಲ್ಲಿ ಇಯಾಲಾಳ ದುರಂತದೊಂದಿಗೇ ಇಡೀ ಒಂದು ಕಾಲದ ಸಾಮಾಜಿಕತೆಯ ದುರಂತವೂ ಹೇಗೆ ಅಡಗಿದೆ ಎಂಬುದನ್ನು ಚಿತ್ರಿಸಲಾಗಿದೆ. ಜ್ಞಾನ ತನ್ನೊಡನೆ ಹೇಗೆ ಅಜ್ಞಾನವನ್ನು ಹೊತ್ತುಕೊಂಡು ಸಾರುತ್ತದೆ ಎಂಬುದನ್ನು ತೇಜಸ್ವಿ ಈ ಕಥೆಯಲ್ಲಿ ತೋರಿಸಿದ್ದಾರೆ. ಸಮಾಜದ ಚಲನವಲನವನ್ನು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸುವ ಲೇಖಕರು ಪಾತ್ರಗಳ ಮೂಲಕ ಪ್ರಗತಿ ಹಾಗೂ ಅವನತಿಗಳ ವೈದೃಶ್ಯಗಳನ್ನು

ಮುಖಾಮುಖಿಯಾಗಿ ಓದುಗರು ಚಿಂತಿಸುವಂತೆ ಮಾಡುತ್ತಾರೆ. ಜನಸೇವೆ-ಸಮಾಜಸೇವೆಯ ಮೂಲಕ ದೇಶಸೇವೆ ಮಾಡುವ ಉದ್ದೇಶವಿರಿಸಿಕೊಂಡು ಬೈರಾಪುರದಂತಹ ಕೊಂಪೆಗೆ ಕಾಲಿಡುವ ಡಾ. ಕುಬೇರನ ಶ್ರದ್ಧೆ, ನಂಬುಗೆ, ನಿಸ್ವಾರ್ಥ ಪ್ರಯತ್ನ ಹಾಗೂ ವೈಜ್ಞಾನಿಕ ಮನೋಭಾವ ಆಲೂರಿನ ಜನತೆಗೆ ದೈವ ಸಾಕ್ಷಾತ್ಕಾರವಾದಂತಾಗಿದೆ. ಅಲ್ಲಿನ ಬಡತನವೇ ಹಳ್ಳಿಗಳ ಅಜ್ಞಾನ ಹಾಗೂ ಮೂಢನಂಬಿಕೆಗೆ ಮೂಲ ಎಂದೇ ಇವರ ವಿರುದ್ಧ ಹೋರಾಡಿ ಅಭಿವೃದ್ಧಿಯತ್ತ ಕೊಂಡೊಯ್ಯಲು ಸತತ ಪ್ರಯತ್ನಪಡುತ್ತಾನೆ. ವಿಪರ್ಯಾಸವೆಂದರೆ ಅವನ ಈ ಪ್ರಯತ್ನವೇ ಗ್ರಾಮಸ್ಥರ ಕಣ್ಣಲ್ಲಿ ಪವಾಡ ಸದೃಶವಾಗಿ ಚಿತ್ರಿತಗೊಳ್ಳುತ್ತದೆ. ಅವರ ಅಜ್ಞಾನವನ್ನು ನಿವಾರಿಸಿ ವೈದ್ಯ ವಿಜ್ಞಾನದ ಶ್ರದ್ಧೆ ಹಾಗೂ ನಂಬುಗೆಯ ಮೂಲಕವೇ ಜಾಗೃತಿಯನ್ನು ತುಂಬಲೆತ್ನಿಸುವ ಡಾ. ಕುಬೇರ ಪಂಜುರ್ಲಿಯೋ, ಜಟ್ಟಿಗನೋ ತ್ರಿಕಾಲಜ್ಞಾನಿಯೋ ಇರಬೇಕೆಂದು ಹಳ್ಳಿಯವರು ಬಲವಾಗಿ ನಂಬುತ್ತಾರೆ. 'ತಬರನಕಥೆ' ಮನುಷ್ಯ ನಿರ್ಮಿತ ವ್ಯವಸ್ಥೆಯೇ ಮನುಷ್ಯನನ್ನು ನಿರ್ದಯದಿಂದ ಕ್ರೂರವಾಗಿ ನಡೆಸಿಕೊಳ್ಳುವ ದುರಂತ ಚಿತ್ರಣವನ್ನು ಧ್ವನಿಸುತ್ತದೆ. ಮನುಷ್ಯ ನಿರ್ಮಿತ ಸಂಸ್ಥೆಗಳ ಅಸಂಬದ್ಧತೆ, ಅರ್ಥಹೀನತೆ, ಹಿಂಸೆ ಕ್ರೌರ್ಯಗಳಲ್ಲಿ ಸಿಲುಕಿ ತಪ್ಪಿಸಿಕೊಂಡು ಹೊರಬರಲಾರದಂತಹ ಗೋಜಲು, ಗೊಂದಲಗಳ ಸಾಮಾಜಿಕ ವ್ಯವಸ್ಥೆಯ ಚಕ್ರವ್ಯೂಹದಂತೆ ತೋರಿಬರುತ್ತಿದೆ. ಕಥೆಗಾರರು ತಮ್ಮ ಸುತ್ತಲಿನ ಸಾಮಾಜಿಕ ಪಲ್ಲಟಗಳನ್ನು ತಂದು ಸೂಕ್ಷ್ಮತೆಯಿಂದ ತಲ್ಲೀನರಾಗಿ ಗ್ರಹಿಸಿರುವುದು ವಿಶೇಷ ಎನಿಸುತ್ತದೆ.

'ಕಿರಗೂರಿನ ಗಯ್ಯಾಳಿಗಳು' ತೇಜಸ್ವಿಯವರ ಬದಲಾದ ನಿರೂಪಣಾಕ್ರಮವನ್ನು ತಿಳಿಸುತ್ತದೆ. ಈ ಸಂಕಲನದಲ್ಲಿ ಬರುವ 'ಕೃಷ್ಣೇಗೌಡನ ಆನೆ', 'ಮಾಯಮೃಗ', 'ರಹಸ್ಯವಿಶ್ವ' ಈ ಹಂತದಲ್ಲಿ ತೇಜಸ್ವಿಕಥನ ಅಸಂಗತೆಯ ಕಾಣ್ಕೆ ಅಸ್ತಿತ್ವವಾದೀ ಹುಡುಕಾಟ, ವಾಸ್ತವವಾದೀ ದಾಖಲೆಯಕ್ರಮ – ಇವುಗಳನ್ನು ದಾಟಿ ಮುನ್ನಡೆದಿರುವುದನ್ನು ಗುರುತಿಸಬಹುದು. ಮನುಷ್ಯ ನಿರ್ಮಿತ ಸಂಸ್ಥೆಗಳ ಅಸಂಬದ್ಧತೆ, ಅರ್ಥಹೀನತೆ, ಹಿಂಸೆ ಮತ್ತು ಕ್ರೌರ್ಯ ಆಡಳಿತ ವ್ಯವಸ್ಥೆಯ ವಿಚಿತ್ರಗಳು ಒಳಹೊಕ್ಕರೆ ತಪ್ಪಿಸಿಕೊಳ್ಳಲಾಗದಂತಹ ಗೋಜಲು-ಗೊಂದಲಗಳ ವ್ಯೂಹಗಳು ಇವೆಲ್ಲವೂ ಹಿಂದಿನ ಕಥನಗಳಿಗಿಂತ ಭಿನ್ನವಾಗಿವೆ. ಜೊತೆಗೆ ಬದುಕನ್ನು ಹಸನುಗೊಳಿಸಿಕೊಳ್ಳಲು ಹೋರಾಡುತ್ತಿರುವ ಸಮುದಾಯದ ಸಾಮಾಜಿಕ, ಸಾಂಸ್ಕೃತಿಕ ಸಂಘರ್ಷಗಳನ್ನು ಚಿತ್ರಿಸುವಾಗ ಮಣ್ಣಿನ ವಾಸನೆ ವ್ಯಕ್ತಗೊಂಡಿರುವ ಸ್ಪಂದನದೃಷ್ಟಿಯಿಂದ ಹಲವು ಒಳಬೇಗುದಿಗಳಿಂದ ಕೂಡಿದ ಬದುಕಿನಲ್ಲಿ ಚೇತೋಹಾರಿ ಜೀವಪರ ಮೌಲ್ಯಗಳಿಗೆ ತುಡಿಯುವುದು ಬತ್ತದ ಜೀವಸೆಲೆಯ ದೆಸೆಯಿಂದ, ಶ್ರೇಣೀಕೃತ ಅಪಮೌಲ್ಯಗಳ ಆಕ್ರಮಣಶೀಲತೆಯಿಂದ ಬಸವಳಿದಿದ್ದರೂ ಅದನ್ನು ಮೀರುವ ಪ್ರಯತ್ನದಿಂದಾಗಿ ಕಥೆಗಳಲ್ಲಿನ ಹಲವು ಪಾತ್ರಗಳು ದಿಟ್ಟತನದಿಂದ ಹೋರಾಟಕ್ಕೆ ಮುಂದಾಗುತ್ತವೆ. ದಲಿತ-ಬಂಡಾಯಸಾಹಿತ್ಯ ಸಂದರ್ಭದಲ್ಲಿ ಸ್ತ್ರೀ ಸಂವೇದನೆಗಳೂ ಸಾಂಸ್ಥಿಕ

ಸಂರಚನೆಗಳ ವಿರುದ್ಧ ಸತ್ವಪೂರ್ಣವಾಗಿ ಅಭಿವ್ಯಕ್ತಗೊಂಡಿದ್ದರೂ, ಇಲ್ಲಿನ ಸ್ವರೂಪ ಹೊಸ ಮಾದರಿಯೊಂದನ್ನು ಸೃಷ್ಟಿಸಿಕೊಂಡಿದೆ. ಲಿಂಗಾಧಾರಿತ ಸಂಬಂಧಗಳ ಆಳಕ್ಕಿಳಿದು ಒಟ್ಟು ಸ್ಥಿತಿಯನ್ನು ಶೋಧಿಸುವ ಮಾದರಿ ಕಿರಗೂರಿನ ಗಯ್ಯಾಳಿಗಳು ಇಲ್ಲಿ ಯಾವ ಪೂರ್ವಗ್ರಹಗಳಿಲ್ಲದೆ ಸಶಕ್ತವಾಗಿ ವ್ಯಕ್ತಗೊಂಡಿದೆ. ಸ್ತ್ರೀವಾದಿ ಸಿದ್ಧಾಂತಗಳಿಗೆ ಬದ್ಧರಾಗಿರುವ ಬರಹಗಾರ್ತಿಯರು ಮತ್ತು ತೇಜಸ್ವಿ ಅವರ ಕಥೆಗಳು ಯಾವುದೇ ತತ್ವಸಿದ್ಧಾಂತದ ಲೇಪವಿಲ್ಲದೆ ಅದಕ್ಕೂ ಮೀರಿದ ಲಿಂಗ ಸಮಾನತೆಯ ತುಡಿತಗಳು ಸಹಜ ಧಾರೆಯಾಗಿ ಹರಿದಿವೆ. ಮಾತೃಪ್ರಧಾನವ್ಯವಸ್ಥೆ ನೆಲಕಚ್ಚಿ ಪಿತೃಪ್ರಧಾನ ವ್ಯವಸ್ಥೆ ಅಧಿಪತ್ಯ ಸ್ಥಾಪಿಸಿಕೊಂಡಿರುವ ಪರಿಸರದೊಳಗೆ ಸ್ತ್ರೀ ಸಮುದಾಯದಲ್ಲಿ ಉಂಟಾದ ಜಾಗೃತಿ ಹೊಸ ಹೊಸ ಚಿಂತನೆಗಳಿಗೆ ಅವಕಾಶ ಕಲ್ಪಿಸಿದೆ. ಪ್ರಬುದ್ಧಗೊಂಡ ಸಾಮಾಜಿಕಪ್ರಜ್ಞೆ ಅಂಧಕಾರದಲ್ಲಿಡುವ ಮಹಿಳೆಯರನ್ನು ಜಾಗೃತಗೊಳಿಸಿ ಎಚ್ಚೆತ್ತ ಸಮೂಹದೊಡನೆ ಹೆಜ್ಜೆಹಾಕಿ ಹಲವು ದೂರಸಾಗಿದೆ. ಜೀವನ ಸಂದರ್ಭದಲ್ಲಿ ಮಹಿಳೆ ಮತ್ತು ಪುರುಷರು ಒಟ್ಟಾರೆಯಾಗಿ ಕೂಡಿ ಬಾಳಬೇಕಾಗಿರುವುದರಿಂದ ಇಂತಹ ಕಥೆಗಳನ್ನು ಒಂದು ನೆಲೆಯಿಂದ ವಿಭಜಿಸಿ ವಿವರಿಸಿಕೊಳ್ಳಲಾಗದು. ಇದೇ ವ್ಯಕ್ತಿ ವಿಶಿಷ್ಟತೆಯ ಹೊಸ ನಿರೂಪಣಾಕ್ರಮವೆಂದರೆ ಹಾಗೂ ಹೊಸಚಿಂತನೆಯ ಸಾಮಾಜಿಕ ಪ್ರಜ್ಞೆಯನ್ನು ಅರಗಿಸಿಕೊಳ್ಳುವ ಆಧುನಿಕ ಸಮಾಜದ ಜಟಿಲತೆಗಳು ಚಲನಶೀಲ ಬದುಕಿಗೆ ಸರಿಸಾಟಿಯಾಗಿ ಸ್ಪರ್ಧಿಸುವ ಪ್ರತಿಭಾಸಂಪನ್ನತೆ ಸ್ತ್ರೀಯರಲ್ಲಿ ಹೇರಳವಾಗಿದ್ದರೂ ಕಳೆದುಕೊಂಡಿರುವ ಸ್ವಂತ ಅಸ್ತಿತ್ವವನ್ನು ಪುನರ್‌ರೂಪಿಸಿಕೊಳ್ಳುವ ಸಾಧ್ಯತೆಗಳ ಗಂಭೀರ ಶೋಧ 'ಕಿರಗೂರಿನ ಗಯ್ಯಾಳಿಗಳು' ಕಥೆಯ ಮೂಲದ್ರವ್ಯವಾಗಿದೆ. ಸ್ತ್ರೀ ಶಕ್ತಿಯ ಅನಂತಸಾಧ್ಯತೆಗಳ ದರ್ಶನ ಸಂಪ್ರದಾಯದ ಕೌಟುಂಬಿಕ ರಚನೆಗಳ ಬಹುದೊಡ್ಡ ಪ್ರತಿಭಟನೆಯಾಗಿ ರೂಪಾಂತರಗೊಂಡಿದೆ. ಪುರುಷನಿರ್ಮಿತ ಸಮಾಜ ತನ್ನ ಸರ್ವಾಧಿಕಾರ ಹಾಗೂ ಆಕ್ರಮಣಶೀಲ ಮನೋಭಾವದಿಂದ ಸ್ತ್ರೀ ಸಮುದಾಯವನ್ನು ಭೋಗದ ವಸ್ತುವನ್ನಾಗಿ ಬಳಸಿಕೊಂಡ ನಿಷ್ಕ್ರಿಯಶೀಲ ಪರಿಸರದಲ್ಲಿ ಕ್ರಿಯಾಶೀಲತೆ ಬಲಗೊಳ್ಳುವ ಆಶಯಗಳನ್ನು ಚಿತ್ರಿಸುವಾಗ ಎದುರಾಗುವ ಅಘಾಧ ಸವಾಲುಗಳನ್ನು ತೇಜಸ್ವಿಯವರು ಎದುರಿಸಿರುವ ಪರಿ ಸಾಂಸ್ಕೃತಿಕ ಸಂಘರ್ಷವೊಂದನ್ನು ಹಾಕಿದೆ ಇದನ್ನು ಈ ಸಂಶೋಧನಾಬರಹದಲ್ಲಿ ದಾಖಲಿಸಲಾಗಿದೆ.

'ಕಿರಗೂರಿನಗಯ್ಯಾಳಿಗಳು' ಕಥೆಯಲ್ಲಿ ವ್ಯಕ್ತಿವಿಶಿಷ್ಟ ನಿರೂಪಣೆಯಲ್ಲಿ ತೇಜಸ್ವಿ ಹೇಗೆ ಭಿನ್ನರಾಗಿದ್ದರೆಂದರೆ ಸ್ತ್ರೀ ಸಂವೇದನೆಗಳನ್ನು ಪುರುಷಕೇಂದ್ರಿತ ನೆಲೆಯಲ್ಲಿ ನಿಂತು ಘಟನೆಯನ್ನು ಕಟ್ಟಿಕೊಡುವ ಆಶಯಗಳು ಲೇಖಕರಲ್ಲಿ ಎದ್ದುಕಾಣುವ ಅಂಶವಾಗುತ್ತದೆ. ಲಿಂಗತಾರತಮ್ಯಗಳ ಬಗ್ಗೆ ಮೂಲಭೂತ ಪ್ರಶ್ನೆಗಳನ್ನು ಎತ್ತುವುದರ ಜೊತೆಗೆ ಬದುಕನ್ನು ಮುತ್ತಿಕೊಂಡಿರುವ ಗಂಭೀರ

ಸಮಸ್ಯೆಗಳನ್ನು ವಾಸ್ತವವಾದಿ ನೆಲೆಯಲ್ಲಿ ಅತ್ಯಂತ ಸರಳವಾಗಿ ನಿರೂಪಿಸುತ್ತದೆ. ಕಿರಗೂರಿನ ಹೆಂಗಸರ ಮನದಾಳದಲ್ಲಿ ಅಮೂರ್ತವಾಗಿರುವ ಅಸಹನೆ, ಸಿಟ್ಟು-ಕೋಪ ಸಹಜವಾಗಿ ಸಾಂದರ್ಭಿಕವಾಗಿ ಸ್ಫೋಟಗೊಂಡು ಅದು ಕಿರಗೂರು ಮಾತ್ರವಲ್ಲದೆ ತನ್ನ ಸುತ್ತಲಿನ ಪರಿಸರದುದ್ದಕ್ಕೂ ಹಬ್ಬಿಕೊಂಡು ಪರಿವರ್ತನೆಗೆ ಕಾರಣವಾಗುತ್ತದೆ.

'ಕೃಷ್ಣೇಗೌಡನ ಆನೆ' ಗೂಳೂರುಮಠದ ಆನೆ. ಈಗ ಅದು ಕೃಷ್ಣೇಗೌಡನ ಜೀತದ ಆನೆ. ಅದು ಬೆಳೆದಿದ್ದಲ್ಲಿ ಊರಿನ ಮಧ್ಯೆ ಒಂದು ಸಾಕುಪ್ರಾಣಿಯಂತೆ ಆನೆಯಿಂದ ಆರ್ಥಿಕವಾಗಿ ಲಾಭ ಪಡೆದ ಕೃಷ್ಣೇಗೌಡ ಅದನ್ನು ಪೊಗರುದಸ್ತಾಗಿ ಬೆಳೆಸಿದೆ. ಆದರೆ ಆನೆಯ ಕಿತಾಪತಿಗಳು ಊರಿನ ಜನಕ್ಕೆ ಬೇಸರ ಹುಟ್ಟಿಸಹತ್ತಿದವು. ಪ್ರತಿ ಬೇಸಿಗೆಯಲ್ಲೂ ಆ ಆನೆಯೊಂದು ರಾದ್ಧಾಂತ ನಡೆಸುತ್ತಿತ್ತು. ಬೇಸಿಗೆಯಲ್ಲಿ ನಾಲ್ಕಾರು ಕಾಡಾನೆಗಳು ಊರಿಗೆ ಬಂದಾಗ ಅದಕ್ಕೆ ಕೃಷ್ಣೇಗೌಡರ ಆನೆಯೇ ಕಾರಣ ಎನ್ನಲಾಗುತ್ತಿತ್ತು. ಕಾರಣ ಕೃಷ್ಣೇಗೌಡರ ಆನೆ ಹೆಣ್ಣಾನೆಯಾಗಿತ್ತು. ತೇಜಸ್ವಿಯವರು ಪ್ರಾಣಿಯನ್ನು ವಸ್ತುವಾಗಿಸಿಕೊಂಡು ಮನುಷ್ಯರು ಮತ್ತು ಪ್ರಾಣಿಯ ನಡುವಿನ ವಿಷಮ ಚಿಂತನೆಯ ಮನುಷ್ಯರು ಹೇಗೆ ತಮ್ಮ ಅಧೀರತೆಯನ್ನು ಸಣ್ಣತನವನ್ನು ತೋರುತ್ತಾರೆ ಎಂದು ಭಿನ್ನತೆಯನ್ನು ನಿರೂಪಿಸಿದ್ದಾರೆ.

'ಮಾಯಾಮೃಗ'ದಲ್ಲಿ ದೆವ್ವದ ಅಸ್ತಿತ್ವ, ಸ್ವರೂಪ ಕುರಿತ ಸ್ವಾರಸ್ಯಕರ ಚರ್ಚೆಗಳಿವೆ. ಆದರೆ ಒಣ ವೈಚಾರಿಕ ಜಿಜ್ಞಾಸೆಗಳಿಲ್ಲ. ಹಾಗೆಯೇ ಈ ಕತೆ ದೆವ್ವಗಳ ಅಸ್ತಿತ್ವದ ಸಮರ್ಥನೆಯನ್ನು ಮಾಡುವುದಿಲ್ಲ. ಒಂದು ಅನುಭವ ಕಥನದ ಮೂಲಕ ದೆವ್ವದ ಕಲ್ಪನೆಯನ್ನೇ ಸಮಸ್ಯಾತ್ಮಕಗೊಳಿಸುತ್ತದೆ. ಈ ಪ್ರಕ್ರಿಯೆ ವಸ್ತುವಿನ ನಿರ್ವಹಣೆಯ ಕ್ರಮದಲ್ಲಿ ಒಂದು ಪಲ್ಲಟವನ್ನು ಅಭ್ಯಾಸಮಾಡಿಸಲು ಸಾಧ್ಯವಾಗಿಸಿದೆ.

'ರಹಸ್ಯ ವಿಶ್ವ' ಯಾವುದೇ ಸಾಮಾಜಿಕ ರಾಜಕೀಯ ಆಶಯಗಳನ್ನು ಇಟ್ಟುಕೊಂಡಿಲ್ಲ. ಅವುಗಳ ಹೆಸರೇ ಸೂಚಿಸುವಂತೆ ವಿಸ್ಮಯ ಇಲ್ಲಿನ ಪ್ರಧಾನ ಭಾವ ಆನೆ, ಮರದದಿಮ್ಮಿ, ಸೈಕಲ್ಲು, ನಾಯಿಮರಿ ಇವುಗಳು ಕಣ್ಣಿಗೆ ಕಾಣುವ ವಸ್ತುಗಳಾದರೂ ಅವುಗಳ ಹಿಂದಿರುವ ಸಾಂಕೇತಿಕತೆಯ ರಹಸ್ಯ ವಿಚಿತ್ರ ಬಗೆಯದು. ಈ ಕಥೆ ಪತ್ತೇದಾರಿ ಮೂಲವಾದ ವಿಚಿತ್ರ ರಹಸ್ಯಗಳು ಹುದುಗಿರುವ ರಹಸ್ಯವನ್ನು ಭೇದಿಸುವಾಗ ಅದರಿಂದ ಒಂದು ನೆನಪು ಇತಿಹಾಸ, ನೈತಿಕತೆ, ಅಪರಾಧ ಮುಂತಾದ ಸಾಮಾಜಿಕ ಕಾಳಜಿಗಳು ಹಾಗೂ ಬದುಕಿನ ಮೌಲ್ಯಗಳು ಅನಾವರಣಗೊಳ್ಳುತ್ತವೆ. ಇಂತಹ ದುರಂತ ಮತ್ತು ವಿನೋದಗಳನ್ನು ಕಥೆಗಳಲ್ಲಿ ಗಂಭೀರವಾಗಿ ನಿರ್ವಹಿಸುವ ಸಾಮರ್ಥ್ಯ ತೇಜಸ್ವಿಯವರಿಗೆ ಸಿದ್ಧಿಸಿರುವುದನ್ನು ಗಮನಿಸಬಹುದು.

'ಪರಿಸರದ ಕಥೆ' ಕಥಾಸಂಕಲನದಲ್ಲಿ ಪ್ರಕೃತಿ ಮತ್ತು ಪರಿಸರದ ಬಗ್ಗೆ ಚಿಕ್ಕಂದಿನಿಂದಲೂ ತಮ್ಮ ತಂದೆಯವರ ಪ್ರಭಾವಕ್ಕೊಳಗಾಗಿ ಕುತೂಹಲವನ್ನು ಮೂಡಿಸಿಕೊಂಡ ತೇಜಸ್ವಿ ಅವರು

ಪರಿಸರ ಶ್ರದ್ಧೆಯಿಂದ ಸೃಜಿಸಿದ ಕೃತಿ ಪರಿಸರದಕಥೆ ಪರಿಸರ ಸಂರಕ್ಷಣೆಯ ಬಗ್ಗೆ ವೈಜ್ಞಾನಿಕ ತಿಳುವಳಿಕೆ, ಸಾಮಾಜಿಕ ಎಚ್ಚರ ಹಾಗೂ ಸಾಂಸ್ಕೃತಿಕ ಕಾಳಜಿಯನ್ನು ಈ ಕಥೆಗಳು ಅಭಿವ್ಯಕ್ತಿಸಿವೆ. ಬದುಕಿನ ಹಾಸ್ಯ, ವಿನೋದ, ದುರಂತವನ್ನು ಚಿತ್ರಿಸುವುದೇ ತೇಜಸ್ವಿಯವರ ಈ ಪರಿಸರದ ಕಥೆಗಳ ಮುಖ್ಯಗುರಿಯಾಗಿದೆ. ಜೀವಸಂಕುಲಗಳ ಹುಟ್ಟು, ವಿಕಾಸ, ಸಾವುಗಳನ್ನು ವೈಜ್ಞಾನಿಕವಾಗಿ ಕಥಾಮಾಧ್ಯಮದ ಮೂಲಕ ವಿವರಿಸುವುದು ಇಲ್ಲಿ ಕಾಣುವ ಕಾಳಜಿಯಾಗಿದೆ. ನವ್ಯಸಾಹಿತ್ಯದಲ್ಲಿಯೇ ತುಂಬಾ ವಿಶಿಷ್ಟವಾದುದರ ಸೃಷ್ಟಿಗೆ ಕಾರಣರಾದ ತೇಜಸ್ವಿ 'ಕವಿಯೊಡನೆ ಒಂದುದಿನ', 'ಸುಶ್ಮಿತ ಮತ್ತು ಹಕ್ಕಿಮರಿ' ಕಥೆಗಳು ಕನ್ನಡ ಕಥಾಸಾಹಿತ್ಯ ಕ್ಷೇತ್ರದಲ್ಲಿಯೇ ಅನನ್ಯವಾದ ರಚನೆಗಳು. ಈ ಮೂಲಕ ಪರಿಸರದ ಕಥೆಗಳು ವೈಜ್ಞಾನಿಕ ಮಹತ್ವವನ್ನು ಸೂಚಿಸುತ್ತವೆ. ತೇಜಸ್ವಿ ಅವರ ಅನ್ವೇಷಣಾ ಗುಣಕ್ಕೆ ಸಾಕ್ಷಿಯಾದ ಹಲವು ಕೃತಿಗಳಲ್ಲಿ 'ಪರಿಸರದಕತೆ' ವಿಶಿಷ್ಟವಾದುದು. ಸಾಹಿತ್ಯ ವಿಜ್ಞಾನ, ಕಲಾತ್ಮಕತೆಗಳ ಒಟ್ಟುಗೂಡಿಸುವಿಕೆಯೇ ಪರಿಸರದ ಕಥೆಯಾಗಿದೆ. ಜೀವಸಂಕುಲಗಳ ಉಳಿವಿಗಾಗಿ ಹೋರಾಟಮಾಡುವ ಕ್ರಮವನ್ನು ವೈಜ್ಞಾನಿಕ ರೀತಿಯಲ್ಲಿ ವಿಶ್ಲೇಷಿಸಲಾಗಿದೆ. ಜೀವವಿಕಾಸದ ರೀತಿಯನ್ನು ವೈಜ್ಞಾನಿಕವಾಗಿ ಕಥೆಗಳ ಮೂಲಕ ವಿವರಿಸುವುದು ಲೇಖಕರ ಮುಖ್ಯ ಕಾಳಜಿಯಾಗಿದೆ. ಪರಿಸರ ನಿಷ್ಠವಾದ ಈ ಕಥೆಗಳಲ್ಲಿ ಮನುಷ್ಯರು, ಪ್ರಾಣಿ, ಪಕ್ಷಿಗಳು ಹಾಗೂ ಸಸ್ಯಸಂಕುಲಗಳಿಗೆ ಮುಖಾಮುಖಿಯಾಗುವ ಅನುಭವ ಜನ್ಯಚಿತ್ರಗಳಿವೆ. ಪರಿಸರದ ಮೇಲಿನ ತಮ್ಮ ಆಸಕ್ತಿಗೆ ತಂದೆ ಕುವೆಂಪು ಅವರೇ ಕಾರಣ ಎಂದು ಹೇಳಿಕೊಳ್ಳುವ ತೇಜಸ್ವಿ – ಆ ಕುತೂಹಲವನ್ನು ತಮ್ಮ ಮಕ್ಕಳಾದ ಸುಸ್ಮಿತಾ, ಈಶಾನ್ಯೆಯರಲ್ಲೂ ಮೂಡಿಸಿದ್ದಾರೆ. ಇದು ಲೇಖಕರ ವ್ಯಕ್ತಿವಿಶಿಷ್ಟತೆ. ತಮ್ಮ ಕೃತಿಗಳಲ್ಲಿ ಶೈಕ್ಷಣಿಕ ಕಾಳಜಿಯನ್ನು ತೋರುವ ಅದೇ ಕಾಲಕ್ಕೆ ಮಕ್ಕಳಿಗೆ ಅಗತ್ಯವಾದ ಪರಿಸರದ ಜಾಗೃತಿ ಹಾಗೂ ಪ್ರೀತಿಯನ್ನು ಬೆಳೆಸಬೇಕೆಂದು ಬಯಸುತ್ತಾರೆ. ಸಂಕಲನದ ಶೀರ್ಷಿಕೆಯನ್ನೇ ಹೊಂದಿರುವ ಮೊದಲ ಕಥೆಯಲ್ಲಿ ತಮ್ಮ ಕುಟುಂಬದತ್ತವಾದ ಪರಿಸರಾಸಕ್ತಿಯನ್ನು ಪ್ರಸ್ತಾಪಿಸಿದ್ದಾರೆ. ಕುವೆಂಪು ತಮ್ಮ ಬದುಕು-ಬರಹಗಳಲ್ಲಿ ಪ್ರಕೃತಿಯನ್ನು ಧ್ಯಾನಿಸಿದ್ದವರು. ಮಗ ಅದೇ ಪ್ರಕೃತಿಯನ್ನು ಮನುಷ್ಯ ಸಾಧ್ಯತೆಯ ಹುಡುಕಾಟದ ಭಾಗವಾಗಿ ಅದರ ವಿಸ್ಮಯ ವಿಕಾಸದ ಬೇರನ್ನು ತನ್ನ ಸೃಜನಶೀಲತೆಯ ಕೇಂದ್ರವನ್ನಾಗಿಸಿಕೊಂಡರು.

ಕಾಡುಪ್ರಾಣಿಗಳ ಸಂರಕ್ಷಣೆ, ಶಿಕಾರಿಯ ಅನುಭವ ಹಾಗೂ ಕುವೆಂಪು ಅವರು ವಾಯುವಿಹಾರಕ್ಕೆ ಮಕ್ಕಳನ್ನು ಕರೆದೊಯ್ಯುತ್ತಾ ವಿವರಿಸಿ ಪ್ರತ್ಯಕ್ಷವಾಗಿ ತೋರಿಸಿದ ಪ್ರಸಂಗಗಳನ್ನು ಮೊದಲ ಕಥೆಯಲ್ಲಿ ಪ್ರಸ್ತಾಪಿಸಿದ್ದಾರೆ. ಮಕ್ಕಳ ಕುತೂಹಲಭರಿತ ಮನಸ್ಸುಗಳಿಗೆ ಇಲಿಯ ಸಾಹಸದ ಕುರಿತು ವಿವರಿಸಿದ್ದಾರೆ. ಜೊತೆಗೆ ಟಿ.ಪಿ.ಅಶೋಕ ಅವರು ಹೇಳುವ ಹಾಗೆ "ಪರಿಸರದ ಕತೆಯನ್ನು ತೇಜಸ್ವಿಯವರ ಆತ್ಮಚರಿತ್ರೆಯ ಕೆಲವು ಪುಟಗಳೆಂದು ಓದಬಹುದು.

ಪ್ರಕೃತಿ ಮತ್ತು ಪರಿಸರದ ಬಗ್ಗೆ ನನಗೆ ಚಿಕ್ಕಂದಿನಿಂದಲೂ ಇರುವ ಕುತೂಹಲಕ್ಕೆ ಮುಖ್ಯಕಾರಣ ನನ್ನ ತಂದೆಯವರೇ ಎನ್ನುವ ತೇಜಸ್ವಿ ತಮ್ಮ ಬಾಲ್ಯದ ಕೆಲವು ಘಟನೆಗಳನ್ನು ಓದುಗರ ಮುಂದೆ ಇಟ್ಟಿದ್ದಾರೆ. ಮುಂದಿನ ಕೆಲವು ಅಧ್ಯಾಯಗಳಲ್ಲಿ ತೇಜಸ್ವಿ ತಮ್ಮ ಮಕ್ಕಳಿಗೆ ಜೀವಜಗತ್ತಿನ ಬಗ್ಗೆ ಶೋಧಿಸುವ ಪ್ರಸಂಗಗಳು ದಾಖಲಾಗಿವೆ. ಪರಿಸರದ ಬಗ್ಗೆ ಬರೆಯುತ್ತಾ ಲೇಖಕರು ತಮ್ಮ ಮನೆಯ ಬಗ್ಗೆ ಸ್ನೇಹಿತರ ಬಗ್ಗೆ, ಆಳುಕಾಳುಗಳ ಬಗ್ಗೆ ತಮ್ಮ ವೃತ್ತಿ–ಹವ್ಯಾಸ–ಸಾಹಸಗಳ ಬಗ್ಗೆ ತಮ್ಮ ನೆನಪುಗಳನ್ನು ಬಿಚ್ಚಿಡುತ್ತಾ ಹೋಗುತ್ತಾರೆ. ಇದು ತೇಜಸ್ವಿಯವರ ವ್ಯಕ್ತಿವಿಶಿಷ್ಟತೆ ಮತ್ತು ಅವರ ನಿರೂಪಣ ಶೈಲಿಯಾಗಿದೆ. ಹಾಗಾಗಿ 'ಪರಿಸರದ ಕಥೆ'ಯಲ್ಲಿ ಮರಗಿಡ, ಪಶುಪಕ್ಷಿಗಳ ಜಗತ್ತಿನಂತೆ ಒಂದು ಮನುಷ್ಯ ಪರಿಸರವೂ ತೇಜಸ್ವಿಯವರ ಮಾನಸಿಕಲೋಕದ ಒಳಪರಿಸರವೂ ಏಕಕಾಲದಲ್ಲಿ ಬಿಚ್ಚಿಕೊಳ್ಳುತ್ತಾಹೋಗುತ್ತದೆ. ಇದರಿಂದಾಗಿ ಬರವಣಿಗೆಗೆ ವಿಶೇಷವಾದ ಲವಲವಿಕೆ, ಜೀವಂತಿಕೆ ಬಂದುಬಿಟ್ಟಿದೆ. ತೇಜಸ್ವಿಯವರ ಕಾಮಿಕ್‌ಧಾಟಿ ಇಡೀ ಪುಸ್ತಕವನ್ನು ಹೊಚ್ಚಹೊಸದಾಗಿ ಇಟ್ಟಿದೆ"[೪೬] ವಿನೋದ ತೇಜಸ್ವಿಯವರ ಬರವಣಿಗೆಯಲ್ಲಿ ಕೇವಲ ಒಂದು ತಾಂತ್ರಿಕ ಉಪಕರಣವಲ್ಲ. ಅದು ಅವರು ಅನುಭವವನ್ನು ಗ್ರಹಿಸುವ ಮತ್ತು ಅಭಿವ್ಯಕ್ತಿಸುವ ತಾತ್ವಿಕತೆಗೆ ಸಂಬಂಧಿಸಿದ್ದು. ವೈನೋದಿಕ ದರ್ಶನ ಎಂಬ ಪರಿಕಲ್ಪನೆಯನ್ನು ಸಮಕಾಲೀನ ಕನ್ನಡ ಲೇಖಕರ ಸಂದರ್ಭದಲ್ಲಿ ಉಪಯೋಗಿಸಬಹುದಾದಲ್ಲಿ ತೇಜಸ್ವಿಯವರಿಗಿಂತ ಒಳ್ಳೆಯ ಉದಾಹರಣೆ ಸಿಗುವುದು ಕಷ್ಟವೇ.

ತೇಜಸ್ವಿಯವರಿಗೆ ನಿಸರ್ಗದ ಬಗ್ಗೆ ಇರುವ ಗಾಢ ಪ್ರೇಮ ಅದರ ನಿಗೂಢತೆಯ ಬಗೆಗಿನ ವಿಸ್ಮಯ ಅವರ ಕಥಾ ತಂತ್ರವಾಗಿ ಸೇರ್ಪಡೆಯಾಗುತ್ತದೆ. ಬಹುತೇಕ ಸಂದರ್ಭಗಳಲ್ಲಿ ಕಥೆಗಾರರೇ ಕಥಾನಿರೂಪಕರು ಆಗಿರುತ್ತಾರೆ. ಅವರ ನಿರೂಪಣಾ ಕ್ರಿಯೆಯಲ್ಲಿ ಆತ್ಮೀಯತೆ ಹಾಗೂ ಸರಳತೆ ಇದೆ. ವ್ಯಕ್ತಿ ಹಾಗೂ ಸಮಾಜದ ಸಂಬಂಧಗಳನ್ನು ತಮ್ಮ ಬರಹಗಳ ಮೂಲಕ ಅನಾವರಣಗೊಳಿಸುವ ಲವಲವಿಕೆಯ ಪ್ರಾದೇಶಿಕ ಭಾಷೆಯನ್ನು ಧ್ವನಿಪೂರ್ಣಕವಾಗಿ ಬಳಸಿದ್ದಾರೆ. ಇಂದ್ರಿಯಾನುಭವಗಳಿಗೆ ಪ್ರಾಶಸ್ತ್ಯ ನೀಡುತ್ತಾ ಕಥೆಯ ಪಾತ್ರವನ್ನಾಗಿಸುವ ಪ್ರಾವೀಣ್ಯತೆ ಅವರ ಕಲಾವಂತಿಕೆಗೆ ಸಾಕ್ಷಿಯಾಗಿದೆ. ಗಾಢವಾದ ರಾಜಕೀಯಪ್ರಜ್ಞೆ, ಸಾಮಾಜಿಕ ಎಚ್ಚರ, ಅನನ್ಯತೆಯ ಸಾಂಸ್ಕೃತಿಕ ಕಾಳಜಿ ಇದ್ದು ಕೃತಿ ರಚಿಸುವಾಗಲೂ ತೇಜಸ್ವಿ ಸಾಕ್ಷಿ ಪ್ರಜ್ಞೆಯನ್ನು ಶುದ್ಧವಾಗಿಟ್ಟುಕೊಳ್ಳುವ ಪ್ರಬುದ್ಧರಾಗಿದ್ದಾರೆ. 'ಪಾಕಕ್ರಾಂತಿ ಮತ್ತು ಇತರ ಕಥೆಗಳು' ಸಂಕಲನದಲ್ಲಿ ಮಲೆನಾಡಿನ ಪರಿಸರದೊಂದಿಗೆ ಅಲ್ಲಿನ ಜನಗಳಲ್ಲಿ ನಂಬಿಕೆಯಲ್ಲಿರುವ ಆಚರಣೆಗಳು, ನಂಬಿಕೆಗಳು, ಭಯಭೀತಿಗಳು ನಿರೂಪಿತವಾಗಿವೆ. ತೇಜಸ್ವಿಯವರು ಸಣ್ಣಸಣ್ಣ ಘಟನೆಗಳನ್ನು ತಮ್ಮ ಪ್ರಜ್ಞೆಯ ಅನುಭವದ ಭಾಗವಾಗಿ ಚಿತ್ರಿಸುತ್ತಾ ಅವುಗಳಿಗೆ ಒಂದು ಬಗೆಯ ವೈಚಾರಿಕತೆಯ

---

೪೬. ಟಿ.ಪಿ.ಅಶೋಕ, 'ತೇಜಸ್ವಿ ಕಥನ', ಪುಟ. ೧೦೬, ೨೦೦೪.

ಸ್ಪರ್ಶವನ್ನು ತಂದುಕೊಡುವ ವಿಶೇಷ ಕಲೆಗಾರಿಕೆಯನ್ನು ಇಲ್ಲಿ ಕಾಣಬಹುದು. 'ಮಳೆಗಾಲದ ಚಿತ್ರ' ಕಥೆಯಲ್ಲಿ ಮೂಡಿಗೆರೆಯ ಪರಿಸರದಲ್ಲಿ ಕಾಫಿ ಬೆಳೆಗಾರರ ನಂಬಿಕೆ ಅವಾಂತರ ಹಾಗೂ ಕಷ್ಟಸುಖಗಳನ್ನು ಕಟ್ಟಿಕೊಟ್ಟಿದ್ದಾರೆ. 'ಸುವರ್ಣಸ್ವಪ್ನ'ದ ರಮೇಶನ ಮನಃಸ್ಥಿತಿಯನ್ನು ಹತ್ತೂರಿನ ಸ್ಥಿತಪ್ರಜ್ಞರಾದ ಜನ ತಪ್ಪಾಗಿ ಗ್ರಹಿಸಿ ಅವನಿಗೆ ಬುದ್ಧಿಭ್ರಮಣೆ ಎಂದು ತಿಳಿಯುವುದು, ಅವನ ತಾಯಿ ಅವನಿಗೆ ಏನೋ ಕಾಯಿಲೆ ಹಿಡಿದಿದೆ, ಎಂದು ಭಾವಿಸುವುದು, ರಮೇಶನಿಗೆ ತನಗೆ ಹಿಡಿದಿರುವ ಮೋಹಿನಿಯ ಹುಚ್ಚನ್ನು ಅವನು ಮರೆಯಲು ಯತ್ನಿಸಿದರೂ ಅವನು ಬಸ್ ನಿಲ್ದಾಣಕ್ಕೆ ಬಂದಕೂಡಲೇ ಅವನ ಮನಸ್ಸಿನ ಮಾಯಾಲೋಕ ಮತ್ತು ಅವನನ್ನು ಮೋಹಿನಿಯ ಕನಸುಗಾರಿಕೆಯ ಕಡೆಗೆ ಎಳೆಯುವುದು – ಈ ಎಲ್ಲಾ ಸಂಗತಿಗಳನ್ನು ಕಥೆ ತುಂಬಾ ನಿಗೂಢವಾಗಿ ಚಿತ್ರಿಸುತ್ತದೆ. 'ಪಾಕಕ್ರಾಂತಿ' ಎಂಬ ಕಥೆಯಲ್ಲಿ ಗಂಭೀರಹಾಸ್ಯದ ಮುಖೇನ ಪಾಕಕ್ರಾಂತಿಯಂತಹ ವಿಷಯದ ಮೂಲಕ ಬದುಕಿನ ಬಗೆಗಿನ ಕಾಳಜಿಯನ್ನು ನಿರೂಪಿಸುತ್ತಲೇ ಬದುಕಿನ ಗಂಭೀರತೆ ಹಾಗೂ ಸಂಕೀರ್ಣತೆಯನ್ನು ಕಥೆಗಾರರು ಅರ್ಥೈಸಿರುವುದನ್ನು ಕಾಣುತ್ತೇವೆ.

ತೇಜಸ್ವಿಯವರ ವ್ಯಕ್ತಿವಿಶಿಷ್ಟತೆ ಮತ್ತು ನಿರೂಪಣಾ ವಿಧಾನ ಮೇಲಿನ ಕಥೆ, ಕಾದಂಬರಿಗಳಲ್ಲಿ ಹೇಗೆ ವ್ಯಕ್ತವಾಗಿದೆ ಎಂಬುದನ್ನು ಅವರ ಸಾಕ್ಷಿಪ್ರಜ್ಞೆಯನ್ನು ಹಾಗೂ ಪ್ರಬುದ್ಧತೆಯನ್ನು ತೇಜಸ್ವಿಯವರ ಕಥನಸಾಹಿತ್ಯದಲ್ಲಿ ಗುರುತಿಸಬಹುದು. ಕೃತಿಯಿಂದ ಕೃತಿಗೆ ಭಿನ್ನವಾಗಿ ಬೆಳೆಯುತ್ತಾ ಸಾಗಿರುವ ಲೇಖಕರು ಕ್ರಮಿಸುವ ಹಾದಿ ಬಲುದೊಡ್ಡದು. ಹಾಗಾಗಿ ಕನ್ನಡ ಸಾಹಿತ್ಯದೊಳಗೆ ಎದ್ದುಕಾಣುವ ವ್ಯಕ್ತಿತ್ವಗಳಲ್ಲಿ ತೇಜಸ್ವಿಯವರದು ಮುಖ್ಯ ಸಾಲಿನಲ್ಲಿ ನಿಲ್ಲುತ್ತಾರೆ ಎಂದರೆ ತಪ್ಪಾಗಲಾರದು.

೫.೨. ಗ್ರಾಮಸಂಸ್ಕೃತಿಯ ಶೋಧ

ತೇಜಸ್ವಿಯವರು ವ್ಯಕ್ತಿಕೇಂದ್ರಿತ ನೆಲೆಗಿಂತ ಸಮಾಜನಿಷ್ಠ ನೆಲೆಯಿಂದ ಬದುಕು ಮತ್ತು ನಿಸರ್ಗದ ನಿಗೂಢತೆಯ ವ್ಯವಸ್ಥೆಯನ್ನು ಸೃಜನಾತ್ಮಕವಾಗಿ ಕಟ್ಟಿದವರು. ಪ್ರಕೃತಿ–ಮನುಷ್ಯ, ಮನುಷ್ಯ–ಮನುಷ್ಯರ ನಡುವಿನ ಅರ್ಥಪೂರ್ಣ ಸಂಬಂಧಗಳಿಗೆ ದುಡಿದ ಅವರು ಸಮಗ್ರತೆಯ ಜೀವನದೃಷ್ಟಿಗೆ ಆತೊರೆದವರು. ನವ್ಯಪಂಥದ ಉತ್ಕರ್ಷಕಾಲದಲ್ಲಿ ತಮ್ಮ ಬರವಣಿಗೆಯನ್ನು ಪ್ರಾರಂಭಿಸಿದರೂ ಸಂವೇದನೆಗಳನ್ನು ಹೊಸ ದಿಗಂತದೆಡೆಗೆ ಪಲ್ಲಟಿಸಿದವರು. ಸ್ಥಾಪಿತ ಮೌಲ್ಯಗಳು ಹಾಗೂ ಸ್ವೀಕೃತಮೌಲ್ಯಗಳನ್ನು ಪರಸ್ಪರ ಮುಖಾಮುಖಿಯಾಗಿಸಿ ಏಕತಾನತೆಯ ಬದುಕನ್ನು ಬೆಸೆದು ಚಲನಶೀಲ ನಾಗರೀಕ ಸಂಸ್ಕೃತಿಯ ಸ್ಥಿತ್ಯಂತರಗಳನ್ನು ಗುರುತಿಸಿದವರು. ಆಧುನಿಕ ನಾಗರಿಕತೆ ನಮ್ಮಲ್ಲಿ ಪ್ರಚೋದಿಸುವ ಮಹತ್ವಾಕಾಂಕ್ಷೆಗಳನ್ನು ಸಹಜವಾಗಿ ಅನ್ವಯಿಸಿಕೊಂಡು ಕೃಷಿಕರಾಗಿ ಬದುಕಿ ರೈತರ, ಕೂಲಿ ಆಳುಗಳ, ಸಂಪ್ರದಾಯ ಮೌಢ್ಯತೆಗಳ ಜೊತೆಗೆ ವ್ಯಕ್ತಿ ಮತ್ತು ಸಾಮಾಜಿಕ ಬದುಕನ್ನು ಯಥಾವತ್ತಾಗಿ ಅನ್ವೇಷಿಸಿ ಅಭಿವ್ಯಕ್ತಿಸಿದವರು.

ತೇಜಸ್ವಿಯವರು ಸಾಹಿತ್ಯ, ವಿಜ್ಞಾನ, ಮಾನವಶಾಸ್ತ್ರ, ಅರ್ಥಶಾಸ್ತ್ರ, ರಾಜಕೀಯ, ಜೀವಸಂಕುಲ, ನದಿ, ಬೆಟ್ಟ, ಕಾಡು, ಪರಿಸರ ಹೀಗೆ ಎಲ್ಲವನ್ನು ಧ್ಯಾನಿಸಿ ಅಗ್ನಿ ದಿವ್ಯದಂತೆ ಅಭಿವ್ಯಕ್ತಿಪಡಿಸಿದವರು. ತೇಜಸ್ವಿ ಗ್ರಾಮಸಂಸ್ಕೃತಿಯನ್ನು ಜನರ ಒಡನಾಟದಲ್ಲಿ ಇದ್ದುಕೊಂಡು ಕಂಡುಕೊಂಡವರು.

ಮಲೆನಾಡಿನ ಮೂಲೆಯೊಂದರಲ್ಲಿ ಕುಳಿತು ನಾಗರಿಕ ಜಗತ್ತಿನ ವಿದ್ಯಾಮಾನಗಳನ್ನು ಅವಲೋಕಿಸಿ ಅರ್ಥಪೂರ್ಣವಾಗಿ ಪ್ರಶ್ನಿಸಿದವರು. "ಲೋಹಿಯಾ ತತ್ವ ಚಿಂತನೆಗಳಿಂದ ಪ್ರಭಾವಿತರಾದ ತೇಜಸ್ವಿ ಭಾರತೀಯ ಸಮಾಜವನ್ನು ಅದರ ಎಲ್ಲಾ ವಾಸ್ತವಗಳಿಂದ ಗ್ರಹಿಸಲು ಯತ್ನಿಸಿದರು. ಕ್ಷಣಕ್ಷಣಕ್ಕೆ ಬದಲಾಗುತ್ತಿರುವ ವಿಜ್ಞಾನ ಮತ್ತು ಇತರೆ ಜ್ಞಾನಗಳನ್ನು ಸದಾ ಎಚ್ಚರದಿಂದ ನೋಡುತ್ತಿದ್ದ ತೇಜಸ್ವಿ ಅವರಿಗೆ ತಮ್ಮ ಸುತ್ತಲಿನ ಗ್ರಾಮೀಣ ಜಗತ್ತಿನ ಬಗ್ಗೆ ಅಪಾರ ಕುತೂಹಲವಿತ್ತು. ಈ ಕುತೂಹಲ ಬೆರಗು ಮುಗ್ಧತೆಗಳನ್ನು ಕೊನೆಯವರೆಗೂ ಉಳಿಸಿಕೊಂಡಿದ್ದ ಅವರು ಜಗತ್ತನ್ನು ಪರಿಸರವನ್ನು ಸೂಕ್ಷ್ಮವಾಗಿ ಗಮನಿಸುತ್ತಲೇ ಇದ್ದರು. ಓದಿನ ಮೂಲಕ ಮನುಷ್ಯ ಪಡೆದುಕೊಂಡ ಅರಿವು ಮುಖ್ಯವಾದದ್ದು ಎಂಬ ಎಚ್ಚರ ತೇಜಸ್ವಿಯವರಿಗೆ ಇತ್ತು"[೪೭] ಎಂಬ ಅಭಿಪ್ರಾಯ ಅವರ ಬರಹಗಳಲ್ಲಿ ಸಾಬೀತಾಗಿದೆ.

ತೇಜಸ್ವಿಯವರ ಸಾಮಾಜಿಕ ಕಾದಂಬರಿ 'ಕಾಡು ಮತ್ತು ಕ್ರೌರ್ಯ' ನವ್ಯ ನಿರ್ಮಾಣ ಕಾಲದ ಜೀವನಸಂದರ್ಭ, ಸುತ್ತಣ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ವಿವರಣೆ ವಿಶ್ಲೇಷಣೆಗಳನ್ನು ವಸ್ತುವನ್ನಾಗಿಸಿಕೊಂಡಿದೆ. "ಪಾತ್ರಗಳ ವ್ಯಕ್ತಿತ್ವದೆಡೆಗೆ ಉಂಟಾಗುವ ಛಿದ್ರತೆ, ಘರ್ಷಣೆ, ಸಂಘರ್ಷ ಮಾನಸಿಕ ತಿಕ್ಕಾಟಗಳಿಂದ ವ್ಯಕ್ತಿತ್ವದ ಸಮಗ್ರತೆಗಾಗಿ ಮಾಡಿರುವ ಪ್ರಾಮಾಣಿಕ ಪ್ರಯತ್ನ ಕಾದಂಬರಿಯಲ್ಲಿದೆ. ಮಲೆನಾಡಿನ ಜನಜೀವನ, ಆಚಾರ-ವಿಚಾರ, ಧರ್ಮ, ದೇವರು-ದೆವ್ವಗಳ ಆಚರಣೆ ಸಾಮಾಜಿಕ ಸಂಬಂಧಗಳ ಅಂತರ, ವ್ಯವಸ್ಥೆಯ ಸಾಮಾಜಿಕ ಕ್ರೌರ್ಯತೆಗಳೆಲ್ಲಾ ಮುಖ್ಯವಾಗಿ ಚರ್ಚಿತವಾಗಿದ್ದು ಸಾಮಾಜಿಕ ಪರಿವರ್ತನೆಯನ್ನು ಕಾದಂಬರಿ ಆಶಿಸುತ್ತದೆ.

ಮಲೆನಾಡಿನ ಸಾಮಾಜಿಕ ಚಿತ್ರಣ ಜನಜೀವನದ ಸ್ಥಿತಿಗತಿಗಳನ್ನು ತಿಳಿಸುವ ಈ ಕಾದಂಬರಿಯಲ್ಲಿ ವರ್ಗ ಮತ್ತು ವರ್ಣದ ಅಂತರಗಳ ಮಧ್ಯೆಯೂ ಸಾಮಾಜಿಕ ಸಾಮರಸ್ಯವಿದೆ. ಪ್ರತಿಯೊಂದು ಘಟನೆಗಳಿಗೂ ದೇವರು ದೆವ್ವಗಳ ಪವಾಡಗಳನ್ನು ಎಳೆದುತರುವ ಈ ಸಮಾಜದಲ್ಲಿ ಪೂಜಾರಿ ವೆಂಕು ಧಾರ್ಮಿಕ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುತ್ತಾನೆ. ವಾಮಾಚಾರ ನರಬಲಿಯಂತಹ ಆಚರಣೆಗಳನ್ನು ಪೋಷಿಸುವ ತಮ್ಮ ಬದುಕನ್ನು ವಿರೂಪಗೊಳಿಸುವ ಸಮಾಜದ ಮೇಲೆ ಕ್ರೋಧವಿದ್ದರೂ ನಿಸರ್ಗದ ಶಕ್ತಿ ಮೇಲೆ ಪ್ರಭುತ್ವ ನಡೆಸುವ ವಾಮಾಚಾರ ಇತ್ಯಾದಿ ನಿಷ್ಠೂರ ಕರ್ಮಗಳ ಬಗ್ಗೆ ವೈಜ್ಞಾನಿಕ ಶ್ರದ್ಧೆಯಿರುವಂತೆ ಗೋಚರಿಸುವುದಿಲ್ಲ. ರಂಗಪ್ಪನವರ ಸಾವು ವೆಂಕುವನ್ನು ಒಳಗೊಂಡಂತೆ ಹಲವರನ್ನು ಚಿಂತಾಕ್ರಾಂತವಾಗಿದ್ದಿತು. ಭೂತಾರಾಧನೆ

---

೪೭. ಮಯೂರ ಮಾಸಪತ್ರಿಕೆ, ಜೂನ್ ಸಂಚಿಕೆ, ಪುಟ. ೦೩, ೨೦೦೭.

ಶಾಂತಿಗೆ ವೆಂಕು ತನ್ನನ್ನು ಅಥವಾ ಇನ್ನೊಬ್ಬ ಪೂಜಾರಿಯನ್ನು ಕರೆಯಿಸಿ ಶಾಂತಿ ಮಾಡಿಸುತ್ತಾರೆಂದು ನಂಬಿದ್ದ ವೆಂಕುವಿಗೆ ಸೋಮುವಿನ ವರ್ತನೆ ಬೆರಗುಗೊಳಿಸುತ್ತದೆ. ಮೌಢ್ಯ ಎಂಬುದು ಗ್ರಾಮೀಣ ಭಾಗಗಳಲ್ಲಿ ಜೀವಂತವಾಗಿರುವುದನ್ನು ಲೇಖಕರು ದಾಖಲಿಸುತ್ತಾರೆ. ಮೌಢ್ಯಕ್ಕೆ ಪ್ರತಿಯಾಗಿ ಮೌಢ್ಯವನ್ನು ಹೂಡಲೇ ಇಲ್ಲ. ಕಲ್ಮನೆಯ ಜನಕ್ಕೆಲ್ಲ ಹೊಸ ಹುರುಪು "ಗೌಡರೋನು ಮಗ್ಗದೋಳ ಜೊತೆ ಕುಶಾಲು ಮಾಡ್ತ ಓಡಾಡ್ತಾನೆ ಮದಿವಿ ಆತಾನಂತೆ, ಗೋಪಾಲ ಭಟ್ಟನಂಥಾವ ಉಡುಪಿ ಮಠದ ಬ್ರಾಮಣನೇ ಜಾತಿಯಿಂದ ಹೊರ ಹಾಕ್ಸಾರಂತ ಲಂಬಾಣೀರ ಹುಡುಗೀನ ಒಕ್ಕಲ ರಂಗನಿಗೆ ಮದುವೆ ಮಾಡ್ಸಿ ಕದ್ದು ಕೂಡಿದ, ಇನ್ನು ಈ ಪುಂಡ ಪೋಕರಿ, ನಾಕಕ್ಸರ ಕಲ್ತಿದ್ದಕ್ಕೆ ಅನಾಚಾರನ ಆಚಾರ ಮಾಡ್ತಾನೇನು? ಎಂದುಕೊಂಡಿದ್ದ ವೆಂಕು.

ಒಲವು ಈ ಕಟ್ಟಳೆಗಳನ್ನು ಧಿಕ್ಕರಿಸುವಷ್ಟು ಅನರ್ಘ್ಯ ಎಂದು ಪ್ರತಿಪಾದಿಸಿದ್ದ ವೆಂಕೂಗೆ ಭಯಾನಕವಾಗಿತ್ತು. ಏಕೆಂದರೆ ಒಲವು ಕ್ರೌರ್ಯಕ್ಕೆ ವಿರುದ್ಧವಾದದೂ ಪಾಪದ ವ್ಯಾಖ್ಯಾನವನ್ನೇ ಬುಡಮೇಲೆ ಮಾಡುವಂಥದೂ ಆಗಿತ್ತು"[೪೮] ಎಂದು ಬದಲಾವಣೆಗೆ ಆಶಿಸದ ಜನರ ಮಧ್ಯೆ ಲೇಖಕರು ಸಾಮಾಜಿಕ ಬದಲಾವಣೆಗೆ ಆಶಿಸುತ್ತಾರೆ.

ಸ್ತ್ರೀಯರನ್ನು ಕೂಲಿಯಾಳುಗಳನ್ನು ಪಶುಸಮಾನವಾಗಿ ನಡೆಸಿಕೊಳ್ಳುವ ಕ್ರೌರ್ಯ ಕಲ್ಮನೆಯ ಸಮಾಜದಲ್ಲಿದೆ. ಕೂಲಿಯಾಳುಗಳು ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸುವುದು ಬೇರೊಬ್ಬ ಹೆಣ್ಣಿನೊಂದಿಗೆ ಸಂಬಂಧ ಇರಿಸಿಕೊಳ್ಳುವುದು ಸಾಮಾನ್ಯ ವಾಡಿಕೆಯಂತಿದೆ. ಶ್ರೀಮಂತ ಜಮೀನ್ದಾರರು ಮಾತ್ರವಲ್ಲದೆ ವಾಮಾಚಾರಿಗಳಿಂದಲೂ ಕೂಲಿಯಾಳು, ಸ್ತ್ರೀಯರು, ಶೋಷಣೆಗೆ ಒಳಗಾಗುತ್ತಿದ್ದರು. ಗ್ರಾಮಸಮಾಜದ ಬದಲಾವಣೆಗೆ ಲೇಖಕರು ಹಾತೊರೆಯುತ್ತಾರೆ. ಆದರೆ ವೆಂಕು, ಲಿಂಗನಂಥವರೂ ವ್ಯವಸ್ಥೆಯಿಂದ ಪಲಾಯನಗೊಂಡು ಶಾಂತಿಯುತ ಸಮಾಜದಲ್ಲಿ ನೆಲೆಕಂಡುಕೊಳ್ಳಲು ಕಾದಂಬರಿಯಲ್ಲಿ ಹವಣಿಸುತ್ತಾರೆ. ತೇಜಸ್ವಿಯವರ ಸೃಜನಶೀಲತೆಯಲ್ಲಿ ಪರಿಸರದ ನಿಗೂಢತೆ, ಗ್ರಾಮೀಣ ಸಂಸ್ಕೃತಿಯ ಶೋಧ, ಮನುಷ್ಯಲೋಕ, ಸಾಮಾಜಿಕ ಅಸ್ತಿತ್ವಗಳೂ ಅವರ ಕಾಳಜಿಗಳಾಗಿವೆ. ಅಮೂರ್ತತೆಗಳ ದಿವ್ಯತೆಯೊಂದಿಗೆ ಸಾಮಾಜಿಕ ಚಲನೆ, ಒಪ್ಪುತಪ್ಪುಗಳೂ ಪರಂಪರೆ ಮತ್ತು ಆಧುನಿಕತೆಗಳ ದ್ವಂದ್ವಗಳನ್ನು ಸಹ ಅವರ 'ಸ್ವರೂಪ' ಕಿರುಕಾದಂಬರಿಯಲ್ಲಿ ಚರ್ಚಿತವಾಗಿವೆ. ಸೃಜನಶೀಲ ವ್ಯಕ್ತಿತ್ವದಲ್ಲಿ ಬದುಕನ್ನು ತಾತ್ವಿಕ ಚಿಂತನೆಗೆ ಒಳಪಡಿಸಿ ಪ್ರವೃತ್ತಿಗಳನ್ನು ಅನ್ವೇಷಿಸಿದ್ದಾರೆ. ನಗರದ ಮತ್ತು ಮಲೆನಾಡಿನ ಸಾಮಾಜಿಕ ವಾತಾವರಣದಲ್ಲಿ, ಗ್ರಾಮೀಣ ಸಂವೇದನೆ, ರಾಜಕೀಯ, ಧಾರ್ಮಿಕ ನಂಬಿಕೆಗಳು, ಆಚರಣೆಗಳು ಅಲ್ಲಿ ವರ್ಗ–ವರ್ಣ ವ್ಯವಸ್ಥೆಯ ಶೋಷಣೆಗಳು ಶಿಕಾರಿಯ ವ್ಯಸನ ಮಲೆನಾಡಿನ ವಿಶಿಷ್ಟ ಸಾಮಾಜಿಕ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ. ಕೂಲಿಯಾಳುಗಳ ಬಡತನ, ಅನಕ್ಷರತೆ

೪೮. ಕೆ.ಪಿ.ಪೂರ್ಣಚಂದ್ರ ತೇಜಸ್ವಿ 'ಕಾಡು ಮತ್ತು ಕ್ರೌರ್ಯ', ಪುಟ. ೪೦, ೨೦೧೬.

ಇದನ್ನೇ ಬಂಡವಾಳವನ್ನಾಗಿಸಿಕೊಂಡು ಶೋಷಿಸುವ ಸಮಾಜದ ಮೇಲ್ವರ್ಗ ಮತ್ತು ಬೇಜವಾಬ್ದಾರಿಯುತ ಮೇಲ್ವರ್ಗವನ್ನು ಶೋಷಿಸುವ ಶೋಷಿತವರ್ಗವನ್ನು ಕಾದಂಬರಿಯಲ್ಲಿ ಗುರುತಿಸಬಹುದಾಗಿದೆ. ಕೃಷಿಸಮಾಜ ಒಂದೆಡೆ ಪ್ರಕೃತಿಯಿಂದ ಕಷ್ಟನಷ್ಟಗಳನ್ನು ಅನುಭವಿಸಿದರೆ ಮತ್ತೊಂದೆಡೆ ಕಾಡುಪ್ರಾಣಿಗಳ ಹಾವಳಿಯಿಂದ ಶಿಕಾರಿ ಒಂದು ಅನಂತವಾದ ಜೂಜು, ಆಲೋಚನೆಗೆ ಹತ್ತುವ ಚಟ, ಸಾವು ಬದುಕಿನ ಹೋರಾಟವಾಗಿದ್ದು ಕೆಲವೊಮ್ಮೆ ಅಚಾತುರ್ಯಗಳಿಗೂ, ಸಂಕಷ್ಟಗಳಿಗೂ ಕಾರಣವಾಗುತ್ತದೆ. ನಗರದ ಅಕ್ಷರಸ್ಥ ಅಪ್ರಮಾಣಿಕತೆ ತೋರಿಕೆಯ ಅಭಿವ್ಯಕ್ತಿ, ಅಮಾಯಕರ ಶೋಷಣೆ ನಿರೂಪಿತವಾಗಿದ್ದು ಸಾಮಾಜಿಕ ಚಿಂತನೆಯ ಗಂಭೀರತೆಯನ್ನು ಮತ್ತು ಅನಿವಾರ್ಯತೆಯನ್ನು ಕಾದಂಬರಿಕಾರರು ನಿರೂಪಿಸುತ್ತಾರೆ. "ಒಟ್ಟಿನಲ್ಲಿ ಸ್ವರೂಪ ವ್ಯಕ್ತಿಯೊಬ್ಬನ ಸ್ವಂತಿಕೆಗೆ ಸ್ವರೂಪ ಕೊಡುವುದರ ಬಗೆಗಿನ ಪ್ರಯತ್ನವಾಗಿದ್ದರೂ ಇದರಲ್ಲಿನ ಸಾಮಾಜಿಕ ಚಿಂತನೆಗಳು ಗಂಭೀರವಾಗಿ ಪರಿಗಣಿಸಬೇಕಾದವು ಎನ್ನುವುದನ್ನು ಮರೆಯುವಂತಿಲ್ಲ".[೪೯] ಹೀಗೆ ಕಾದಂಬರಿ ಎಲ್ಲಾ ಸಾಮಾಜಿಕ ಆಯಾಮಗಳಲ್ಲಿ ತೆರೆದುಕೊಳ್ಳುತ್ತಾ ಸಾಗುತ್ತದೆ.

"ನಿಗೂಢ ಮನುಷ್ಯರು" ಕೃತಿಯ ಅನುಭವ ವಲಯವೇ ವಿಶಿಷ್ಟ ರೀತಿಯದು. ಪರಸ್ಪರ ನಂಬಿಕೆ ಕಳೆದುಕೊಂಡ ಸಮಾಜದಲ್ಲಿ ಸಂವಹನ ಕಷ್ಟವಾಗಿದ್ದು ಪ್ರತಿಯೊಬ್ಬರಿಗೂ ತಮ್ಮ ಅಸ್ತಿತ್ವವೇ ಪ್ರಶ್ನೆಯಾಗಿದೆ. ಪ್ರಕೃತಿ ಮತ್ತು ಮಾನವ ಇಬ್ಬರಲ್ಲಿ ಯಾರು ಹೆಚ್ಚು ಅಪಾಯಕಾರಿ ಮತ್ತು ನಿಗೂಢ ಎಂಬುದನ್ನು ಕಾದಂಬರಿ ಧ್ವನಿಸುತ್ತಾ ಸಾಮಾಜಿಕ ಸವಾಲುಗಳನ್ನು ಅನುಭವ ವೇದ್ಯವಾಗಿಸುತ್ತದೆ. ನಗರದ ನಾಗರಿಕ ಪ್ರಪಂಚದ ಜಂಜಾಟಗಳಿಗೆ ಬೇಸತ್ತ ಜಗನ್ನಾಥ ರಂಗಪ್ಪರೊಂದಿಗೆ ಅನುಭವ ಅರಸಿ ನಗುಬೀಡಿನ ಕಡೆಗೆ ಹೊರಡುತ್ತಾನೆ. ಬರಹಗಾರನಾದ ಜಗನ್ನಾಥ ಈ ಕೊನೆಕಾದಂಬರಿ ಬರೆಯುವ ಹೊತ್ತಿಗೆ ದೇಶಾಂತರ ಹೋಗಬೇಕೆಂದು ಅಥವಾ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಚಿಂತಿಸಿದವನು. ಗೋಪಾಲಯ್ಯ ನಾಗರಿಕ ಸಮಾಜದಲ್ಲಿ ಜಾದವ್, ಕಾಮತ್, ನರೋನ, ರಾಯಪ್ಪ ಹೀಗೆ ಅಸಂಖ್ಯಾ ಅನುಭವಗಳಿಂದ ಕೂಡಿದ್ದು ವ್ಯಕ್ತಿತ್ವದ ಸೋಗು ಧರಿಸಲಾಗದೆ ಬೇಸತ್ತು ಊರಗಡಿಗೆ ಬಂದು ಕೃಷಿಕಾರ್ಯ ಮಾಡದವರೊಂದಿಗೆ ನಿಗೂಢ ಸಮಾಜದಲ್ಲಿ ಅಸ್ತಿತ್ವ ಗುರುತಿಸಿಕೊಳ್ಳಲು ಹವಣಿಸುತ್ತಾನೆ. "ಗೋಪಾಲಯ್ಯ ಮೊದಲಲ್ಲಿ ಸುಬ್ಬರಾಯ ಎಂಬ ಹೆಸರಿನ ವ್ಯಕ್ತಿ ನೂರಾರು ವೇಷಾಂತರಗಳಲ್ಲಿ ಹೊಕ್ಕು ಹೊರಬಂದು ಈಗ ಗೋಪಾಲಯ್ಯ ಎಂಬ ಹೆಸರು ತೊಟ್ಟು ಇದು ಪ್ರಶಸ್ತ ಸ್ಥಳವೆಂದು ಭಾವಿಸಿ ಇಲ್ಲಿ ಏಲಕ್ಕಿ ತೋಟದ ಒಡೆಯನಾಗಿ ಆ ಹಕ್ಕಿಯಂತೆಯೇ ಈ ವಾಸ್ತವದಲ್ಲಿ ಸಿಕ್ಕಿಬಿದ್ದಿದ್ದಾನೆ. ತಪ್ಪಿಸಿಕೊಂಡು ಹೋಗಲೆಂದು ಮುಂದೆ ಪ್ರಯತ್ನಿಸಿದಾಗ ಆ ಹಕ್ಕಿಯಂಥ

---

೪೯. ಡಿ.ವಿ.ಪ್ರಹ್ಲಾದ್(ಸಂ.), 'ತೇಜಸ್ವಿಲೋಕ', ಪುಟ. ೯೮, ೨೦೦೭.

ಪಾಡು ಅವನದಾಗುತ್ತದೆ. ಕಾದಂಬರಿಯ ಕೊನೆಯಲ್ಲಿನ ಅವನ ಸ್ಥಿತಿಯನ್ನು ನಿರ್ಧಾರವನ್ನು ಈ ಹಿನ್ನೆಲೆಯಲ್ಲಿ ಪರಿಭಾವಿಸಬೇಕು. ಜಗನ್ನಾಥನಂತೆಯೇ ಗೋಪಾಲಯ್ಯನೂ ಮೊದಲಲ್ಲಿ ಸುಬ್ಬರಾಯ ಎಂಬ ಹೆಸರಿನಲ್ಲಿ ಪದ್ಯ ಬರೆಯುತ್ತಿದ್ದ ಬರಹಗಾರನಾಗಿದ್ದವನು. ಜಗನ್ನಾಥ ಜೊತೆಗೆ ಕಾಲೇಜು ಲೇಕ್ಚರರ್ ಆಗಿದ್ದಂತೆ ಗೋಪಾಲಯ್ಯ ಆಯುರ್ವೇದ ವೈದ್ಯ ವಿಜ್ಞಾನಿ ಆಗಿದ್ದವನು ಜಗನ್ನಾಥ ಲೆಕ್ಚರರ್ ಕೆಲಸ. ಬರವಣಿಗೆ ಬಿಟ್ಟವನು. ಮುಂದೆ ಗೋಪಾಲಯ್ಯನೂ ತನ್ನ ಕೆಲಸ ಬರವಣಿಗೆಬಿಟ್ಟವರು. ಮುಂದೆ ಗೋಪಾಲಯ್ಯ ನೂರಾರು ವೇಷಾಂತರಗಳಲ್ಲಿ ಹೋದವನಾದರೆ ಜಗನ್ನಾಥ ಅದೇ ದಾರಿ ಹಿಡಿದಿರುವವರು. ಪುಸ್ತಕದ ಅಂಗಡಿ ಇಡಬೇಕೆಂದು ಯೋಚಿಸಿದ್ದ ಜಗನ್ನಾಥ ಇದ್ದಕ್ಕಿದ್ದಂತೆ ಈಗಿನ ಗೋಪಾಲಯ್ಯನಂತೆಯೇ ಊರಲ್ಲಿ ಗ್ರಾಮೀಣ ಬದುಕನ್ನು ಕಟ್ಟಿಕೊಂಡು ಗ್ರಾಮ್ಯಜೀವನವನ್ನು ಮಾಡಲು ತೋಟಮಾಡಿ ಅದರಿಂದ ಹೊಸ ಹೊಸ ಅನುಭವ ಪಡೆಯಲೆಂದು ಹೊರಟವನು".[೫೦]

ಉಗ್ರಗಿರಿಯ ಮಲೆನಾಡಿನ ಸಮಾಜ ವಿಶಿಷ್ಟ ರೀತಿಯದು ಅಲ್ಲಿ ಭೂಗತ ಜಗತ್ತಿನ ದರೋಡೆಕೋರರ ಜೊತೆಗೆ ಮರಸರ, ಲೋರಿ, ಕಾಂಪು ಮುಂತಾದವರ ಕಿರಾತ ಪ್ರಪಂಚವೂ ಇದೆ. ಜಮೀನ್ದಾರಿ ಮತ್ತು ಜೀತ ವ್ಯವಸ್ಥೆ ಇನ್ನೂ ಜೀವಂತವಾಗಿದ್ದು ಜಾತಿ ಹೆಸರಿನಲ್ಲಿ ಶವಸಂಸ್ಕಾರ ಮಾಡದ ಮಂಗ-ಮುಸಿಯಗಳನ್ನು ಒಡೆದು ತಿನ್ನುವ ಮಗನ ಹೆಣವನ್ನೇ ಒಡ್ಡಿ ಹಂದಿ, ನರಿಗಳನ್ನು ಭೇಟಿಯಾಡುವ ಹೃದಯಹೀನ ಕಿರಾತ ಜನರಿದ್ದಾರೆ. ಸತ್ಯ ಮುಚ್ಚಿಡಬೇಕೆಂಬ ಅಭೀಪ್ಸೆಯಿಂದ 'ಶಾರಿ'ಯ ನಾಲಿಗೆ ಕತ್ತರಿಸುವ, ಒಬ್ಬನ ತಪ್ಪಿಗಾಗಿ ಇಡೀ ಮುಸ್ಲಿಂ ಸಮುದಾಯಕ್ಕೆ ಬೆಂಕಿಹಚ್ಚುವ ಮಲೆಗೌಳಿಗರ ಕ್ರೌರ್ಯ ಸಮಾಜದ ವಿನಾಶ ಸೂಚಕವಾಗಿದ್ದು ಇದಕ್ಕೆ ಸಂವಾದಿಯಾಗಿ ಉಗ್ರಗಿರಿ ಕುಸಿಯುವ ಚಿತ್ರಣ ಕಾದಂಬರಿಯಲ್ಲಿದೆ. ಭೂಕಂಪ, ಜಡಿಮಳೆ, ಬಿರುಗಾಳಿಗಳ ಚಿತ್ರಣದ ಜೊತೆ ಮಾನವನ ಸಣ್ಣತನ ಸ್ವಾರ್ಥ ಕ್ರೌರ್ಯ, ಹಿಂಸೆಗಳು ನಿರೂಪಿತವಾಗಿರುವುದು ಪರಿಣಾಮಕಾರಿಯಾಗಿ ಕಥನವನ್ನು ರೂಪಿಸಿದೆ ಎಂಬುದು ಕಾದಂಬರಿಯನ್ನು ಅವಲೋಕಿಸಿದಾಗ ಸತ್ಯವೆಂದು ಭಾಸವಾಗುತ್ತದೆ.

ತೇಜಸ್ವಿಯವರ 'ಕರ್ವಾಲೊ' ಕಾದಂಬರಿಯು ಸಮಾಜದ ಬದುಕಿನ ಪ್ರಕ್ರಿಯೆಯಲ್ಲಿ ಹೊರಹೊಮ್ಮುವ ವಿವಿಧ ಧ್ವನಿಗಳಿಗೆ ಸದಾ ತೆರೆದುಕೊಂಡು ಒಟ್ಟು ಬದುಕಿನ ಅರ್ಥವನ್ನು ಶೋಧಿಸಹೊರಡುವ ಪ್ರಾಮಾಣಿಕ ಪ್ರಯತ್ನವಾಗಿದೆ. ಮುಖ್ಯ ಅಮುಖ್ಯ, ಸಾಮಾನ್ಯ-ಅಸಾಮಾನ್ಯ, ಲೌಕಿಕ-ಅಲೌಕಿಕ ವರ್ಗೀಕರಣ ಮೀರಿ ಎಲ್ಲ ಪಾತ್ರ ಘಟನೆಗಳಿಗೂ ತಮ್ಮದೇ ಆದ ಅಸ್ತಿತ್ವವಿದೆ. ಬದುಕು ವೈಯಕ್ತಿಕ ಅಸ್ತಿತ್ವ ಮೀರಿ ಪರಸ್ಪರ ಸಂಬಂಧ, ಘರ್ಷಣೆಗಳನ್ನು

೫೦. ಜಿ.ಎಚ್.ನಾಯಕ, 'ವಿನಯವಿಮರ್ಶೆ', ಪುಟ. ೧೭೩, ೧೯೯೧.

ಮೀರಿದ್ದೆಂದು ಕಾದಂಬರಿ ನಿರೂಪಿಸುತ್ತದೆ. ಲೇಖಕರು ಮಲೆನಾಡಿನ ಬದುಕು ಅವರ ಗ್ರಾಮೀಣ ಆಯಾಮಗಳ ಒಕ್ಕಲುತನಗಳು ಹಾಗೂ ಸಾಮಾಜಿಕ ಅಭಿವ್ಯಕ್ತಿಯ ಜೊತೆಗೆ ಕೃಷಿಕರು ಎದುರಿಸುತ್ತಿರುವ ಸಮಸ್ಯೆಗಳು, ಅಧಿಕಾರ ವ್ಯವಸ್ಥೆಯ ಕ್ರೌರ್ಯ, ಜೊತೆಗೆ ಕಾಡಿನ ಮೌನ, ಏಕಾಂತ ಗ್ರಾಮಜೀವನದ ಕಷ್ಟಕಾರ್ಪಣ್ಯಗಳು, ಪೇಟೆಯ ಗಲೀಜು, ಹೊಗೆ, ಜನಜಂಗುಳಿ ಮುಂತಾದ ಅಂಶಗಳು ಚರ್ಚಿತವಾಗಿವೆ. ಕಾಡುಮೇಡು ಅಲೆಯುತ್ತ ಹುಳಹುಪ್ಪಟೆಗಳನ್ನು ಹಿಡಿಯುವ ಮಂದಣ್ಣನಿಗೆ ಹೇಗಾದರೂ ಮಾಡಿ ನೌಕರಿ ಗಿಟ್ಟಿಸಿಕೊಂಡು ನಾರ್ವೆಯ ರಾಮಯ್ಯನ ಮಗಳು ರಾಮಿಯನ್ನು ವಿವಾಹವಾಗುವುದು ಆತನ ಪರಮ ಧ್ಯೇಯವಾಗಿರುತ್ತದೆ. ನಿರೂಪಕ ಅಕಾಲಿಕ ಮಳೆ, ಅಧಿಕಾರಶಾಹಿಯ ಜೀತಪದ್ಧತಿ, ಕೈಸುಡುವ ಬ್ಯಾಂಕ್ ಬಡ್ಡಿಗಳಿಂದ ಬೇಸತ್ತು ಕೃಷಿ ಕಾಯಕದಿಂದ ವಿಮುಖನಾಗಲು ಹವಣಿಸುತ್ತಾನೆ. ಈ ಎಲ್ಲವುಗಳ ಮಧ್ಯೆ ಕೀಟಶಾಸ್ತ್ರಜ್ಞ ಕರ್ವಾಲೋ ಬಳಿಗೆ ಭತ್ತದ ಪೈರಿಗೆ ಕೀಟಬಾಧೆಯಿಂದ ಪರಿಹಾರ ಕಂಡುಕೊಳ್ಳಲು ತೆರಳಿ ನಂತರ ಪ್ರಕೃತಿಯ ನಿಗೂಢ ಪ್ರಪಂಚದ ಅರಿವು ನಿರೂಪಕರಿಗಾಗುತ್ತದೆ. ಈ ಮೂಲಕ ಕೃಷಿ ಸಮಾಜ, ಅಧಿಕಾರವರ್ಗ ಪರಿಸರದ ನಿಗೂಢತೆಗಳ ಅನಾವರಣವಾಗುತ್ತದೆ. ನಿರೂಪಕ, ಮಂದಣ್ಣ, ಕರ್ವಾಲೋ ಮುಂತಾದವರು ಗ್ರಾಮೀಣ ಪ್ರದೇಶದಲ್ಲಿ ಬದುಕನ್ನು ಅನುಭವಿಸಿ ಸೃಷ್ಟಿಯ ನಿಗೂಢತೆ ಭೇದಿಸಲು ಹೊರಟರೆ, ಪೊಲೀಸ್ ವ್ಯವಸ್ಥೆ, ಅಧಿಕಾರವರ್ಗ ಸಾಮಾಜಿಕರಿಗೆ ಸಮಸ್ಯೆಗಳನ್ನೇ ಸೃಷ್ಟಿಸಲು ಇದೆಯೇನೋ ಎಂಬಂತೆ ಭಾಸವಾಗುತ್ತದೆ. ಹಾವುಗೊಲ್ಲರ ಎಂಗ್ಟ ಹಾಗೂ ಆತನ ಹೆಂಡತಿ ಅರಣ್ಯ ಇಲಾಖೆ ಶೋಷಿಸುವ ರೀತಿ ವಿಧಿಯಿಲ್ಲದೆ ಒಪ್ಪುವ ಅವರ ಪರಿಸ್ಥಿತಿ ಇವೆಲ್ಲವೂ ಗ್ರಾಮೀಣ ಜನರ ಮುಗ್ಧರನ್ನು ವಂಚಿಸುವಂತಿದೆ. ಈ ಮೂಲಕ ನಾಗರಿಕ ಸಮಾಜ ತಲೆತಗ್ಗಿಸುವಂತಿದೆ. ಕೃತಿಯಲ್ಲಿ ದಟ್ಟವಾದ ಸಾಮಾಜಿಕ ಕಾಳಜಿ ಇದ್ದು ಸಂಯೋಜಕ ದೃಷ್ಟಿಕೋನವನ್ನು ಪರಿಶೀಲಿಸುವ ಅಗತ್ಯವಿದೆ. ಸಾಮಾಜಿಕ ಮತ್ತು ತಾತ್ವಿಕ ಆಯಾಮಗಳು ಪೂರಕವಾಗಿದ್ದು, ಒಂದರೊಡನೊಂದು ಬೆರೆತು ಬರವಣಿಗೆಗೆ ಮೌಲಿಕತೆ ತಂದಿದೆ. ಪ್ರತಿಯೊಂದು ಕ್ಷೇತ್ರ, ಸನ್ನಿವೇಶ, ವಸ್ತು, ಪ್ರಾಣಿಗಳನ್ನು ಬೆರಗುಗಣ್ಣಿನಿಂದ ನೋಡುವ ತೇಜಸ್ವಿ ವಿವಿಧ ಸಾಮಾಜಿಕ ಸ್ತರದ ಬದುಕಿನ ಪರಿವರ್ತನೆ ಆತಂಕಗಳನ್ನು ಯಶಸ್ವಿಯಾಗಿ ದಾಖಲಿಸಿದ್ದಾರೆ.

'ಚಿದಂಬರ ರಹಸ್ಯ' ಕೆಸರೂರಿನ ಗ್ರಾಮದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಧಃಪತನವನ್ನು ಬಿಂಬಿಸುವ ಕೃತಿಯಾಗಿದೆ. ಒಂದು ಸಮಾಜದ ಅವನತಿ ಸಾಂಸ್ಕೃತಿಕ ಆರ್ಥಿಕ ಕಾರಣಗಳಿಂದ ಘಟಿಸಬಹುದೆಂದು ಸ್ಪಷ್ಟವಾಗಿಯೇ ತಿಳಿಸುವ ತೇಜಸ್ವಿ ಅವರು ಈ ಅವನತಿಯ ಕುರೂಪವನ್ನು ಕೆಸರೂರಿನ ಜೀವನದ ಪ್ರತಿ ಹಂತದಲ್ಲೂ ಗುರುತಿಸುತ್ತಾರೆ. ಇಲ್ಲಿನ ಬದುಕು ಅತ್ಯಂತ ಜಟಿಲವೂ, ರಹಸ್ಯಾತ್ಮಕವೂ ಆದ ವಿರೋಧಾಭಾಸಗಳಿಂದ ತುಂಬಿದ್ದು ಪ್ರತಿಯೊಬ್ಬರು

ತಮ್ಮ ಲಾಭಕ್ಕಾಗಿಯೇ ಹವಣಿಸುತ್ತಾರೆ. ಈ ಮುಖಾಮುಖಿ ಘರ್ಷಣೆ ಅವರ ಬದುಕಿಗೊಂದು ವಿಲಕ್ಷಣ ಚಲನೆಯನ್ನು ತಂದುಕೊಟ್ಟಿದ್ದು ಇಡೀ ಕೆಸರೂರಿನ ಅವನತಿಗೆ ಕಾರಣವಾಗಿದೆ.

"ಚಿದಂಬರರಹಸ್ಯದ ಮುಖ್ಯ ಆಶಯ ಗ್ರಾಮಜೀವನದ ಪ್ರಕಾರವೊಂದರ ವಿಘಟನೆ. ಈ ಆಶಯ ರಾವ್‌ಬಹುದ್ದೂರರ ಪ್ರಸಿದ್ಧ ಕಾದಂಬರಿ ಗ್ರಾಮಾಯಣದಲ್ಲಿ ದೊಡ್ಡ ಪ್ರಮಾಣದಲ್ಲಿಯೇ ಕಾಣಿಸಿಕೊಂಡಿತ್ತು. ಆದರೆ ಗ್ರಾಮಾಯಣದ ಕ್ರಿಯೆಯಕಾಲ ಭೂತಕಾಲದ್ದಾಗಿತ್ತು ಮತ್ತು ಅದರ ಸ್ವರೂಪ ಅಭಿಜಾತ ನಾಟಕದ ಸ್ವರೂಪದ್ದಾಗಿತ್ತು. ಚಿದಂಬರ ರಹಸ್ಯ ವರ್ತಮಾನದಲ್ಲಿ ಕೇಂದ್ರಿತವಾದ ಕೃತಿ ಮತ್ತು ಅದರ ಮೂಲರಚನೆ ರಹಸ್ಯಕಾದಂಬರಿಯದು. ಆಶ್ಚರ್ಯದ ಮಾತೆಂದರೆ ಲೋಕಪ್ರಿಯ ಕಾದಂಬರಿಯ ಆಕಾರದಲ್ಲಿ ಸಮಾನ ವಿಶಿಷ್ಟ ಆಶಯಗಳು ಮಹಾಕಾವ್ಯದ ಸ್ವರೂಪದ ಗ್ರಾಮಾಯಣದಲ್ಲಿಗಿಂತ ಮಹತ್ವಾಗಿರುವುದು. ಚಿದಂಬರರಹಸ್ಯ ಪ್ರಳಯಾತ್ಮಕ ಸ್ವರೂಪದ ಕಾದಂಬರಿ. ತೇಜಸ್ವಿಯವರ ಪ್ರಸಿದ್ಧ ಕಥೆ 'ಕುಬಿ ಮತ್ತು ಇಯಾಲ'ದಲ್ಲಿ ಕಂಡುಬರುವ ಒಳನೋಟಗಳೇ ಇಲ್ಲಿ ನಿಶ್ಚಿತ ಸ್ವರೂಪವನ್ನು ತಳೆದಿದೆ. ಶ್ರೀರಂಗರ ವಿಕ್ಷಿಪ್ತ ಕಾದಂಬರಿ 'ವಿಶ್ವಾಮಿತ್ರ ಸೃಷ್ಟಿ' ಮೂವತ್ತರ ದಶಕದೆಡೆಗೆ ಬಂದ ನಂತರ, ಗ್ರಾಮೀಣ ಜೀವನದ ಸತ್ಯ ಮತ್ತು ಅದನ್ನು ಗ್ರಹಿಸುವ ಸುಶಿಕ್ಷಿತ ವಸ್ತು ಸುಸಂಸ್ಕೃತ ವರ್ಗ ಇವುಗಳ ನಡುವಿನ ಕಂದರ ಕಾದಂಬರಿಯ ವಸ್ತುವಾಗಿ ಬಂದದ್ದು ಚಿದಂಬರ ರಹಸ್ಯದಲ್ಲಿ ಮಾತ್ರ"[೫೧] ಕಾದಂಬರಿಯ ಆರಂಭದಲ್ಲಿ ಕ್ರಾಂತಿಯಾಗಲೇಬೇಕು ಎಂದು ಜಾತಿ ವಿನಾಶ ಸಂಘ, ವಿಚಾರವಾದಿ ಸಂಘಟನೆ ಮೂಲಕ ಸಾಮಾಜಿಕ ಬದಲಾವಣೆಗೆ ಆಶಿಸುವ ತರುಣ ಸಮಾಜ ಹಾಗೂ ಅವರನ್ನು ತಿದ್ದಿ ಸರಿದಾರಿಗೆ ತರುವ ಶೈಕ್ಷಣಿಕ ವ್ಯವಸ್ಥೆಯ ಪರಿಚಯವಾಗುತ್ತದೆ. ಕೆಸರೂರಿನ ಗ್ರಾಮ ಸಮಾಜ ಹತ್ತು ಹಲವು ಸಮಸ್ಯೆಗಳಿಂದ ಕೂಡಿದ್ದು ಈ ಸ್ಥಿತಿಗೆ ಕಾರಣವಾಗಿ ಆರ್ಥಿಕತೆಯ ಹಂಬಲ, ಜಾತೀಯತೆ, ಸ್ವಾರ್ಥ, ರಾಜಕೀಯ, ವೈಯಕ್ತಿಕ ಲಾಲಸೆಗಳ ಈ ಗ್ರಾಮಸಮಾಜವನ್ನು ಅಧೋಗತಿಗೆ ತಳ್ಳಿವೆ. ನೈತಿಕತೆ ದೂರದೃಷ್ಟಿ ಸಾಂಸ್ಕೃತಿಕ ಪರಿಯಿಲ್ಲದ ರಾಜಕೀಯ ಹಾಗೂ ಆಢಳಿತಶಾಹಿ ವ್ಯವಸ್ಥೆ ಕೇರಳ ಮೂಲಕ ಸುಲೇಮಾನ್ ಬೇರಿಗೆ ಕಾಡಿನ ಉತ್ಪನ್ನಗಳನ್ನು ಬಳಸಲು ಮತ್ತು ಕಾಡನ್ನು ಕಡಿಯಲು ಅವಕಾಶ ನೀಡಿ ಕಾಡನ್ನೇ ಬೋಳಿಸಿದ್ದರ ಪರಿಣಾಮವಾಗಿ ಲಂಟಾನ ಬೆಳೆದು ಏಲಕ್ಕಿ ಕತ್ತು ಹಿಸುಕುವುದರೊಂದಿಗೆ ಆರ್ಥಿಕ ಅವನತಿ ಪ್ರಾರಂಭವಾಯಿತು. ಸಾಂಸ್ಕೃತಿಕ ಬೌದ್ಧಿಕ ಅಧಃಪತನ ಕಂಡ ಕೆಸರೂರಿನ ಸಮಾಜ ಎಲ್ಲವನ್ನು ಜಾತಿ, ಮತೀಯ ಚಿಂತನೆಯಲ್ಲಿ ಅನಾವರಣಗೊಳಿಸುವಂತಿದೆ. ವೈಚಾರಿಕ ಮತ್ತು ಸಾಂಪ್ರದಾಯಿಕ ಸಮಾಜಕ್ಕೂ ನಡುವಿನ ಸಂಘರ್ಷಗಳು ಅಲ್ಲಲ್ಲಿ ವ್ಯಕ್ತಗೊಂಡಿವೆ. ವೈಚಾರಿಕ ಪ್ರಜ್ಞೆಯ ಮನಃಸ್ಥಿತಿಯ ಕೋಪಕ್ಕೆ ಸಮಾಜ ಒಳಪಡಲು ಸನಾತನ ಕಾಲದಲ್ಲಿ ಪಾಲಿಸಿಕೊಂಡು ಬಂದ ಅಂಧಕಾರ, ಮೌಢ್ಯತೆಗಳು

೫೧. ಜಿ.ಎಸ್.ಆಮೂರ, 'ಕನ್ನಡ ಕಥನಸಾಹಿತ್ಯ : ಕಾದಂಬರಿ', ಪುಟ. ೩೧೦, ೨೦೧೬.

ಅಡ್ಡಿಪಡಿಸುತ್ತವೆ. ಜೀವನಾನುಭವದ ಸ್ತರಗಳ ಮೂಲಕ ಆರೋಗ್ಯಕರ ಶಕ್ತಿಯನ್ನು ಕಾಯ್ದುಕೊಳ್ಳಲು ಸನಾತನಮೌಲ್ಯಗಳು ತೀವ್ರವಾದ ಪ್ರತಿರೋಧ ಒಡ್ಡುತ್ತವೆ. ಇವು ಗ್ರಾಮೀಣ ಚಿಂತನೆಗೆ ಜೀವವನ್ನು ತುಂಬುತ್ತವೆ.

'ಜುಗಾರಿಕ್ರಾಸ್' ಕಾದಂಬರಿಯು ಓದುಗ ವರ್ಗದೊಂದಿಗೆ ಅರ್ಥಪೂರ್ಣ ಸಂಬಂಧದಿಂದ ಕಟ್ಟಿರುವ ಕ್ರಮ ಹಾಗೂ ಭಯ ಕುತೂಹಲವನ್ನು ಕೇಂದ್ರವಾಗಿ ಒಳಗೊಂಡಿರುವ ಅಭಿವ್ಯಕ್ತಿ ಕ್ರಮದಿಂದಾಗಿ ಹೆಚ್ಚು ಗಮನಸೆಳೆಯುತ್ತದೆ. ಸೃಜನಶೀಲ ಸಾಹಿತ್ಯದ ಕುತೂಹಲ, ಹಾಸ್ಯ ಸಾಹಿತ್ಯದ ವಿನೋದಶೈಲಿ, ನೇರ ಅನುಭವ ಕಥನದ ಸರಳತೆ ಮತ್ತು ಸಮಗ್ರತೆ ಕೃತಿಯನ್ನು ಸಮರ್ಥವಾಗಿ ಬೆಳೆಸಿದೆ. ಈ ಕಾದಂಬರಿಯ ಓದು ಒಂದು ಎಲ್ಲೂ ಸಕರ ಅನುಭವದಂತಿದ್ದು ಮನುಷ್ಯ ಹಾಗೂ ಸಮಾಜದ ಸಾಮಾಜಿಕ ಸಂಬಂಧಗಳ ಸತ್ಯ ಅನ್ವೇಷಣೆಯಾಗಿದೆ. ಸ್ವಗತ, ಚರ್ಚೆ ನಿರೂಪಣೆ ಮೂಲಕ ಸಾಗುವ ಕಾದಂಬರಿಯು ಯಾವುದೇ ಅತಿರೇಕದ ವರ್ಣನೆಗೆ ಕ್ಲಿಷ್ಟತೆಗೆ ಇಳಿಯದೆ ಸರಾಗವಾಗಿ ವಸ್ತುಬೆಳವಣಿಗೆ ಹೊಂದುತ್ತದೆ. ತೇಜಸ್ವಿಯವರು ತಮಗೂ ಓದುಗನಿಗೂ ಆಗಬಹುದಾದ ಪ್ರಮಾದ, ಅಂತರಗಳ ಕುರಿತು ಎಚ್ಚರಿಕೆಯನ್ನು ಮುನ್ನುಡಿಯಲ್ಲಿಯೇ ಗುರುತಿಸಿದ್ದಾರೆ. ಈ ಕೃತಿಯೊಳಗೆ ಮತ್ತಾವ ಹೆಚ್ಚಿನ ಪ್ರಾಧಾನ್ಯತೆಯೂ ಇಲ್ಲ. ಕಾದಂಬರಿ ಓದಿದಾಗ ಏನನಿಸುತ್ತದೆಯೋ ಅದಷ್ಟೇ ಮುಖ್ಯ. ಎಂದು ಸ್ಪಷ್ಟ ವಿವರಣೆ ನೀಡುತ್ತಾರೆ. ಸಹ್ಯಾದ್ರಿಯ ಕಾಡಿನೊಳಗೆ ನಡೆಯುವ ಭೀಕರ ಕಳ್ಳದಂಧೆ, ಅವ್ಯವಹಾರ, ಸಾಮಾಜಿಕ ಸ್ಥಿತ್ಯಂತರಗಳನ್ನು ಕಾದಂಬರಿ ಮುಕ್ತ ಅನುಭವಕ್ಕೆ ತರುತ್ತದೆ. ದೇವಪುರದ ಅವಸಾನದ ನಂತರ ಆಲೂರಿನ ಗ್ರಾಮ ವಾಸ್ತವ ಚಿತ್ರಣವನ್ನು ಮನಃಮುಟ್ಟುವಂತೆ ಲೇಖಕರು ವಿವರಿಸುತ್ತಾರೆ. "ಸುತ್ತ ಭೀಕರವಾಗಿ ಬೆಳೆದ ಕಾಡಿನ ನಡುವೆ ಮುರುಟಿದ ಸೂರಿನ ಕುಸಿದ ಗೋಡೆಗಳ ಈ ಜೋಪಡಿಗಳು ಕಾಯಿಲೆ ಹಿಡಿದ ಮುದುಕರಂತೆ ಕಾಣುತ್ತಿದ್ದವು. ಅನೇಕ ಜೋಪಡಿಗಳ ಮೇಲೆ ಆಗಲೇ ಉರುಚಟ್ಲೆ ಬೀಳುಗಳು ಹಬ್ಬ ಜೋಪಡಿಗಳ ಆಕಾರವನ್ನೇ ಮರೆಸಿದ್ದವು. ಇಡೀ ಗ್ರಾಮಕ್ಕೆ ಗ್ರಾಮವೇ ನೆಲಸಮವಾಗಿ ಅಲ್ಲಿ ಹೆಮ್ಮರಗಳು ಬೆಳೆದುನಿಲ್ಲುವುದು ನಾಳೆ ನಾಳಿದ್ದಿನ ಕಾಲದ ಪ್ರಶ್ನೆಯಾಗಿತ್ತು. ಆಕಾಶ ಸಿಕ್ಕರೆ ಕೋಟೆಕೊತ್ತಲಗಳ ಹೆಗ್ಗಲ್ಲುಗಳನ್ನೇ ಬೇರುಗಳಿಂದ ಮೀಟಿ ಉರುಳಿಸಿ ಬೆಳೆದುನಿಲ್ಲುವ ಕಾಡಿಗೆ ಯಾರೋ ಹಾಕಿರುವ ತಾತ್ಕಾಲಿಕ ಜೋಪಡಿಗಳಂತೆ ಕಾಣುವ ಈ ಹಾಳೂರನ್ನು ಹೊಸಕಿ ಹಾಕುವುದೇನು ದೊಡ್ಡದೇ?"[೫೨] ಎಂದು ಗ್ರಾಮ ಸಂಸ್ಕೃತಿಯೊಂದರ ಭೀಕರ ಅವನತಿಯನ್ನು ಅತ್ಯಂತ ಸರಳ ರೀತಿಯಲ್ಲಿ ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ. 'ಜುಗಾರಿಕ್ರಾಸ್' ಕಾದಂಬರಿಯ ಬಗ್ಗೆ ಕೀರ್ತಿನಾಥ ಕುರ್ತಕೋಟಿಯವರ ಮಾತನ್ನು ನೋಡಬಹುದು. "ಈ ಕಾದಂಬರಿಯಲ್ಲಿ ಅಂತರ್ಗತವಾಗಿರುವ

---

೫೨. ಕೆ.ಪಿ.ಪೂರ್ಣಚಂದ್ರ ತೇಜಸ್ವಿ 'ಜುಗಾರಿಕ್ರಾಸ್', ಪುಟ. ೭೯, ೧೯೯೮.

ಸಾಹಸಕಥೆ ಮತ್ತು ಪತ್ತೆದಾರಿ ಕಾದಂಬರಿಯ ಉಪಯೋಗದ ಬಗ್ಗೆ ಎರಡು ಮಾತು ಹೇಳಬೇಕು. ಸಾಹಸಕಥೆ ಮತ್ತು ಪತ್ತೆದಾರಿ ಕಾದಂಬರಿಗಳ ಬಗ್ಗೆ ಕೆಲವು ಆಕ್ಷೇಪಗಳಿವೆ. ಅವು ಗ್ರಾಮೀಣ ಬದುಕಿನ ವಾಸ್ತವತೆಗೆ ನಿಷ್ಠವಾಗಿರುವುದಿಲ್ಲ. ಅವೆರಡೂ ಅವಾಸ್ತವವೆಂದೇ ಸಾಹಿತ್ಯಕ ನಂಬಿಕೆಯಾಗಿದೆ. ಸುರೇಶ ಕನ್ನಡ ಸಾಹಿತ್ಯವನ್ನು ತೆಗೆದುಕೊಂಡು ಎಂ.ಎ. ಮಾಡಿದ ಬುದ್ಧಿವಂತ ಸಾಹಸ ಕಥೆ ಮತ್ತು ಪತ್ತೇದಾರಿ ಕಾದಂಬರಿಗಳು ಅವನ ಸಾಹಿತ್ಯದ ಪರಿಕಲ್ಪನೆಯ ಹೊರಗಿನವು. ಸಾಹಿತ್ಯ ವಾಸ್ತವವಾಗಿರಬೇಕು. ಆದರೆ ಈ ವಾಸ್ತವತೆ ಎಂದರೆ ಮಧ್ಯಮವರ್ಗದ ಸುಶಿಕ್ಷಿತರ ಪ್ರಜ್ಞೆಗೆ ಮಾತ್ರ ಕಾಣುವಂತದ್ದು ಜಗತ್ತಿನ ಆಗುಹೋಗುಗಳಿಗೆ ಸಾಹಿತ್ಯ ಕನ್ನಡಿ ಹಿಡಿಯಬೇಕು. ಇದು ಸುರೇಶನಿಗೆ ಒಪ್ಪಿಗೆಯಾಗುವ ಸಾಹಿತ್ಯದ ಕಲ್ಪನೆಯಾಗಿದೆ"[೫೩] ಅಂದರೆ ಗ್ರಾಮೀಣ ಪ್ರದೇಶದಲ್ಲಿರುವ ಸುರೇಶನ ಸೂಕ್ಷ್ಮತೆಯನ್ನು ಅವನ ಸುತ್ತ ನಡೆಯುವ ಭೂಗತ ಘಟನೆಗಳಿಗೆ ಅವನ ಸ್ಪಂದನೆಯನ್ನು ತಿಳಿಸುತ್ತದೆ. ಕಾಡಿನ ಮಧ್ಯೆ ಇರುವ ಜುಗಾರಿ ಕ್ರಾಸ್ ಅಲ್ಲಿ ನಡೆಯುವ ಎಲ್ಲಾ ದುರ್ವ್ಯಾಪಾರಗಳಿಗೂ ಸಾಕ್ಷಿಯಾಗಿದೆ. ಜುಗಾರಿಕ್ರಾಸ್ ಅನಾವರಣಗೊಳಿಸುವ ಲೋಕ ರಾಕ್ಷಸರಲೋಕ ಬಹಳಷ್ಟು ನಡೆಸುವ ದೇವಪುರ ಭಗ್ನಪ್ರತಿಮೆಗಳ ದೊಡ್ಡ ಮೋಜದು. ಇಲ್ಲಿ ಮನುಷ್ಯ ಮೋಕ್ಷದ ಹಲವಾರು ರಾಕ್ಷಸರು ಕ್ರಿಯಾಶೀಲರಾಗಿದ್ದಾರೆ. ಇವರಾರಿಗೂ ಕಾನೂನು ಮತ್ತು ನ್ಯಾಯಾಲಯಗಳ ಭಯವಿಲ್ಲ. ಕೊಲೆ, ವ್ಯಕ್ತಿಗಳು ನಾಪತ್ತೆಯಾಗುವುದು, ಭ್ರಷ್ಟಾಚಾರ – ಇಲ್ಲಿಯ ದೈನಂದಿನ ಘಟನೆಗಳು ಇಲ್ಲಿಯೂ ಒಂದು ನ್ಯಾಯವಿದೆ. ಆದರೆ ಅದು ರಾಕ್ಷಸನ್ಯಾಯ ಈ ಜಗತ್ತನ್ನಾಳುವವ ಜಗತ್ತಿನ ಯಾವ ಮೂಲೆಯಲ್ಲಿಯೂ ಇರಬಹುದಾದ ಬಾಸ್ – ಅವನ ನೇರವಾದ ಸಂಪರ್ಕ ಯಾರಿಗೂ ಇಲ್ಲವಾದರೂ ಅವನ ಸಾಮರ್ಥ್ಯದ ಭಯದಲ್ಲಿಯೇ ಇಲ್ಲಿಯ ಜನ ಬದುಕುತ್ತಾರೆ.

ಈ ಜಗತ್ತಿನಲ್ಲಿ ಪ್ರವೇಶಿಸಿ ಯಾವ ಮಾಯೆಯಿಂದಲೂ ಸುರಕ್ಷಿತವಾಗಿ ಹೊರಬರುವ ಸುರೇಶ, ಗೌರಿ ಅವ್ಯವಹಾರಿಕರಾದ ಅಮಾಯಕರು, ರಫಿ – ಜಯಂತಿಯರ ಪ್ರೀತಿಯಂತೆ ಇವರ ಪ್ರೀತಿಯೂ ಗಾಢವಾದುದು. ಆದರೆ ಇಂಥವರ ರಕ್ಷಣೆಗೆ ರಾಜಪ್ಪನಂಥ ಇನ್ನೊಬ್ಬನು ಕಾದಂಬರಿಯಲ್ಲಿದ್ದಾನೆ. ಸುರೇಶ, ಗೌರಿ, ರಾಜಪುರದ ಲೋಕ ಮುಗ್ಧತೆಯಲೋಕ ಕಾದಂಬರಿಯಲ್ಲಿ ಈ ಲೋಕದ ಉಪಸ್ಥಿತಿ ರಾಕ್ಷಸಲೋಕದ ಕರಾಳತೆಯನ್ನು ಮತ್ತಷ್ಟು ಕರಾಳವಾಗಿ ತೋರುವುದಕ್ಕೆ ಸಾಧನವಾಗಿದೆ. ಈ ಕಾದಂಬರಿಯಲ್ಲಿಯೂ ಬಿಡಿಸಲಾಗದ ಶೋಧ ರಹಸ್ಯಗಳಿವೆ. ಸುರೇಶ ತನ್ನ ಗ್ರಾಮೀಣ ಸಂಸ್ಕೃತಿಯ ಶೋಧನೆಯನ್ನು ಅವನ ರಕ್ಷಣಾತ್ಮಕ ತಂತ್ರದ ಮುಖೇನ ಶೋಧಿಸುತ್ತಾನೆ. ಈ ಮೂಲಕ ಸಮಕಾಲೀನ ಸಮಾಜದ ಜೀವನದ ಕರಾಳತೆಗೆ ರಾಹುಗನ್ನಡಿ ಹಿಡಿಯುವ ತೇಜಸ್ವಿಯವರ ಪ್ರಯತ್ನ ಅತ್ಯಂತ ಗಂಭೀರವಾಗಿದೆ.

---

೫೩. ಕೀರ್ತಿನಾಥ ಕುರ್ತಕೋಟಿ, 'ನೂರು ಮರ ನೂರುಸ್ವರ', ಪುಟ. ೫೩೩, ೧೯೯೮.

'ಮಾಯಾಲೋಕ' ಕಾದಂಬರಿಯ 'ಗೊಂದಲಗೇರಿ' ಜನ ನಿಜವಾಗಿಯೂ ವಿಚಿತ್ರ ಗೊಂದಲಗಳಲ್ಲಿ ಬದುಕುತ್ತಿದ್ದಾರೆ. ಭಂಡಾರಿಬಾಬುವನ್ನು ಮತಾಂತರ ಮಾಡಿದರೆಂದು ಬೊಬ್ಬೆಹಾಕುವ ಹೆಂಗಸರು ಹಳ್ಳಿಯ ನೀರಿಗೆ ತಲೆಕೆಡಿಸಿಕೊಳ್ಳುವವರು. ಮೋಟಾರು ಕೆಟ್ಟಿದ್ದು ಹೇಗೆಂದು ಅರಿಯದವರು, ಬೇಟೆಯಾಡಿದ್ದು ಕಾಡುಹಂದಿಯೋ ಊರಹಂದಿಯೋ ಎಂದು ಸ್ಪಷ್ಟವಾಗಿರದೆ ಗಲಭೆ ಎಬ್ಬಿಸುವವರು ನೆಲ ಅಗೆಯುವಾಗ ಸಿಕ್ಕಮಡಕೆ ಬಗ್ಗೆ ಊಹಾಪೋಹ ಹೀಗೆ ಎಲ್ಲವು ಗೊಂದಲ. ತೇಜಸ್ವಿಯವರ ಈ ಕಥನದಲ್ಲಿ ಕೃಷಿ, ವ್ಯಾಪಾರ, ಅಧಿಕಾರಶಾಹಿ ಪತ್ರಕರ್ತ, ಕಾರ್ಮಿಕ ಸಂಘಟನೆ, ರೈತ ಚಳವಳಿ, ರಾಜಕೀಯ ಪಕ್ಷ ಹೀಗೆ ಹಲವು ಸಮಾಜಗಳ ವಿವರಣೆಯಿಂದ ಕಥಾನಕ ಮನೋಜ್ಞವಾಗಿ ಸಾಗುತ್ತದೆ. ಈ ಕಾದಂಬರಿಯಲ್ಲಿ ಗ್ರಾಮೀಣ ಭಾಗದ ಜೀವನವಾಗಿರುವ ಕೃಷಿಪ್ರಧಾನ ಸಮಾಜ ಎದ್ದು ಕಾಣುತ್ತದೆ. ಹೇಮಾವತಿನದಿಯ ಅನತಿದೂರದಲ್ಲಿರುವ 'ಊರಳ್ಳಿ' ಎಂಬ ಚಿಕ್ಕ ಹಳ್ಳಿ ವ್ಯವಸಾಯ ಪ್ರಧಾನವಾಗಿದ್ದು ಗದ್ದೆಗಳನ್ನೆಲ್ಲಾ ಹದಮಾಡಿ ಬೇಸಿಗೆಯಲ್ಲೂ ಭತ್ತ ಬೆಳೆಯುತ್ತಿದ್ದವರು ಈಚೆಗೆ ಕಳಭಟ್ಟಿ ಕಾಯಿಸುವುದು ಲಾಭದಾಯಕ ಹಾಗೂ ಮೈಕೈ ನೋವಿರದ ಕೆಲಸವೆಂದು ಭಾವಿಸಿದ್ದಾರೆ. ಐದು ಎಕರೆ ಜಮೀನುಹೊಂದಿದ್ದ ಅಣ್ಣಪ್ಪನು ಕೂಡ ಕೃಷಿಗೆ ವಿದಾಯ ಹೇಳಿ ಕೂಲಿಕೆಲಸಕ್ಕೆ ನಿರೂಪಕರ ತೋಟ ಅರಸಿ ಬರುತ್ತಾನೆ. ಕುಡಿವ ನೀರಿಗೂ ತೊಂದರೆಯಾಗಿದ್ದು "ಕರ್ನಾಟಕಕ್ಕೂ ಅಕ್ಕಪಕ್ಕದ ರಾಜ್ಯಗಳಿಗೂ ಜಗಳ ಶುರುವಾಗಿ ಕೋರ್ಟ್‌ಮೆಟ್ಟಿಲು ಹತ್ತುವ ಮೊದಲೇ ನಮ್ಮೂರಲ್ಲಿ ಹಳ್ಳಿಹಳ್ಳಿಗಳಿಗೂ ಮನೆಮನೆಗಳಿಗೂ ಜಗಳ ಶುರುವಾಗಿತ್ತು"[೫೪] ಎಂದು ತಿಳಿಸುತ್ತಾರೆ. ಕಾಫಿ, ಮೆಣಸಿನ ಎಲೆಗಳು ಸಕಾಲಕ್ಕೆ ಮಳೆಯಿಲ್ಲದೆ ಸೊರಗುತ್ತಿದ್ದರೆ ಏಲಕ್ಕಿ ಬೆಳೆಯುವುದನ್ನು ಬಿಟ್ಟು ಮೂರು ವರ್ಷಗಳಾಗಿವೆ. ಸತತ ಮೂರುವರ್ಷಗಳ ಅಕಾಲಿಕ ವರ್ಷಧಾರೆಯಿಂದ ಬಡವ ಶ್ರೀಮಂತರೆಲ್ಲರ ಕಾಫಿತೋಟಗಳು ಅವನತಿ ಹಾದಿಹಿಡಿದಿವೆ. ಕೆಲವು ಕಂಪನಿ ತೋಟಗಳು ಹಾಳುಬಿದ್ದು ಕುರುಚಲು ಕಾಡುಗಳಾಗುತ್ತಿವೆ. ವಿದ್ಯುತ್ ನಂಬಿ ಕೃಷಿಮಾಡುವ ರೈತರು ವಿದ್ಯುತ್ ಸರಬರಾಜಿನಿಂದ ಬೇಸತ್ತು ವ್ಯಗ್ರಗೊಂಡು ಹೋರಾಟದತ್ತ ಧುಮುಕುತ್ತಿರುವ ಸಾಮಾನ್ಯ ಚಿತ್ರಣ ಕಾದಂಬರಿಯಲ್ಲಿದೆ. ಇವೆಲ್ಲವಕ್ಕೂ ತೆರೆ ಎಳೆಯಬೇಕಾದರೆ ಮಳೆ ಅವಶ್ಯಕವೆಂದು ನಿರೂಪಕರು ತಿಳಿಸುತ್ತಾರೆ.

ನಗರೀಕರಣ ಜಾಗತೀಕರಣ, ವಿಶ್ವಮಾರುಕಟ್ಟೆಯ ಪ್ರಭಾವದಿಂದಾಗಿ 'ಊರಳ್ಳಿ' 'ಗೊಂದಲಗೇರಿ' ಮುಂತಾದ ಸಣ್ಣಪುಟ್ಟ ಹಳ್ಳಿಗಳಲ್ಲೂ ಸಹ ವ್ಯಾಪಾರ, ಸಂಘಟನೆ, ಪತ್ರಿಕೆ, ಹೋರಾಟ ಮುಂತಾದ ವ್ಯವಹಾರಗಳು ಕಾಲಿರಿಸಿದ್ದು ನೈಜ ಹಳ್ಳಿಯ ಚಿತ್ರಣ ಬದಲಾಗುತ್ತಿದೆ. ಅಣ್ಣಪಣ್ಣ ಮೆಣಸಿನಕಾಯಿ ಬೆಳೆದು ಆರ್ಥಿಕವಾಗಿ ಆಲೋಚಿಸಿದರೆ ಜಲೀಲ್‌ಸಾಬಿ ತರಕಾರಿ

೫೪. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, 'ಮಾಯಾಲೋಕ-೧', ಪುಟ. ೦೯. ೨೦೦೫.

ವ್ಯಾಪಾರ, ಫಾತಿಮಾ ಮೆಣಸಿನಕಾಯಿಬಜ್ಜಿ, ಬೋಂಡ ವ್ಯಾಪಾರದಲ್ಲಿ ತಮ್ಮ ನೆಲೆ ಕಂಡುಕೊಳ್ಳುತ್ತಾರೆ. ದಲಿತರ ಕರಾಟೆ ಮಂಜ ಕೂಲಿ, ಕೃಷಿ, ವ್ಯಾಪಾರ ವ್ಯವಹಾರಗಳು ಸಾಕಾಗಿ ಫೋಟೋಗ್ರಫಿ, ಪತ್ರಿಕಾಸಂಪಾದಕ ವೃತ್ತಿಗಿಳಿದು ಜಾಗತೀಕರಣದೊಂದಿಗೆ ಸಾಗುತ್ತಿದ್ದಾನೆ. ಕಾರ್ಮಿಕ ನಾಯಕರ ನಡುವೆ ಕಂದಕ ಸೃಷ್ಟಿಸಿ ತನ್ನ ಸ್ವಾರ್ಥ ಸಾಧಿಸಿಕೊಳ್ಳುತ್ತಿದ್ದಲ್ಲದೆ ಪತ್ರಿಕಾ ಸಂಪಾದಕ ಪ್ರಕಾಶನಿಗೆ ಪತ್ರಿಕಾ ಧರ್ಮವನ್ನು ಮೀರಿ ಪ್ರಚಾರ ಮತ್ತು ಗೊಂದಲ ಸೃಷ್ಟಿಸುವಂತೆ ಸಲಹೆ ನೀಡುತ್ತಾನೆ. ಅಧಿಕಾರಿ ಹಾಗೂ ರಾಜಕೀಯ ವ್ಯವಸ್ಥೆಗಳ ದರ್ಪ, ಜವಾಬ್ದಾರಿಗಳಿಂದ ನುಣುಚಿಕೊಳ್ಳುವ ವರ್ತನೆಗಳನ್ನು ಕಾಣುತ್ತೇವೆ. ಆಧುನಿಕ ಚಳುವಳಿ ಹೋರಾಟಗಳು ಅರ್ಥ ಕಳೆದುಕೊಳ್ಳುತ್ತಿದ್ದು ಅಂಗಡಿ ಮುಂಗಟ್ಟು ಮುಚ್ಚಿಸಿ ಬಂದ್‌ಗಳನ್ನು ಮಾಡಿಸುವ ಒಂದು ಗುಂಪು ಗೊಂದಲಗೇರಿಯಲ್ಲಿ ಸೃಷ್ಟಿಯಾಗಿರುವುದು ವಿಷಾದನೀಯ. ಜೆ.ಇ.ಮಲ್ಲಿಕಾರ್ಜುನನಿಗೆ ರೈತ ಸಂಘದವರು ಹೊಡೆದರೆಂದು ಪುಕಾರೆಬ್ಬಿಸಿ ಮುಷ್ಕರ ಮಾಡುವ ನೌಕರರ ಸಂಘಟನೆ, ವಿದ್ಯುತ್ ವ್ಯತ್ಯಯ ಮಾಡುವ ಇಲಾಖೆ ವಿರುದ್ಧ ರೈತ ಸಂಘದ ಮುಷ್ಕರ, ಈ ಎಲ್ಲಾ ಗೊಂದಲಗಳ ಲಾಭಕ್ಕೆ ಆಶಿಸುವ ರಾಜಕೀಯ ವರ್ಗ ಹಾಗೂ ಪತ್ರಿಕಾ ಕ್ಷೇತ್ರದ ಬಗ್ಗೆ ಲೇಖಕರು ಅಸಮಾಧಾನಗೊಳ್ಳುತ್ತಾರೆ.

ತೇಜಸ್ವಿಯವರ ಕಥೆಗಳು ಸಾಮಾನ್ಯ ಮನುಷ್ಯನ ಜೀವನಕ್ರಮದ ಹಿಂದಿರುವ ಶಕ್ತಿಗಳ ವಸ್ತುನಿಷ್ಠ ಗ್ರಹಿಕೆಯೇ ತೇಜಸ್ವಿಯವರ ಕಥೆಗಳ ಹಿಂದಿರುವ ಪ್ರಮುಖ ಆಶಯ. ಕನ್ನಡ ಕಥಾಸಾಹಿತ್ಯದ ದಿಕ್ಕುದಿಕ್ಕುಗಳನ್ನು ಅದರ ಅನುಭವ ಕ್ಷೇತ್ರ ಹಾಗೂ ಅಭಿವ್ಯಕ್ತಿಯ ಸಾಧ್ಯತೆಗಳನ್ನು ವಿಸ್ತರಿಸುವ ಪ್ರಯತ್ನಗಳಾಗಿ ತೇಜಸ್ವಿಯವರ ಕಥೆಗಳು ಕಾಣಿಸಿಕೊಳ್ಳುತ್ತವೆ. ನವ್ಯಲೇಖಕರಿಗೆಲ್ಲಾ ಸುಧಾರಣೆಗಿಂತ ಬದಲಾವಣೆಗಳಲ್ಲಿಯೇ ಅಚಲವಾದ ನಂಬಿಕೆ, ವಿಶ್ವಾಸ ಮತ್ತು ಶ್ರದ್ಧೆ. ಪ್ರಧಾನವಾಗಿ ಜೀವನಮುಖಿಯಾದ ಹೊಸಸಾಹಿತ್ಯವನ್ನು ರೂಪಿಸಿರುವುದರ ಕಡೆಗೆ ತೇಜಸ್ವಿಯವರು ಸಾಗಿರುವುದನ್ನು ಅವರ ಕಥೆಗಳಿಂದ ಸ್ಪಷ್ಟವಾಗಿ ಗುರುತಿಸಬಹುದು. ಮನುಷ್ಯನನ್ನು ಏಕಕಾಲದಲ್ಲಿ ಒಂದು ತಾತ್ವಿಕ ಅನನ್ಯತೆಯ ಪ್ರತೀಕವಾಗಿಯೂ ನೋಡುವ ಮನೋಧರ್ಮ ತೇಜಸ್ವಿಯವರ ಕಥೆಗಳ ಮೂಲ ಭಿತ್ತಿಯಾಗಿದೆ. ತೇಜಸ್ವಿಯವರ ದೃಷ್ಟಿಯಲ್ಲಿ ಜೀವನದಲ್ಲಿ ಕಾಮ ಮತ್ತು ಮೃತ್ಯು ಎರಡು ವಿರುದ್ಧ ಶಕ್ತಿಗಳು, ಅನೇಕರಿಗೆ ಮೃತ್ಯು ಜೀವನವನ್ನು ಅರ್ಥಪೂರ್ಣಮಾಡುತ್ತದೆ. ಆದರೆ ನನಗೆ ಇಲ್ಲಿ ಸಾಯುವುದು ಎಂದರೆ ಸೃಷ್ಟಿಸುವುದು. ಸಾವನ್ನು ಅರಿಯುವುದಕ್ಕೆ ಒಂದೇ ಒಂದು ಮಾರ್ಗವೆಂದರೆ ಅದು ಬದುಕು. ಸೃಷ್ಟಿ ಮತ್ತು ಸಾವು ಇವೆರಡೂ ಬೇರ್ಪಡಿಸಬಲ್ಲ ಯಮಳ ಸ್ಥಿತಿಗಳು. ತೇಜಸ್ವಿಯವರು ಪ್ರೇಮ ಕಾಮದ ಬಗ್ಗೆ ಇರಿಸಿಕೊಂಡಿರುವ ತತ್ವವೆಂದರೆ ಪ್ರೇಮವನ್ನು ಬದುಕಿನಲ್ಲಿ ಕಾಣುವುದು. ಅದು ಜೀವನಪ್ರೇಮ ಈ ಮೂಲ ಆಶಯಗಳನ್ನು ಇರಿಸಿಕೊಂಡು ಇವರ ಕಥಾಸಂಕಲನಗಳು ಸೃಜನಗೊಂಡಿವೆ.

'ಹುಲಿಯೂರಿನ ಸರಹದ್ದು' ಕಥೆಯಲ್ಲಿ ಜೀವನದ ಸರಪಳಿಯಲ್ಲಿ ಒಬ್ಬರು ಇನ್ನೊಬ್ಬರ ಕೈಗೊಂಬೆಗಳಾಗಿರಬೇಕೆಂಬ ಪ್ರಯತ್ನ ನಡೆದೇ ಇರುತ್ತದೆ. ಆದರೆ ಆ ಸರಪಳಿಯಿಂದ ಹೊರಗೆಬಂದರೆ ಸೋಲೇ ವಿನಾ ಗೆಲುವಲ್ಲ ಎಂದು ಈ ಕಥೆ ಸೂಚಿಸುತ್ತದೆ. ಅನೇಕಪ್ರಾಣಿ ಪಕ್ಷಿಗಳ ಸಂಕೇತಗಳೊಂದಿಗೆ ಕಥೆ ನಿರೂಪಣೆಗೊಂಡಿದೆ. ವ್ಯಕ್ತಿಯ ವಿಕಸನಕ್ಕೆ ಮಿತಿಯಾಗಿ ನಿಲ್ಲಬಲ್ಲ ಪ್ರೀತಿ, ರಕ್ತಸಂಬಂಧ, ದೇವರು, ಧರ್ಮ ಜಾತಿಗಳೇ ಇಲ್ಲಿ ಒಂದಕ್ಕೊಂದು ಹೆಣೆದುಕೊಂಡು ನಿಂತ ಸರಹದ್ದುಗಳಾಗಿವೆ. ಹುಲಿಯೂರಿನ ಸರಹದ್ದನ್ನು ದಾಟಿಹೋಗಬೇಕೆನ್ನುವ ತನ್ನನ್ನು ಬಂಧಿಸಿ ಹಿಡಿದಿರುವ ಶಕ್ತಿಯನ್ನು ಕಿತ್ತೊಗೆದು ತಾನು ಪ್ರೀತಿಸುವ ಅನ್ಯಜಾತಿಯ ನಳಿನಾಕ್ಷಿ ಎಂಬ ಹುಡುಗಿ ಜೊತೆ ಓಡಿಹೋಗಬೇಕೆಂಬ, ಗರುಡನ ಥರ ಹಾರಬೇಕೆಂಬ ಬಯಕೆ ಸೋಮುವಿನದು. ಆದರೆ ಸುತ್ತಲಿನ ವಾತಾವರಣ, ಗ್ರಾಮಸಮಾಜದ ಬಂಧನ, ಜಾತಿಯ ಸಂಕೋಲೆ ತಂದೆಯ ಅಧಿಕಾರಶಾಹಿ ವರ್ತನೆ, ತನಗೆ ಮದುವೆ ಮಾಡಬೇಕೆಂದಿರುವ ಇನ್ನೊಂದು ಹುಡುಗಿ. ಇವೆಲ್ಲಾ ಅವನಿಗೆ ಸಂಕೋಲೆಗಳಾಗುತ್ತವೆ. ಅಪ್ಪನ ಆಜ್ಞೆಯಂತೆ ತಾನು ಎಲ್ಲಾ ಸಂದರ್ಭಗಳಲ್ಲಿಯೂ ನಡೆಯುತ್ತಿರುವುದನ್ನು ಕಂಡು "ನಾನು ಈ ಅಪ್ಪನಿಗಾಗಿ, ಅವನು ಅವನಪ್ಪನಿಗಾಗಿ, ನನ್ನ ಮಗ ನನಗಾಗಿ ಅಯ್ಯೋ ಈ ಹುಲಿಯೂರಿನ ಸರಹದ್ದಿನಲ್ಲಿ ಒಂದು ಇನ್ನೊಂದಕ್ಕಾಗಿ ಬದುಕಿದೆ" ಎನ್ನುವ ಸೋಮುವಿನ ಮಾತನ್ನು ಅಡಿಗರ 'ಹದ್ದು' ಕವಿತೆಯೊಂದಿಗೆ ಹೋಲಿಸಿ ನೋಡಬಹುದು. 'ರಕ್ತಗತವಾಗಿ ವ್ಯಕ್ತಿಯಲ್ಲಿ ಸೇರಿಕೊಂಡು ಬಂದಿರುವ ಸಂಪ್ರದಾಯದ ಹಾದಿಯಲ್ಲಿಯೇ ಚಕ್ರದಂತೆ ಯಾಂತ್ರಿಕವಾಗಿ ನಡೆದು ಜೀವನ ಸವೆಸುವುದಕ್ಕೆ ಏನು ಅರ್ಥ?' ಎನ್ನುವುದೂ ಈ ಕತೆ ಸೃಷ್ಟಿಸುವ ಪ್ರಶ್ನೆಯಾಗಿದೆ. ಇವು ಗ್ರಾಮೀಣ ಬದುಕಿನ ಕಟಿಬಂಧಗಳು.

'ಲಿಂಗಬಂಧ' ಭಯವನ್ನು ಸ್ಥಾಯಿಯನ್ನಾಗಿರಿಸಿಕೊಂಡ ಕಥೆ ಚಿಕ್ಕಮಕ್ಕಳಲ್ಲಿ ಭಯದ ಕಲ್ಪನೆ ಹೇಗೆ ಮೊಳಕೆಯೊಡೆಯುತ್ತವೆ, ಚಿಗುರುತ್ತದೆ, ಬೆಳೆಯುತ್ತದೆ, ಬೇರೂರುತ್ತದೆ ಎಂಬುದನ್ನು ಸೂಕ್ಷ್ಮವಾಗಿ ಮನೋವೈಜ್ಞಾನಿಕವಾಗಿ ಚಿತ್ರಿಸಿದ್ದಾರೆ. ಮನೆಯ ಆಳು ಲಿಂಗ ಮಲೆನಾಡಿನ ಪರಿಸರದಲ್ಲಿ ರಾತ್ರಿಯ ಹೊತ್ತಿನಲ್ಲಿ ಹಲಸಿನ ಬಿತ್ತವನ್ನು ಸುಡುತ್ತ ಕುಳಿತಿದ್ದಾಗ, ಲಿಂಗನ ಪಕ್ಕದಲ್ಲಿ ಕಿಟ್ಟಿ ಬಂದು ಕುಳಿತುಕೊಳ್ಳಲು ಹೊರಗಡೆ ಗಾಳಿ, ಮಳೆ, ಗುಡುಗು, ಮಿಂಚಿನ ಆರ್ಭಟ ನಡೆದೇ ಇರುತ್ತದೆ. ಪಕ್ಕದಲ್ಲಿ ಕುಳಿತ ಕಿಟ್ಟಿ, ಲಿಂಗನಿಗೆ ಕಿರಿಕಿರಿಮಾಡುತ್ತಾನೆ. ಆಗ ಲಿಂಗ, ಕಿಟ್ಟಿಯ ಈ ಕಿರಿಕಿರಿಯನ್ನು ತಡೆಯಲು ಒಂದು ಕಥೆ ಇದೆ.

ಅವಿಭಕ್ತ ಕುಟುಂಬ ಹಿರಿ-ಕಿರಿಯರ ನಡುವಿನ ಸಹಭಾಳ್ವೆ ಸಾಮರಸ್ಯ ಮೊದಲಾದ ಸಾಂಸ್ಕೃತಿಕ ಆಯಾಮಗಳ ಮೂಲಕವೇ ಭಾರತ ವಿಶ್ವದ ಗಮನಸೆಳೆದಿದೆ. ಸಾಂಸ್ಕೃತಿಕ ವಿಘಟನೆಯ ಅಧಃಪತನದತ್ತ ಸಾಗುತ್ತಿರುವ ಗ್ರಾಮಸಮಾಜದ ಪ್ರತಿನಿಧಿಯಾಗಿ 'ಗುಡುಗು

ಹೇಳಿದ್ದೇನು' ಕಥೆ ಕಾಣಿಸಿಕೊಂಡಿದೆ. ನಮ್ಮ ಊರಿನಲ್ಲಿ ನಡೆದ ಘಟನೆಯೊಂದರಿಂದ ಪ್ರೇರಿತವಾಗಿ ಸಹೋದರರಿಬ್ಬರು ತಮ್ಮನ್ನು ಸಾಕಿ ಸಲಹಿ ಅಜ್ಜಿಯನ್ನು ಕಾರಿನಡಿಗೆ ತಳ್ಳಿ ಪರಿಹಾರ ಧನಪಡೆಯಲು ಯೋಚಿಸುತ್ತಾರೆ. ಆದರೆ ಅವರ ದುರಾದೃಷ್ಟದಿಂದ ಪರಿಹಾರ ಧನಕಾರಿನ ಮಾಲೀಕರಿಂದ ಪಡೆದ ಸಾಲಕ್ಕೆ ವಜಾ ಆಗುತ್ತದೆ. ಮಾನವೀಯತೆ ಮರೆದ ಸ್ವಂತ ವ್ಯಕ್ತಿತ್ವವಿಲ್ಲದ ದುರಾಸೆಯುಳ್ಳ ಸಹೋದರರಿಗೆ ಈ ಪ್ರಸಂಗ ಬುದ್ಧಿಕಲಿಸುತ್ತದೆ. ಮಾನವೀಯಮೌಲ್ಯ ನೈತಿಕತೆ ಹಾಗೂ ಸಾಂಸ್ಕೃತಿಕ ಅರಿವಿನ ನಾಶದಿಂದ ಸೃಷ್ಟಿಯಾಗುವ ಕ್ರೌರ್ಯ ಹಾಗೂ ದಾಷ್ಟ್ಯಕ್ಕೆ ಅಣ್ಣ-ತಮ್ಮಂದಿರು ಸಾಕ್ಷಿಯಾಗಿದ್ದಾರೆ. ಸ್ವ-ಹಿತಾಶಕ್ತಿಗೆ ಬಲಿಯಾಗುವ ಸಾಮಾಜಿಕತೆಯ ನೀತಿ 'ಗುಡುಗು ಹೇಳಿದ್ದೇನು' ಕಥೆಯ ಮೂಲಕ ವ್ಯಕ್ತವಾಗಿದೆ. ಹೊಟ್ಟೆಬಟ್ಟೆಕಟ್ಟಿ ಮಕ್ಕಳನ್ನು ಬೆಳೆಸಿರುವ ಅಜ್ಜಿ ಈಗ ಅವಳಂತಹ ಹಲವು ಮಂದಿ ಅಸಹಾಯಕರನ್ನು ಸಾಕುವ ಶಕ್ತಿಯುಳ್ಳವರಂತೆ ಬೆಳೆದಿರುವ ಅದೇ ಮಕ್ಕಳಿಂದ ಶೋಷಿತಳಾಗುತ್ತಾಳೆ. ಕೊಟ್ಟಿರುವ ಅವರ ಮೈ ಮತ್ತು ಮನಸ್ಸು ಮುದುಕಿಯ ಜೀರ್ಣಗೊಂಡ ಅಸ್ತಿತ್ವವನ್ನು ತಿರಸ್ಕರಿಸುತ್ತದೆ. ಆದ್ದರಿಂದ ಅವರು ಆಕೆಯಿಂದ ಹೆಣವನ್ನು ಮಾತ್ರ ನಿರೀಕ್ಷಿಸುತ್ತಿದ್ದಾರೆ ಎಂಬುದು ಭಾರತೀಯ ಸಮಾಜದ ಯುವಜನಾಂಗದ ಮಾನಸಿಕ ಸ್ಥಿತ್ಯಂತರಗಳನ್ನು ವಿವರಿಸುತ್ತದೆ.

'ತ್ಯಕ್ತ' ಹಾಗೂ 'ಲಿಂಗಬಂದ' ಕಥೆಯಂತೆ 'ರಹಸ್ಯವಿಶ್ವ'ದಲ್ಲಿ ಪುಟ್ಟ ಬಾಲಕನೊಬ್ಬ ತನ್ನ ವಯಸ್ಸಿನ ಕಾರಣದಿಂದಲೇ ಭಯಪಟ್ಟು ಕಾಲ್ಪನಿಕ ಜಗತ್ತಿನೊಳಗೆ ವಿಹರಿಸುವ ಚಿತ್ರಣಗಳಿವೆ. ಪುಟ್ಟ ಬಾಲಕನೊಬ್ಬ ಸೈಕಲ್ ಕಲಿಯಲು ಹೋಗಿ ಸ್ಥೂಲಕಾಯಳಾದ ರಂಗಮ್ಮನಿಗೆ ಢಿಕ್ಕಿ ಹೊಡೆಯುತ್ತಾನೆ. ಅವಳ ಸೀರೆ ಸುರುಳಿಯೊಳಗೆ ಸಿಕ್ಕಿಬಿದ್ದ ಕಾರಣ ಅವಳು ಆ ಬಾಲಕನಿಂದ ಲೈಂಗಿಕ ಮೂಲದ ಬೈಯ್ಗುಳಗಳನ್ನು ಬೈಯ್ಯುತ್ತಾಳೆ. ಅವಳ ಬೈಯ್ಗುಳ ಅವನ ಪುಟ್ಟ ವಿಶ್ವದಲ್ಲಿ ಅನೇಕ ರಹಸ್ಯಗಳನ್ನು ಸೃಷ್ಟಿಸುತ್ತಾ ಹೋಗುತ್ತದೆ. ಮುಗ್ಧ ಮಕ್ಕಳ ಮೇಲೆ ಮನೆ ಕುಟುಂಬ, ಪರಿಸರಗಳ ಅನುಸರಣಾರ್ಹವಾದ ಪ್ರಭಾವವನ್ನು ಬೀರುತ್ತದೆ. ಸಭ್ಯಸ್ಥರ ಮನೆಯಲ್ಲಿ ಜನಿಸಿದ ಬಾಲಕನಿಗೆ ರಂಗಮ್ಮ ಸಂತ ಹೆಣ್ಣು ಬಳಸುವ ಭಾಷೆ ದಿಗ್ಭ್ರಮೆಯನ್ನುಂಟುಮಾಡುತ್ತದೆ. ಮನೋವೈಜ್ಞಾನಿಕವಾಗಿ ಗಮನಿಸಿದರೆ ಮಕ್ಕಳ ಭವಿಷ್ಯಕ್ಕೆ ಕೌಟುಂಬಿಕವಾದ ಉತ್ತಮ ಪರಿಸರ ಕಾರಣವಾಗಿದೆ. ಅಪರಿಚಿತವಾದ ಜಗತ್ತಿನೊಳಗೆ ಜ್ಞಾನಗ್ರಹಿಕೆಗೆ ಕಾರಣವಾದ ಸೈಕಲ್ ಪ್ರಕರಣ ತೇಜಸ್ವಿ ಅವರ ಸರಳ ಹಾಗೂ ವೈನೋದಿಕ ಶೈಲಿಯ ಕಥೆಯಾಗಿದೆ.

ವ್ಯಕ್ತಿಯ ಆರೋಗ್ಯಕರವಾದ ಮಾನಸಿಕ ಬೆಳವಣಿಗೆಯಲ್ಲಿ ಅವನ ಬಾಲ್ಯ ಅತ್ಯಂತ ತೀವ್ರ ಹಾಗೂ ಪರಿಣಾಮಕಾರಿಪಾತ್ರವನ್ನು ವಹಿಸುತ್ತದೆ. ತೇಜಸ್ವಿ ಅವರಿಗೆ ಮಕ್ಕಳ ಮನೋಲೋಕದ ಬಗ್ಗೆ ಗಾಢವಾದ ನಂಬುಗೆ ಇದೆ. ಆದ್ದರಿಂದಲೇ 'ಲಿಂಗಬಂಧ', ಕಥೆಯಕಿಟ್ಟಿ 'ತ್ಯಕ್ತ' ಕಥೆಯ

ಕಿಟ್ಟು, 'ರಹಸ್ಯ ವಿಶ್ವ'ದ ಬಾಲಕ, 'ಗಾಂಧೀಜಿ ದೆಸೆಯಿಂದ' ಕಥೆಯ ದಾಸರು ಕೌತುಕಮಯ ಮುಗ್ದಪಾತ್ರಗಳಾಗಿ ಮೂಡಿಬಂದಿದೆ.

'ಅವನತಿ' ಕಥೆಯು ಒಂದು ಸಮಾಜದ ಅವನತಿಯನ್ನು ಸೂಚಿಸುವ ಶ್ರೇಷ್ಠ ಕತೆಯಾಗಿದೆ. ಸಮಾಜ ಆಧುನಿಕತೆಗೆ ತನ್ನನ್ನು ತೆರೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಗ್ರಾಮೀಣಪ್ರದೇಶಗಳು ಹೇಗೆ ಅವನತಿಯ ಹಾದಿಯನ್ನು ಹಿಡಿಯುತ್ತವೆ ಎಂಬುದನ್ನು ಚಿತ್ರಿಸುತ್ತದೆ. ಇಲ್ಲಿ ಗ್ರಾಮಸಂಸ್ಕೃತಿಯ ಅನಾವರಣವಾಗುತ್ತದೆ. ಇಸ್ಲಾಪುರ, ಇತ್ತಾವರ, ಜೋಗತಿಪೇಟೆ ಹಳ್ಳಿಗಳ ಜನ ವಿಚಿತ್ರ ವ್ಯವಹಾರಿಕ ಪ್ರಪಂಚಕ್ಕೆ ಸೇರಿದವರು. ಪ್ರಸಕ್ತ ರಾಜಕೀಯ ವ್ಯವಸ್ಥೆಗೆ ಆ ಹಳ್ಳಿಗಳು ಸವಾಲಾಗಿರುವುದನ್ನು ನೋಡಿದರೆ ಸ್ಥಗಿತಗೊಂಡ ಬದುಕನ್ನು ಅಲ್ಲಿನ ಜನರು ಒಪ್ಪಿಕೊಂಡಂತಿದೆ. ಇಂಥವರಲ್ಲಿ ಒಬ್ಬನಾದ ಇಸ್ಲಾಪುರದ ಸೂರಾಚಾರಿ ಹಳೇಬೀಡಿನ ಹತ್ತಿರ ಪನ್ನಾಥಪುರದಿಂದ ಇಲ್ಲಿಗೆ ಬಂದವನು ವಾಸಾಚಾರಿಯ ಮಗಳು ಯಶೋಧಳನ್ನು ಮದುವೆಯಾಗಿ ತನ್ನ ಮಾವನ ಮರಣದ ನಂತರ ತನ್ನ ಹಳ್ಳಿಗೆ ಹಿಂದಿರುಗಲು ಪ್ರಯತ್ನಿಸಿದರೂ ಮಲೆಸೀಮೆಯ ಗಡಿಯನ್ನು ದಾಟಲು ಸಾಧ್ಯವಾಗಲಿಲ್ಲ. ಏಕೆಂದರೆ ತನ್ನ ಹೆಂಡತಿಗೆ ಹಿಡಿದಿದ್ದ ಪಿಶಾಚಿ ಕಾಟದ ಪರಿಣಾಮವಾಗಿ ಅವನು ಇಸ್ಲಾಪುರದಲ್ಲಿಯೇ ಜೀವಿಸಬೇಕಾಯ್ತು. ಹೀಗಾಗಿ ಸೂರಾಚಾರಿಯಲ್ಲಿರುವ ಕಲಾ ನೈಪುಣ್ಯತೆ ಅಲ್ಲಿಯೇ ಕಮರಿಹೋಗುತ್ತದೆ.

ಸಾಮಾಜಿಕ ಪರಿಸರದಲ್ಲಿ ಸಾಮಾನ್ಯ ಜೀವಿಗಳು ಅನಿವಾರ್ಯವಾಗಿ ಎದುರಿಸಬೇಕಾದ ದೈನ್ಯಸ್ಥಿತಿ ವ್ಯಕ್ತಗೊಂಡಿದೆ. ಜಾಗತೀಕರಣದ ಅಪಾಯದಿಂದ ಭಾರತೀಯ ಉಪಸಂಸ್ಕೃತಿಗಳು ಮತ್ತು ವೃತ್ತಿಗಳ ನಿರ್ನಾಮವನ್ನು ಕಥೆ ಸೂಚಿಸುತ್ತದೆ. ಅಲ್ಲಲ್ಲಿ ಘಟಿಸುತ್ತಿರುವ ತಲ್ಲಣಗಳು ಪ್ರಮುಖ ಆದ್ಯತೆಯನ್ನು ಪಡೆದುಕೊಂಡಿವೆ. ಗೌರಿಯ ಸೌಂದರ್ಯದೊಡನೆ ಸೂರಾಚಾರಿಯ ಕಲಾನೈಪುಣ್ಯ ಮರೆಯಾಗಿ ಅಸಂಬದ್ಧ ನೆಲೆಯನ್ನು ಒಪ್ಪಿಕೊಳ್ಳುವುದರಲ್ಲಿ ಒಂದು ಸಮಾಜದ ಅವನತಿಯೂ ನಡೆದುಹೋಗುತ್ತದೆ. ಇದೊಂದು ಗ್ರಾಮಸಂಸ್ಕೃತಿ ವಿಶ್ವದೆಲ್ಲೆಡೆ ಪಹರಿಸಬೇಕಾದದ್ದು ಹಳ್ಳಿಯಲ್ಲಿಯೇ ಕಮರಿಹೋಗುತ್ತದೆ.

ಒಂದು ಆದರ್ಶ ಸಮಾಜದ ಕನಸು ಕಾಣುವ ಡಾ. ಕುಬೇರನ ಸಮಾಜಸೇವೆ. ವೈಚಾರಿಕ ಮನೋಭಾವ, ಜೀವನೋತ್ಸಾಹಗಳು ರೋಗಗ್ರಸ್ಥ ಸಮಾಜದ ಅವ್ಯವಸ್ಥೆಯಲ್ಲಿ ನಾಶವಾಗುವ ಪ್ರಕ್ರಿಯೆ 'ಕುಬಿ ಮತ್ತು ಇಯಾಲ' ಕಥೆಯಲ್ಲಿದೆ. ಈ ಕಥೆ ಚಲನಚಿತ್ರವಾಗಿ ಉತ್ತಮ ಕತೆಗಾಗಿ ತೇಜಸ್ವಿಯವರಿಗೆ ರಾಜ್ಯ ಹಾಗೂ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ. ಭೈರಾಪುರ ಎಂಬ ಹಳ್ಳಿಯಲ್ಲಿನ ಜನರು ಆ ಊರಿನಲ್ಲಿ ನಡೆಯುವ ಸಮಸ್ತ ಕ್ರಿಯೆಗಳಿಗೂ ಅಮಾನುಷ ಶಕ್ತಿಯನ್ನು ಆರೋಪಿಸುವ ಮುಗ್ಧರೂ ಅಜ್ಞಾನಿಗಳು ಆಗಿದ್ದರು. ಈ ಹಳ್ಳಿಗರ

ಮೂಢನಂಬುಗೆಯನ್ನು ತಮ್ಮ ಅನಾಚಾರಗಳಿಗೆ ಬಳಸಿಕೊಳ್ಳುವ ಜಾತಿ-ರಾಜಕೀಯ ಹಾಗೂ ಹಳ್ಳಿಯ ಮುಖಂಡರು ಹಳ್ಳಿಯನ್ನು ಮತ್ತಷ್ಟು ಹೀನಾಯ ಸ್ಥಿತಿಗೆ ಇಳಿಸುತ್ತಾರೆ. ಜನಸೇವೆ - ಸಮಾಜಸೇವೆಯ ಮೂಲಕ ದೇಶಸೇವೆ ಮಾಡುವ ಉದ್ದೇಶವಿರಿಸಿಕೊಂಡು ಭೈರಾಪುರದಂತಹ ಕೊಂಪೆಗೆ ಕಾಲಿಡುವ ಡಾ. ಕುಬೇರನಶ್ರದ್ದೆ, ನಂಬುಗೆ, ನಿಸ್ವಾರ್ಥ ಪ್ರಯತ್ನ ಹಾಗೂ ವೈಜ್ಞಾನಿಕ ಮನೋಭಾವದ ಆ ಊರಿನ ಜನತೆ ದೈವ-ಸಾಕ್ಷಾತ್ಕಾರವಾದಂತಾಗಿದೆ. ಅಲ್ಲಿನ ಬಡತನವೇ ಹಳ್ಳಿಗರ ಅಜ್ಞಾನ ಹಾಗೂ ಮೂಢನಂಬಿಕೆಗೆ ಮೂಲ ಎಂದೇ ಇದರ ವಿರುದ್ಧ ಹೋರಾಡಿ ಅಭಿವೃದ್ಧಿಯತ್ತ ಕೊಂಡೊಯ್ಯಲು ಸತತ ಪ್ರಯತ್ನಪಡುತ್ತಾನೆ. ವಿಪರ್ಯಾಸವೆಂದರೆ ಅವನ ಈ ಪ್ರಯತ್ನಗಳೇ ಗ್ರಾಮಸ್ಥರ ಕಣ್ಣಲ್ಲಿ ಪವಾಡ ಸದೃಶವಾಗಿ ಚಿತ್ರಿತಗೊಳ್ಳುತ್ತದೆ. ಅವರ ಅಜ್ಞಾನವನ್ನು ನಿವಾರಿಸಿ ವೈದ್ಯವಿಜ್ಞಾನದ ಶ್ರದ್ಧೆ ಹಾಗೂ ನಂಬುಗೆಯ ಮೂಲಕವೇ ಜಾಗೃತಿಯನ್ನು ತುಂಬಲೆತ್ನಿಸುವ ಡಾ. ಕುಬೇರ ಪಂಜುರ್ಲಿಯೇ, ಜಟ್ಟಿಗನೋ ತ್ರಿಕಾಲಜ್ಞಾನಿಯೋ ಇರಬೇಕೆಂಬುದನ್ನು ಹಳ್ಳಿಯವರು ಬಲವಾಗಿ ನಂಬುತ್ತಾರೆ. ವೈದ್ಯವೃತ್ತಿಯಾಚೆಗೂ ಸಾಮಾಜಿಕ ಕರ್ತವ್ಯಗಳಿವೆ ಎಂದು ನಂಬಿದ್ದ ಕುಬಿ ಬಹಳವಾಗಿ ಪ್ರಯತ್ನಿಸಿ ರಸ್ತೆ ರಿಪೇರಿಗೆ ತಾಲ್ಲೂಕು ಬೋರ್ಡಿನಿಂದ ಹಣವನ್ನು ಮಂಜೂರುಮಾಡಿಸಿದ್ದನು. ರಸ್ತೆ ಮಧ್ಯದಲ್ಲಿ ಉಳಿದಿದ್ದ ಬಂಡೆಯನ್ನು ಒಡೆಸಿ ರಸ್ತೆ ಸಂಚಾರವನ್ನು ಸುಗಮಗೊಳಿಸುವ ಪ್ರಯತ್ನಕ್ಕೂ ಮುಂದಾಗುತ್ತಾರೆ. ಅಭಿವೃದ್ಧಿ ತಡೆಗೋಡೆಯಂತಿದ್ದ ಬಂಡೆಯನ್ನು ಒಡೆಸಿಹಾಕಲು ಕುಬಿ ಆಸಕ್ತಿವಹಿಸಿದ್ದರೂ ಸ್ವತಃ ಆ ಊರಿನವರಿಗೆ ಬಂಡೆಯನ್ನು ನಿವಾರಿಸಲು ಇಷ್ಟವಿರಲಿಲ್ಲ. ಆ ಬಂಡೆಯ ಮೇಲೆ ರಣ ಕೂರುತ್ತದೆ ಎಂಬ ನಂಬುಗೆಯಲ್ಲಿದ್ದ ಹಳ್ಳಿಗರು, ಬಂಡೆ ಒಡೆಯುವ ಸಂದರ್ಭದಲ್ಲಿ ಸ್ಫೋಟದಲ್ಲಿ ಸತ್ತ ಲೋರಿ ಹಾಗೂ ಮತ್ತೊಬ್ಬನ ಸ್ಥಿತಿಗೆ ರಣವೇ ಕಾರಣ ಎಂದು ಖಚಿತವಾಗಿಯೆ ನಿರ್ಣಯಿಸುತ್ತಾರೆ. ಪುಟ್ಟ ಇಯಾಲಳನ್ನು ಕೂಡಿದರೆ ತನ್ನ ಗುಹ್ಯರೋಗ ನಿವಾರಣೆಯಾಗುತ್ತದೆ ಎಂದು ನಂಬುವ ಲೋರಿ ಆಕೆಯನ್ನು ಅತ್ಯಾಚಾರ ಮಾಡಿ ಕೊಂದುಹಾಕುತ್ತಾನೆ. ಇಲ್ಲಿ ಲೋರಿ ಮುಟ್ಟಾಗದ ಹುಡುಗಿಯನ್ನು ಸೇರಿದರೆ ರೋಗ ವಾಸಿಯಾಗುತ್ತದೆ ಎಂದು ನಂಬಿಕೊಳ್ಳುವುದು ಅಜ್ಞಾನದ ಪರಮಾವಧಿಯಾಗಿದೆ. ಆದರೆ ಸಾಯುವ ಸ್ಥಿತಿಯಲ್ಲಿದ್ದಾಗ ಇದೇ ಲೋರಿ ಊರನ್ನು ತಲ್ಲಣಗೊಳಿಸಿದ ಇಯಾಲಳ ಕೊಲೆಗೆ ಕಾರಣವನ್ನು ಹೇಳಿ ಪಶ್ಚಾತ್ತಾಪಪಡುವ ಮೂಲಕ ಮನುಷ್ಯನ ಮೂಲಭೂತ ಗುಣವನ್ನು ಮೆರೆಯುತ್ತಾನೆ. ಈ ಕೊಲೆಯನ್ನು ವೈಯಕ್ತಿಕ ಬೆಳವಣಿಗೆಗಳಿಗೆ ರಾಜಕೀಯ ಮುಖಂಡರು ದುರುಪಯೋಗಪಡಿಸಿಕೊಂಡರೆ ಹೆತ್ತ ಅಪ್ಪ ದುಡ್ಡಿನ ಆಸೆಗಾಗಿ ಮಗಳ ಕೊಲೆಗೆ ಹಾದರದ ಆರೋಪವನ್ನು ಹೊರಿಸುತ್ತಾನೆ. ಊರಿನಲ್ಲಿ ನಡೆಯುವ ಸಮಸ್ತ ಕಳ್ಳತನ ಅತ್ಯಾಚಾರ, ಕೊಲೆ-ಸುಲಿಗೆಗಳೆಲ್ಲಕ್ಕೂ ಹಮಾಲಿಗಳೇ ಕಾರಣ ಎಂದು ಅವರ ಬೆನ್ನಿನ ಚಮಡಾ ಸುಲಿಯುವ ಇನ್ಸ್‌ಪೆಕ್ಟರ್, ಅಪ್ಪ ಓಬ್ರಿನ್, ರಾಜಕೀಯ ಮುಖಂಡರು ಇವರೆಲ್ಲಾ

ಸಮಕಾಲೀನ ಭಾರತದ ಅಸ್ವಸ್ಥ ಸಮಾಜದ ಪ್ರತಿನಿಧಿಗಳೇ ಆಗಿದ್ದಾರೆ. ಕೊಲೆಯನ್ನು ಸ್ವಹಿತಾಶಕ್ತಿಗೆ ಬಳಸಿಕೊಳ್ಳುವುದು ನೈತಿಕ ಮಾನವೀಯ ಹಾಗೂ ಸಾಮಾಜಿಕ ಅಧಃಪತನವನ್ನು ಸೂಚಿಸುತ್ತದೆ.

ಆಧುನಿಕತೆ ಹಾಗೂ ನಾಗರಿಕತೆಗೆ ಸಂಕೇತವಾದ ರಸ್ತೆ ಶಾಂತವಾಗಿದ್ದ ಭೈರಾಪುರದ ಬದುಕನ್ನು ತಲ್ಲಣಗೊಳಿಸಿದೆ. ಸಂಪರ್ಕ ಸೇತುವಾಗಬೇಕಿದ್ದ ರಸ್ತೆ ದುರ್ವ್ಯವಹಾರಗಳಿಗೆ ಬಳಕೆಯಾಗುತ್ತದೆ. ಕಳ್ಳಸಾಗಣಿಕೆದಾರರು, ಎಕ್ಸೈಸ್ ಪೋಲಿಸಿನವರು, ನಿಧಿವಂತಿಗೆ ಸೇರಿಸುವವರು, ನೆಂಟರಿಷ್ಟರ ಹಾವಳಿ ಇತ್ಯಾದಿಗಳಿಂದ ಹಳ್ಳಿಗರಿಗೆ ಹೊಸರಸ್ತೆಯ ಮೇಲೆ ಅಪ್ರಜ್ಞಾಪೂರ್ವಕವಾಗಿ ದ್ವೇಷ ಪ್ರಾರಂಭವಾಯಿತು. ಆಧುನಿಕತೆಯ ದುರುಪಯೋಗಗಳನ್ನು ಚಿತ್ರಿಸುವಲ್ಲಿ ರಸ್ತೆ, ಪರಿಣಾಮಕಾರಿಯಾಗಿ ಮೂಡಿಬಂದಿದೆ. ಭಾರತದ ಗ್ರಾಮಸಮಾಜದಲ್ಲಿ ಬೇರೂರಿರುವ ಮೂಢನಂಬಿಕೆಗಳನ್ನು ಬುಡಸಮೇತ ಕಿತ್ತೆಸೆಯಬೇಕೆಂಬ ಪ್ರಯತ್ನ ಸುಲಭ ಸಾಧ್ಯವಲ್ಲ. ಸ್ವತಃ ಕತೆಗಾರರೇ ಕಂಬಿಯ ಪ್ರಯತ್ನ ವಿಫಲವಾದುದರ ಕುರಿತಂತೆ ವಿಷಾಧಿಸುತ್ತಾರೆ. ಕುಬಿಯ ವೈಚಾರಿಕ ಪ್ರಜ್ಞೆಯನ್ನು ಮೀರಿ ಹಳ್ಳಿಗರ ತರ್ಕ ಈ ರೀತಿಯಲ್ಲಿ ಹರಿದಿದೆ. "ಲೋರಿ ಪುಟ್ಟ ಸುಂದರಿ, ಇಯಾಲಾಳ ಮೇಲೆ ಅತ್ಯಾಚಾರ ಮಾಡಿದ. ಅದಕ್ಕೆ ಅವಳು ಇವರು ಬಂಡೆಬಡಿಯುತ್ತಿರಬೇಕಾದರೆ ರಣವಾಗಿ ಬಂದು ಬಡಿದಳು. ಇಲ್ಲದಿದ್ದರೆ ಒಂದು ದಿನದವರೆಗೂ ಸುಪ್ತವಾಗಿ ಉಳಿದಿದ್ದ ಕಿಡಿ ಯಾರಿಗೂ ತೊಂದರೆ ಕೊಡದೇ ಇವರನ್ನೇ ಕೊಲ್ಲಲು ಇನ್ನೇನು ಕಾರಣ? ಕುಬಿ ಡಾಕ್ಟರ್ ಸುತ್ತ ಲೋರಿಯಾ ಹೆಣದ ಮೇಲೆ ಅವನ ಪ್ರೇತವನ್ನು ಆವಾಹನೆಮಾಡಿ ಈ ಎಲ್ಲಾ ಸತ್ಯಗಳನ್ನು ಕೇಳಿ ತಿಳಿದರು. ಮಹಾಸತ್ಯನಿಷ್ಠಾ ಕುಬಿ ಡಾಕ್ಟರು ಎಂದರೆ ದಯ್ಯ-ಪ್ರೇತ-ಪಿಶಾಚಿಗಳು ತಗ್ಗಿ ನಡೆಯುತ್ತವೆ. ಹೀಗೆಲ್ಲಾ ಆಲೋಚಿಸಿ ಜನ ಧೂಪದ ಮರದ ಬಂಡೆಯನ್ನು ಕುಬಿ ಡಾಕ್ಟರನ್ನು ಕೊಂಡಾಡತೊಡಗಿದರು. ಕುಬಿ ತಾನು ಯಾವುದನ್ನು ನಂಬದೆ ವಿರೋಧಿಸಿ ತಿರಸ್ಕರಿಸಿದ್ದನೋ ಅದನ್ನೇ ಗಾಢವಾಗಿ ಇನ್ನೊಂದು ಕಡೆಯಿಂದ ಪ್ರತಿಪಾದಿಸುತ್ತಲೂ ಬಂದುದು ಕಾಲಪುರುಷನ ಅಪಹಾಸ್ಯ ಇತಿಹಾಸದ ವ್ಯಂಗ್ಯ".[೫೫] ನಿರೂಪಕರ ಈ ಅಭಿಪ್ರಾಯ ಭಾರತದ ಹಳ್ಳಿಗರ ಹಾಗೂ ಹಳ್ಳಿಗಳ ಗಾಢ ನಂಬಿಕೆಗಳನ್ನು ಸಾಕ್ಷೀಕರಿಸಿವೆ. ತೇಜಸ್ವಿಯವರ ಕಥೆಗಳಲ್ಲಿ ಗ್ರಾಮೀಣ ಸಮಾಜದ ಮಣ್ಣಿನ ವಾಸನೆಯೊಂದಿಗೆ ಬೆರೆತ ನಂಟು ವಿಶಿಷ್ಟವಾದುದು. ಕೃಷಿಕ ವೃತ್ತಿಯಲ್ಲಿನ ಅನುಭವಗಳು ಗ್ರಾಮೀಣ ವ್ಯವಸ್ಥೆಯನ್ನು ನೋಡುವ ದೃಷ್ಟಿಕೋನವನ್ನು ಬದಲಾಯಿಸಿದ್ದರಿಂದ ನವ್ಯಸಾಹಿತ್ಯದ ಮಿತಿಗಳನ್ನು ಗುರುತಿಸಿಕೊಂಡು ಕಂಡುಂಡ ಅನುಭವಗಳ ವಿಸ್ತರಣೆಗೆ ಸೂಕ್ತ ಹಾಗೂ ಸರಳ ಮಾರ್ಗವೊಂದನ್ನು ಆರಿಸಿಕೊಂಡರು. ಲೋಹಿಯಾ ಅವರ ಗ್ರಾಮಸಮಾಜದ ಪರಿಕಲ್ಪನೆ ಇದಕ್ಕೆ ಪ್ರೇರಣೆಯಾಗಿರಬಹುದು.

---

೫೫. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, 'ಅಬಚೂರಿನ ಪೋಸ್ಟಾಫೀಸು', ಪುಟ. ೬೮, ೨೦೦೫.

'ಅಬಚೂರಿನ ಪೋಸ್ಟಾಫೀಸು" ಕತೆಯ ಬೋಬಣ್ಣ 'ಕುಬಿ ಮತ್ತು ಇಯಾಲ' ಕತೆಯ ಕುಬಿಯ ದುರಂತ ಹೇಗೆ ಸಾಮಾಜಿಕ ದುರಂತವಾಗಿ ವೈಶಾಲ್ಯತೆಯನ್ನು ಪಡೆದುಕೊಳ್ಳುತ್ತದೆಯೋ ಹಾಗೆ 'ತುಕ್ಕೋಜಿ' ಕತೆಯಲ್ಲಿಯೂ ವ್ಯಕ್ತಿನಿಷ್ಠ ಅಧಃಪತನವಾಗಿ ಇಡೀ ಸಾಮಾಜಿಕ ವ್ಯವಸ್ಥೆಯನ್ನು ಕದಡಿಬಿಡುತ್ತದೆ ಎಂಬುದನ್ನು ಧ್ವನಿಸುತ್ತದೆ. ತೇಜಸ್ವಿಯವರು ಹಳ್ಳಿಗಾಡಿನ ಲೋಕದ ವಿಶಿಷ್ಟ ರಚನಾಕ್ರಮವನ್ನು ಹತ್ತಿರದಿಂದ ನೋಡಿದರು. ತುಕ್ಕೋಜಿಯ ಬದುಕು ಗುರುಗಳ್ಳಿಯ ನಾಗರಿಕತೆಯೊಂದಿಗೆ ಬೆಸೆದುಕೊಂಡು ಚಲಿಸುತ್ತಿರುವಾಗಲೇ ಕಿಟ್ಟುವಿನ ಜನನ ಹಲವು ಸಮಸ್ಯೆಗಳ ತೊಡರಿನಲ್ಲಿ ಸಿಲುಕಿಸುತ್ತದೆ. ತನ್ನ ಬಳಿಗೆ ಬರುವ ಗಿರಾಕಿಗಳನ್ನು ಕಣ್ಣಿಂದ ನೋಡಿದರೆ ಸಾಕು ಮೈಯ ಓರೆಕೋರೆಗಳ ಉದ್ದಳತೆಗಳನ್ನು ಗ್ರಹಿಸಿಬಿಡುತ್ತಿದ್ದ ಚಾಣಾಕ್ಷನವನು. ಕಿಟ್ಟು ಹುಟ್ಟಿದ ಮೇಲೆ ಕೆಲಸದ ಭಾರ ಹೆಚ್ಚಾದಂತೆ ತುಕ್ಕೋಜಿಗೆ ಸರೋಜಳ ಸಹಾಯ ಕಡಿಮೆಯಾಗಿ ಅತೃಪ್ತಿ ದಿನಕಳೆದಂತೆ ಹೊಗೆಯಾಡತೊಡಗುತ್ತದೆ. ಸಣ್ಣಸಣ್ಣ ಕಾರಣಗಳಿಗಾಗಿ ಹೆಂಡತಿಯೊಡನೆ ಜಗಳವಾಡುವುದು ತನ್ನ ಗಿರಾಕಿಗಳ ಸುಳಿವುಗಳನ್ನು ಹೇಳುತ್ತಾ ತನ್ನ ವೃತ್ತಿಗೆ ದ್ರೋಹ ಬಗೆಯುವ ಸ್ಥಿತಿಯುಂಟಾಗುತ್ತದೆ. ತುಕ್ಕೋಜಿಯ ಕೌಟುಂಬಿಕ ಸಮಸ್ಯೆಗಳು ಗುರುಗಳ್ಳಿಯ ಜನಸಮುದಾಯದೊಡನೆ ಅಮೂರ್ತ ಸಂಬಂಧವನ್ನು ಹೊಂದಿರುವುದರಿಂದ ವೈಯಕ್ತಿಕ ಜೀವನದ ಸಂದಿಗ್ಧತೆಗಳು ಅಲ್ಲಿನ ಸಮಾಜವನ್ನೇ ದುರಂತದೆಡೆಗೆ ಒಯ್ಯುತ್ತವೆ.

ಹೀಗೆ ಚಲನಶೀಲವಾದ ನಾಗರಿಕ ಸಂಸ್ಕೃತಿಯಲ್ಲಿ ಸ್ಥಿತ್ಯಂತರಗೊಳ್ಳುತ್ತಿರುವ ಗ್ರಾಮೀಣ ಬದುಕುಗಳು ತೇಜಸ್ವಿಯವರ ಕಥೆಗಳಲ್ಲಿ ಚಿತ್ರಿತಗೊಂಡಿದೆ. ಜಡತ್ವದೊಂದಿಗೆ ಬೆಸೆದುಕೊಂಡಿದ್ದ ಏಕತಾನತೆಯ ಬದುಕು ಆಧುನಿಕತೆಯ ಪ್ರವೇಶದಿಂದ ಬಿಡುಗಡೆಗೊಳ್ಳುವಾಗ ಸೃಷ್ಟಿಯಾಗುವ ತಲ್ಲಣ ಹಾಗೂ ತುಮುಲಗಳು ತೇಜಸ್ವಿಯವರ ಕಥೆಗಳಲ್ಲಿ ಕಂಡುಬರುತ್ತವೆ. ಗ್ರಾಮವೆಂದರೆ ಕೇವಲ ಮುಗ್ಧತೆ ಮಾತ್ರವಲ್ಲ ಅಜ್ಞಾನವೂ ಹೌದು. ಹೊಸದು ಎಂಬುದು ಗ್ರಾಮಸಮಾಜವನ್ನು ಪ್ರವೇಶಿಸುವ ಮೂಲಕ ಉಂಟಾಗುವ ತಲ್ಲಣವು ತೇಜಸ್ವಿಯವರ ಕಥೆಗಳಲ್ಲಿವೆ. ಸ್ಥಾಪಿತ ಮೌಲ್ಯಗಳು ಹಾಗೂ ಸ್ವೀಕೃತ ಮೌಲ್ಯಗಳು ಪರಸ್ಪರ ಮುಖಾಮುಖಿಯಾದಾಗ ಸೃಷ್ಟಿಯಾಗುವ ತಲ್ಲಣಗಳು ಅಬಚೂರಿನ ಪೋಸ್ಟಾಫೀಸು ಕಥೆಯಲ್ಲಿದೆ. ಆಧುನಿಕ ಮೌಲ್ಯಗಳನ್ನು ಸ್ವೀಕರಿಸಲು ಸಿದ್ದರಾಗದ ರೋಗಗ್ರಸ್ಥ ವ್ಯವಸ್ಥೆಯ ಜಿಡ್ಡುಗಟ್ಟಿದ ಹಳ್ಳಿಗರು. ಆಧುನಿಕತೆಯನ್ನು ಶಾಪವನ್ನಾಗಿಸಿಕೊಳ್ಳುತ್ತಿದ್ದಾರೆ. ಮನುಷ್ಯ ಸಂಬಂಧಗಳನ್ನು ಬೆಸೆಯಬೇಕಾದ ಅಂಚೆ ಕಛೇರಿ ಹಾಗೂ ಪತ್ರಗಳು ಮನುಷ್ಯನ ವೈಯಕ್ತಿಕ ಬದುಕನ್ನು ಹಾಗೂ ಹಳ್ಳಿಯ ಸಾಮಾಜಿಕ ಬದುಕನ್ನು ದೂರೀಕರಿಸುತ್ತದೆ.

ತೇಜಸ್ವಿಯವರ 'ಕಿರಗೂರಿನ ಗಯ್ಯಾಳಿಗಳು' ನೀಳ್ಗತೆಯಲ್ಲಿ ಅಪ್ಪಟ ಗ್ರಾಮೀಣ ಶೈಲಿಯ ಚಿತ್ರಣಗಳಿವೆ. ಮಳೆಗಾಳಿ ಕೆಸರಲ್ಲಿ ಶ್ರಮ ಪಡುತ್ತಿದ್ದ ಸಂದರ್ಭದಲ್ಲಿ ಪ್ರಸ್ತಾಪಿಸಿಕೊಳ್ಳುವ

ಹೆಂಗಸರ ಜನನೇಂದ್ರಿಯಗಳ ಕುರಿತ ಬೈಯ್ದಾಟ ವಿನೋದವೆನಿಸುತ್ತದೆ ಹೊರತು ಅಶ್ಲೀಲವೆನಿಸದು. "ಗಾಳಿ ನಿಮಿಷಕ್ಕೆ ಒಂದು ದಿಕ್ಕಿನಂತೆ ಅಸಡಾ ಬಸಡಾ ಬೀಸಿ ಮೇಲೆತ್ತಿ ಕಟ್ಟಿಕೊಂಡಿದ್ದ ಸೀರೆಯನ್ನು ಸಹ ಕೊಡೆಮಡಿಚಿದಂತೆ ಎತ್ತಲಾರಂಭಿಸಿದಾಗ ನಡುಬಗ್ಗಿ ಕೆಲಸಮಾಡುತ್ತಿದ್ದ ಅವರಿಗೆ ಪೀಕಲಾಟಕ್ಕೆ ಬಂತು. ಒಬ್ಬಳ ಸೀರೆ ಮೇಲೆದ್ದಾಗ ಹಿಂದೆ ನಿಂತಿದ್ದವಳು ಕಿಸಕ್ಕನೆ ನಕ್ಕಳು. ಮುಂದೆ ನಿಂತಿದ್ದವಳಿಗೆ ಇದರಿಂದ ಕೋಪಬಂತು. ಅದೇನು ಕಂಡೆಯೇ ಹಲ್ಲು ಕಿಸಿಯೋದಿಕ್ಕೆ? ಎಲ್ಲರಿಗೂ ಇರೋದೆ ನಮ್ಗೂ ಇರೋದು ಎಂದು ಸೀರೆ ಸರಿಪಡಿಸಿಕೊಳ್ಳುತ್ತಾ ಮುಂದೆನಿಂತಿದ್ದವಳು ರೇಗಿದಳು. ಎಲ್ಲರಿಗೂ ಇದ್ದಂಗೆ ಇದ್ದಿದ್ರೆ ನಾಯಾಕೆ ನಗ್ತಿದ್ದೆ! ಎಂದು ಕೆಣಕಿದಳು. ಮುಂದೆ ನಿಂತಿದ್ದವಳಿಗೆ ಇದ್ದಕ್ಕಿದ್ದಂತೆ ಸಿಟ್ಟುಬಂದು ಕೈಲಿದ್ದ ಕಳೆಯ ಕಂತೆಯನ್ನು ತೆಗೆದು ಹಿಂದೆ ನಿಂತಿದ್ದವಳ ಮುಖಕ್ಕೆ ರಪ್ಪನೆ ಎಸೆದು ತೆಗೆನೋಡಾನ ನಿಂದ್ಯಾತರ ಇದೇಂತ ಎಂದು ನಕ್ಕವಳ ಸೊಂಟಕ್ಕೆ ಕೈಹಾಕಿ ಎಳೆಯಲಾರಂಭಿಸಿದಳು".[೫೬] ಇದು ತೇಜಸ್ವಿ ಅವರು ಗ್ರಾಮೀಣ ಬದುಕನ್ನು ಸಹಜವಾಗಿ ಚಿತ್ರಿಸಿರುವ ರೀತಿಯಾಗಿದೆ. ಬಯ್ಗುಳಗಳ ಸರಮಾಲೆಗಳಲ್ಲಿ ಶ್ಲೀಲ-ಅಶ್ಲೀಲ ಎನ್ನದೆ ಗಂಡು-ಹೆಣ್ಣುಗಳೆನ್ನದೆ ತಾಜಾತನವನ್ನು ಹೇಳುವ ಮಾತುಗಳಲ್ಲಿ ಕಟ್ಟಿಕೊಡುತ್ತಾರೆ. ಅದೇ ರೀತಿ ಗ್ರಾಮಸಂಸ್ಕೃತಿ, ಶ್ರಮಸಂಸ್ಕೃತಿ, ಲಿಂಗ ಅಸಮಾನತೆ, ವರ್ಣ ತಾರತಮ್ಯ, ನಾಗರಿಕ ವ್ಯವಸ್ಥೆಗಳಾದ ವೈದ್ಯರು, ಪೊಲೀಸರು ಹಾಗೂ ವ್ಯವಸಾಯ ಇಲಾಖೆಗಳಲ್ಲಿನ ಅವ್ಯವಸ್ಥೆ ಗ್ರಾಮದ ಹಲವು ಸಂಕೀರ್ಣತೆಯೊಂದಿಗೆ 'ಕಿರಗೂರು' ಎಂಬ ಗ್ರಾಮದ ವೈನೋದಿಕ ಚಿತ್ರಣ ಈ ಕಥೆಯಲ್ಲಿದೆ. ಐದಾರು ಒಕ್ಕಲಿಗ, ನಾಲ್ಕಾರು ಹರಿಜನ ಹಾಗೂ ಬಿಲ್ಲವ ಕುಟುಂಬಗಳನ್ನು ಹೊಂದಿದ್ದ ಪುಟ್ಟಹಳ್ಳಿ ಕಿರಗೂರು ನೀಳಕಾಯದ ಉಜ್ವಲ ಸೌಂದರ್ಯವನ್ನು ಹೊಂದಿದ್ದ ಕಿರಗೂರಿನ ಹೆಣ್ಣುಮಕ್ಕಳು ತಮ್ಮ ಗಂಡಂದಿರ ಸೋಮಾರಿತನವನ್ನು ಸಹಿಸಿ-ಸಹಿಸಿ ಸಿಡಿಯುವ ಪಟಾಕಿಗಳಂತೆ ತಮ್ಮ ಗಂಡಂದಿರನ್ನು ಕಂಡಕಂಡಲ್ಲಿ ಬೈಯ್ದಾಡುತ್ತಿದ್ದರು. ಈ ಗಂಡಂದಿರೆನಿಸಿಕೊಂಡಿದ್ದವರು ಶುದ್ಧ ಸೋಂಬೇರಿಗಳು ಹೆಂಡಬೀಡಿಯ ಚಟಗಳಿಂದಾಗಿ ಬತ್ತಿ ಸಣಕಲಾಗಿದ್ದವರು. ಬೈಯ್ದಾಡುವ ತಮ್ಮ ಹೆಂಡತಿಯರನ್ನು ಎದುರಿಸಲಾಗದೆ ಅವರನ್ನು ಗಯ್ಯಾಳಿಗಳೆಂದು ಕರೆದುಕೊಳ್ಳುತ್ತಿದ್ದರು. ಈ ಕಿರಗೂರಿನಲ್ಲಿ ಸತತವಾಗಿ ಮೂರುರಾತ್ರಿ ಮೂರು ಹಗಲು ಬಿರುಗಾಳಿ ಬೀಸುತ್ತದೆ. ನಿರಂತರವಾದ ಬಿರುಗಾಳಿ ಸೀಗೇಗೌಡರ ಮನೆಯ ಪಕ್ಕದಲ್ಲಿದ್ದ ಪುರಾತನ ಹೆಬ್ಬಲಸಿನ ಮರವನ್ನು ಬುಡಸಹಿತ ಬೀಳಿಸುವಲ್ಲಿಂದ ಕಥೆಗೆ ವೇಗ ದಕ್ಕುತ್ತದೆ. ಜಡಭರತರಂತಿದ್ದ ಗಂಡಸರ ಪ್ರತೀಕವೆಂಬಂತೆ ಹೆಬ್ಬಲಸು ಚಿತ್ರಿತವಾಗಿದೆ. ಜಡತೆಗೊಂದು ಚಲನೆಸಿಗುವ ಸಂಕೇತದಂತೆ ಬಿರುಗಾಳಿ ಪಾತ್ರವಿದೆ. ಸ್ಥಾಪಿತ ಸಂಸ್ಕೃತಿಯ ಮೇಲೆ ಸ್ವೀಕೃತ ಸಂಸ್ಕೃತಿಯ ಹೊಸಗಾಳಿ

---

೫೬. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, 'ಕಿರಗೂರಿನ ಗಯ್ಯಾಳಿಗಳು', ಪುಟ. ೨೩, ೧೯೯೫.

ಬೀಸುತ್ತದೆ. ಬಿರುಗಾಳಿಗೆ ಸಿಲುಕಿ ಬುಡಸಹಿತ ಬಿದ್ದ ಹೆಬ್ಬಲಸಿನ ಮರ ಇಡೀ ಹಳ್ಳಿಯ ಜಡತೆಯನ್ನು ಬುಡಮೇಲುಮಾಡಿ ಜನಜೀವನವನ್ನೇ ಅಸ್ತವ್ಯಸ್ತ ಮಾಡುತ್ತದೆ. ನಿರಂತರವಾಗಿ ತಮ್ಮನ್ನು ಕುಟುಂಬ ಹಾಗೂ ಹೊರಗಿನ ದುಡಿಮೆಯೊಂದಿಗೆ ತೊಡಗಿಸಿಕೊಳ್ಳುವ ಕಿರಗೂರಿನ ಹೆಣ್ಣುಮಕ್ಕಳ ಚಲನಶೀಲತೆಗೆ ಸಂಕೇತವಾಗಿ ಬಿರುಗಾಳಿಯನ್ನು ಪ್ರತಿನಿಧಿಸಿದ್ದರೆ ಬದಲಾವಣೆಯೊಂದಿಗೆ ತಮ್ಮತನವನ್ನು ಸ್ಥಾಪಿಸಹೊರಟ ಕಿರಗೂರಿನ ಹೆಣ್ಣುಮಕ್ಕಳು ಆ ಊರಿನ ಜಡತೆಯನ್ನು ನಿವಾರಿಸುತ್ತಾರೆ. ಹೆಬ್ಬಲಸಿನ ಮರ ಬೀಳುವವರೆಗೂ ಜಡಭರತದಂತೆ ಕಾಲಹಾಕುತ್ತಿದ್ದ ಕಿರಗೂರಿನ ಗಂಡಸರು ನಂತರದಲ್ಲಿ ಮರಕಡಿಯುವ ದಿಮ್ಮಿ ಉರುಳಿಸುವ ನಾನಾಕ್ರಿಯೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಪೇಚಿನ ಪ್ರಸಂಗಗಳಿಗೆ ಸಿಲುಕಿ ಹಾಸ್ಯಾಸ್ಪದವಾಗಿ ಬದುಕುತ್ತಾರೆ.

ಈ ಸಂಕಲನದಲ್ಲಿ ಆಧುನಿಕತೆಗೆ ಮೈಯನ್ನು ತೆರೆದುಕೊಂಡ ಗ್ರಾಮಸಮಾಜ ಅಸಂಬದ್ಧತೆ, ರಾಜಕೀಯ, ಅರ್ಥಹೀನತೆ, ಅಮಾನವೀಯ ಪರಿಸರದ ಕ್ರೌರ್ಯ, ಹಲವು ಮಜಲು, ಗೋಜಲು ಗೊಂದಲಗಳ ಚಕ್ರವ್ಯೂಹದಲ್ಲಿ ಬಂಧಿಯಾಗಿ ಅನುಭವಿಸುವ ಯಾತನೆ ಕಾರ್ಯಕಾರಣಗಳ ಸಂಬಂಧಗಳ ಹುಡುಕಾಟ, ಎಲ್ಲಾ ಅವಾಂತರಗಳನ್ನು ಸಂಬಂಧವಿಲ್ಲದ ವಸ್ತುವಿಗೆ ಆರೋಪಿಸಿ ನುಣುಚಿಕೊಳ್ಳುವ ಮನಸ್ಥಿತಿ ಇವೇ ಮೊದಲಾದವುಗಳನ್ನು ನಿರ್ವಹಿಸುವ ರೀತಿ ಭಿನ್ನವಾಗಿದೆ. ತೇಜಸ್ವಿಯವರ ಹಿಂದಿನ ಬರೆಹಗಳಿಗೆ ಹೋಲಿಸಿದಾಗ ಇಲ್ಲಿನ ಪ್ರಧಾನ ಪರಿಕಲ್ಪನೆಗಳು ಪ್ರಬುದ್ಧಗೊಂಡು ವಾಸ್ತವ ಮತ್ತು ವಾಸ್ತವೇತರ ದರ್ಶನದ ಆಯಾಮಗಳ ಒಟ್ಟಂದದೊಳಗೆ ಸಂಬಂಧವನ್ನು ಸಾಧಿಸುತ್ತದೆ. 'ಕೃಷ್ಣೇಗೌಡನ ಆನೆ' ಕಥೆಯಲ್ಲಿ ಒಂದು ಪ್ರಧಾನ ಚಿಂತನ ಲಹರಿಯೊಡನೆ ಹಲವು ಅವಾಂತರಗಳು ಒಂದಕ್ಕೊಂದು ಹೆಣೆದುಕೊಂಡು ಪಲ್ಲಟಗೊಳ್ಳುವುದರಲ್ಲಿ ಸಮಾಜದ ಸಂಕೀರ್ಣ ವಿನ್ಯಾಸ ಒಡೆದುಕಾಣುತ್ತದೆ. ಈ ಕಥೆಯಲ್ಲಿ ಆಧುನಿಕತೆಯ ಹಲವು ಆಯಾಮಗಳನ್ನು ಕೈವಶಮಾಡಿಕೊಂಡ ಮಾನವ ಅದರ ಸದುಪಯೋಗಕ್ಕೆ ಮುಂದಾಗದೆ ಯಾಂತ್ರಿಕತೆಯೆಡೆಗೆ ನುಸುಳುತ್ತಾ ಅಮಾನವೀಯ ಮೌಲ್ಯಗಳಿಗೆ ಶರಣಾಗುವುದು ಗ್ರಾಮಮೌಲ್ಯಗಳನ್ನು ಅಣಕಿಸುವಂತಿದೆ. ಇಲ್ಲಿ ಮೂಡಿಗೆರೆಯ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸ್ಥಿತ್ಯಂತರಗಳಿಂದ ಸಮರ್ಪಕವಾದ ರೂಪಕತೆಯು ಸೂಕ್ಷ್ಮತೆ ಪಡೆದುಕೊಳ್ಳುತ್ತದೆ. ಹೊಸತು-ಹಳತುಗಳ ಮುಖಾಮುಖಿಗಳಿಂದ ಪಲ್ಲಟಗೊಂಡ ಜೀವನಕ್ರಮಗಳನ್ನು ಹಲವು ಆಯಾಮಗಳೊಡನೆ ನಿರ್ವಹಿಸುವುದು ಭವಿಷ್ಯದ ಬಗೆಗಿನ ಕಾಳಜಿಗಳನ್ನು ವ್ಯಕ್ತಪಡಿಸುವ ಹಂಬಲವಾಗಿದೆ. ಕೃಷ್ಣೇಗೌಡನ ಆನೆಯ ಸುತ್ತ ಸ್ವಾರಸ್ಯಕರ ಘಟನಾವಳಿಗಳಲ್ಲಿ ನಿರೂಪಿತಗೊಳ್ಳುವ ಗ್ರಾಮೀಣ ಜೀವನದ ಚಲನೆಯ ಸಾಂಸ್ಕೃತಿಕ ಕಥನಗಳ

ಅವಲೋಕನ ಕತೆಯಲ್ಲಿ ಎದ್ದುಕಾಣುತ್ತದೆ. ಹಲವು ಅಭಿವ್ಯಕ್ತಿ ಕ್ರಮಗಳನ್ನು ದಾಟಿ ಮುನ್ನಡೆದಿರುವ ತೇಜಸ್ವಿ ಅವರ ಕ್ರಮವನ್ನು ಈ ಕಥೆಯ ಆರಂಭವೇ ಸಾಬೀತುಪಡಿಸುತ್ತದೆ.

ಗೂಳೂರು ಮಠದಿಂದ ಕೃಷ್ಣೇಗೌಡನ ಸುಪರ್ದಿಗೆ ಬಂದ ಆನೆ ಅವನ ಆರ್ಥಿಕ ಲಾಭವನ್ನು ಹಲವುಪಟ್ಟು ಹೆಚ್ಚಿಸುತ್ತದೆ. ಮುಗ್ಧ ಪ್ರಾಣಿಯಾದ ಆನೆಯನ್ನು ಶಿವೇಗೌಡರ ಸಾಮಿಲ್ಲಿನಲ್ಲಿ ಕಳ್ಳನಾಟ ಇಳಿಸಲು ರಾತ್ರೋರಾತ್ರಿ ಕರೆದೊಯ್ದಾಗ ಅನಿರೀಕ್ಷಿತವಾಗಿ ಲಾರಿಡ್ರೈವರ್‌ನ ಮರಣವಾಗುತ್ತದೆ. ಕಾಡಾನೆಗಳು ಊರಿನ ಕಡೆ ಬಂದು ಜನರ ಪೈರು ಫಸಲಿಗೆ ಹಾನಿ ಮಾಡಲು ಅರಣ್ಯನಾಶ ಕಾರಣವಾದರೆ ಕೃಷ್ಣೇಗೌಡನ ಹೆಣ್ಣಾನೆದೆಸೆಯಿಂದ ಕಾಡಾನೆಗಳು ಊರಿಗೆಬರುತ್ತಿವೆ ಎಂದು ಫಾರೆಸ್ಟರ್ ನಾಗರಾಜ ಆರೋಪಿಸುವುದು ಅವಾಸ್ತವಿಕವಾದುದು. ಟೆಲಿಫೋನ್ ಲೈನ್‌ಮೆನ್ ತಿಪ್ಪಣ್ಣ ಕಂಬದ ಮೇಲೆ ಮೃತ್ಯು ವಶವಾಗುವುದು, ಎಲೆಕ್ಟ್ರಿಕ್ ಇಲಾಖೆಯವರ ಅಸಮರ್ಪಕ ಕಾರ್ಯವೈಖರಿಯಿಂದ. ಆದರೆ ಲೈನ್‌ಮನ್ ದುರ್ಗಪ್ಪ ಅದನ್ನು ಎಲ್ಲೋ ಓಡಾಡಿಕೊಂಡಿರುವ ಆನೆಯ ತಲೆಗೆ ಕಟ್ಟುವುದು ಹಾಸ್ಯಾಸ್ಪದ. ಹಳೆಕೊಪ್ಪದ ಸುಬ್ಬಣ್ಣನ ಕೊಟ್ಟಿಗೆಯ ಮಾಡು ಕುಸಿದುಬೀಳಲು ಯಾವ ಆನೆ ಕಾರಣ ಎಂಬ ಸ್ಪಷ್ಟತೆಯಿಲ್ಲದಿದ್ದರೂ ಆ ಆರೋಪವನ್ನು ಕೃಷ್ಣೇಗೌಡನ ಆನೆಯಮೇಲೆ ಹೊರಿಸುವುದಲ್ಲದೆ ಅಬ್ಬಾಸನ ಲಾರಿ ಗೋಣಿಮರದ ಬಳಿ ಅಪಘಾತಕ್ಕೀಡಾಗಿ ಡ್ರೈವರ್ ಮತ್ತು ಕ್ಲೀನರ್‌ಸಾವಿಗೆ ಕೃಷ್ಣೇಗೌಡನ ಆನೆಯನ್ನು ಜವಾಬ್ದಾರಿಯನ್ನಾಗಿಸುತ್ತಾರೆ. ಮುನಿಸಿಪಲ್ ಪ್ರೆಸಿಡೆಂಟ್ ಖಾನ್ ಸಾಹೇಬರು ಕರೆದ ಮೂಡಿಗೆರೆಪುರ ಪ್ರಮುಖರ ಸಭೆಯಲ್ಲಿ ಯಾವ ಲಾಭವೂಇಲ್ಲದ ಆನೆಗೆ ಕೇಡು ಬಗೆಯುವ ಸದಾವಕಾಶವನ್ನು ಜನರು ಉಪಯೋಗಿಸಿಕೊಳ್ಳುವುದು ವಿಕೃತ ಮನಃಸ್ಥಿತಿಯ ಆಲೋಚನೆಯಾಗಿದೆ.

ಮೂಡಿಗೆರೆಯ ಪ್ರತಿಯೊಂದು ಘಟನಾ ಪರಂಪರೆಗಳು ತಮ್ಮ ವಾಸ್ತವಾಂಶಗಳನ್ನು ಮರೆಮಾಚಿ ಕೃಷ್ಣೇಗೌಡನ ಆನೆಗೆ ತಳುಕು ಹಾಕಿಕೊಳ್ಳುವುದು ಚೋದ್ಯದ ಸಂಗತಿ. ಎಲ್ಲಾ ಅನಾಹುತಗಳಿಗೆ ಆನೆಯ ಮೂಲದಿಂದ ಉತ್ತರ ಕಂಡುಕೊಳ್ಳಲು ಪ್ರಯತ್ನಿಸುವುದು ಭಾರತದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಅಧಿಕಾರಶಾಹಿ ವ್ಯವಸ್ಥೆಯ ಅಸ್ವಸ್ಥತೆಯನ್ನು ಸೂಚಿಸುತ್ತದೆ. ಮನುಷ್ಯ ತನ್ನ ನೂರಾರು ಅಸಹ್ಯಗಳನ್ನು ಮರೆಮಾಚುವುದಕ್ಕಾಗಿ ಒಂದನ್ನು ಮತ್ತೊಂದರ ಮೇಲೆ ಆರೋಪಿಸಿ ಸಾಮಾಜಿಕ ಜವಾಬ್ದಾರಿಯಿಂದ ನುಣುಚಿಕೊಳ್ಳುವುದನ್ನು ಕಥೆ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ವಿಚಿತ್ರ ಸಾಮಾಜಿಕ ಸಂಬಂಧಗಳನ್ನು ಕಟ್ಟಿಸಿಕೊಂಡು ವೇಲಾಯುಧ ಮತ್ತು ನಾಗರಾಜನ ಸಾವಿಗೆ ಕೃಷ್ಣೇಗೌಡನ ಆನೆ ಕಾರಣ ಎಂದು ಪರಿಭಾವಿಸುವುದು ಮತ್ತೊಂದು ವ್ಯಂಗ್ಯವೇ ಸರಿ. ಪ್ರಜಾಪ್ರಭುತ್ವದ ಭ್ರಷ್ಟತೆ, ನಿರ್ವೀರ್ಯತೆ, ದುರಾಸೆ, ಸ್ವಾರ್ಥಪರತೆ ಮುಂತಾದವುಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುವ ಕತೆಗಾರರು ಹಲವು ವೈರುಧ್ಯಗಳನ್ನು

ಏಕಕಾಲದಲ್ಲಿ ತೆರೆದಿಟ್ಟು ಆನೆಯ ಅಪರಾಧಿತ್ವವನ್ನು ವ್ಯಂಗ್ಯದ ನೆಲೆಗೆ ಕೊಂಡೊಯ್ಯುವುದರಲ್ಲಿ ನಿಗೂಢ ಸತ್ಯಗಳು ಅನಾವರಣಗೊಂಡಿವೆ.

ಹಾಸ್ಯಮಿಶ್ರಿತ ಗಂಭೀರ ಶೈಲಿಯಲ್ಲಿ ರಚನೆಗೊಂಡಿರುವ 'ರಹಸ್ಯವಿಶ್ವ' ಕತೆ ನಿರೂಪಕನ ಬಾಲ್ಯದ ಮುಗ್ಧ ಘಟನೆಯೊಂದನ್ನು ದಾಖಲಿಸುತ್ತದೆ. ಇಲ್ಲಿನ ಬಾಲಕ ಸೈಕಲ್ ಕಲಿಯುವ ಸಂದರ್ಭದಲ್ಲಿ ದೈತ್ಯಾಕಾರದ ರಂಗಮ್ಮನಿಗೆ ಢಿಕ್ಕಿ ಹೊಡೆದು ಅವಳ ಸೀರೆಯೊಳಗೆ ತೂರಿಕೊಳ್ಳುತ್ತಾನೆ. ಅಲ್ಲಿನ ಕತ್ತಲ ಅನುಭವದಲ್ಲಿ ಹೊಸದೊಂದು ಲೋಕದ ದರ್ಶನವಾಗುತ್ತದೆ. ಯಾರಿಗೂ ಹೇಳಿಕೊಳ್ಳಲಾಗದೆ, ತನಗೆ ತಾನೇ ಹೇಳಿಕೊಳ್ಳಬಹುದಾದ ರಹಸ್ಯ ವಿಶ್ವವೊಂದು ಬಾಲಕನ ಮನಸ್ಸಿನಲ್ಲಿ ಅಂದಿನಿಂದ ರೂಪುಗೊಳ್ಳುವುದು ಬಾಲ್ಯ ಸಹಜ ಪ್ರಕ್ರಿಯೆಯಾಗುತ್ತದೆ. ಇಂತಹ ಕಥೆಗಳನ್ನು ಚಿತ್ರಿಸುವಾಗಲೂ ತೇಜಸ್ವಿ ಅಶ್ಲೀಲತೆಯ ಎಲ್ಲೆಗಳನ್ನು ತುಳಿಯುವುದಿಲ್ಲ ಎಂಬುದು ಗುರುತಿಸಬೇಕಾದ ಅಂಶ. ಸಂಕಲನದಿಂದ ಸಂಕಲನಕ್ಕೆ ಹೊಸ ಮಾರ್ಗದ ಲಕ್ಷಣಗಳು ನಿಚ್ಚಳವಾಗಿ ಗೋಚರವಾದರೂ ಅನುಭವಗಳ ಪುನಃ ಸೃಷ್ಟಿ ಹೊಸ ಆಯಾಮಗಳಲ್ಲಿ ಚಲನಶೀಲತೆ ಪಡೆದುಕೊಂಡಿದೆ. ನಮ್ಮ ಕಣ್ಣ ಮುಂದಿನ ವಸ್ತು ಘಟನೆಗಳನ್ನೇ ಕಲಾತ್ಮಕತೆಯಾಗಿಸುವ ಕೌಶಲ ತೇಜಸ್ವಿ ಅವರಿಗೆ ಸಿದ್ಧಿಸಿದೆ. ಆದ್ದರಿಂದ ವರ್ತಮಾನದ ಸಂವೇದನೆಗಳನ್ನು ವಿಶಿಷ್ಟವಾಗಿ ಅಭಿವ್ಯಕ್ತಗೊಳಿಸುವ ಕತೆಗಳು ಆಪ್ತವಾಗಿ ಬಿಡುತ್ತವೆ. ದಟ್ಟವಾದ ಅನುಭವ ಗ್ರಾಮೀಣ ಸೊಗಡಿನ ಜೀವಂತ ಚಿತ್ರಣ, ವೈಚಾರಿಕ ಜಾಗೃತಿ ಸಮಾನತೆಯ ಪರಿಕಲ್ಪನೆ ಮುಂತಾದವು ಅಯಸ್ಕಾಂತದಂತೆ ಆಕರ್ಷಣೀಯ ಗುಣವನ್ನು ಹೊಂದಿವೆ.

'ಪರಿಸರದ ಕಥೆ' ತೇಜಸ್ವಿಯವರ ವಿಶಿಷ್ಟವಾದ ಕಥಾಸಂಕಲನ ಇದು ಒಂದುರೀತಿಯಲ್ಲಿ ಪ್ರಕೃತಿ–ಪರಿಸರದ ನಡುವಿನ' ವಿನ್ಯಾಸವನ್ನು ಕುರಿತ ಅನುಭಾವಿ ಕಥಾನಕ ಎನ್ನಬಹುದು ನಿಗೂಢತೆಯ ಶೋಧನೆಯಿಂದ. ಶುರುವಾದ ತೇಜಸ್ವಿಯವರ ಕಥೆಗಳು ಬರಬರುತ್ತಾ ಪ್ರಕೃತಿ ಮತ್ತು ಪರಿಸರದ ನಡುವಿನ ಭೌತಿಕ ಸಂಬಂಧದ ಶೋಧನೆಗೆ ತೊಡಗಿರುವುದು ಕಂಡುಬರುತ್ತದೆ. ಕಥೆಗಾರನೊಬ್ಬ ಪ್ರಕೃತಿಯ ಮತ್ತು ಅವನು ವಾಸಿಸುವ ಪರಿಸರದ ನಡುವೆ ಇರುವ ಗಾಢ ಕುತೂಹಲ, ಭಯ, ವಿಸ್ಮಯವನ್ನು ಪ್ರಕಟಿಸುವ ಸಣ್ಣ ಕಥೆಗಳು ಈ ಸಂಕಲನದಲ್ಲಿವೆ. ಇವು ಲೇಖಕರ ವಿಶಿಷ್ಟ ಅಸಾಧಾರಣ ಅನುಭವದ ಚಿತ್ರಗಳಾಗಿ ಬರುತ್ತವೆ. ಈ ಎಲ್ಲಾ ಚಿತ್ರಗಳು ಪ್ರಕೃತಿ ಮತ್ತು ಪರಿಸರ ನಿಷ್ಠವಾಗಿವೆ. ಇಲ್ಲಿ ಪ್ರಾಣಿಲೋಕ, ಮನುಷ್ಯಲೋಕ, ಪಕ್ಷಿಲೋಕ, ಸಸ್ಯಲೋಕ ಹೀಗೆ ಈ ಜೀವಸಂಕುಲಗಳ ಲೋಕಗಳು ಕಥೆಗಾರರ ಸೃಜನಶೀಲತೆಯನ್ನು ಮುಖಾಮುಖಿಯಾಗಿಸುತ್ತವೆ. ಇಲ್ಲಿನ ಪ್ರತಿಯೊಂದು ಘಟನೆಯೂ ಲೇಖಕರ ಸ್ವಾನುಭವವೇ, ಪ್ರಕೃತಿ ಮತ್ತು ಪರಿಸರದೊಡನೆ ಲೇಖಕ ಹೊಂದಿರುವ ತೀವ್ರವಾದ ಶ್ರದ್ಧೆ ಸಂಬಂಧವನ್ನು ಕಥೆಗಳ ಮೂಲಕ ಅಭಿವ್ಯಕ್ತಿಸಲಾಗಿದೆ. ಇಲ್ಲಿನ ಚಿಕ್ಕಚಿಕ್ಕ ಕಥೆಗಳಲ್ಲಿ ಜೀವಸಂಕುಲಗಳು ಹೋರಾಟ

ಮಾಡುವ ಕ್ರಮವನ್ನು ವೈಜ್ಞಾನಿಕರೀತಿಯಲ್ಲಿ ವಿಶ್ಲೇಷಿಸಲಾಗಿದೆ. ಜೀವವಿಕಾಸದ ರೀತಿಯನ್ನು ವೈಜ್ಞಾನಿಕವಾಗಿ ಕಥೆಗಳ ಮೂಲಕ ವಿವರಿಸುವುದು ಲೇಖಕರ ಮುಖ್ಯ ಕಾಳಜಿಯಾಗಿದೆ. 'ಕಿವಿಯೊಡನೆ ಒಂದು ದಿನ', 'ಮಾಸ್ತಿ ಮತ್ತು ಭೈರವ', 'ಸುಶ್ಮಿತ ಮತ್ತು ಹಕ್ಕಿಮರಿ' 'ಮಾನಿಟರ್' ಮುಂತಾದ ಕಥೆಗಳು ಅಪೂರ್ವವಾದ ಅನುಭವವನ್ನು ಓದುಗರಲ್ಲಿ ಉಂಟುಮಾಡುತ್ತವೆ.

ಹೀಗೆ ಪ್ರಕೃತಿ ಮತ್ತು ವಾಸಿಸುವ ಗ್ರಾಮಸಮಾಜ ಸುತ್ತಲಪರಿಸರಗಳ ಬಗ್ಗೆ ಚಿಕ್ಕಂದಿನಿಂದಲೂ ಕುತೂಹಲವನ್ನು ಮೂಡಿಸಿಕೊಂಡ ತೇಜಸ್ವಿಯವರು ಕೊನೆಗೆ ಪರಿಸರದ ಬಗ್ಗೆ ಶ್ರದ್ದೆಯನ್ನು ಮೂಡಿಸಿಕೊಂಡ ಬಗೆ ಇದು. ಪರಿಸರ ಸಂರಕ್ಷಣೆಯ ಬಗ್ಗೆ ವೈಜ್ಞಾನಿಕ ತಿಳುವಳಿಕೆ, ಸಾಮಾಜಿಕ ಎಚ್ಚರ ಹಾಗೂ ಸಾಂಸ್ಕೃತಿಕ ಕಾಳಜಿಗಳನ್ನು ಈ ಕಥೆಗಳು ಪ್ರಕಟಿಸುತ್ತವೆ. ಗ್ರಾಮೀಣ ವಸ್ತು, ವಿಷಯ ಅನುಭವಗಳೇ ಈ ಲೇಖಕರ ಕಥೆಗಳ ಕೇಂದ್ರವಾಗಿರುವುದರಿಂದ ಆಯಾಯ ಪ್ರಾದೇಶಿಕ ಭಾಷೆಯ ಸೊಗಡು ಕಥೆಯ ಓಟಕ್ಕೆ ಸೊಗಸಿಗೆ ಪೂರಕವಾಗಿವೆ. ಗ್ರಾಂಥಿಕವಲ್ಲದ ಆಡುಶೈಲಿಯ ಬರಹವು ಓದುಗರಿಗೆ ಆಪ್ತವಾಗುತ್ತದೆ. ಹೀಗೆ ತಮ್ಮ ಪರಿಸರ ಹಾಗೂ ಸಮಾಜವನ್ನು ವಿಮರ್ಶೆಗೊಳಪಡಿಸುತ್ತಾ ಬರೆಯುತ್ತಾರೆ. ದೇಶೀಯ ಚಿಂತಕರು ಕಾಳಜಿ ಹಾಗೂ ಸಿದ್ಧಾಂತಗಳನ್ನು ಒಳಗೊಳ್ಳುತ್ತಾ ಅವುಗಳನ್ನು ತಮ್ಮ ಸಾಹಿತ್ಯದಲ್ಲಿ ಅಂತರ್ಗತಗೊಳಿಸಿದ್ದಾರೆ. ಗ್ರಾಮಸಂವೇದನೆ ಪರಿಸರ ಪ್ರಜ್ಞೆಯ ಕಾಳಜಿಯೊಂದಿಗೆ ಜೀವಪರ ಸಂವೇದನೆಗಳಿಂದ ಸ್ಪಂದಿಸಿದ್ದಾರೆ. ಇದರ ಮೂಲಕ ಗ್ರಾಮಸಂಸ್ಕೃತಿಯ ಅನಾವರಣ ಮಾಡಿದ್ದಾರೆ.

೫.೩. ಆಧುನಿಕತೆ ಮತ್ತು ಸಂಘರ್ಷ

ಕನ್ನಡ ಸಾಹಿತ್ಯದ ಆಧುನಿಕ ಕಥನ ಸಂದರ್ಭದ ಮೂರನೇ ತಲೆಮಾರಿನ ಆರಂಭದ ಸಾಹಿತ್ಯಕ ಸಿದ್ಧಿ, ಸಂಕೇತ, ಪ್ರತಿಮೆಗಳಂಥ ಪಾರಿಭಾಷಿಕ ಪದಗಳಲ್ಲಿ ಕೇಂದ್ರೀಕೃತವಾಗಿದೆ. ತೇಜಸ್ವಿ ಈ ಬಗೆಯ ಉದ್ದೇಶಪೂರ್ವಕ ಸ್ಥಿತಿಯನ್ನು ತೊರೆದು ಬರವಣಿಗೆಯ ವೈಯಕ್ತಿಕ ಒತ್ತಡಗಳಿಗೆ ಒಳಗಾಗುವ ಅದು ಇನ್ನೊಬ್ಬನನ್ನು ಆತ್ಮೀಯವಾಗಿ ತಳ್ಳುವ ರೀತಿಯಲ್ಲಿ ದುಡಿಸಿಕೊಳ್ಳಲು ಪ್ರಯತ್ನಿಸಿದರು. ಹೀಗೆ ಇಕ್ಕಟ್ಟಾದ ಸ್ಥಿತಿಯಿಂದ ವಿಶಾಲವಾಗಿ ಸಾರ್ವತ್ರಿಕಗೊಳ್ಳುವ ಸ್ಥಿತಿಗೆ ಪರಿವರ್ತನೆಯಾಗಿದ್ದು ತೇಜಸ್ವಿ ಅವರ ಆಶಯವು ಸಾಮಾಜಿಕಗೊಳ್ಳುವುದನ್ನು ಹೇಳುತ್ತದೆ. 'ಹುಲಿಯೂರಿನ ಸರಹದ್ದು' ಒಂದು ರೀತಿಯಲ್ಲಿ ಆರಂಭಿಕ ಬರಹದ ಸ್ವರೂಪ ದರ್ಶನವನ್ನು ಮಾಡಿಸಿದರೆ 'ಸ್ವರೂಪ' ಮತ್ತು 'ನಿಗೂಢಮನುಷ್ಯರು' ಅವರ ಸೃಜನಶೀಲ ಕ್ಷೇತ್ರದ ಸಂಧಿಕಾಲವನ್ನು ಪ್ರತಿನಿಧಿಸುತ್ತವೆ. ಕರ್ವಾಲೋವಿನಿಂದ ಮುಂದೆ ಅವರ ಬರಹ ಸಮಾಜಮುಖಿಯಾಗಿದೆ. ಲೇಖಕನೊಬ್ಬನ ಎಲ್ಲಾ ಇರಾದೆಗಳೂ ಸಾರ್ವತ್ರಿಕವಾಗಿ ರೂಪುಗೊಳ್ಳುವುದು ಎಂಬ ಸೈದ್ಧಾಂತಿಕ ಕಾಳಜಿ ಕಲಾತ್ಮಕ ಆಶಯವಾಗಿ ಧಾರಣೆಯಾಗುವುದು ಪ್ರಥಮದರ್ಜೆಯ ಲೇಖಕನಲ್ಲಿ ಮಾತ್ರ ಎಂಬುದನ್ನು ತೇಜಸ್ವಿ ಮತ್ತೆ ಮತ್ತೆ ಸಾಬೀತುಪಡಿಸಿದ್ದಾರೆ.

ಹೊಸಗನ್ನಡದ ಕಾದಂಬರಿಕಾರರಲ್ಲಿ ತೇಜಸ್ವಿಯವರಿಗೆ ಇರುವ ಜೀವನಮೌಲ್ಯಗಳ ಬಗೆಗಿನ ಕಾಳಜಿಗಳು ಗಂಭಿರವಾದವು. ಶಿಕ್ಷಣ, ಸಾಹಿತ್ಯ, ಸೃಷ್ಟಿ ವೈಚಾರಿಕತೆಯ ಬಗ್ಗೆ ತೇಜಸ್ವಿಯವರು ತಮ್ಮ 'ನಿಗೂಢ ಮನುಷ್ಯರು' ಕಾದಂಬರಿಯಲ್ಲಿ ಜಗನ್ನಾಥ ಮತ್ತು ಗೋಪಾಲಯ್ಯನ ಪಾತ್ರಗಳ ಮೂಲಕ ಮತ್ತು 'ಅಬಚೂರಿನ ಪೋಸ್ಟಾಫೀಸು' ಕಥಾಸಂಕಲನಕ್ಕೆ ಬರೆದ 'ಹೊಸ ದಿಗಂತದ ಕಡೆಗೆ' ಎಂಬ ಮುನ್ನುಡಿಯ ಮೂಲಕ ತಮ್ಮದೇ ಆದ ಚಿಂತನೆಗಳನ್ನು ನಿರೂಪಿಸಿದ್ದಾರೆ. ಅಲ್ಲದೇ, ಕನ್ನಡ ಸಾಹಿತ್ಯ ಯಾವುದರ ಪ್ರೇರಣೆ ಪಡೆಯಬೇಕು ಮತ್ತು ಯಾವುದನ್ನು ಅನ್ವೇಷಣೆ ಮಾಡಬೇಕು ಎಂಬುದರ ಬಗ್ಗೆ ಅವರು 'ಸ್ವರೂಪ' ಮತ್ತು 'ನಿಗೂಢ ಮನುಷ್ಯರು' ಎಂಬ ಎರಡೂ ಸೃಜನಾತ್ಮಕ ಕಾದಂಬರಿಗಳಲ್ಲಿ ಚರ್ಚೆಮಾಡಿದ್ದಾರೆ. ಈ ಎರಡೂ ಕಾದಂಬರಿಗಳು ಆಧುನಿಕತೆಯಿಂದ ಆದಂತಹ ಸಂಘರ್ಷ, ಸಾಹಿತ್ಯ ಸೃಷ್ಟಿ, ಸಾಹಿತ್ಯ ತತ್ವ ಮತ್ತು ಸಾಹಿತ್ಯ ಮೀಮಾಂಸೆಯ ಬಗ್ಗೆ ಸಹ ಇವು ಆಳವಾಗಿ ಚರ್ಚಿಸಿರುವುದರಿಂದಲೂ ಇವು ಕುತೂಹಲಕಾರಿಯಾದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನಕ್ಕೆ ಕಾರಣಗಳಾಗುತ್ತವೆ.

'ಕರ್ವಾಲೋ' ಬಗೆಬಗೆಯ ಆಶಯಗಳನ್ನು ತನ್ನೊಳಗೆ ಗರ್ಭೀಕರಿಸಿಕೊಂಡಿರುವ ಅನನ್ಯಕೃತಿ ಎಂಬುದನ್ನು ಹೇಳಬಹುದು. ಮುಂದುವರೆದು ಹೇಳುವುದಾದರೆ ಮಾನವ ತಾನು ಬಳಕೆಗೊಳಪಡಿಸುವ ಪ್ರಾಕೃತಿಕ ಸಂಪತ್ತಿನ ಎಲ್ಲ ಸ್ಥಿತಿಗಳೊಡನೆ ಮುಖಾಮುಖಿಯಾಗುತ್ತಲೇ ತನ್ನ ವೇಷವನ್ನು ಸ್ಥಾಪಿಸಬೇಕಾಗಿವೆ ಎಂಬುದನ್ನು ತೇಜಸ್ವಿ ಸೂಚಿಸಿರುವುದು. ಒಂದರ್ಥದಲ್ಲಿ ಇಡೀ ಕೃತಿಯ ಕೇಂದ್ರ ಕಾಳಜಿಯಾದ ಹಾರುವ ಓತಿಯ ಶೋಧನೆ ಕೂಡ ಪ್ರಕೃತಿಯನ್ನು ಮತ್ತು ಅದರ ನಿಗೂಢತೆಯನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಬೇಕೆನ್ನುವ ಅವನ ವಿಫಲಪ್ರಯತ್ನವೇ ಆಗಿದೆ. ಆಧುನಿಕ ಜಗತ್ತಿನಲ್ಲಿ ಮನುಷ್ಯ ಪ್ರಕೃತಿಯನ್ನೇ ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುವುದು ವ್ಯಂಗ್ಯದ ಸಂಗತಿಯಾಗುತ್ತದೆ. ಕರ್ವಾಲೋ ಒಬ್ಬ ವಿಜ್ಞಾನಿಯಾಗಿ ಅದು ಆತನಿಗೂ ಗೊತ್ತಿರುವ ಸಂಗತಿ ಕೂಡ ಓತಿಯನ್ನು ಹಿಡಿಯುವ ಸಂದರ್ಭದಲ್ಲಿ ಕರ್ವಾಲೋ "ಹೋಗಲಿಬಿಡಿ, ಬ್ಯಾಡ್‌ಲಕ್, ಏನೂ ಪರವಾ ಇಲ್ಲ" ಎಂದು ಹೇಳುವ ಮಾತಿನಲ್ಲಿ ಅಲ್ಲಿಯತನಕ ಪಟ್ಟ ಪ್ರಯತ್ನ ಫಲಕೊಡಲಿಲ್ಲವೆಂಬ ನೋವಿದೆ. ಇದು ಕೃತಿಯ ಮೇಲುನೋಟಕ್ಕೆ ಕಾಣುವ ಸಹಜ ವಿವರಣೆಯಷ್ಟೇ ಆಗುತ್ತದೆ. ಆದರೆ ಅದರ ವಿಶೇಷ ಅರ್ಥಲಯವನ್ನು ಸ್ಪರ್ಶಿಸಿದಾಗ ಆ ಮಾತು ಹಾರುವ ಓತಿಯ ಹಿನ್ನೆಲೆಯಲ್ಲಿ ಜೀವಮುಖಿಯಾದ ವ್ಯಾಖ್ಯೆಯಾಗಿ ಪರಿಗಣಿಸಬಹುದಾಗಿದೆ. ಹಾರುವ ಓತಿಯನ್ನು ಎಷ್ಟೆಲ್ಲಾ ಸಿದ್ಧತೆಯಿಂದ ಹಿಡಿಯಲು ಹೊರಟಿದ್ದರೋ ಅಷ್ಟೇ ಸಿದ್ಧತೆಯಿಂದ ಅದು ತಪ್ಪಿಸಿಕೊಳ್ಳಲು ಅಂದರೆ ತನ್ನನ್ನು ತಾನು ರಕ್ಷಿಸಿಕೊಂಡು ಮನುಷ್ಯ ತನ್ನ ಹಿಡಿತಕ್ಕೆ ತೆಗೆದುಕೊಳ್ಳಬೇಕೆನ್ನುವ ಮಾನವನ ಕ್ರೌರ್ಯಕ್ಕೆ ತೋರಿದ ಮತ್ತು ತೋರುವ ಕಟ್ಟಕಡೆಯ ವಿರೋಧವಾಗಿದೆ. ಈ ದನಿಯೇ ಕರ್ವಾಲೋ ಕೃತಿಯ ಕೇಂದ್ರ ಆಶಯವಾಗಿದೆ. ಮಾನವನ

ಈ ವಿಫಲ ಶೋಧನೆಯು ಅವರ ನಿಗೂಢತೆಯ ಕಾಲಾತೀತವಾದದ್ದು ಎಂಬುದನ್ನು ಧ್ವನಿಸುತ್ತದೆ. ಹಾರುವ ಓತಿಯು ಸಿಕ್ಕುವುದಕ್ಕಿಂತ ತಪ್ಪಿಸಿಕೊಂಡದ್ದು ಕೃತಿಯ ಕಾಣ್ಕೆಯನ್ನು ಜೀವಮುಖಿಯಾಗಿಸಿ ಅವರ ಅರ್ಥವಿಸ್ತಾರವನ್ನು ವೃದ್ಧಿಸುತ್ತದೆ.

ಭಾರತೀಯ ಸಂಸ್ಕೃತಿಯ ನಿಗೂಢತೆ ಅಂತರ್ಮುಖಿ ಚಲನೆಯನ್ನು ದಮನಿಸಿ ಬಹಿರ್ಮುಖಿ ಚಲನೆಯನ್ನು ಗೌರವಿಸುತ್ತದೆ. ಒಳಗೇ ಇದ್ದು ಬಹಿರಂಗಗೊಳ್ಳದೇ ಇರುವ ಆಶಯ ನಿಗೂಢತೆಯದು. ಇದು ಸಾಮಾನ್ಯವಾಗಿ ಮಾನವ ಬದುಕಿನಲ್ಲಿ ಸ್ವೀಕಾರವಾಗುವ ಅರ್ಥ ಪರಿವೇಷ ಎಂಗ್ಟ ಮತ್ತು ಅವನ ಹೆಂಡತಿ ಈ ನೆಲೆಯ ಒಡಲಿನಲ್ಲಿ ಘನೀಭೂತವಾಗುವಂತವರು. ಇವರ ಒಳಗಿನ ಆಶಯಗಳು ಇರುವ ಸ್ಥಿತಿಗೆ ವಿರೋಧಿಸ್ತರದಲ್ಲಿ ಬೆಳವಣಿಗೆಯಾಗಿ, ಆ ಬದುಕು ಛಿದ್ರಗೊಳ್ಳುತ್ತಿರುವ ಸೂಚನೆಯನ್ನು ಕೊಡುತ್ತದೆ. ಆದರೆ ಕರಿಯಪ್ಪನ ಗ್ರಹಿಕೆಗಳು ಹೊರಗಿನ ಆಶಯಗಳಿಂದ ನಿಯಂತ್ರಣಗೊಂಡಿರುವುದರಿಂದ ಅವನ ಬದುಕು ಹೊಣೆಗಾರಿಕೆ ಇಲ್ಲದ ಮಾರ್ಗದಲ್ಲೇ ಮುಂದುವರಿಯಲು ತವಕಿಸುತ್ತದೆ. ಮನೆಯ ಸೇವಕನಾಗಿ ತನ್ನನ್ನು ಗುರುತಿಸಿಕೊಂಡಿರುವ ಪ್ಯಾರ, ಅನಾಥನೆಂಬ ಕಾರಣಕ್ಕಾಗಿ ವಿಶೇಷ ಆದ್ಯತೆಗಳೇನನ್ನೋ ಪಡೆಯುವುದಿಲ್ಲ. ಮಾಮೂಲಿ ಗ್ರಹಿಕೆಗಳು ಕೆಲಸ ಮಾಡುವಂತೆಯೇ ನಿರೂಪಕನ ಮನಸ್ಸು ಪ್ರತಿಕ್ರಿಯಿಸಿದೆ. ಇದು ಸೂಕ್ಷ್ಮ ದೃಷ್ಟಿಯ ಬದುಕಿನ ಎಲ್ಲ ಅನಂತತೆಯನ್ನು ಗ್ರಹಿಸುವ ಸಾಮಾಜಿಕ ಸ್ಥಿತ್ಯಂತರದಲ್ಲಿ ಉಂಟಾಗುತ್ತಿರುವ ಭಾವನೆಯ ಏರಿಳಿತಗಳನ್ನು ಒತ್ತೊಟ್ಟಿಗೆ ಸಂಗ್ರಹಿಸಿ ನಿರ್ಣಯವನ್ನು ನೀಡುವ ಮನಸ್ಸು ತೇಜಸ್ವಿಯವರದು. ಏಕೆಂದರೆ ನಿರೂಪಕನು ಪ್ಯಾರವನ್ನು ಮಾತನಾಡಿಸುವ ಧಾಟಿಯಲ್ಲಿ ಪ್ಯಾರ ನಿರೂಪಕನನ್ನು ಮಾತನಾಡಿಸಲು ಸಾಧ್ಯವಾಗದು ಎಂಬುದಕ್ಕೆ ವ್ಯವಸ್ಥೆಯನ್ನು ಒಂದಲ್ಲ ಒಂದು ರೀತಿಯಲ್ಲಿ ಪೋಷಿಸುತ್ತಿರುವ ನಾವೆಲ್ಲರೂ ಕಾರಣರಾಗಿದ್ದೇವೆ. ಇಲ್ಲಿ ಸಾಂಸ್ಕೃತಿಕ ಸಂಘರ್ಷದ ಮೂಲಸ್ಥಿತಿಗಳು ಪರಿಸರದ ವಿಘಟನೆಯಲ್ಲಿ ಉದ್ಭವಿಸುತ್ತವೆ ಮತ್ತು ಅವುಗಳನ್ನು ಪೋಷಿಸುವ ಅಂಶಗಳು ಸಾರ್ವತ್ರಿಕ ಆಶಯಗಳನ್ನು ಧ್ವನಿಸಲು ನಿರಾಕರಿಸುತ್ತವೆ. ತಮ್ಮ ಸಾಂಸ್ಕೃತಿಕ ಪರಿಸರ ಇಂಥ ವೈರುಧ್ಯಗಳನ್ನು ಸೃಷ್ಟಿಸುತ್ತಲೇ ವಿಘಟನಕಾರಿಯಾದ ಅಂಶಗಳನ್ನು ಚಾಲನೆಗೆ ತರುವ ಮಾರುಕಟ್ಟೆಯಾಗುತ್ತವೆ. ಆದರೆ ಪ್ರಾಕೃತಿಕವಾಗಿ ಇದರ ಬೇರೊಂದು ಮುಖವನ್ನು ಅಧ್ಯಯನ ಮಾಡಿದರೆ ಕುತೂಹಲದ ಸಂಗತಿಗಳು ದೊರೆಯುತ್ತದೆ 'ಕರ್ವಾಲೋ'. ಇಂದು ಒಂದು ಜೀವನಸ್ಥಿತಿಯ ಸಂಕೇತವಾದ ಕೃತಿ. ಕನ್ನಡದಲ್ಲಿ ಇದುವರೆಗೆ ಸಾಧಿಸಲಾಗದೇ ಇದ್ದನಿಗೂಢತೆ ಮತ್ತು ಶೋಧನೆಯ ನಡುವಿನ ಸಾದೃಶ್ಯವನ್ನು ಈ ಕೃತಿ ಸಾಧಿಸಿದೆ. ನಿಗೂಢ ಮತ್ತು ಶೋಧನೆಯ ಹಲವಾರು ಮುಖಗಳಲ್ಲಿ ಗಮನಿಸುತ್ತ ಒಂದು ಘಟ್ಟದ ಜೀವನಗತಿಯು ಇನ್ನೊಂದರೊಡನೆ ಘರ್ಷಿಸಿಕೊಳ್ಳಬಹುದಾದ ಸಾಧ್ಯತೆಯನ್ನು ಸಾಂಸ್ಕೃತಿಕ ಸಂಘರ್ಷವಾಗಿ ದುಡಿಸಿಕೊಳ್ಳುವ ಗಳಿಗೆಯಲ್ಲೇ ಅದು ವ್ಯಕ್ತಿ–ವ್ಯಕ್ತಿಗಳು

ಮತ್ತು ವ್ಯಕ್ತಿಸಮಾಜದ ತದ್ವಿಪರೀತವಾದ ತೊಡಕಾಗದಂತೆ ಎಚ್ಚರವಹಿಸಿ ಅವುಗಳು ಪರಸ್ಪರ ಕಳೆದುಕೊಳ್ಳುವ ಹಾಗೆ ಸೃಜನಶೀಲ ಆಯಾಮವನ್ನು ಸೃಷ್ಟಿಮಾಡಿರುವ ಕೃತಿಕಾರನ ಸೋಪಜ್ಞತೆಯನ್ನು ಅಪಾರವಾಗಿ ಮೆಚ್ಚಿಕೊಳ್ಳಬೇಕಾದುದು ಅದನ್ನು ಸ್ಪರ್ಶಿಸುವ ವಿಮರ್ಶೆಯ ಅನಿವಾರ್ಯಗುಣವಾಗಿದೆ. ಪ್ರಕೃತಿಯ ನಿಗೂಢ ನೆಲೆಯನ್ನು ಅರ್ಥಮಾಡಿಕೊಳ್ಳಲಾಗದ ಮಾನವ ಜನಾಂಗ ಹೇಗೆ ಆಧುನಿಕತೆಯ ಘರ್ಷಣೆಯಿಂದ ತನ್ನ ದುರಂತವನ್ನು ಅಸಹಾಯಕವಾಗಿ ಸ್ವೀಕರಿಸುತ್ತಾನೆ ಎಂಬುದನ್ನು ನೋಡಬಹುದು.

'ಸ್ವರೂಪ' ಕಾದಂಬರಿಯು ವ್ಯಕ್ತಿನಿಷ್ಠ ಪ್ರಜ್ಞೆಯ ಮೂಲಕ ಹಲವು ಆಯಾಮಗಳಲ್ಲಿ ತೆರೆದುಕೊಳ್ಳುವ ಕಾದಂಬರಿಯ ವಸ್ತು, ವೈಯಕ್ತಿಕತೆಯಲ್ಲಿ ಪರ್ಯಾವಸಾನಗೊಳ್ಳದ ಸಮಗ್ರತೆಯ ಪ್ರತಿನಿಧಿಯಾಗುತ್ತದೆ ಎಂಬುದನ್ನು ಗಮನಿಸಬೇಕು. ವ್ಯಕ್ತಿನಿಷ್ಠ ಪ್ರಜ್ಞೆಯಲ್ಲಿನ ಹೊಳಹುಗಳು ಸಾರ್ವತ್ರೀಕರಣಗೊಂಡು ವಸ್ತುನಿಷ್ಠ ನೆಲೆಯಕಡೆ ಮುಖಾಮುಖಿಯಾಗುವ ಆತ್ಮಶೋಧನೆಗೆ ಮುಂದಾಗುತ್ತವೆ. ಹಲವು ಬಿಡಿಬಿಡಿ ಘಟಕಗಳ ಸಂಯೋಜನೆಯಿಂದ ಒಂದು ಏಕಾತ್ಮಕವಾದ ಸಮಾಜ ನಮ್ಮ ಗ್ರಹಿಕೆಗೆ ನಿಲುಕುತ್ತದೆ. ಹಾಗೆಯೇ ಹಲವು ಸಾಂಸ್ಕೃತಿಕ ನೆಲೆಗಳ ಪರಿಸರದಲ್ಲಿ ಬದುಕುತ್ತಿರುವ ವ್ಯಕ್ತಿಗಳ ಸಾಮಾಜಿಕ ಜವಾಬ್ದಾರಿ ಒಂದು ಸಮಾಜದ ಮೂಲಭೂತ ಹೊಣೆಗಾರಿಕೆಯೂ ಆಗಿರುತ್ತದೆ ಎಂಬುದನ್ನು ಸ್ಪಷ್ಟಪಡಿಸಿಕೊಂಡಾಗ 'ಸ್ವರೂಪ' ಕಾದಂಬರಿ ಮಂಡಿಸುವ ಭಿನ್ನ ಧ್ವನಿ ಪರಂಪರೆಗಳು ಸಾರ್ಥಕತೆಯನ್ನು ಪಡೆದುಕೊಳ್ಳುತ್ತವೆ. ನಿರ್ದಿಷ್ಟ ಬಿಂದುವಿನಿಂದ ಹೊರಟ ತಾತ್ವಿಕ ತರಂಗಗಳು ಬಹುದೂರದವರೆಗೆ ಚದುರಿ ಚಲ್ಲಾಪಿಲ್ಲಿಯಾಗುತ್ತವೆ. ಈ ಹರಡಿಕೊಳ್ಳುವಿಕೆಯಲ್ಲಿ ಹಲವು ಮನಸ್ಥಿತಿಗಳ ಸಂಘರ್ಷಗಳು ನಿಚ್ಚಳವಾಗಿ ಒಡೆದು ಕಾಣುತ್ತಿದ್ದು ಮತ್ತೊಂದು ಕೇಂದ್ರ ಬಿಂದುವಿನಲ್ಲಿ ವ್ಯಕ್ತವಾಗುತ್ತದೆ.

ತೇಜಸ್ವಿಯವರ ಸಾಹಿತ್ಯಕ ಹಾಗೂ ವೈಚಾರಿಕ ಬರವಣಿಗೆಯಲ್ಲಿ ವ್ಯಕ್ತವಾಗುವ ಧೋರಣೆ ಹೊಸತನದಿಂದ ಕೂಡಿದುದಾಗಿದೆ. ಅವರ ಸೈದ್ಧಾಂತಿಕ, ವೈಚಾರಿಕ ನಿಲುವುಗಳು ನೇರವಾಗಿದ್ದು ಸರಳ ನಿರೂಪಣೆ ಹೊಂದಿವೆ. ದಟ್ಟ ಅನುಭವಗಳ ಹೊಸತನದ ತಾಜಾತನವನ್ನು ಆಪೋಷಿಸುವ ತೇಜಸ್ವಿ ಅವರ ಬರವಣಿಗೆಯೂ ವಿಭಿನ್ನವಾಗಿರುತ್ತದೆ. ಕಾಲಘಟ್ಟಗಳ ಪರಿಮಿತಿಗಳಾಚೆ, ಆಲೋಚನೆಗೆ ಹಚ್ಚುವ ಸಾಹಿತ್ಯ ಅವರದಾಗಿದ್ದು ನಿರ್ದಿಷ್ಟ ನಿಯಮಕ್ಕೆ ಒಳಗಾದವರಲ್ಲ. ಈ ಕಾದಂಬರಿ ನವ್ಯ ಕಾಲಘಟ್ಟದಲ್ಲಿ ಅಂದಿನ ಸಂವೇದನೆಗಳನ್ನು ದಾಟಿ ಹೊಸದಿಗಂತದ ಕಡೆಗೆ ದೃಷ್ಟಿ ಹರಿಸಿದೆ. ಸ್ತ್ರೀಯರ ಬಗ್ಗೆ ಗೌರವದ ಭಾವನೆ ಉಳಿಸಿಕೊಳ್ಳುವ ಕಾದಂಬರಿಕಾರರು ಕಾಮಕ್ಕಿಂತ ಸ್ವಚ್ಛ ಪ್ರೇಮಕ್ಕೆ ಆದ್ಯತೆ ನೀಡಿದ್ದಾರೆ. ಸಮಾಜದಲ್ಲಿ ಕೆಳಜಾತಿ, ವರ್ಗದವರ ಮೇಲಿನ ಶೋಷಣೆ ಅನಾದಿಕಾಲದಿಂದಲೂ ಸಾಗಿಬರುತ್ತಿದ್ದು ಸಂಘರ್ಷಕ್ಕೆ ಅವಕಾಶ ನೀಡದೆ ಮಾನವೀಯವಾಗಿ ನಡೆಸಿಕೊಳ್ಳುತ್ತಾ ಸಾಮಾಜಿಕ ಬದಲಾವಣೆಗೆ ಆರೋಗ್ಯಕರ ಸಮಾಜಕ್ಕಾಗಿ ಅವರು ತಮ್ಮ ಕಿರುಕಾದಂಬರಿಯಲ್ಲಿ ಆಶಿಸಿದ್ದಾರೆ.

'ಚಿದಂಬರರಹಸ್ಯ' ಕಾದಂಬರಿಯು ಸೃಷ್ಟಿ ಸೌಂದರ್ಯ ಹಾಗೂ ಏಲಕ್ಕಿ ತಳಿಗೆ ವಿಶ್ವದಲ್ಲಿ ಪ್ರಸಿದ್ಧವಾದ ಕೆಸರೂರು ಎಂಬ ಗ್ರಾಮದಲ್ಲಿ ನಡೆಯುತ್ತದೆ. ಹತ್ತು ಹಲವು ವೈಶಿಷ್ಟ್ಯಗಳಿಂದ ತುಂಬಿದ ಊರು ಮಳೆಗಾಲದಲ್ಲಿ ಮಾತ್ರ ಕೆಸರೂರು ನಂತರ ಸದಾ ತಣ್ಣಗಿರುವ ನಿತ್ಯಹರಿದ್ವರ್ಣ ಕಾಡುಗಳಿಂದ ಸುಪ್ತವಾದ ಅಪ್ಸರ ಲೋಕ, ಗಿರಿತಪ್ಪಲಿನ ಈ ಪುಟ್ಟ ಊರನ್ನು ಕರ್ನಾಟಕದ ಸ್ವಿಟ್ಜರ್ಲೆಂಡ್ ಎಂದು ಲೇಖಕರು ವಿವರಿಸುತ್ತಾರೆ. ಸಮೃದ್ಧ ಅರಣ್ಯಗಳಿಂದ ತುಂಬಿದ್ದ ಈ ಊರು ಆಶೆಬುರುಕ ರಾಜಕಾರಣಿ ಹಾಗೂ ಕಂಟ್ರಾಕ್ಟುದಾರರಿಂದ ಆಧುನಿಕತೆಯ ಹೆಸರಿನಲ್ಲಿ ನಾಶವಾಗಿದ್ದು ಈಗ ಕಾಣುವುದು ಬರಿ ಲಂಟಾನ ಮಾತ್ರ. ಪರಿಸರದ ವಿನಾಶದ ಜೊತೆಗೆ ಅನೈತಿಕ ಸಂಬಂಧ ಮತಧರ್ಮಗಳ ಕಚ್ಚಾಟ, ರಾಜಕೀಯ, ಸಾಮಾಜಿಕ ನೈತಿಕ ದುರುದ್ದೇಶಗಳಿಗೆ ಬಲಿಯಾಗಿ ಕೆಸರು ಕೂಡಿರುವ ಕೆಸರೂರಿನ ಬಗ್ಗೆ ಲೇಖಕರು ವಿಷಾದಿಸುತ್ತಾರೆ. ಕೆಸರೂರಿನ ಪ್ರಾಕೃತಿಕ ವೈಶಿಷ್ಟ್ಯತೆ ಕುರಿತು ವಿವರಿಸುತ್ತಾ "ಕೆಸರೂರಿಗೆ ಬಳಸಿಕೊಂಡಂತೆ ಅತ್ಯಂತ ದಟ್ಟ ಅರಣ್ಯ ಇತ್ತು. ಅವುಗಳ ತುಂಬಾ ಕಳೆಯಂತೆ ಏಲಕ್ಕಿ ಬೆಳೆಯುತಿತ್ತು. ಇಡೀ ಪ್ರಪಂಚದಲ್ಲೇ ಹೆಸರಾಂತ ಪರಿಮಳದ ಏಲಕ್ಕಿ ಇದು. ಇದನ್ನು ಪ್ರತಿವರ್ಷ ಅರಣ್ಯ ಇಲಾಖೆಯವರು ಹರಾಜು-ಹಾಕುತ್ತಿದ್ದರು. ಆದರೆ ಅನಂತರ ಕೆಸರೂರಿನ ರಾಜಕಾರಣಕ್ಕಾಗಿ ಹಣಸಾಲದೆ ಅರಣ್ಯ ಇಲಾಖೆಯವರಿಗೆ ಲಂಚಸಾಲದೆ ಅವರೆಲ್ಲರ ಆಸೆಗಣ್ಣುಗಳು ಕೆಸರೂರಿನ ಅರಣ್ಯದ ಮೇಲೆ ಬಿತ್ತು. ಮಂತ್ರಿಗಳವರೆಗೆ ಹೋಗಿ ಅದನ್ನು ಹತ್ತಾರು ವರ್ಷಗಳಿಗೆ ಒಮ್ಮೆ ಹರಾಜು ಕೂಗುವಂತೆ ಕಾನೂನುತಂದರು. ಕೇರಳದಿಂದ ಬಂದ ಒಬ್ಬ ಸುಲೇಮಾನ್ ಯೂಸಫ್ ಬೇರಿ ಅನ್ನುವವನಿಗೆ ಕಂಟ್ರಾಕ್ಟ್ ಕೊಡಿಸಿದರು. ಅವನಿಂದ ದೊರೆತ ಥೈಲಿಗಟ್ಟಲೆ ಹಣನೋಡಿ ಮಂತ್ರಿಗಳಿಗೂ ಬಾಯಲ್ಲಿ ನೀರೂರುವಂತೆ ಮಾಡಿತು. ಅದು ಮನ್ನ ಜಂಗ್ಲಿ. ಅದರಲ್ಲಿ ಮರ ಕಡಿಯಲೇ ಕೂಡದೆಂದು ಸರ್ಕಾರದ ಆಜ್ಞೆ ಇದ್ದರೂ ಏಲಕ್ಕಿ ಕೃಷಿಗೆ ಕೊಂಬೆಗಳನ್ನು ಕಡಿದು ನೆರಳು ಕೊಂಚ ಕಡಿಮೆ ಮಾಡಬಹುದೆಂದು ಅದನ್ನು ಸೌದೆಯಾಗಿ ಬಿಕರಿಮಾಡಬಹುದೆಂದು ಪರ್ವಾನಗಿ ತಂದರು. ಸರಿ ಆರಂಭವಾಯ್ತು. ಸುಲೇಮಾನ್ ಯೂಸಫ್ ಬೇರಿ ಕೊಂಬೆ ಕಡಿಯ ಹೊರಟವನು ಕಾಂಡಗಳನ್ನೇ ಕಡಿದ. ನೂರಾರು ವರ್ಷಗಳ ದೇಗುಲದ ಕಂಬಗಳಂಥ ಹೆಮ್ಮರಗಳು ಚೀತ್ಕಾರದೊಂದಿಗೆ ನೆಲಕ್ಕುರುಳಿದವು. ಲೋಡುಗಟ್ಟಲೆ ಮರದ ದಿಮ್ಮಿಗಳು ಕೆಸರೂರಿನ ಹಾದಿಯಲ್ಲಿ ಮಂಗಳೂರಿನ ದಿಕ್ಕು ಹಿಡಿದವು. ಕೆಸರೂರಿನ ಜನಕ್ಕೆ ವರ್ಷಾಂತರದವರೆಗೆ ಇದೊಂದು ಚಿರಪರಿಚಿತ ನೋಟ. ಅನಂತರ ಕಾಡಿನಡಿಯಲ್ಲಿ ಬೆಳೆದಿದ್ದ ಏಲಕ್ಕಿ ಗಿಡಗಳು ಎಲೆ ಬಾಡಿ ಬಿಸಿಲಿನ ಹೊಡೆತಕ್ಕೆ ಕ್ಷೀಣಿಸಿ ಬಹುಬೇಗ ನೆಲಹಿಡಿದವು. ಕಾಡುನೆಲಸಮವಾದಲ್ಲಿ ಲಂಟಾನದ ಅಭೇದ್ಯ ಜಿಗ್ಗು ಕೊಟ್ಟಗಟ್ಟಿ ಕೆಸರೂರನ್ನು ಸುತ್ತುವರಿಯಿತು"[೫೭] ಇಲ್ಲಿ ಸಮೃದ್ಧವಾದ ಪರಿಸರ ನಾಶಕ್ಕೆ ಮಾನವನ ದುರಾಸೆಯೇ

---

೫೭. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, 'ಚಿದಂಬರರಹಸ್ಯ', ಪುಟ. ೩೫, ೨೦೦೫.

ಕಾರಣವೆಂದು ವಿವರಿಸುತ್ತಾರೆ. ಪ್ರಕೃತಿ ನೈಸರ್ಗಿಕವಾಗಿ ಬೆಳವಣಿಗೆ ಹೊಂದುವಂತದ್ದಾಗಿದ್ದು, ಮನುಷ್ಯ ಗಿಡ ಮರನೆಟ್ಟು ಪೋಷಿಸುವ ಅಗತ್ಯವಿಲ್ಲ. ಮನುಷ್ಯ ಕಾಡಿನಿಂದ ದೂರವಿದ್ದಷ್ಟು ಕಾಡು ಸಮೃದ್ಧವಾಗಿ ಬೆಳೆಯುವವೆಂದು ಲೇಖಕರು ಅಭಿಪ್ರಾಯಪಡುತ್ತಾರೆ. ಇಡೀ ಭೂಮಂಡಲದ ಜೀವರಾಶಿಗಳಲ್ಲಿ ಸ್ಮಶಾನದಿಂದಲೇ ಉದ್ಭವಿಸಿದ್ದು ಅದೃಶ್ಯ ಶಕ್ತಿಗಳ ಕಾರ್ಯದಿಂದ ಸುಂದರ ವನರಾಶಿ ಉದ್ಭವವಾಗುತ್ತದೆ. ಮನುಷ್ಯ ಪರಿಸರದಮೇಲೆ ಒತ್ತಡ ತಂದರೆ ನಮ್ಮ ಪಾಲಿಗೆ ಭೂಮಿ ಹಾಳಾಗುತ್ತದೆಯೇ ಹೊರತು ಅವರ ಪಾಲಿಗಲ್ಲ ಎಂಬುದನ್ನು ಅರಿಯಬೇಕಾಗಿದೆ. ಕಾಲಗರ್ಭದಲ್ಲಿ ಪ್ರಾಣಿ, ಸಸ್ಯ, ಸಸ್ತನಿ, ಸರಿಸೃಪಗಳು ಹೀಗೆ ಹಲವಾರು ಬಗೆಯ ಪ್ರಯೋಗಗಳಾಗಿರುವುದನ್ನು ಭೂಮಂಡಲದ ಸ್ಮಶಾನದಿಂದಲೇ ಇನ್ನೇನೂ ಒಂದು ಚೈತನ್ಯ ಚಿಮ್ಮುತ್ತದೆ ಎಂಬುದನ್ನು ನಿದರ್ಶನಗಳ ಮೂಲಕ ಕಾದಂಬರಿಕಾರರು ಪ್ರಕೃತಿಯ ಸುಂದರತೆ ವೈಶಿಷ್ಟತೆ ಹಾಗೂ ಅದರ ಮೌಲ್ಯಗಳನ್ನು ಓದುಗರ ಅರಿವಿಗೆ ತರುತ್ತಾರೆ.

ಆಧುನಿಕತೆಯ ಹೆಸರಿನಲ್ಲಿ ಮನುಷ್ಯ ಮಾಡುವ ಕೃತ್ಯ ವಿಪರೀತವಾದದ್ದು ಪ್ರಕೃತಿ ಎಷ್ಟೋ ಹೊಡೆತಗಳನ್ನು ಸಹಿಸಿಕೊಂಡು ತನ್ನ ಸಮತೋಲನವನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತ್ತದೆ. ಆದರೆ ಮಾನವ ಅದಕ್ಕೆ ತೆರಬೇಕಾದಂಥ ಬೆಲೆಮಾತ್ರ ಅಪಾರ ಒಂದು ನಾಗರಿಕತೆಯನ್ನು ಸ್ಮಶಾನಕ್ಕೆ ಒಯ್ದು ನಂತರ ಮತ್ತೊಂದು ಮರುಸೃಷ್ಟಿಗೆ ಪ್ರಕೃತಿಸಿದ್ಧವಾಗಿಬಿಡುತ್ತವೆ. ತನ್ನ ಮೇಲೆ ಸವಾರಿ ಮಾಡಬಂದ ಶಕ್ತಿಗಳನ್ನೆಲ್ಲ ಜೀರ್ಣಿಸಿಕೊಂಡ ಕಾಲಚಕ್ರ, ತನ್ನ ಚಲನಗತಿಯನ್ನು ಬದಲಾಯಿಸಿಬಿಡುತ್ತದೆ. ಅನೇಕ ಅದೃಶ್ಯ ಶಕ್ತಿಗಳು ತವಕದಿಂದ ಇದರ ಬೆನ್ನೆಲುಬಾಗಿ ದುಡಿಯುತ್ತವೆ. ವಿಜ್ಞಾನಿ ಪಾಟೀಲರ ಮಾತುಗಳಲ್ಲಿ ಅದು ವ್ಯಕ್ತವಾಗುತ್ತದೆ. “ಇದು ಹೀಗೆ ಮುಂದುವರೆದರೆ ನಮ್ಮ ಪಾಲಿಗೆ ಭೂಮಿ ಹಾಳಾಗುತ್ತದೆಯೇ ಹೊರತು ಅದರ ಪಾಲಿಗಲ್ಲ. ಈಗಾಗಲೇ ಪ್ರಕೃತಿ ಎಷ್ಟೊಂದು ಪ್ರಯೋಗಮಾಡಿದೆಯಯ್ಯಾ, ಎಷ್ಟೊಂದು ತರಹದ ಪ್ರಾಣಿಗಳೂ ಸಸ್ಯಸಮೂಹ ಈ ಭೂಮಂಡಲದ ಮೇಲೆ ಆಗಿಹೋದವು. ನಿನಗೇ ತಿಳಿದಂತೆ ಒಂದು ಕಾಲಕ್ಕೆ ಜಲಚರಗಳೂ ಆಮೇಲೆ ಸರೀಸೃಪಗಳು, ಮಹೋರಗಳು, ಸಸ್ತನಿಗಳು, ಒಂದೆರಡು ಪ್ರಯೋಗವೇನಯ್ಯ? ನಾವು ಇಲ್ಲಿ ಬದುಕೋಕ್ಕೆ ನಾಲಾಯಖ್ ಅಂತನ್ನಿಸಿದರೆ ನಾವು ಇಲ್ಲಿಂದ ನಿರ್ಗಮಿಸ್ತಿವಿ. ನಾಮಾವಶೇಷ ಆಗ್ತೀವಿ. ಆದರೆ ನಿಧಾನವಾಗಿ ಪ್ರಕೃತಿ ಇನ್ನೊಂದು ತರದ ಪ್ರಯೋಗಕ್ಕೆ ಕೈಹಾಕ್ತದೆ. ಮತ್ತೆ ಭೂಮಂಡಲದ ಸ್ಮಶಾನದಿಂದ್ಲೇ ಇನ್ನೇನೊ ಒಂದು ಚೈತನ್ಯ ಚಿಮ್ಮುತ್ತೆ ಅಷ್ಟೇ”.[೫೮] ಪಾಟೀಲರ ಚಿರಸತ್ಯದ ಮಾತುಗಳನ್ನು ಅರಿತಾಗ ಪ್ರಕೃತಿಗೆ ಯಾರು ಮುಖ್ಯರಲ್ಲ. ಯಾವುದೂ ಅಮುಖ್ಯವಲ್ಲ ಎಂಬ ಸತ್ಯಹೊಳೆಯುತ್ತದೆ. ಸಮಾಜದ ಜನಸಮುದಾಯದಲ್ಲಿ ಜೀವಂತವಾಗಿರುವ ಅಜ್ಞಾನ ಕಂದಾಚಾರಗಳನ್ನು ಹಲವರು ಬಂಡವಾಳ

---

೫೮. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ‘ಅಬಚೂರಿನ ಪೋಸ್ಟಾಫೀಸು’, ಪುಟ. ೬೮, ೨೦೦೫.

ಮಾಡಿಕೊಂಡು ತಮ್ಮ ದುರ್ವ್ಯವಹಾರಗಳಿಗೆ ಬಳಸಿಕೊಂಡರೆ ಮತ್ತೆ ಹಲವು ಸಂಪ್ರದಾಯವಾದಿಗಳು ವೈಜ್ಞಾನಿಕತೆಯನ್ನೇ ತಮ್ಮತೆಕ್ಕೆಗೆ ತೆಗೆದುಕೊಳ್ಳಲು ಯತ್ನಿಸುತ್ತಾರೆ. ಇದು ಎರಡು ವಿಭಿನ್ನ ಜಗತ್ತುಗಳ ನಡುವಿನ ಸಂಘರ್ಷವನ್ನು ಸೂಚಿಸುತ್ತದೆ.

ತೇಜಸ್ವಿಯವರ ಸಾಹಿತ್ಯದಲ್ಲಿ ಪ್ರಕೃತಿಯೆ ಪ್ರಮುಖವಾದ ವಸ್ತು ಅಲ್ಲಿ ವಿಜ್ಞಾನದ ವಿಸ್ಮಯಗಳು, ಕಾಡು, ಗುಡ್ಡ, ಹೊಳೆ, ಕಲ್ಲು, ಮುಳ್ಳು, ಪ್ರಾಣಿ, ಪಕ್ಷಿಗಳೊಂದಿಗೆ ಅಗಾಧ ಮನುಷ್ಯ ಸಂಬಂಧವಿರುವ ಬಗ್ಗೆ ವಿವರಣೆ ನೀಡುತ್ತಾರೆ. ಇತರರ ಕೈಯಲ್ಲಿ ವಿವರಣೆ ಕಾಲ್ಪನಿಕ ಪ್ರವಾಸ ಕಥನವಾಗಬಲ್ಲ ವಸ್ತುವಿನ ಹಂದರವನ್ನು ತೇಜಸ್ವಿಯವರು ಸಮರ್ಪಕವಾಗಿ 'ಜುಗಾರಿಕ್ರಾಸ್' ಕಾದಂಬರಿಯಲ್ಲಿ ತರುತ್ತಾರೆ. ಈ ಕಾದಂಬರಿ ಸಾಮಾಜಿಕ ಅಂತಸ್ಸತ್ವಗಳನ್ನೊಳಗೊಂಡ ವಸ್ತುವಿಷಯವನ್ನೊಂದಿದ್ದು ಕಾದಂಬರಿಯುದ್ಧಕ್ಕೂ ಓದುಗರಿಗೆ ಕುತೂಹಲ, ಭಯಹುಟ್ಟಿಸುತ್ತಾ ಬೆರಗುಶೋಧನೆಗಳ ಜೊತೆಗೆ ಭಾವವಿಚಾರ ಪರವಶರಾಗುವಂತೆ ಮಾಡುತ್ತದೆ. ಇಪ್ಪತ್ನಾಲ್ಕು ಗಂಟೆಗಳಲ್ಲಿ ನಡೆಯುವ ಕಥಾನಕ ಹಲವು ಸಂಸ್ಕೃತಿ, ಸ್ತರಗಳನ್ನು ಪರಿಚಯಿಸುತ್ತಾ ಸಾಗುತ್ತದೆ. ನವ್ಯೋತ್ತರ ಕಾಲಘಟ್ಟದಲ್ಲಿ ರಚಿತವಾದ ಈ ಕೃತಿಯಲ್ಲಿ ನವ್ಯದ ಆಶಯ, ಅನುಮಾನ, ಗೊಂದಲ, ಒಂಟಿತನ, ಭಯ, ಅಸಹಾಯಕತೆ, ಭ್ರಮೆ, ಪ್ರತಿಮೆ ಮುಂತಾದ ಅಂಶಗಳು ಹಾಳಾಗಿ ಕಾಣಸಿಗುತ್ತವೆ. ನಮ್ಮ ಛಿದ್ರಗೊಂಡಿರುವ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಕಾಡು–ನಾಡಿನ ನಡುವಿನ ತಿಕ್ಕಾಟ, ಗಾಂಜಾ, ಅಫೀಮು, ಕಳ್ಳಸಾಗಾಟ, ಕೊಲೆ ಮುಂತಾದ ಮನುಷ್ಯತ್ವ ವಿಕೃತತೆಯಿಂದುಂಟಾಗುತ್ತಿರುವ ಸಾಂಸ್ಕೃತಿಕ ಅಧಃಪತನವನ್ನು ಕಾದಂಬರಿಕಾರರು ನಿರೂಪಿಸುತ್ತಾರೆ. 'ಜುಗಾರಿಕ್ರಾಸ್' ಹಲವಾರು ಸಂಸ್ಕೃತಿಗಳು ಕೂಡುವ ತಾಣವಾಗಿದ್ದು ಯಾರದೋ ನಿರ್ದೇಶನದಿಂದ ವಸ್ತುಗಳು, ಮನುಷ್ಯರು, ನಾಪತ್ತೆಯಾಗುವುದು. ಕೊಲೆ, ಖೂನಿ, ಸುಲಿಗೆ ನಡೆಯುವ ಅಸಂಗತತೆ ತಾಣವಾಗಿ ಪರಿವರ್ತಿತವಾಗುತ್ತಿದ್ದು ಅತ್ಯಂತ ಫ್ಯಾಂಟಸಿಯಿಂದ ಕಾದಂಬರಿ ನಿರೂಪಿತವಾಗಿದೆ. 'ಜುಗಾರಿಕ್ರಾಸ್' ಕಾದಂಬರಿಯಲ್ಲಿ ಕೇಂದ್ರವಾಗಿದ್ದು ಜೊತೆಗೆ ದೋಣಿಹೊಳೆ, ದೇವಪುರ, ಮೇದರಹಳ್ಳಿ ಸುತ್ತಮುತ್ತಲಿನ ಕಾಡು ಪರಿಸರಗಳೇ ಮುಖ್ಯ ಪಾತ್ರಗಳಾಗಿವೆ. ಮೇದರಹಳ್ಳಿಯಂತಹ ಸಂಸ್ಕೃತಿ ಚಿಗುರೊಡೆದು ಸಾಂಸ್ಕೃತಿಕವಾಗಿ ತನ್ನ ಸ್ಥಾನ ಕಾಯ್ದುಕೊಳ್ಳಲು ಕಾಡಿನಲ್ಲಿ ಸಾವಿರಾರು ಚದರ ಮೈಲಿ ಅಕ್ಷಯವಾಗಿ ಬೆಳೆದಿದ್ದ ಹೆಬ್ಬಿದಿರು, ವಾಟ, ಕಿರಿಬಿದಿರು ಇತ್ಯಾದಿಗಳು ಕಾರಣವಾಗಿವೆ. ಸಿಂಗಾಪುರದ ಬೆತ್ತದ ಹಾಗೆ ಬೆಳ್ಳಗೆ ಕಾರಣವಾಗಿದೆ. ಕೃಷಿ, ಗುಡಿಕೈಗಾರಿಕೆ, ನಶಿಸುತ್ತಾ ಹೋದಂತೆ ಕಳ್ಳಸಾಗಾಣಿಕೆ, ಕಾಳಧನ, ಮಾದಕ ವಸ್ತುಗಳ ತಯಾರಿಕೆ ಮತ್ತು ಸಾಗಣೆ, ಕೊಲೆ, ಅಪಹರಣ ಮುಂತಾದ ಜಾಲಗಳು ವಿಸ್ತರಿಸುತ್ತಾ ಹೋಗಿ ಅಮಾಯಕರು ನಲಗುವಂತಾಗಿದೆ. ಗೌರಿ ಹಾಗೂ ಸುರೇಶ ತಾವು ಬೆಳೆದ ಏಲಕ್ಕಿ ಬೆಳೆಯನ್ನು ಮಾರಲು ಹೋಗಿ ತಮಗರಿವಿಲ್ಲದಂತೆ ಕಳ್ಳಸಾಗಣೆ ಜಾಗದಲ್ಲಿ ಸಿಲುಕಿ ನಲುಗಿದ್ದಲ್ಲದೇ

ಪ್ರಾಣಾಪಾಯದ ಭಯದಲ್ಲಿ ನರಳುತ್ತಾರೆ. ಬಸ್ಸಿನ ಮೂಲಕ ಹಿಂದಿರುಗದೆ ರೈಲುಗಾಡಿ ಹತ್ತಿ ಸುರಂಗ ಕಮರಿಗಳಲ್ಲಿ ಅದ್ಭುತದರ್ಶನ ಮಾಡಿಸಿದ್ದಲ್ಲ ಕರಾಳ ಪ್ರಪಂಚದಿಂದಾಗಿ ಸುರಂಗದಲ್ಲೇ ವಾಸಿಸುವ ಕುಂಟರಾಮನ ದಮನೀಯ ಕಥೆಯು ಓದುಗರಿಗೆ ಅನುಭವ ವೇದ್ಯವಾಗಿಸುತ್ತಾರೆ.

"ಪರಿಸರ ಕೊಳ್ಳೆ ಹೊಡೆಯುವ ಕಳ್ಳಸಾಗಣಿಕೆಗಾರರು ಪರಿಸರವನ್ನೇ ಬಂಡವಾಳ ಮಾಡಿಕೊಂಡು ಜುಗಾರಿ ಮಾಡುವವರು ಕಾದಂಬರಿಯ ಕಾಳಜಿಯಾದರೂ, ಒಳದನಿಯೊಂದು ಜೀವನವೇ ಸೋಲು-ಗೆಲುವು, ಅದೃಷ್ಟ-ದುರಾದೃಷ್ಟಗಳ ಜೂಜಾಟ ಎಂಬ ಅರ್ಥವನ್ನು ಹೊಳೆಯಿಸುತ್ತ ಜುಗಾರಿಕ್ರಾಸ್ ನಾಲ್ಕು ದಾರಿಗಳು ಸೇರುವ ಜಾಗವಾಗದೇ ಇಡೀ ಮಾನವ ಜೀವನಕ್ಕೆ ಒಂದು ಪ್ರತಿಮೆಯಾಗಿಬಿಡುತ್ತದೆ"[೫೯] ಎಂಬುದು ಅನುಭವ ವೇದ್ಯವಾಗುತ್ತದೆ. ನಗರ ಸಂಸ್ಕೃತಿಯ ಅನಿವಾರ್ಯ ಪೀಡೆಗಳಿಂದ ಲಾಟರಿ, ಕಳ್ಳಸಾಗಣೆ, ದಿಢೀರ್ ಶ್ರೀಮಂತಿಕೆಯ ಹಂಬಲ, ಮಲೆನಾಡಿನ ಮೂಲೆಯ ಜನರ ಮೇಲೆ ಮಾಡುವ ಅತಿಕ್ರಮವನ್ನು ಕಾದಂಬರಿ ಕಲಾತ್ಮಕವಾಗಿ ನಮ್ಮ ಮುಂದಿಡುವ ಜೊತೆಗೆ ಓದುಗರಿಂದ ತೀವ್ರ ವಿಷಾದ ಪಡೆಯುತ್ತದೆ. ಪ್ರಸ್ತುತ ಕೃತಿಯು ಬೌದ್ಧಿಕ ಕಸರತ್ತಿಲ್ಲದೆ ಇತ್ತೀಚಿನ ದಿನಗಳಲ್ಲಿ ನಡೆಯುವ ಕರಾಳ ವೃತ್ತಾಂತ ವಿವರಣೆಯ ಜೊತೆಗೆ ಓದುಗರಿಗೆ ಹೊಸ ಸಾಧ್ಯತೆಗಳನ್ನು ಹೊಳೆಯಿಸುತ್ತಾ ಪರಿಸರದ ನಿಗೂಢ, ವಿಸ್ಮಯದ ಜೊತೆಗೆ ಮನುಷ್ಯನ ಇತಿ-ಮಿತಿ ಸೂಚಿಸುತ್ತದೆ. "ಜುಗಾರಿಕ್ರಾಸ್ ಕಾದಂಬರಿಯ ಮಾತುಗಾರಿಕೆ, ಜಾಣ ವರ್ಣನೆಗಳು, ಅಲ್ಲಲ್ಲಿ ಮಾತ್ರ ಬರುವ ತಮಾಷೆ ಮಾತುಗಳು ಇವೆಲ್ಲಕ್ಕಿಂತ ಮುಖ್ಯವಾಗಿ ಲೇಖಕರ ಗಮನ ಪ್ರಕೃತಿ ಮತ್ತು ಸಹಜ ಬೇಲಿಗಳನ್ನು ನುಂಗಿಹಾಕುತ್ತಿರುವ ರಾಕ್ಷಸತ್ವ(evil)ದ ಮೇಲೆ ಇದೆ. ಇದರ ಬೃಹತ್ ರೂಪ ಇಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ಈ ರಾಕ್ಷಸತ್ವದ ವಿನಾಶಕಾರಿ ಶಕ್ತಿ ಪರಿಣಾಮಕಾರಿಯಾಗಿ ಮಾಡುವುದಿಲ್ಲ. ಇದಕ್ಕೆ ನನಗೆ ಕೂಡಲೆ ತೋಚುವ ಕಾರಣಗಳನ್ನು ಇಲ್ಲಿ ಕಾಣಿಸಬಹುದು. ಈಗಾಗಲೇ ಸೂಚಿಸಿದಂತೆ ಇಲ್ಲಿಯ ಸುರೇಶ್ ಮತ್ತು ಗೌರಿ ಇವರಿಗೆ ಹಣ ಕಳೆದುಕೊಳ್ಳುವ ಪ್ರಾಣಬಿಡಬೇಕಾಗುವ ಭಯ ಕಾಡುತ್ತಿದೆ. ಅವರು ಸಮಾಜದಲ್ಲಿ ಸ್ಥಾಪಿತವಾಗಿರುವ ರೀತಿಯಲ್ಲಿ ಆ ಭಯಕ್ಕೆ ಕೂಡ ಕಾರಣವಿಲ್ಲ. ಮೇಲಾಗಿ ಅವರ ಪಾತ್ರಗಳ ಸೃಷ್ಟಿ ಕೂಡ ವಿಶಿಷ್ಟ ರೀತಿಯಲ್ಲಿ ಇಲ್ಲ. ಹೆಗ್ಗಡತಿಯ ದುರಂತ ಅಥವಾ ಚೋಮನ ಸ್ಥಿತಿಯನ್ನು ಅಭ್ಯಸಿಸಿದವರಿಗೆ ಇದನ್ನು ವಿವರಿಸಬೇಕಾದ್ದಿಲ್ಲ. ತೇಜಸ್ವಿಯವರದೇ ಕಥೆಯಾದ 'ಅವನತಿ' ಕಥೆಯಲ್ಲಿನ ಸೂರಾಚಾರಿ ಮತ್ತು ಗೌರಿ ಮುಟ್ಟುವ ದುರಂತಮಯ ಅಧೋಗತಿಯ ಸೂಕ್ಷ್ಮಗಳನ್ನು ಕಂಡವರಿಗೆ ನಾನು ಹೇಳುತ್ತಿರುವುದು ಅರ್ಥವಾಗುತ್ತದೆ. 'ಜುಗಾರಿಕ್ರಾಸ್'ನಲ್ಲಿ ಮೇದಾರರ ಉದ್ಯೋಗ ಪ್ಲಾಸ್ಟಿಕ್ ಆಗಮನದಿಂದ ನಾಶವಾದದ್ದು ಕೂಡ ತುಕ್ಕು ಹಿಡಿದ

೫೯. ಕೆ.ಪಿ.ಪೂರ್ಣಚಂದ್ರ ತೇಜಸ್ವಿ 'ಜುಗಾರಿಕ್ರಾಸ್', ಪುಟ. ೩೪, ೨೦೦೫.

ಸರಕಿನಂತಿದೆ. ಹೆದ್ದಾರಿಯ ಮಗ್ಗುಲಲ್ಲಿ ಅಸಹಾಯಕತೆಯೊಂದಿಗೆ ಬರುವುದಿಲ್ಲ. ಇವೆಲ್ಲವೂ ಮಾತುಗಳ ಮಧ್ಯೆ ಹೂತು ಹೋದಂತಿದೆ. ಇಲ್ಲಿ ಲೇಖಕರೇ 'ಜುಗಾರಿಕ್ರಾಸ್'ನ ವಸ್ತುಕುರಿತು ಹೇಳಿರುವುದರಿಂದ ಮತ್ತು ಕಾದಂಬರಿಯ ಲಕ್ಷ್ಯವೇ ಈ evilನಲ್ಲಿ ಕೇಂದ್ರೀಕೃತವಾಗಿರುವುದರಿಂದ ಇದನ್ನು ವಿವರಿಸಬೇಕಾಗಿದೆ".[೬೦] ತೇಜಸ್ವಿಯವರ 'ಮಾಯಾಲೋಕ' ಜಾಗತೀಕರಣದತ್ತ ಮುಖಮಾಡಿರುವ ಕೃತಿ ಈ ಕೃತಿಯಲ್ಲಿ ವಿದ್ಯುತ್ ಇಲಾಖೆಯ ದರ್ಪದೌರ್ಜನ್ಯಗಳ ಬಗ್ಗೆ ವಿವರಿಸುತ್ತಾರೆ. ಬರಗಾಲದಿಂದ ಗೊಂದಲಗೇರಿ ಸುತ್ತಮುತ್ತಲಿನ ರೈತರು ಕಂಗಾಲಾಗಿ ಹೋಗಿದ್ದರು. ವಿದ್ಯುತ್ ಇಲಾಖೆಯ ಅಸಮರ್ಪಕ ವಿದ್ಯುತ್ ಪೂರೈಕೆ ಹಾಗೂ ವಿದ್ಯುತ್ತಿನ ಕಣ್ಣಾಮುಚ್ಚಾಲೆ ಆಟದಿಂದ ಬೇಸತ್ತ ರೈತರು ಮಂತ್ರಿಗಳಿಗೆ ಮನವಿ ಸಲ್ಲಿಸಲು ಗೊಂದಲಗೇರಿಗೆ ಬರುತ್ತಾರೆ. ಮಂತ್ರಿಗಳು ಬರುವುದಿಲ್ಲವೆಂದು ತಿಳಿದಾಗ ರೈತಸಂಘದವರು ಎಂ.ಎಲ್.ಎ. ಮಾರಪ್ಪನ ಸಮ್ಮುಖದಲ್ಲಿ ವಿದ್ಯುತ್ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಸಮಸ್ಯೆ ಪರಿಹರಿಸಬೇಕು ಎಂದು ಪಟ್ಟುಹಿಡಿಯುತ್ತಾರೆ. ಕೊನೆಗೆ ಬಲವಂತವಾಗಿ ಪ್ರವಾಸ ಮಂದಿರಕ್ಕೆ ಬಂದ ಆತ ರೈತ ಸಂಘದವರಿಗೆ ಹಾರಿಕೆ ಉತ್ತರ ನೀಡುತ್ತಾನೆ. ಇದರಿಂದ ಬೇಸತ್ತ ರೈತಸಂಘದವರು ಉದ್ರಿಕ್ತವಾಗಿ ತಳ್ಳಾಡುವ ಸಂದರ್ಭವೂ ಉದ್ಭವಿಸುತ್ತದೆ. ಈ ಎಲ್ಲಾ ಬೆಳವಣಿಗೆಗಳನ್ನು ನಾಟಕೀಯವಾಗಿ ಸಂಪಾದಕ ಪ್ರಕಾಶ ತನ್ನ ಪತ್ರಿಕೆಗಳಲ್ಲಿ ವರದಿ ಮಾಡಿದಾಗ ವಿದ್ಯುತ್ ಇಲಾಖೆಯ ನೌಕರರು ಜವಾಬ್ದಾರಿ ಮರೆತು ತಮ್ಮ ಮೇಲಿನ ದೌರ್ಜನ್ಯವೆಂದು ಚಳುವಳಿ ಮಾಡಿದರೆ, ರೈತ ಸಂಘದವರು ಪ್ರತಿಯಾಗಿ ಚಳುವಳಿ ಮಾಡುತ್ತಾರೆ. ಈ ರೀತಿ ವಿದ್ಯುತ್ ಇಲಾಖೆ ಮಾಧ್ಯಮ ತನ್ನ ಜವಾಬ್ದಾರಿ ಮರೆತರೆ ಶಾಂತಿಯುತ ಗ್ರಾಮಗಳು ಗೊಂದಲದ ಗೂಡಾಗುತ್ತವೆಂದು ಲೇಖಕರು ಸೂಚ್ಯವಾಗಿ ತಿಳಿಸಿದ್ದಾರೆ. ಜೊತೆಗೆ ಕಾದಂಬರಿಯು ಇಪ್ಪತ್ತೊಂದನೆಯ ಶತಮಾನದ ಸಾಮಾಜಿಕ ಸಮಸ್ಯೆಗಳನ್ನು ಸಾಚಾವಾಗಿ ವಿವರಿಸುತ್ತದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪರಿಣಾಮವಾಗಿ ವರ್ಣಾಶ್ರಮ ವ್ಯವಸ್ಥೆ ಸಡಿಲಗೊಂಡಿರುವ ಬಗ್ಗೆ ಹಲವು ನಿದರ್ಶನಗಳು ಕಾದಂಬರಿಯಲ್ಲಿ ಕಾಣಸಿಕ್ಕರೂ ಸಹ ಗ್ರಾಮೀಣ ಪ್ರದೇಶದಲ್ಲಿ ಅವು ಇನ್ನೂ ಉಸಿರಾಡುತ್ತಿರುವುದನ್ನು ಗುರುತಿಸುತ್ತಾರೆ. "ತೇಜಸ್ವಿ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಸಾಂಪ್ರದಾಯಿಕ ಸಮಾಜದಲ್ಲಿ ಸಂಚು ಉಂಟುಮಾಡಬಲ್ಲ ಶಕ್ತಿಗಳು ಹಾಗೂ ಮುಂದಿನ ಪರ್ಯಾಯಗಳು ಎಂದು ನಂಬಿದವರು. ಜಾತಿ ಪದ್ಧತಿ ಧರ್ಮಗಳು ಮಾಡಿರುವ ಮಾನವನ ಚೈತನ್ಯದ ಮೇಲಿನ ಹಲ್ಲೆಯನ್ನು ಈ ವಿಜ್ಞಾನ ವೈಚಾರಿಕತೆಯಿಂದ

---

೬೦. ಪಿ. ಲಂಕೇಶ್, 'ಸಾಹಿತಿ, ಸಾಹಿತ್ಯ, ವಿಮರ್ಶೆ', ಪುಟ. ೩೨೩, ೨೦೦೮.

ಪಡೆಯಬೇಕು ಎಂದು ಭಾವಿಸಿದವರು"[೬೧] ಹಾಗೆಯೇ ಸಾಮಾಜಿಕ ಪರಿವರ್ತನೆಗೆ ಉತ್ತಮ ಆಲೋಚನೆಗಳ ಚಳವಳಿ, ಸಂಘಟನೆ, ಪತ್ರಿಕೆ, ತಂತ್ರಜ್ಞಾನ ಅವಶ್ಯಕತೆಯನ್ನು ಕೂಡ ಕಾದಂಬರಿಯಲ್ಲಿ ನಿರೀಕ್ಷಿಸುತ್ತಾರೆ.

ಮಾಯಾಲೋಕದ ಊರಳ್ಳಿ, ಗೊಂದಲಗೇರಿ, ಮಕ್ಕಿಗದ್ದೆ ಗ್ರಾಮಗಳಲ್ಲಿ ಜಾತಿ, ವರ್ಗ ವ್ಯವಸ್ಥೆಗಳಿದ್ದರೂ ಅವೆಲ್ಲ ನಗಣ್ಯವಾಗಿ ಗೋಚರಿಸುತ್ತವೆ. ಸಾಮಾಜಿ, ಆರ್ಥಿಕ ಬದುಕಿನೆಡೆಗೆ ಚಿಂತಿಸುವ ಜನ ಬೌದ್ಧಿಕವಾಗಿ ಯೋಚಿಸುತ್ತಾರೆ. ಇಲ್ಲಿ ಹಲವು ಜಾತಿ, ಧರ್ಮಗಳ ಜನಗಳು ವಿಭಿನ್ನ ವೃತ್ತಿ ಅವಲಂಬಿಸಿದ್ದು ಜಾತಿ ಹೆಸರನ್ನಿಟ್ಟು ಕರೆದರೂ ಅದರ ಬಗ್ಗೆ ಚಿಂತಿಸದೆ ಸಂವಹನವೆಂಬಂತೆ ಭಾವಿಸುತ್ತಾರೆ. 'ಮಾಯಾಲೋಕ' ಕಾದಂಬರಿಯ ಪರಿಸರವೂ ಸಹ ಈ ಪುರಾಣಗಳ ಪರಿಸರದಿಂದ ಭಿನ್ನವಾದ ಮತ್ತು ಅವನ್ನು ಎತ್ತಿತೋರಿಸುವ ತತ್ಕಾಲೀನ ಸಮಾಜದ ಒಂದು ಅದ್ಭುತ ಜಾತ್ಯಾತೀತ ಪರಿಸರವಾಗಿದೆ. ಹಾಗೆಂದು ಅಲ್ಲಿ ಬರುವ ಜನಾಂಗಗಳು, ಸಮುದಾಯಗಳು ತಂತಮ್ಮ ಜಾತಿ ಪದ್ಧತಿಯನ್ನು ನಿರಾಕರಿಸುವವರು ಎಂದೇನೂ ತಿಳಿಯಬೇಕಿಲ್ಲ. ಆದರೆ ಅವರೆಲ್ಲಾ ತಮ್ಮ ಪರಿಸರದಲ್ಲಿ ಮುಗ್ಧತೆ ಹಾಗೂ ಮುಕ್ತತೆಯಿಂದ ಆ ಜಾತಿಪದ್ಧತಿಯನ್ನೆಲ್ಲಾ ಮೀರಿ ಬದುಕುವ ಕಲೆಯನ್ನು ಮಾತ್ರ ಅವರು ಸಹಜವಾಗಿ ಮೈಗೂಡಿಸಿಕೊಂಡಿದ್ದಾರೆ. ಒಕ್ಕಲಿಗರು, ಬಿಲ್ಲವರು, ಹರಿಜನರು, ಮುಸ್ಲೀಮರು, ಕ್ರಿಶ್ಚಿಯನ್ನರು ಸೆಟ್ಟರು ಹೀಗೆ ಎಲ್ಲಾ ಹಿಂದುಳಿದ ಸಮುದಾಯದವರು ತಂತಮ್ಮ ಜಾತಿಗಳನ್ನು ಪ್ರಜ್ಞಾಪೂರ್ವಕವಾಗಿಯಾದರೂ ನೆನೆಸಿಕೊಳ್ಳದೆ ಬದುಕುತ್ತಾರೆ. ಹೀಗೆ ಕಾದಂಬರಿಯಲ್ಲಿ ಜಾತ್ಯಾತೀತ ಪರಿಸರವಿದ್ದು ಈ ಪರಿಸರವು ದೇಶದ ನೈಜ ಸಾಮಾಜಿಕ ವಾಸ್ತವತೆಗೆ ಬೆಂಬಲವಾಗಿದೆ. ಜಾಗತಿಕ ಸವಾಲುಗಳಿಂದ ಅಭಿವೃದ್ಧಿಶೀಲ ದೇಶಗಳು ಪಾರಂಪರಿಕ ಕ್ಷೇತ್ರಗಳಲ್ಲಿ ಅಭದ್ರತೆ ಮೂಡುತ್ತಿರುವುದನ್ನು 'ಮಾಯಾಲೋಕ' ಕಾದಂಬರಿ ಸಮರ್ಪಕವಾಗಿ ಗ್ರಹಿಸಿದೆ.

'ಅಬಚೂರಿನ ಪೋಸ್ಟಾಫೀಸು' ಕಥಾಸಂಕಲನದಲ್ಲಿ ಆಧುನಿಕ ಸಂಘರ್ಷದಿಂದ ನಗರ ಮತ್ತು ಹಳ್ಳಿಯ ವೈರುಧ್ಯತೆಯ ನೆಲೆಗಳನ್ನು ಗುರುತಿಸಬಹುದು. ಕನ್ನಡ ಕಥಾಸಾಹಿತ್ಯದ ದಿಕ್ಕನ್ನು ಅದರ ಅನುಭವ ಕ್ಷೇತ್ರ ಹಾಗೂ ಅಭಿವ್ಯಕ್ತಿಯ ಸಾಧ್ಯತೆಗಳನ್ನು ವಿಸ್ತರಿಸುವ ಪ್ರಯತ್ನಗಳನ್ನು ತೇಜಸ್ವಿ ಈ ಸಂಕಲನದಲ್ಲಿ ಮಾಡಿದ್ದಾರೆ. ಅವರು ಈ ಸಂಕಲನಕ್ಕೆ ಬರೆದ 'ಹೊಸದಿಗಂತದೆಡೆಗೆ' ಎಂಬ ಅತ್ಯಂತ ಮೌಲಿಕವಾದ ಮುನ್ನುಡಿ ಬದಲಾದ ತೇಜಸ್ವಿಯವರ ಬರಹದ ಪ್ರತೀಕದಂತಿದೆ. 'ಹೊಸದಿಗಂತದೆಡೆಗೆ' ಎಂಬ ಬರಹದಲ್ಲಿ ತೇಜಸ್ವಿಯವರು ನವ್ಯಸಾಹಿತ್ಯದ ಸಾಂಕೇತಿಕ ಶೈಲಿ, ತಂತ್ರ, ಕ್ರಾಂತಿಕಾರಿಗಳ ಬಗ್ಗೆ ತಮ್ಮದೇ ಆದ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಶಿಕ್ಷಣ, ಸಾಹಿತ್ಯ, ಮಾಧ್ಯಮ, ಪಥ್ಯ, ಸಂಸ್ಕೃತಿ, ಬರವಣಿಗೆಯಲ್ಲಿ ಶಿಸ್ತು, ಗ್ರಾಮಜೀವನದ ಅಭಿವ್ಯಕ್ತಿ,

---

೬೧. ರಹಮತ್ ತರೀಕೆರೆ, 'ಕತ್ತಿಯಂಚಿನ ದಾರಿ', ಪುಟ. ೫೪, ೨೦೧೩.

ಮೌಲ್ಯಗಳು ಇವುಗಳೆಲ್ಲವುಗಳ ಬಗ್ಗೆ ಸಾಮಾಜಿಕವಾಗಿ, ರಾಜಕೀಯವಾಗಿ, ತಾತ್ವಿಕವಾಗಿ, ಸಮಗ್ರವಾಗಿ ಬದಲಾವಣೆಯಾಗುವುದರಿಂದ ಮಾತ್ರವೇ ನಿಜವಾದ ಸಾಹಿತ್ಯ ಹೊರಬರುತ್ತದೆ ಎಂದು ಹೇಳಿದ್ದಾರೆ. ನವ್ಯ ಸಾಹಿತ್ಯದಲ್ಲಿ ಗುರುತಿಸಿಕೊಂಡಿದ್ದ ತೇಜಸ್ವಿ ಅದರಿಂದ ದೂರ ನಿಂತು ನವ್ಯ ಸಾಹಿತ್ಯಕ್ಕೆ ಹೊಸ ತಿರುವನ್ನು ತಂದುಕೊಡುವ ಉತ್ಸಾಹ ತೋರಿದ್ದಾರೆ. ಒಂದು ಸೂಕ್ಷ್ಮ ಸಂವೇದನಾಶೀಲವಾದ ಮನಸ್ಸೊಂದು ಪ್ರಧಾನವಾಗಿ ಇಲ್ಲಿಯ ಕಥೆಗಳ ಹಿಂದೆ ಸೃಷ್ಟಿಶೀಲವಾಗಿದೆ. ನವ್ಯಸಾಹಿತ್ಯವನ್ನು ತೊರೆಯುವುದೆಂದರೆ ಅವರ ಮಾತಿನಲ್ಲಿ "ಇದಕ್ಕೆ ಹೊಸ ಸಾಹಿತ್ಯ ಸೃಷ್ಟಿಸಬೇಕೆಂಬ ಹಂಬಲವಲ್ಲ ಅಥವಾ ಹೊಸ ಪಂಥ ಒಂದರ ಸೃಷ್ಟಿಕರ್ತನಾಗಬೇಕೆಂದೂ ಅಲ್ಲ. ಅನುಭವಕ್ಷೇತ್ರವನ್ನು, ಅಭಿವ್ಯಕ್ತಿ ಸಾಮರ್ಥ್ಯವನ್ನು ವಿಸ್ತರಿಸುವುದು ಅಷ್ಟೇ".[೬೨] ಈ ದೃಷ್ಟಿಯಿಂದ ತೇಜಸ್ವಿಯವರ ಅಬಚೂರಿನ ಪೋಸ್ಟಾಫೀಸು ಕಥೆಯು ಅವರ ಒಂದು ವಿಶಿಷ್ಟ ಪ್ರಯೋಗ. ಈ ಪ್ರಯೋಗದ ಸಿದ್ಧಿಯನ್ನು ಅವರ ಕಥೆಗಳಲ್ಲಿ ಕಾಣಬಹುದು.

ಆಧುನಿಕ ಮೌಲ್ಯಗಳನ್ನು ಸ್ವೀಕರಿಸಲು ಸಿದ್ಧರಾದ ರೋಗಗ್ರಸ್ಥ ವ್ಯವಸ್ಥೆಯ ಜಡ್ಡುಗಟ್ಟಿದ ಹಳ್ಳಿಗರು ಆಧುನಿಕತೆಯನ್ನು ಶಾಪವನ್ನಾಗಿಸಿಕೊಳ್ಳುತ್ತಿದ್ದಾರೆ. ಮನುಷ್ಯ ಸಂಬಂಧಗಳನ್ನು ಬೆಸೆಯಬೇಕಾದ ಅಂಚೆ ಕಛೇರಿ ಹಾಗೂ ತತ್ವಗಳು ಮನುಷ್ಯನ ವೈಯಕ್ತಿಕ ಬದುಕನ್ನು ಹಳ್ಳಿಯ ಸಾಮಾಜಿಕ ಬದುಕನ್ನು ದೂರೀಕರಿಸುತ್ತದೆ. ವರವಾಗಿ ಪರಿಣಮಿಸಬೇಕಾಗಿದ್ದ ಆಧುನಿಕ ಸೌಲಭ್ಯ ಊರ ಅಶಾಂತಿಗೆ ಮೂಲವಾಗುತ್ತದೆ. ಉತ್ತಮ ಸಂವಹನದ ಸಾಧ್ಯತೆಗಳನ್ನು ಹೆಚ್ಚಿಸಬೇಕಾದ ಅಂಚೆ ಕಛೇರಿ ಅವಾಂತರಗಳನ್ನು ಸೃಷ್ಟಿಸುವುದು ಇಂದಿನ ಜಾಗತಿಕ ಅಭಿವೃದ್ಧಿಯ ಸಂದರ್ಭದಲ್ಲಿ ದುರಂತವೇ ಸರಿ. ಚಲನಶೀಲವಾದ ಪ್ರಸ್ತುತ ಸಂದರ್ಭದಲ್ಲಿ ಜಾಗತಿಕ ಅಭಿವೃದ್ಧಿಯ ಕಾಣ್ಕೆಗಳನ್ನು ಮುಕ್ತವಾಗಿ ಸ್ವೀಕರಿಸಬೇಕಾದ ಹಾಗೂ ಅನ್ವಯಿಸಿಕೊಳ್ಳಬೇಕಾದ ಅನಿವಾರ್ಯತೆಗೆ ನಾವು ಸಿದ್ಧರಾಗಬೇಕಾದದ್ದನ್ನು ಈ ಕಥೆ ಸೂಚ್ಯವಾಗಿ ಹೇಳಿದೆ. ವ್ಯಷ್ಠಿ ಮತ್ತು ಸಮಷ್ಠಿಯ ಒಳಿತಿಗೆ ಪ್ರಾಶಸ್ತ್ಯವನ್ನು ನೀಡಿ ಅನಾನುಕೂಲಗಳನ್ನು ತಿಸ್ಕರಿಸಿದಾಗ ಮಾತ್ರ ಹಳ್ಳಿಗಳು ಅಭಿವೃದ್ಧಿಯಾಗಬಲ್ಲವು. ವ್ಯಕ್ತಿಗತ ಕ್ರೌರ್ಯವು ಸಾಮಾಜಿಕ ಸ್ಥಿತ್ಯಂತರಕ್ಕೆ ಕಾರಣವಾಗಬಲ್ಲದು ಎಂಬುದಕ್ಕೆ ಮಾಚಮ್ಮ ಸಾಕ್ಷಿಯಾಗುತ್ತಾಳೆ. ಅಬಚೂರಿನ ಮಾಚಮ್ಮ ಪತಿಯನ್ನು ಕಳೆದುಕೊಂಡು ಮಗಳು ಕಾವೇರಿಯನ್ನು ಸಾಕುತ್ತಾಳೆ. ಅನಾಥನಾದ ಬೋಬಣ್ಣನನ್ನು ಮನೆ ಅಳಿಯನನ್ನಾಗಿಸಿಕೊಂಡು ಮನೆಯಲ್ಲಿ ಹಿರಿತನದ 'ಅಹಂ' ಅನ್ನು ಸ್ಥಾಪಿಸಿಕೊಳ್ಳುತ್ತಾಳೆ. ಭಾರತೀಯ ಸಾಂಪ್ರದಾಯಿಕ ಕುಟುಂಬಗಳಲ್ಲಿ ಕುಟುಂಬದ ಹಿರಿಯ ವ್ಯಕ್ತಿಯೇ ಮನೆಯನ್ನು ನಿಯಂತ್ರಿಸುತ್ತಾ ಸಾಮರಸ್ಯವನ್ನು ಕಾಪಾಡಿಕೊಳ್ಳುತ್ತಾರೆ. ಆದರೆ ಇಲ್ಲಿ ಮಂಚಮ್ಮಳ ವೈಯಕ್ತಿಕ ಹಿತಾಶಕ್ತಿ ಕೌಟುಂಬಿಕ ವಿಘಟನೆಗೆ ಕಾರಣವಾಗುತ್ತದೆ. ಜೀವನದ ಅಸಂಬದ್ಧತೆಯ ಶೋಧವನ್ನು

೬೨. ಪೂರ್ಣಚಂದ್ರ ತೇಜಸ್ವಿ 'ಅಬಚೂರಿನ ಪೋಸ್ಟಾಫೀಸು', ಪುಟ. ೮, ೨೦೦೫.

ತೇಜಸ್ವಿ ಈ ಕಥೆಯಲ್ಲಿ ಮಾಡಿದ್ದಾರೆನ್ನಬಹುದು. ಅಬಚೂರಿಗೆ ಹೊಸದಾಗಿ ಬಂದ ಪೋಸ್ಟಾಫೀಸಿಗೆ ಹಂಗಾಮಿಯಾಗಿ ಪೋಸ್ಟ್‌ಮಾಸ್ತರನಾಗಿ ನೇಮಕವಾದ ಬೋಬಣ್ಣನ ನೆಮ್ಮದಿಯ ಸಂಸಾರದಲ್ಲಿ ಅಶಾಂತಿಯ ಅಲೆಗಳು ಹುಟ್ಟಿ ಆತನನ್ನು ಅತ್ಯಂತ ಅಸಂತೋಷಕ್ಕೂ ತೊಂದರೆಗೂ ಒಳಗುಮಾಡುವುದು ಈ ಕಥೆಯ ವಸ್ತು. ಪೋಸ್ಟಾಫೀಸಿನಿಂದ ಹಳ್ಳಿಯ ಜೀವನದಲ್ಲಿ ಅನೇಕ ಬದಲಾವಣೆಗಳಾಗುತ್ತವೆ. ಆಧುನಿಕ ನಾಗರಿಕತೆಯ ಪ್ರವೇಶಕ್ಕೆ ಈ ಪೋಸ್ಟಾಫೀಸು ಪ್ರತೀಕವಾಗಿದೆ. ಅದರಿಂದ ಆಗುವ ಪರಿಣಾಮಗಳು ನಾಗರಿಕತೆಯಿಂದ ದೂರ ನಿಂತ ಸಮಾಜದಲ್ಲಿ ಗೊಂದಲಮಯ ಬೊಬಣ್ಣ ಹಾಗೂ ಅವನ ಹೆಂಡತಿಯ ನಡುವಿನ ಅಸಹಕಾರ ವರ್ತನೆ, ಅತ್ತೆ ಮಾಚಮ್ಮನ ದರ್ಪ ಇವೆಲ್ಲಾ ಈ ಕಥೆಯ ಸೂಕ್ಷ್ಮ ಅಂಶಗಳಾಗಿವೆ. ಬೋಬಣ್ಣನ ಸಾಂಸಾರಿಕ ಬದುಕಿನಲ್ಲಿ ಉಂಟಾದ ಅಶಾಂತಿ ಕೊನೆಗೆ ಇಡೀ ಅಬಚೂರಿನ ಜನತೆಯನ್ನೇ ತನ್ನ ತೆಕ್ಕೆಗೆ ತೆಗೆದುಕೊಂಡು ಬೋಬಣ್ಣ ಅಬಚೂರಿನಿಂದ ಓಡಿಹೋಗುವ ಪ್ರಸಂಗದೊಂದಿಗೆ ಕಥೆ ಮುಗಿದಿರುತ್ತದೆ.

ಬೋಬಣ್ಣ ಅಬಚೂರಿನಂತ ಹಳ್ಳಿಗೆ ವಿದ್ಯಾವಂತನಾಗಿರುವುದರಿಂದ ಅಂಚೆ ಕಛೇರಿ ಅವನ ಸುಪರ್ದಿಗೆ ಬರುತ್ತದೆ. ಸ್ವತಃ ಬೋಬಣ್ಣನೆ ಅನಕ್ಷರಸ್ಥರ ಧ್ವನಿಯಾಗಿ ಪ್ರತಿನಿಧಿಸತೊಡಗಿದ. ಹಳ್ಳಿಯ ಪ್ರತಿಯೊಂದು ಮನೆಯ ಇತ್ಯೋಪರಿಗಳು ಬೋಬಣ್ಣನ ಮುಖಾಂತರವೇ ಸಂವಹನವಾಗತೊಡಗಿದವು. ಹಳ್ಳಿಯಲ್ಲಿ ಅಳಿಯನಿಗೆ ಸಿಗುತ್ತಿದ್ದ ಮಾನ್ಯತೆ ಮಂಚಮ್ಮಳ ಹಿರಿತನಕ್ಕೆ ಸವಾಲೆನಿಸಿ ಬೋಬಣ್ಣನ ಅಸ್ತಿತ್ವವನ್ನು ನಿರಾಕರಿಸಲು ತೊಡಗುತ್ತಾಳೆ. ಅಂಚೆಯಲ್ಲಿ ಬಂದ ನಗ್ನಹೆಣ್ಣಿನ ಶೃಂಗಾರಮಯ ಚಿತ್ರವನ್ನು ತನ್ನಲ್ಲಿ ಉಳಿಸಿಕೊಂಡ ಬೋಬಣ್ಣ ತನ್ನೊಳಗಿನ ಕಾಮನೆಗಳನ್ನು ಪತ್ನಿ ಕಾವೇರಿಯ ಮೂಲಕ ಪೂರೈಸಿಕೊಳ್ಳಲು ಕಾತರಿಸುತ್ತಾನೆ. ಮಗಳ ದಾಂಪತ್ಯದ ಬೆಸುಗೆಯನ್ನು ಮತ್ತಷ್ಟು ಬಿಗಿಗೊಳಿಸುವ ಶಾರೀರಿಕ ಸಂಬಂಧವನ್ನು ಮಾಚಮ್ಮನೇ ಅಸಹನೆಯಿಂದ ನೋಡುತ್ತಾಳೆ. ಮುಗ್ದಸ್ವಭಾವದ ಬೋಬಣ್ಣ ತನ್ನ ಮನೆಯ ಹಾಗೂ ತನ್ನ ವೈಯಕ್ತಿಕ ಅಶಾಂತಿಗೆ ಕಾರಣವೇನು ಎಂದು ಚಿಂತಿಸುತ್ತಾನೆ. "ಪೋಸ್ಟಾಫೀಸಿನ ವ್ಯವಹಾರಗಳು ಹೆಚ್ಚುತ್ತಾ ಬಂದಂತೆ ಬೋಬಣ್ಣನ ಮನಃಶಾಂತಿ ನಶಿಸುತ್ತಾ ಬಂದಿತು. ಬೋಬಣ್ಣ ತನ್ನ ಮನಸ್ಸಿನ ಕಿರಿಕಿರಿ ಅಶಾಂತಿಗಳಿಗೆ ಏನು ಕಾರಣ ಎಂದು ಅನೇಕ ಸಾರಿ ಆಲೋಚಿಸಿದ್ದನು. ಅಥವಾ ಹಾಳು ಪೋಸ್ಟಾಫೀಸೇ ಇದಕ್ಕೆ ಕಾರಣವೋ"[೬೩] ಎಂದುಕೊಳ್ಳುತ್ತಾನೆ. ಆಧುನಿಕತೆಯ ಆಕ್ರಮಣದಿಂದುಂಟಾಗುವ ಗ್ರಾಮೀಣ ಮುಗ್ದತೆಯ ತಲ್ಲಣಕ್ಕೆ ಬೋಬಣ್ಣ ಸಾಕ್ಷಿಯಾಗಿದ್ದಾನೆ. ಅಂಚೆ ಕಛೇರಿಯೊಂದು ಹಳ್ಳಿಯಲ್ಲಿ ಸೃಷ್ಟಿಸುವ ರಾದ್ಧಾಂತ ಅದಕ್ಕೆ ಬಲಿಪಶುವಾದ ಬೋಬಣ್ಣನ ತಲ್ಲಣ-ತಳಮಳಗಳು ಚಿಂತನಾರ್ಹವಾಗಿವೆ.

---

೬೩. ಪೂರ್ಣಚಂದ್ರ ತೇಜಸ್ವಿ, 'ಅಬಚೂರಿನ ಪೋಸ್ಟಾಫೀಸು', ಪುಟ. ೫, ೨೦೦೫.

ತಾಯಿಯ ಕಪಿಮುಷ್ಟಿಯೊಳಗೆ ನರಳುವ ಕಾವೇರಿಗೆ ತನ್ನ ಬದುಕಿನ ದುರಂತದ ಅರಿವೇ ಇರುವುದಿಲ್ಲ. ಸಾರ್ವಜನಿಕವಾಗಿ ಅನ್ಯ ಸಂಬಂಧದ ಪ್ರಸ್ತಾಪ, ಪತಿಗಾದ ಅವಮಾನ ಹಾಗೂ ಅವನನ್ನು ಶಾಶ್ವತವಾಗಿ ಕಳೆದುಕೊಳ್ಳುವಿಕೆಯ ಪ್ರಜ್ಞೆಯೇ ಇಲ್ಲದಂತೆ ತಾಯಿಯ ಸ್ವಾರ್ಥಕ್ಕೆ ಬಲಿಯಾಗಿ ಒದಗಿದ ಮಾತುಗಳನ್ನೇ ಅನಾಯಾಸವಾಗಿ ಒಪ್ಪಿಕೊಂಡಿರುವುದು ಕಾವೇರಿಯ ಬದುಕಿನ ದುರಂತದ ಪರಾಕಾಷ್ಠೆಯಾಗಿದೆ. ಕಥೆಯ ಅಂತ್ಯದಲ್ಲಿ ಬೋಬಣ್ಣ ಆ ಜಾಗಬಿಟ್ಟು ಓಡಲು ತಯಾರಾದಾಗ ಕಾವೇರಿ ನೀರು ತರಲು ಹೋಗುತ್ತಾಳೆ. ತಮ್ಮ ಬದುಕು ಸೂಕ್ಷ್ಮವಾದ ದುರಂತಕ್ಕೆ ಬಲಿಯಾಗುತ್ತಿದ್ದರೂ ಅದರ ಪರಿಜ್ಞಾನವೇ ಇಲ್ಲದಂತಿರುವ ಹಳ್ಳಿಯ ಹೆಣ್ಣುಮಕ್ಕಳ ಪ್ರತಿನಿಧಿಯಂತೆ ಆಕೆ ತೋರಿಬರುತ್ತಾಳೆ. ಅಂಚೆ ಡಬ್ಬಿಯಲ್ಲಿನ ಪತ್ರವೊಂದನ್ನು ಸಕಾರಣದಿಂದಲೇ ನಕಲುಮಾಡಿದ್ದು ಊರಿನವರ ಅನುಮಾನವನ್ನು ಪುಷ್ಟೀಕರಿಸುವಂತೆ ಮಾಚಮ್ಮ ಪೂರಕ ಪ್ರತಿಕ್ರಿಯೆ ನೀಡುವುದು, ಅವನ ಮೇಲಿನ ಅಸಮಾಧಾನದಿಂದಾಗಿ ಊರಿನವರು ಅವಳ ಶೀಲದ ಬಗ್ಗೆ ಕೆಟ್ಟದಾಗಿ ಹೇಳಿದರೂ ಕಾವೇರಿಯ ವಿನೋದವಿಲ್ಲದಿರುವಿಕೆಗಳು ಅವನಿಗೆ ನೊವಾಗಲೂ ಕಾರಣವಾಗುತ್ತದೆ. "ಬೋಬಣ್ಣನದು ಪಲಾಯನವಲ್ಲ ಅದೊಂದು ಪ್ರತಿರೋಧದ ನೆಲೆ. ಆದ್ದರಿಂದಲೇ ಅಷ್ಟುದೊಡ್ಡ ಗುಂಪನ್ನು ದಾಟಿ ಸಾಗುವುದು ಅವನಿಂದ ಸಾಧ್ಯವಾಗುತ್ತದೆ. ಅವನ ಬದುಕಿಗೆ ತೀರಾ ಅವನದ್ದೇ ಎನ್ನಬಹುದಾದ ಸ್ವಂತಿಕೆಯ ನೆಲೆ ಮತ್ತು ಮಿತಿ ಇವೆ. ತನ್ನದು ಎನ್ನುವ ಹಠದಲ್ಲಿ ತನ್ನತನವನ್ನು ಪ್ರತಿಷ್ಠಾಪಿಸಲಾರದಾಗ ಹಾಗೆಯೇ ತನ್ನ ಸಹಜತೆಯನ್ನು ಒಪ್ಪಿಕೊಳ್ಳುವ ವ್ಯವಸ್ಥೆ ರೂಪುಗೊಳ್ಳುವಾಗ ಅದನ್ನು ಧಿಕ್ಕರಿಸದಂತೆಯೇ ಆಗಿಬಿಡುವ ಬೋಬಣ್ಣ ಬದುಕಿನ ಮಹತ್ವಗಳ ಪ್ರತಿಪಾದಕನಂತೆ ಕಾಣಸಿಗುತ್ತಾನೆ. ಕತೆಯಮುಕ್ತಾಯ ಬೋಬಣ್ಣ ಬದುಕಿನ ಮುಕ್ತಾಯವಲ್ಲ. ಅದು ಅವನ ಸ್ವಾತಂತ್ರ್ಯದ ಮೊದಲ ಹೆಜ್ಜೆಯೂ ಆಗಬಲ್ಲದು. ಪೋಸ್ಟಾಫೀಸಿನ ವೃತ್ತಿಯ ಹಿನ್ನೆಲೆಯಲ್ಲಿ ಕತೆ ಬಿತ್ತರಗೊಳ್ಳುವುದೇ ವಿಶಿಷ್ಟವಾದ ಕಲೆಗಾರಿಕೆ"[೬೪] ಎಂಬ ಅಭಿಪ್ರಾಯ ಸರಿಯಾಗಿಯೇ ಇದೆ.

ಮಾಚಮ್ಮ ಊರಿನವರಿಗೆ ಅಳಿಯನ ಮೇಲೆ ಆಕ್ರಮಣಮಾಡಲು ಸಮರ್ಥನೆ ನೀಡುವುದು, ಅವನ ಅಸ್ತಿತ್ವವನ್ನು ತಿರಸ್ಕರಿಸುವುದು, ಕುಟುಂಬ ವಿಘಟನೆಗೆ ಕಾರಣವಾಗುವುದು ಹೀಗೆ ಮಾಚಮ್ಮ ವ್ಯಕ್ತಿಗತ ಸ್ವಾರ್ಥ ಇಡೀ ಊರನ್ನು ಕಾಡ್ಗಿಚ್ಚಿನಂತೆ ನಾಶಮಾಡುತ್ತದೆ. ಪ್ರಶಾಂತವಾಗಿದ್ದ ಹಳ್ಳಿಯನ್ನು ಕದಡಿದ ಅಂಚೆ-ಕಛೇರಿ ಅನಿವಾರ್ಯವಾಗಿ ಖಳನಾಯಕನಂತೆ ಭಾಸವಾಗುತ್ತದೆ. ಸಮುದಾಯದ ನಡುವೆ ತನ್ನ ವ್ಯಕ್ತಿತ್ವವನ್ನು ಗುರುತಿಸಿಕೊಳ್ಳಬೇಕು. ವ್ಯಕ್ತಿ ಅನುಭವಿಸುವ ನಿಸ್ಸಹಾಯಕತೆ ಹಾಗೂ ವ್ಯವಹಾರಿಕವಾಗಿ ಚಾಣಾಕ್ಷನಲ್ಲದ ವ್ಯಕ್ತಿ ಸಮೂಹದೊಳಗೆ ಬದುಕಲು ಕಷ್ಟವಾಗುತ್ತದೆ ಎಂಬುದಕ್ಕೆ ಬೋಬಣ್ಣನೇ ಸ್ಪಷ್ಟ ನಿದರ್ಶನವಾಗಿದ್ದಾನೆ.

---

೬೪. ಟಿ.ಪಿ. ಅಶೋಕ, 'ಸಾಹಿತ್ಯಸಂದರ್ಭ', ಪುಟ. ೩೪, ೧೯೯೮.

'ತಬರನ ಕತೆ' ಹಲವು ಬಗೆಯ ಹಿಂಸೆ, ಶೋಷಣೆ, ಕ್ರೌರ್ಯಗಳ ಭೀಕರ ಚಿತ್ರಗಳನ್ನು ಕಟ್ಟಿಕೊಟ್ಟರೂ ತಬರನ ಮೂಲಕ ಕೇವಲ ಸದ್ಯದ ಸಂಕಷ್ಟಗಳನ್ನು ಮಾತ್ರ ಧ್ವನಿಸದೇ ಇಡೀ ಮನುಷ್ಯ ನಾಗರಿಕತೆಯ ಅವ್ಯವಸ್ಥೆಯನ್ನು ಕಾಣಿಸುವಲ್ಲಿ ಸಫಲವಾಗುತ್ತದೆ. ತಬರ ಅನಿವಾರ್ಯವಾಗಿ ತೀವ್ರವಾದ ನೋವಿನಿಂದಲೇ ವಸಾಹತುಶಾಹಿ ಆಡಳಿತಕ್ಕೆ ಬೆಂಬಲ ನೀಡಿದ್ದರ ಅರ್ಥವನ್ನು ಧ್ವನಿಸುತ್ತದೆ. ತಬರನ ಹುಚ್ಚು ನಮ್ಮ ವ್ಯವಸ್ಥೆಗೂ, ಅವನ ಪತ್ನಿಯ ಗ್ಯಾಂಗ್ರಿನ್ ಸರಕಾರಕ್ಕೂ ಸಂಕೇತವಾಗುವಲ್ಲಿ ಈ ಕಥೆ ಸಾರ್ಥಕವಾಗಿದೆ.

'ತಬರನಕತೆ' ತೇಜಸ್ವಿ ಅವರ ಮಹತ್ವದ ಕಥೆ. ಈ ದೇಶದ ಶ್ರೀಸಾಮಾನ್ಯನೆಂಬ ಬಹುಜನರ ಪ್ರತಿನಿಧಿ ತಬರ. ಕಾಲದ ಮಿತಿಯಿಲ್ಲದೆ ಶೋಷಣೆಯೇ ದೈವವೆನ್ನುವ ನಂಬಿಕೆಗಳಾಚೆಗೆ ಒಂದು ವ್ಯವಸ್ಥೆ ಸೃಷ್ಟಿಯಾಗುವುದಾದರೆ ಅದು ತಬರನನ್ನು ಪದೇಪದೇ ಸೃಷ್ಟಿಸುತ್ತದೆ. ಸೃಷ್ಟಿಸಿ ಶೋಷಿಸುತ್ತಲೇ ತನ್ನ ಅಸ್ತಿತ್ವವನ್ನು ಗಟ್ಟಿಗೊಳಿಸುತ್ತದೆ. ಭಾರತದಂತಹ ದೇಶಕ್ಕೆ 'ತಬರನಕತೆ' ನಿರಂತರ ಹಾಗೂ ಸಾರ್ವಕಾಲಿಕ ಸ್ವಾತಂತ್ರ್ಯ ಮತ್ತು ಪರತಂತ್ರದ ಪ್ರಶ್ನೆಯನ್ನು ಬಹುಗಂಭೀರವಾಗಿಯೇ ಪ್ರಸ್ತಾಪಿಸುವ ಸೂಕ್ಷ್ಮಮನದ ತಬರನ ಹೊಯ್ದಾಟಗಳು ಇಂದಿಗೂ ಪ್ರಸ್ತುತವಾಗಬಲ್ಲವು ಅಧಿಕಾರಶಾಹಿ ಮತ್ತು ಹಕ್ಕುಗಾರಿಕೆಯ ಅರ್ಥಗಳು ಎಷ್ಟರಮಟ್ಟಿಗೆ ಈ ದೇಶದ ಬಹುಜನರರನ್ನು ತಲುಪಿದೆ ಎನ್ನುವ ನಿತ್ಯದ ಕಾಳಜಿಯ ಪ್ರಶ್ನೆಗೆ ನಿರಾಶೆಯ ಹತ್ತು ಹಲವು ಉತ್ತರಗಳು ತಬರನ ಕತೆಯಲ್ಲಿದೆ. ತನ್ನದು ಎನ್ನುವ ಹಕ್ಕುಗಾರಿಕೆಯಲ್ಲಿ ದಕ್ಕಬೇಕಾದ ಪಿಂಚಣಿಗಾಗಿ ಏಕಾಂಗಿಯಾಗಿ ಹೋರಾಡುತ್ತಾನೆ. ಕೊನೆಗೆ ತನ್ನವಳಾದ ಹೆಂಡತಿಯನ್ನು ಉಳಿಸಿಕೊಳ್ಳಲಾಗದ ತಬರ ಸ್ವಾತಂತ್ರ್ಯ ದಿನಾಚರಣೆಯ ಹೊತ್ತಿಗೆ ಬ್ರಿಟೀಷರ ಆಳ್ವಿಕೆಯನ್ನು ಹೊಗಳುತ್ತಾ ಹುಚ್ಚನಾಗುವ ವಿಪರ್ಯಾಸ ಬರೀ ಕತೆಯಾಗಿ ದಾಖಲಾಗುವಂತಹುದಲ್ಲ. ಅದು ನಿತ್ಯವೂ ಈ ವ್ಯವಸ್ಥೆಯಲ್ಲಿ ಘಟಿಸುವ ಪರಂಪರೆಗೆ ಸಂಬಂಧಿಸಿದ್ದು. ಆದ್ದರಿಂದಲೇ ಅವನ ಪರಿಸ್ಥಿತಿಯನ್ನು ಕಂಡಾಗ ತನ್ನಷ್ಟಕ್ಕೆ ನಡುಗುವ ಜನರೂ ಅವನ ನಡುವೆಯೇ ಬದುಕಿರುತ್ತಾರೆ ಎಂಬ ವಾಸ್ತವತೆಯ ಸ್ವೀಕರಣೆಯೊಂದಿಗೆ ನಾವು 'ತಬರನಕತೆ'ಯನ್ನು ಅರ್ಥೈಸಿಕೊಳ್ಳಬಹುದಾಗಿದೆ. ಸ್ವಾತಂತ್ರ್ಯ ಭಾರತದ ಕನಸುಕಂಡ ಭಾರತದ ಜನ–ಸಾಮಾನ್ಯರು ಮಾದರಿ ಸರಕಾರ, ನೆಮ್ಮದಿಯ ವ್ಯವಸ್ಥೆ ಆರ್ಥಿಕ ಸುಸ್ಥಿತಿ, ಸಾಮಾಜಿಕ ಸಮಾನತೆಗಳ ನಿರೀಕ್ಷೆಯಲ್ಲಿದ್ದವರು. ವಿಪರ್ಯಾಸವೆಂದರೆ ಶಿಸ್ತಿನ ವಸಾಹತುಶಾಹಿ ವ್ಯವಸ್ಥೆಯಲ್ಲಿಯೇ ಭಾರತೀಯರು ಸುಸ್ಥಿರ ಭಾವವನ್ನು ಅನುಭವಿಸಿದ್ದರು ಎಂಬ ವಾಸ್ತವ ವಿವರ ಮುಗ್ಧ ತಬರನಿಂದ ವ್ಯಕ್ತವಾಗಿದೆ. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂಬ ಹೆಮ್ಮೆಯ ಭಾರತದಲ್ಲಿ ಪ್ರಜೆಯೇ ಸಾರ್ವಭೌಮನಾಗಬಹುದಾದ ವ್ಯವಸ್ಥೆಯಲ್ಲಿ ಜನಸಾಮಾನ್ಯನೊಬ್ಬ ನಿರಂತರ ಶೋಷಣೆಗೆ ಒಳಗಾಗುವ ಪಾತ್ರವನ್ನು 'ತಬರ' ಅದ್ಭುತವಾಗಿ ಸಂಕೇತಿಸಿದ್ದಾನೆ. ಆರ್ಥಿಕವಾಗಿ ಹಿಂದುಳಿದ ವ್ಯಕ್ತಿ ಅಧಿಕಾರವರ್ಗದಿಂದ ತನ್ನ ನಿವೃತ್ತಿ ಹಣ ಹಾಗೂ ತನ್ನ

ಅಸ್ತಿತ್ವವನ್ನೇ ಕಳೆದುಕೊಂಡು ಸಮಾಜದಿಂದ ಹುಚ್ಚನ ಹಣೆಪಟ್ಟಿ ಕಟ್ಟಿಸಿಕೊಳ್ಳುತ್ತಾನೆ. ಮುಗ್ಧ ತಬರ ಸ್ವಾತಂತ್ರ್ಯಪೂರ್ವ ಹಾಗೂ ನಂತರದ ಭಾರತದ ರಾಜಕೀಯ ಹಾಗೂ ಸಾಮಾಜಿಕ ಸಂದರ್ಭಕ್ಕೆ ಸಾಕ್ಷಿಯಾದವನು. ಬ್ರಿಟೀಷರ ಆಳ್ವಿಕೆಯಲ್ಲಿ ಸುಂಕದ ಕಟ್ಟೆಗೆ ನೌಕರನಾಗಿ ಸೇರಿಕೊಳ್ಳುತ್ತಾನೆ. ನಾನಾ ಕಾರಣಗಳಿಂದ ಸರ್ಕಿಟ್‌ಹೌಸ್‌ನ ಮೇಟಿಯಾಗಿ, ತಾಲ್ಲೂಕು ಆಫೀಸಿನ ಜವಾನನಾಗಿ ಕೆಲಸ ಬದಲಾಯಿಸುತ್ತಾ ನಿವೃತ್ತನಾದ. ಸುಂಕದ ಕಟ್ಟೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ವ್ಯತ್ಯಾಸದ ಹಣ ೨೬೦ನ್ನು ತಬರ ಜುಲ್ಮಾನೆಯಾಗಿ ಕಟ್ಟುವ ಅನಿವಾರ್ಯತೆ ಒದಗುತ್ತದೆ. ಜುಲ್ಮಾನೆ ಕಟ್ಟದೆ ನಿವೃತ್ತಿ ಹಣ ದೊರಕುವುದಿಲ್ಲ. ನಿವೃತ್ತಿ ವೇತನದ ಫೈಲು ಬೇಗನೆ ಬರಲಿ ಎಂಬ ಆಸೆಗೆ ರಾಜಕೀಯ ವ್ಯಕ್ತಿ ಬಂಟಪ್ಪನೊಂದಿಗೆ ಚಿಕ್ಕಮಂಗಳೂರಿಗೆ ಹೋಗುತ್ತಾನೆ. ಬಂಟಪ್ಪನೊಂದಿಗೆ ಒಡನಾಟವಿರುವುದರಿಂದ ನೀನು ನಕ್ಸಲೈಟ್ಸ್ ಕಡೆಯವನಿರಬೇಕು ಎಂದು ಸಂಶಯಿಸುವುದು, ಸತಾಯಿಸುವುದು, ನಿವೃತ್ತಿ ವೇತನದಲ್ಲಿ ಸ್ವಾತಂತ್ರ್ಯೋತ್ಸವದ ಬೆಳ್ಳಿಹಬ್ಬದ ಆಚರಣೆಗಾಗಿ ಹಣ ಪಡೆಯುವ ಹುನ್ನಾರಗಳು ತಬರನನ್ನು ಮಾನಸಿಕವಾಗಿ ದೈಹಿಕವಾಗಿ ಕುಗ್ಗಿಸುತ್ತವೆ.

ಮಕ್ಕಳಿಲ್ಲವೆಂದು ಕೊರಗುವ ಪತ್ನಿ ಅಪ್ಪಿಯ ನೋವಿನೊಂದಿಗೆ ಅವಳ ಕಾಲಿಗೆ ಗಾಯವಾಗಿ ಔಷಧಿ ಕೊಡಿಸಲಾಗದ ಅಸಹಾಯಕತೆಗಳಿಂದ ತಬರ ಬಳಲುತ್ತಾನೆ. ಕೊಳೆಯುತ್ತಿರುವ ಬೆರಳಿನಿಂದಾಗಿ ಕಾಲಕತ್ತರಿಸಬೇಕು. ಇಲ್ಲವಾದರೆ ಜೀವಕ್ಕೆ ಅಪಾಯ ಎಂದು ತಿಳಿದಾಗ, ಗಂಜಿಗಾಗಲಿ, ಔಷಧಿಗಾಗಲಿ ಚಿಕ್ಕಾಸು ಇಲ್ಲದ ತಬರ ಮಾಂಸದಂಗಡಿಯ ಕಟುಕ ಯೂಸಫನನ್ನು 'ತನ್ನ ಹೆಂಡತಿ ಕಾಲನ್ನು ಮಂಡಿಯ ಕಾಲಿನವರೆಗೆ ಕಡಿದು ಕೊಡುತ್ತೀಯಾ' ಎಂದು ದೀನಾವಸ್ಥೆಯಿಂದ ಬೇಡಿಕೊಳ್ಳುತ್ತಾನೆ. ಭಾರತದಲ್ಲಿನ ಬಡತನ, ಅಸಹಾಯಕತೆ ವ್ಯಕ್ತಿಯನ್ನು ಎಂತಹ ದೀನಸ್ಥಿತಿಗೆ ತಳ್ಳುತ್ತದೆ ಎಂಬುದಕ್ಕೆ ತಬರನ ಈ ಮನಸ್ಥಿತಿಯೇ ಸಾಕ್ಷಿಯಾಗುತ್ತದೆ.

'ಕುಬಿ ಮತ್ತು ಇಯಾಲ' ಕಥೆಯೂ ಆಧುನಿಕತೆಯ ಇನ್ನೊಂದು ರೀತಿಯ ವೈರಾಗ್ಯವನ್ನು ಧ್ವನಿಸುತ್ತದೆ. ಭೈರಾಪುರಕ್ಕೆ ರಸ್ತೆ ಬರುವ ಸೂಚನೆಯ ಮೂಲಕ ದುಷ್ಟಶಕ್ತಿಗಳ ಸಮಯ ಸಾಧಕತನಗಳು ಹೊರಬರುತ್ತವೆ. ಕಥೆ, ಸುತ್ತುವುದು 'ಇಯಾಲ' ಎಂಬ ಪುಟ್ಟ ಯುವತಿಯ ಕಗ್ಗೊಲೆಯ ಸುತ್ತ, ಅವಳ ಕೊಲೆ ನಿಧಾನಕ್ಕೆ ಇಡೀ ಊರಿನ ಎಲ್ಲ ಘಟನೆಗಳ ಸುತ್ತಲೂ ಭೈರಾಪುರದ ರಾಜಕೀಯ ಮತ್ತು ಮತಧರ್ಮಗಳ ಒಳಜಗಳಗಳ ಸುತ್ತಲೂ ಬೆಳೆಯುತ್ತದೆ. ನಮ್ಮ ಸಮಾಜದ ಜಾತಿಯತೆ ಅಂಧಮತೀಯತೆ ಹಾಗೂ ಅಧಿಕಾರಶಾಹಿಯ ಸ್ವಾರ್ಥ ಇವುಗಳ ಸಫಲ ಸಂಕೇತವಾಗುತ್ತದೆ. ಭೈರಾಪುರಕ್ಕೆ ರಸ್ತೆಯೊಂದರ ನಿರ್ಮಾಣ ಹಳ್ಳಿಯ ಜೀವನದ ಎಲ್ಲ ಘಟನೆಗಳಿಗೆ ಉಂಟುಮಾಡಿದ ಹೊಸತೊಂದರ ಭಯಕ್ಕೆ ಕಾರಣವಾಗುತ್ತದೆ. ರಸ್ತೆಯ ಮಧ್ಯೆ ಇದ್ದ ಒಂದು ಭಾರಿ ಗಾತ್ರದ ಧೂಪದ ಮರದ ಬಂಡೆಯಿಂದ ರಸ್ತೆಯ ಸಂಚಾರ

ಸುಗಮವಾಗಿರದೆ ಹಳ್ಳಿಯ ಜನರಿಗೆ ಅವರ ನಂಬಿಕೆಗಳಿಗೆ ಈ ಬಂಡೆ ವರವೇ ಆಗಿತ್ತು. ಬಂಡೆಯ ಬಳಿ ನಡೆದ ಇಯಾಲಳ ಕೊಲೆ ಆ ಊರಿನ ಮೂಢನಂಬಿಕೆ ಸ್ಥಿರವಾಗಲು ಕಾರಣವಾಯಿತು. ಕುಬೇರನಾಥ ಆ ಹಳ್ಳಿಯ ಮೂಢನಂಬಿಕೆಗಳ ವಿರುದ್ಧ ಹೋರಾಡಲು ಹೋದಂತೆಲ್ಲ ಆತನ ನಿಸ್ವಾರ್ಥ ಪ್ರಯತ್ನದಿಂದಾಗಿ ಒಳ್ಳೆಯ ಹೆಸರೂ ಆ ಹೆಸರಿನೊಂದಿಗೆ ನಂಬಿಕೆಯೂ ಆ ನಂಬಿಕೆಯೊಂದಿಗೆ ಕುರುಡುಬುಟ್ಟಿಯೂ ಒಂದರೊಡನೊಂದು ಸಮ್ಮಿಳಿತವಾಗಿ ಉಲ್ಬಣಿಸುತ್ತಿದ್ದವು.

ಕ್ಷುದ್ರ ರಾಜಕಾರಣದಿಂದಾಗಿ ರಾಜಕೀಯ ಮುಖಂಡರ ಅಪರಾಧವನ್ನು ಮುಚ್ಚಿಡುವುದಕ್ಕಾಗಿ ಯಂತ್ರಚಾಲನೆಯಲ್ಲಿರುವುದನ್ನು ತೋರಿಸಿಕೊಳ್ಳುವುದಕ್ಕಾಗಿ ಏನೂ ಅರಿಯದ ಮುಗ್ಧ ಶ್ರಮಜೀವಿಗಳು ತೊಂದರೆ ಅನುಭವಿಸಬೇಕಾಗಿತ್ತು. ನಿರಪರಾಧಿಗಳನ್ನು ರಕ್ಷಿಸಬೇಕಾದ ಪೋಲೀಸರೇ ಹಮಾಲಿಗಳನ್ನು ಶಿಕ್ಷಿಸುತ್ತಿದ್ದರು. ಅಧಿಕಾರದ ಮದಕ್ಕೆ ಹಮಾಲಿಗಳು ಬಲಿ, ಕುಬಿ ಡಾಕ್ಟರ್ ನ್ಯಾಯ ಕೇಳಿದರೆ ಇನ್ಸ್‌ಪೆಕ್ಟರನದು ಅಸಂಬದ್ಧ ಉತ್ತರ. ಕಣ್ಣೆದುರೇ ಅನ್ಯಾಯವನ್ನು ಸಹಿಸಬೇಕಾದ ಸ್ಥಿತಿ. ಸ್ವಾತಂತ್ರ್ಯನಂತರ ರಾಜಕೀಯ ಅವ್ಯವಸ್ಥೆಗಳು ಜಾತ್ಯಾತೀತ ರಾಷ್ಟ್ರವೆನಿಸಿಕೊಂಡ ರಾಷ್ಟ್ರವೇ ಉಸಿರುಕಟ್ಟಿಸುವಷ್ಟು ಜಾತಿಯ ಪ್ರಜ್ಞೆಯ ನಿರ್ಮಾಣ ಚುನಾವಣೆಗಳು ಪ್ರಜೆಗಳನ್ನು ವಿಷದ ವರ್ತುಲಗಳಲ್ಲಿ ಸಿಲುಕವಂತೆ ಮಾಡಿದ ಸ್ಥಿತಿ ಹೀಗೆ ಒಟ್ಟಾರೆ ರಾಜಕೀಯದ ಅವನತಿಯ ವಿವಿಧ ಮುಖಗಳನ್ನು 'ಕುಬಿ ಮತ್ತು ಇಯಾಲ' ಪರಿಚಯಿಸುತ್ತದೆ.

ಆಧುನಿಕತೆಯ ಆಕ್ರಮಣದಿಂದ ಹಳ್ಳಿಯ ಪರಿಸರದಲ್ಲಿ ಉಂಟಾಗುವ ಬದಲಾವಣೆಗಳ ಪರಿಯನ್ನು ವರ್ಣಿಸುವ ಕಥೆಯೇ 'ತುಕ್ಕೋಜಿ' ಹಳ್ಳಿಯಲ್ಲಿ ಟೈಲರ್ ಆಗಿ ಕೆಲಸ ಮಾಡುವ ತುಕ್ಕೋಜಿಯ ವೈಯಕ್ತಿಕ ಜೀವನದಲ್ಲಿ ಉಂಟಾದ ಕೆಲವು ವೈಪರೀತ್ಯಗಳು ಹಾಗು ರೈಲ್ವೇ ನಿಲ್ದಾಣದ ಆಗಮನದ ಮೂಲಕ ಊರಿನಮೇಲೆ ಆಗುವ ಪರಿಣಾಮವು ಈ ಕಥೆಯಲ್ಲಿ ಚಿತ್ರಿತಗೊಂಡಿದೆ. ಆದರೂ ಇಲ್ಲಿ ದುರಂತವಾಗಬಹುದಾಗಿದ್ದ ವಸ್ತು ವಿನ್ಯಾಸವು ತುಕ್ಕೋಜಿಯನ್ನು ಭಾವುಕಸ್ಥಿತಿಗೆ ಕೊಂಡೊಯ್ಯುವ ರೀತಿಯ ಬರವಣಿಗೆಯ ಪ್ರಯೋಗವಿದೆ. ಆಧುನಿಕತೆಯಿಂದ ತುಕ್ಕೋಜಿ ತನ್ನ ಕಸುಬಿನ ನೈಪುಣ್ಯವನ್ನು ಗೃಹಜೀವನವನ್ನು ಹಾಳು ಮಾಡಿಕೊಳ್ಳುವ ಕಥೆ ಇದಾಗಿದೆ. ಗುರುಗಳಲ್ಲಿ ಒಂದುಕಾಲಕ್ಕೆ ಹಳ್ಳಿಯಾಗಿದ್ದಿತಾದರೂ ಇಡೀ ಅಖಂಡ ಭಾರತದ ವಿಕಾಸದೊಂದಿಗೆ ನಿಧಾನವಾಗಿ ಬೆಳೆದು ಸಣ್ಣಪೇಟೆಯಾಯಿತು. ಆಸ್ಪತ್ರೆ, ಬಸ್‌ನಿಲ್ದಾಣ, ಪೋಲೀಸ್ ಸ್ಟೇಷನ್ ಪೋಸ್ಟಾಫೀಸು, ಸಿನಿಮಾ ಟೆಂಟು ರೈಲ್ವೆ ಸೇತುವೆ – ಇವುಗಳೆಲ್ಲವು ಸ್ಥಾಪನೆಗೊಂಡು ದೇಸೀ ಜನರ ಬಳುವಳಿಯ ನಾಗರಿಕತೆ ಬೆಳೆಯಲು ಕಾರಣವಾಯಿತು. ಭಟ್ಟರ ಹೋಟೆಲ್, ಹಜಾಮರ ಅಂಗಡಿ ಸಲೂನ್ ಆದುದು ಹಾಗೆಯೇ ದರ್ಜಿ ತುಕ್ಕೋಜಿ ಟೈಲರ್ ತುಕ್ಕೋಜಿ ಆದುದು.

ಆಧುನಿಕತೆ ಎಂಬುದು ವಸಾಹತುಶಾಹಿ ಸಾಮ್ರಾಜ್ಯವಾದಿಗಳು ಹೇರಿದ್ದು ಮಾತ್ರವಲ್ಲ ಅದರಿಂದ ವಸಾಹತು ರಾಷ್ಟ್ರದ ಜನರಾದ ನಾವು ಆಕರ್ಷಿತರಾದೆವು. ನಾವು ಆಧುನಿಕರಾಗಲು ಬಯಸಲಿ, ಬಿಡಲಿ ವಸಾಹತುಶಾಹಿ ಮಾಡುವ ಪರಿಣಾಮ, ಹರಡುವ ತೀವ್ರತೆ ನಡೆದೇ ತೀರುತ್ತದೆ. ಮೊದಮೊದಲು ಗುರುಗಳ್ಳಿ ಪೇಟೆಯಾಗಿ, ಆಕರ್ಷಣೀಯ ಪಟ್ಟಣವಾಗುವುದರಲ್ಲಿ ಟೈಲರ್ ತುಕ್ಕೋಜಿಯ ಪಾತ್ರ ಗಮನೀಯವಾದದ್ದು. ಅವನಲ್ಲಿದ್ದ ವೈಶಿಷ್ಟ್ಯತೆಯನ್ನು ಬೆಳಕಿಗೆ ತರುವಲ್ಲಿ ಕಾಲೇಜು ಸಿನಿಮಾಗಳು ಕಾರಣವಾದರೂ ಅವನೊಳಗಿನ ಪರಿಣತಿಯೂ ಅಷ್ಟೇ ಕಾರಣ. ತುಕ್ಕೋಜಿ ಒಮ್ಮೆ ಗಿರಾಕಿಯನ್ನು ನೋಡಿದರೆ ಸಾಕು ಅವರ ಕಣ್ಣು ಅವರ ಓರೆಕೋರೆಗಳನ್ನೆಲ್ಲಾ ಅಳೆದುಬಿಡುತ್ತಿದ್ದವು. ಅವನು ಹೊಲಿದ ಬಟ್ಟೆಯು ಗಿರಾಕಿಯ ಮೈಗೆ ದೇವರು ಕೊಟ್ಟ ಚರ್ಮದಂತೆ ಸ್ವಾಭಾವಿಕವಾಗಿ ಹೊಂದಿಕೊಳ್ಳುತ್ತಿದ್ದವು. ಹೀಗಾಗಿ ಗುರುಗಳ್ಳಿಯ ಜನರ ಆಧುನಿಕತೆಗೆ ತುಕ್ಕೋಜಿ ತನ್ನದೇ ಮಿತಿಯೊಳಗೆ ಸೇವೆಯನ್ನು ಸಲ್ಲಿಸುತ್ತಿದ್ದ ಈ ನಾಗರಿಕತೆ ಮುಂದೊಂದು ದಿನ ತುಕ್ಕೋಜಿ ಮತ್ತು ಹೆಂಡತಿ ಸರೋಜರ ನಡುವೆ ಅಮೂರ್ತವಾದ ರೀತಿಯಲ್ಲಿ ಒಡಕು ಉಂಟುಮಾಡುವಂತಾಯಿತು. ಸರೋಜಳಿಗೆ ತನ್ನ ಗಂಡನ ಕೆಲಸದ ತತ್ಪರತೆಯನ್ನು ಕಂಡಾಗ ತನ್ನನ್ನು ನಿರ್ಲಕ್ಷ್ಯಿಸುತ್ತಿರುವ ಅನಿಸಿಕೆ ಮೂಡಿ ಅವಳು ಗಂಡನ ಕೆಲಸ ಕಾರ್ಯಗಳಲ್ಲಿ ನಿರ್ಲಕ್ಷ್ಯವನ್ನು ತಾಳುವಂತಾಯ್ತು. ಬಯಸಿಬಯಸಿ ಪಡೆದ ಮಗು ಕಿಟ್ಟು ಬೆಳವಣಿಗೆಯು ಸಹ ಗಂಡಹೆಂಡತಿಯರ ನಡುವಿನ ಘರ್ಷಣೆಯ ಕಾರಣವಾಯಿತು. ಇದೇ ಅವನ ಮನಶ್ಯಾಂತಿಯನ್ನು ಕದಡಿ ಕೆಲಸದಲ್ಲಿದ್ದ ಅವನ ಗಾಢವಾದ ಏಕಾಗ್ರತೆಗೆ ಭಂಗ ಬಂದು ಸೂಕ್ಷ್ಮ ರೂಪದಲ್ಲಿ ಅವನ ಕುಶಲತೆಯನ್ನು ನುಂಗಿಹಾಕಿತು. ತುಕ್ಕೋಜಿಯ ಜೀವನದ ಸಿಕ್ಕುಗಳು ದಟ್ಟವಾದಂತೆ ಅವನ ಕೆಲಸಗಾರಿಕೆ ತಡವಾಗುವುದರ ಜೊತೆಗೆ ಗಂಭೀರ ತೊಂದರೆಗಳು ಪ್ರಾರಂಭವಾದವು. ಗಿರಾಕಿಗಳು ದೂರುಗಳೊಂದಿಗೆ ಕೆಲಸಗಾರಿಕೆಯಲ್ಲಿ ಉಂಟಾದ ಊನ ಯಾವುದೆಂದು ತಿಳಿಯಬರದ ಸ್ಥಿತಿಗೆ ಬಂದು ಗುರುಗಳ್ಳಿಯ ಜನರು ತುಕ್ಕೋಜಿಯ ಉಡುಪುಗಳಿಗೆ ತಮ್ಮನ್ನು ಒಗ್ಗಿಸಿಕೊಳ್ಳಲು ಹೋಗಿ ಅನೇಕರು ಅನೇಕ ತರಹದ ಅಂಗಚೇಷ್ಟೆಯನ್ನು ರೂಢಿಸಿಕೊಂಡರು. ತುಕ್ಕೋಜಿಯ ಚಿತ್ತಸ್ವಾಸ್ಥ್ಯ ಕೆಟ್ಟಿದ್ದಲ್ಲದೆ ಅದರ ಅದ್ವಾನ ನಿಧಾನವಾಗಿ ನಗರವನ್ನು ಆವರಿಸಿಕೊಳುತ್ತಾ ಬಂದಿತು.

ಆಧುನಿಕ ನಾಗರಿಕತೆಯ ವ್ಯಂಗ್ಯ ಇದಾಗಿದೆ. ಮನುಷ್ಯನ ಬದುಕಿನಲ್ಲಿ ಉಂಟಾಗುವ ಘರ್ಷಣೆಗಳು, ವೈಯಕ್ತಿಕ ನೆಲೆಯ ಮನಃಸ್ತಾಪ, ತನ್ನ ಜೀವನದ ಅಧ್ವಾನಗಳು ಇವೆಲ್ಲವೂ ಆಧುನಿಕ ಪ್ರಕ್ರಿಯೆಯಾದ ನಗರೀಕರಣವು ಗುರುಗಳ್ಳಿಯ ಸಣ್ಣಪೇಟೆಯನ್ನು ವ್ಯಾಪಿಸತೊಡಗಿದ್ದು ಮಾತ್ರ ಅತ್ಯಂತ ವಿಷಾದಕರ ದುರಂತ ಆಧುನಿಕ ಜೀವನಕ್ರಮ ಮನುಷ್ಯನ ಮಾನವೀಯ ನೆಲೆಯನ್ನು ನಾಶಮಾಡುತ್ತಾ ಬಂದರೆ, ಅದರ ಪರಿಣಾಮವೇ ಆಗಿ ಅದಕ್ಕೆ ಪ್ರಕ್ರಿಯೆಯಾಗಿ

ಮನುಷ್ಯನ ಚಿತ್ತ ಸ್ವಾಸ್ಥ್ಯವು ತನ್ನ ನೆಮ್ಮದಿಯನ್ನು ಕಳೆದುಕೊಳ್ಳುವುದರೊಂದಿಗೆ ಇಡೀ ಸಮಾಜದ ಮೇರೆ ತನ್ನ ಗೊಂದಲಗೊಂಡ ಮನಸ್ಸಿನ ಸ್ಥಿತಿಯಿಂದಾಗಿ ತನ್ನದೇ ಚಾಪನ್ನು ಉಂಟುಮಾಡುತ್ತದೆ.

ಸರಕಾರ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಆದರೆ ಇಂತಹ ಯೋಜನೆಗಳು ಫಲಪ್ರದವಾಗಿ ಸಫಲವಾಗದಿರುವುದಕ್ಕೆ ನಾನಾ ಕಾರಣಗಳಿವೆ. ಇಂತಹ ವೈಫಲ್ಯಗಳನ್ನು 'ಕಿರಗೂರಿನ ಗಯ್ಯಾಳಿಗಳು' ಕಥೆಯಲ್ಲಿ ಗಮನಿಸಬಹುದು. ಗ್ರಾಮಸೇವಕ ಶಂಕ್ರಪ್ಪ, ಅಪ್ರಾಮಾಣಿಕ, ಕರ್ತವ್ಯ ನಿಷ್ಠೆ ಇಲ್ಲದ ಈತ ಗ್ರಾಮೀಣ ಕೃಷಿಕರಿಗೆ ಸರಕಾರ ಸವಲತ್ತುಗಳನ್ನು ಒದಗಿಸುವ ವಸ್ತುಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಾನೆ. ಮೇಲಧಿಕಾರಿಗಳ ಬಗ್ಗೆ ಭಯಹುಟ್ಟಿಸಿ ತನ್ನ ವಿರುದ್ಧ ದೂರು ನೀಡದಂತೆ ಜಾಗ್ರತೆವಹಿಸುತ್ತಾನೆ. ಊರಿನವರ ಮುಗ್ಧತೆ, ಅಜ್ಞಾನಗಳನ್ನು ದುರುಪಯೋಗಪಡಿಸಿಕೊಂಡು ಸೇಂದಿ ಅಂಗಡಿ ತೆರೆದು ಶಾರೀರಿಕ ಆರೋಗ್ಯವನ್ನು ಕೆಡಿಸುವುದೂ ಅಲ್ಲದೆ, ಜಾತೀಯತೆಯ ವಿಷಬೀಜವನ್ನು ಬಿತ್ತುತ್ತಾನೆ. ಸರಕಾರ ಹಾಗೂ ರೈತಾಪಿ ವರ್ಗದ ನಡುವೆ ಸೂಕ್ತ ಸಂಪರ್ಕ ಹಾಗೂ ಸಂವಹನ ಇಲ್ಲವಾದಾಗ ಎಂತಹ ಅವಘಡಗಳು ನಡೆಯುತ್ತದೆ ಎನ್ನುವುದಕ್ಕೆ 'ಕೃಷಿ ಪ್ರಾತ್ಯಕ್ಷಿಕೆ'ಯ ಸಂದರ್ಭ ಸಾಕ್ಷಿಯಾಗಿದೆ. ಸಾವಯವ ಕೃಷಿಯನ್ನು ಪ್ರಾಯೋಗಿಕವಾಗಿ ನಡೆಸದೆ ರಾಸಾಯನಿಕ ಗೊಬ್ಬರವನ್ನು ಬಳಸಿ ಬೆಳೆದ ಗದ್ದೆಗೆ ಫಲಕವನ್ನಿಟ್ಟು ಊರಿನ ರೈತರನ್ನು ಸರಕಾರಿ ಅಧಿಕಾರಿಗಳನ್ನು ಬೆಸ್ತುಬೀಳಿಸುತ್ತಾನೆ. ಕೃಷಿ ಹಾಗೂ ಕಂದಾಯ ಇಲಾಖೆಯ ನೌಕರರ ಕಥೆ ಇದಾದರೆ ಸಮಾಜದ ಶಾಂತಿ ರಕ್ಷಣೆಗಾಗಿ ಮೀಸಲಾದ ಪೊಲೀಸ್ ಇಲಾಖೆಯಲ್ಲಿನ ಅವ್ಯವಸ್ಥೆ, ಅಮಾನುಷ ವರ್ತನೆ, ಕಿರಗೂರಿನ ಗೃಹಸ್ಥರ ಪಾಲಿಗೆ ಆಘಾತವನ್ನು ತಂದೊಡ್ಡಿದೆ.

ಆಧುನಿಕ ಬೇಸಾಯದ ಪ್ರಾತ್ಯಕ್ಷಿಕೆಯ ವೈಫಲ್ಯಕ್ಕೆ ಸ್ವತಃ ಶಂಕರನೇ ಕಾರಣನಾಗಿದ್ದರೂ ಕರಿಯ ಹೊಲೆಯನ ಗದ್ದೆಯಲ್ಲಿ ಪ್ರಯೋಗಿಸಿದ ಬೇಸಾಯವನ್ನು ಊರಿನ ಬಿಲ್ಲವ ಹಾಗೂ ಒಕ್ಕಲಿಗರು ದನಬಿಟ್ಟು, ನೀರುಬಿಡದೆ ನಾಶಮಾಡಿದ್ದಾರೆ ಎಂದು ಶಂಕ್ರಪ್ಪ ಜಾತಿವೈಷಮ್ಯದ ವಿಷಬೀಜವನ್ನು ಬಿತ್ತಿದ್ದಾನೆ. ಇದೇ ಕಾರಣವನ್ನು ಮುಂದಿಟ್ಟು ಜಾತಿನಿಂದನೆ ನೆಪದಲ್ಲಿ ಕಿರಗೂರಿನ ಅನೇಕ ಗೃಹಸ್ಥರನ್ನು ಹೊಲಸು ನಾರುವ ಲಾಕರಿನಲ್ಲಿ ಕೂಡಿಹಾಕುತ್ತಾರೆ. ಉಚ್ಚೆ-ಪಾಯಿಖಾನೆ, ಸೊಳ್ಳೆ-ಹೆಗ್ಗಣಗಳ ಸಾಂಗತ್ಯದಲ್ಲಿ ಕೇವಲ ಲಂಗೋಟಿಯಲ್ಲಿ ಇಡೀ ರಾತ್ರಿ ಕಾಲ ಕಳೆಯಬೇಕಾದ ದುರ್ಗತಿಯೊದಗುತ್ತದೆ. "ಸರ್ಕಾರ ಮನಸ್ಸು ಮಾಡಿದರೆ ಯಾರ್‍ನ ಬೇಕಾದರೂ ಜೈಲಿಗೆ ಹಾಕಬಹುದು ಎಂದು ಕಿರಗೂರಿನ ಅಸಹಾಯಕ ಗೃಹಸ್ಥರು ಮಾತಾಡಿಕೊಳ್ಳುವಲ್ಲಿ ಸರ್ಕಾರದ ಕಾನೂನಿನ ಬಗ್ಗೆ ಅಜ್ಞಾನವಿದೆ. ತಾವು ಏನು ಅಪರಾಧ ಮಾಡಿದ್ದೇವೆ? ನಮ್ಮನ್ನು ಏಕೆ ಲಾಕಪ್ಪಿಗೆ ಹಾಕಿದ್ದಾರೆ ಎಂಬ ವಿವರವೂ ತಿಳಿಯದೆ ನರಳುತ್ತಾರೆ. ಒಂದುದಿವಸ ಕಳೆದ ನಂತರ ಕುಡುಕ ಇನ್ಸ್‌ಪೆಕ್ಟರ್ ಏನ್ರೋ ಜಾತಿ ಜಗಳ ತಕ್ಕೊಂಡಿದ್ದಿರಾ? ಊರಲ್ಲಿ ಇನ್ನೊಂದು

ಸಾರಿ ಹೊಲೇರ ತಂಟಗೇನಾದ್ರೂ ಹೋದರೆ ಭೂತ ಬಿಡಿಸ್ತೀನಿ ನಿಮಗೆ ಅಂಟಚಬಿಲಿಟಿ ಕೇಸಾಕಿ ಒಂದು ವರ್ಷ ಜೇಲಿಗೆ ಕಳಿಸಿಬಿಡ್ತೀನಿ ಹುಷಾರ್".[೬೫] ಎಂದು ಎಚ್ಚರಿಸಿದಾಗಲೇ ಬಂಧಿಗಳಿಗೆ ಸಮಸ್ಯೆಯ ಮೂಲ ಅರ್ಥವಾಗಿದ್ದು. ಆದರೆ ಆ ಸದ್ಗೃಹಸ್ಥರು ಹೊಲೆಯರು ಹಾಗೂ ಅವರ ಹೀಗಳಿಕೆಗೆ ಹೋದವರಲ್ಲಿ ಕೇವಲ ಗ್ರಾಮಸೇವಕನ ಹೇಳಿಕೆಯನ್ನು ಕೇಳಿ ಪೋಲಿಸರು ನಡೆಸುವ ದೌರ್ಜನ್ಯ ಅಮಾನವೀಯವಾಗಿದೆ.

ಪೋಲೀಸ್ ಅಧಿಕಾರಿಗಳ ದುರ್ವರ್ತನೆ, ಕುಡಿತದ ಅಮಲಿನಲ್ಲಿ ಕೆಲಸ ನಿರ್ವಹಿಸುವುದು ಅನಾರೋಗ್ಯಕರವಾದ ವಾತಾವರಣ, ಮುಗ್ಧ ಹಾಗೂ ಅಜ್ಞಾನಿಗಳಾದ ಗ್ರಾಮೀಣರಿಗೆ ನೀಡುವ ಕಿರುಕುಳಗಳು ಸಮಕಾಲೀನ ಶಾಂತಿ ಹಾಗೂ ಕಾನೂನು ವ್ಯವಸ್ಥೆಗಳ ಮೇಲೆ ಅಪನಂಬಿಕೆಗಳನ್ನು ಸೃಷ್ಟಿಸುತ್ತಿರುವುದನ್ನು ನಾವು ಗಮನಿಸಬಹುದಾಗಿದೆ. ಅದೇ ರೀತಿ ಕಿರಗೂರಿನ ಆರೋಗ್ಯ ಇಲಾಖೆಯಲ್ಲಿಯೂ ಮೋಸವಾಗುತ್ತದೆ. ಜನರಿಗೆ ತೇಜಸ್ವಿಯವರು ಪೋಲೀಸ್ ವ್ಯವಸ್ಥೆ, ಆರೋಗ್ಯ ವ್ಯವಸ್ಥೆಗಳಲ್ಲಿ ಇರುವ ಅನಾರೋಗ್ಯಕರವಾದ ವಿವರಗಳನ್ನು ಈ ಕಥೆಯಲ್ಲಿ ಹಾಸ್ಯಧಾಟಿಯಲ್ಲಿ ಚಿತ್ರಿಸಿದ್ದಾರೆ. ವ್ಯಕ್ತಿಯ ಹಾಗೂ ಸಮಾಜದ ನಾಗರಿಕ ಅಭಿವೃದ್ಧಿಯಲ್ಲಿ ಅತಿಪ್ರಮುಖ ಪಾತ್ರವನ್ನು ವಹಿಸುವ ಈ ಎರಡೂ ವ್ಯವಸ್ಥೆಗಳು ಹಣ ಕೀಳುವ ಹಾಗೂ ದೌರ್ಜನ್ಯವೆಸಗುವುದರಲ್ಲಿ ಮಗ್ನವಾಗಿದೆ. ಜೀವವನ್ನು ರಕ್ಷಿಸುವ ಹಾಗೂ ವ್ಯವಸ್ಥೆಯನ್ನು ಶಾಂತಿಯಿಂದ ಉಳಿಸಬೇಕಾದ ಈ ಎರಡೂ ಇಲಾಖೆಗಳು ಜೀವನಾಶ ಕ್ರಿಯೆಯಲ್ಲಿ ತೊಡಗಿವೆ. ಜೀವನ್ಮುಖಿಯಾಗದ ಹಣದ ದುರಾಶೆಗೆ ಒಳಗಾಗಿ ಅನಕ್ಷರಸ್ಥರನ್ನು ಶೋಷಿಸುವುದು ನಮ್ಮ ಸಮಾಜದ ಸಾಮಾನ್ಯವಿವರಗಳೇ ಆಗಿವೆ. ಸರಕಾರದ ಜನೋಪಯೋಗಿ ವ್ಯವಸ್ಥೆಗಳು ಹಾಗೂ ಯೋಜನೆಗಳು ಕೇವಲ ಹಣ ಹಾಗೂ ಶಿಕ್ಷಣ ಉಳ್ಳವರ ಪಾಲಾಗಿ ಹೋಗುತ್ತಿರುವ ದುರಂತವನ್ನು ಕಿರಗೂರಿನಲ್ಲಿ ನಡೆಯುವ ಪ್ರಸಂಗಗಳು ಪ್ರತಿಬಿಂಬಿಸುತ್ತವೆ. ಇದು ಆಧುನಿಕತೆಯಿಂದಾದ ಸಂಘರ್ಷವೆಂದು ಗುರುತಿಸಬಹುದು.

'ಹುಲಿಯೂರಿನ ಸರಹದ್ದು' ಕಥಾಸಂಕಲನದಲ್ಲಿನ 'ಪಂಜ್ರೋಳ್ಳಿ ಪಿಶಾಚಿಯ ಸವಾಲು' ಕತೆ ವಿಭಿನ್ನ ದಾರಿಯಲ್ಲಿದೆ. ವಿದ್ಯಾರ್ಥಿ ಜೀವನದಲ್ಲಿನ ಮೋಜಿನ ಪ್ರಸಂಗ ಈ ಕಥೆಯವಸ್ತು ಪರೀಕ್ಷಾ ಸಮಯದಲ್ಲಿ ನಿದ್ದೆಗೆಟ್ಟು ಓದುವ ವಿದ್ಯಾರ್ಥಿಗಳ ಗುಂಪು ಕಾಫಿ ಕದಿಯಲು ಹೋಗುವ ಸಂದರ್ಭದಲ್ಲಿ ಅನುಭವಿಸುವ ಪರಿಪಾಟಲು ಹಾಸ್ಯಮಿಶ್ರಿತ ಧಾಟಿಯಲ್ಲಿದೆ. ಗೆಳೆಯರ ಗುಂಪಿನೊಂದಿಗೆ ತಮ್ಮ ಅಜ್ಜಿಯ ಮನೆಗೆ ಹೋಗಿ ಮಧ್ಯರಾತ್ರಿಯಲ್ಲಿ ಕಾಫಿ ಡಿಕಾಕ್ಷನನ್ನು ನಿರೂಪಕರು ಕದ್ದು ತರುತ್ತಾರೆ. ರಾತ್ರಿಯ ಯಮಚಳಿ ಸಾವಿನಂತಹ ಮೌನ, ತುರುಗಜ್ಜಿಯಂತಹ ಮಳೆಗಳ ಮಧ್ಯೆ ಬೀದಿಯ ಗಡವನಾಯಿ, ಮನೆನಾಯಿ ಕೆಲಸದ ಆಳು ಇವರೆಲ್ಲರ ನಡುವೆ

---

೬೫. ಕೆ.ಪಿ.ಪೂರ್ಣಚಂದ್ರ ತೇಜಸ್ವಿ 'ಕಿರಗೂರಿನ ಗಯ್ಯಾಳಿಗಳು', ಪುಟ. ೩೪, ೨೦೦೫.

ಪೇಚಿಗೆ ಸಿಲುಕಿ ಅಲ್ಲೇ ಇದ್ದ ಡಬ್ಬವೊಂದಕ್ಕೆ ಡಿಕಾಕ್ಷನ್ ಸುರಿದುಕೊಂಡು ತರುತ್ತಾರೆ. ಬೆಳಿಗ್ಗೆ ಅಜ್ಜಿ ಮನೆಯಲ್ಲಿ ತಾವು ತಂದ ಡಬ್ಬ ಕಕ್ಕಸ್ಸಿಗೆ ನೀರುತೆಗೆದುಕೊಂಡು ಹೋಗಿದ್ದು ಎಂದು ತಿಳಿದಾಗ ಮೂಡುವ ಅಸಹ್ಯಭಾವ ಗೆಳೆಯರಲ್ಲಿ ಸೃಷ್ಟಿಸುವ ಭಾವನೆಗಳು ಈ ಕಥೆಯಲ್ಲಿವೆ. ಕೆಲಸಗಾರರು ಆಗಾಗ್ಗೆ ಡಬ್ಬವನ್ನು ಕೇಳಿಪಡೆಯುತ್ತಿದ್ದರೂ ಅಲ್ಲದೆ ಕದ್ದೊಯ್ಯುತ್ತಿದ್ದರು. ಅವರ ಹಾವಳಿಗಾಗಿ ಡಬ್ಬಿ ಕದ್ದವರಿಗೆ ಶಾಸ್ತಿಮಾಡಲು ಅಜ್ಜಿ ಪಂಜ್ರೊಳ್ಳಿ ಪಿಶಾಚಿಗೆ ಹರಕೆ ಕಟ್ಟುತ್ತೇನೆ ಎಂದು ಹೆದರಿಸುತ್ತಾರೆ. ಉಡಾಫೆ ಸ್ವಭಾವವನ್ನು ಕಡಿಮೆಮಾಡಿ ಜವಾಬ್ದಾರಿ ಜಾಸ್ತಿಮಾಡಲು ಕಳ್ಳತನ, ಸುಳ್ಳುಗಳಂತಹ ಕೆಟ್ಟ ಹವ್ಯಾಸಗಳು ಸೃಷ್ಟಿಯಾಗದೇ ಇರಲಿ ಎಂದು ದೇವರ ಭಯ ಹುಟ್ಟಿಸುವುದು ಹರಕೆಯ ಉದ್ದೇಶವಾಗದೆ ಧರ್ಮದ ಮೂಲಕ ನೈತಿಕತೆಯನ್ನು ಮೂಡಿಸುವುದು ಗ್ರಾಮೀಣ ಜನತೆಯ ಪರಿಪಾಠವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶ್ರೀಮಂಜುನಾಥನ ಹರಕೆಗಾಗಿ ಎಂದು ತೋಟದ ಅಡಿಕೆ ಗೇರು-ತೆಂಗುಗಳನ್ನು ಕಾಪಿಡುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ.

ಸ್ತ್ರೀ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ಅಡುಗೆ ಮನೆ ಪುರುಷನ ಸ್ವಾಧೀನಕ್ಕೆ ಬಂದಾಗ ಸೃಷ್ಟಿಯಾಗುವ ಪೇಚಿನ ಪ್ರಸಂಗಗಳು 'ಪಾಕಕ್ರಾಂತಿ'ಯಲ್ಲಿದೆ. ಅಡುಗೆಮನೆ ಸಾಹಿತ್ಯ ಎಂದು ಸ್ತ್ರೀ ಸಾಹಿತ್ಯವನ್ನು ಗುರುತಿಸುತ್ತಿದ್ದ ವಿಮರ್ಶಕರ ಪ್ರಜ್ಞೆಗೆ ಸದಾ ಅಡುಗೆ ಹೆಣ್ಣುಗಳೆಲ್ಲಾ ಅನ್ಯಘಟಕಗಳೇ ಆಗಿವೆ. ಆದರೆ ಪುರುಷಸಂಹಿತೆಯ ನೀತಿಯಿಂದಲೇ ಸ್ತ್ರೀ ಸಮೂಹವನ್ನು ಗಮನಿಸುವ ಪುರುಷಪ್ರಜ್ಞೆಗೆ 'ಪಾಕಕ್ರಾಂತಿ' ವಿಭಿನ್ನ ಆಯಾಮವನ್ನು ನೀಡಿದ ಜೀವನಾನುಭವದ ದ್ರವ್ಯವನ್ನೇ ತಮ್ಮ ಸಾಹಿತ್ಯದ ಮೂಲವನ್ನಾಗಿರಿಸಿಕೊಂಡಿರುವ ಕಥೆಗಾರರು ಕೆಲವೆಲ್ಲಾ ಮನುಷ್ಯನಿಗೆ ಅನುಭವಿಸಿದ ಮೇಲೆ ಅರ್ಥವಾಗುವುದು ಎಂಬ ಅನುಭವ ಸಿದ್ಧಾಂತಕ್ಕೆ ಪ್ರಾಶಸ್ತ್ಯ ನೀಡುತ್ತಾ ಕಥೆ ಆರಂಭಿಸುತ್ತಾರೆ.

ಪತ್ನಿಯ ಗೈರುಹಾಜರಿಯಲ್ಲಿ ಅಡುಗೆಮನೆಯ ಸ್ವಾತಂತ್ರ್ಯವನ್ನು ಅನುಭವಿಸಲು ಹೊರಡುವ ಲೇಖಕರು ಪಡೆಯುವ ವಿಶಿಷ್ಟ ಅನುಭವಗಳನ್ನು 'ಪಾಕಕ್ರಾಂತಿ' ವಿವರಿಸುತ್ತದೆ. ಹಾಲು ಕಾಯಿಸಲು ಬೇಕಾಗುವ ತಾಳ್ಮೆ ಉಕ್ಕಿದರೆ ಆಗುವ ಫಜೀತಿ, ಪ್ರಜರ್ ಕುಕ್ಕರ್‌ನ ಬಳಕೆ ಇವೆಲ್ಲಾ ಪ್ರಸಂಗಗಳಿಂದಾಗಿ ಅಡುಗೆ ಕಲಾಪ್ರಕಾರವೋ, ವಿಜ್ಞಾನ ವಿಭಾಗಕ್ಕೆ ಸೇರಬೇಕೋ ಎಂಬ ದ್ವಂದ್ವ ಕಾಡುತ್ತದೆ. ಪ್ರೆಷರ್‌ಕುಕ್ಕರ್‌ನ ನೀರಿನ ಅಳತೆ ನಿರೂಪಕರ ಲೆಕ್ಕಾಚಾರಕ್ಕೆ ಬಾರದೆ ಬ್ಲಾಸ್ಟಾಗುತ್ತದೆ. ಇದೇ ಸಂದರ್ಭಕ್ಕೆ ತೋಟಕ್ಕೆ ಎಲ್.ಟಿ.ಟಿ.ಇ.ಗೆ ಸಂಬಂಧಪಟ್ಟ ವ್ಯಕ್ತಿಯೊಬ್ಬ ಆಗಮಿಸಿ ಅಡಗಿಕೊಂಡಿದ್ದಾನೆ ಎಂಬ ಗುಮಾನಿಯಿಂದ ಪೊಲೀಸರು ಬಂದಿರುತ್ತಾರೆ. ಪೊಲೀಸರ ವಿಚಾರಣೆಗೆ ಸಂದರ್ಭದಲ್ಲಿ ನಿರೂಪಕರು ಪದೇ ಪದೇ ಕೈ ಗಡಿಯಾರ ನೋಡುವುದು. ಅಡುಗೆ ಮನೆಯತ್ತ ಕಣ್ಣಾಡಿಸುವುದು ಇವೆಲ್ಲಾ ನಡೆದುಕುಕ್ಕರ್

ಅವಾಂತರವೆಸಗುತ್ತದೆ. ನೆಲದ ರೆಡ್ ಆಕ್ಸೈಡ್ ಕುಕ್ಕರ್‌ನ ಬಿಸಿಗೆ ಕರಗಿ ಕೆಂಪಗಿನ ರಕ್ತದಂತೆ ಹರಿಯುತ್ತಿರುವ ದೃಶ್ಯ – ಬ್ಲಾಸ್ಟ್ ಆದ ಶಬ್ದಗಳೆಲ್ಲಾ ಗುಮಾನಿಗೆ ಪುಷ್ಟಿ ನೀಡಿದರೂ ಪರಿಶೀಲನೆಯ ನಂತರ ಶಬ್ದಕೋಶ ಉಗ್ರವಾದಿಗಳಿಂದಾದ್ದಲ್ಲ, ಪಾಕಕ್ರಾಂತಿಯ ಪರಿಣಾಮ ಎಂದು ತಿಳಿದು ಬರುತ್ತದೆ.

ಮನುಷ್ಯ ಸಂಬಂಧಗಳು ಗಟ್ಟಿಗೊಳ್ಳುವಿಕೆ ಅಡುಗೆ ಮನೆಯಿಂದ ಅದ್ಭುತ ವ್ಯವಸ್ಥೆಯಿಂದ ಆರಂಭವಾಗುತ್ತದೆ. ಹೆಂಗಸರು ಮಾಡುವ ಅಡುಗೆಯ ಬಗ್ಗೆ ದಿವ್ಯ ನಿರ್ಲಕ್ಷ್ಯ ತೋರುವ ಗಂಡಸರಿಗೆ ಹೆಣ್ಣಿನ ಶ್ರಮ, ತಾಳ್ಮೆ, ಅಚ್ಚುಕಟ್ಟುತನ, ಅಪಾರ ವಾತ್ಸಲ್ಯಗಳ ಪರಿಚಯವಾಗಬೇಕಾದರೆ ಇಂತಹ ಪಾಕ ಅನುಭವ ಸ್ವಯಂ ವೇದ್ಯವಾಗಬೇಕು. ಅಡುಗೆಮನೆ ಕುಟುಂಬದ ಶಾರೀರಿಕ – ಮಾನಸಿಕ ಸ್ವಾಸ್ಥ್ಯವನ್ನು ಹೆಣ್ಣಿನ ಮೂಲಕ ಕಾಪಾಡುತ್ತದೆ ಎಂಬ ಚಿತ್ರಣವನ್ನು ಈ ಕಥೆ ಕಟ್ಟಿಕೊಟ್ಟಿದೆ. ಕಥೆಯೊಳಗೆ ಹಲವು ಕಥೆಗಳನ್ನು ಬೆಸೆಯುವ ತಂತ್ರವನ್ನು ಅನುಸರಿಸುವ ತೇಜಸ್ವಿ ಅವರು ಸಮಕಾಲೀನವಾದ ಹಲವು ಸಾಮಾಜಿಕ ಅವ್ಯವಸ್ಥೆಗಳತ್ತ ಬೊಟ್ಟು ಮಾಡಿದ್ದಾರೆ. ಅಡುಗೆ ಮನೆಗೆ ನುಗ್ಗಿದ ಇರುವೆ ಕಾಟ ತಪ್ಪಿಸಲು ಸೀಮೆಣ್ಣೆಗಾಗಿ ಬಂದವರಿಗೆ ರೇಷನ್‌ಕಾರ್ಡ್, ಪೋಟೋ, ಅರ್ಜಿ, ಪಂಚಾಯಿತಿಗಳ ದೃಢೀಕರಣ, ಕೋರ್ಟ್‌ನ ಅಫಿಡವಿಟ್ಟು ಇತ್ಯಾದಿಗಳ ಪಟ್ಟಿಯಿಂದ ಕಥೆಗಾರರು ಪಾಕಕ್ರಾಂತಿಯ ಕಬಂಧ ಬಾಹುಗಳ ವ್ಯಾಪ್ತಿಯನ್ನು ಅಚ್ಚರಿಯಿಂದ ಗಮನಿಸಿದ್ದಾರೆ.

೫.೪. ಪರಿಸರ ಮತ್ತು ಮಾನವ ಸಮಾಜದ ಅಂತರ್‌ಸಂಬಂಧ

ಸಾಹಿತ್ಯ ನಿರ್ಮಾಣಕ್ಕೆ ಅನಂತವಸ್ತು ವೈವಿಧ್ಯತೆಗಳು ಪ್ರಭಾವಬೀರುತ್ತವೆ. ಮನುಷ್ಯನ ಆಸಕ್ತಿಯ ಕೇಂದ್ರಗಳಾಗಿರುವ ಪರಿಸರ, ಸಮಾಜ, ತಂತ್ರಜ್ಞಾನ ಮುಂತಾದವು ದಿನನಿತ್ಯ ಹೊಸ ಅನುಭವಗಳನ್ನು ಒದಗಿಸುತ್ತವೆ. ಸಮಾಜಕ್ಕೆ ಸ್ಪಂದಿಸದ ಮತ್ತು ಪರಿಸರ ಪ್ರಾಕೃತಿಕ ಸೌಂದರ್ಯತೆಗೆ ಮನಸೋಲದವರಿಲ್ಲ. ಅವು ಅನಂತ ವಿಸ್ಮಯ ನಿಗೂಢತೆಗಳ ಆಗರ ನೋಡುವ ಮನಸ್ಸಿದ್ದರೆ ಪ್ರತಿಯೊಂದರಲ್ಲೂ ಸೌಂದರ್ಯದ ಅನಂತತೆಯ ರಾಶಿಯನ್ನು ಗುರುತಿಸಬಹುದಾಗುತ್ತದೆ. ಸಮಾಜ ಮತ್ತು ಪರಿಸರಗಳು ಒಂದನ್ನೊಂದು ಪರಸ್ಪರ ಬೆರೆತ ಅವಿನಾಭವ ನಂಟಿದೆ. ಮನುಷ್ಯ ಸಮಾಜಜೀವಿ, ಸಂಘಜೀವಿ, ಮನುಷ್ಯ ಸಮಾಜವು ಪ್ರತಿಯೊಂದಕ್ಕೂ ಪರಿಸರವನ್ನು ಅವಲಂಬಿಸಿದ್ದು ಅದರ ಸಾಧಕಬಾಧಕಗಳೊಂದಿಗೆ ಆತನ ಜೀವನ ನಿರ್ಧಾರವಾಗುತ್ತದೆ. ಮನುಷ್ಯ ಮನುಷ್ಯರನ್ನು ಶೋಷಿಸುವಂತೆ, ಮನುಷ್ಯ ಪರಿಸರವನ್ನು ತನ್ನ ಸ್ವಾರ್ಥಕ್ಕಾಗಿ ಹಾಳುಮಾಡುತ್ತಿರುವುದು ವಿಷಾದನೀಯ. ಪರಿಸರ ಮತ್ತು ಸಮಾಜದಲ್ಲಿ ಹಲವು ರೀತಿಯ ಕುತೂಹಲಗಳಿಂದ ಅನುಭವಗಳು ದಕ್ಕುವಂತೆ ಭಯಾನಕತೆಯು ಆವರಿಸಿರುತ್ತದೆ. ಸಮಾಜದಲ್ಲಿ

ವ್ಯಕ್ತಿ, ವ್ಯಕ್ತಿಗಳ ನಡುವಿನ ಅಸಮಾಧಾನ ಸ್ವಾರ್ಥಕ್ಕಾಗಿ ಕ್ರೌರ್ಯಗಳು ನಡೆಯುವಂತೆ ಪ್ರಕೃತಿಯಲ್ಲಿ ಕಾಡುಪ್ರಾಣಿಗಳ ಹಾವಳಿ ಮಳೆ, ದಟ್ಟಮೌನವೂ ವ್ಯಕ್ತಿಗಳಿಗೆ ಭಯವನ್ನು ಸೃಷ್ಟಿಸುತ್ತದೆ. ಸಾಹಿತಿಗಳಿಗೆ ಮೂಲಭೂತವಾಗಿ ಪ್ರೇರಣೆ ನೀಡುವ ಕಾಡು, ಪರಿಸರಗಳು ಭಿನ್ನರೀತಿಯಲ್ಲಿ ಅನಾವರಣಗೊಳ್ಳುತ್ತವೆ.

ತೇಜಸ್ವಿಯವರ ಕಾದಂಬರಿಗಳು ಮಲೆನಾಡಿನ ಪರಿಸರ ಸಮಾಜ ಜನಜೀವನದೊಂದಿಗೆ ಪ್ರಾಣಿಗಳು, ಪಕ್ಷಿಗಳು ಮನುಷ್ಯನೊಂದಿಗೆ ಹೇಗೆ ಅಂತರ್ ಸಂಬಂಧವನ್ನು ಹೊಂದಿವೆ ಎಂಬುದನ್ನು ಕಾಣಬಹುದು. ಪರಿಸರದ ಕಾಡು, ಗಿಡ, ಪ್ರಾಣಿ, ಪಕ್ಷಿಗಳು ಅವುಗಳ ವಿಭಿನ್ನತೆ, ಶ್ರೇಷ್ಠತೆ ಬಗ್ಗೆ ವಿವರಣೆ ನೀಡುತ್ತಾ ಬರೆಯುತ್ತಾರೆ. ಮಲೆನಾಡಿಗರು ಬಿಡುವಿನ ವೇಳೆಯಲ್ಲಿ ಹವ್ಯಾಸ ರೀತಿಯಲ್ಲಿ ವಿವಿಧ ರೀತಿಯ ಬೇಟೆ ಆಡುವುದು. ಸಾಮಾನ್ಯ ಜನತೆ ಕೆಲವರಿಗೆ ಹವ್ಯಾಸಕೂಡ ಹೌದು. ಲೇಖಕರು ಇವೆಲ್ಲವನ್ನು ದಾಖಲಿಸುತ್ತಾರೆ. ಮುಂದುವರೆದು, ಶಿಕಾರಿಗಾಗಿ ಮನೆಯಲ್ಲಿ ವಿಶಿಷ್ಟ ರೀತಿಯ ನಾಯಿಗಳನ್ನು ಸಾಕಿರುತ್ತಾರೆ. ಆ ನಾಯಿಗಳಿಗೆ ಹೆಸರುಗಳನ್ನು ಸಹ ನೀಡುತ್ತಾ, ತಮ್ಮ ಕುಟುಂಬದ ಸದಸ್ಯರಂತೆ ನೋಡಿಕೊಳ್ಳುತ್ತಾರೆ. ಜೊತೆಗೆ ಹೈನುಗಾರಿಕೆ, ಕುಕ್ಕಟ, ಮೀನು ಇತ್ಯಾದಿ ವೃತ್ತಿಯಲ್ಲಿ ಮಲೆನಾಡಿಗರು ತೊಡಗಿರುವುದನ್ನು ದಾಖಲಿಸುವುದನ್ನು ಗಮನಿಸಬಹುದು.

ತೇಜಸ್ವಿಯವರ ಮೊದಲ ಕಾದಂಬರಿ 'ಕಾಡು ಮತ್ತು ಕ್ರೌರ್ಯ' ಕೃತಿಯಲ್ಲಿ ವರ್ಗಸಂಘರ್ಷದ ಸ್ಪಷ್ಟನೆಲೆಗಳನ್ನು ಗುರುತಿಸಬಹುದಾಗಿದೆ. ನವ್ಯದ ಉಚ್ಛ್ರಾಯ ಸ್ಥಿತಿಯಲ್ಲಿ ರಚಿತವಾಗಿದ್ದರೂ ಪ್ರಗತಿಶೀಲರ ಧೋರಣೆಗಳನ್ನು ಅತ್ಯಂತ ಸಂವೇದನಾತ್ಮಕವಾಗಿ ದಾಖಲಿಸಿದ್ದಾರೆ. ಮಲೆನಾಡಿನ ಸಾಮಾಜಿಕ ಚಿತ್ರಣದೊಂದಿಗೆ ಅಲ್ಲಿನ ಜನಜೀವನ, ವಿಶಿಷ್ಟತೆಗಳನ್ನು ದಾಖಲಿಸುವ ಈ ಕಾದಂಬರಿಯಲ್ಲಿ ವರ್ಗಸಂಘರ್ಷದ ನೆಲೆಗಳು ಢಾಳಾಗಿ ಕಾಣಸಿಗುತ್ತವೆ. ಜಮೀನ್ದಾರಿ ವರ್ಗದ ಅಟ್ಟಹಾಸ ಕಾರ್ಮಿಕರ ದಟ್ಟದಾರಿದ್ರ, ಅಸಹಾಯಕತೆಗಳು ಸಾಮಾನ್ಯವೆಂಬಂತೆ ಬಂದಿವೆ. "ಕಲ್ಮನೆಯಲ್ಲಿ ಕ್ರೌರ್ಯ ಇನ್ನೂ ಸುಸೂಕ್ಷ್ಮವಾಗಿ ಹೆಣೆದುಕೊಂಡಿತ್ತು. ಗೇಣಿ ಬರಲಿಲ್ಲವೆಂದು ಕಟ್ಟಿಹಾಕಿಸಿ ಹೊಡೆದರಂತೆ, ಭತ್ತ ಕದಿಯುವನೆಂದು ಬರೆ ಎಳೆದರಂತೆ, ಚೆಂದಳ್ಳಿ ಹೆಣ್ಣನ್ನು ತಮಗೆ ಬೇಕಾದ ಆಳಿಗೆ ಜುಲುಮೆಯಿಂದ ಮದುವೆ ಮಾಡಿ ತಮ್ಮ ಮನೆಯಲ್ಲೇ ಇಟ್ಟುಕೊಂಡರಂತೆ. ಹೀಗೆ ಗೌಡರ ದರಬಾರಿನ ಪರಾಕುಗಳು ಅಸಂಖ್ಯವಾಗಿದ್ದವು. ಆದರೆ ಯಾರಿಗೂ ಇದು ತಪ್ಪಿರಲಿಲ್ಲ ಈ ಕ್ರೌರ್ಯ"[೬೬] ಈ ರೀತಿಯ ದಬ್ಬಾಳಿಕೆಯ ನೆಲೆಗಳು ಕಾದಂಬರಿಯಲ್ಲಿ ಧ್ವನಿಸುತ್ತಾ ಸಾಗುತ್ತದೆ. ಮಲೆನಾಡಿನ ಸಾಮಾಜಿಕ ಬದುಕಿನಲ್ಲಿ ಶೋಷಣೆ

---

೬೬. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, 'ಕಾಡು ಮತ್ತು ಕ್ರೌರ್ಯ', ಪುಟ. ೦೨, ೨೦೦೫.

ವಿರುದ್ಧ ಧ್ವನಿಯೆತ್ತುವ ಸಂಭವಗಳು ಅತ್ಯಂತ ಕಡಿಮೆ ಮಟ್ಟದಲ್ಲಿ ಗೋಚರಿಸುತ್ತವೆ. ವ್ಯವಸ್ಥೆಯೊಂದಿಗೆ ಹೊಂದಿಕೊಂಡು ಹೋಗುವ ಸ್ವಭಾವ ಕೆಳವರ್ಗದ ಜನರ ಮನೋಭಾವವಾಗಿದ್ದು ಗೌಡರ ಬಗ್ಗೆ ಶ್ರದ್ಧೆ ಭಕ್ತಿಯಿದ್ದು ಅಂತರಾಳದಲ್ಲಿ ಅಶಾಂತಿಯಿದೆ. ತಮ್ಮ ಜೀತದಾಳುಗಳನ್ನು ಆರ್ಥಿಕವಾಗಿ ಅಥವಾ ಸಾಮಾಜಿಕವಾಗಿ ಶೋಷಿಸಿ ಅವರ ಮಕ್ಕಳನ್ನು ಜೀತದಾಳುಗಳಾಗಿ ನೇಮಿಸಿಕೊಳ್ಳುವ ಪರಿಪಾಠ ಸಾಮಾನ್ಯವೆಂಬಂತಿದೆ. ದೇವರು ಧರ್ಮದ ಹೆಸರಿನಲ್ಲಿ ಅವರನ್ನು ಶೋಷಿಸುವ ಸಾಮಾಜಿಕ ಸ್ಥಿತಿಗಳನ್ನು ಪಡೆಯದಂತೆ ಎಚ್ಚರವಹಿಸುವ ಮೇಲ್ವರ್ಗದವರು ಕೂಲಿಯಾಳುಗಳಿಗೆ ತಮ್ಮ ಸ್ಥಿತಿಗತಿಗಳು ಪೂರ್ವಜನ್ಮದ ಕರ್ಮವೆಂಬಂತೆ ಮನೋಭಾವ ಸೃಷ್ಟಿಸಿದ್ದಾರೆ.

ಮಲೆನಾಡಿನ ಬದುಕಿನಲ್ಲಿ ಮಾತ್ರವಲ್ಲದೆ ನಗರದ ಮುಂದುವರಿದ ನಾಗರಿಕ ಸಮಾಜದಲ್ಲಿಯೂ ವರ್ಗ ಅಂತರ ಇದ್ದು ಅದರ ಬಗ್ಗೆ ಕಾದಂಬರಿಯಲ್ಲಿ ವಿಸ್ತೃತ ಚರ್ಚೆ ನಡೆದಿದೆ. ತೀರ್ಥಹಳ್ಳಿ ಬಸ್‌ಸ್ಟ್ಯಾಂಡ್‌ನಲ್ಲಿ 'ಜಲ್ಮದಲ್ಲಿ ರಕ್ತವಿಲ್ಲ ನೋಡ್ರಿ...' ಎಂದು ಭಿಕ್ಷಾಟನೆ ಮಾಡುವವರನ್ನು ಗಮನಿಸಿದ ಸೋಮು ಮತ್ತು ರಾಮಯ್ಯ ಜನ್ಮದಲ್ಲಿ ರಕ್ತವಿರಬೇಕೆಂದು, ಜಲ್ಮದಲ್ಲಿ ರಕ್ತವಿಲ್ಲದೇ ಇವರ ಮೂಲಧನವೆಂದು ಮಾರ್ಮಿಕವಾಗಿ ವರ್ಗ ಅಂತರದ ಬಗ್ಗೆ ವ್ಯವಸ್ಥೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಾರೆ. ಹಾಗೆಯೇ ತನ್ನ ಬದುಕನ್ನು ವಿರೂಪಗೊಳಿಸಿ ಸಮಾಜದ ವಿರುದ್ಧ, ವಾಮಾಚಾರ, ನಿಸರ್ಗದ ಶಕ್ತಿಗಳನ್ನು ಬಳಸಿಕೊಂಡು ತನ್ನ ಕ್ರೋಧವನ್ನು ಹೊರಹಾಕುವಂತಹ ವಿಕೃತ ಮನಃಸ್ಥಿತಿಯ ವೆಂಕಟನಂತವರು ಕಾದಂಬರಿಯಲ್ಲಿ ಕಾಣಸಿಗುತ್ತಾರೆ. ಲಿಂಗ, ವೆಂಕು, ಕಲ್ಮನೆಯಿಂದ ಪಲಾಯನವಾಗುವುದರೊಂದಿಗೆ ಕಾದಂಬರಿ ಬದಲಾವಣೆಯ ಆಶಯಕ್ಕೆ ಸಾಗುತ್ತದೆ.

ತೇಜಸ್ವಿಯವರ ನವ್ಯ ಸಂವೇದನೆಯ 'ಸ್ವರೂಪ' ಕಿರುಕಾದಂಬರಿಯಲ್ಲಿ ಮಲೆನಾಡಿನ ಜಮೀನ್ದಾರಿ ಮತ್ತು ಶ್ರಮಿಕವರ್ಗದ ಪ್ರೀತಿವಿಶ್ವಾಸ ಭಾಂದವ್ಯಗಳ ಮಧ್ಯೆ ವರ್ಗ ಅಂತರವಿರುವುದನ್ನು ಸೂಕ್ಷ್ಮವಾಗಿ ವಿವರಿಸಿದ್ದಾರೆ. ಮಲೆನಾಡಿನ ಕೃಷಿಕ ಸಮಾಜದಲ್ಲಿ ಮಾಲಿಕ ಶ್ರಮಿಕ ವರ್ಗಗಳ ಮಧ್ಯೆ ಹಲವಾರು ಭಿನ್ನಾಭಿಪ್ರಾಯಗಳಿದ್ದರೂ ಹೊಂದಾಣಿಕೆ ಜೀವನ ಅನಿವಾರ್ಯವಾಗಿದ್ದು ಬದುಕಿನ ಅರ್ಥಕ್ಕಾಗಿ ಹವಣಿಸುತ್ತಾರೆ. ಮಾರ್ಕ್ಸ್‌ವಾದ ಸೋಷಿಯಲಿಸಂ ಅನ್ನು ಆರಾಧಿಸುವ ನಿರೂಪಕ ಶೋಷಣೆಯ ಹಲವು ಆಯಾಮಗಳನ್ನು ತಿಳಿಸುತ್ತಾನೆ. ಸಾಮಾಜಿಕ ಚಿಂತನೆಯ ದೃಷ್ಟಿಯಿಂದ ಶೋಷಣೆ ಗಂಭೀರ ವಿಷಯವಾಗಿದ್ದು ಕಾದಂಬರಿಯಲ್ಲಿ ಅನುಭವದಿಂದ ಮೂಡಿಬಂದ ಜ್ಞಾನವಾಗಿದೆ.

ದೇಶೀಯತೆ ಹಾಗೂ ನಗರೀಕರಣದ ನಡುವಿನ ದ್ವಂದ್ವವನ್ನು 'ನಿಗೂಢ ಮನುಷ್ಯರು' ಕಿರುಕಾದಂಬರಿಯು ಅನಾವರಣಗೊಳಿಸುತ್ತಾ ಸಾಮಾಜಿಕ ವಿಘಟನೆಗಳ ಮಧ್ಯೆಯೂ

ಸಂಬಂಧಗಳ ಹುಡುಕಾಟದಲ್ಲಿ ಕೃತಿ ನಿರತವಾಗಿದೆ. ಮಲೆನಾಡಿನ ಸಾಮಾಜಿಕ ಬದುಕಿನ ಚಿತ್ರಣವನ್ನು ನಿವೇದಿಸುತ್ತಾ ವ್ಯವಸ್ಥೆಯ ಶೋಷಕರು ಮತ್ತು ಶೋಷಿತರ ಸಾಮಾಜಿಕ ಬದುಕನ್ನು ದುಸ್ಥರಗೊಳಿಸುತ್ತಿರುವ ಬಗ್ಗೆ ವಿವರಿಸಿದ್ದಾರೆ. ಗೋಪಾಲಯ್ಯನ ಪಾತ್ರ ಜಮೀನ್ದಾರಿ ವ್ಯವಸ್ಥೆಯ ಪ್ರತೀಕದಂತಿದ್ದು ಮರಸರ, ಕಳುಪ, ಕಾಂಪ್ರ ಇತ್ಯಾದಿಗಳು ಕಾರ್ಮಿಕ ವರ್ಗದ ಪ್ರತಿನಿಧಿಗಳಾಗಿದ್ದಾರೆ. ಕಾರ್ಮಿಕ ವರ್ಗದವರು ಬದುಕುವ ಬದುಕು ಸಮಾಜದ ಅನಾಗರಿಕ ಬದುಕಾಗಿದ್ದು ಅತ್ಯಂತ ದುಸ್ತರದಿಂದ ಕೂಡಿದೆ. ತೇಜಸ್ವಿಯವರ 'ಕರ್ವಾಲೊ' ಪರಿಸರ ಹಾಗೂ ಬದುಕಿನ ವಿಸ್ಮಯ ಕುರಿತ ಕಾದಂಬರಿಯಾಗಿದೆ. ಮನುಷ್ಯ-ಪ್ರಕೃತಿ, ಮನುಷ್ಯ-ಸಮಾಜ, ಮನುಷ್ಯ-ಮನುಷ್ಯರ ಸಂಬಂಧಗಳ ಸಂಕೀರ್ಣತೆ ಬುದ್ದಿಯನ್ನು ಮೀರಿದ ನಿಗೂಢತೆ ಎಲ್ಲಾ ವಿಶ್ಲೇಷಣೆಗಳನ್ನು ಮೀರಿ ನಿಲ್ಲುತ್ತದೆ. ಜನ, ಮರ, ಹೊಲ-ಗದ್ದೆ, ಕಾಡು, ಪ್ರಾಣಿ, ಹುಳ-ಹುಪ್ಪಟೆಗಳೆಲ್ಲವೂ ಪ್ರಕೃತಿಯೇ ಆಗಿದ್ದು ಇದರ ಅರ್ಥವನ್ನು ತಿಳಿಯಬೇಕಾದರೆ ನಾಗರಿಕ ಪ್ರವೃತ್ತಿಯ ನೆಲೆಗೆ ಇಳಿಯಬೇಕಾಗುತ್ತದೆ. ತೇಜಸ್ವಿ ಅವರಿಗೆ ಕಾಡುಮೇಡು ವರ್ಣನೆಗಿಂತ ಅದು ಬದುಕಿನ ಅವಿಭಾಜ್ಯ ಅಂಗಗಳಾಗಿವೆ. ನಾಗರಿಕ ಬದುಕಿನ ಅಸ್ತಿತ್ವ ಪರಿಸರ ಉಳಿವಿನ ಮೇಲೆ ನಿಂತಿದೆಯೆಂಬ ವಾಸ್ತವಿಕ ನೆಲೆಗಟ್ಟನ್ನು ವಿವರಿಸುತ್ತಾರೆ. ರೈತರ ಬದುಕಿನ ಬವಣೆಯಿಂದಾಗಿ ಜಮೀನನ್ನು ಮಾರಿ ನಗರ ಸೇರಬೇಕೆನ್ನುವ ನಿರೂಪಕನ ಬಯಕೆ ಕಾದಂಬರಿಯ ಅಂತ್ಯದಲ್ಲಿ ಹೊಸ ಅರ್ಥವಿನ್ಯಾಸ ಪಡೆದು ಪ್ರಕೃತಿ ನಿಗೂಢತೆಗೆ ಮಾರುಹೋಗುತ್ತಾನೆ. ಕೇವಲ ಶಿಕಾರಿಗಾಗಿ ಮಾತ್ರ ಕಾಡಿದೆಯೆಂದು ತಿಳಿದಿದ್ದ ನಿರೂಪಕನಿಗೆ ಕಾಡು ಅನಂತ ವಿಶ್ವದ ನಿಗೂಢ ಅಂಶದಂತೆ ಕಾಣುತ್ತದೆ. ತೇಜಸ್ವಿ ಅವರು ಪರಿಸರವನ್ನು ಎಲ್ಲಿಯೂ ವೈಭವೀಕರಿಸದೆ ಅದರ ಮಹತ್ವವನ್ನು ನಮ್ಮ ಅರಿವಿಗೆ ಮೂಡಿಸುತ್ತಾರೆ. ಕರ್ವಾಲೋ ಶಿಷ್ಯ ಮಂದಣ್ಣ ಪ್ರಕೃತಿಯನ್ನು ಸೂಕ್ಷ್ಮವಾಗಿ ಅವಲೋಕಿಸುವ ಹುಟ್ಟು 'ಪ್ರಕೃತಿಶಾಸ್ತ್ರಜ್ಞ' ಮೂಡಿಗೆರೆಯ ಜೇನು ಸಹಕಾರ ಮಂಡಳಿಯಲ್ಲಿ ಜೇಮ್ಯಾನ್ ಆಗಿ ಕೆಲಸ ನಿರ್ವಹಿಸುತ್ತಿದ್ದ ಮಂದಣ್ಣ ಜೇನುಕೊಳ್ಳಲು ಬಂದಿದ್ದ ನಿರೂಪಕರಿಗೆ ಹೆಚ್ಚಾದ ಜೇನಿನ ಉತ್ಪಾದನೆ, ಜೇನು ಸಾಕಣೆ ವಿಧಾನಗಳ ಬಗ್ಗೆ ಸವಿಸ್ತಾರವಾಗಿ ವಿವರಿಸುತ್ತಾನೆ. ಮುಂದುವರಿದು ಕರ್ವಾಲೋ ಮಂದಣ್ಣನ ಜೊತೆಗೂಡಿ ಕಾಡಿನಲ್ಲಿ ಶಂಕದ ಹುಳು ತಿನ್ನುವ ಗ್ಲೋವರ್ಮ್, ಮೌಮೌಬೀಗಳ ವಿಶಿಷ್ಟ ನಡಾವಳಿಗೆ ಪ್ರಕೃತಿ ನಿಗೂಢತೆ ಬಗ್ಗೆ ನಿರೂಪಕರಿಗೆ ಮಾಹಿತಿ ನೀಡುತ್ತಾನೆ.

ಭತ್ತದ ಬೆಳೆಗೆ ಹುಳುಬಿದ್ದು ರೋಸಿಹೋದ ನಿರೂಪಕ ಪ್ರಕೃತಿಯ ಅಕಾಲಿಕ ಮಳೆ, ಅಧಿಕಾರಶಾಹಿಯ ಜೀತದಾಳುಗಳಾಗಿರುವ ರೈತರ ಭವಣೆ, ಕಾಡಿನ ಮೌನ, ಗ್ರಾಮಜೀವನದ ಕಾರ್ಪಣ್ಯ, ನಗರದ ಗಲೀಜು, ಜನಜಂಗುಳಿ ಬಗ್ಗೆ ಬೇಸರ ವ್ಯಕ್ತಪಡಿಸುತ್ತಾರೆ. ಕೀಟಶಾಸ್ತ್ರಜ್ಞ ಕರ್ವಾಲೊ ನಿರೂಪಕನಿಗೊಂದು ನಿಗೂಢ ಅದ್ಭುತ ಜಗತ್ತಿನ ಪರಿಚಯವನ್ನು ಮಂದಣ್ಣನ

ಸಾರಥ್ಯದಲ್ಲಿ ಮಾಡಿಸುತ್ತಾರೆ. ಹಾರುವ ಓತಿಯ ಅನ್ವೇಷಣೆಗೆ ನಾರ್ವೆಯ ಕಾಡಿಗೆ ಪ್ರವೇಶ ಮಾಡಿದಾಗ ನಿರೂಪಕ ಮಾರುಹೋಗುತ್ತಾರೆ. ದಟ್ಟವಾದ ಚಪ್ಪರದಂತಿರುವ ವೃಕ್ಷಗಳ ಸಮೂಹ, ಪಶ್ಚಿಮಘಟ್ಟಗಳ ಅಂಚಿನಲ್ಲಿ ಹಬ್ಬಿರುವ ಮಹಾರಣ್ಯ ವಿಶಿಷ್ಟಪ್ರಾಣಿ ಪಕ್ಷಿಗಳ ಆವಾಸಸ್ಥಾನವಾಗಿತ್ತು. ಕಣ್ಣಿಗೆ ಕಂಡಷ್ಟು ಘೋರಾರಣ್ಯ. ಈಚಲಬಯಲಿನಿಂದ ತುಂಬಿದ್ದು ನಿಗೂಢಗಳ ಸಾಗರದಂತೆ ಗೋಚರಿಸುತ್ತದೆ. ಕಾದಂಬರಿಯಲ್ಲಿ ಹಾರುವ ಓತಿ ಪ್ರಕೃತಿಯ ಅಗಮ್ಯತೆ ನಿರಂತರತೆ, ಕಾಲಾತೀತ ಗುಣದ ಪ್ರತಿಮೆಯಾಗುತ್ತದೆ. ಮುಂದುವರಿದು ಪ್ರಕೃತಿಯನ್ನು ಅರಿಯುತ್ತಲೇ ಮನುಷ್ಯ ತನ್ನ ಇರುವಿಕೆಯನ್ನು ಉಳಿಸಿ ಕೊಳ್ಳಬೇಕಾದ ಎಚ್ಚರವನ್ನು ಕಾದಂಬರಿ ಸಮರ್ಥವಾಗಿ ಪ್ರತಿಪಾದಿಸಿದೆ ಎಂಬುದನ್ನು ಗಮನಿಸಬಹುದು. ಜೊತೆಗೆ 'ಕರ್ವಾಲೊ'ದ ನಿರೂಪಕ ಕತೆಯ ಮಹತ್ವದ ಪಾತ್ರವೂ ಆಗಿರುವುದನ್ನು ಕತೆಯ ಚಾಲನೆಗೆ ಸಹಕಾರಿಯಾಗಿವೆ. ದಟ್ಟ ಮಲೆನಾಡಿನ ಆವರಣದಲ್ಲಿ ಬದುಕುವ ಮಂದಣ್ಣನಂತಹ ಸಾಮಾನ್ಯ ವ್ಯಕ್ತಿಯಲ್ಲಿ ಕಂಡುಬರುವ ಪ್ರಕೃತಿ ವಿಜ್ಞಾನದ ಪ್ರತಿಭೆಯನ್ನು ಕರ್ವಾಲೋರಂತಹ ವಿಜ್ಞಾನಿ ಗುರುತಿಸುವುದು ಹಾಗೂ ಅವನ ಸಹಾಯದಿಂದಲೇ ಜೀವವಿಜ್ಞಾನ ರಹಸ್ಯದ ಶೋಧನೆಗೆ ತೊಡಗುವುದು ಈ ಕಾದಂಬರಿಯ ಪ್ರಮುಖ ಅಂಶಗಳಲ್ಲೊಂದು.

ಕರ್ವಾಲೋ ಒಬ್ಬ ವಿಜ್ಞಾನಿ ನಿಸರ್ಗದ ಮೂಲಕ ಜ್ಞಾನದ ಚಲನಶೀಲತೆಯನ್ನು ಕಂಡುಕೊಳ್ಳುವ ತುಡಿತವುಳ್ಳವನು. ನಿಸರ್ಗ ಮಗ್ನತೆ– ಕರ್ವಾಲೊ ಚಟುವಟಿಕೆಗಳ ಬಹುಮುಖ್ಯ ಅಭಿವ್ಯಕ್ತಿಯಾಗಿದ್ದು ಈತನಿಗೆ ಮಂದಣ್ಣ ನಿಸರ್ಗದ ಬೆಳಕಿಂಡಿಯಾಗಿ ಕಾಣುತ್ತಾನೆ. ಅನ್ವರ್ಥಕ ನಾಮದ ಮಂದಣ್ಣ ಒಬ್ಬ ಹಳ್ಳಿಮುಕ್ಕ ಮ್ಯಾರೇಜ್‌ಗೋಸ್ಕರ ಉದ್ಯೋಗಸ್ಥನಾಗುವ ಕನಸು ಕಾಣುತ್ತಿದ್ದ ಮಂದಣ್ಣ ಇಂಥ ಆಮಿಷ ಹೊತ್ತುಕೊಂಡೇ ಕರ್ವಾಲೊ ಹಿಂದೆ ಬಿದ್ದಿರುತ್ತಾನೆ. ನಿಸರ್ಗ ಸನ್ನಿಧಿ ಎಂಬಂತಹ ವ್ಯಕ್ತಿತ್ವ ಮಂದಣ್ಣದು. ಆದ್ದರಿಂದಲೇ ಈ ಕೃತಿಯಲ್ಲಿ ನಿಸರ್ಗಮುಗ್ಧತೆಯ ಕರ್ವಾಲೊ ನಿಕೇತನದಿಂದ ಅನೀಕೇತನಕ್ಕೂ ನಿಸರ್ಗ ಸನ್ನಿಧಿಯ ಮಂದಣ್ಣ ಅನಿಕೇತನದಿಂದ ನಿಕೇತನಕ್ಕೂ ತುಡಿಯುವ ವಿರುದ್ಧ ಚಲನೆಗಳಾಗಿದ್ದಾರೆ. ಬಾಲದಲ್ಲಿ ಬೆಳಕು ಸೂಸುವ ಗ್ಲೋವರ್ಮ್‌ನಿಂದ ಹಿಡಿದು ಆಕಾಶದ ಅನಂತದಲ್ಲಿ ಉಜ್ವಲವಾಗಿ ಬಳಗುತ್ತಿರುವ ನಕ್ಷತ್ರಗಳು – ನಿಹಾರಿಕೆಗಳವರೆಗೆ ಚೆನ್ನಾಗಿ ಮಾತಾಡಬಲ್ಲ ಕರ್ವಾಲೊ ತನ್ನ ಹತ್ತಿರದಲ್ಲೇ ಇರುವ ಮಂದಣ್ಣನ ಹೃದಯವನ್ನು ಅರಿಯುವಲ್ಲಿ ಸೋಲುತ್ತಾನೆ. ಕರ್ವಾಲೋ ತನ್ನ ಹತ್ತಿರದಲ್ಲೇ ಜಾತಿಯವನೊಬ್ಬನಿಗೆ ಪ್ಯೂನು ಕೆಲಸಕೊಟ್ಟು ತನಗೆ ಕೈಕೊಟ್ಟನೆಂದು ಭಾವಿಸಿ, ಮುನಿಸಿಕೊಂಡು ದೂರ ಉಳಿಯುವ ಮಂದಣ್ಣ ಕರ್ವಾಲೋ ಹೃದ್ಗತವನ್ನು ತಿಳಿದವನಾಗುತ್ತಾನೆ. ಇವರಿಬ್ಬರ ನಡುವೆ ಸೇತುವೆ ಕಾರ್ಯ ನಿರ್ವಹಿಸುವ ಜವಾಬ್ದಾರಿ ನಿರೂಪಕನದಾಗಿರುತ್ತದೆ. ಭಾರತದ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯೇ ಎದ್ದು ಉಸಿರಾಡುತ್ತಿದೆಯೋ ಎಂಬಂತೆ ಕರ್ವಾಲೋ,

ಮಂದಣ್ಣ, ನಿರೂಪಕ ಪ್ರಭಾಕರ್, ಬಿರ್ಯಾನಿ ಕರಿಯಪ್ಪ ಒಂದುಗೂಡುತ್ತಾರೆ. ಕಾಲದ ಚಲನೆ ತನ್ನ ಪಾಲಿಗೆ ಕೆಟ್ಟುಹೋಗಿ ಸ್ಥಗಿತವಾಗಿರುವುದನ್ನು ಬದುಕಿ ತೋರಿಸುತ್ತದೆಯೋ ಎಂಬಂತಿರುವ ಹಾರುವ ಓತಿಯ ಬೆನ್ನು ಹತ್ತಿ ಕಾಲ್ನಡಿಗೆಯ ತಿರುಗಾಟಗಳು ಅಜ್ಞಾತವಾದ ಸ್ಥಳೀಯ ಭೂಗೋಳದಲ್ಲಿ ಅಲೆದಾಡುತ್ತಲೇ ವಿಶ್ವಾಸಾತ್ಮಕ ನೆಲೆಗೇರಿಬಿಡುವ ಚಾರಣಯಾನವನ್ನು ಕರ್ವಾಲೋ ಕಾದಂಬರಿಯಲ್ಲಿ ಕಾಣಬಲ್ಲೆವು. ಉಳಿದಂತೆ ಸಕಲರೀತಿಯ ಕರ್ಮದ ವ್ಯವಸ್ಥೆಗಳಲ್ಲಿ ಹಾದುಬರುವ ಕರ್ವಾಲೋ ಕಾದಂಬರಿ ಸಂಸ್ಕೃತಿ ಜನ್ಯವಾದ ಕ್ಷುದ್ರ ಆಸಕ್ತಿಗಳು ಮತ್ತು ನಿಸರ್ಗದ ಅಪೂರ್ವ ತೇಜಗಳ ಮುಖಾಮುಖಿಯೊಂದನ್ನು ಸಹೃದಯರಿಗೆ ಮನದಟ್ಟುಮಾಡಿಕೊಡುತ್ತದೆ. ಜೊತೆಗೆ ವೈಜ್ಞಾನಿಕ ಚಿಂತನೆ ತೇಜಸ್ವಿಯವರ ಕೃತಿಗಳಲ್ಲಿ ಫಿಲಾಸಫಿಯಾಗಿ ಆರಂಭವಾಗಿ ಕಲೆಯಲ್ಲಿ ಅಂತ್ಯವಾಗುತ್ತದೆ ಎಂಬುದನ್ನು ತಿಳಿಯಬಹುದು.

"ಜೀವನ ಸಂಗ್ರಾಮ ಮತ್ತು ವಂಶನಾಶ ವಿಕಾಸ ಪ್ರಕ್ರಿಯೆಯಲ್ಲಿ ಅನಿವಾರ್ಯವಾಗಿ ಜರುಗುವ ಘಟನೆ ಬದಲಾಗುವ ಕಾಲಘಟ್ಟದಲ್ಲಿ ಬದಲಾಗುತ್ತಿರುವ ಪರಿಸರಕ್ಕೆ ಜೀವಿಗಳು ಹೊಂದಿಕೊಳ್ಳಬೇಕಾಗುವುದು ಅಗತ್ಯ. ಹಾಗೆ ಸಾಧ್ಯವಾಗದಿದ್ದಲ್ಲಿ ಅವು ಕ್ರಮೇಣ ನಿರ್ನಾಮವಾಗುತ್ತವೆ. ಒಂದು ಜೀವಿ ಕಲಾಭೂಮಿಯಿಂದ ನಿರ್ನಾಮವಾಯಿತೆಂದರೆ ಆ ಜಾತಿಯ ಕೋಟ್ಯಂತರ ವರ್ಷಗಳಿಂದ ಗಳಿಸಿದ್ದ ಕೌಶಲ್ಯ, ಜ್ಞಾನ ಮತ್ತು ಜಾತಿಯ ಗುಣಗಳಲ್ಲಿ ನಿರ್ನಾಮವಾದಂತೆ. ಹಾಗಾಗಿ ಪ್ರಿಮಿಟಿವ್ ಹಂತದಲ್ಲೇ ಉಳಿದಿರುವ ಅದ್ಭುತ ಜೀವನವಿಜ್ಞಾನ ಮಂದಣ್ಣ, ಕರಿಯಪ್ಪ, ಹಾವುಗೊಲ್ಲರ ಎಂಗ್ಟ, ಹಾರುವ ಓತಿಯಂತೆಯೇ ವಂಶನಾಶದ ಅಂಚಿಗೆ ಬಂದಿರುವವರು. ವಿಕಾಸ ಪ್ರಕ್ರಿಯೆಯಲ್ಲಿ ಹಾರುವ ಓತಿಯಂತೆ ರೆಕ್ಕೆಮುಡಿಸಿಕೊಳ್ಳಲಾಗದೆ ಸಂಕ್ರಮಣ ಸ್ಥಿತಿಯಲ್ಲಿರುವವರು. ಹಾಗಾಗಿ ಜೀವವಿಕಾಸ ಪ್ರಕ್ರಿಯೆಯಲ್ಲಿ ಹಾರುವ ಓತಿಗಿರುವ ಮಹತ್ವವನ್ನು ಮನಗಂಡ ಕರ್ವಾಲೋ ಮಂದಣ್ಣನನ್ನು ಗೌರವಿಸುತ್ತಾರೆ. ವಿನಾಶದಂಚಿನಲ್ಲಿರುವ ಮಂದಣ್ಣ ಗ್ಲೋವರ್ಮ್ ಪತ್ತೆ ಹಚ್ಚುವ ಮಡಕೆಯಲ್ಲಿ ಜೇನುಕೂರಿಸುವ ಪ್ರತಿಭೆಯನ್ನು ಉಳಿಸಿಕೊಳ್ಳುವಲ್ಲಿ ಆಸಕ್ತಿತೋರುತ್ತಾರೆ. ಏಕೆಂದರೆ ಮಂದಣ್ಣ, ಎಂಗ್ಟ, ಕರಿಯಪ್ಪ ಇವರೆಲ್ಲ ಸಹಸ್ರಾರು ವರ್ಷಗಳಿಂದ ಸಂಚಯಗೊಂಡ ದೇಸಿ ವಿಜ್ಞಾನದ ಕೌಶಲಗಳನ್ನು ಹೊಂದಿರುವವರು. ಅವರು ನಿರ್ನಾಮವಾದರೆ ಇಡೀ ಕೌಶಲ್ಯವೇ ನಾಮಾವಶೇಷವಾಗುತ್ತದೆ"[೬೭] ಹಾರುವ ಓತಿಯ ಬೆನ್ನು ಹತ್ತಿದ ಚಾರಣಯಾನದ ಮೂಲಕ ತೇಜಸ್ವಿಯವರು ಹೊಳಹುಂಟುಮಾಡುವ ಅರ್ಥಗಳು ಬಹುರೂಪಿಯಾಗಿವೆ. ಇದನ್ನು ಬಗೆಬಗೆಯಾಗಿ ಕಂಡುಕೊಳ್ಳಲು ಕರ್ವಾಲೋ ಕೃತಿ ತನ್ನ ಸ್ವರೂಪದಲ್ಲಿ ಒಂದು ಮುಕ್ತವಾದ ಆಹ್ವಾನದಂತಿದೆಯೆಂಬುದು ಗಮನಾರ್ಹ. ನಿಸರ್ಗ ಮತ್ತು

---

೬೭. ಕೆ.ಪುಟ್ಟಸ್ವಾಮಿ, 'ತೇಜಸ್ವಿ ಸಾಹಿತ್ಯ ಮತ್ತು ವೈಜ್ಞಾನಿಕತೆ', ಪುಟ. ೬೬, ೨೦೦೯.

ಸಂಸ್ಕೃತಿಗಳ ಹೊಕ್ಕು ಬಳಿಕ ಸಂಬಂಧಗಳು ಕರ್ವಾಲೋ ಕೃತಿಯಲ್ಲಿ ಹೇಗೆ ಮೂಡಿ ಬಂದಿದೆ ಎಂಬುದನ್ನಿಲ್ಲಿ ಪರಿಶೀಲಿಸಬಹುದು.

ಪರಸ್ಪರ ಭಿನ್ನ ತಾತ್ವಿಕ ನೆಲೆಗಳನ್ನು ಹೊಂದಿರುವ ನಿಸರ್ಗ ಸಂಸ್ಕೃತಿಗಳ ನಡುವಣ ಹೊಕ್ಕು ಬಳಕೆ ಅಥವಾ ಮಾನವನ ಮಧ್ಯಪ್ರವೇಶ ಸದಾ ಹಿಂಸಾತ್ಮಕವಾಗಿಯೇ ಇರುತ್ತದೆ ಎನ್ನಲಾಗದು. ಇದನ್ನು ನಾವಿ ಇಂದು ಕೂಡ ಆದಿವಾಸಿಗಳು ಮತ್ತು ಬುಡಕಟ್ಟು ಜನಜೀವನಕ್ರಮಗಳಿಂದ ಸ್ಪಷ್ಟಪಡಿಸಿಕೊಳ್ಳಬಹುದು. ಆದರೆ ಆಧುನೀಕರಣ ಪ್ರಕ್ರಿಯೆಗೆ ಚಾಲನೆನೀಡಿ ಸಂಸ್ಕೃತಿಯ ದಿಕ್ಕುದೆಸೆಗಳನ್ನು ತನಗೆ ಬೇಕಾದಂತೆ ತಿರುಗಿಸಿಕೊಳ್ಳಲು ನಿಯಂತ್ರಿಸಲು ಸಮರ್ಥವಾದ ವಿಜ್ಞಾನದ ಪ್ರವೇಶದಿಂದ ಅನಿವಾರ್ಯವಾಗಿ ಹಿಂಸೆಯ ಕಥನಗಳೂ ಮೊದಲಾಗುತ್ತದೆ. ವಿಜ್ಞಾನದ ಕೂಸಾದ ತಂತ್ರಜ್ಞಾನದ ಮೂಲಕ ನಿಸರ್ಗದ ಗಹನತೆಯನ್ನು ಬೇಧಿಸುತ್ತಾ ಅದರ ಮೇಲಿನ ಯಜಮಾನ್ಯವನ್ನು ಸಾಧಿಸುತ್ತಾ ಹೋದಂತೆ ಕಳೆದುಕೊಳ್ಳುವುದೂ ಇದೆ. ಇಂಥ ಏಕಕಾಲಿಕ ಸಮನಾಂತರ ಕ್ರಿಯೆಗಳನ್ನು ನಿಸರ್ಗದ ಯಜಮಾನ್ಯ ಅದರ ಹರಣ ಎಂಬ ಮಾತುಗಳಿಂದ ಸ್ಪಷ್ಟವಾಗಿ ಸೂಚಿಸಬಹುದು.

ವಿಜ್ಞಾನ ಮತ್ತು ತಂತ್ರಜ್ಞಾನಗಳ ಬಲದಿಂದ ಮನುಷ್ಯ ನಿಸರ್ಗದ ಯಜಮಾನ್ಯವನ್ನು ಗಳಿಸುತ್ತಿದ್ದಂತೆಯೇ ತನಗೆ ತಿಳಿಯದಂತೆ ನಿಸರ್ಗದ ಹರಣವನ್ನು ಮಾಡುತ್ತಿರುತ್ತಾನೆ. ನಿಸರ್ಗದ ಯಜಮಾನ್ಯ ತಂದಿಕ್ಕುವ ಗೋಜಲುಗಳನ್ನು ಪೇಚುಗಳನ್ನು ವರ್ಣಿಸುತ್ತಲೇ ಅದರ ಹರಣದಿಂದ ಉಂಟಾಗುವ ಅಪಾಯಗಳೇನೆಂಬುದನ್ನು ಮನಗಾಣಿಸುವ ಜವಾಬ್ದಾರಿ ಆಧುನಿಕಯುಗದ ಲೇಖಕನಿಗಿದೆ. ಇದನ್ನು ತೇಜಸ್ವಿ ಯಶಸ್ವಿಯಾಗಿ ನಿರೂಪಿಸಿದ್ದಾರೆ. ಕೂಡ, ಸಂಸ್ಕೃತಿಯ ಕ್ಷುದ್ರ ಆಸಕ್ತಿಗಳು ಮತ್ತು ಕರ್ಮದ ವ್ಯವಸ್ಥೆಯನ್ನು ಪರಿಚಯಿಸುತ್ತಲೇ ನಿಸರ್ಗದ ಅಪೂರ್ವ ತೇಜ ಮತ್ತು ಅತೀತವಾಗಿ ಬಿಡುವ ಅರಿವುಗಳನ್ನು ಮನಗಾಣಿಸುತ್ತಾರೆ. ಇದನ್ನು ಕರ್ವಾಲೋ ಕೃತಿಯುದ್ದಕ್ಕೂ ಗಮನಿಸಬಹುದು. ಕೆಲವು ಸಂಗತಿಗಳನ್ನು ನೋಡುವುದಾದರೆ ಸ್ವಾತಂತ್ರ್ಯ ದಿನಾಚರಣೆಯ ಕರ್ಮದ ವ್ಯವಸ್ಥೆಯನ್ನು ಛಿದ್ರಛಿದ್ರಗೊಳಿಸುವ ಮೌಮೌ ದುಂಬಿಗಳ ಹಲ್ಲೆಯ ಪ್ರಸಂಗವನ್ನು ನಿರೂಪಿಸುತ್ತಾ ಯಾಜಮಾನ್ಯದ ಭ್ರಮೆಗಳನ್ನು ಸ್ಫೋಟಿಸಿರುವ ಬಗೆಯು ಪರಿಣಾಮ ರಮಣೀಯವಾಗಿದೆ. ನಿಶಬ್ದವನ್ನು ಸಂಭ್ರಮದಿಂದ ಹೊಡೆದುರುಳಿಸುವ ಮಂದಣ್ಣನ ಬ್ಯಾಂಡು ಬಜಾವಣೆ ಮತ್ತು ತುತ್ತೂರಿ ಮೊಳಗುವ ಹಿಂದೆ ಅಡಗಿರುವ ನಿಸರ್ಗದ ಹರಣವನ್ನು ಗ್ರಹಿಸದಿದ್ದರೆ ಮೌಮೌ ದುಂಬಿಗಳ ಇಡೀ ಪ್ರಸಂಗ ಕೋಡಂಗಿಯ ಹಗರಣದಂತೆ ಹಾಸ್ಯಾಸ್ಪದವಾಗಿ ಉಳಿಯುವ ಸಾಧ್ಯತೆಯಿದೆ. ಹೀಗೆ ತೇಜಸ್ವಿಯವರು ಕಾದಂಬರಿಯಲ್ಲಿ ಪರಿಸರದೊಂದಿಗೆ ಮನುಷ್ಯನ ಅಂತರ್ ಸಂಬಂಧವನ್ನು ಪ್ರಾಣಿ, ಪಕ್ಷಿ, ಕೀಟಗಳೊಟ್ಟಿಗೆ ಬದುಕುವ ಮನುಷ್ಯನ ರೀತಿಯನ್ನು ಸೂಕ್ಷ್ಮವಾಗಿ ನಿರೂಪಿಸಿದ್ದಾರೆ. ಅಲ್ಲದೆ ಹಾರುವ ಓತಿಯನ್ನು

ದಕ್ಕಿಸಿಕೊಳ್ಳಲು ಸಕಲ ಪ್ರಯತ್ನಗಳನ್ನು ನಿಸರ್ಗದ ಯಜಮಾನ್ಯದ ಮಹಾನ್ ರೂಪಕವನ್ನಾಗಿ ಗ್ರಹಿಸುವ ಅವಕಾಶಗಳಿವೆ. ಹಾರುವ ಓತಿಯ ಬೆನ್ನು ಹತ್ತಲು ಮೋಟಾರು ವಾಹನಗಳನ್ನು ಬಳಸಲು ಆಧುನಿಕ ತಂತ್ರಜ್ಞಾನಕ್ಕೆ ಸಾಧ್ಯವಿಲ್ಲ. ಕಾಲ್ನಡಿಗೆಯ ತಿರುಗಾಟಗಳು ಮತ್ತು ಜನ್ಮದಾರಿತ ಅಸಮಾನತೆಯನ್ನು ಶ್ರೇಣೀಕೃತ ನೆಲೆಗಳನ್ನು ಮೀರಿದ ಒಂದು ಸಂಘಟಿತ ಪ್ರಯತ್ನಗಳು ಜ್ಞಾನದ ನಿಜದ ಉದಯಕ್ಕೆ ಕಾರಣವಾಗಬಹುದೆಂಬ ಪ್ರತಿಪಾದನೆ ಕರ್ವಾಲೋ ಕೃತಿಯಲ್ಲಿ ವ್ಯಕ್ತವಾಗಿದೆ. ಕೈಗೆ ಸಿಕ್ಕರೂ ಸಿಕ್ಕದಂತಿರುವ ಹಾರುವ ಓತಿ ಮಾನವನ ಮಹತ್ವಾಕಾಂಕ್ಷೆಯಾಗಿರುವ ನಿಸರ್ಗದ ಯಾಜಮನ್ಯದ ಭ್ರಮೆಗೊಡ್ಡಿದ ಚಿಕಿತ್ಸೆಯಾಗಿ ಕಾಣುತ್ತದೆ. ವಿಜ್ಞಾನದ ಬಲದಿಂದ ಬೀಗುತ್ತಿರುವ ಮನುಷ್ಯ ನಿಸರ್ಗದ ಕುರಿತು ಪ್ರಜ್ಞಾಪೂರ್ವಕವಾಗಿ ವ್ಯವಹರಿಸಬೇಕೆಂಬ ಪ್ರತಿಪಾದನೆಯನ್ನು ಕೈಗೆ ಸಿಕ್ಕದ ಓತಿ ಮಾಡುತ್ತಿರುವಂತಿದೆ. ಮನುಷ್ಯನ ಪಾಲಿಗೆ ಅತೀತವಾದ ಬಿಡುವು ನಿಸರ್ಗದ ಅರಿವು ಕರ್ವಾಲೋ ಎತ್ತಿ ಹಿಡಿದಿರುವ ಸತ್ಯ. 'ಹೋಗಲಿ ಬಿಡಿ, ಬ್ಯಾಡ್‌ಲಕ್ ಆದರೆ ಏನೂ ಬೇಸರವಿಲ್ಲ' ಎಂದು ಕರ್ವಾಲೋ ಹೇಳುವ ಮಾತುಗಳು ಅದುವರೆಗಿನ ಶ್ರೇಣೀಕೃತ ನೆಲೆಗಳನ್ನು ಮೀರಿದ ಸಂಘಟಿತ ಪ್ರಯತ್ನಕ್ಕೆ ಲಭಿಸಿದ ಯಶಸ್ಸಿನ ಅಭಿವ್ಯಕ್ತಿಯಂತೆ ಗೋಚರಿಸುತ್ತದೆ. ಹಾರುವ ಓತಿಯನ್ನು ಪ್ರತೀಕವಾಗಿಸಿ ಚಿರವಾಸ್ತವದ ಈ ಪ್ರಾಣಿಯೊಂದಿಗೆ ಚಲನಶೀಲವಾದ ಬದುಕಿನ ಸಾಮಾಜಿಕ ಸಂಧರ್ಭವನ್ನು ಲೇಖಕರು ಅನನ್ಯವಾಗಿ ತಳಕು ಹಾಕಿದ್ದಾರೆ. ವಿಸ್ಮೃತಿಯ ತುಣುಕೊಂದು ಮಿಂಚಿ ವಿಸ್ಮೃತಿಯಲ್ಲಿ ಲೀನವಾಗುವ ಪ್ರಕ್ರಿಯೆ ಈ ಕಾದಂಬರಿಯ ವಿನ್ಯಾಸದಲ್ಲಿ ಸಮರ್ಥವಾಗಿ ಮೂಡಿಬಂದಿದೆ.

ತೇಜಸ್ವಿಯವರಿಗೆ ನಿಸರ್ಗಕ್ಕೆ ಮುಖಾಮುಖಿಯಾದ ಮನುಷ್ಯ ತನ್ನ ಪ್ರತಿಭೆಯ ಅನಂತ ಸಾಧ್ಯತೆಗಳನ್ನು ಗ್ರಹಿಸುತ್ತಲೇ ತನ್ನ ಅರಿವಿನ ಮಿತಿಯನ್ನು ಕಂಡುಕೊಳ್ಳುವುದು ಮುಖ್ಯವಾಗುತ್ತದೆ. ಮನುಷ್ಯನ ಪ್ರಜ್ಞೆ ಸ್ವತಂತ್ರವು ಅಥವಾ ಪರಿಸರ ನಿಯಮಗಳ ಅಧೀನವೋ ಎಂಬುದು ಮತ್ತೆ ಮತ್ತೆ ಅವರ ಕೃತಿಗಳಲ್ಲಿ ಶೋಧನೆಗೆ ಒಳಪಟ್ಟಿರುವುದನ್ನು ಕಾಣಬಹುದು. ಅನುಭವಕ್ಕೆ ಮುಖಾಮುಖಿಯಾದ ಕ್ಷಣದಲ್ಲಿ ಬದುಕಿನ ಬಗೆಗಿನ ನಮ್ಮೆಲ್ಲ ತಾತ್ವಿಕತೆಗಳು ಅರ್ಥಹೀನವಾಗಿಬಿಡುತ್ತವೆ. ಈ ಬಗೆಯ ಅನುಭವ ಶೋಧನೆಯಲ್ಲಿ ತೇಜಸ್ವಿ ಮನುಷ್ಯನನ್ನು ಪರಿಸರದೊಡನೆ ಮುಖಾಮುಖಿಯಾಗಿಸುತ್ತಾರೆ. ತೇಜಸ್ವಿಯವರ ಸೃಷ್ಟಿ ಶೀಲತೆಯ ಹಿಂದಿನ ಕಾರಣಗಳನ್ನು ವಿವರಿಸುತ್ತಾ ರಾಜೇಂದ್ರ ಚೆನ್ನಿಯವರು ಹೇಳುವ ಈ ಮಾತುಗಳು ಅವರು ನಿಸರ್ಗ ಮನುಷ್ಯ ಸಂಬಂಧವನ್ನು ಹೇಗೆ ಅರ್ಥೈಸುತ್ತಾರೆ ಎಂಬುದನ್ನು ತೋರಿಸುತ್ತದೆ. "ತೇಜಸ್ವಿಯವರ ಸೃಷ್ಟಿಶೀಲ ಚಿಂತನೆಯ ಸತ್ವವಿರುವುದು ಮನುಷ್ಯ ಮತ್ತು ಅವನ ಪರಿಸರವನ್ನು ಅವುಗಳ ಅನಿವಾರ್ಯವಾದ ಸಂಬಂಧದ ಹಿನ್ನೆಲೆಯಲ್ಲಿ ನೋಡುವುದರಲ್ಲಿ ಮನುಷ್ಯ ಸ್ವಭಾವ, ಅವನ ನಡವಳಿಕೆ ಮತ್ತು ಮೌಲ್ಯಗಳ ಜಗತ್ತು ಹಾಗೂ ಅವನ ಸುತ್ತಲಿನ ಜೀವಂತ ಪರಿಸರ –

ಇವೆರಡೂ ಅವರ ದೃಷ್ಟಿಯಲ್ಲಿ ಎಷ್ಟರ ಮಟ್ಟಿಗೆ ಹೆಣೆದುಕೊಂಡಿದೆಯೆಂದರೆ ಅವು ಒಂದು ನಿರಂತರವಾದ ಪ್ರಕ್ರಿಯೆಯ ಎರಡು ಮುಖಗಳಾಗಿ ಕಾಣುತ್ತವೆ. ಈ ಪರಿಸರ ಅದಮ್ಯವಾದ ಚೈತನ್ಯವುಳ್ಳ ಮತ್ತು ತನ್ನದೇ ಆದ ನಿಯಮಗಳಿಗೆ ಬದ್ಧವಾಗಿ ವಿಕಸನವಾಗಿ ಸದಾ ವಿಕಸನ ಹೊಂದುತ್ತಿರುವ ನಿಸರ್ಗ ಮಾತ್ರವಲ್ಲ. ಈ ನಿಸರ್ಗದ ಮೇಲೆ ಗಾಢವಾಗಿ ಪರಿಣಾಮ ಬೀರುತ್ತಿರುವ ಅವರು ನಿರ್ಮಿಸಿದ ಸಮಾಜದ ಪರಿಸರವೂ ಹೌದು, ಸಾಮಾಜಿಕ ಪರಿಸರದ ಬಗ್ಗೆ ತೀವ್ರವಾದ ನೈತಿಕ ಕಾಳಜಿ ತೋರಿಸುವ ಅವರು ನಿಸರ್ಗದ ಪರಿಸರದ ಬಗ್ಗೆ ಅಷ್ಟೇ ಆಳವಾದ ಕುತೂಹಲವನ್ನು ತೋರಿಸುತ್ತಾರೆ. ಏಕೆಂದರೆ ಅವರ ದೃಷ್ಟಿಯಲ್ಲಿ ಇವೆರಡೂ ಮನುಷ್ಯ ಬದುಕಿನಲ್ಲಿ ಮತ್ತು ಅವನ ಪ್ರಜ್ಞೆಯಲ್ಲಿ ಬಿಡಿಸಲಾಗದಂತೆ ಹೆಣೆದುಕೊಂಡಿವೆ"[೬೮] ತೇಜಸ್ವಿಯವರು ಸ್ವತಃ ಪರಿಸರ ಪ್ರೇಮಿಯಾಗಿ ಅವರು ಕೈಗೊಂಡ ನೆಲೆಗಳನ್ನು ನೋಡುವುದಾದರೆ ಮೈಸೂರಿನ ನಾಗರಿಕ ಗದ್ದಲದಿಂದ ಕಾಡಿನ ವಿಸ್ಮಯವನ್ನು ಅರಸುತ್ತಾ ಮೂಡಿಗೆರೆಯಂತಹ ದಟ್ಟ ಮಲೆನಾಡಿನ ಪ್ರದೇಶಕ್ಕೆ ಬಂದು ನೆಲೆಯಾದರು. ಅವರು ಪರಿಸರವನ್ನು ಕೇವಲ ಪರಿಸರ ಪ್ರೇಮಿಯಾಗಿ ನೋಡದೆ ಒಬ್ಬ ದಾರ್ಶನಿಕ ದೃಷ್ಟಿಯಿಂದ ಗಮನಿಸುತ್ತಿದ್ದರು. ಫುಕೋವಾಕನ ಸಹಜ ಕೃಷಿಯನ್ನು ಕನ್ನಡ ಭಾಷೆಗೆ ಅನುವಾದವಷ್ಟೇ ಸರಳವಾಗಿ ತಮ್ಮ ಬದುಕಿಗೂ ಅದೇ ಸಹಜತೆಯನ್ನು ಅನ್ವಯಿಸಿಕೊಂಡು ಬದುಕಿದರು. 'ನಿಸರ್ಗವೇ ಪರಮ ನ್ಯಾಯಾಧೀಶ ನಾವು ಅದರ ತೀರ್ಮಾನವನ್ನು ಉಲ್ಲಂಘಿಸಬಾರದು' ಎಂಬ ತೇಜಸ್ವಿಯವರ ಅಭಿಪ್ರಾಯ ಪ್ರಕೃತಿಯ ಬಗೆಗೆ ಅವರ ಬದ್ಧತೆಯನ್ನು ಸ್ಪಷ್ಟಪಡಿಸುತ್ತದೆ.

ಮೂಡಿಗೆರೆಯ ಜನ್ನಾಪುರದಲ್ಲಿ ಕೃಷಿಕರಾಗಿ ನೆಲೆನಿಂತ ತೇಜಸ್ವಿ ಬಿಸಿಲುಮಳೆಯಲ್ಲಿ ಕೆಲಸಗಾರರೊಂದಿಗೆ ಸ್ವತಃ ತಾವೂ ದುಡಿಯುತ್ತಿದ್ದರು. ಸರಳ ವ್ಯಕ್ತಿತ್ವ ಹಾಗೂ ನೇರ ನಡವಳಿಕೆಯ ತೇಜಸ್ವಿ ರೈತರ ಸಂಕಷ್ಟದ ಬಗ್ಗೆ ತೀರ್ವ ಕಾಳಜಿಯನ್ನು ಹೊಂದಿದ್ದರು. ಸರಕಾರವು ರೈತರಿಗೆ ದುಡಿಯುವ ಮಾರ್ಗವನ್ನು ತೋರಿಸಿ ಸಹಕರಿಸಬೇಕೆ ವಿನಃ ಮುಕ್ಕಟೆಯಾಗಿ ವಿದ್ಯುತ್ ಇತ್ಯಾದಿಗಳನ್ನು ಕೊಟ್ಟು ಸೋಮಾರಿಗಳನ್ನಾಗಿ ಮಾಡುವುದು ರೈತರ ಹಿತ ದೃಷ್ಟಿಯಿಂದ ಸರಿಯಲ್ಲ ಎಂಬ ಅವರ ಅಭಿಪ್ರಾಯ ದೂರದೃಷ್ಟಿತ್ವದ್ದಾಗಿತ್ತು. ರೈತರಲ್ಲಿ ವೈಜ್ಞಾನಿಕ ದೃಷ್ಟಿಕೋನದ ತಿಳುವಳಿಕೆಯು ಸ್ವತಃ ರೈತ ಹಾಗೂ ಪರಿಸರಕ್ಕೆ ಪೂರಕ ಅಂಶವಾಗಿ ಕೃಷಿ ಅಭಿವೃದ್ಧಿಗೆ ಸಹಾಯಕವಾಗುತ್ತದೆ. ಸಂಪ್ರದಾಯ ಮೌಢ್ಯತೆ ರೈತಾಪಿವರ್ಗಕ್ಕೆ ಮಾರಕ ಎಂದೇ ನಂಬಿದ್ದರು. ಅವರು ಹೊಸ ತೋಟವನ್ನು ಖರೀದಿಸಿದ ಹಿನ್ನಲೆಯಲ್ಲಿ ಅವರ ಒಡನಾಡಿಗಳೇ ಹೀಗೆ ದಾಖಲಿಸುತ್ತಾರೆ. "ತೇಜಸ್ವಿ ಅವರು ಮೂಡಿಗೆರೆ ಹ್ಯಾಂಡ್‌ಪೋಸ್ಟ್ ನಿಂಬೆಮೂಲೆ ತೋಟವನ್ನು ಖರೀದಿಸಿದರು. ಅದಕ್ಕೊಂದು ಹಿನ್ನಲೆಯೂ ಇದೆ. ಆ ತೋಟದಲ್ಲಿ ಚೌಡಿ ಇದೆ.

---

೬೮. ರಾಜೇದ್ರ ಚೆನ್ನಿ, 'ನಡುಹಗಲಿನಲ್ಲಿ ಕಂದೀಲುಗಳು', ೨೦೦೪, ಪು. ೨೩೩.

ಆದ್ದರಿಂದ ಆ ತೋಟವನ್ನು ಕೊಂಡ ಯಾರಿಗೂ ಪ್ರಗತಿ ಆಗಲ್ಲ. ಉದ್ಧಾರ ಕಾಣಲ್ಲ ಎಂಬ ಪ್ರತೀತಿ ಹಬ್ಬಿತ್ತು. ಕಾಕತಾಳೀಯ ಎಂಬಂತೆ ಹಿಂದೆ ಆ ತೋಟವನ್ನು ತೆಗೆದುಕೊಂಡಿದ್ದ ಮೂರು ಜನರೂ ಅಭಿವೃದ್ಧಿಯನ್ನು ಕಂಡಿರಲಿಲ್ಲ. ಇದಕ್ಕೆ ಬೇರೆ ಕಾರಣಗಳಿದ್ದರೂ ಚೌಡಿಯ ನೆಪಹೇಳಿ ಗುಲ್ಲೆಬ್ಬಿಸಿದ್ದರು. ಇದರಿಂದ ಯಾರೂ ಆ ತೋಟವನ್ನು ಕೊಂಡುಕೊಳ್ಳಲು ಮುಂದೆ ಬಂದಿರಲಿಲ್ಲ. ಹೇಳಲೇಬೇಕಾದ ಪ್ರಗತಿಯಾದರೆ ನಮ್ಮ ತಂದೆ ನಂಜೇಗೌಡ್ರು ಕೂಡಾ ಈ ತೋಟವನ್ನು ಖರೀದಿಸಲು ಹೋಗಿ ಜನರ ಮಾತಿಗೆ ಹೆದರಿ ಹಿಂದಿರುಗಿದ್ದರು. ಆದರೆ ತೇಜಸ್ವಿ ಅವರು ಧೈರ್ಯಮಾಡಿ ಆ ತೋಟವನ್ನು ಕೊಂಡುಕೊಂಡರು. ನೂತನವಾಗಿ ಕಟ್ಟಿಸಿದ ಮನೆಗೆ ನಿರುತ್ತರ ಎಂಬ ಹೆಸರನ್ನೂ ಇಟ್ಟರು."[೬೯] ಮೂಡಿಗೆರೆಯ ಮೌಢ್ಯಕ್ಕೆ ಸವಾಲು ಹಾಕುವಂತೆ ಆ ತೋಟವನ್ನು ಖರೀದಿಸುವ ಮೂಲಕ ತಮ್ಮ ವಿಚಾರವಂತಿಕೆಯನ್ನು ಸಾಬೀತುಪಡಿಸಿದ್ದರು. ತೇಜಸ್ವಿ ಪರಿಸರದೊಂದಿಗೆ ತಮ್ಮ ಸಂಬಂಧವನ್ನು ವೃದ್ಧಿಸಿಕೊಂಡು ತಮ್ಮ ಕೃಷಿ ಭೂಮಿಯೊಂದಿಗೆ ಗೆಳೆತನ ಬೆಸೆಯುವ ಹಕ್ಕಿ-ಪಕ್ಷಿ, ಕ್ರಿಮಿ, ಕೀಟ, ಪ್ರಾಣಿಗಳ ಬಗ್ಗೆ ಆಸಕ್ತಿಯಿಂದ ಗಮನಿಸುತ್ತಾ ಅನೇಕ ಅನುಭವ ಜನ್ಯ ಕೃತಿಗಳನ್ನು ರಚಿಸಿದರು.

ತೇಜಸ್ವಿಯವರ 'ಮಾಯಾಲೋಕ' ಕಾದಂಬರಿ ಜಾಗತೀಕರಣ, ವಸಾಹತುಶಾಹಿ ಮಾರುಕಟ್ಟೆಯ ಪ್ರಭಾವದಿಂದಾಗಿ ಮಲೆನಾಡಿನ ಹಳ್ಳಿಗರು ತೀವ್ರತರದ ಪರಿವರ್ತನೆಗೆ ಒಳಗಾದದ್ದು ಸಾಂಸ್ಕೃತಿಕ ಪಲ್ಲಟದೊಂದಿಗೆ ಹಲವು ಸಮಸ್ಯೆಗಳನ್ನು ಮೈಗೂಡಿಸಿಕೊಂಡಿರುವುದನ್ನು ಗುರುತಿಸುತ್ತದೆ. ಧೋ ಧೋ.... ಎಂದು ಬೀಳುವ ಮಳೆ ಕಣ್ಮರೆಯಾಗಿ ಮೂರು ನಾಲ್ಕು ವರ್ಷಗಳಿಂದ ನಿಯತ ಮಳೆಯಾಗದೆ ಕುಡಿಯುವ ನೀರಿಗೂ ಸಮಸ್ಯೆ ಎದುರಿಸುವ ಮಕ್ಕಿ ಗದ್ದೆ ಜನ ಸಣ್ಣಪುಟ್ಟ ತೊರೆಗಳಿಗೂ ಒಡ್ಡುಗಳನ್ನು ನಿರ್ಮಿಸಿ ಕೃಷಿಗೆ ತೊಡಗಿರುವ ಊರಳ್ಳಿಯ ಅಣ್ಣಪಣ್ಣ ಇವರ ಮಧ್ಯ ಗಲಾಟೆಗಳು ಜರುಗಲು ಮಳೆ ಕೊರತೆಯ ಕಾರಣವಾಗಿವೆ. ಮಳೆಯಿಲ್ಲದೆ ವಿದ್ಯುತ್ ನಂಬಿ ಕೃಷಿ ಮಾಡುವ ಜನ ವಿದ್ಯುತ್ ನಿಯತವಾಗಿ ಕೊಡದಿದ್ದರಿಂದ ಬೇಸತ್ತು ಇಲಾಖೆ ವಿರುದ್ಧ ಅಧಿಕಾರಿಗಳ ವಿರುದ್ಧ ಜಗಳಕ್ಕಿಳಿಯುವುದು ರೈತ ಸಂಘ ಕಟ್ಟಿಕೊಂಡು ಚಳುವಳಿ, ಹೋರಾಟ ಮಾಡಿ ಪ್ರಕೃತಿಯೊಂದಿಗೆ ತಮ್ಮ ಜೀವನವನ್ನು ಸಾಗಿಸಲೆತ್ನಿಸುತ್ತಾರೆ. 'ಮಾಯಾಲೋಕ' ದಲ್ಲಿ ನೂರಾರು ಮಾನವ ಪಾತ್ರಗಳು ಬರುತ್ತವೆ. ದಟ್ಟವಾಗಿ ಹುಂಡುಕೋಳಿಯ ಜೀವನಕ್ರಮ, ಮಂಗ, ಮೀನು, ಏಡಿ, ಅಳಿಲು, ನವಿಲು, ಕಾಡುಹಂದಿ, ಜೇಡ ಬರುತ್ತವೆ. ಕಥೆ ನಾಯಿಯ ಮೂಲಕವೇ ಶುರುವಾಗುತ್ತದೆ. ದಾಸವಾಳ, ಜೊಂಡು, ಅಡಕೆ, ಮೆಣಸಿನ ಗಿಡ ಮುಂತಾದ ಸಸ್ಯ ಜಗತ್ತು ಬರುತ್ತದೆ. ಮಾನವ ಹಾಗೂ ಸಸ್ಯ, ಪ್ರಾಣಿ, ಕೀಟಗಳ ಲೋಕಗಳು ಏಕೀಭವಿಸಿದ ಜಗತ್ತು ಇಲ್ಲಿ ಅನಾವರಣವಾಗುತ್ತದೆ.

---

೬೯. ರಮೇಶ್ ಹಳೇಕೋಟೆ, 'ನೆನಪಿನಂಗಳದಲ್ಲಿ ತೇಜಸ್ವಿ', ೨೦೧೦, ಪು. ೨೦.

ಚಳಿಗಾಲ, ಮಳೆಗಾಲ, ಬೇಸಿಗೆ ಬಿಸಿಲು ಇವೆಲ್ಲವೂ ಪರಿಸರದಲ್ಲಿ ಪುನರಾವರ್ತಿತ ಕಾಲಗಳು ಪ್ರಕೃತಿಯ ಸಮತೋಲನವನ್ನು ಕಾಪಾಡಿಕೊಳ್ಳಬೇಕಾದರೆ ಅದರ ಸುತ್ತಮುತ್ತ ಹರಡಿರುವ ಅತಿ ರಹಸ್ಯಗಳನ್ನು ತಿಳಿದಾಗ ಸ್ವಾಭಾವಿಕವಾಗಿ ನಮ್ಮ ವರ್ತನೆ ಪ್ರಕೃತಿಪರವಾಗಿರುತ್ತದೆಂದು ತೇಜಸ್ವಿ ಅವರು ಅಭಿಪ್ರಾಯಪಡುತ್ತಾರೆ.

'ಮಾಯಾಲೋಕ'ದಲ್ಲಿ ಜಿನುಗಿ ಹರಿಯುತ್ತಿದ್ದಂತಹ ಒಂದು ಸಣ್ಣ ಹಳ್ಳ, ಕಾದಂಬರಿಯ ಕೊನೆಗೆ ಇದ್ದಕ್ಕಿದ್ದಂತೆ ಪಾತ್ರಗಳನ್ನೇ ಬದಲಿಸಿಕೊಂಡು ಹರಿವ ಪ್ರವಾಹವಾಗಿ ನದಿಯನ್ನು ಹೋಗಿ ಸೇರುತ್ತದೆನ್ನುವುದು ಊಹೆಗೆ ನಿಲುಕದ ವಿಸ್ಮಯಕಾರಿಯಾಗಿದೆ. ವಿಚಿತ್ರವೆಂದರೆ ಅದೇ ಪರಿಸರದಲ್ಲಿ ವಾಸವಾಗಿ ಬದುಕುತ್ತಿರುವಂತಹ ಮನುಷ್ಯರಿಗೇ ಅದರ ಪಾತ್ರ ಮತ್ತು ವರ್ತನೆ ಗೊತ್ತಾಗದ ಹಾಗೆ ವಿಪರೀತಗಳು ಸಂಭವಿಸುತ್ತವೆ. ಇಂತಹ ವಿಪರೀತಗಳು ಇಡೀ ಕಾದಂಬರಿಯೊಳಗೆ ಆವರ್ತವಾಗಿ ಮಂಡಿತವಾಗಿವೆ. ಅದು ಆರಂಭದಲ್ಲಿ ಕಾಣಿಸಿಕೊಳ್ಳುವ ಹುಂಡುಕೋಳಿಗಳ ಗುಂಪಿರಬಹುದು. ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುವ ಏಡಿಗಳಿರಬಹುದು ಹಕ್ಕಿಗಳು ತಿಂದರೂ ಮುಗಿಯದೆ ಇರತಕ್ಕಂತಹ ಮೀನುಗಳಿರಬಹುದು. ಹೀಗೆ ಆಗುತ್ತಲೇ ಕೊನೆಗೆ ಮೆಣಸಿನಕಾಯಿ ಬೆಲೆ ಆಶ್ಚರ್ಯಕರವಾಗಿ ಎಂದೂ ಇಲ್ಲದಂತೆ ಫಸಲು ಬಂದು ಅಲ್ಲಿಯ ರೈತರನ್ನು ಮತ್ತು ಅದನ್ನು ಬೆಳೆದ ಅಪ್ಪಣ್ಣನನ್ನು ತಬ್ಬಿಬ್ಬುಗೊಳಿಸುತ್ತದೆ. ಮೆಣಸಿನಕಾಯಿಯ ವಿಪರೀತ ಖಾರ ಬದುಕಿನ ಇನ್ನೊಂದು ಕಾಣದ ಅನುಭವಕ್ಕೆ ನಮ್ಮನ್ನು ಈಡು ಮಾಡುವ ತೇಜಸ್ವಿಯವರ ಕಥನಕ್ರಮ ಬೆರಗು ಮೂಡಿಸುವಂಥದ್ದು ಬೋಂಡ ಬೇಯಿಸುವ ಮುಸ್ಲೀಂ ಹೆಣ್ಣು ಮಗಳಿಗೆ ಸಿಗುವ ಮೆಣಸಿನಕಾಯಿಯಲ್ಲಿ ಅಸಹಜ ಕಾರ ಇರುತ್ತದೆ. ಅಸಲಿಯಾದದ್ದು ನಕಲಿಯಾಗುವ, ನಕಲಿಯಾದಲ್ಲಿ ಅಸಲಿಯಾಗುವ ಈ ಪರಿವರ್ತನೆ ಮತ್ತು ಬೆರಗು ತೇಜಸ್ವಿಯವರನ್ನು ಬಹಳವಾಗಿ ಕಾಡಿದ್ದೆನಿಸುತ್ತವೆ. ಇಂತಹ ಬೆರಗನ್ನು ದಾಖಲಿಸುವ ಕ್ರಮವಾಗಿಯೇ ಅವರ ಎಲ್ಲಾ ಕೃತಿಗಳು ನಮಗೆ ಸಿಕ್ಕಿದ್ದು ಎನ್ನುವುದನ್ನು ನಾವು ಮರೆಯುವಂತಿಲ್ಲ. ಇಂತಹ ವಿಪರೀತಗಳನ್ನು ಎದುರಾಗುವ ಮನೋಲೋಕ, ಅನುಭವ ಲೋಕವಿರಬಹುದು. ಅಥವಾ ಸಂವೇದನೆಗಳ ನೆಲೆಯಲ್ಲಿರಬಹುದು. ಅಲ್ಲಿ ಪಾತ್ರಗಳಾಗಿ ಭಾಗವಹಿಸುತ್ತಿರುವ ಸಮುದಾಯಗಳಿರಬಹುದು. ಅವೆಲ್ಲವೂ ಕೂಡ ಅವರ ಪೂರ್ವ ಸಂಸ್ಕೃತಿಗಳನ್ನು ಲೋಕಜ್ಞಾನವನ್ನು ಜೊತೆ ಜೊತೆಯಾಗಿ ಚಿತ್ರಿಸುವುದರಿಂದಾಗಿ ಬಹಳ ದೊಡ್ಡ ಅತಾರ್ಕಿಕವಾದಂತಹ ಸನ್ನಿವೇಶ ನಿರ್ಮಾಣವಾಗುತ್ತದೆ. ಇಂತಹ ಅತಾರ್ಕಿಕತೆಯನ್ನು ನಿಭಾಯಿಸುವಂತಹ ಪೂರ್ವಾನುಭವಗಳು ಎದ್ದು ಕಾಣುತ್ತವೆ. ಮನುಷ್ಯ ಮತ್ತು ನಿಸರ್ಗದ ನಡುವೆಯೂ ಒಂದು ಅವ್ಯಕ್ತವಾದಂತಹ ನಿಯಮವಿದೆ ಎಂದೆನಿಸುತ್ತದೆ. ಮನುಷ್ಯ ಸಂಸ್ಕೃತಿ ಅಥವಾ ಮನುಷ್ಯ ಸಂವೇದನೆ ಎದುರುಗೊಳ್ಳುತ್ತಿರುತ್ತದೆ. ಪ್ರಕೃತಿಯ ಸಹಜ ಪಾತ್ರಗಳಿಗೆ

ವಾಪಸಾದಾಗ ಮತ್ತೆ ಸಹಜತೆಯ ಅರ್ಥಪೂರ್ಣತೆಯ ಬದುಕು ರೂಪುಗೊಳ್ಳುತ್ತದೆ ಎನ್ನಬಹುದು.

ತೇಜಸ್ವಿಯವರ ಸಾಹಿತ್ಯದಲ್ಲಿ ಪ್ರಕೃತಿಯೇ ಪ್ರಮುಖವಾದ ವಸ್ತು ಅಲ್ಲಿ ವಿಜ್ಞಾನದ ವಿಸ್ಮಯಗಳು ಕಾಡು, ಗುಡ್ಡ, ಹೊಳೆ, ಕಲ್ಲು, ಮುಳ್ಳು, ಪ್ರಾಣಿ, ಪಕ್ಷಿಗಳೊಂದಿಗೆ ಅಗಾಧ ಮನುಷ್ಯ ಸಂಬಂಧವಿರುವುದರ ಬಗ್ಗೆ ವಿವರಣೆ ನೀಡುತ್ತಾರೆ. ಇತರರ ಕೈಯಲ್ಲಿ ವಿವರಣೆ, ಕಾಲ್ಪನಿಕ ಪ್ರವಾಸ ಕಥನವಾಗಬಲ್ಲ ವಸ್ತುವಿನ ಹಂದರವನ್ನು ತೇಜಸ್ವಿ ಅವರು ಸಮರ್ಥವಾಗಿ ಕಥೆ ಕಾದಂಬರಿಗಳಲ್ಲಿ ಹೇಳಬಲ್ಲರು ಎಂಬುದಕ್ಕೆ ಅವರ ಇತರ ಸಾಹಿತ್ಯ ಕೃತಿಗಳೊಂದಿಗೆ 'ಜುಗಾರಿಕ್ರಾಸ್' ಕೇಂದ್ರವಾಗಿದ್ದು ಜೊತೆಗೆ ದೇವಪುರ ಮೇದರಹಳ್ಳಿ, ದೋಸೆ ಹೊಳೆ ಸುತ್ತಮುತ್ತಲಿನ ಪರಿಸರ, ಕಾಡುಗಳೇ ಮುಖ್ಯ ಪಾತ್ರಗಳಾಗಿವೆ. ಮೇದರಹಳ್ಳಿಯಂತಹ ಸಂಸ್ಕೃತಿ ಚಿಗುರೊಡೆದು ಸಾಂಸ್ಕೃತಿಕವಾಗಿ ತನ್ನ ಸ್ಥಾನ ಕಾಯ್ದುಕೊಳ್ಳಲು ಕಾಡಿನಲ್ಲಿ ಸಾವಿರಾರು ಚದರ ಮೈಲಿ ಅಕ್ಷಯವಾಗಿ ಬೆಳೆದಿದ್ದ ಹೆಬ್ಬಿದಿರು, ವಾಟ, ಕಾಡುಬಿದುರು ಇತ್ಯಾದಿಗಳು ಕಾರಣವಾಗಿವೆ. ಇಲ್ಲಿ ತೇಜಸ್ವಿಯವರು ಪರಿಸರ ಪ್ರಜ್ಞೆಯನ್ನು ಸಾಂಸ್ಕೃತಿಕ ರಂಗದ ಕೇಂದ್ರಕ್ಕೆ ತರಲು ಪ್ರಯತ್ನಿಸುತ್ತಿದ್ದಾರೆ ಎಂಬ ತೀರ್ಮಾನಕ್ಕೆ ಬರಬಹುದು. ಮನುಷ್ಯ ಮತ್ತು ಪರಿಸರ ಸಂಬಂಧ ಹಾಗೂ ಪರಿಸರ ವಿನಾಶದಿಂದ ಮನುಷ್ಯನ ಬದುಕಿನ ಮೇಲಾಗುತ್ತಿರುವ ಪ್ರಭಾವ ಇವುಗಳೊಡನೆ ತೇಜಸ್ವಿ ನೇರವಾಗಿ ಮುಖಾಮುಖಿಯಾಗುತ್ತಾರೆ. 'ಜುಗಾರಿಕ್ರಾಸ್' ಈ ಪ್ರಜ್ಞೆಯನ್ನು ದಟ್ಟವಾಗಿ ಬಯಸುವ ವಿಶಿಷ್ಟ ಕೃತಿ. "ಈ ಕಾದಂಬರಿಯನ್ನು ಓದಿದವರು ಇದೊಂದು ರೊಮ್ಯಾಂಟಿಕ್ ಥ್ರಿಲ್ಲರ್ ಎಂದು ತಿಳಿಯಬಹುದು. ಆದರೆ ಇದು ನಿಜವಾಗಿಯೂ ಸಹ್ಯಾದ್ರಿಯ ಕಾಡುಗಳ ತಪ್ಪಲಿನಲ್ಲಿ ನಡೆಯುತ್ತಿರುವ ವಾಸ್ತವದ ಸಾಮಾಜಿಕ ಕಾದಂಬರಿ. ಕುವೆಂಪುರವರ ಕಾನೂರು ಹೆಗ್ಗಡತಿ. ಕಾರಂತರ ಮರಳಿಮಣ್ಣಿಗೆ ಕಾಲದ ಸಹ್ಯಾದ್ರಿಯ ಕಾಡುಗಳಿಗೂ ಇವತ್ತಿನ ಪರಿಸ್ಥಿತಿಗೂ ಇರುವ ಅಜಗಜಾಂತರ ವ್ಯತ್ಯಾಸಕ್ಕೆ ಈ ಕಾದಂಬರಿ ಉದಾಹರಣೆ."[೭೦] ನಮ್ಮ ಸಾಮಾಜಿಕ ಪರಿಸರಗಳಿಗೆ ಸಾಮಾನ್ಯ ಜನರಲ್ಲಿಯೂ ಹುದುಗಿರಬಹುದಾದ ಅಗಾಧ ಜ್ಞಾನ ಸಂಪತ್ತು ಹಾಗೂ ಚೈತನ್ಯಶೀಲತೆಯ ಸಾಧ್ಯತೆಗಳನ್ನು ತಮ್ಮ ಹಿಂದಿನ ಕಾದಂಬರಿಗಳಲ್ಲಿ ಬೆರೆಸಿದ ತೇಜಸ್ವಿಯವರು ಜುಗಾರಿಕ್ರಾಸ್‌ನಲ್ಲಿ ಅಂಥವರ ಬದುಕಿನ ಮೇಲೆ ಆಧುನಿಕ ಜಗತ್ತು ಬೀರುತ್ತಿರುವ ಪರಿಣಾಮ ಭಿನ್ನವಾದುದು, ಪರಿಸರದಲ್ಲಿ ಮನುಷ್ಯ ತನ್ನ ಅನಂತ ಸಾಧ್ಯತೆಗಳನ್ನು ಕಂಡುಕೊಳ್ಳಲು ಮುಂದಾಗುತ್ತಿದ್ದಾನೆ.

'ಚಿದಂಬರರಹಸ್ಯ'ದ ಕೃತಿಯಲ್ಲಿ ಪರಿಸರ ಮತ್ತು ಮನುಷ್ಯನ ಸಂಬಂಧವನ್ನು ನೋಡಬಹುದು. ಇಲ್ಲಿ ಸಮಾಜ ಎಂದು ಗುರುತಿಸಿಕೊಳ್ಳುವುದು ಕೇವಲ ಮಾನವ –ಮಾನವರ

---

೭೦. ಕೆ.ಪಿ.ಪೂರ್ಣಚಂದ್ರತೇಜಸ್ವಿ, 'ಜುಗಾರಿಕ್ರಾಸ್', ಮುನ್ನುಡಿಯಲ್ಲಿದೆ. ೨೦೦೫.

ನಡುವಿನ ಸ್ವಭಾವ, ನಡವಳಿಕೆಯಿಂದುಂಟಾದ ಕೇವಲ ಮನುಷ್ಯ ಸಮಾಜವಲ್ಲ ಅದು ಮಾನವನ ಸ್ವನಿರ್ಮಿತ ಸಮಾಜ ಮತ್ತು ಪ್ರಕೃತಿಯ ನಡುವಿನ ಸಂಬಂಧದಿಂದುಂಟಾದ ಪರಿಸರ. "ಹೆಮ್ಮರಗಳ ಬೃಹದಾಕಾರದ ಕರಿಯ ಛಾಯೆಯಲ್ಲಿ ಗಿರಿಕಂದರದಲ್ಲಿ ಕವಿದಿದ್ದ ಮಹಾಮೌನಗಳಲ್ಲಿ ಇಬ್ಬರಿಗೂ ತಾವು ಹಿಡಿದಿದ್ದ ಬಂದೂಕು ಒಂದು ಕ್ಷುದ್ರ ಆಯುಧದಂತೆ ಕಂಡಿತು."[೭೧] ಕೃಷ್ಣಪ್ಪಗೌಡ ಮತ್ತು ಚೇಂಕ್ರನಿಗೆ ಆದ ಅನುಭವ ಪರಿಸರದ ಎದುರು ಮಾನವ ನಿರ್ಮಿತವಾದ ಭೌತಿಕ, ಸಾಮಾಜಿಕ ಕ್ರಿಯೆಗಳು ತೀರಾ ಗೌಣವಾದವು ಎಂಬುದು ಮತ್ತು ಮಾನವ ಪ್ರಕೃತಿಯೊಡನೆ ಸಂಘರ್ಷಕ್ಕೆ ಇಳಿದಿರುವುದು ತನ್ನ ವ್ಯಕ್ತಿತ್ವದ ಲೋಪವನ್ನು ಆತ್ಮಪತನದ ಸತ್ಯವನ್ನು ಮುಚ್ಚಿಡಲು ಸಂಚು ರೂಪಿತವಾಗಿದೆ. ಆದರೆ ವ್ಯಕ್ತಿತ್ವದ ಅಪಜಯವನ್ನು ಒಪ್ಪಿಕೊಂಡ ವ್ಯಕ್ತಿ ಸತ್ಯಾನ್ವೇಷಣೆಗೆ ಶೋಧಕನಾಗುತ್ತಾನೆ. ವ್ಯಕ್ತಿ ಮತ್ತು ಪರಿಸರದ ಮಧ್ಯದ ಅಮೂರ್ತವಾದ ಅನನ್ಯವಾದ ಸಂಬಂಧ ಮುಂದುವರಿಯುತ್ತದೆ. ಇದಕ್ಕಾಗಿ ಅಂಗಾಡಿ ಮತ್ತು ಜಯರಾಂರ ವ್ಯಕ್ತಿತ್ವವನ್ನೇ ಉದಾಹರಿಸಬಹುದು. ಈ ಅಂಗಾಡಿ ಅವನೇ ಹೇಳಿಕೊಂಡಂತೆ ನಾನಾ ಹೆಸರುಗಳಲ್ಲಿ, ಉದ್ಯೋಗದ ಬದಲಾವಣೆಯಲ್ಲಿಯೇ ಜೀವಿಸುತ್ತ ತನ್ನ ಬಗ್ಗೆ ಪರಿಸರ, ಸಮಾಜದ ಬಗ್ಗೆ ಕಲ್ಪನೆಗಳನ್ನು ಕಟ್ಟುತ್ತಾ ಹಾಗೆ ಇರುವವನು. ಇವರ ಕಲ್ಪನೆ, ತಾರ್ಕಿಕತೆ, ಪತ್ತೇದಾರಿಕೆ ಎಲ್ಲ ಒಂದೇ ಒಂದು ಎಳೆ ತಪ್ಪಿದರೂ ನಗೆ ಪಾಟಲಾಗಿ ಇವನ ಅಂತಃಸಾಕ್ಷಿ ದಿಗಿಲುಗೊಳ್ಳುತ್ತದೆ ಎಂಬುದು ಗೋಸಾಯಿಗಳ ಪಲಾಯನದಿಂದ ಗೊತ್ತಾಗುತ್ತದೆ. ಇದೇ ರೀತಿ ಇದ್ದ ಜಯರಾಂ, ತನ್ನಪರಿಸರದ ಸಂಬಂಧವನ್ನು ಅರ್ಥೈಸಿಕೊಂಡು ವಸ್ತು ನಿಷ್ಠವಾದ, ಮೌಲಿಕವಾದ ವ್ಯಕ್ತಿಯಾಗುತ್ತಾನೆ. ಆದರೆ ಅಂಗಾಡಿಗೆ ಬದಲಾವಣೆ ಸಾಧ್ಯವಾಗುವುದೇ ಇಲ್ಲ. ಹೀಗೆ ಪ್ರಯೋಗದ ನಂತರ ಜೀವನ ಸೃಷ್ಟಿಯ ನಿಗೂಢವನ್ನು, ಶಕ್ತಿಯನ್ನು ಒಪ್ಪಿಕೊಂಡು ಜಯರಾಂ ಮತ್ತು ತನ್ನದೇ ಪ್ರಭಾವಲಯದೊಳಗೆ ಇರುವ ಅಂಗಾಡಿ ವ್ಯಕ್ತಿತ್ವದ ಎರಡು ಮಾಧರಿಗಳೆನಿಸುತ್ತಾರೆ.

ಪ್ರಕೃತಿ ಮತ್ತು ಪರಿಸರದ ಬಗ್ಗೆ ಚಿಕ್ಕಂದಿನಿಂದಲೂ ತಮ್ಮ ತಂದೆಯವರ ಪ್ರಭಾವಕ್ಕೊಳಗಾಗಿ ಕುತೂಹಲವನ್ನು ಮೂಡಿಸಿಕೊಂಡ ತೇಜಸ್ವಿ ಅವರು ಪರಿಸರ ಶ್ರದ್ಧೆಯಿಂದ ಸೃಜಿಸಿದ ಕೃತಿ 'ಪರಿಸರದ ಕಥೆ' ಪರಿಸರ ಸಂರಕ್ಷಣೆಯ ಬಗ್ಗೆ ವೈಜ್ಞಾನಿಕ ತಿಳುವಳಿಕೆ, ಸಾಮಾಜಿಕ ಎಚ್ಚರ ಹಾಗೂ ಸಾಂಸ್ಕೃತಿಕ ಕಾಳಜಿಯನ್ನು ಈ ಕಥೆಗಳು ಅಭಿವ್ಯಕ್ತಿಸಿವೆ. ಬದುಕಿನ ಹಾಸ್ಯ, ವಿನೋದ, ದುರಂತವನ್ನು ಚಿತ್ರಿಸುವುದೇ ತೇಜಸ್ವಿಯವರ ಈ ಪರಿಸರದ ಕಥೆಗಳ ಮುಖ್ಯ ಗುರಿಯಾಗದೆ ಜೀವ ಸಂಕುಲಗಳ ಹುಟ್ಟು, ವಿಕಾಸ, ಸಾವುಗಳನ್ನು ವೈಜ್ಞಾನಿಕವಾಗಿ ಕಥಾಮಾಧ್ಯಮದ ಮೂಲಕ ವಿವರಿಸುವುದು ಇಲ್ಲಿ ಕಾಣುವ ಕಾಳಜಿಯಾಗಿದೆ. ನವ್ಯರಲ್ಲಿಯೇ

---

೭೧. ಕೆ.ಪಿ.ಪೂರ್ಣಚಂದ್ರತೇಜಸ್ವಿ, 'ಚಿದಂಬರರಹಸ್ಯ' ೨೦೦೫, ಪು. ೧೦೦.

ಅತ್ಯಂತ ವಿಶಿಷ್ಟವಾದುದರ ಸೃಷ್ಟಿಗೆ ಕಾರಣರಾಗಿದ್ದಾರೆ. ತೇಜಸ್ವಿಯವರ ಅನ್ವೇಷಣಾ ಗುಣಕ್ಕೆ ಸಾಕ್ಷಿಯಾದ ಹಲವು ಕೃತಿಗಳಲ್ಲಿ 'ಪರಿಸರಕಥೆ' ವಿಶಿಷ್ಟವಾದುದು. ಸಾಹಿತ್ಯ, ವಿಜ್ಞಾನ, ಕಲಾತ್ಮಕತೆಗಳ ಮೈಗೂಡುವಿಕೆಯೇ 'ಪರಿಸರದ ಕಥೆ'ಯಾಗಿದೆ. ಜೀವಸಂಕುಲಗಳು ಉಳಿವಿಕೆಗಾಗಿ ಹೋರಾಟ ಮಾಡುವ ಕ್ರಮವನ್ನು ವೈಜ್ಞಾನಿಕ ರೀತಿಯಲ್ಲಿ ವಿಶ್ಲೇಷಿಸಲಾಗಿದೆ. ಜೀವ ವಿಕಾಸದ ರೀತಿಯನ್ನು ವೈಜ್ಞಾನಿಕವಾಗಿ ಕಥೆಗಳ ಮೂಲಕ ವಿವರಿಸುವುದು ಲೇಖಕರ ಮುಖ್ಯ ಕಾಳಜಿಯಾಗಿದೆ. ಪರಿಸರದ ವಿನ್ಯಾಸದ ಈ ಕಥೆಗಳಲ್ಲಿ ಮನುಷ್ಯರು, ಪ್ರಾಣಿ, ಪಕ್ಷಿ ಹಾಗೂ ಸಸ್ಯ ಸಂಕುಲಗಳಿಗೆ ಮುಖಾಮುಖಿಯಾಗುತ್ತಿರುವ ಅನುಭವ ಜನ್ಯ ಚಿತ್ರಗಳಿವೆ.

ಕಾಡು, ಪ್ರಾಣಿಗಳ ಸಂರಕ್ಷಣೆ, ಶಿಕಾರಿಯ ಅನುಭವ ಹಾಗೂ ಕುವೆಂಪು ಅವರು ವಾಯು ವಿಹಾರಕ್ಕೆ ಮಕ್ಕಳನ್ನು ಕರೆದೊಯ್ಯುತ್ತಾ ವಿವರಿಸಿ ಪ್ರತ್ಯಕ್ಷವಾಗಿ ತೋರಿಸಿದ ಪ್ರಸಂಗಗಳು ಮೊದಲ ಕಥೆಯಲ್ಲಿ ಪ್ರಸ್ತಾಪಿಸಿದ್ದಾರೆ. ಮಕ್ಕಳ ಕುತೂಹಲಭರಿತ ಮನಸ್ಸುಗಳಿಗೆ ಇಲ್ಲಿಯ ಸಾಹಸದ ಕುರಿತು ವಿವರಿಸಿದ್ದಾರೆ. ಬಿಲದ ಬಾಯಿಗೆ ಚಿಕ್ಕ ಕಲ್ಲು ಹರಳುಗಳನ್ನು ಇವರು ಅಡ್ಡ ಇಟ್ಟಿದ್ದರೂ ಮರುದಿವಸಕ್ಕೆ ಅವನ್ನೆಲ್ಲಾ ಖಾಲಿ ಮಾಡಿ ಒಪ್ಪ ಓರಣ ಮಾಡಿದ ರೀತಿ ಹಾವು ಬಿಲಕ್ಕೆ ನುಗ್ಗಿದಾಗ ಹೊರ ದಾರಿಗಳ ಮುಖಾಂತರ ಪರಾರಿಯಾಗುವ ಕಳ್ಳದಾರಿಗಳನ್ನು ಪತ್ತೆ ಮಾಡಿದ ಲೇಖಕರ ಬಾಲ್ಯದ ಕುತೂಹಲದ ನೆನಪುಗಳಿವೆ. "ಈ ನೆನಪನ್ನು ನಿಮಗೇಕೆ ಹೇಳಿದೆನೆಂದರೆ ಇದೇನೂ ನರಭಕ್ಷಕ ಶಿಕಾರಿಯಂಥ ರೋಮಾಂಚಕ ಸಾಹಸವೇನಲ್ಲ ಆದರೆ ನಮಗೆ ತಂದೆ, ತಾಯಿ, ಗೆಳೆಯರು, ಸ್ಕೂಲು ಇಷ್ಟರೊಳಗೆ ಸೀಮಿತವಾಗಿದ್ದ ಜೀವಸಮುಚ್ಚಯದ ಕಲ್ಪನೆಯನ್ನು ನಮ್ಮ ಪ್ರಜ್ಞೆಗೆ ಅನೂಹ್ಯವಾಗಿದ್ದ ಹಾವು, ಇಲಿ ಮತ್ತು ಮೊಲ ಇತ್ಯಾದಿಗಳ ವಿಶ್ವಸಮಾಜದ ಪರಿಚಯಕ್ಕೆ ನರಭಕ್ಷಕನೇ ಒಂದು ಹೊತ್ತೊಯ್ಯಬೇಕೆ? ಇಲಿಗಳು ಬಿಲಗಳಿಂದ ಕಲ್ಲು ಎತ್ತಿಟ್ಟರೂ ಸಾಕಲ್ಲವೇ?"[೭೨] ಎನ್ನುವ ಕಥೆಗಾರರು ಮಕ್ಕಳ ಮಾನಸಿಕ ಬೆಳವಣಿಗೆಗೆ ಅಪ್ಪ-ಅಮ್ಮಂದಿರ ಪೂರಕ ಪಾತ್ರದ ಅಗತ್ಯತೆಯನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಬಾಲ್ಯದಲ್ಲಿ ಇಂತಹ ವಿಶಿಷ್ಟವಾದ ಪರಿಸರ ದೊರಕಿದ್ದರಿಂದಲೇ ಕಥೆಗಾರರು ನಿಸರ್ಗದ ವೈಶಿಷ್ಟ್ಯವನ್ನು ಸ್ವಾನುಭವದ ಕಥಾಕೋಶವನ್ನಾಗಿಸಿದರು. ಪ್ರಕೃತಿ ಮತ್ತು ಪರಿಸರದ ಬಗ್ಗೆ ತೇಜಸ್ವಿಯವರಿಗೆ ವಿಪರೀತ ಆಸೆ ಮತ್ತು ಕುತೂಹಲ ಅದಕ್ಕೆ ಕಾರಣ ಕುವೆಂಪು ಅವರೇ ಎಂದು ಹೇಳಬಹುದು. ತಾವು ಪರಸರವಾದಿಯಾಗಿ ರೂಪುಗೊಂಡು, ಪರಿಸರ ಸಂರಕ್ಷಣೆಯ ಬಗ್ಗೆ ವೈಜ್ಞಾನಿಕ ಪಾಠಗಳನ್ನು ಕುರಿತು ನಡೆದು ಬಂದ ದಾರಿಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುವ ಮೂಲಕ ಕೌಟುಂಬಿಕವಾದ ಸಾಂಸ್ಕೃತಿಕ ಪರಿಸರದ ಒಂದು ಮಾದರಿಯ ಅಗತ್ಯತೆಯನ್ನು ಹೇಳಿದ್ದಾರೆ.

೭೨. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, 'ಪರಿಸರದ ಕಥೆಗಳು', ೨೦೦೧, ಪು. ೪೨.

'ಉದಯರವಿ'ಯಲ್ಲಿನ ಸಂಪಿಗೆ ಮರದಲ್ಲಿ ಗೂಡು ಕಟ್ಟಿದ ಟುವ್ವಿಹಕ್ಕಿ, ಕಿಟಕಿ ಗೂಡಿನಲ್ಲಿ ಮರಿಮಾಡಿದ ಪಿಕಳಾರ ಹಕ್ಕಿ, ನುಗ್ಗೆಮರಕ್ಕೆ ಪ್ರತಿ ವರ್ಷ ಹತ್ತಿಕೊಳ್ಳುತ್ತಿದ್ದ ಕಂಬಳಿ ಹುಳಗಳ ದಂಡು ತಂದೆಯ ತಾರುಣ್ಯದ ಬೇಟೆಯ ರೋಮಾಂಚಕ ಅನುಭವಗಳು ಸೃಷ್ಟಿಸಿದ ಬೌದ್ಧಿಕ ಹಸಿವಿನ ಹಾಗೂ ಬೆಳೆಸಿದ ಆಸಕ್ತಿಯ ವಿವರಗಳು ಈ ಭಾಗದಲ್ಲಿದೆ. ತಮ್ಮ ಕಥನಸಾಹಿತ್ಯದ ಮಾನವೇತರ ಪಾತ್ರನಾದ ನಾಯಿ 'ಕಿವಿ'ಯ ಕತಾನಕದ ಉದ್ದಕ್ಕೂ ಕಥೆಗಾರರಿಗೆ ಜೀವ ವಿಜ್ಞಾನದ ಪರಿಚಯವನ್ನು ನೀಡಿದ ಅಭೂತಪೂರ್ವ ವಿವರವೆಂದೇ ಚಿತ್ರಿಸಿದ್ದಾರೆ. ಈ ಕಿವಿಯಿಂದ ತಮ್ಮ ತೋಟ ಹಾಗೂ ಸುತ್ತಮುತ್ತಲಿನ ಕಾಡಿನಲ್ಲಿ ಬೆಂಕಿ ದಾರಿಯನ್ನು ಕದಡುತ್ತಿದ್ದ ಉಡದ ದೈತ್ಯ ಶಕ್ತಿಯು ಅರಿವಾಗುತ್ತದೆ. ಹಕ್ಕಿಗಳ ಮೊಟ್ಟೆ ಮರಿ, ಹುಳ-ಹುಪ್ಪಟ, ಗೆದ್ದಲು, ಇರುವೆಗಳನ್ನು ತಿಂದು ಹಾಕುತ್ತಿದ್ದ ಉಡವನ್ನು ಹಿಂದಿನ ಕಾಲದಲ್ಲಿ ಶತ್ರುಗಳ ಕೋಟೆಯನ್ನು ಆಕ್ರಮಿಸಿಕೊಳ್ಳಲು ರಾಜರು ಬಳಸುತ್ತಿದ್ದುದರ ಹಿನ್ನೆಲೆಯಲ್ಲಿ ಅದರ ಅಗಾಧ ಶಕ್ತಿಯನ್ನು ಪರಿಚಯಿಸಿಕೊಳ್ಳುತ್ತಾರೆ. 'ಬೆಂಕಿದಾರಿ'ಯಂತ ವೈಜ್ಞಾನಿಕ ಮಾಹಿತಿ ಈ ಕಥೆಯಿಂದ ದೊರಕುತ್ತದೆ. ನಾಗರಿಕ ಜಗತ್ತಿನಲ್ಲಿ ಅನಾಗರೀಕವಾಗಿ ಬದುಕುತ್ತಿದ್ದ ಮಾಸ್ತಿ ಮತ್ತು ಭೈರರು ಶಿಕಾರಿಗೆ ಬಳಸುವ ಅನೇಕ ತಂತ್ರಗಳನ್ನು ಪ್ರಯೋಗಿಸುತ್ತಿದ್ದ ಬಗ್ಗೆ 'ಮಾಸ್ತಿ' ಮತ್ತು ಭೈರ' ಕಥೆಯಲ್ಲಿ ವಿವರಿಸಿದ್ದಾರೆ. ಕಾಡಿನ ನಡುವೆ ವಾಸ ಮಾಡುತ್ತಾ ಎಂತೆಂಥವೋ ಗಿಡಗಳ ಚಿಗುರು, ಬಯಸಿ ಗಿಡದ ದಂಡು, ನೂಲೆಗೆಣಸು, ಹಂದಿಗೆಡ್ಡೆ, ಕಾಡುಕಸ, ಕಾಡುದಾಸವಾಳ ಎಲೆ, ಹೂ-ಮೊಗ್ಗು ಇತ್ಯಾದಿಗಳು ಕೆರೆಹಾವು, ಹಕ್ಕಿಮೊಟ್ಟೆ, ಇಲಿಗಳು, ಹೆಗ್ಗಣ, ಇರುವೆಮೊಟ್ಟೆ, ಬ್ಯಾಣರಕೊಟ್ಟೆ, ಹಲಸಿನಗಾಳ, ಮಿಡಿ ಹೀಗೆ ಕಣ್ಣಿಗೆ ಕಂಡದ್ದೆಲ್ಲಾ ತಿನ್ನುತ್ತಿದ್ದರು. ಪ್ರಕೃತಿದತ್ತವಾದ ಆಹಾರ ಪದಾರ್ಥಗಳ ಬಳಕೆಯಿಂದ ಬದುಕುತ್ತಿದ್ದ ಮಾನವ ಜೀವಿಗಳ ವಿವರಗಳನ್ನು ತೇಜಸ್ವಿ ಅನಾವರಣ ಮಾಡಿದ್ದಾರೆ. ನಾಗರಿಕ ವ್ಯವಸ್ಥೆಯಲ್ಲಿ ಅರಿವಿಲ್ಲದ ಅನೇಕ ಶಿಕಾರಿಯ ತಂತ್ರಗಳನ್ನು ಮಾಸ್ತಿಭೈರರು ಪ್ರಯೋಗಿಸುವ ಅನುಭವ ಸಿದ್ಧಾಂತದ ಎದುರು ವಿದ್ಯೆ ದೊಡ್ಡದಲ್ಲ ಎನ್ನುವುದನ್ನು ಅನಾಗರಿಕರೆನಿಸಿಕೊಂಡವರು ಸಾಬೀತುಪಡಿಸಿದ್ದಾರೆ. ಪೋಷಕರು ತಮ್ಮ ಮಕ್ಕಳ ಬೌದ್ಧಿಕ ಬೆಳವಣಿಗೆಗೆ ನೀಡಬೇಕಾದ ಪರಿಸರದ ವಿಸ್ಮಯಗಳ ಬಗ್ಗೆ ತಮ್ಮ 'ಸುಸ್ಮಿತ ಮತ್ತು ಹಕ್ಕಿಮರಿ' ಕಥಾಭಾಗದಲ್ಲಿ ವಿವರಿಸಿದ್ದಾರೆ. ಜಗತ್ತಿನ ಸಮಸ್ತ ವಿಸ್ಮಯಗಳನ್ನು ತಮ್ಮದಾಗಿಸಿಕೊಂಡು ಮತ್ತಷ್ಟು ಕುತೂಹಲಗಳಿಗೆ ಇಂದ್ರಿಯಗಳನ್ನು ಒಡ್ಡಿ ನಿಲ್ಲುವ ಮಗುವಿಗೆ ತಂದೆ ಬಂದಾಗ ತಮಗಿಂತ ಬಲಿಷ್ಠ ಪ್ರಾಣಿಗಳು ತಮ್ಮ ಮೊಟ್ಟೆಯನ್ನು ನಾಶ ಮಾಡದಿರಲು ಆಯ್ದುಕೊಳ್ಳುವ ಸ್ಥಳಗಳ ಬಗ್ಗೆ, ತಾಯಿಯಿಲ್ಲದ ಪಿಕಳಾರ ಮೊಟ್ಟೆಯನ್ನು ಕೃತಕ ಶಾಖದಿಂದ ಮರಿಮಾಡಿ, ಆಹಾರ ತಿನ್ನಿಸುವ ಸಂದರ್ಭದಲ್ಲಿ ಹಕ್ಕಿಮರಿ ಸತ್ತುಹೋಗುವುದು ಇತ್ಯಾದಿ ಪ್ರಾಯೋಗಿಕ ವಿವರಗಳ ವೈಜ್ಞಾನಿಕ ಮಾಹಿತಿಯನ್ನು ನೀಡುತ್ತಾರೆ. ಪ್ರಕೃತಿಯ ವಿಸ್ಮಯ-ರಹಸ್ಯಗಳ ಬಗ್ಗೆ ಸಂಪೂರ್ಣ ತಿಳಿಯುತ್ತೇನೆಂದು

ಹೋಗುವುದು ಮೂರ್ಖತನ, ಅಗತ್ಯವಿರುವಷ್ಟನ್ನು ತಿಳಿದು ಉಳಿದಿದ್ದನ್ನು ನೋಡಿ ಸುಮ್ಮನಿರುವುದು ಪ್ರಕೃತಿಮೇಲಿನ ಪ್ರೀತಿಯನ್ನು ಗಾಢವಾಗಿಸುತ್ತದೆ ಎಂಬ ಪೋಷಕರ ಅಭಿಪ್ರಾಯಕ್ಕೆ ಕಥೆಗಾರರು ಸಹಮತ ನೀಡಿದ್ದಾರೆ.

ಕಾಡಿನಲ್ಲಿನ ಹಾವುಗಳನ್ನು ಪುಂಗಿ ಊದಿ ಹಿಡಿಯುತ್ತಿದ್ದ ಎಂಗ್ಟನ ಕೆಲಸ ಮೋಡಿಹಾಕಿ ಹರಡುವುದೇ ಆಗಿದೆ ಎಂದು ನಂಬಿದ್ದ ಕಥೆಗಾರರಿಗೆ ವಾಸ್ತವವನ್ನು ಮೀರಿದ ನಿಗೂಢತೆ ಇರುವುದನ್ನು ಸ್ಪಷ್ಟಪಡಿಸುವ ಕಥೆ 'ಎಂಗ್ಟನ ಪುಂಗಿ' ಕಿವಿ ಇಲ್ಲದ ಹಾವು ಪುಂಗಿಯ ಸಂಗೀತಕ್ಕೆ ತಲೆ ಆಡಿಸುತ್ತದೆ ಎಂಬ ಢೋಂಗಿಯನ್ನು ನಿರಾಕರಿಸುವವರ ಎದುರಿನಲ್ಲಿ ಕಾಡಿನ ನಾಗರ ಹಾವೊಂದನ್ನು ಹಿಡಿದು ಕೊಳಕುಮಂಡಲವನ್ನು ತನ್ನ ಬುಟ್ಟಿಗೆ ಸೇರಿಸುವ ಎಂಗ್ಟನ ಕೈಚಳಕದ ಬಗ್ಗೆ ಕಥೆಗಾರರಿಗೆ ಪ್ರತಿಕ್ರಿಯೆಂದೇ ಮರೆತು ಹೋಗುತ್ತದೆ. ಎಂಕ್ಟನಂತಹ ಹಾವಾಡಿಗರ ಕುಲ ಕಸುಬುಗಳು, ಅವರು ನೀಡುತ್ತಿದ್ದ ಗಿಡ ಮೂಲಿಕೆಗಳ ಔಷಧಿಗಳು ಆಧುನಿಕ ವಿನಾಯಿತಿ ಔಷಧಿಗಳ ಮುಂದೆ ಬೆಲೆ ಕಳೆದುಕೊಳ್ಳುತ್ತಿರುವುದರ ಬಗ್ಗೆ ಕಥೆಗಾರರಂತೆ ಓದುಗರಲ್ಲೂ ತಣ್ಣನೆಯ ವಿಷಾದವೊಂದು ಸೃಷ್ಟಿಯಾಗುತ್ತದೆ. ಕಾಡಿನ ಮೂಲದಿಂದಲೇ ತಮ್ಮ ಬದುಕನ್ನು ಸಾಗಿಸುತ್ತಿದ್ದ ಎಂಗ್ಯನಂತಹ ಅನೇಕ ಜನಾಂಗಗಳನ್ನು ಕಾಡಿನಿಂದ ಉಚ್ಚಾಟಿಸಿ, ಕಾನೂನುಗಳ ಮೂಲಕ ತಡೆಯೊಡ್ಡುತ್ತಿರುವ ನಾಗರಿಕ ವ್ಯವಸ್ಥೆಯ ಕ್ರೌರ್ಯ ಈ ಕಥೆಯ ಎಂಗ್ಟನ ಪಾತ್ರ ಸ್ಪಷ್ಟಪಡಿಸುತ್ತದೆ.

ಕಾಡಿನ ಮಕ್ಕಳನ್ನು ಒಕ್ಕಲೆಬ್ಬಿಸಿ ನಾಗರಿಕ ಸೌಲಭ್ಯಗಳನ್ನು ಒದಗಿಸುತ್ತೇವೆಂಬ ಹುನ್ನಾರಿನಲ್ಲಿ ಅವರನ್ನು ದಿಕ್ಕೇಡಿಗಳನ್ನಾಗಿಸುತ್ತಿರುವ ವ್ಯವಸ್ಥೆ ಸ್ವತಃ ಕಾಡಿನ ನಾಶಕ್ಕೆ ಪರಿಸರದ ಹಾನಿಗೆ ಮೂಲವಾಗುತ್ತಿದೆ. ಆದಿವಾಸಿ ಜನಾಂಗಗಳ ಇತಿಹಾಸವನ್ನು ಗಮನಿಸಿದರೆ ಅವರಲ್ಲಿನ ಪ್ರಕೃತಿ ಪ್ರೀತಿ, ಕಾಳಜಿಗಳು, ಸರಕಾರದ ಕಾನೂನು, ಶಿಕಾರಿ ನಿಷೇಧ ಇತ್ಯಾದಿಗಳಿಂದ ಕಳೆದುಹೋಗುತ್ತಿದೆ. ಕಳ್ಳಸಾಗಣೆದಾರರ ಬೃಹತ್ ಜಾಲಗಳನ್ನು ಪತ್ತೆ ಹಚ್ಚಲಾಗದ ಸರಕಾರದ ಕಾನೂನು ವ್ಯವಸ್ಥೆ ಮರ–ಗಿಡ, ಮೃಗ–ಪಕ್ಷಿ ನೀರಿನ ಝರಿಗಳ ಅವಸಾನಕ್ಕೆ ಕಾರಣವಾಗುತ್ತಿರುವುದು ವರ್ತಮಾನದ ವ್ಯಂಗ್ಯವಾಗಿದೆ. ಮನುಷ್ಯ ತಾನು ಕಾಯಬೇಕಾದ ತೋಟವನ್ನು ಚೌಡಿಗೆ ವಹಿಸಿಕೊಟ್ಟು, ಕಳ್ಳತನವನ್ನು ಇಲ್ಲವಾಗಿಸುವ ಮಾರನ ಬುದ್ಧಿವಂತಿಕೆ 'ಸಂಬಳಕ್ಕೆ ಸಿಕ್ಕಿಕೊಂಡ ದೆವ್ವ'ದಲ್ಲಿದೆ. ಸೌದೆ, ಹಲಸು, ಏಲಕ್ಕಿ, ಬಾಳೆಗೊನೆ, ಕದಿಯಲು ಬರುತ್ತಿದ್ದ ಪುಡಿಗಳ್ಳತನ ನಿಲ್ಲಿಸಲು ಕಾವಲುಗಾರ ಮಾರ ತೋಟದಂಚಿನಲ್ಲಿದ್ದ ಚೌಡಿಗೆ ಅರಿಶಿಣ ಕುಂಕುಮ ಹಚ್ಚಿ ನಾಲ್ಕಾರು ಕಾಸು ಹಾಕುತ್ತಾರೆ. ಮುದುಕ ಮಾರನ ತರ್ಕವೆಂದರೆ ತನಗೆ ಸಾಹುಕಾರರು ಸಂಬಳ ಕೊಟ್ಟಂತೆ ತಾನೂ ಚೌಡಿಗೆ ಸಂಬಳ ಕೊಟ್ಟು ಕಳ್ಳರನ್ನು ಕಾಯಲು ಹೇಳಿದ್ದೇನೆ ಎನ್ನುವುದು. ಮಾರನ ತರ್ಕವನ್ನು ನಂಬಲಾಗದೇ ಹೋದರೂ ಅವನ ಧರ್ಮಶ್ರದ್ಧೆಯ ಪ್ರತೀಕವಾಗಿ ಕಳ್ಳತನಗಳು

ಸಂಪೂರ್ಣವಾಗಿ ನಿಂತುಹೋಗುತ್ತದೆ. ಪರಿಸರದ ಅವಿಭಾಜ್ಯ ಅಂಗಗಳಂತೆ ಇರುವ ಮಾರ-ಪ್ಯಾರರ ಜೀವನಕ್ರಮ ನಂಬಿಕೆಗಳಲ್ಲಿ ಮೂಢ ನಂಬಿಕೆಗಳಿಗಿಂತ ಧರ್ಮಶ್ರದ್ಧೆ ಹೆಚ್ಚಿದೆ. ಚಪ್ಪಲಿ ಕಚ್ಚುವ ಕಿವಿಯಿಂದ ಚಪ್ಪಲಿಯನ್ನು ರಕ್ಷಿಸಲು ಚಪ್ಪಲಿ ಅದಲುಬದಲು ಮಾಡಿ ದೆಯ್ಯದ ಚಪ್ಪಲಿ ಎಂದು ನಂಬಿಕೆ ಹುಟ್ಟಿಸುವ ಪ್ಯಾರನ ಕ್ರಮವೂ ಗ್ರಾಮೀಣರ ಜೀವನ ವಿಧಾನವೇ ಹೊರತು ಅದನ್ನು ವಿಶ್ಲೇಷಿಸಬಾರದು ಎಂಬ ತರ್ಕಕ್ಕೆ ಕಥೆಗಾರರು ಅಂಟಿಕೊಳ್ಳುತ್ತಾರೆ.

ತಮ್ಮ ಮೊಟ್ಟೆಗಳನ್ನು ಅಪಾಯಕಾರಿಯಾದ ಪಕ್ಷಿ ಪ್ರಾಣಿ ಹಾಗೂ ಮನುಷ್ಯರಿಂದ ರಕ್ಷಿಸಿಕೊಳ್ಳಲು ನಡೆಸಲು ನಾಟಕದ ಬಗ್ಗೆ 'ಕುಕ್ಕುಟ ಪಿಶಾಚ' ಕಥಾನಕ ವಿವರಿಸುತ್ತದೆ. ಹೆಂಡ ಕಡಿದು ಓಡಾಡುವ ಮಾರ, ದೆವ್ವ ಹಿಡಿದ ಕಾಡು ಕೋಳಿ ಅವನ ಮುಂದೆ ನರ್ತನಮಾಡಿ ಆಕರ್ಷಿಸಿ ದೂರಕ್ಕೆ ಕರೆದೊಯ್ದು ಗುಂಡಿಯೊಳಗೆ ಹಾಕುವ ವಿಚಾರವನ್ನು ಕಥೆಗಾರರಿಗೆ ಒಪ್ಪಿಸುತ್ತಾನೆ. ಪರೀಕ್ಷಿಸಲು ಹೋದ ಕಥೆಗಾರರಿಗೆ ಕುಕ್ಕುಟ ನರ್ತನದ ಹಿಂದಿನ ಉದ್ದೇಶ ತಿಳಿಯುತ್ತದೆ. ತಾನು ಇಟ್ಟ ಮೊಟ್ಟೆಯನ್ನು ಕಾಪಾಡುವ ಉದ್ದೇಶದಿಂದ ವಿಚಿತ್ರವಾಗಿ ವರ್ತಿಸಿ, ಗೂಡಿನ ಪಕ್ಕ ಓಡಾಡುವ ಜನರ ಹಾಗೂ ಪ್ರಾಣಿಗಳ ಗಮನ ಸೆಳೆದು ವಂಶಾಭಿವೃದ್ಧಿ ಮಾಡುವ ಪಕ್ಷಿಲೋಕದ ತಂತ್ರಗಳನ್ನು ವಿಶದೀಕರಿಸುತ್ತಾರೆ.

ಹಳ್ಳಿ ಬದುಕಿನಿಂದ ಪಟ್ಟಣ ಬದುಕಿಗೆ ಹೋಗಿ, ನಗರೀಕರಣದ ನಾನಾ ಪ್ರತಿಭಟನೆಗಳಿಗೆ ಬೀಳುವವರಲ್ಲಿನ ಧೋರಣೆ 'ಕಾಳಪ್ಪನ ಕೋಬ್ರ' ಕಥೆಯಲ್ಲಿ ಚಿತ್ರಿತಗೊಂಡಿದೆ. ಪಟ್ಟಣದ ಶೋಕಿಗೆ ಮರುಳಾದ ಕಾಳಪ್ಪನ ಉಡುಪು ಇಂಗ್ಲಿಷ್ ಮಿಶ್ರಿತ ಕನ್ನಡಗಳ ಪ್ರದರ್ಶನ ಹಳ್ಳಿಗರ ಪಾಲಿಗೆ ಅಚ್ಚರಿ ಬೊಂಬಾಯಿಯಲ್ಲಿ ಬೀಡಾ ಮಾಡುವವನ ಇಷ್ಟಗಲ ಹರಿವಾಣದಲ್ಲಿ ಬರೋ ಉತ್ಪತ್ತಿ ನಮ್ಮಪ್ಪನ ನಾಲ್ಕು ಎಕರೆ ಗದ್ದೆಯಲ್ಲಿ ಬರೋದಿಲ್ಲ. ಇಲ್ಲಿ ವರ್ಷ ಎಲ್ಲಾ ದುಡಿದರೂ ಅಲ್ಲಿ ನನಗೆ ಒಂದು ತಿಂಗಳಿಗೆ ಸಿಗೋ ದುಡ್ಡು ಇಲ್ಲಿ ಸಿಗೋಲ್ಲ ಎಂಬ ಕೋಬ್ರ ಕಾಳಪ್ಪನ ವಿವರ ಭಾರತದ ಗ್ರಾಮೀಣ ರೈತರ ದುರಂತ ಸತ್ಯಕ್ಕೆ ಭಾಷ್ಯ ಬರೆದಂತಿದೆ. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ನಡೆಯುವ ದಿನ ವಿವರಗಳ ಬಗ್ಗೆ ನಮಗೆ ದಿವ್ಯ ನಿರ್ಲಕ್ಷ್ಯ ಇರುತ್ತದೆ. ಆದರೆ ಪರಿಸರದ ಕುರಿತಂತೆ ಅದಮ್ಯ ಕುತೂಹಲವನ್ನು ತಾಳಿರುವ ಕಥೆಗಾರರು ತಾವು ಕಂಡುಂಡ ಪರಿಸರದ ನಿಗೂಢ ರಹಸ್ಯಗಳನ್ನು ಜ್ಞಾನ-ವಿಜ್ಞಾನಗಳನ್ನು ವಿನೋದದ ಧಾಟಿಯಲ್ಲಿ ನೀಡುತ್ತಾರೆ. ಮಳೆ ಬರಲಿ ಬಾರದೇ ಇರಲಿ ಮೇ ತಿಂಗಳಲ್ಲಿ ಹಸಿರಿನಿಂದ ಪ್ರಜ್ವಲಿಸುವ ನಿತ್ಯ ಹರಿದ್ವರ್ಣ ಕಾಡಿನ ರಹಸ್ಯ ಮರ ಕುಟಿಗನ ಪಕ್ಷಿಯ ದುರ್ವಾಸನೆಯನ್ನು ಕಾಣಬಹುದು. ತಲೆ ಸೀಳಿ ಹೋಗುವಂತೆ ಕರ್ಕಶವಾಗಿ ಕೂಗಿ ನಾಯಿಗಳನ್ನು ಹಿಮ್ಮೆಟ್ಟಿಸುವ ಕಾಡಿನ ಹಂದಿ ಮರಿಗಳು ಇವೆಲ್ಲಾ ಕಥೆಗಾರರ ಸ್ವಾನುಭವಗಳು, ಈ ಎಲ್ಲಾ ವಿವರಗಳು ನಿಸರ್ಗದ ಕೂಸಾಗಿ ಬೆಳೆದ ಕಥೆಗಾರರಿಗೆ ವಿವಿಧ ಸಂದರ್ಭಗಳಲ್ಲಿ ದತ್ತವಾದ ವಿಸ್ಮಯಗಳಾಗಿವೆ.

'ಮೂಲಿಕೆ ಬಳ್ಳಿಯ ಸುತ್ತ' ಕಥೆಯಲ್ಲಿ ಅವಿದ್ಯಾವಂತ ಮಾರನ ಪರಿಸರ ಜ್ಞಾನ ಹಾಗೂ ನಾಟಿ ವೈದ್ಯ ಪದ್ಧತಿಯ ಕುರಿತ ವಿವರಗಳಿವೆ. ಸಸ್ಯ ಮೂಲ ಔಷಧಿಗಳನ್ನು ನೀಡುವ ಅನೇಕ ವೈದ್ಯರು ತಮ್ಮ ಪಾಂಡಿತ್ಯವನ್ನು ಆಸಕ್ತಿ ಇರುವವರಿಗೆ ಕಲಿಸದೆ ತಮ್ಮೊಂದಿಗೆ ವೈದ್ಯ ರಹಸ್ಯವನ್ನು ಮಣ್ಣಾಗಿಸುತ್ತಾರೆ. ಪ್ರಕೃತಿಯಲ್ಲಿನ ಸಮತೋಲನವನ್ನು ಕಾಪಾಡಿಕೊಳ್ಳಬೇಕಾದರೆ ಅದರ ಸುತ್ತ-ಮುತ್ತ ಹರಡಿರುವ ಅತಿರಹಸ್ಯ ಮೂಢನಂಬಿಕೆಗಳಿಂದ ಕೂಡ ಪ್ರಕೃತಿಯನ್ನು ಅದರ ಒಡಲಲ್ಲಿ ವಾಸಿಸುತ್ತಿರುವವರನ್ನು ಬಿಡುಗಡೆ ಮಾಡಬೇಕಾಗಿದೆ ಎಂಬುದನ್ನು 'ಮೂಲಿಕೆಯ ಬಳ್ಳಿಯ ಸುತ್ತ' ಕಥೆ ಸೂಚಿಸುತ್ತದೆ. ಇದು ಮಾರ್ಗದರ್ಶನ ಹಾಗೂ ಸೂಕ್ತ ಮಾಹಿತಿಗಳಿಲ್ಲದೆ ನಶಿಸುತ್ತಿರುವ ವೈದ್ಯ ಪದ್ಧತಿಯಂತೆ ಪರಿಸರದ ಕೂಸಾಗಿ ಬೆಳೆಯುತ್ತಿರುವುವರಿಂದ ಪಡೆದುಕೊಳ್ಳುತ್ತಾ ಪರಿಸರಾಸಕ್ತಿಯನ್ನು ಬೆಳೆಸಬೇಕಾದ ಅಗತ್ಯತೆಯ ಮುನ್ಸೂಚನೆಯಾಗಿದೆ. ಪರಿಸರವನ್ನು ಕುರಿತಂತೆ ಆಧುನಿಕ ವಿದ್ಯಾಭ್ಯಾಸ ಪಡೆದ ನಾಗರಿಕರಿಗೂ ಅದರ ಮಧ್ಯದಲ್ಲೇ ಬದುಕುತ್ತಾ ಇರುವ ಮಾಸ್ತಿ, ಭೈರ, ಮಾರನಂತಹ ಅನಾಗರಿಕರಿಗೂ ಅವರವರ ಮೌಲ್ಯ ವ್ಯವಸ್ಥೆಯಲ್ಲೇ ತನ್ಮೂಲಕ ಜೀವನದರ್ಶನದಲ್ಲೇ ಇರುವ ವ್ಯತ್ಯಾಸಗಳನ್ನು ತೇಜಸ್ವಿ ಸೂಕ್ಷ್ಮವಾಗಿ ದಾಖಲಿಸುತ್ತಾರೆ. ಪರಿಸರದ ಸಾಂಗತ್ಯದಲ್ಲಿನ ಅವಿದ್ಯಾವಂತರನ್ನು ನಾಗರಿಕ ಜಗತ್ತು ಪರಿಗಣಿಸಬೇಕಾದ ರೀತಿಯನ್ನು ವಿವರಿಸಬಹುದು.

ಪರಿಸರದ ಕಥೆಗಳು ತೇಜಸ್ವಿಯವರ ಬರವಣಿಗೆಯ ಇನ್ನೊಂದು ಮುಖ್ಯ ಘಟ್ಟವನ್ನು ಕೂಡ ಸೂಚಿಸುತ್ತಿದೆ. 'ಕುಬಿ ಮತ್ತು ಇಯಾಲ', 'ಅವನತಿ', 'ಚಿದಂಬರರಹಸ್ಯ' ಇಂತಹ ಬರವಣಿಗೆಗೆ ಜನರ ಮೂಢನಂಬಿಕೆ ಜೀವನವಿಧಾನ ಇವುಗಳನ್ನು ನೋಡುವಲ್ಲಿ ವ್ಯಂಗ್ಯಕ್ಕೆ ಹೆಚ್ಚು ಮಹತ್ವ ಪಡೆಯುತ್ತದೆ. ಅವುಗಳ ಪರಿಶೀಲನೆಗೆ, ಟೀಕೆಗೆ ಹೆಚ್ಚು ಒತ್ತು ಆದರೆ 'ಕುಕ್ಕಟ ಪಿಶಾಚಿ', 'ಮಾಸ್ತಿ ಮತ್ತು ಭೈರ' ದಂತಹ ಕಥೆಗಳಲ್ಲಿ ವ್ಯಕ್ತವಾಗಿರುವಂತೆ ತೇಜಸ್ವಿ ಮೂಢ ನಂಬಿಕೆ ಹಾಗೂ ಜನರ ಜೀವನ ವಿಧಾನಗಳನ್ನು ಪ್ರತ್ಯೇಕವಾಗಿ ಬೇರ್ಪಡಿಸಿ, ವೈಚಾರಿಕ ದೃಷ್ಟಿಕೋನದಿಂದ ಮಾತ್ರವೇ ವಿಮರ್ಶಿಸಲು ಹೋಗುವುದಿಲ್ಲ. ಬದಲಾಗಿ ಮೂಢನಂಬಿಕೆಗಳು, ರೀತಿ-ರಿವಾಜುಗಳು ಒಟ್ಟು ಬದುಕಿನ ವಿನ್ಯಾಸದಲ್ಲಿ ಸೇರಿ ಹೋಗಿರುವ ಕ್ರಮವನ್ನು ಗುರುತಿಸಿ ಸಂಯಮದಿಂದ ಅರ್ಥಮಾಡಿಕೊಳ್ಳಲು ಪ್ರಯತ್ನಸುವಂತಿದೆ.

'ಹುಲಿಯೂರಿನಸರಹದ್ದು' ಕಥಾಸಂಕಲನದಲ್ಲಿ ಪರಿಸರ ಮತ್ತು ಮನುಷ್ಯನ ಅಂತರ್ ಸಂಬಂಧವನ್ನು ಬೆಸೆಯುವ ಹಲವು ಕಥೆಗಳನ್ನು ನೋಡಬಹುದು, ಗ್ರಾಮೀಣ ಲೋಕದ ಸಾಮಾನ್ಯ ಮನುಷ್ಯನ ವಸ್ತು ವೈವಿಧ್ಯತೆ ಬೆರಗುಗೊಳಿಸುವಂತದ್ದು. ಅವನ ಜೀವನಕ್ರಮ ಮತ್ತು ಅದಕ್ಕೆ ಪೂರಕವಾಗಿರುವ ಸಾಮಾಜಿಕ ಪರಿಸರದ ವಾಸ್ತವವಾದಿ ದೃಷ್ಟಿಕೋನವೇ ಇಲ್ಲಿನ ಕಥೆಗಳ ಹಿಂದಿರುವ ಪ್ರಧಾನ ಧೋರಣೆಯಾಗಿದೆ. ಇಲ್ಲಿನ ಬಹುತೇಕ ಕಥೆಗಳು ಮಲೆನಾಡಿನ ಹಳ್ಳಿಯ

ಪರಿಸರದಲ್ಲಿ ಘಟಿಸುತ್ತವೆ. ಅತ್ಯಂತ ನಿಕೃಷ್ಟ ವಸ್ತುವೆಂದು ನಿರ್ಲಕ್ಷಿಸಿಬಿಡುವ ವಸ್ತುಗಳೇ ತೇಜಸ್ವಿಯವರ ಆರಂಭದ ಕಥೆಗಳ ವಸ್ತು ವಿಷಯವಾಗಿರುವುದು ಕುತೂಹಲದ ಅಂಶವೂ ಆಗಿದೆ. ಮಕ್ಕಳಿಂದ ಮೊದಲುಗೊಂಡು ಪ್ರೌಢಾವಸ್ಥೆಗೆ ಕಾಲಿರಿಸಿರುವ ವ್ಯಕ್ತಿಗಳು ಕಥಾಪ್ರಪಂಚದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಾರೆ. ದೊಡ್ಡವರ ಅನುಭವ ಪ್ರಪಂಚಕ್ಕಿಂತ ಮಕ್ಕಳ ಮುಗ್ಧಲೋಕದೊಳಗೆ ಅನುಭವಿಸುವ ವಿಸ್ಮಯ ಪ್ರಪಂಚದ ವಿವಿಧ ಮುಖಗಳ ಅನಾವರಣ ಗಮನಾರ್ಹವಾದುದು.

ತೇಜಸ್ವಿಯವರ ಒಟ್ಟಾರೆ ಕಥೆಗಳನ್ನು ವಿವೇಚಿಸಿದಾಗ ಅವರ ಬಾಲ್ಯಕಾಲದ ಅನುಭವಗಳು ಕಥೆಯ ವಸ್ತುಗಳಾಗಿವೆ. ಬಹುತೇಕ ಕತೆಗಳ ಕೇಂದ್ರಬಿಂದು ಮಲೆನಾಡಿನ ಪರಿಸರ ಹಾಗೂ ನವ್ಯ ಸಾಹಿತ್ಯ ಲಕ್ಷಣಗಳು ಸ್ಪಷ್ಟವಾಗಿ ಎದು ಕಾಣುತ್ತವೆ. ಪರಿಪಕ್ವ ಅನುಭವಗಳನ್ನು ಕಥಾ ಸೃಷ್ಟಿಯಲ್ಲಿ ಸಮರ್ಥವಾಗಿ ದುಡಿಸಿಕೊಳ್ಳಬೇಕೆನ್ನುವ ಪ್ರಯತ್ನವಿದೆ. ಕಥೆಗಳಿಗೆ ವಸ್ತು ವೈವಿಧ್ಯತೆಯಿದೆ. ಪ್ರತಿಮಾ ಜಗತ್ತಿನೊಡನೆ ಬೆರೆತ ತಂತ್ರ ವೈಶಿಷ್ಟ್ಯತೆಯಿದೆ. ಸಾಮಾಜಿಕ ಪ್ರಜ್ಞೆ ಕಥೆಗಳ ಅಂತರಾಳದಲ್ಲಿ ಅಮೃತ ಶಕ್ತಿಯಾಗಿ ಪ್ರವಹಿಸಿದೆ ವರ್ಣನಾ ಪ್ರಪಂಚದ ರಸ ಸೃಷ್ಟಿಯ ವೈಶಾಲ್ಯತೆಯಲ್ಲಿ ಧ್ವನಿ ಪೂರ್ಣವಾದ ಸಂವಾದಗಳಿವೆ. ಸಾಮಾಜಿಕ ಒಳ ತುಮುಲ ಬಿಡಿಸಿರುವ ಹಿನ್ನಲೆ ಜೀವಂತ ಸೃಷ್ಟಿಯಾಗಿದೆ. ಹೀಗೆ ತೇಜಸ್ವಿಯವರು ಪರಿಸರವನ್ನು ತಮ್ಮ ಕಥನಸಾಹಿತ್ಯದಲ್ಲಿ ಆವಾಹನೆ ಮಾಡಿಕೊಂಡಿದ್ದಾರೆ.

ಅಧ್ಯಾಯ ಆರು

ಆಲನಹಳ್ಳಿ ಮತ್ತು ತೇಜಸ್ವಿ ಕಥನಸಾಹಿತ್ಯದಲ್ಲಿನ ಸಾಂಸ್ಕೃತಿಕ ಸಂಘರ್ಷದ ತೌಲನಿಕ ವಿವೇಚನೆ

ಆಧುನಿಕ ಕನ್ನಡ ಸಾಹಿತ್ಯವು ಐವತ್ತು ಮತ್ತು ಅರವತ್ತರ ದಶಕಗಳಲ್ಲಿ ಅತ್ಯಂತ ಪ್ರಮುಖಸ್ಥಾನವನ್ನು ಪಡೆಯಿತು. ಅದರಲ್ಲೂ ವಿಶೇಷವಾಗಿ ಅರವತ್ತರ ದಶಕದಲ್ಲಿ ನವ್ಯ ಕಥನಸಾಹಿತ್ಯವು ಉಚ್ಛ್ರಾಯ ಸ್ಥಾನದಲ್ಲಿತ್ತು. ಪಾಶ್ಚಾತ್ಯ ಪ್ರಭಾವ ಹಾಗೂ ಸ್ವಾತಂತ್ರ್ಯಾನಂತರದ ಭಾರತದಲ್ಲಿನ ನಾನಾ ಪಲ್ಲಟಗಳು ಈ ಕಾಲಘಟ್ಟದ ಕಥನಸಾಹಿತ್ಯದ ವಸ್ತುಗಳಾದವು. ಅನೇಕ ಭಿನ್ನ ಮಾದರಿಗಳಲ್ಲಿ ಪ್ರಕಟವಾದ ಕಥನಸಾಹಿತ್ಯವು ಸಾಂಕೇತಿಕತೆ ಹಾಗೂ ಆತ್ಮನಿಷ್ಠತೆಯಿಂದಾಗಿ ಒಂದು ಹಂತದವರೆಗೂ ಏಕತಾನತೆಯಿಂದ ಬಳಲಿತು. ಅದೇ ಸಂದರ್ಭದಲ್ಲಿ ಭಾರತದಲ್ಲಿ ಕೆಲವು ಸಾಮಾಜಿಕ ಹಾಗೂ ರಾಜಕೀಯ ಚಳುವಳಿಗಳು ನಡೆದವು. ಪ್ರಬಲ ಕಾರಣಗಳಿಂದ ವಿಸ್ಮೃತಿಗೆ ಸರಿದಿದ್ದ ಬಹುದೊಡ್ಡ ವಿಚಾರವಾದಿಗಳ ಚಿಂತನೆಗಳು ಎಪ್ಪತ್ತರ ದಶಕದಿಂದೀಚೆಗೆ ಕನ್ನಡ ಸಾಹಿತ್ಯವನ್ನು ಗಾಢವಾಗಿ ಪ್ರಭಾವಿಸಿದವು.

ದಕ್ಷಿಣ ಭಾರತದಲ್ಲಿ ನಡೆದ ತಮಿಳುನಾಡಿನ ಪೆರಿಯಾರ್ ರಾಮಸ್ವಾಮಿ ನಾಯರ್ ಅವರ ವೈಚಾರಿಕ ಸಂಘಟನೆಗಳು, ವಿಜ್ಞಾನಿ ಅಬ್ರಹಾಂ ಟಿ.ಕೇವೂರ್ ಅವರ ವೈಜ್ಞಾನಿಕ ಚಿಂತನೆಗಳು ಮೈಸೂರಿನಲ್ಲಿ ನಡೆದ ಜಾತಿ–ವಿನಾಶ ಸಮ್ಮೇಳನ, ತುರ್ತುಪರಿಸ್ಥಿತಿ, ಬೂಸಾಪ್ರಕರಣ, ದಲಿತ–ಬಂಡಾಯ ಚಳುವಳಿಗಳು, ರೈತಚಳುವಳಿಗಳು, ಸ್ತ್ರೀ ವಿಮೋಚನಾ ಚಳುವಳಿಗಳು, ಕನ್ನಡ ನೆಲದ ರಾಜಕೀಯ, ಸಾಂಸ್ಕೃತಿಕ ಹಾಗೂ ಸಾಹಿತ್ಯ ರಂಗಕ್ಕೆ ಹೊಸ ಚೈತನ್ಯವನ್ನು ಒದಗಿಸಿತು. ಈ ಎಲ್ಲಾ ಚಳವಳಿಗಳ ಪ್ರಭಾವವನ್ನು ಕನ್ನಡ ಸಾಹಿತಿಗಳು ದಿಟ್ಟತನದಿಂದ ದುಡಿಸಿಕೊಂಡರು. ಸಮಾಜವನ್ನು ಹೊಸ ಪರಿಕಲ್ಪನೆಗಳಿಂದ ನೋಡುವ ತಮ್ಮ ಬರಹಗಳ ಮೂಲಕ ಅಭಿವ್ಯಕ್ತಿಗೊಳಿಸುವ ಪ್ರಯತ್ನದಲ್ಲಿ ತೊಡಗಿದರು. ಇದರಿಂದ ಕನ್ನಡ ಸಾಹಿತ್ಯದಲ್ಲಿ ಹೊಸ ಸಂವೇದನೆ ಪ್ರಾರಂಭವಾಯಿತು. ಸಾಹಿತ್ಯ ಕೃತಿಗಳ ನಿರ್ಮಾಣದಲ್ಲಿ ಅನುಭವದಂತೆ ಮನಃಸ್ಥಿತಿಯೂ ಪ್ರಮುಖ ಪಾತ್ರವಹಿಸುತ್ತದೆ. ಶಾಂತ ಮನಃಸ್ಥಿತಿಗೆ ಏಕಾಂತ, ಪ್ರಕೃತಿ ಮುಂತಾದ ಅಂಶಗಳು ಪೂರಕವಾಗಿ ಒಂದು ಸ್ವಚ್ಛಂದ ಭಾವನೆಗಳನ್ನು ಪ್ರೇರೇಪಿಸುತ್ತದೆ. ಕನ್ನಡ ಸಾಹಿತ್ಯದ ಆರಂಭಿಕ ಕೃತಿಗಳಿಂದ ನವೋದಯದವರೆಗೆ ಎಲ್ಲಾ ಕೃತಿಗಳಲ್ಲಿ ಕಥನಸಾಹಿತ್ಯ ಒಂದು ಭಾಗವಾಗಿ ಕವಿಗಳ ಪರಿಸರವು ಬಳಕೆಯಾಗಿರುವುದನ್ನು ಗುರುತಿಸಬಹುದಾಗಿದೆ. ನವೋದಯ ಕಾಲಘಟ್ಟದಲ್ಲಂತೂ ಪ್ರಕೃತಿಯನ್ನೇ ಮುಖ್ಯವಾಗಿರಿಸಿಕೊಂಡು ಸಾಹಿತ್ಯ ರಚಿಸತೊಡಗಿದರು. ಬದಲಾದ ಕಾಲಘಟ್ಟಗಳ ಸಂವೇದನೆಗನುಗುಣವಾಗಿ ವಸ್ತು ವಿಷಯಗಳೂ ಬದಲಾಗುತ್ತಾ

ಬಂದವು. ಅಂತೆಯೇ ನವ್ಯ ಕಾಲಘಟ್ಟದಲ್ಲಿ ಮನುಷ್ಯನ ಮನಃಸ್ಥಿತಿ, ವ್ಯಕ್ತಿತ್ವದ ಶೋಧಕ್ಕೆ ಸಾಚಾ ಅನುಭವಗಳ ದಾಖಲೆಗಳ ಪರ್ವವೇ ಆರಂಭವಾಯಿತು. ಕೆಲವು ಲೇಖಕರು ಮನುಷ್ಯನನ್ನೇ ಕೇಂದ್ರಿಕರಿಸಿದರೆ ಮತ್ತೆ ಕೆಲವರು ಮನುಷ್ಯನ ಮನಸ್ಥಿತಿಗಳೊಂದಿಗೆ ಪ್ರಕೃತಿಯನ್ನು ಬೆರೆಸಿ ಸಾಹಿತ್ಯ ರಚಿಸಿದರು.

ಆಲನಹಳ್ಳಿ ಅವರು ಪ್ರಕೃತಿಯ ಜೊತೆಗೆ ಸಾಮಾಜಿಕ ಸಮಸ್ಯೆಗಳನ್ನು ಕೇಂದ್ರಿಕರಿಸಿದರೆ ತೇಜಸ್ವಿ ಅವರು ಪ್ರಕೃತಿ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಸಮವಾಗಿ ತಂದು ತಮ್ಮ ಅನುಭವದ ಪರಿಸರದಲ್ಲಿ ಜೀವನ ಸಾಗಿಸಿದವರು. ಅವರ ಬಾಲ್ಯದ ಅನುಭವಗಳೆಲ್ಲಾ ಹಳ್ಳಿ ಪ್ರಕೃತಿಯೊಂದಿಗೆ ಮತ್ತು ಕುತೂಹಲಗಳಿಗೆ ಅವರ ಮನಸ್ಸನ್ನು ಬಹುವಾಗಿ ಕಾಡಿದವು. ಹೀಗೆ ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನಸಾಹಿತ್ಯದಲ್ಲಿನ ಸಾಂಸ್ಕೃತಿಕ ಸಂಘರ್ಷದ ತೌಲನಿಕತೆಯ ವಿವೇಚನೆಯನ್ನು ಇಲ್ಲಿನ ಅಧ್ಯಾಯಗಳಲ್ಲಿ ಮಾಡಲಾಗಿದೆ.

೬.೧. ಹಳೆಯ ಹಾಗೂ ಹೊಸಜೀವನ ಕ್ರಮಗಳ ಸಂಘರ್ಷ

ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನಸಾಹಿತ್ಯದಲ್ಲಿ ಹಳೆಯ ಹಾಗೂ ಹೊಸಜೀವನಕ್ರಮಗಳ ಸಂಘರ್ಷ ಹೇಗೆ ಅನಾವರಣವಾಗಿದೆ ಎಂಬುದನ್ನು ತೌಲನಿಕವಾಗಿ ವಿವೇಚಿಸಬಹುದು. ಹಳೆಯ ಜೀವನಕ್ರಮವೆಂದರೆ ಸಾಂಪ್ರದಾಯಿಕ ಬದುಕಿನ ಜೀವನ, ಹೊಸಜೀವನಕ್ರಮವೆಂದರೆ ಆಧುನಿಕತೆಯ ಜೀವನ ನಾಗರೀಕತೆ ಮತ್ತು ಸಂಸ್ಕೃತಿಗಳ ಮುಖಾಮುಖಿಯ ಸ್ವರೂಪವನ್ನು ಆಲನಹಳ್ಳಿ ಮತ್ತು ತೇಜಸ್ವಿಯವರ ಕಥನಸಾಹಿತ್ಯ ಇಲ್ಲಿ ಮುಖ್ಯವಾಗಿ ಗ್ರಹೀತವಾಗುತ್ತವೆ. ಈ ಮುಖಾಮುಖಿಯ ಸಂಘರ್ಷದಲ್ಲಿ ವಿದ್ಯಾವಂತ, ನಾಗರೀಕತೆಯ ಮನುಷ್ಯನನ್ನು ಕಾಡುವ ಅನಾಥಪ್ರಜ್ಞೆ, ಪಾಪಪ್ರಜ್ಞೆ, ಇಬ್ಬಂದಿತನ ಮತ್ತು ಪಲಾಯನ ಸ್ಥಿತಿಗಳು ವಿಶ್ಲೇಷಣೆಯ ಒರೆಗೆ ಹಚ್ಚುವಂತೆ ಮಾಡುತ್ತವೆ.

ಆಲನಹಳ್ಳಿಯವರ 'ತಪ್ತ' ಕಥೆಯ ನಾಯಕ ಹಳ್ಳಿಯಲ್ಲಿ ಹುಟ್ಟಿಬೆಳೆದರೂ ಹೆಚ್ಚಿನ ವಿದ್ಯಾಭ್ಯಾಸಕ್ಕೆ ನಗರಕ್ಕೆ ಬಂದವನು. ಇಲ್ಲಿನ ಜೀವನಕ್ರಮಕ್ಕೆ ಹೊಂದಿಕೊಳ್ಳುವ ನಾಯಕ ಪರಿಸ್ಥಿತಿಗಳ ಒತ್ತಡದಿಂದ ಹಳ್ಳಿಯ ಜೀವನಕ್ಕೆ ಹಿಂದಿರುಗುತ್ತಾನೆ. ಈ ಸಂದರ್ಭದಲ್ಲಿ ಅವನು ಅನುಭವಿಸಿದ ಮಾನಸಿಕ ತೊಳಲಾಟ, ಭೂತಕಾಲದ ಅನುಭವಗಳು ವರ್ತಮಾನದಲ್ಲಿ ಬಂದು ಅವನ ಮಾನಸಿಕ ಹಿಂಸೆಗೆ ಕಾರಣವಾಗುವಿಕೆ 'ತಪ್ತ' ಕಥೆಯ ನಾಯಕನ ಪಾತ್ರವು ಸಮರ್ಥವಾಗಿ ಅಭಿವ್ಯಕ್ತಿಸುತ್ತದೆ. ತೇಜಸ್ವಿಯವರ 'ಅವನತಿ' ಕಥೆಯಲ್ಲಿ ಸೂರಾಚಾರಿ ಹೊಯ್ಸಳರ ಕಾಲದ ಶ್ರೇಷ್ಠ ಶಿಲ್ಪಿಗಳ ಪರಂಪರೆಗೆ ಸೇರಿದ ತನ್ನೆಲ್ಲಾ ಅದ್ಭುತವಾದ ಶಿಲ್ಪ ನೈಪುಣ್ಯವನ್ನು ಮನೆಯ ತುಳಸಿಕಟ್ಟೆಗೆ ಬರಲೆಂದು ಕಲ್ಲಿಗೆ ಉಳಿಹಾಕಿ ಕೊಡುವುದಕ್ಕೂ ಮಾರಿಮಸಣಿಗಳನ್ನು ಮಾಡಿಕೊಡುವುದಕ್ಕೂ

ಬಳಸಿಕೊಳ್ಳುತ್ತಾನೆ. ಸೂರಾಚಾರಿಗೆ ತನ್ನಲ್ಲಿ ಹುದುಗಿರುವ ಕಲೆಯನ್ನು ಅರ್ಥಮಾಡಿಕೊಳುವುದಾಗಲೀ ಅಥವಾ ಅದನ್ನೊಂದು ಅಭಿವ್ಯಕ್ತಿ ಮಾಧ್ಯಮವೆಂದು ತಿಳಿದುಕೊಳ್ಳುವುದಾಗಲಿ ಸಾಧ್ಯವಾಗುವುದಿಲ್ಲ. 'ಅವನತಿ' ಕಥೆಯಲ್ಲಿ ಬರುವ ಮತ್ತೊಂದು ಪಾತ್ರ ಇತ್ತಾವರದ ಗೌರಿ ಈಕೆ, ಸೌಂದರ್ಯವೇ ಮೈವೆತ್ತಿದ ದೇಹದ ವಿನ್ಯಾಸಗಳಿಂದಾಗಿ ಸೌಂದರ್ಯ ಛಂದೊಬದ್ಧವಾದಂತೆ ಕಾಣುತ್ತಿದ್ದರೂ ಅವಳಿಗೆ ಅದರತ್ತ ಗಮನವೇ ಇರಲಿಲ್ಲ. ತನ್ನಲ್ಲಿ ಅಗಾಧವಾದ ಸೌಂದರ್ಯವಿದ್ದರೂ ಅದನ್ನು ಅರಿಯದ ಗೌರಿ ಹಳ್ಳಿಯ ರೈತ ಸುಬ್ಬಯ್ಯನ ಮಡದಿಯಾಗಿ ಕಾಲಕಳೆಯಬೇಕಾದ ಪ್ರಸಂಗವನ್ನು ನಿರೂಪಿಸಿದ್ದಾರೆ.

ಬ್ರಿಟೀಷರ ಆಳ್ವಿಕೆಯ ಫಲವಾಗಿ ಭಾರತೀಯ ಸಮಾಜದಲ್ಲಿ ಸಾಕಷ್ಟು ಫಲಕಾರಿಯಾದ ಬದಲಾವಣೆಯನ್ನು ಕಂಡಿತು. ಎಲ್ಲರಿಗೂ ಸಮಾನವಾಗಿ ವಿದ್ಯಾಭ್ಯಾಸ ದೊರೆತ ಪರಿಣಾಮ ಭಾರತೀಯರ ಆಲೋಚನೆಯಲ್ಲಿ ಗಮನಾರ್ಹವಾದ ಪಲ್ಲಟಗಳು ಕಂಡುಬರುತ್ತವೆ. ಅಲ್ಲಿಯವರೆಗೂ ಸಮಾಜವು ಎಲ್ಲವನ್ನು ಯೋಚಿಸದೇ ಒಪ್ಪಿಕೊಳ್ಳುವಂತಹ ಮನೋಧರ್ಮವನ್ನು ನೋಡಬಹುದು. ವಿದ್ಯಾಭ್ಯಾಸ ಜಾಗ್ರತಿಯಿಂದ ಸಾಮಾಜಿಕ ದೃಷ್ಟಿಕೋನದಲ್ಲಿಯೇ ಸಾಕಷ್ಟು ಬದಲಾವಣೆ ಬಂದಿತು. ಪ್ರತಿಯೊಂದನ್ನು ಪ್ರಾಯೋಗಿಕವಾಗಿ ಒಪ್ಪಿಕೊಳ್ಳುವಂತಹ ವೈಚಾರಿಕ ಮನೋಧರ್ಮ ಬೆಳೆದುಬಂದಿತು. ವೈಚಾರಿಕ ಮನೋಧರ್ಮವನ್ನು ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಇಡೀ ಭಾರತೀಯ ಸಾಹಿತ್ಯವೇ ಪ್ರತಿಬಿಂಬಿಸುತ್ತದೆ. ಸ್ಥಗಿತಗೊಂಡಿದ್ದ ಸಾಹಿತ್ಯ ಕ್ಷೇತ್ರಕ್ಕೆ ಹೊಸಚಾಲನೆ ಕೊಟ್ಟ ಇಂಗ್ಲಿಷ್ ವಿದ್ಯಾಭ್ಯಾಸವು ಸಾಹಿತ್ಯದ ಜೀವಂತಿಕೆಗೆ ಕಾರಣವಾಯಿತು. ಕನ್ನಡ ಸಾಹಿತ್ಯದಲ್ಲಿ ಜೀವಂತಿಕೆಯನ್ನು 'ನವೋದಯ' 'ಪ್ರಗತಿಶೀಲ' 'ನವ್ಯ' 'ದಲಿತ-ಬಂಡಾಯ' ಸಾಹಿತ್ಯ ಘಟ್ಟಗಳ ಸ್ವರೂಪದಲ್ಲಿ ಗುರುತಿಸಲ್ಪಡುತ್ತದೆ. ಈ ನಾಲ್ಕು ಸಾಹಿತ್ಯ ಘಟ್ಟಗಳು ಅನೇಕ ವೈರುಧ್ಯಗಳಿಂದ, ವ್ಯತ್ಯಾಸಗಳಿಂದ ತನ್ನದೇ ಆದ ವಿಶಿಷ್ಟತೆ ವೈವಿಧ್ಯತೆಗಳಿಂದ ಕೂಡಿದೆ. ನವೋದಯ, ಸಾಹಿತ್ಯದಲ್ಲಿ ಆದರ್ಶ, ನಿಸ್ವಾರ್ಥ, ಪ್ರಾಮಾಣಿಕತೆ, ತ್ಯಾಗ, ಸಮಾಜಸೇವೆಗಳಂತಹ ವಿಷಯಗಳನ್ನು ಒಳಗೊಂಡ ಕಥೆ, ಕಾದಂಬರಿಗಳೇ ಹೆಚ್ಚಾಗಿ ಕಂಡುಬರುತ್ತವೆ. ಆ ಸಾಹಿತ್ಯಕ ಸಂದರ್ಭದಲ್ಲಿ ಇವುಗಳ ಪ್ರಸ್ತುತಕ್ಕೆ ಬೇರೆಯ ಕಾರಣವಿದೆ. ಆ ವಿಷಯ ಇಲ್ಲಿ ಅಪ್ರಸ್ತುತವೆನ್ನಬಹುದು. "ಈ ಹೊಸ ಸಾಹಿತ್ಯವು ಹಳೆಯ ಸಾಹಿತ್ಯದ ಸಾರವನ್ನು ಸಹಾಯವನ್ನು ಸ್ವೀಕಾರ ಮಾಡಿದರೂ ಮತ ಪ್ರಸಾರಣೆಗಾಗಲಿ ಪೂರ್ವಕಥಾನುವಾದಕ್ಕಾಗಲೀ ಬರೆಯತಕ್ಕದ್ದಲ್ಲ. ನೂತನಜ್ಞಾನ ಪ್ರಸಾರಣೆಗಾಗಿ ಬರೆಯತಕ್ಕದ್ದು ಪ್ರಪಂಚದಲ್ಲಿ ತಿಳಿದಿರುವ, ನಡೆದಿರುವ ನುಡಿದಿರುವ ಉತ್ತಮ ವಿಷಯಗಳೆಲ್ಲವನ್ನು ಸಿಂಹಾವಲೋಕನದಿಂದ ಇತರರಿಗೆ ತಿಳಿಸತಕ್ಕದ್ದು".[೭೩] ಇಲ್ಲಿ ಕೆಸರುಗಟ್ಟಿದ ಮಣ್ಣುದಾರಿಯನ್ನು ಸಾಂಪ್ರದಾಯಿಕ ಸಮಾಜವಾಗಿ

---

೭೩. ಎಲ್.ಎಸ್.ಶೇಷಗಿರಿರಾವ್, 'ಹೊಸಗನ್ನಡ ಸಾಹಿತ್ಯ ಚರಿತ್ರೆ', ೨೦೧೧, ಪು. ೭೫.

ತೆಗೆದುಕೊಂಡು ಚಪ್ಪಲಿಗಳನ್ನು ಆಧುನಿಕ ಸಮಾಜವಾಗಿ ತೆಗೆದುಕೊಂಡು ಸಂಘರ್ಷದ ಸ್ವರೂಪವನ್ನು ಸಮರ್ಥವಾಗಿ ಬಿಂಬಿಸಬಹುದು. ನಾಯಕನು ಕೆಸರಿನಕಾರಿಯಲ್ಲಿ ನಡೆಯುವಾಗ ಅವನು ಅನುಭವಿಸುವ ಸಂಕಷ್ಟಗಳು ಅವನ ಬದುಕಿನೊಂದಿಗೆ ತಾದ್ಯಾತ್ಮವನ್ನು ಪಡೆದುಕೊಳ್ಳುತ್ತದೆ. ಚಪ್ಪಲಿಗಳಿಂದ ಸಿಡಿಯುವ ಕೆಸರು ಬಟ್ಟೆಯನ್ನು ಯಾವ ರೀತಿ ಕೆಸರಿನ ಕಲೆಗಟ್ಟಿಸುತ್ತದೆ. ಅದೇ ರೀತಿ ಆಧುನಿಕ ಮೌಲ್ಯಗಳಿಗಿರುವ, ಪ್ರಗತಿಪರ ಧೋರಣೆಯ ನಾಯಕ ಸಾಂಪ್ರದಾಯಿಕ ಜೀವನಕ್ರಮದಲ್ಲಿ ತನ್ನ ಮೌಲ್ಯಗಳಿಗೆ ಬದುಕಿಗೆ ಸಂಚಕಾರವನ್ನು ತಂದುಕೊಳ್ಳುತ್ತಾನೆ.

ಕೆಸರಿನಲ್ಲಿ ನಿಂತು ಕೆಸರನ್ನು ಅಂಟಿಸಿಕೊಳ್ಳದೆ ಹೊರಬರಲು ಸಾಧ್ಯವಿಲ್ಲ. ಹಳೆಯ ಜೀವನಕ್ರಮದಲ್ಲಿ ಜಡ್ಡುಗಟ್ಟಿದ ಧೋರಣೆಗಳನ್ನು ಸಂಪೂರ್ಣವಾಗಿ ನಿರ್ಮೂಲಮಾಡಲು ಸಾಧ್ಯವಿಲ್ಲ. ಇದನ್ನು ನಿರ್ಮೂಲನೆಮಾಡ ಹೊರಟಾಗ ನಾಯಕನ ಬದುಕಿನಲ್ಲಿ ಅನೇಕ ಕೆಸರಿನ ಕಲೆಗಳು ಅಳಿಸಲು ಸಾಧ್ಯವಾಗದ ರೀತಿಯಲ್ಲಿ ನಿಲ್ಲುತ್ತವೆ. ಹೊಸ ಮತ್ತು ಹಳೆಯ ಜೀವನಕ್ರಮದ ಸಂಘರ್ಷವನ್ನು ಕೆಸರಿನ ಸಾಂಕೇತಿಕ ಪ್ರತಿಮೆಯಿಂದ ಕಥೆಯ ಯಶಸ್ಸನ್ನು ಆಲನಹಳ್ಳಿ ಮತ್ತು ತೇಜಸ್ವಿಯವರು ಸಾಧಿಸಿ ತೋರಿಸುತ್ತಾರೆ. ಹಳ್ಳಿಯ ಹುಡುಗಿ ಗೌರಿ, ಪೇಟೆಯ ಹುಡುಗಿ ಪ್ರಭಾ, ಹಳೆಯ ಮತ್ತು ಹೊಸ ಜೀವನಕ್ರಮಗಳ ಪ್ರತೀಕಗಳಾಗಿ ನಿಲ್ಲುತ್ತಾರೆ. ಗೌರಿಯ ನಿರ್ಲಿಪ್ತತೆ ನಾಯಕನ ಅಂತರಂಗವನ್ನು ಬುಡಸಮೇತ ಅಲ್ಲಾಡಿಸುತ್ತದೆ. ಪ್ರಭಾಳ ಅನ್ಯೋನ್ಯತೆ ಸ್ನೇಹಪರತೆ, ಪ್ರಣಯಗಳು ನಾಯಕನ ಮನಸ್ಸಿನ ಮೇಲೆ ಪರಿಣಾಮ ಬೀರುವುದೇ ಇಲ್ಲ ಯಾವುದೇ ಮಾತುಕತೆಯಿಲ್ಲದೇ ಮುಗ್ದತೆಯಿಂದಲೇ ಜೀವನದ ಅರ್ಥವನ್ನು ಹುಡುಕುತ್ತಿರುವ ಗೌರಿಯು ಭಾರತೀಯ ಸಾಂಪ್ರದಾಯಿಕ ಹೆಣ್ಣಿನ ರೂಪವಾಗಿ ಕಂಡುಬರುತ್ತಾಳೆ. ಪ್ರಭಾಳು ಆಕರ್ಷಿಸುವ ಪ್ರತಿಯೊಂದನ್ನು ಪ್ರಶ್ನಿಸುವ, ಸಮಾಜದ ವಿರೋಧವನ್ನು ಕಟ್ಟಿಕೊಳ್ಳಲು ಸಿದ್ಧಳಾಗಿರುವ ಆಧುನಿಕ ಹೆಣ್ಣಿನ ರೂಪವಾಗಿದ್ದಾಳೆ. ಗೌರಿಯಪಾತ್ರವು ಬೆಳವಣಿಗೆಯನ್ನು ಪಡೆಯುತ್ತಲೇ ಮುಂದೆ ಪ್ರಭಾಳ ಪಾತ್ರವಾಗಿ ರೂಪುಗೊಂಡಿತು. ವಿದ್ಯಾಭ್ಯಾಸವು ಭಾರತೀಯ ಹೆಣ್ಣಿನಲ್ಲಿ ಹೊಸಜಾಗೃತಿ, ಆಲೋಚನೆ, ದೃಷ್ಟಿಕೋನವನ್ನು ಕೊಟ್ಟಿದೆ. ತನ್ನ ಹಕ್ಕನ್ನು ಪ್ರತಿಪಾದಿಸುವ ಸ್ವಾತಂತ್ರ್ಯವನ್ನು ಪರಿಪೂರ್ಣವಾಗಿ ಅನುಭವಿಸುವಂತೆ ಮಾಡಿತು. ಗೌರಿ, ಪ್ರಭಾ ಪಾತ್ರಗಳು ಈ ಅಂಶವನ್ನು ಪರಿಣಾಮಕಾರಿಯಾಗಿ ನಿರೂಪಿಸುತ್ತವೆ.

ಅಜ್ಞಾನ, ಅಂಧಕಾರ, ಮೌಢ್ಯಗಳನ್ನು ತುಂಬಿಕೊಂಡು ಬದುಕುವ ಜನ, ಭೂತಪ್ರೇತ, ಮಾರಿ ಮಸಣಿಗಳ ಬಗ್ಗೆ ಇರುವ ಅಗಾಧವಾದ ನಂಬಿಕೆ, ರೋಗರುಜಿನಗಳ ಬಗೆಗಿನ ತಪ್ಪು ತಿಳುವಳಿಕೆ, ಅವೈಜ್ಞಾನಿಕ ವೈದ್ಯಪದ್ಧತಿಯ ಕರಾಳ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿರುವ ಪ್ರತಿಭಾನ್ವಿತ ಶಿಲ್ಪಿ ಸೂರಾಚಾರಿ ಇವನ್ನೆಲ್ಲ ಈ ಕಥೆಯಲ್ಲಿ ತೇಜಸ್ವಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಸ್ತ್ರೀ ರತ್ನಗೌರಿಯನ್ನು ಯಾರೂ ಗುರುತಿಸದೇ ಹೋಗುವುದು ಈ ಕಥೆಯ ವಿಪರ್ಯಾಸಗಳಲ್ಲಿ

ಒಂದಾಗಿದೆ. ಗೌರಿಗೆ ಹುಟ್ಟಿದ ಮೂರು ಮಕ್ಕಳೂ ತೀರಿಕೊಂಡಾಗ ಗೌರಿಯಲ್ಲಿಯೇ ದೋಷವನ್ನು ಹುಡುಕುವ ಸಮಾಜ ಗಂಡನಾದ ಸುಬ್ಬಯ್ಯಕೂಡ ಗೌರಿಯಮೇಲೆ ದೋಷಾರೋಪಣೆ ಮಾಡುವುದು ಇವೆಲ್ಲ ಅವರ ಅಜ್ಞಾನವನ್ನು ಹಾಗೂ ಕುಹಕ ಮನಸ್ಸನ್ನು ತೋರಿಸುತ್ತವೆ. ಸೂರಾಚಾರಿ ಕೂಡ ಇಂಥ ಮೌಢ್ಯದ ಪ್ರಭಾವಕ್ಕೊಳಗಾಗಿ ಗೌರಿಯನ್ನು ದೂಷಿಸುವ ಮಟ್ಟಕ್ಕೆ ಇಳಿಯುತ್ತಾನೆ. ಪಾತ್ರಗಳು ಅವನತಿಯತ್ತ ಸಾಗುತ್ತಿರುವ ಅಂಶವನ್ನು ಲೇಖಕರು ಇಲ್ಲಿ ತೆರೆದಿಡುತ್ತಾರೆ. ಸುತ್ತಣ ಬದುಕಿಗೂ ವ್ಯಕ್ತಿಯ ಪ್ರತಿಭೆಗೂ ಇರುವ ಸಂಬಂಧ ಈ ಕಥೆಯ ವಸ್ತುವಾದರೂ ಸಮುದಾಯದ ಬೇಕು-ಬೇಡಗಳಿಗೆ ಸೌಂದರ್ಯ ಮತ್ತು ಕಲೆಗಾರಿಕೆಗಳು ಪಳಗಿಕೊಳ್ಳುವ ಅನಿವಾರ್ಯತೆಯನ್ನು ಅವನತಿ ಕಥೆ ಬಿಂಬಿಸುತ್ತದೆ.

'ತಪ್ತ' ಕಥೆಯಲ್ಲಿ ಗಂಡಿನ ಅಂತರಂಗದ ಸೂಕ್ಷ್ಮತೆಯನ್ನು ಹೇಳುತ್ತಲೇ ಹೆಣ್ಣಿನ ಅಂತರಂಗವನ್ನು ಪ್ರವೇಶಿಸಲು ಪ್ರಯತ್ನಿಸುವುದನ್ನು ನೋಡಬಹುದು. ಸಮಾಜದಲ್ಲಿರುವ ಅಸಮಾನತೆಗಳ ಕಡೆಗೂ ಗಮನಹರಿಸುತ್ತದೆ. ಹಳ್ಳಿಯ ಬದುಕಿಗೆ ಇರುವ ಚೌಕಟ್ಟನ್ನು ನಗರ ಬದುಕಿಗೆ ಇರುವ ಚೌಕಟ್ಟುಗಳಿಂದಲೇ ವ್ಯಕ್ತಿಗಳ ವ್ಯಕ್ತಿತ್ವಗಳು ರೂಪುಗೊಳ್ಳುತ್ತವೆ. ನಾಯಕನ ಮಾನಸಿಕ ಹಿಂಸೆ, ಅವನ ತಾಯಿಯರೋಗ, ಮನೆಯ ಪರಿಸ್ಥಿತಿ ಮತ್ತು ಅವನ ಮಕ್ಕಳ ಆತ್ಮಹತ್ಯೆ, ಗೌರಿಯ ಮದುವೆ ಇವುಗಳೆಲ್ಲವೂ ನಾಯಕನ ದೃಢನಿರ್ಧಾರವನ್ನು ಹೊಂದಲು ಬಿಡದಿರುವುದು. ನಾಗರಿಕತೆಯಲ್ಲೂ ಅವನಿಗೆ ಅಸಹಾಯಕ ಸ್ಥಿತಿಯನ್ನು ಅನುಭವಿಸಲು ಕಾರಣವಾಯಿತೆ. ಇಂತಹ ಸಾಮಾನ್ಯ ಅಂಶಗಳ ಕಡೆಗೂ ಗಮನವನ್ನು ಕೇಂದ್ರೀಕರಿಸುತ್ತದೆ. 'ತಪ್ತ' ಕಥೆ ಸಂಪೂರ್ಣವಾಗಿ ಯಾವೊಂದು ಧೋರಣೆಯನ್ನು ಹೇಳುವುದಿಲ್ಲ. ಮನುಷ್ಯನ ಮನಸ್ಸಿನಲ್ಲಾಗುತ್ತಿರುವ ಸಂಕ್ರಮಣ ಸ್ಥಿತಿ, ಅದರ ತಲ್ಲಣಗಳ ಸ್ವರೂಪಗಳು ಮತ್ತು ಬದುಕಿನ ಶೋಧನೆಯನ್ನು ಕಟ್ಟಿಕೊಡುತ್ತದೆ.

"ತೇಜಸ್ವಿಯವರಲ್ಲಿ ಮಹಿಳೆಯರ ಗಾಢಲೋಕ ಇಲ್ಲದಿರುವಿಕೆಗೂ, ಕುಟುಂಬ ಮನೆಯ ಒಳಗಿನ ನಿತ್ಯ ಬದುಕಿನ ಚಟುವಟಿಕೆಗಳ ಲಯವನ್ನು ಅವರ ಕಥನ ಬಿಟ್ಟುಕೊಟ್ಟಿರುವುದಕ್ಕೂ ಮನೆಯಿಂದ ಹೊರಗೆ ತಿರುಗಾಡುವವರಲ್ಲಿ ಚೈತನ್ಯಶೀಲತೆ ಅರಸುವುದಕ್ಕೂ ಒಳಸಂಬಂಧವಿದೆ. ಅವರ ಕಥನದ ಹೀರೋಗಳ ಕೌಟುಂಬಿಕ ಸಂಬಂಧಗಳು ಬಹಳ ತೆಳು. ತೇಜಸ್ವಿಗೆ ತಮ್ಮ ಕಥನದಲ್ಲಿ ಹಾಗೂ ಶೋಧದಲ್ಲಿ ಗಂಡು ಪ್ರಧಾನ ಮನೋಭಾವದಿಂದ ಹೊರಬರಲು ಆಗುತ್ತಿಲ್ಲವೇ?"[೭೪] ಎಂಬ ರಹಮತ್ ತರೀಕೆರೆಯವರ ಅಭಿಪ್ರಾಯದ ನಡುವೆಯಲ್ಲಿ 'ಕಿರಗೂರಿನ ಗಯ್ಯಾಳಿ'ಗಳು ಹೆಣ್ಣಿನ ಸೃಷ್ಟಿಶಕ್ತಿಯ ಕೊಡುಗೆಯನ್ನು ಹೊಗಳುತ್ತಲೇ, ಶೋಷಣೆಯ

---

೭೪. ರಹಮತ್ ತರೀಕೆರೆ, 'ತೇಜಸ್ವಿಲೋಕ, ಸಂಚಯ(ಸಂ.)', ಡಿ.ವಿ.ಪ್ರಹ್ಲಾದ್, ಪುಟ. ೬೫, ೨೦೦೭.

ಮೂಲವನ್ನಾಗಿಸಿಕೊಳ್ಳುವ ವಿಪರ್ಯಾಸ ಭಾರತೀಯ ಪರಂಪರೆಯ ಆಂಶಿಕ ವಿವರವಾಗಿದೆ. ಏಕಕಾಲಕ್ಕೆ ಹೆಣ್ಣಿನಶಕ್ತಿ ಹಾಗೂ ದೌರ್ಬಲ್ಯವೆಂದೇ ಪರಿಗಣಿತವಾದ ಅವಳ ಗರ್ಭಾಶಯವನ್ನು ಗುರಿಯಾಗಿಸಿಕೊಂಡು ಅವಳನ್ನು ದೈಹಿಕವಾಗಿ ದುರ್ಬಲಳನ್ನಾಗಿಸುವ ಪ್ರಯತ್ನ ಅನಾದಿಕಾಲದಿಂದಲೂ ನಡೆದುಬಂದಿದೆ. ಹೆಣ್ಣನ್ನು ನಿರಂತರವಾಗಿ ಬಸುರಿ ಅಥವಾ ಬಾಣಂತಿಯರನ್ನಾಗಿಸುವ ಮೂಲಕ ಆಕೆಯನ್ನು ಕುಟುಂಬಕೇಂದ್ರಿತ ವ್ಯಕ್ತಿಯನ್ನಾಗಿಸಿ ಅವಳ ಶಕ್ತಿಸಾಮರ್ಥ್ಯಗಳನ್ನು ಕೇವಲ ನಾಲ್ಕುಗೋಡೆಯ ಒಳಗೆ ಸೀಮಿತಗೊಳಿಸುವ ವ್ಯವಸ್ಥಿತ ಸಂಚನ್ನು ನಡೆಸುತ್ತಿರುವ ಯಜಮಾನ್ಯ ಸಂಸ್ಕೃತಿಯ ಸಾರ್ವಭೌಮ ಸ್ಥಿತಿಯನ್ನು ಮಾರನ ಹೇಳಿಕೆ ಪುಷ್ಟಿಗೊಳಿಸುತ್ತದೆ. ಪದೇ ಪದೇ ಕಿರಗೂರಿನ ಗಂಡಸರು ತಮ್ಮೂರಿನ ಹೆಣ್ಣುಮಕ್ಕಳನ್ನು ಹೆಂಡತಿಯರನ್ನು ಗಯ್ಯಾಳಿ, ಗಯ್ಯಾಳೀರು, ಮುಂಡೇರು, ಬಜಾರೀರು, ಗಾಂಚಾಲಿಮುಂಡೇರು ಎಂದು ಸಂಬೋಧಿಸುತ್ತಾ ಏಕಕಾಲಕ್ಕೆ ತಮ್ಮ ಸಣ್ಣತನ ಅಸಹಾಯಕತೆಯನ್ನು ಪ್ರದರ್ಶಿಸುತ್ತಾರೆ. 'ಗಯ್ಯಾಳಿ' ಎಂಬ ಪದವನ್ನು ಬಳಸುತ್ತಾರೆ. ಹೆಂಗಸರನ್ನು ನಕಾರಾತ್ಮಕವಾಗಿ ಮೌಲ್ಯಮಾಪನ ಮಾಡುವಂಥ ಪುರುಷ ಸಮಾಜವೊಂದರ ಚಿತ್ರಣ ಇಲ್ಲಿದೆ. ಗಯ್ಯಾಳಿತನ ಪುರುಷನಿಗೆ ಇತ್ಯಾತ್ಮಕಗುಣವಾಗಿ ಸ್ತ್ರೀಗೆ ನೇತ್ಯಾತ್ಮಕವಾಗುವುದು ಲಿಂಗ ಅಸಮಾನತೆಯ ಪ್ರಧಾನ ಧೋರಣೆಯಾಗಿದೆ.

ಊರಿನ ಗಂಡಸರಿಗೆ ಅವಹೇಳನವೆನಿಸಿದ ದಾನಮ್ಮನ ಗಂಡುಬೀರಿತನ ಕಿರಗೂರಿನ ಸಮಸ್ತ ಹೆಣ್ಣುಮಕ್ಕಳ ಪಾಲಿಗೆ ಸಕಾರಾತ್ಮಕವೆನಿಸಿ ತಾವು ಕಳೆದುಕೊಂಡಿದ್ದ ತಮ್ಮ ಸ್ವಾತಂತ್ರ್ಯವನ್ನು ದಾನಮ್ಮನು ಪ್ರಶ್ನಿಸಬಲ್ಲ ಸಾಮರ್ಥ್ಯದಿಂದ ಮತ್ತೆ ಪಡೆದುಕೊಳ್ಳುತ್ತಾಳೆ. ಗಯ್ಯಾಳಿತನವನ್ನು ಹತ್ತಿಕ್ಕಲು ಪ್ರಯತ್ನಿಸಿದ ವ್ಯವಸ್ಥೆಯಲ್ಲಿ ಗಯ್ಯಾಳಿತನವನ್ನೇ ಅಸ್ತ್ರವನ್ನಾಗಿಸಿಕೊಂಡು ಸ್ವ-ಸಮರ್ಥನೆಗೆ ಬಳಸಿಕೊಳ್ಳುವ ಸಂಗತಿ ನಾಗಮ್ಮನ ಪ್ರಸಂಗದಿಂದ ಖಚಿತಗೊಳ್ಳುತ್ತದೆ. ಸಂತಾನಾಭಿವೃದ್ಧಿಯ ಆಸೆಯನ್ನು ತೋರಿಸಿ ನಾಗಮ್ಮನನ್ನು ಓದಿಸಿಕೊಂಡು ಹೋಗಿ ಆಭರಣವನ್ನು ಕಸಿದುಕೊಳ್ಳುವ ಪ್ರಸಂಗ ಕಿರಗೂರಿನ ಗಂಡಸರ ಗಂಡಸುತನಕ್ಕೆ ಹಾಗೂ ಸ್ವಪ್ರತಿಷ್ಠೆಗೆ ಸವಾಲೆನಿಸಿದೆ.

'ತೊರೆ' ಕಥೆಯಲ್ಲಿ ಆಧುನಿಕ ಮೌಲ್ಯದ ಸೋಲಿನ ಇನ್ನೊಂದು ಮುಖವನ್ನು ಪರಿಚಯಿಸಿಕೊಳ್ಳಬಹುದು. ಹಳೆಯ ಮತ್ತು ಹೊಸಜೀವನಕ್ರಮದ ಸಂಘರ್ಷದಲ್ಲಿ ಮನುಷ್ಯನ ಮನಸ್ಸಿನ ಮೇಲೆ ಎಂಥಹ ಆಘಾತಕಾರಿಯಾದ ಪರಿಣಾಮಗಳು ಪರಿಣಮಿಸಿದರೂ ಸುತ್ತಲಿನ ಸಮಾಜವು ಅವುಗಳನ್ನು ನಿರ್ಲಕ್ಷಿಸುತ್ತದೆ. ಕಥೆಯಲ್ಲಿ ಮನುಷ್ಯರು ಅನುಭವಿಸುವ ಅಸಹಾಯಕ ಸ್ಥಿತಿಗಳ ವಿವಿಧ ಮಾದರಿಗಳನ್ನು ನೋಡಬಹುದು. ಪ್ರಭು ಮತ್ತು ಲಕ್ಷ್ಮೀ ಪ್ರಮುಖಪಾತ್ರದಲ್ಲಿ ಕಥೆ ಸಾಗುತ್ತದೆ. ಅವರಿಬ್ಬರ ಮದುವೆಯ ಪ್ರಸ್ತಾಪವಾಗಿ ಪ್ರತಿಷ್ಠೆಯೂ ಅಡ್ಡಬಂದು ಮುರಿದು ಬೀಳುತ್ತದೆ. ಲಕ್ಷ್ಮೀಯೂ ಒಬ್ಬ ರೋಗಿಷ್ಟನನ್ನು ಮದುವೆಯಾಗಿ ವಿಧವೆಯ ಬದುಕನ್ನು

ಆಶ್ರಯಿಸುತ್ತಾಳೆ. ಪ್ರಭು ತಾರಾಳನ್ನು ಮದುವೆಯಾಗಿ ಬದುಕಿನ ನೆಮ್ಮದಿಯನ್ನು ಹುಡುಕುತ್ತಿದ್ದಾನೆ. ಪ್ರಭುವು ವಿದ್ಯಾವಂತನೆಂಬ ಕಾರಣಕ್ಕಾಗಿ ಲಕ್ಷ್ಮೀಯನ್ನು ನಿರಾಕರಿಸುವ ಅವನಿಗೆ ನಂತರ ಪಶ್ಚಾತ್ತಾಪದ ಪ್ರಜ್ಞೆ ಬೆಳೆಯುವುದನ್ನು ಗುರುತಿಸಬಹುದು. ಪ್ರಭುವು ಅಣ್ಣನ ವಿರುದ್ಧ ನಿಲ್ಲದೆ ತನ್ನ ಆಸೆಗಳನ್ನು ಕೊಲ್ಲುತ್ತಾನೆ. ಇನ್ನೊಂದು ರೀತಿಯಲ್ಲಿ ಪರಕೀಯ ಬದುಕನ್ನು ಅನುಭವಿಸುತ್ತಾ ಬದುಕುತ್ತಿದ್ದಾನೆ. ಹೀಗೆ ಲಕ್ಷ್ಮೀ ಮತ್ತು ಪ್ರಭು ಇಬ್ಬರೂ ಭೇಟಿಯಾದಾಗ ಅವರಲ್ಲಿ ಬಾಲ್ಯ ಘಟನೆಗಳೊಂದಿಗೆ ತಮ್ಮ ಇಂದಿನ ಬದುಕನ್ನು ಸಮೀಕ್ಷಿಸುತ್ತಾರೆ. ಅದರಲ್ಲಿ ಸಮಾಜದ ದೋಷವು ಕಾಣುತ್ತಿದ್ದರೂ ಅದಕ್ಕೆ ಎದುರುಗೊಳ್ಳದೆ, ಹೊಂದಾಣಿಕೆಯ ಜೀವನ ಸಾಗಿಸುತ್ತಿದ್ದಾರೆ. ತಾರಾಳ ಪಾತ್ರವು ಆಧುನಿಕತೆಯನ್ನು ಮೈಗೂಡಿಸಿಕೊಂಡಿದೆ. ಆದರೆ ಲಕ್ಷ್ಮೀಯಷ್ಟು ಗಟ್ಟಿಯಾಗಿ ನಿಲ್ಲುವುದಿಲ್ಲ ತಾರ.

ಆಲನಹಳ್ಳಿಯವರ 'ತಪ್ತ' ಮತ್ತು 'ತೊರೆ' ಕಥೆಗಳಲ್ಲಿ ಹಳ್ಳಿಯ ಪಾತ್ರಗಳು ಗಟ್ಟಿಯಾಗಿ ನಿಲ್ಲುವಷ್ಟು ಆಧುನಿಕ ಪಾತ್ರಗಳು ನಿಲ್ಲುವುದಿಲ್ಲ. ಸಾಮಾಜಿಕವಾಗಿ ಆಧುನಿಕ ಮನೋಧರ್ಮವು ಅದೇ ತಾನೆ ಪ್ರಚಾರವಾಗುತ್ತಿತ್ತು. ಸ್ಥಿರವಾಗಿ ನಿಲ್ಲುವಷ್ಟು ಶಕ್ತಿಯನ್ನು ಅದು ಪಡೆದಿರಲಿಲ್ಲ ಎಂಬುದನ್ನು ಗುರುತಿಸಬಹುದು. ಗೌರಿ, ಲಕ್ಷ್ಮೀಯ ಪಾತ್ರಗಳು ನಿರ್ಲಿಪ್ತವಾಗಿ ಮುಗ್ಧತೆಯಿಂದ ಬದುಕನ್ನು ಶೋಧಿಸುತ್ತಾರೆ. ತಾರ ಮತ್ತು ಪ್ರಭಾ ಪಾತ್ರಗಳು ಆರ್ಭಟಗಳಿಂದಲೇ ಬದುಕನ್ನು ಅರಂಭಿಸುತ್ತಾರೆ. ಪಲ್ಲಟಗೊಳ್ಳುತ್ತಿರುವ ಸಾಮಾಜಿಕ ಸಂದರ್ಭಗಳು ಹಳೆಯ ಮೌಲ್ಯಗಳಲ್ಲಿ ತಮ್ಮ ಸ್ವರೂಪಗಳನ್ನು ಬದಲಾಯಿಸಿಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ಕಾಣಬಹುದು. ಮೊದಮೊದಲು ಸೋತರು ನಂತರ ಹಳೆಯ ಜೀವನಕ್ಕೆ ಪ್ರತಿಸ್ಪರ್ಧಿಯನ್ನು ಒಡ್ಡುವಂತಹ ಮನೋಧರ್ಮವನ್ನು ಹೊಂದುವುದನ್ನು ಮುಂದಿನ ಕಥೆಗಳಲ್ಲಿ ನೋಡಬಹುದು. ಆಧುನಿಕತೆಯ ಆಕ್ರಮಣದಿಂದ ಹಳ್ಳಿಯ ಪರಿಸರದಲ್ಲಿ ಉಂಟಾಗುವ ಬದಲಾವಣೆಗಳ ಪರಿಯನ್ನು ವರ್ಣಿಸುವ ಕಥೆಯೇ 'ತುಕ್ಕೋಜಿ' ಹಳ್ಳಿಯಲ್ಲಿ ಟೈಲರ್ ಆಗಿ ಕೆಲಸಮಾಡುವ ತುಕ್ಕೋಜಿಯ ವೈಯಕ್ತಿಕ ಜೀವನದಲ್ಲಿ ಉಂಟಾದ ಕೆಲವು ವೈಪರೀತ್ಯಗಳು ಹಾಗೂ ರೈಲ್ವೆ ನಿಲ್ದಾಣದ ಆಗಮನದಿಂದ ಊರಿನ ಮೇಲೆ ಆಗುವ ಪರಿಣಾಮವನ್ನು ಬಹಳ ಸ್ವಾರಸ್ಯಕರವಾಗಿ ಈ ಕಥೆಯಲ್ಲಿ ಚಿತ್ರಿಸಿದ್ದಾರೆ. ವೈಯಕ್ತಿಕವಾದ ದುರಂತಗಳು ಹೇಗೆ ಒಂದು ಸಮಾಜವನ್ನು ಅಲುಗಾಡಿಸಬಲ್ಲವು ಎಂಬುದು ಈ ಕಥೆಯಲ್ಲಿ ಅಡಗಿರುವ ಧ್ವನಿಯಾಗಿದೆ. ಮೂಲತಃ ಹಾಸನದವನಾದ ತುಕ್ಕೋಜಿ ದರ್ಜಿ ವಂಶಸ್ಥ. ತಂದೆಯ ಇಚ್ಛೆಯ ವಿರುದ್ಧವಾಗಿ ಸರೋಜಳನ್ನು ಮದುವೆಯಾಗಿ ಗುರುಗಳಲ್ಲಿ ಬಂದು ತನ್ನ ಕುಲ ಕಸುಬಾದ ಟೈಲರಿಂಗ್ ವೃತ್ತಿಯನ್ನು ಪ್ರಾರಂಭಿಸುತ್ತಾನೆ. ಅದೇ ತಾನೇ ಆ ಊರು, ಆಸ್ಪತ್ರೆ, ಬಸ್ ನಿಲ್ದಾಣ, ಪೋಸ್ಟ್ ಆಫೀಸ್, ಸಿನಿಮಾ ಮುಂತಾದ ನಾಗರಿಕ ವ್ಯವಸ್ಥೆಯನ್ನು ಪಡೆಯುತ್ತಾ ಪೇಟೆಯೆನ್ನಿಸಿಕೊಳ್ಳಲು ಅನುರೂಪವಾದ ಊರು ಆಗಿರುತ್ತದೆ. ತುಕ್ಕೋಜಿಯ ಟೈಲರಿಂಗ್

ಕೆಲಸದಲ್ಲಿ ಸರೋಜ ಕೂಡ ಗಂಡನಿಗೆ ನೆರವಾಗುತ್ತಾಳೆ. ಅವಳ ಏಕಾಗ್ರತೆಯು ಸೇರಿ ಆತನಿಗೆ ಕೆಲಸದಲ್ಲಿ ಆತ್ಮವಿಶ್ವಾಸ ಮೂಡುತ್ತದೆ. ಅವಳನ್ನು ಅದೃಷ್ಟದೇವತೆ ಎಂದು ತಿಳಿಯುತ್ತಾನೆ. ತುಕ್ಕೋಜಿ ಹೊಲೆದುಕೊಟ್ಟ ಬಟ್ಟೆಗಳು ಗಿರಾಕಿಗಳಿಗೆ ದೇವರುಕೊಟ್ಟ ಚರ್ಮದಂತೆ ಸ್ವಾಭಾವಿಕವಾಗಿ ಹೊಂದಿಕೊಂಡು ಬಿಡುತ್ತಿದ್ದವು. ಹೀಗಾಗಿ ತುಕ್ಕೋಜಿಯ ದರ್ಜಿ ಕೆಲಸ ಪ್ರಶಂಸೆಗೆ ಒಳಗಾಗಿ ಹೆಚ್ಚುಜನ ಗಿರಾಕಿಗಳನ್ನು ಆಕರ್ಷಿಸುತ್ತಿತ್ತು. ತುಕ್ಕೋಜಿಗೆ ಕಿಟ್ಟು ಎಂಬ ಮಗುಹುಟ್ಟುತ್ತಾನೆ. ಕೃಷ್ಣೋಜಿ ಅಥವಾ ಕಿಟ್ಟು ಬೆಳೆದಂತೆ ಅವನ ತಂಟೆಗಳು ಅತಿಯಾಗುತ್ತವೆ. ಒಂದು ದಿನ ಅಂಬೆಗಾಲಿಡುವ ಕಿಟ್ಟು ದಾರವನ್ನು ಗೋಜಲು ಗೋಜಲಾಗಿಸಿಬಿಟ್ಟ, ಮತ್ತೊಂದು ದಿನ ಗಜಗಡ್ಡಿಯನ್ನು ಬಗ್ಗಿಸಿಬಿಟ್ಟ ಮಗನ ತುಂಟಾಟಗಳಿಗೆ ಹೆಂಡತಿ ಸರೋಜಳನ್ನು ತುಕ್ಕೋಜಿ ಬಯ್ಯಲು ಪ್ರಾರಂಭಿಸಿದ ತಾಯಿಯಾದ ಸರೋಜಳಿಗೆ ತುಕ್ಕೋಜಿಯ ಕೆಲಸದಲ್ಲಿ ಸಹಕರಿಸಲು ಸಾಧ್ಯವಾಗಲಿಲ್ಲ. ಬಟ್ಟೆ ಹೊಲೆಯುವುದರಲ್ಲಿ ಪರಿಣಿತರಾದ ತುಕ್ಕೋಜಿ ಹೊಲೆಯುತ್ತಿದ್ದ ಬಟ್ಟೆಗಳು ಸರಿಯಾಗಿಲ್ಲವೆಂದು ಗಿರಾಕಿಗಳು ಬಯ್ಯಲು ಪ್ರಾರಂಭಿಸಿದರು. ಹೊಲಿದ ಬಟ್ಟೆಗಳು ಹೀಗೆ ಅಳತೆ ತಪ್ಪಬೇಕಾದರೆ ಹೆಂಡತಿಯಾದ ಸರೋಜ ಅವುಗಳನ್ನು ನೀರಿನಲ್ಲಿ ಹಾಕಿ ಕುಗ್ಗಿಸದಿದ್ದುದೇ ಕಾರಣವೆಂದು ಸರೋಜಳ ಮೇಲೆ ಸಿಡಿಮಿಡಿಗೊಂಡ. ಹೀಗಾಗಿ ತುಕ್ಕೋಜಿಯ ವೈಯಕ್ತಿಕ ಜೀವನದಲ್ಲಿ ಅಶಾಂತಿಯು ಹೊಗೆಯಾಡಲು ಪ್ರಾರಂಭಿಸುತ್ತದೆ. ಹೀಗೆ ಕಥೆಯಲ್ಲಿ ಆಧುನಿಕತೆ ಮತ್ತು ಹಳೆಯ ಸಂಪ್ರದಾಯದ ಬದುಕಿನ ಕ್ರಮ ಹೆಣೆದುಕೊಂಡು ಕಥೆಸಾಗುತ್ತದೆ. ನಾಗರಿಕತೆ ಮತ್ತು ವೃತ್ತಿ ಸಮಸ್ಯೆಗಳ ನಡುವಿನ ತಾಕಲಾಟ ಈ ಕಥೆಯ ವಸ್ತುವಾಗಿದೆ. ನಾಗರಿಕತೆಯ ಬೆಳವಣಿಗೆ ಮತ್ತು ವ್ಯಕ್ತಿಯ ವೈಯಕ್ತಿಕ ಬದುಕಿನ ಸಂಬಂಧಗಳು ಈ ಕಥೆಯಲ್ಲಿ ಹೆಣೆದುಕೊಂಡಿದೆ.

'ಸೀಮಂತ' ಮತ್ತು 'ಶ್ರಾವಣ' ಕಥೆಗಳ ಪ್ರಮುಖ ಪಾತ್ರಗಳಾದ ಪದ್ಮ ಮತ್ತು ಶಕುಂತಲಾ ಆಧುನಿಕತೆಯ ಬದುಕಿಗೆ ಹತ್ತಿರವಾಗಿ ಮಾನಸಿಕ ಅಶಾಂತಿಯನ್ನು ಪಡೆದುಕೊಂಡ ಪಾತ್ರಗಳು ಮಧ್ಯಮವರ್ಗದ ಹೆಣ್ಣುಮಕ್ಕಳಾದ ಪದ್ಮ ಮತ್ತು ಶಕುಂತಲಾ ನಗರಜೀವನದ ಆಕರ್ಷಣೆಗೆ ಒಳಗಾಗಿರುವ ಜೀವಂತ ಸಾಕ್ಷಿಗಳಾಗಿ ನಿಂತಿದ್ದಾರೆ. ಮನುಷ್ಯನ ಸ್ವಭಾವದ ಮೂಲದಲ್ಲಿಯೇ ಇರುವ ಶೂನ್ಯವನ್ನು ಪಾಪಪ್ರಜ್ಞೆಯನ್ನು 'ಸೀಮಂತ' ಕಥೆ ಶೋಧಿಸುತ್ತದೆ. ಪದ್ಮ ಗಂಡನಾದ ನರಹರಿಯಿಂದ ಯಾವುದೇ ಸುಖವನ್ನು ಪಡೆಯಲಿಲ್ಲ. ನರಹರಿಯ ಪ್ರೇರಣೆಯಿಂದಲೇ ಅವನ ಶಿಷ್ಯನಾದ ಶ್ರೀಧರನೊಂದಿಗೆ ಸಂಬಂಧ ವಿವರಿಸಿಕೊಳ್ಳಲು ಪದ್ಮ ತಯಾರಾಗುತ್ತಾಳೆ. ಇದರಿಂದ ತಾಯ್ತನದ ಸುಖವನ್ನು ಅನುಭವಿಸುವ ಅವಳು ಸಮಾಜದ ಎದುರು ಅತ್ಯಂತ ಸುಖೀ ಮಹಿಳೆ ಮಾನಸಿಕವಾಗಿ ಅವಳು ಚಿತ್ರಹಿಂಸೆಗೆ ಗುರಿಯಾಗಿದ್ದಾಳೆ. ತನ್ನ ಮತ್ತು ಶ್ರೀಧರನ ಸಂಬಂಧವನ್ನು ಹೇಳಿಕೊಳ್ಳಲು ಸಾಧ್ಯವಾಗದೇ ಸಮಾಜದಲ್ಲಿ ಪಾಪಪ್ರಜ್ಞೆಯ ಅವಘಡಕ್ಕೆ ಸಿಕ್ಕುತ್ತಾಳೆ.

ಇದರೊಂದಿಗೆ ನರಹರಿಯ ಅನುಕಂಪದ ದೃಷ್ಟಿಯೂ ಅವಳನ್ನು ಮತ್ತಷ್ಟು ಕೀಳರಿಮೆ ಮತ್ತು ಅಸಹಾಯಕ ಸ್ಥಿತಿಯ ಕಡೆಗೆ ತಳ್ಳುತ್ತದೆ. ಸಾಂಪ್ರದಾಯಿಕ ಹೆಣ್ಣಾದ ಪದ್ಮ ಹಿಂದಿನಿಂದಲೂ ಬಂದ ಪರಂಪರೆಯನ್ನು ಒಪ್ಪುತ್ತಾಳೆ. ಅವಳಿಗೆ ಶ್ರೀಧರನೊಂದಿಗೆ ಸಂಬಂಧವನ್ನು ಮನಃಪೂರ್ವಕವಾಗಿ ಒಪ್ಪಿಕೊಳ್ಳಲು ಸಿದ್ಧಳಿಲ್ಲ. 'ಸಂಬಂಧ' ಕಥೆಯು ಲಲಿತ ಹಳ್ಳಿಯ ಮುಗ್ಧ ಹೆಣ್ಣು. ನಗರ ಜೀವನದಲ್ಲಿ ಸಾರ್ಥಕ್ಯ ನೆಲೆಯನ್ನು ತಲುಪಲು ಯತ್ನಿಸುವಂತಹ ಪಾತ್ರವಾಗಿದೆ. ಪುರುಷಪ್ರಧಾನ ಸಮಾಜದಲ್ಲಿ ಗಂಡಿನ ವಿವಿಧ ಮಾದರಿಗಳನ್ನು ಅವನ ಸಫಲ, ವಿಫಲವಾಗುವಿಕೆಗೆ ಸಮರ್ಥಕಾರಣವನ್ನು ಆಲನಹಳ್ಳಿಯವರ ಕಥೆಗಳಲ್ಲಿ ಕಾಣುತ್ತೇವೆ. ಈ ಸಮಾಜದಲ್ಲಿಯೇ ಹೆಣ್ಣಿನ ವಿವಿಧ ಮುಖಗಳನ್ನು ಅವಳ ಬದುಕಿನ ಶೋಧನೆಯನ್ನು ಕಟ್ಟಿಕೊಡುತ್ತದೆ. ಗಂಡು, ಹೆಣ್ಣುಗಳು ತಮ್ಮ ಬದುಕಿನಲ್ಲಿ ಹಳೆಯ ಮತ್ತು ಹೊಸಜೀವನ ಕ್ರಮದಲ್ಲಿ ಅನುಭವಿಸಿದ ಯಾತನೆಗಳ ಸ್ವರೂಪವನ್ನು ಪ್ರಜ್ಞೆಗಳ ರೂಪದಲ್ಲಿಯೇ ಕೊಡುವುದು ಆಲನಹಳ್ಳಿಯವರಿಗೆ ಒಟ್ಟು ಬದುಕಿನ ಬಗೆಗಿರುವ ನಿಲುವುಗಳನ್ನು ತಿಳಿಯಬಹುದು.

'ಊರ್ವಶಿ' ತೇಜಸ್ವಿಯವರ ಯಶಸ್ವಿ ಕಥೆಗಳಲ್ಲಿ ಒಂದು. ಊರ್ವಶಿ ಪುರೂರವ ಇವರ ಪ್ರಖ್ಯಾತವಾದ ಪುರಾಣದ ಪ್ರೇಮಕಥೆಯನ್ನು ಹಿನ್ನೆಲೆಯಾಗಿಸಿಕೊಂಡು ಸೋಮು ಮತ್ತು ಸುಭದ್ರೆಯರ ಕಥೆಯನ್ನು ರಚಿಸಲಾಗಿದೆ. ಈ ಧೀರ ಪ್ರೇಮಿಯಾಗಲಾರದೆ ದಿಕ್ಕುಕೆಟ್ಟು ಅಲೆಯುವ ಹಳಸಲು ಆಸೆಗಳುಳ್ಳ ಆಧುನಿಕತರುಣ ಸೋಮು, ಆತನ ಪ್ರೇಮ ಕಥೆಯನ್ನು ನಾಯಿಯ ಸಂಕೇತದೊಂದಿಗೆ ಚಿತ್ರಿಸಲಾಗಿದೆ. ಈ ಕಥೆಯು ಶಾಪ, ವಿರಹ, ಮಿಲನ ಎಂದು ಮೂರು ಭಾಗಗಳಲ್ಲಿ ಬೆಳೆಯುತ್ತದೆ. ಮೂಲದ ಭರತಮುನಿಯ ಶಾಪ ಈ ಕಾಲದ ನಾಯಿ ಸೋಮುವಿಗೆ ಕಚ್ಚುವುದರಲ್ಲಿ ಸಂಕೇತವಾಗಿದೆ. ಪುರೋರವನಿಂದ ಊರ್ವಶಿ ಬೇರೆಯಾಗಿ ಬಳ್ಳಿಯಾಗಿ ಬೆಳೆದಂತೆ ಇಲ್ಲಿ ಸುಭದ್ರ ಸೋಮುವಿನಿಂದ ಬೇರೆಯಾಗಿದ್ದಾಳೆ. "ಆದರೆ ಕಾಲ ಮೀರಿತಲ್ಲ ಹದಿನೈದನ್ನು ಏಳಕ್ಕೆ ನಿಲ್ಲಿಸಿ ಸುಭದ್ರೆಯಂತಹ ಮರೀಚಿಕೆಯನ್ನು ನಂಬಿ ತ್ರಿಶಂಕುವಾದೆನಲ್ಲ"[೭೫] ಎನಿಸುತ್ತದೆ. ಸೋಮುವಿಗೆ ಸುಭದ್ರೆ ಆತನಿಗೆ ಬರೀ ಮರೀಚಿಕೆ-ಯಾಗಿಯೇ ಉಳಿಯುತ್ತಾಳೆ. ಇಲ್ಲಿ ಹಳೆಯ ಕಥೆಗೆ ಹೊಸ ಕಥೆಯ ದುರಂತವನ್ನು ಸೇರಿಸಿ ಹೇಳಿರುವಲ್ಲಿ ಹೆಚ್ಚುಗಾರಿಕೆ ಇದೆ. ಆದರೆ ಕಥೆಯ ಅಂತ್ಯ ಹಠಾತ್ತಾಗಿ ಮುಕ್ತಾಯ-ಗೊಂಡಂತೆನಿಸುತ್ತದೆ. ಆತನಿಗೆ ಸುಭದ್ರೆ ಸಿಕ್ಕುವುದಿಲ್ಲ. ಬದಲಿಗೆ ಕಚ್ಚಿದ ನಾಯಿ ಕಾಂಚನ ಮೃಗವಾಗಿ ಅವನ ಮುಂದೆ ಸುಳಿದು ಮಾಯವಾಗುತ್ತದೆ. ಇಲ್ಲಿ ಅನುಭವವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡು ನಿರ್ವಹಿಸುವಲ್ಲಿ ತೇಜಸ್ವಿಯವರ ವಿಶಿಷ್ಟತೆ ಎದ್ದುಕಾಣುತ್ತದೆ. ಈ ಅನುಭವವು ಹೆಚ್ಚು ಆವೃತವೂ ದಟ್ಟವೂ ಆಗಿ ಅಭಿವ್ಯಕ್ತಿ ಪಡೆದಿದೆ.

---

೭೫. ಕೆ.ಪಿ.ಪೂರ್ಣಚಂದ್ರ ತೇಜಸ್ವಿ 'ಹುಲಿಯೂರಿನ ಸರಹದ್ದು', ೨೦೦೫, ಪು. ೩೭.

'ಆಗಂತುಕ', 'ನೆಲಗುಮ್ಮ' ಕಥೆಗಳಲ್ಲಿ ಬಾಲ್ಯದ ದಟ್ಟ ಅನುಭವಗಳು ಪ್ರೌಢಾವಸ್ಥೆಯಲ್ಲಿ ನೆನಪಾಗಿ ಕಾಡುವುದು. ಆ ನೆನಪುಗಳಿಂದಲೇ ಇಲ್ಲಿಯ ನಾಯಕ ಪಲಾಯನ ವಾದಿಯಾಗಿ ಯೋಚಿಸುವುದನ್ನು ನೋಡುತ್ತೇವೆ. 'ಆಗಂತುಕ' ಕಥೆಯಲ್ಲಿ ಕಿಟ್ಟಿಯ ಮನಸ್ಸಿನ ಮೇಲೆ ಸಾಕಷ್ಟು ಪರಿಣಾಮ ಬೀರಿದವರು ಅವನ ಮಾವಯ್ಯ ಮಲ್ಲಯ್ಯ ಮತ್ತು ಅವನ ಹೆಂಡತಿ, ಮಗಳು, ಕಿಟ್ಟು, ಮಾವಯ್ಯನ ಹೆಂಡತಿ ಮತ್ತು ಮಗಳನ್ನು ನೋಡಿಲ್ಲ. ಊರಿನ ಜನರ ಮಾತುಗಳಿಂದ ಅವರನ್ನು ತನ್ನ ಕಲ್ಪನೆಗಳಲ್ಲಿ ಕಟ್ಟಿಕೊಂಡು ಇರುತ್ತಾನೆ. ಮಲ್ಲಯ್ಯನ ಒಬ್ಬಳೇ ಮಗಳು ನಗರಬದುಕಿಗೆ ಆಕರ್ಷಿತಳಾಗಿ ಹಳ್ಳಿಯವರಿಂದ ತಿರಸ್ಕರಿಸಲ್ಪಟವಳು. ಹಳೆಯ ಜೀವನಕ್ರಮದಲ್ಲಿ ಬದುಕನ್ನು ನಿರಾತಂಕವಾಗಿ ನಡೆಸುತ್ತಿರುವ ಹಳ್ಳಿಯ ಬದುಕಲ್ಲಿ ಸಮಷ್ಠಿಯ ಪ್ರಜ್ಞೆಯನ್ನು ಹೇಳುತ್ತಿದೆ. ಇಲ್ಲಿ ಕುಟುಂಬದ ಸೌಖ್ಯವೇ ಮುಖ್ಯ. ವೈಯಕ್ತಿಕ ಸುಖಕ್ಕೆ ಪ್ರಾಶಸ್ತ್ಯವಿಲ್ಲ. ಹೊಸಜೀವನಕ್ರಮವಾದ ನಗರ ಸಂವೇದನೆಯೂ ಹಳ್ಳಿಯ ಜೀವನಕ್ರಮವನ್ನು ಪ್ರವೇಶಿಸಿದಾಗ ಆ ಹಳ್ಳಿಯ ಬದುಕಿನಲ್ಲಿ ಕುಟುಂಬದಲ್ಲಿ ನಡೆಯುವ ದುರಂತಗಳನ್ನು ಗಂಭೀರವಾದ ಸ್ವರೂಪದಲ್ಲಿ ಕಥೆಯನ್ನು ಕಟ್ಟಿಕೊಡುತ್ತದೆ. ತಮ್ಮ ವೈಯಕ್ತಿಕ ಸುಖವನ್ನು ಗಮನದಲ್ಲಿಟ್ಟುಕೊಂಡು ತಮ್ಮ ಕುಟುಂಬವನ್ನು ಬಲಿಕೊಡುವ ಆಧುನಿಕ ಮೌಲ್ಯಗಳು ಆರಂಭದಲ್ಲಿ ಸಾಕಷ್ಟು ಹೊಡೆತಗಳನ್ನು ಅನುಭವಿಸುತ್ತದೆ. ಅನಂತರದಲ್ಲಿ ಈ ವೈಯಕ್ತಿಕ ಸುಖದ ಮೌಲ್ಯವು ಭಾರತೀಯ ಪರಂಪರೆಯಲ್ಲಿ ಪ್ರಮುಖವಾಗಿ ವ್ಯಕ್ತಿನಿಷ್ಠೆಪ್ರಜ್ಞೆಯಾಗಿ ಬೆಳೆಯಿತು.

'ನೆಲಗುಮ್ಮ' ಕಥಾನಾಯಕನ ಶಿಕ್ಷಿತ ಸಂವೇದನೆಯನ್ನು ಅಳವಡಿಸಿಕೊಂಡಿರುವವನು ಅವನಿಗೆ ಹಳ್ಳಿಯ ಬದುಕಿನ ಬಗ್ಗೆ ಬೇಸರಿಕೆ ತಂದಿದೆ. ಅಜ್ಜಿಯು ಸಾಯುವ ಸ್ಥಿತಿಯ ಸುದ್ದಿಯಿಂದ ಪ್ರಾರಂಭವಾಗುವ ಕಥೆಯೂ ಅಜ್ಜಿಯ ಸಾವಿನೊಂದಿಗೆ ಮುಕ್ತಾಯವಾಗುತ್ತದೆ. ಅಕ್ಕನ ಮಗಳನ್ನು ನಾಯಕ ಮದುವೆಯಾಗಬೇಕೆಂಬ ಅಜ್ಜಿಯ ಕೊನೆಯ ಆಸೆಯಿಂದ ಅವನಿಗೆ ಮತ್ತಷ್ಟು ಹಳ್ಳಿಯಬದುಕು ಅಪ್ರಿಯವಾಗುತ್ತದೆ. ಬಾಲ್ಯದಲ್ಲಿ ಅಚ್ಚುಮೆಚ್ಚಾಗಿದ್ದ ಅಜ್ಜಿಯೂ ನಾಯಕನ ಪ್ರೌಢಾವಸ್ಥೆಯಲ್ಲಿ ತೊಡಕಾಗಿರುವುದು. ಹಳ್ಳಿಯ ಋಣದಿಂದ ತನಗೆ ಮುಕ್ತಿ ಇಲ್ಲ. ಅವನಿಗೆ ಯಾವುದೇ ಖಚಿತ ನಿರ್ಧಾರಕ್ಕೆ ಬರಲು ಪೂರಕವಲ್ಲದ ಪರಿಸರವು ಅವನನ್ನು ಮತ್ತಷ್ಟು ಕಂಗೆಡಿಸಿತು. 'ನೆಲಗುಮ್ಮ' ಎಂಬುದು ಒಂದು ಪ್ರಾಣಿಯ ಹೆಸರು ಇದರ ಕೂಗು ಹಳ್ಳಿಯ ನಂಬಿಕೆಗಳಿಗೆ ಗಂಡಾಂತಕ್ಕೆ ಕಾರಣವಾಗಿದೆ. ಕಥೆಯ ನಾಯಕನ ಅಸಂಬದ್ಧ ಆಲೋಚನೆಗಳು ನೆನಪುಗಳಿಂದಲೇ ತನ್ನ ಭಯದ ವಾತಾವರಣವನ್ನು ನಿರ್ಮಿಸಿಕೊಂಡಿರುವುದನ್ನು ಹೇಳಲು 'ನೆಲಗುಮ್ಮ'ದ ಪ್ರತಿಮೆಯನ್ನು ಲೇಖಕರು ತರುತ್ತಾರೆ. ನೆಲಗುಮ್ಮನ ಕೂಗಿನ ಭಯಕ್ಕಿಂತಲೂ ತಾನು ಸೃಷ್ಟಿಸಿಕೊಂಡಿರುವ ಸುತ್ತಲಿನ ಸಮಾಜದ ಭಯವು ಅವನನ್ನು ಆವರಿಸಿಕೊಂಡಿದೆ. "ಎಲ್ಲ ಮರುಕಳಿಸಿದಂತಾಗಿ ಮೈಯೊಳಗಿನ ಶಕ್ತಿಯನ್ನೆಲ್ಲಾ ಗಂಟಲಿಗೆ ತಂದು ಒಳಗೆ

ತುಂಬಿಕೊಂಡಿದ್ದನ್ನೆಲ್ಲಾ ಒಮ್ಮೆಲೆ ವಿಸರ್ಜಿಸಿಬಿಡುವಂತೆ ಗಟ್ಟಿಯಾಗಿ ಕಿರುಚಿಬಿಡಲು ಪ್ರಯತ್ನಪಟ್ಟು ಸಾಧ್ಯವಾಗಲಿಲ್ಲ. ಕೈಕಾಲುಗಳನ್ನು ಮಿಸುಕಾಡುವುದಕ್ಕೂ ತ್ರಾಣವಿಲ್ಲದಂತಾಗಿ ಎಲ್ಲವನ್ನು ಕಳಕೊಂಡುಬಿಟ್ಟಂತಾಗಿ ಪರಿಸರವನ್ನು ದೃಢವಾಗಿ ಎದುರಿಸಿಬಿಡುತ್ತೇನೆಂದು ಬಂದಿದ್ದವನು ಶಾಪಗ್ರಸ್ತನಂತಾಗಿ ನೆಲದೊಳಗೆ ಹೂಳಿಬಿಟ್ಟಂತೆ ಕೂತುಬಿಟ್ಟಿದ್ದ. ನನ್ನೊಳಗೆ ಭೂತ ಹುತ್ತಗಟ್ಟುತ್ತಿತ್ತು".[೭೬] ಹಳೆಯ ಮೌಲ್ಯಗಳಿಗೆ ಹೊಸಚೈತನ್ಯವನ್ನು, ಜೀವಂತಿಕೆಯನ್ನು ತಂದುಕೊಡಬೇಕಿದ್ದ ಹೊಸಮೌಲ್ಯಗಳು ಸಂಪೂರ್ಣವಾಗಿ ಸೋಲುವುದನ್ನು ಆಲನಹಳ್ಳಿಯವರ ಸಮಗ್ರಕಥೆಗಳಲ್ಲಿ ನೋಡಬಹುದು. ಈ ಹೊಸಮೌಲ್ಯಗಳು ಮನುಷ್ಯನನ್ನು ಅಸಹಾಯಕತೆ, ಪಾಪಪ್ರಜ್ಞೆ, ದ್ವಂದ್ವನೀತಿ, ಅನಾಥಪ್ರಜ್ಞೆ, ಇಬ್ಬಂದಿ ಸ್ಥಿತಿಗೆ ತಳ್ಳಿ ಮತ್ತಷ್ಟು ಸಾಮಾಜಿಕ ಸಮಸ್ಯೆಗಳನ್ನು ಸೃಷ್ಟಿಸುತ್ತವೆ. ಸಮಸ್ಯೆಗಳ ಪ್ರಪಂಚದಲ್ಲಿ ತನ್ನ ಅಸ್ತಿತ್ವದ ಪ್ರಶ್ನೆಯನ್ನು ಇಲ್ಲಿನ ನಾಯಕರು ಹಾಕಿಕೊಳ್ಳುತ್ತಾರೆ. ಹಳ್ಳಿ–ನಗರ ಸಂವೇದನೆಗಳ ನಡುವೆ ಮನುಷ್ಯನ ಮಾನಸಿಕ ತೊಳಲಾಟ ಹೊಯ್ದಾಟಗಳಿಗೆ ಹೊಸ ರೂಪವನ್ನು ದೃಷ್ಟಿಕೋನವನ್ನು ಕಥೆಗಳ ನಾಯಕರು ಕಟ್ಟಿಸುತ್ತಾರೆ. ಸಮಸ್ಯೆಗಳ ಒತ್ತಡಗಳು ಅವನ ಮೇಲೆ ಬಿದ್ದು ಸಮಸ್ಯೆಯನ್ನು ಹುಡುಕುವುದೇ ಜೀವನದ ಅರ್ಥ ಎಂಬ ತೀರ್ಮಾನಕ್ಕೆ ಕೆಲವೊಂದು ಸಂದರ್ಭಗಳಲ್ಲಿ ಬರುತ್ತಾರೆ.

ತೇಜಸ್ವಿಯವರು 'ನಿಗೂಢ ಮನುಷ್ಯರು' ಕೃತಿಯನ್ನು ಸ್ವಾತಂತ್ರ್ಯೋತ್ತರದ ಪ್ರಥಮ ಘಟ್ಟದಲ್ಲಿ ವ್ಯಕ್ತವಾದ ಧೋರಣೆಗಲ್ಲಿ ಬರೆದಿದ್ದಾಗಿದೆ. ಆದರೆ ಪ್ರಸ್ತುತ ಕೃತಿಯಲ್ಲಿಯೂ ಈ ಘಟ್ಟವು ವ್ಯಕ್ತಪಡಿಸುತ್ತಿದ್ದ ಧೋರಣೆಗಳನ್ನು ಒಳಗೊಂಡೂ ಅವುಗಳ ಮಿತಿಯನ್ನು ಗ್ರಹಿಸಿಕೊಂಡು ಆ ಧೋರಣೆಗಳನ್ನು ಭಿನ್ನನೆಲೆಯಲ್ಲಿ ಬಳಸಿಕೊಳ್ಳಬೇಕಾದ ಹಾಗೆ ಬಳಸಿಕೊಳ್ಳಬಹುದಾದ ವಿವಿಧ ಸಾಧ್ಯತೆಗಳನ್ನು ಗ್ರಹಿಸಿಕೊಂಡ ಕೃತಿಯಾಗಿದೆ. ಹಳೆಯ ಮತ್ತು ಹೊಸಜೀವನಕ್ರಮವನ್ನು ವ್ಯಕ್ತಿನಿಷ್ಠ ನೆಲೆಯಲ್ಲಿ ನೋಡಿ ಅರ್ಥೈಸಿಕೊಳ್ಳಲು ಹೊರಟವರಿಗೆ ಅನುಭವವೇ ಆಧಾರವಾಗಿತ್ತು. ಪರಂಪರೆಯ ಎದುರು ಕೌಟುಂಬಿಕ ನೆಲೆಯ ಬಿಗಿಹಿಡಿತದೆದುರು ವ್ಯಕ್ತಿ ತನ್ನನ್ನು ಕಂಡುಕೊಳ್ಳುವುದೇ ಮುಖ್ಯವಾಗಿತ್ತು. ಕಂಡುಕೊಳ್ಳುವುದು ಎಂದರೆ ಅವುಗಳ ಎದುರು ತನ್ನನ್ನು ಸ್ಥಾಪಿಸಿಕೊಳ್ಳುವುದೇ, ವ್ಯಕ್ತಿ ತನ್ನ ಅಸ್ತಿತ್ವಕ್ಕೆ ಧಕ್ಕೆ ತರುತ್ತಿರುವ ಇವುಗಳ ಎದುರು ತನ್ನನ್ನು ಉಳಿಸಿಕೊಳ್ಳಲು ಅನೇಕ ಪ್ರತಿಭಟನೆಯ ಸಾಧನಗಳನ್ನು ವೈಯಕ್ತಿಕ ನೆಲೆಯಲ್ಲಿ ರೂಪಿಸಿಕೊಂಡು ಬಿಡುಗಡೆಗೊಳ್ಳಲು ಹವಣಿಸುತ್ತಿದ್ದ ತೇಜಸ್ವಿಯವರು ಸಾಮಾಜಿಕ ನೆಲೆಯಲ್ಲಿ ವ್ಯಕ್ತಿಯ ಅಸ್ತಿತ್ವದ ಹುಡುಕಾಟ ನಡೆಸುತ್ತಿದ್ದವರು ಕ್ರಮೇಣ ಆ ನೆಲೆಯನ್ನು ತಾತ್ವಿಕ ಹುಡುಕಾಟದ ಕಡೆಗೆ ಕೊಂಡೊಯ್ದರು. ತಾತ್ವಿಕತೆಯನ್ನು ಪರೀಕ್ಷಿಸಿ ಅದರ ಇತಿಮಿತಿಗಳನ್ನು ಕಂಡುಕೊಳ್ಳುವ ಹಂತಕ್ಕೆ

---

೭೬. ಶ್ರೀಕೃಷ್ಣ ಆಲನಹಳ್ಳಿ, 'ಸಮಗ್ರಕಥೆಗಳು', ೨೦೦೦, ಪು. ೭೮.

ಬಂದರು. ಈ ಹಿನ್ನೆಲೆಯಲ್ಲಿ 'ನಿಗೂಢ ಮನುಷ್ಯರು' ಕೃತಿಯನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಇಲ್ಲಿ ತೇಜಸ್ವಿ ಅನುಭವಕ್ಕೂ ಅರಿವಿಗೂ ಇರುವ ಸಂಬಂಧವನ್ನು ಒರೆಗೆ ಹಚ್ಚಿ ನೋಡಿದ್ದಾರೆ.

ವ್ಯಕ್ತಿನಿಷ್ಠ ನೆಲೆಯಲ್ಲಿ ಬದುಕನ್ನು ಅರ್ಥೈಸಿಕೊಳ್ಳಲು ಹೊರಟವರಿಗೆ ಅನುಭವವೇ ಗುರಿಯಾಗಿತ್ತು. ತಮಗಾಗುವ ಅನುಭವದ ಹಿನ್ನೆಲೆಯಿಂದ ಜೀವನದ ಅರ್ಥ ಹುಡುಕುವುದಕ್ಕೆ ಬದಲಾಗಿ ಅನುಭವದ ಬೆನ್ನು ಹತ್ತಿದವರ ವಿಶ್ಲೇಷಣೆ ಇಲ್ಲಿದೆ ಮತ್ತು ತಮಗಾಗುವ ಅನುಭವವೇ ಅರಿವನ್ನು ಕಂಡುಕೊಳ್ಳುವ ಮಾರ್ಗ ಎಂದು ಭಾವಿಸಿದ್ದವರಿಗೆ ಅನುಭವವೇ ಎಲ್ಲವನ್ನು ತೋರಲಾರರು. ಹಾಗೆ ಎಲ್ಲವನ್ನು ಅರ್ಥೈಸಿಕೊಳ್ಳುವುದೇ ಒಂದು ಭ್ರಮೆ ಎಂಬ ನಿಲುವಿಗೆ ಬಂದುನಿಲ್ಲುತ್ತಾರೆ. ಹೀಗೆ ಅರ್ಥಮಾಡಿಕೊಳ್ಳಲಾರೆವೆಂದು ತಿಳಿದೂ ಅದಕ್ಕಾಗಿ ನಿರಂತರ ಪ್ರಯತ್ನಿಸುತ್ತಿರುವುದೇ ಮನುಷ್ಯನ ಬದುಕು ಎಂಬ ನೆಲೆ ತಲುಪುತ್ತಾರೆ. ಅಂತಹ ನಿರಂತರ ಪ್ರಯತ್ನವೂ ಸಹ ವಿಫಲ – ಏಕೆಂದರೆ ತನ್ನೊಳಗಿನ ನಿಗೂಢತೆಯನ್ನು ಬಿಟ್ಟುಕೊಡಲಾರದೆಂಬ ಧೋರಣೆಯೂ ಇದೆ.

ಜಗನ್ನಾಥ, ರಂಗಪ್ಪ, ಗೋಪಾಲಯ್ಯನವರ ಮೂಲಕ ಈ ಅನುಭವದ ಪರೀಕ್ಷೆಯ ಕಥೆ ಸಾಗುತ್ತದೆ. ರಂಗಪ್ಪ ಬೆನ್ನು ಹತ್ತಿ ಲಟಾರಿ ಕಾರಿನ ಮೂಲಕ ಜಗನ್ನಾಥ ಜಮೀನುಕೊಳ್ಳಲೆಂದು ನಗುಬೀಡಿಗೆ ಬರುತ್ತಾನೆ. ಆದರೆ ಅವನಿಗೆ ಜಮೀನು ಇರಾದೆಗಿಂತ, ಬೇಸರ ಕಳೆಯಲೊಂದು ಉದ್ಯೋಗ ಅವಶ್ಯಕವಾಗಿರುತ್ತದೆ. ಇದ್ದ ಕೆಲಸವನ್ನು ಅದರ ಏಕತಾನತೆಯನ್ನು ಅನುಭವಿಸಲಾರದೆ ಒಟ್ಟು ಏಕತಾನತೆಯಿಂದ ಹೊರಬರಲು ರಂಗಪ್ಪ ಹಿಂದೆ ಬಂದಿರುತ್ತಾನೆ. ನಗುಬೀಡಿನಿಂದ ಇಬ್ಬರೂ ಉಗ್ರಗಿರಿ ಕಾಣುವ ಕಡೆಗೆ ಹೊರಡುತ್ತಾರೆ. ಮೊದಲು ಪುಸ್ತಕದ ಅಂಗಡಿ ಇಡುತ್ತೇನೆಂದವನು ಈಗ ಜಮೀನುಕೊಳ್ಳಲು ಆಸಕ್ತಿ ತೋರುತ್ತಿರುವುದು. ರಂಗಪ್ಪನಿಗೆ ಆಶ್ಚರ್ಯಕರವೆನಿಸಿದೆ. ಲಟಾರಿ ಕಾರಿನಿಂದ ಉಗ್ರಗಿರಿಯ ಕಡೆಗೆ ಹೊರಟವನು ಭೀಕರಮಳೆಗೆ ಸಿಲುಕುತ್ತಾರೆ. ಮುಂದೆ ಹೋಗಲಾಗದಂತೆ ಕಾರು ಕೆಸರಲ್ಲಿ ಹೂತುಹೋಗುತ್ತದೆ. ಮುಂದೆ ದಾರಿಯೂ ಇಲ್ಲವಾಗಿ ಊರಗಡಿಯಲ್ಲಿ ಸಿಕ್ಕಿಕೊಳ್ಳುತ್ತಾರೆ. ಅದೇ ಊರಿನಲ್ಲಿ ಸಿಲುಕಿಕೊಂಡಿರುವ ಗೋಪಾಲಯ್ಯನವರ ಪರಿಚಯ ಇವರಿಗಾಗುತ್ತದೆ. ಹೀಗೆ ಬೆಳೆದ ಕಥೆ ಹೊಸಜೀವನದ ಅನುಭವವನ್ನು ಬೆನ್ನತ್ತಿಹೋದವರ ಕಥೆಯಾಗಿದೆ. ಈ ಹಂತದಲ್ಲಿ ಕಥೆ ವಿವರಗಳ ಮೂಲಕ ಕಟ್ಟಿಕೊಳ್ಳುತ್ತಾ ಹೋಗುತ್ತದೆ. ವಿವರಗಳು ಸಾಂಕೇತಿಕವಾಗಿ ಪಾತ್ರದ ಮನಸ್ಸಿನ ಸ್ಥಿತಿಯ ಅನಾವರಣಮಾಡಿದಂತೆ ಇವರಿಬ್ಬರಿಗೂ ಹೊಸ ಅನುಭವಕ್ಕಾಗಿ ಹಂಬಲಿಸುತ್ತಿದ್ದಾರೆ. ನಿಜ ಆದರೆ ಅನುಭವಗಳಿಂದ ಪಡೆಯುವ ಅರಿವಿನ ಬಗೆಗೆ ಎಂತಹ ಆಸಕ್ತಿ ಕುತೂಹಲಗಳಿವೆ. ಇವರಲ್ಲಿ ಎಂಬ ಪ್ರಶ್ನೆಗಳು ಏಳುತ್ತವೆ. ಅನ್ವೇಷಣೆಗೆ ತೊಡಗುವ ಕ್ರಿಯೆಯೇ ಜೀವಂತಿಕೆ ಕಳೆದುಕೊಂಡ ಸ್ವರೂಪವಾಗಿದೆ. ಇಬ್ಬರ ನಡುವೆಯೂ ಮಾತಿಲ್ಲ, ಕಥೆಯಿಲ್ಲ ಮಾತನಾಡಿದರೆ

ಎಲ್ಲಿ ಬಾಯಿತಪ್ಪಿ ಏನನ್ನು ಹೇಳಿಬಿಡುತ್ತೇವೋ ಎಂಬ ಭಯ, ಭೀತಿ ಒಬ್ಬರಿಗೊಬ್ಬರು ಹೇಳಿಕೊಂಡಿರುವ ಸುಳ್ಳು ಎಲ್ಲಿ ಬಯಲಾಗುವುದೋ ಎಂದು ಮಾತೇ ನಿಲ್ಲಿಸಿರುವವರು. ಅನುಭವಗಳ ಬೆನ್ನು ಹತ್ತಿದ್ದಾರೆ! ಮನುಷ್ಯ ಸಂಬಂಧಗಳಲ್ಲಿಯೂ ಸಹ ಪರಸ್ಪರರ ನಡುವೆ ಜೀವಂತಿಕೆ ಕಾಣಿಸುತ್ತಿಲ್ಲ. ಒಬ್ಬರಿಗೊಬ್ಬರು ತೆರೆದುಕೊಳ್ಳದೆ ಗಂಭೀರಮೌನದ ಮೊರೆ ಹೊಕ್ಕಿರುವವರಿಗೆ ಅನುಭವದಿಂದ ಅರಿವು ಎಲ್ಲಿ ಉಂಟಾಗಲು ಸಾಧ್ಯ. ಆದ್ದರಿಂದ ಅನುಭವದಿಂದ ಅರಿವುಸಿಗುತ್ತದೆ ಎಂಬ ನಿಲುವಿನಿಂದ ಅನುಭವಕ್ಕಾಗಿ ಹುಡುಕಾಟವೂ ಒಂದು ಯಾಂತ್ರಿಕ ಕ್ರಿಯೆಯಾಗಿದೆ. ಇದಕ್ಕೆ ಇನ್ನೊಂದು ಕಾರಣ ಏಕತಾನತೆಯಿಂದ, ಯಾಂತ್ರಿಕತೆ ಬದುಕಿನ ನೋಟದಿಂದ ಎಲ್ಲಕ್ಕೂ ಪರಕೀಯವಾಗಿರುವುದಾಗಿದೆ. ಅನುಭವ, ಅದರ ವಿಶ್ಲೇಷಣೆ ಎಂದು ಬೆನ್ನು ಹತ್ತಿರುವವರು ಬರಿಯ ವೈಚಾರಿಕತೆಯಲ್ಲಿ ಮುಳುಗಿ ತಾವಿರುವ ಸುತ್ತಲಿನ ಪರಿಸರ, ಸಾಮಾಜಿಕ ಪರಿಸರ ಎಲ್ಲಕ್ಕೂ ಹೊರಗಿನವರಾಗಿದ್ದಾರೆ. ಹೊಸ ಮತ್ತು ಹಳೆಯ ಜೀವನ ಕ್ರಮಗಳ ಮೂಲಕ ಬದುಕನ್ನು ಇನ್ನಷ್ಟು ಆಳವಾಗಿ ಶೋಷಿಸಲು ತೊಡಗುತ್ತಾನೆ.

ಆಲನಹಳ್ಳಿಯವರ 'ಕಾಡು' ಕಾದಂಬರಿಯಲ್ಲಿ ಓಕಳಿಯ ಹಬ್ಬ ಬರುವವರೆಗೂ ಕಾದಂಬರಿಕಾರರು ಕೊಪ್ಪಲಿನ ಬದುಕಿನ ಹಲವು ಜೀವಂತ ವಿವರಗಳನ್ನು ನೀಡುತ್ತಾರೆ. ಕಿಟ್ಟಿಗೆ ಶಾಲೆಯಂದರೆ ಹಿಂಸೆ, ಇವನಿಗೆ ರಜದ ದಿನ ದನ ಮೇಯಿಸಲು ಹೋಗುವುದು ಈಜುಹೊಡೆಯುವುದು, ಮರ ಹತ್ತುವುದು, ನಾಟಕದ ಮನೆಗೆ ಹೋಗುವುದು ಮುಂತಾದವುಗಳೇ ಹೆಚ್ಚು ಆಕರ್ಷಣೀಯವಾಗಿದ್ದವು ದೊಡ್ಡವರ ಲೋಕ ಇವನನ್ನು ವಿಚಿತ್ರವಾಗಿ ಸೆಳೆಯುತ್ತದೆ. ಅಜ್ಜಿ ಹೇಳುತ್ತಿದ್ದ ಕಥೆಯು ಕಿಟ್ಟಿಗೆ ಭಯವನ್ನು ಹುಟ್ಟಿಸುತ್ತದೆ. ಅದರಲ್ಲೂ ಕಾಡಿನಲ್ಲಿ ಮನುಷ್ಯರು ಕರೆದು 'ಓ' ಎಂದರೆ ರಕ್ತಕಾರಿ ಸಾಯುತ್ತಾರೆ ಎಂಬ ಕಥೆ ಭಯಹುಟ್ಟಿಸುತ್ತದೆ. ಹಾಗೆ ಜೀತದಾಳುಗಳಿಂದ ಸಿಳ್ಳ ಮತ್ತು ಲೋಂಪಿ ಕಾಡಿಗೆ ದನಕಾಯಲು ಹೋದಾಗ ಆ ಹಕ್ಕಿ ಕರೆದುಬಿಟ್ಟರೆ ಎಂದೆಲ್ಲಾ ಯೋಚಿಸುತ್ತಾನೆ. ಇವನ ಪ್ರೀತಿಯ ಗೌರಿ ಕಡಸು, ಸಿಡಿಮದ್ದಿನಿಂದ ಸತ್ತಾಗ ಇವನ ಮುಗ್ದ ಮನಸ್ಸಿನ ಮೇಲೆ ತೀವ್ರ ಆಘಾತವಾಗುತ್ತದೆ. ನಾಗಿಯು ಅಜ್ಜಿ ಬಾವುಸೋರಿ ಒಡೆದು ಸತ್ತದ್ದು ನಂತರ ಕಿರುಬ ಮೊಣ್ಣನನ್ನು ಕಚ್ಚಿಕೊಂಡುಹೋಗಿ ತಿಂದುಹಾಕಿದ್ದು, ಇವುಗಳಿಗೆಲ್ಲ ಕಾರಣವನ್ನು ಅರಿತುಕೊಳ್ಳಲಾಗದಿದ್ದರೂ ಇವೆಲ್ಲವೂ ಇವನಿಗೆ ಭಯವನ್ನುಂಟು ಮಾಡುತ್ತದೆ. ನಾಗಿಯ ಚಿಕ್ಕವ್ವ ಹೊಲೇರ ಹನುಮನೊಡನೆ ಓಡಿಹೋದಾಗ ಓಡಿಹೋಗುವುದು ಎಂದರೇನು? ಎಂಬುದನ್ನು ಅರಿಯಲಾರ ಸಾವಿತ್ರಮ್ಮ ಕದ್ದು ಬಸುರಾಗಿ ಮೂರು ತಿಂಗಳಾದ್ದರಿಂದ ನೇಣುಹಾಕಿಕೊಂಡು ಸತ್ತಾಗ ಮೂರು ತಿಂಗಳೇಂದರೇನು ಎಂಬ ಮಾತುಗಳೆಲ್ಲ ಇವನಿಗೆ ಉತ್ತರ ದೊರೆಯದ ಪ್ರಶ್ನೆಗಳಾಗಿಯೇ ಕಾಡುತ್ತದೆ. ಹೀಗೆ ಕಿಟ್ಟಿಯು ಮನೆಯಲ್ಲಿ ಮತ್ತು ಹೊರಗಡೆ ನಡೆಯುವ ಘಟನೆಗಳಿಂದ ತೀವ್ರ ಭಯ ಮತ್ತು ಏಕಾಂತತನಕ್ಕೆ ಒಳಗಾಗಿರುವುದನ್ನು ಲೇಖಕರು ಗುರುತಿಸುತ್ತಾರೆ.

ಉಳ್ಳವರ ನಡುವಣ ಸಂಘರ್ಷದಲ್ಲಿ ಯಾವಾಗಲೂ ಸಾಮಾನ್ಯ ಜನರ ಬದುಕು ನಗ್ಗಿ ನಲುಗಲು ಹೋಗುತ್ತದೆ. ಹಳ್ಳಿಗರ ಬದುಕಿನಲ್ಲಿ ಜಗಳಗಳಿದ್ದರೂ ಪಂಚಾಯ್ತಿಯ ಮೂಲಕವೇ ಬಗೆಹರಿಸುತ್ತಾರೆ. ಆದರೆ ಸೋತವರು ಸಹಜವಾಗಿಯೇ ಅಸಹಾಯಕ ರೀತಿಯಲ್ಲಿ ಅನಿವಾರ್ಯವಾಗಿ ಪೋಲಿಸರ ಮೊರೆಹೋಗುತ್ತಾರೆ. ಸಂದರ್ಭ ಬಂದಾಗ ಪೋಲಿಸ್ ನ್ಯಾಯಾಲಯ ಮುಂತಾದವುಗಳನ್ನು ಮೀರಿಯೂ ಅವರ ಪಶುತನಗಳು ವ್ಯಗ್ರವಾಗಿಯೇ ಆಗುತ್ತವೆ. ಹಾಗಾಗಿಯೇ ಶಿವಗಂಗ ಮತ್ತು ಪುಟ್ಟಸ್ವಾಮಿ ಕೊಪ್ಪಲಿನ ನಾಟಕದ ದಿನವೇ ಹಿರಿಯರು ಎಷ್ಟೇ ಹೇಳಿದರೂ ಕೇಳದೆ ಪೊಲೀಸ್‌ಗೆ ದೂರು ಕೊಡುತ್ತಾರೆ. ಅವರ ಅಂತರಂಗದಲ್ಲಿ ದ್ವೇಷ ಹೊಗೆಯಾಡುತ್ತಿರುವುದನ್ನು ಇದು ಸೂಚಿಸುತ್ತದೆ.

ತೇಜಸ್ವಿಯವರ ಕಥನಸಾಹಿತ್ಯದಲ್ಲಿ ಸಮಾಜ ಅತ್ಯಂತ ವಿಶಿಷ್ಟವಾಗಿ ಮೂಡಿಬಂದಿದೆ. ನಗರ ಗ್ರಾಮೀಣ ಬದುಕಿನ ಸಮಾಜದಲ್ಲಿ ಉಂಟಾದ ಪಲ್ಲಟಗಳು ಹಳೆಯ ಹಾಗೂ ಹೊಸ ಜೀವನಕ್ರಮಗಳ ಪರಿಣಾಮದಿಂದುಂಟಾಗುತ್ತಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳು ಅವರ ಕಾದಂಬರಿಗಳಲ್ಲಿ ವ್ಯಕ್ತವಾಗಿವೆ. ಜಾತೀಯತೆ, ರಾಜಕೀಯ, ಬಡತನ ಹೀಗೆ ವಿವಿಧ ಆಯಾಮಗಳನ್ನು ತೇಜಸ್ವಿಯವರು ತಮ್ಮ ಬರವಣಿಗೆ ಮತ್ತು ಸಾಹಿತ್ಯಕ ರಚನೆಯಲ್ಲಿ ವಿಶೇಷವಾಗಿ ಚರ್ಚಿಸಿದ್ದಾರೆ. ಸಾಹಿತ್ಯ ಸಮಾಜದ ಉತ್ಪನ್ನವಾಗಿದ್ದು ಸಾಹಿತಿಯೂ ಸಾಮಾಜಿಕತೆಯ ಸಂವೇದನಾಶೀಲನಾಗಿರುತ್ತಾನೆ. ಸಮಾಜದ ಮೌಲ್ಯಗಳಾಚೆ ಆತನ ಬದುಕಿನ ಶ್ರೇಷ್ಟತೆಗಳನ್ನು ಕಾಣುತ್ತಾನೆ ಮತ್ತು ಕಟ್ಟುತ್ತಾನೆ. ಆ ಮೂಲಕ ಸಮುದಾಯದ ಮನಸ್ಸನ್ನು ಮುಟ್ಟುವ ಸಂಸ್ಕೃತಿಯ ಬಿರುಸಿಗೆ ಜೀವಂತಿಕೆ ತರುವ ಕಾರ್ಯ ನೆರವೇರಿಸುತ್ತಾನೆ. ಸಮಾಜದ ಒಡಲಿನಿಂದ ಬಂದು ಅಲ್ಲಿಯೇ ಬದುಕುತ್ತಿರುವ ಕವಿ, ಕಲಾವಿದ, ಸಾಹಿತಿಗಳಿಗೆ ಸಮಾಜ ಸೃಜನ ಕ್ಷೇತ್ರವಾಗಿದೆ. ಆತನು ಸಮಾಜದ ಎಲ್ಲಾ ವರ್ಗಗಳ ಏಳಿಗೆಗಾಗಿ, ಸಮಾನತೆಗಾಗಿ ಶಾಂತಿಸುಖಗಳಿಗಾಗಿ ಆರೋಗ್ಯಕರ ಹೋರಾಟ ಮಾಡುವ ಗುರುತರವಾದ ಹುದ್ದೆ ಮತ್ತು ಕಾಳಜಿ ಆತನ ಮೇಲಿರುತ್ತದೆ. ಒಂದು ಶ್ರೇಷ್ಠ ಕಲಾಕೃತಿಯ ಸಮಕಾಲೀನ ಸಂದರ್ಭದ ಆಶೋತ್ತರಗಳನ್ನು ಯುಗಧರ್ಮವನ್ನು ತನ್ನದೇ ಆದ ಸಾಮಾಜಿಕ ಮೌಲ್ಯಗಳನ್ನು ಒಪ್ಪಿಕೊಳ್ಳುವ ಹಾಗೆ ಚಿಂತನೆಗಳನ್ನು ಕಟ್ಟುತ್ತಾರೆ.

ತೇಜಸ್ವಿಯವರು ಮಲೆನಾಡಿನಲ್ಲಿ ಕೃಷಿಕಾಯಕದೊಂದಿಗೆ ತಮ್ಮ ಜೀವನ ಕಂಡುಕೊಂಡವರು ಇತ್ತೀಚಿನ ದಿನಗಳಲ್ಲಿ ರೈತರು ಕೃಷಿಕಾಯಕ ತ್ಯಜಿಸಿ ನಗರದತ್ತ ವಲಸೆ ಹೋಗಲು ಹಲವು ಕಾರಣಗಳಲ್ಲಿ ಸಾಂಪ್ರದಾಯಿಕ ಕೃಷಿಪದ್ಧತಿಯೂ ಒಂದಾಗಿದೆ. ಆಧುನಿಕತೆ, ವೈಜ್ಞಾನಿಕ ಕೃಷಿಯಿಂದಾಗಿ ಜನನೆಮ್ಮದಿಯಿಂದ ಬಾಳಬಹುದೆಂಬ ಕೃಷಿಕರಿಗಿರುವ ಅನಂತ ಅವಕಾಶಗಳ ಬಗ್ಗೆ ವಿವರಿಸುತ್ತಾರೆ. ಆಧುನಿಕತೆ, ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ ಬೆರೆತಗ್ರಾಮ

ಸಮಾಜ ಸದೃಢವಾಗಬಲ್ಲದು ಎಂಬುದು ಅವರ ನಂಬಿಕೆ. ನಾಗರಿಕ ಸಮಾಜದ ಕ್ರೌರ್ಯಗಳನ್ನು ವಿವರಿಸುತ್ತದೆ. ಉತ್ತಮ ಸಮಾಜದ ನಿರ್ಮಾಣಕ್ಕಿರುವ ಅನಂತ ಅವಕಾಶಗಳ ಬಗ್ಗೆಯೂ ಮಾರ್ಗದರ್ಶಿಸುತ್ತಾರೆ. ತೇಜಸ್ವಿಯವರ 'ಕಾಡು ಮತ್ತು ಕ್ರೌರ್ಯ' ಕಾದಂಬರಿಯಲ್ಲಿ ಆಧುನಿಕ ಶಿಕ್ಷಣ, ನಗರೀಕರಣದ ಪ್ರಭಾವದಿಂದಾಗಿ ಸೋಮು ವೆಂಕು ಪೂಜಾರಿಯಂತವರ ದೌರ್ಜನ್ಯಗಳಿಗೆ ಇತಿಶ್ರೀ ಹಾಡುತ್ತಾನೆ. ತಾನು ಪ್ರೀತಿಸಿದ ನಳಿನಿಯನ್ನು ಅಂತರಜಾತಿ ವಿವಾಹವಾಗುವುದರೊಂದಿಗೆ ನಳಿನಿಯ ಬಾಳಿಗೆ ಆಧಾರವಾಗಿದ್ದಲ್ಲದೆ ಗೊಡ್ಡು ಸಂಪ್ರದಾಯಸ್ಥರಿಗೆ ಸ್ವಾರ್ಥಿಗಳಿಗೆ ತಕ್ಕಪಾಠ ಕಲಿಸುತ್ತಾರೆ. ಅದೇ ರೀತಿ 'ಸ್ವರೂಪ' ಕಾದಂಬರಿಯಲ್ಲಿ ನಗರ ಸಭ್ಯತೆಯ ಸೋಗು ಅದರ ಹಿಂದಿರುವ ಜಾತೀಯತೆ, ತಾನು ಪ್ರೀತಿಸಿದ ಹುಡುಗಿಗೆ ಮೋಸಮಾಡಿದ ಕ್ರೌರ್ಯತೆಯ ಮುಖವಾಡಗಳನ್ನು ಕಾದಂಬರಿಕಾರರು ಕಳಚುತ್ತಾರೆ. ಇಲ್ಲಿ ಬರುವ ಶ್ರೀನಿವಾಸ ವ್ಯವಸ್ಥೆಗೆ ಅಂಜಿ ತಾನು ಪ್ರೀತಿಸಿದ ಹುಡುಗಿಯ ಕೈಬಿಡುವುದಕ್ಕೆ ವ್ಯವಸ್ಥೆಯ ಸಂಕುಚಿತತೆಯೇ ಕಾರಣವಾಗಿದೆ.

'ಕರ್ವಾಲೊ' ಕಾದಂಬರಿಯು ಗ್ರಾಮೀಣ ಪ್ರತಿಭೆಯ ಅಗಾಧತೆಯನ್ನು ಕರ್ವಾಲೊ ಎಂಬ ವಿಜ್ಞಾನಿಯ ಮೂಲಕ ವಿಶ್ವಕ್ಕೆ ಪರಿಚಯಿಸುತ್ತದೆ. ಭತ್ತದ ರೋಗಕ್ಕೆ ಕಾರಣ ಅರಸಿಹೋದ ನಿರೂಪಕರು ರೋಗಕ್ಕೆ ಕಾರಣ ಅರಿತಿದ್ದಲ್ಲದೆ ವ್ಯವಸ್ಥೆಯ ಕ್ರೌರ್ಯದ ಮುಖಗಳನ್ನು ದರ್ಶಿಸುತ್ತಾರೆ. ಮಂದಣ್ಣನ ಕಳ್ಳಭಟ್ಟಿ ಕೇಸಿನಿಂದ ಇಡೀ ವ್ಯವಸ್ಥೆ ಬಡವರನ್ನು ತನ್ನ ದರ್ಪದಲ್ಲಿ ತುಳಿಯುತ್ತಿರುವ ವಿವರಣೆಯನ್ನು ಕಾದಂಬರಿಕಾರರು ನೀಡುತ್ತಾರೆ. ಈ ಕಾದಂಬರಿಯು ಸಾಮಾಜಿಕ ಸನ್ನಿವೇಶದಲ್ಲಿ ಅಂತರ್ಗತವಾಗಿರುವ ತಾಕಲಾಟ ಮತ್ತು ವೈರುಧ್ಯತೆಗಳತ್ತ ನಮ್ಮನ್ನು ವೈಚಾರಿಕವಾಗಿ ತೊಡಗಿಸುವಷ್ಟು ಶಕ್ತಿಯುತವಾಗಿದೆ. ಸಾಕ್ಷ್ಯಾಧಾರ ಇಲ್ಲದೆ ಯಾವುದನ್ನು ನಂಬಬಾರದು ವೈಜ್ಞಾನಿಕತೆಯಿಂದ ಎಲ್ಲವನ್ನು ನೋಡಬೇಕೆಂಬ ವಿಷಯವನ್ನು ಕಾದಂಬರಿ ಧ್ವನಿಸುತ್ತದೆ. ಈ ಕಾದಂಬರಿಯಲ್ಲಿ ವ್ಯಕ್ತವಾಗಿರುವ ಧೋರಣೆಗೂ ಆಲನಹಳ್ಳಿಯವರ ಕಾದಂಬರಿಗಳಲ್ಲಿ ವ್ಯಕ್ತವಾಗಿರುವ ನಗರೀಕರಣದ ಧೋರಣೆಗಳಿಗೂ ವೈರುಧ್ಯಗಳನ್ನು ಮುಖ್ಯವಾಗಿ ಗುರುತಿಸಬಹುದಾಗಿದೆ. ಆಧುನಿಕ ಶಿಕ್ಷಣ ಮಾನವೀಯತೆ ಬೆಳೆಸಿಕೊಂಡು ಕರ್ವಾಲೋ ಬೆಳೆಸಿದ ಮಂದಣ್ಣನ ಪಾತ್ರದಂತೆ ಗೆಂಡೆತಿಮ್ಮ, ಮರಂಕಿಯರ ಬದುಕು ಅನಾವರಣಗೊಂಡಿರುವುದನ್ನು ನೋಡಬಹುದು.

'ಚಿದಂಬರರಹಸ್ಯ' ಕೃತಿಯಲ್ಲಿ ಕೃಷಿಪ್ರಧಾನವಾದ ಕೆಸರೂರಿನ ಸಮಾಜದಲ್ಲಿ ಪ್ರಭಾವವಿರುವುದನ್ನು ಗಮನಿಸಬಹುದಾಗಿದೆ. ಕೆಸರೂರಲ್ಲಿ ಕ್ರಾಂತಿಯ ಕಹಳೆ ಮೊಳಗಿದ್ದು ಇದಕ್ಕೆ ಪ್ರತ್ಯಕ್ಷವಾಗಿ ಅಧಿಕಾರಯುತವರ್ಗ ಹಾಗೂ ಶ್ರೀಮಂತ ವರ್ಗವೆ ಕಾರಣವಾಗಿದೆ. ಸಮಾನತೆಯ ಸಮಾಜದ ಕನಸು ಕಾಣುತ್ತಿದ್ದ ರಾಮಚಂದ್ರನ ಶಿಷ್ಯರಿಗೆ ತಹಶೀಲ್ದಾರ್, ಓ.ಡಿ.ಓ. ಡಿ.ಸಿ.

ಸಂಪತ್ತನ್ನು ಶ್ರೀಮಂತರು, ಬಡ್ಡಿ ವಸೂಲಿ ಮಾರ್ವಾಡಿಗಳು ತಮ್ಮ ಅದೃಶ್ಯ ಹಸ್ತದಿಂದ ಶೋಷಿಸುತ್ತಿರುವುದು ನಿಧಾನವಾಗಿ ಅನುಭವವಾಗುತ್ತದೆ. ಒಟ್ಟಿನಲ್ಲಿ ಕ್ರಾಂತಿಯಾಗಬೇಕೆಂದು ಒಮ್ಮತ ತೀರ್ಮಾನಕ್ಕೆ ಬಂದ ಅವರು ಮನೆ ಮಠದ ಹರಾಜುಗಳಿಂದ ಬೇಸತ್ತಿದ್ದು ಅಧಿಕ ಬಡ್ಡಿದರ ವಿಧಿಸುತ್ತಿದ್ದ ಬ್ಯಾಂಕ್‌ನ ಹಾಗೂ ಬಡ್ಡಿ ವಸೂಲಿ ಮಾರ್ವಾಡಿಗಳ ವಿರುದ್ಧ ಹೋರಾಟಕ್ಕೆ ಕಹಳೆ ಮೊಳಗಿಸುತ್ತಾರೆ. ಸಾಲ ತೀರಿಸಲಾಗದೆ ಬಡವರು ಮನೆ ಆಸ್ತಿ ಕಳೆದುಕೊಂಡರೆ ಖಾಸಗಿ ತೋಟಗಾರರು ತಮ್ಮ ತೋಟದ ಮರಗಳನ್ನು ಮಾರತೊಡಗಿದರು. ಅಡಮಾನ ಬ್ಯಾಂಕಿನ ಸಾಲಕ್ಕೆ ಮನೆ ಜಪ್ತಿಗೆ ಬರುವವರ ಸಮಾಧಾನಕ್ಕೆ ಹೀಗೆ ಮಾಡದೆ ಬೇರೆ ವಿಧಿಯೇ ಇರುತ್ತಿರಲಿಲ್ಲ. ಕೆಲವರು ಶ್ರೀಮಂತಿಕೆಯ ಕಾಫಿಕಲ್ಚರ್‌ಗೆ ದಾಸರಾಗಿದ್ದಾರೆ. ಮತ್ತೆ ಕೆಲವರು ತಮ್ಮ ಬಂಧುಗಳ ಕಣ್ಣಿಗೆ ಕಾಣದಂತೆ ಬಸ್‌ಹತ್ತಿ ಓಡಾಡುವ ಪರಿಸ್ಥಿತಿಯೂ ಇದ್ದು ಅಶಾಂತಿಯುತ ಬದುಕನ್ನು ಬದುಕುವಂತಾಗಿದೆ. ಸಮೃದ್ಧವಾಗಿ ಏಲಕ್ಕಿ ಕೃಷಿ ಬೆಳೆದು ನೆಮ್ಮದಿ ಜೀವನ ನಡೆಸುತ್ತಿದ್ದ ಕೆಸರೂರಿನ ಸಂಸ್ಕೃತಿ ವಿನಾಶಕ್ಕೆ ಅಧಿಕಾರಶಾಹಿ ಹಾಗೂ ರಾಜಕೀಯವೇ ಕಾರಣವಾಗಿದೆ. ಸುಲೇಮಾನ್ ಬೇರಿಗೆ ಕಾಡನ್ನು ಕಡಿಯಲು ಅನುಮತಿ ನೀಡಿದಂದಿನಿಂದ ಕೆಸರೂರು ಅಧಃಪತನದತ್ತ ಸಾಗುತ್ತದೆ. ರಾಜಕೀಯ ಆರ್ಥಿಕ ಪ್ರಬಲತೆಗಾಗಿ ಮೇಲ್ವರ್ಗ, ಹತ್ತು ಹಲವು ರೀತಿಯ ತಂತ್ರಗಳನ್ನೆಳೆದು ಬಡವರು ಮತ್ತಷ್ಟು ಬಡವರಾಗಿಯೇ ಉಳಿಯುವಂತೆ ನೋಡಿಕೊಳ್ಳುತ್ತದೆ. "ಕೆಸರೂರಿನ ಬಾಹ್ಯ ಜಗತ್ತಿನಲ್ಲಾದ ಬದಲಾವಣೆ ಆಲೂರಿನ ಜನರ ಸಂಸ್ಕೃತಿಯ ಹೊಸ ಬದಲಾವಣೆಯ ಕ್ರಮ ಅವನತಿಯ ಮುನ್ಸೂಚನೆಯೂ ಆಗುತ್ತದೆ. ಏಲಕ್ಕಿ ಮಂಡಿಯ ರಾಜನಂತಿದ್ದ ಕೃಷ್ಣೇಗೌಡನೂ ಊರಿನ ಸುಲ್ತಾನ ಸುಲೇಮಾನ್ ಬೇರಿಯೂ ತಮ್ಮ ತಮ್ಮ ಆರ್ಥಿಕ ರಾಜಕೀಯ, ಸಾಮಾಜಿಕ ಸ್ಥಾನಮಾನಗಳಿಗಾಗಿ ವಿಶೇಷ ಕಸರತ್ತು ಮಾಡಬೇಕಾಗಿ ಬಂದು ಇವರಿಬ್ಬರ ಮಹತ್ವಾಕಾಂಕ್ಷೆಗಳ ನೆರಳಿನಲ್ಲಿ ಆಚಾರಿ, ಅಬ್ಬಾಸ್‌ಬೇರಿ ಅಂಥವರು ಬೇಳೆ ಬೇಯಿಸಿಕೊಳ್ಳಲು ಹೋಗಿ ಇಡೀ ಊರು ಮತೀಯ ದಳ್ಳುರಿಗೆ ಆಂತರೀಕವಾಗಿಯೂ ತುತ್ತಾಗುತ್ತಿದೆ. ಇದೊಂದು ಬದಲಾವಣೆಯ ಸಂಘರ್ಷ"[೭೭] ಎಂಬುದು ವಿಷಾದನೀಯ ಕೃಷ್ಣೇಗೌಡ ತನ್ನ ವರ್ಗದ ನೆರಳಿನಲ್ಲಿ ಕೂಲಿಯಾಳುಗಳನ್ನು ಗೋಸಾಯಿ ಹೆಣ್ಣುಗಳನ್ನು ಭೋಗಿಸುತ್ತಾ ಸಾಗುವುದು ಶ್ರೀಮಂತಿಕೆಯ ಕ್ರೌರ್ಯವಾಗಿ ಬಡವರ ಮೂಕವೇದನೆಯಾಗಿ ಗೋಚರಿಸುತ್ತದೆ. ಅನಾಥ ಹಾಗೂ ಬಡವರ ರಫಿಯನ್ನು ಜಯಂತಿ ಪ್ರೀತಿಸುತ್ತಿರುವುದಾಗಿ ತಿಳಿದಾಗ ಕೃಷ್ಣೇಗೌಡ ಆಕ್ರೋಶಿತನಾಗುತ್ತಾನೆ. ಇಡೀ ಕೆಸರೂರು ವರ್ಗಸಂಘರ್ಷದಲ್ಲಿ ನಿರತವಾಗಿ ಊರಿಗೆ ಊರೆ ಹೊಗೆಯಿಂದ ತುಂಬಿರುವಾಗ ರಫಿ ಹಾಗೂ ಜಯಂತಿ ಅದರಿಂದ

---

೭೭. ಡಾ. ಪದ್ಮಾಶೇಖರ್, 'ಪ್ರತಿಸ್ಪಂದನ', ಪುಟ. ೩, ೨೦೧೩.

ರಕ್ಷಿತರಾಗುವುದು ಕಾದಂಬರಿಕಾರರ ಬಹುದೊಡ್ಡ ಆಕಾಂಕ್ಷೆಯಾಗಿದ್ದು ವರ್ಗ ಸಂಘರ್ಷ ಕೊನೆಯಾಗಬೇಕೆಂದು ಸಮತಾ ಸಮಾಜದ ನಿರ್ಮಾಣವಾಗಬೇಕೆಂದು ಲೇಖಕರು ಆಶಿಸುತ್ತಾರೆ.

ಆಲನಹಳ್ಳಿಯವರ 'ಪರಸಂಗದ ಗೆಂಡೆತಿಮ್ಮ' ಕಾದಂಬರಿಯಲ್ಲಿ ಮರಂಕಿಯನ್ನು ನಾಗರಿಕ ಬದುಕಿಗೆ ತುಡಿಯುವ ಜೀವವಾಗಿ ಭಿನ್ನವಾಗಿ ಚಿತ್ರಿಸುತ್ತಾರಾದರೂ ಅವಳು ಗ್ರಾಮೀಣ ಸಮಾಜದಲ್ಲಿ ಅತ್ತೆ ಕಾಟದಿಂದ ಸೊಸೆಯರು ಅನುಭವಿಸುವ ಹಿಂಸೆ, ಅಪಮಾನ, ವಾರಗಿತ್ತಿಯರ ಜಗಳ, ಭಾವನ ಬೈಗುಳಗಳನ್ನು ತಾಳ್ಮೆಯಿಂದ ಸಹಿಸಿಕೊಳ್ಳುವ ಸೊಸೆಯಾಗಿಯೂ ಕಂಡುಬರುತ್ತಾಳೆ. ಜೊತೆಗೆ ಗಂಡನ ಸ್ಥಿತಿಯನ್ನು ಅರಿಯುವಂತಹ ಹೆಂಡತಿಯೂ ಆಗಿದ್ದಾಳೆ. ಗಂಡನೊಂದಿಗೆ ಮೈಸೂರಿಗೆ ಹೋಗಿದ್ದಾಗ ಯಾವುದೇ ಅಂಜಿಕೆ ಇಲ್ಲದೆ ಆತನ ವ್ಯಾಪಾರದ ಗೂಡೆಯನ್ನು ತಾನೇ ಕಂಕುಳಲ್ಲಿ ಇರುಕಿಕೊಂಡು ಹೋಗಿ ವ್ಯಾಪಾರಕ್ಕೆ ಪ್ರೋತ್ಸಾಹನೀಡುತ್ತಾಳೆ. ಈ ರೀತಿಯ ಮರಂಕಿಯ ವ್ಯಕ್ತಿತ್ವವನ್ನು ಪರಿಚಯಿಸುತ್ತಲೇ ಇವಳ ಇನ್ನಿತರ ಮುಖಗಳನ್ನು ಲೇಖಕರು ಗುರುತಿಸುತ್ತಾರೆ. ಮರಂಕಿಯು ತೌರಿಗೆ ಹೋಗಿದ್ದಾಗ ನಂಜನಗೂಡಿನ ತನ್ನ ಸೋದರಮಾವನ ಮಗನಾದ ಮಹದೇವನಾಯಕನಿಂದ ಲೈಂಗಿಕಸುಖ ಪಡೆಯುತ್ತಾಳೆ. ಹೀಗೆ ಮರಂಕಿ ಯಾವುದನ್ನು ಯೋಚಿಸದೆ ಬದುಕು ಬಂದ ಹಾಗೆ ಸುಖವಾಗಿ ಬದುಕುವುದಷ್ಟೇ ಮುಖ್ಯ ಎಂಬ ಭಾವ ಹೊಸ ಬದುಕಿನ ಕ್ರಮವನ್ನು ಆವಾಹನೆ ಮಾಡಿಕೊಳ್ಳುವ ರೀತಿಯನ್ನು ಆಲನಹಳ್ಳಿ ನಾಗರಿಕತೆಯ ಸೋಂಕಿನಿಂದ ಗ್ರಾಮೀಣಬದುಕು ಪಡೆದುಕೊಳ್ಳುವ ಅನಿವಾರ್ಯವಾದ ತಿರುವು ಮತ್ತು ಬೆಳವಣಿಗೆಯನ್ನು ಸಾಲುಂಡಿಯ ಸಂದರ್ಭದಲ್ಲಿಯೂ ಆಗುವುದನ್ನು ವಿವರವಾಗಿ ಚಿತ್ರಿಸುತ್ತಾರೆ. 'ಭುಜಂಗಯ್ಯನ ದಶಾವತಾರ'ದಲ್ಲಿ ಭುಜಂಗಯ್ಯ ಉತ್ತಮ ಬದುಕಿಗಾಗಿ ತನ್ನೆಲ್ಲಾ ಮಿತಿಗಳ ಸಮೇತ ಬದಲಾವಣೆಯನ್ನು ಬಯಸುವಂತಹವನೇ ಆಗಿದ್ದಾನೆ. ಹೊಸ ಬದಲಾವಣೆಗೆ ಹಾತೊರೆಯುತ್ತಾನೆ. ಹಾಗಾಗಿ ದೇವನೂರಮಠದ ಮಹಾಸ್ವಾಮಿಗಳನ್ನು ಮಾದಳ್ಳಿಯಂಥ ಕುಗ್ರಾಮಕ್ಕೆ ಈತನು ಕರೆಸಿ ಪವಿತ್ರ ಮಾಡಿಸುತ್ತಾನೆ. ಇದು ಅಲ್ಲಿಯ ಜನರ ಭಾವನೆಯೂ ಆಗಿದೆ. ಆದ್ದರಿಂದಲೇ ಸ್ವಾಮಿಗಳು ಬಂದುಹೋಗಿ ಒಂದು ವಾರವಾದರೂ ಅವರ ನಡೆನುಡಿ ನೋಟ, ನಿಲುವು, ಅವರ ಸಂಯಮದ ಘನತೆ, ಗಾಂಭೀರ್ಯ, ಇವುಗಳೆಲ್ಲ ಇಡೀ ಊರಿನ ಜನತೆಯ ಮೇಲೆ ಪ್ರಭಾವ ಬೀರುತ್ತವೆ. ಇದಕ್ಕೆಲ್ಲ ಕಾರಣನಾದ ಭುಜಂಗಯ್ಯನ ಮೇಲೆ ಊರಿನವರಿಗೆಲ್ಲ ಅಭಿಮಾನ ಇನ್ನೂ ಹೆಚ್ಚುತ್ತದೆ. ಅದರಲ್ಲೂ ಸ್ವಾಮಿಗಳು ಭುಜಂಗಯ್ಯನ ಹೋಟೆಲಿಗೂ ಪಾದ ಬೆಳೆಸಿ ಅವನ ಕಾಯಕ ಮೆಚ್ಚಿ ತಥಾಸ್ತು ಎಂದಿದ್ದಂತೂ ಭುಜಂಗಯ್ಯನ ಮಾವನಾದ ಪರ್ವತಪ್ಪನಿಗೂ ಆಶ್ಚರ್ಯ ಹುಟ್ಟಿಸಿತ್ತು. ದೊಡ್ಡ ಮಠದ ಸ್ವಾಮಿಗಳಿಗೆ ತನ್ನ ಅಳಿಯ ಹತ್ತಿರವಾಗಿದ್ದು ಅಂತರ್ಯದಲ್ಲಿ ಸಂತೋಷವೂ ಆಗುತ್ತದೆ. ಆದರೆ ಪಟೇಲ್ ರುದ್ರಪ್ಪ ಮಾತ್ರ ತನ್ನ ಅವಿವೇಕವನ್ನು ಪ್ರದರ್ಶಿಸಿ ಹಗುರಾಗುತ್ತಾನೆ. ಅವನಿಗಂತೂ ಭುಜಂಗಯ್ಯನ ಮನ್ನಣೆಗೆ

ಸ್ವಾಮೀಜಿಯವರು ಕಾರಣರಾಗಿ ಊರಿಗೆ ಬಂದು ಹೋದದ್ದೂ ತನ್ನ ಅಸ್ತಿತ್ವವೇ ಕಡಿಮೆಯಾದಂತೆನಿಸಿ "ಏನೇ ಹೇಳಿ ಈಗಿನ ಸ್ವಾಮಿಗಳಿಗೆ ಲಿಂಗೈಕ್ಯ ಸ್ವಾಮಿಗಳಿಗಿದ್ದ ಶಕ್ತಿಯಿಲ್ಲ. ಅವರು ಎಂಥ ಕಟ್ಟುನಿಟ್ಟಾದ ವ್ಯಕ್ತಿತ್ವ ಇದ್ದವರು? ಧರ್ಮಕ್ಕೆ ಕಿಂಚಿತ್ತೂ ಚ್ಯುತಿ ಬಂದರೆ ಸಹಿಸುತ್ತಿರಲಿಲ್ಲ. ಇವರೋ ಇವತ್ತು ಹೆಂಡ ಮಾರುವವನ ಮನೆಗೆ ಹೋದರು. ನಾಳೆಚಪ್ಪಲಿ ಹೊಲೆಯುವ ರಾಚನ ಮನೆಗೆ ಬೇಕಾದರೂ ಹೋಗುತ್ತಾರೆ"[೭೮] ಎಂದು ಹೇಳುತ್ತಾನೆ. ರುದ್ರಪ್ಪನಲ್ಲಿ ಅಡಗಿರುವ ಸಣ್ಣತನ, ಅತೃಪ್ತಿಗಳನ್ನು ಈ ಮಾತುಗಳ ಮೂಲಕ ಗುರುತಿಸಬಹುದು. ಭುಜಂಗಯ್ಯ ಹೋಟಲ್‌ನಂತಹ ಹೊಸ ಉದ್ದಿಮೆಯಿಂದ ಮುಂದುವರೆದಿದ್ದು ಊರಿನ ಪ್ರತಿಷ್ಠಿತರಿಗೆ ಅಸೂಯಾಪರರಿಗೆ ಸಹಿಸಲಾರದ್ದಾಗಿರುತ್ತದೆ. ಈ ಶಕ್ತಿಗಳನ್ನು ನೇರವಾಗಿಯೇ ಎದುರಿಸುವ ಸಾಮರ್ಥ್ಯವನ್ನು ಈತ ನೈತಿಕವಾಗಿ ಪಡೆದಿದ್ದನು. ಅದೂ ತಮ್ಮ ಜಾತೀಯವರಿಗೆಲ್ಲ ಪ್ರಿಯರಾದ ಸ್ವಾಮೀಜಿಯವರನ್ನು ಕರೆಸಿದರೆ ಕುತಂತ್ರಿಗಳಾದ ರುದ್ರಪ್ಪ ಮತ್ತು ಸಣ್ಣಪ್ಪನಂತಹವರನ್ನು ಬುದ್ಧಿವಂತಿಕೆಯಿಂದಲೇ ಬಾಯಿಮುಚ್ಚಿಸಬಹುದೆಂದು ಭಾವಿಸುತ್ತಾನೆ. ಹೀಗಾಗಿ ಭುಜಂಗಯ್ಯನು ತನ್ನ ಬದುಕಿನಲ್ಲಿ ಹಲವಾರು ಸವಾಲುಗಳನ್ನು ಎದುರಿಸಿ ಗಟ್ಟಿಯಾಗಿಯೇ ಉಳಿಯುತ್ತಾನೆ.

'ಜುಗಾರಿಕ್ರಾಸ್' ಕಾದಂಬರಿಯಲ್ಲಿ ದೇವಪುರದ ಇಲ್ಲಿಯ ವ್ಯಾಪಾರಸ್ಥರು ಏಲಕ್ಕಿ ವ್ಯವಹಾರ, ಲಾಟರಿವ್ಯಾಪಾರ ಲೇವಾದೇವಿ ವ್ಯವಹಾರಗಳ ಜೊತೆಗೆ ಕಾಳವ್ಯವಹಾರ, ತಮ್ಮದೇ ಆದ ಪರವಾನಗಿರಹಿತ ಲಾಟರಿ, ದರೋಡೆ, ಕೊಲೆ ಮುಂತಾದ ಉಪವೃತ್ತಿಗಳಲ್ಲಿ ತೊಡಗಿ ಜುಗಾರಿಕ್ರಾಸ್, ದೇವಪುರವೆಂದರೆ ಜನಸಾಮಾನ್ಯರನ್ನು ಬೆಚ್ಚಿಬೀಳುವಂತಹ ವಾತಾವರಣ ಸೃಷ್ಟಿಸಿದ್ದಾರೆ. ಈ ಎಲ್ಲಾ ವ್ಯವಹಾರಗಳ ಅಂತಿಮ ವ್ಯಕ್ತಿ, ಅಮೂರ್ತಮೂರ್ತಿ ಯಾರಿರಬಹುದೆಂದು ಯಾರಿಗೂ ತಿಳಿದಿರಲಿಲ್ಲ. ಯಾರು ಕೊಲೆ ಖೂನಿ ಇತ್ಯಾದಿ ಯಾವ ಕಾರ್ಯಕ್ಕೂ ಯಾರಿಗೂ ಸಮಾಜಾಯಿಷಿ ಕೊಡಬೇಕಿಲ್ಲದ ಅವನೇ ಆ ಬಾಸ್ ಅವನ ಪ್ರೀತರ್ಥ್ಯ ಕೆಲವರು ಉರುಳು ಸೇವೆ, ಕೊರಳು ಸೇವೆ, ನೈವೇದ್ಯ, ನರಬಲಿ ಹೀಗೆ ನೂರೆಂಟು ತರದ ನೈವೇದ್ಯಗಳಿದ್ದವು ಕಾದಂಬರಿಯಲ್ಲಿ ಜಾಗತೀಕರಣ ಎಂಬ ಮೋಹಿನಿ ವಿಶ್ವರೂಪದ ಪರಿಣಾಮವನ್ನು ಕಾದಂಬರಿಕಾರರು ವಿಷಾದದಿಂದ ನಿರೂಪಿಸಿರುವುದನ್ನು ಕಾಣಬಹುದು. ಅರ್ಥಸಂಸ್ಕೃತಿಯ ಬೆನ್ನುಹತ್ತಿ ಹೊರಟಿರುವ ಆಧುನಿಕ ಸಮಾಜದ ವಿಕೃತಿಯನ್ನು ಅದರೊಳಗೇ ಇರುವ ನೆಮ್ಮದಿಯ ಬದುಕಿನ ಸಾಧ್ಯತೆಗಳನ್ನು ತೇಜಸ್ವಿಯವರು ಇಲ್ಲಿ ಸೂಕ್ಷ್ಮಸ್ತರದ ಶೋಧನೆಗೆ ಒಳಗುಮಾಡಿದ್ದಾರೆ ಎಂಬುದು ಓದುಗರ ಗ್ರಹಿಕೆಗೆ ಬರುತ್ತದೆ. ಹಲವಾರು ಗೊಂದಲ, ದ್ವಂದ್ವ, ಭಯಗಳ ನಡುವೆ ಕಾದಂಬರಿ ಸಾಗುತ್ತದೆ. ಮೂಕಿ ದೇವಮ್ಮ ಗಂಡನನ್ನು ಕಳೆದುಕೊಂಡು

---

೭೮. ಶ್ರೀಕೃಷ್ಣ ಆಲನಹಳ್ಳಿ, 'ಭುಜಂಗಯ್ಯನ ದಶಾವತಾರ', ಪು. ೧೦೩, ೨೦೦೫.

ಜೀವನಸಾಗಿಸುವುದು, ಗೌರಿ, ಸುರೇಶ ತಮಗರಿವಿಲ್ಲದೆ ವ್ಯೂಹವೊಂದರಲ್ಲಿ ಸಿಲುಕಿ ನಲುಗುವುದು, ದೇವಪುರದ ರಾಕ್ಷಸಿ ವರ್ಗದ ದರ್ಪದೌರ್ಜನ್ಯಗಳಿಗೆ ಸಾಕ್ಷಿಯಾಗಿದೆ.

ಇಪ್ಪತ್ತೊಂದನೆಯ ಶತಮಾನದ ಪ್ರಮುಖ ಸವಾಲುಗಳನ್ನು ಮುಖಾಮುಖಿಯಾಗಿಸುವ ತೇಜಸ್ವಿಯವರು ಜಾಗತೀಕರಣದ ಪ್ರಭಾವದಿಂದಾಗಿ ಆರ್ಥಿಕತೆಯ ಹಿಂದೋಡುತ್ತಿರುವ ಅಧಿಕಾರಿ ಹಾಗೂ ರಾಜಕೀಯ ವರ್ಗ, ಮಾಧ್ಯಮಗಳನ್ನು ಸೂಕ್ಷ್ಮವಾಗಿ ವಿಡಂಬಿಸುತ್ತಾರೆ. ಕಾದಂಬರಿಯಲ್ಲಿ ಸ್ಥಳೀಯ ಸಮಸ್ಯೆಗಳು ಎನಿಸುವುವು ಅಂತರಾಜ್ಯ ರಾಷ್ಟ್ರಗಳ ಸಮಸ್ಯೆಗಳಾಗಿಯೂ ಕಾಡುತ್ತವೆ. ಬಡವ ಶ್ರೀಮಂತ ವರ್ಗದ ನಡುವಿನ ತಿಕ್ಕಾಟಕ್ಕಿಂತ ಸಾಮಾಜಿಕ ಸಮಸ್ಯೆಗಳು ಮುಖ್ಯವೆನಿಸುತ್ತವೆ. 'ಊರಳ್ಳಿ', 'ಮಕ್ಕಿಗದ್ದೆ', 'ಗೊಂದಲಗೇರಿ'ಗಳಲ್ಲಿ ಬಡವರು ಕೂಲಿಯಾಳುಗಳು ಸಮಸ್ಯೆಗಳನ್ನು ಎದುರಿಸುತ್ತಿರುವುದು ಶ್ರೀಮಂತರಿಂದಲ್ಲ ಬದಲಾಗಿ ಆಡಳಿತವರ್ಗದ ದರ್ಪ ಅಧಿಕಾರದಿಂದ ಮಕ್ಕಿಗದ್ದೆ ಬಡವರು ಭಟ್ಟಿಸರಾಯಿ ವಿಷಯದಲ್ಲಿ ಒದೆ ತಿಂದು ಕೃಶರಾಗಿ ಹೋಗಿರುವ ಉಲ್ಲೇಖ ಕಾದಂಬರಿಯಲ್ಲಿದೆ. ಕೆಳಮಧ್ಯಮವರ್ಗದ ರೈತರು ವಿದ್ಯುತ್ ಇಲಾಖೆಯ ಅಸಮರ್ಪಕ ವಿದ್ಯುತ್, ರಾಜಕಾರಣಿಗಳ ಸುಳ್ಳು ಆಶ್ವಾಸನೆ, ದಿವ್ಯನಿರ್ಲಕ್ಷ್ಯದಿಂದ ನಿರಂತರವಾಗಿ ಕಷ್ಟ ಅನುಭವಿಸುತ್ತಿರುವ ಚಿತ್ರಣವಿದೆ. ಕಾರ್ಮಿಕ ವರ್ಗದ ನಾಯಕನ ಸ್ವಹಿತಾಶಕ್ತಿಯಿಂದ ಕಾರ್ಮಿಕರಿಗೆ ವಂಚಿಸುವ ಶ್ರೀಮಂತರನ್ನು ಮುಷ್ಕರದ ಹೆಸರಿನಲ್ಲಿ ಹೆದರಿಸಿಕೊಂಡಿರುವಂತಹ ಸೂಕ್ಷ್ಮ ವಿಚಾರಗಳನ್ನು ಸಹ ಲೇಖಕರು ಹೊರಹಾಕಿದ್ದಾರೆ. ವ್ಯವಸ್ಥೆಯ ಅಂಗವಾಗಿರುವ ಮಾಧ್ಯಮಗಳು ದೇಶದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರನಿರ್ವಹಿಸುತ್ತಿದ್ದು ಅವುಗಳಲ್ಲಿ ಕೆಲವು ಇತ್ತೀಚೆಗೆ ಸ್ವಾರ್ಥ, ಲೋಭಕ್ಕಾಗಿ ತಪ್ಪುಹಾದಿ ತುಳಿಯುತ್ತಿರುವ ಬಗ್ಗೆ ಲೇಖಕರು ವಿಷಾದಿಸುತ್ತಾರೆ. ಪೇಪರ್ ವೃತ್ತಿಯನ್ನೇ ನಂಬಿಬದುಕುತ್ತಿರುವ ಪ್ರಕಾಶನಿಗೆ ಕಾರ್ಮಿಕನಾಯಕ ಡೆಲ್ಲಿ ಬದುಕುವ ದಾರಿಗಾಗಿ ಸತ್ಯಾಸತ್ಯತೆ ತಿಳಿಯದೆ ವಿಷಯಗಳನ್ನು ಬರಹಗಳ ಮೂಲಕ ಬರೆಯುವಂತೆ ಸಲಹೆ ನೀಡುತ್ತಾನೆ. ಆಧುನಿಕತೆ ಬೆಳೆದಂತೆ ಜೀವನದ ಬದುಕಿನ ಹೊಸಹೊಸ ಕ್ರಮಗಳು ಬದಲಾಗಿ ಸಂಘರ್ಷಗಳು ಏರ್ಪಡುತ್ತವೆ.

ಪರಂಪರೆಗೆ ಮುಖಾಮುಖಿಯಾಗುವುದು ಸೃಜನಶೀಲ ಲೇಖಕನೊಬ್ಬ ಎದುರಿಸುವ ಬಹುದೊಡ್ಡ ಸಂಘರ್ಷ, ಪರಂಪರೆಯನ್ನು ಸಂಪೂರ್ಣವಾಗಿ ಧಿಕ್ಕರಿಸದೆ ಪರಂಪರೆಯ ಮಿತಿಯನ್ನು ಕಂಡುಕೊಳ್ಳುವ ಬಿಡದೆ ಅದರೊಳಗಿನಿಂದಲೇ ನಡೆಸುವ ಹುಡುಕಾಟ ಸಾಂಸ್ಕೃತಿಕ ನೆಲೆಯಿಂದ ಅತ್ಯಂತ ಮಹತ್ವದ್ದು. ಏಕೆಂದರೆ ಇಂತಹ ಸಂಘರ್ಷಕ್ಕೆ ಇಳಿಯುವ ಲೇಖಕರು "ಬದಲಾಗುತ್ತಿರುವ ಸಾಮಾಜಿಕ ವಿನ್ಯಾಸಗಳು, ಹಳೆಯ ಸಾಮಾಜಿಕ ಸಂಸ್ಥೆಗಳ ವಿಘಟನೆ ವೈವಾಹಿಕ ಜೀವನದ ಇಕ್ಕಟ್ಟುಗಳು ಮೌಲ್ಯಗಳಿಂದ ಬಂಧಿತವಾದ ಸಮಾಜದ ಎಡಬಿಡಂಗಿತನ

ನೈತಿಕ ಇಬ್ಬಂದಿತನವೊಂದು ಮನುಷ್ಯನ ವರ್ತನೆಯಲ್ಲಿ ಕಾಣಿಸಿಕೊಳ್ಳುವುದು ಇವೇ ಮೊದಲಾದ ನೆಲೆಗಳಲ್ಲಿ ವಸ್ತುವನ್ನು ಆಯ್ದುಕೊಳ್ಳುತ್ತಾರೆ"[೭೯] ಇದರಿಂದ ಪರಂಪರೆಯೊಳಗಿನ ವ್ಯವಸ್ಥೆಯ ಕೇಂದ್ರದೆಡೆಗೆ ಒಳನೋಟಗಳು ಸಾಧ್ಯವಾಗುವುದರಿಂದ ಸಾಂಸ್ಕೃತಿಕವಾದ ಬದಲಾವಣೆಗೆ ಮುಖ್ಯವಾದ ದಾರಿ ಇದರಿಂದ ದೊರೆಯುತ್ತದೆ. ಏಕೆಂದರೆ ವ್ಯಕ್ತಿಯ ಬದುಕು ಅವನ ಅವ್ಯಕ್ತ ಪ್ರಜ್ಞೆಯಿಂದಲೇ ನಿರ್ದೇಶಿತವಾಗುವುದರಿಂದ, ಈ ನಿರ್ದೇಶನಗಳಲ್ಲಿ ಆಗುವ ಚಲನೆಯು ಸಂಸ್ಕೃತಿಯನ್ನು ಹೊಸನಿಟ್ಟಿನಲ್ಲಿ ರೂಪಿಸಲು ಅನುವಾಗುತ್ತದೆ. ಸ್ವಾತಂತ್ರ್ಯೋತ್ತರದ ನಂತರದ ದಶಕದಲ್ಲಿ ಅಸ್ತಿತ್ವವಾದದ ಪ್ರಭಾವ ಕನ್ನಡದ ಕಥನಕಾರರನ್ನು ಆವರಿಸಿದಂತೆ ತೇಜಸ್ವಿ ಹಾಗೂ ಆಲನಹಳ್ಳಿಯವರ ಮೇಲೂ ಆಗಿರುವುದಕ್ಕೆ ಪುರಾವೆಗಳಿವೆ. ಪರಂಪರೆ, ಸಂಪ್ರದಾಯ ಜಾತಿಯತೆ ಇವುಗಳ ವಿರುದ್ಧ ಮನುಷ್ಯನ ಅಸ್ತಿತ್ವ ಸ್ಥಾಪಿತವಾಗಬೇಕಿರುವುದನ್ನು ಆಲನಹಳ್ಳಿ ಹಾಗೂ ತೇಜಸ್ವಿಯವರು ತಮ್ಮ ಕಥನಸಾಹಿತ್ಯದ ಮೂಲಕ ಪ್ರತಿಪಾದಿಸುತ್ತಾರೆ.

ಒಟ್ಟಾರೆಯಾಗಿ ಇಬ್ಬರೂ ಕಥನಸಾಹಿತ್ಯಕಾರರಲ್ಲಿ ಸಮಾಜವು ಹೊಸ ಮೌಲ್ಯಗಳನ್ನು ಒಪ್ಪಿಕೊಳ್ಳಲು ಸಿದ್ದಗೊಳ್ಳಬೇಕಾಗಿರುವುದನ್ನು ಗುರುತಿಸಬಹುದು. ಅರವತ್ತು ಎಪ್ಪತ್ತರ ದಶಕದ ಈ ಕಥನಸಾಹಿತ್ಯ ಮನುಷ್ಯನು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಿದ್ದ ಕಾಲವಾಗಿತ್ತು. ಅಂತಹ ಸಂದರ್ಭದಲ್ಲಿ ಹೊಸಮೌಲ್ಯಗಳಿಗೆ ವಿರೋಧವ್ಯಕ್ತವಾಗಿದ್ದರಲ್ಲಿ ಸಮಾಜದ ಜೀವಂತಿಕೆಯ ಲಕ್ಷಣವಾಗಿದೆ. ಅನಂತರದಲ್ಲಿ ಆಧುನಿಕ ಮೌಲ್ಯಗಳನ್ನು ಭಾರತೀಯ ಸಮಾಜ ಸಂಪೂರ್ಣವಾಗಿ ಅಳವಡಿಸಿಕೊಂಡು ಅವನನ್ನು ಮತ್ತೊಂದು ಇಕ್ಕಟ್ಟಿಗೆ ಸಿಲುಕಿಸುವುದನ್ನು ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನಸಾಹಿತ್ಯದಲ್ಲಿ ನೋಡುತ್ತೇವೆ. ಬದುಕಿನಲ್ಲಿ ನಡೆಯುವ ಈ ಸಂಘರ್ಷದಿಂದ ಬದುಕು ದುರಂತದತ್ತ ಕಾಲುಹಾಕುವುದನ್ನು ಬದುಕಿನೊಡನೆ ಇಷ್ಟವಿಲ್ಲದ ಹೊಂದಾಣಿಕೆಯನ್ನು ಪ್ರತ್ಯಕ್ಷವಾಗಿ ವಿರೋಧ ವ್ಯಕ್ತಪಡಿಸಲು ಅವನಿಂದ ಕೊನೆಯವರೆಗೂ ಸಾಧ್ಯವಾಗುವುದಿಲ್ಲ. ಇವುಗಳಿಗೆ ತನ್ನನ್ನು ತಾನೇ ಬಲಿಯಾಗಿಸಿಕೊಳ್ಳುತ್ತಲೇ ವ್ಯಕ್ತಿಕೇಂದ್ರಿತ ದುರಂತವನ್ನು ಹೇಳುತ್ತದೆ. ಇಡೀ ದುರಂತವನ್ನು ಸಮಾಜದ ಧ್ವನಿಯಾಗಿ ಎತ್ತಿಹಿಡಿಯುವಲ್ಲಿ ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನಗಳು ಯಶಸ್ವಿಯಾಗಿ ಹೇಳುತ್ತವೆ. ಮನುಷ್ಯ ಸಮಾಜಜೀವಿ ಅವನು ಸಮಾಜದಲ್ಲಿದ್ದು ಒಂಟಿತನವನ್ನು ಅನುಭವಿಸಬೇಕಾಗಿರುವ ಕಾರಣ ಆಧುನಿಕ ಮೌಲ್ಯವೇ ಅಥವಾ ಪರಂಪರಾನುಗತವಾಗಿ ಬಂದಿರುವ ನಂಬಿಕೆಗಳೇ ಎಂಬ ಪ್ರಶ್ನೆಯನ್ನು ಹಾಕುತ್ತವೆ. ಆಧುನಿಕ ಮೌಲ್ಯಗಳಿಂದಲೇ ವ್ಯಕ್ತಿಯ ವೈಯಕ್ತಿಕ ಅನುಭವಗಳು ಸಾಹಿತ್ಯದ ವಸ್ತುಗಳಾಗಿ ಮಾರ್ಪಾಡು ಹೊಂದಿರುವುದನ್ನು ಇಲ್ಲಿ ಗಮನಿಸಬಹುದು.

---

೭೯. ಕೆ.ವಿ.ನಾರಾಯಣ, 'ಬೇರುಕಾಂಡ, ಚಿಗುರು', ಪುಟ. ೩೭೯, ೧೯೯೭.

ಸಾಂಪ್ರದಾಯಿಕ, ಹೊಸಜೀವನಕ್ರಮದ ಸಂಘರ್ಷದಲ್ಲಿ ಮನುಷ್ಯನ ಹುಡುಕುವಿಕೆಯ ಜವಾಬ್ದಾರಿಯನ್ನು ಹೆಚ್ಚಾಗಿಸಿದೆ. ಬದುಕನ್ನು ಇನ್ನಷ್ಟು ಆಳವಾಗಿ ಅರ್ಥಮಾಡಿಕೊಳ್ಳಲು ಶೋಧಿಸಲು ತೊಡಗುತ್ತಾನೆ. ಹೊಸ ಮತ್ತು ಹಳೆಯ ಜೀವನಕ್ರಮಗಳ ಸಂಘರ್ಷದಿಂದ ಬದುಕಿನ ವೈರುಧ್ಯಗಳನ್ನು ಮನುಷ್ಯನ ವಿವಿಧ ಮಾದರಿಗಳನ್ನು ಬದುಕಿನ ಮಜಲುಗಳನ್ನು ಸಮಾಜಕ್ಕೆ ಎಳೆಎಳೆಯಾಗಿ ಬಿಚ್ಚಿತೋರಿಸುತ್ತಾನೆ. ಮನುಷ್ಯನಿಗೆ ಬದುಕಿನ ಭರವಸೆಯ ಕಿರಣಗಳನ್ನು ಆಗಿಂದಾಗ್ಗೆ ಕೊಡಲು ಪ್ರಯತ್ನಿಸುತ್ತಾನೆ.

೬.೨. ಸಾಮಾಜಿಕ ಮೌಲ್ಯಗಳು ಮತ್ತು ವೈಯಕ್ತಿಕ ಮೌಲ್ಯಗಳ ಮುಖಾಮುಖಿ

ನವ್ಯ ಮತ್ತು ನವ್ಯೋತ್ತರ ಸಾಹಿತ್ಯ ಘಟ್ಟದಲ್ಲಿ ಸಮಷ್ಟಿಪ್ರಜ್ಞೆಗಿಂತ ವಸ್ತುನಿಷ್ಠ ಹಾಗೂ ವ್ಯಕ್ತಿನಿಷ್ಠ ಪ್ರಜ್ಞೆಗೆ ಹೆಚ್ಚಿನ ಒತ್ತುಕೊಟ್ಟರು. ಮನುಷ್ಯನ ಖಾಸಗೀ ಅನುಭವಗಳು ಸಾಹಿತ್ಯದಲ್ಲಿ ಅಭಿವ್ಯಕ್ತಿಯಾಗಿ ರೂಪುಗೊಂಡಿತು. ಸಾಮಾಜಿಕ, ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ತಂದು ಈ ಸಾಹಿತ್ಯಕ ಸಂದರ್ಭದಿಂದ ಇನ್ನೊಂದು ದುರಂತದ ಮುಖವನ್ನು ಪರಿಚಯಿಸಿಕೊಳ್ಳಬಹುದು. ತನ್ನ ಖಾಸಗೀ ಅನುಭವಗಳನ್ನು ಇನ್ನಿಲ್ಲದಂತೆ ವೈಭವೀಕರಿಸಿ ಸಮಾಜದ ಮೌಲ್ಯಗಳ ಕುಸಿತಕ್ಕೆ ಕಾರಣವನ್ನು ಮಾತ್ರ ಬೊಟ್ಟುಮಾಡಿ ತೋರಿಸುತ್ತಾರೆ. ಇಲ್ಲಿ ಅವರು ಹೇಳಬೇಕಾದಂತಹ ವಿಚಾರದಕಡೆಗೆ ಯಾರು ಅಷ್ಟಾಗಿ ಗಮನಕೊಡಲಿಲ್ಲ. ಆಧುನಿಕತೆಯು ಭಾರತೀಯ ನಗರ ಗ್ರಾಮಗಳೆಂಬ ಬೇಧಗಳಿಲ್ಲದೆ ಪ್ರವೇಶಿಸುತ್ತಿರುವುದು ಅದರ ಪರಿಣಾಮವೇ ಮನುಷ್ಯನ ಆಂತರಿಕ ಸಂಬಂಧಗಳ ಬೆಳೆಸುವಿಕೆಯು ಸಾಮಾಜಿಕ ಮೌಲ್ಯಗಳ ಕುಸಿಯುವಿಕೆಗೆ ಮುಖ್ಯ ಕಾರಣ. ಬದಲಾವಣೆಗಳು ಎಷ್ಟು ವೇಗವಾಗಿ ಸಮಾಜವನ್ನು ಆವರಿಸುವುದನ್ನು ಭಾರತೀಯ ಸಮಾಜವು ತಡೆಯುವ ಯತ್ನವನ್ನೇ ಮರೆಯುವಂತೆ ಮಾಡಿತು. ಸಮಷ್ಟಿ ಪ್ರಜ್ಞೆಯಿಂದ ವ್ಯಕ್ತಿನಿಷ್ಠ ಪ್ರಜ್ಞೆ ಹೊರಳಿದ ಸಮಾಜದಲ್ಲಿ ತನ್ನ ಹಿತವೇ ಮುಖ್ಯ. ಅದಕ್ಕೆ ಅವನು ಸ್ವಾರ್ಥಪರನಾಗಿ, ಲಂಪಟನಾಗಿ ಸುಖಲೋಲುಪತೆಗೆ ಬಲಿ ಬಿದ್ದ ಅವನಿಗೆ ಆದರ್ಶ, ತ್ಯಾಗ, ನಿಸ್ವಾರ್ಥಗಳಿಲ್ಲದೆ ವ್ಯಂಗ್ಯವಾಗಿ ಅಪಹಾಸ್ಯವಾಗಿ ಕಂಡವು. ತಾನೇ ನಿಜವಾದ ವಾಸ್ತವಿಕ ಪ್ರಪಂಚವನ್ನು ತೆರೆದು ತೋರಿಸುತ್ತಿದ್ದೇನೆ ಎಂಬ ಬಲವಾದ ಆತ್ಮವಿಶ್ವಾಸವು ಅವನಿಗೆ ಸಮಾಜದ ವಿನಾಶವು ಆತಂಕಗೊಳಿಸಲಿಲ್ಲ.

ಬರಹಗಾರನು ತನ್ನ ಸಮಕಾಲೀನದೊಂದಿಗೆ ಅಥವಾ ಸಮಾಜದೊಂದಿಗೆ ಸ್ಥಾಪಿಸಿಕೊಳ್ಳುವ ಮಾನವೀಯ ಸಂಬಂಧ ಹಾಗೂ ಮಾನಸಿಕ ಸಂವಾದಗಳು ಸಾಹಿತ್ಯಕ್ಕೆ ವಿಶಿಷ್ಟ ಅಭಿವ್ಯಕ್ತಿ ವಿನ್ಯಾಸವನ್ನು ಹೊಸ ದರ್ಶನಾತ್ಮಕತೆಯನ್ನು ತಂದುಕೊಡುತ್ತವೆ. ಆದರೆ ಇದರಿಂದ ಇನ್ನೊಂದು ರೀತಿಯ ಅಪಾಯವನ್ನು ಕಾಣಬಹುದು. ಒಬ್ಬ ಸಾಹಿತಿಗೂ ತಾನು ಭಾಷಾ ಬಳಕೆಯಲ್ಲಿ ಅತ್ಯುತ್ತಮನೆಂದು ತನ್ನ ಕೆಲವು ಅನೈತಿಕವೆಂದು ಗುರುತಿಸಬಹುದಾದ

ಮಾನವಪ್ರವೃತ್ತಿಗಳನ್ನು ವೈಭವೀಕರಿಸಿದಾಗ ಸಮಾಜಕ್ಕೆ ದ್ರೋಹಮಾಡಿದಂತೆ ಹಾಗೂ ಆ ಮೂಲಕ ಅವನು ಒಬ್ಬ ಮುಖವಾಡ ಮನುಷ್ಯನೆಂದು ಅಂತಹ ಸಮಾಜವು ಕ್ರಮೇಣ ವಿನಾಶಕ್ಕೆ ಹತ್ತಿರವಾಗುತ್ತದೆ. ಇದರಿಂದ ಲೇಖಕರ ಸಾಹಿತ್ಯದ ಸಾಮ್ಯತೆ ಮತ್ತು ವೈಷಮ್ಯತೆಯನ್ನು ನೋಡಬಹುದು ಮತ್ತು ಇಬ್ಬರೂ ಲೇಖಕರು ಗ್ರಾಮ ಸಂಸ್ಕೃತಿಯ ಶೋಧದ ತೌಲನಿಕತೆಯನ್ನು ಹೇಗೆ ಅನಾವರಣಮಾಡಿದ್ದಾರೆ ಎಂಬುದನ್ನು ಕಾಣಬಹುದು.

ಲೇಖಕರು ದೈನಂದಿನ ವಾಸ್ತವ ಬದುಕಿನ ಚಿತ್ರಣವನ್ನು ಕೊಡುತ್ತಿರುವ ಕೃತಿಗಳಲ್ಲಿ ಸಾಮಾಜಿಕ ಮೌಲ್ಯಗಳಿಗೆ ಯಾವ ರೀತಿಯಲ್ಲಿ ದ್ರೋಹವನ್ನು ಬಗೆದಿದ್ದೇನೆ ಎಂಬ ಪ್ರಶ್ನೆಗಳನ್ನು ಕೇಳುತ್ತಾನೆ. ಮೌಲ್ಯಗಳಿಗೆ ಮನುಷ್ಯರಿಗೆಲ್ಲ ಒಂದೇ ರೀತಿಯಲ್ಲಿ ಕಾಣಿಸುತ್ತಿದೇ ಅವನು ಸಾಕ್ಷೀಪೂರಕವಾಗಿ ಹೇಳುತ್ತಿದ್ದಾನೆಯೇ ಒಬ್ಬರಿಗೆ ಮೌಲ್ಯವಾಗಿ ಕಂಡದ್ದು ಮತ್ತೊಬ್ಬರಿಗೆ ಅಪಮೌಲ್ಯವಾಗಿ ಕಂಡುಬರುವುದು ವಾಸ್ತವದ ಸತ್ಯ. ಇದನ್ನು ತಿಳಿದು ಸಾಮಾಜಿಕ ಮೌಲ್ಯಗಳಿಗೆ ಬದಲಾವಣೆ ತರಲು ಪ್ರಯತ್ನಿಸಿ ವಿಫಲವಾಗುವುದು. ಅದಕ್ಕೆ ಪ್ರತಿಭಟನಾತ್ಮಕವಾಗಿ ವೈಯಕ್ತಿಕ ಮೌಲ್ಯಗಳನ್ನು ರೂಢಿಸಿಕೊಳ್ಳಲು ಯತ್ನಿಸಿದರು. ತನ್ನ ಬದಲಾವಣೆಗೆ ಕಿವಿಗೊಡದಿದ್ದ ಸಮಾಜಕ್ಕೆ ವೈಯಕ್ತಿಕ ಮೌಲ್ಯಗಳನ್ನು ಪ್ರತಿಪಾದಿಸುವ ಮೂಲಕವೇ ಗಟ್ಟಿಯಾದ ಸಮಾಜವನ್ನು ನಿರ್ಮಾಣಮಾಡಲು ಕಾರಣವಾಗುತ್ತದೆ ಎಂಬ ನಿಲುವುಗಳನ್ನು ಹೊಂದಿರುವವನು. ಈ ಸಾಮಾಜಿಕ, ವೈಯಕ್ತಿಕ ಮೌಲ್ಯಗಳ ಮುಖಾಮುಖಿಯನ್ನು ಆಲನಹಳ್ಳಿ ಹಾಗೂ ತೇಜಸ್ವಿಯವರ ಸಾಹಿತ್ಯ ಕೃತಿಗಳಿಗೆ ಪ್ರಮುಖವಾದ ಅಂಶವೆಂದು ಗುರುತಿಸಬಹುದು. ಮಾನಸಿಕಹಿಂಸೆಗಳು ಮನುಷ್ಯನ ಹಲವು ವೈರುಧ್ಯಗಳಿಗೆ ಕಾರಣಗಳಾಗಿವೆ.

"ಜೀವಬುಡುಕ್ಮುಂಚೆ ನಿಮ್ಮೊಂದ್ಸಲ ಕಂಡ್ಬುಟ್ರು ಕಣ್ಮುಚ್ಬೇಕಂತ ಯಾಪಾಟಿ ಅಲಬಾಡ್ತ ಅವ್ರೆ ಗೊತ್ರ. ಅದರಳ ಅಲಬಾಟ ಕಂಡು ನಂಕಣ್ಣಿಗ್ಗಿ ಕಳ್ಳಿ ಕಸ್ಕಂಡುಗಾಗ್ಬುಡ್ತು...... ಅವನ ಮಾತುಗಳಿಗೆ ಇದ್ದಕ್ಕಿದ್ದಂಗೆ ಗುಂಡಿನ ಶಕ್ತಿಬಂದುಬಿಟ್ಟಿದೆಯೆನಿಸಿ ಅಜ್ಜಿಯ ಸಾವು ಮೆಲ್ಲಗೆ ನನ್ನೊಳಗೆ ಗೂಡು ಕಟ್ಟುತ್ತಿದೆ ಎನಿಸಿ ಅತೃಪ್ತಿಯಿಂದ ಕುದಿಕುದಿದು ತೆರೆದಬಾಯಿ ಮುಚ್ಚದೆಯೇ ಕಣ್ಣುಮೇಲಾಗಿ ಸಾಯಲಿರುವ ಅಜ್ಜಿಯ ಹೆಣಕಾಣುವ ಮುಂಚೆಯೇ ಕಣ್ಣುಕಟ್ಟಿತ್ತು. ಇದು ಇಷ್ಟು ದಿನ ಪಿರಿಪಿರಿ ಕಾಡಿದ್ದ ಅಜ್ಜಿ ಇನ್ನು ಸತ್ತು ಪ್ರೇತವಾಗಿ ಕಾಡದಿರುತ್ತದೆಯೇ ಎಂಬ ಅನಿಸಿಕೆಯೊಡನೆ ಊರಮುಂದಿನ ಭಾವಿ ಸಮೀಪ ಬಂದಾಗ ಅಲ್ಲಿದ್ದ ಹೆಂಗಸರೆಲ್ಲ ನನ್ನ ಕಡೆಯೇ ನೋಡುತ್ತಾ ಅನುಕಂಪದಿಂದ ನಿಟ್ಟುಸಿರುಬಿಟ್ಟಿದ್ದು ಕಂಡು ಮೈ ಉರಿಯತೊಡಗಿತು. ಇವರ ಜೋಳ ಕರುಣೆಯ ಮಾತುಗಳಲ್ಲಿ ತೊಯ್ದು ಚಾವಡಿ ದಾಟುತ್ತಿದ್ದಂತೆ ತೋಟದಮನೆ, ಮಾವ ಪ್ರತ್ಯಕ್ಷವಾಗಿ ಅವನ ತನಿಖೆ ಆರಂಭವಾಗಿ ಮೈಯುದ್ಧಕ್ಕೂ ಜಿರಳೆ ಬಿಟ್ಟಂತಾಯಿತು".[೮೦]

---

೮೦. ಶ್ರೀಕೃಷ್ಣ ಆಲನಹಳ್ಳಿ, 'ಸಮಗ್ರಕಥೆಗಳು', ಪುಟ. ೧೨೪, ೨೦೦೦.

ಇಲ್ಲಿ ವಿದ್ಯಾವಂತನಾದ ನಾಯಕ ಅಜ್ಜಿಯ ಸಾವನ್ನು ಎದುರುನೋಡುತ್ತಲೇ ಹಳ್ಳಿಗೆ ಹಿಂದಿರುಗಿದ ಸಂದರ್ಭದಲ್ಲಿ ಮೌಲ್ಯಗಳ ಮುಖಾಮುಖಿಯ ಸೂಕ್ಷ್ಮ ಸ್ವರೂಪಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ತನ್ನ ಆಕಾಂಕ್ಷೆಗಳಿಗೆ ಅಡ್ಡಬಂದ ಅಜ್ಜಿಯನ್ನು ತಿರಸ್ಕರಿಸುವನು. ಮೊಮ್ಮಗಳನ್ನು ಮದುವೆಮಾಡಿಕೊಳ್ಳಲು ನಿರಾಕರಿಸಿದ ಕಾರಣ ಇಬ್ಬರಲ್ಲಿ ಮನಸ್ತಾಪವುಂಟಾಗಿದೆ. ಮನುಷ್ಯ ಪ್ರಭುತ್ವವನ್ನು ಪಡೆಯುತ್ತಲೇ ಸಾಮಾಜಿಕ ಮೌಲ್ಯಗಳಲ್ಲಿ ದೋಷಗಳು ಒಂದೊಂದಾಗಿ ಕಂಡುಬರುತ್ತವೆ. ತನ್ನ ಬದುಕಿಗೆ ಹೊಂದಿಕೊಳ್ಳುವ ಮೌಲ್ಯಗಳು ಮತ್ತು ಮೌಲಿಕವಾದ ಅಂಶಗಳು ಇರುವುದಿಲ್ಲ. ಈ ಮೌಲ್ಯಗಳೇ ತನ್ನ ಬದುಕಿನ ನಿರ್ದಾರಗಳನ್ನು ನಿರ್ಧರಿಸುವುದು ಅವನಿಂದ ಸಹಿಸಲು ಸಾಧ್ಯವಿಲ್ಲ. ನನ್ನ ಬದುಕಿನ ತೀರ್ಮಾನಗಳನ್ನು ತೆಗೆದುಕೊಳ್ಳಲು ನಾನು ಸ್ವಾತಂತ್ರ್ಯ ಅದನ್ನು ಕದಿಯಲು ಅಥವಾ ಕಿತ್ತುಕೊಳ್ಳಲು ನಾನು ಯಾರಿಗೂ ಬಿಡುವುದಿಲ್ಲ ಎಂಬ ಧೋರಣೆಯ ಮಾತುಗಳನ್ನು ಹೇಳುತ್ತಲೇ ವಾಸ್ತವಿಕ ಪ್ರಪಂಚದ ಸಮಸ್ಯೆಗಳಿಗೆ ಸ್ಪಂದಿಸುವಾಗ ಒತ್ತಡಗಳಿಗೆ ಒಳಗಾಗಿ ಚಡಪಡಿಕೆಗೆ ಒಳಗಾಗುತ್ತಾನೆ. ಸಮಾಜವನ್ನು ಪೂರ್ವಗ್ರಹ ಧೋರಣೆಗಳಿಂದಲೇ ನೋಡಿ ತನ್ನ ಇಬ್ಬಂದಿತನಕ್ಕೆ ಮತ್ತಷ್ಟು ಪ್ರಖರತೆಯನ್ನು ನೀಡುತ್ತಾನೆ. "ವ್ಯಕ್ತಿ ಮತ್ತು ಸಮಷ್ಟಿ ಸಂಬಂಧದಲ್ಲಿ ವಿಷಮವಾದದ್ದು ವ್ಯಕ್ತಿಯಲ್ಲಿ ಅಂತಸ್ಥವಾದ ಶಕ್ತಿಗೂ ಹೊರಗಿನ ವಸ್ತುನಿಷ್ಠ ಸಮಷ್ಟಿಗೂ ಘರ್ಷಣೆ ಉಂಟಾಗಿ ಸಮಷ್ಟಿಪ್ರಜ್ಞೆಯ ಅಂತಃಸತ್ವದ ವಿಕಾಸಕ್ಕೆ ಮಾರಕವಾದದ್ದು ಇಲ್ಲವೇ ಅದು ತಟಸ್ಥವಾಗಿದ್ದು ಸಾಂಪ್ರದಾಯಿಕ ನಾಯಕ ಪಾತ್ರದ ಶಕ್ತಿ ಸಾಮರ್ಥ್ಯ ಹಾಗೂ ಸಾಧಿಸಬೇಕಾದ ಮೌಲ್ಯಗಳು ಒಂದಾಗಿ ಅವನು ಒಂದು ಉದ್ದೇಶಕ್ಕಾಗಿ ಕ್ರಿಯಾಶೀಲನಾಗುವುದು ಸಾಧ್ಯ. ಆದರೆ ನವ್ಯಕೃತಿಯಲ್ಲಿ ಮೌಲ್ಯ ಮತ್ತು ಶಕ್ತಿ ಮೂಲದಲ್ಲಿಯೇ ಕೀಲುತಪ್ಪಿ ಭಿನ್ನವಾಗಿರುವುದರಿಂದ ಅಲ್ಲಿನ ನಾಯಕನ ಅಥವಾ ನವ್ಯನಾಯಕನ ಗ್ರಹಿಕೆಗೂ ಕ್ರಿಯೆಗೂ ಮಧ್ಯೆ ಅನಿಶ್ಚಯದ ನೆರಳು ಬಿದ್ದು ಅವನು ಕ್ರಿಯಾಶೀಲನಾಗಲು ಅನಿವಾರ್ಯವಾಗಿ ಸಾಧ್ಯವಾಗುವುದಿಲ್ಲ".[೮೧] ಸಾಮಾಜಿಕ, ವೈಯಕ್ತಿಕ ಮೌಲ್ಯಗಳಲ್ಲಿ ಸಾಮರಸ್ಯವಿಲ್ಲದಿದ್ದರೆ ಪ್ರತಿಯೊಬ್ಬ ಮನುಷ್ಯನು ಬದುಕನ್ನು ಅನಿಶ್ಚಯದ ಮನಃಸ್ಥಿತಿಯಲ್ಲಿ ಬದುಕು ನಡೆಸುತ್ತಿದ್ದಾನೆ. ಅವನಲ್ಲಿ ಜೀವಂತಿಕೆಯನ್ನು ಗುರುತಿಸಲು ಸಾಧ್ಯವಿಲ್ಲ. ಈ ಮುಖಾಮುಖಿಯಲ್ಲಿ ಮನುಷ್ಯರ ಮನಸ್ಸಿನ ಮೇಲೆ ಅಳಿಸಲಾಗದ ದಾಖಲೆಯನ್ನು ಸೃಷ್ಟಿಸಿರುವುದು ಅವನ ಭವಿಷ್ಯದ ಬದುಕಿಗೆ ಎಚ್ಚರಿಕೆ ನೀಡಲು ಸಾಧ್ಯ.

ಎರಡೂ ಮೌಲ್ಯಗಳ ಮುಖಾಮುಖಿಯ ಸಂದರ್ಭದಲ್ಲಿ ಕಥನಸಾಹಿತ್ಯ ಕೃತಿಗಳಲ್ಲಿ ಬರುವ ಪಾತ್ರಗಳು ಸಿದ್ಧಪಾತ್ರಗಳಾಗಿ ರಚನೆಗೊಂಡಿವೆ ಎಂಬ ಸಂಶಯ ಇಲ್ಲಿ ಮೌಲ್ಯಗಳ ಹೊಂದಾಣಿಕೆಯನ್ನು ಸಡಿಲಿಕೆಯನ್ನು ಕಾಣುತ್ತೇವೆ. ಆಲನಹಳ್ಳಿ ಹಾಗೂ ತೇಜಸ್ವಿಯವರ ಕೆಲವು

---

೮೧. ಎಚ್.ಎಂ.ಚನ್ನಯ್ಯ, 'ಕನ್ನಡನವ್ಯ ಚಳವಳಿ', ಪುಟ. ೩೨, ೧೯೯೦.

ಕಥಾನಾಯಕರುಗಳಿಗೆ ಸಾಮಾಜಿಕ ಮೌಲ್ಯವೆಂಬುದು ಅಪಭ್ರಂಶವಾಗಿದೆ. ಸ್ವಚ್ಛಂದವಾದ ನಗರ ಬದುಕಿನ ಕಾಸ್ಮೆಟಿಕ್ ಜೀವನಕ್ಕೆ ಒಗ್ಗಿಹೋಗಿರುವ ಗಂಡು-ಹೆಣ್ಣುಗಳು ಸಾಮಾಜಿಕ ಮೌಲ್ಯಗಳನ್ನು ಬದಿಗೊತ್ತಿ ಸಂಬಂಧವನ್ನು ಬೆಳೆಸುವಿಕೆ, ಕಾಮತೃಪ್ತಿಯೊಂದೇ ಇವರ ಮನೋಭಿಲಾಷೆಯಾಗಿರುವ ಗಂಡು-ಹೆಣ್ಣುಗಳಿಗೆ ಸ್ವಂತ ವ್ಯಕ್ತಿತ್ವನ್ನು ಹುಡುಕುವುದು ಇಲ್ಲಿ ಕಷ್ಟ. ಇಲ್ಲಿ ಕಥನಸಾಹಿತ್ಯವು ವ್ಯಕ್ತಿಕೇಂದ್ರಿತ ದೃಷ್ಟಿಯನ್ನು ಬಿಟ್ಟುಕೊಡದೆ ಆ ವ್ಯಕ್ತಿಯನ್ನೇ ವಿಸ್ತರಿಸುವ ಯತ್ನಗಳನ್ನು ಕೆಲವು ಕಥೆಗಳು ಮತ್ತು ಕಾದಂಬರಿಗಳು ಯೋಚಿಸಿದಂತಿವೆ. ವ್ಯಕ್ತಿ ಮತ್ತು ಸಮೂಹದ ಸಂಬಂಧ ವಿವಿಧ ಮುಖಗಳನ್ನು ಗ್ರಹಿಸಬಲ್ಲ ಕಥೆಯ ಕೇಂದ್ರಪ್ರಜ್ಞೆ ಕೇವಲ ಸ್ವಂತವನ್ನು ಮಾತ್ರ ಕಾಣುವ ವ್ಯಕ್ತಿಗೆ ಮಿತಗೊಳ್ಳಲು ಸಾಧ್ಯವಿಲ್ಲ. ವೈಯಕ್ತಿಕ ಬದುಕನ್ನು ಅದರ ಬೆಳವಣಿಗೆಯನ್ನು ಮೂಲಸಾಮಾಗ್ರಿಯನ್ನಾಗಿ ಮಾಡಿಕೊಂಡು ಈ ಸಾಮಗ್ರಿಯ ನೆರವಿನಿಂದ ಸಾಮಾಜಿಕ ವ್ಯಕ್ತಿಯ ಚಹರೆಗಳನ್ನು ಕಾಣುವ ನೆಲೆಯನ್ನು ಆಶ್ರಯಿಸಲಾಗುತ್ತಿದೆ. ಕನ್ನಡ ಸಾಹಿತ್ಯಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡಿದ ತೇಜಸ್ವಿಯವರು ಕಥೆ, ಕಾದಂಬರಿ, ಕಾವ್ಯ, ವೈಚಾರಿಕ ಬರಹ, ವೈಜ್ಞಾನಿಕ ಬರಹ, ಅನುವಾದ ಮುಂತಾದ ಪ್ರಕಾರಗಳಲ್ಲಿ ವ್ಯಕ್ತವಾಗಿರುವ, ಪ್ರಕೃತಿಸೌಂದರ್ಯ, ಪರಿಸರವಿನಾಶ, ಜಗತ್ತಿನ ನಿಗೂಢತೆ, ಮನುಷ್ಯನ ವೈಫಲ್ಯ, ನಿರಂತರ ಹೋರಾಟ ಮುಂತಾದವುಗಳು ಆವರಿಸಿಕೊಂಡಿರುವ ತೇಜಸ್ವಿಯವರ ಬರಹಗಳು ಅದೇ ರೀತಿ ಆಲನಹಳ್ಳಿಯವರ ಬರಹಗಳು ಕೂಡ ಇದೇ ಬಗೆಯ ಧೋರಣೆಗಳನ್ನು ವ್ಯಕ್ತಪಡಿಸುವ ರೀತಿಯನ್ನು ಕಾಣಬಹುದು. ಇವರ ಕಥನಸಾಹಿತ್ಯ ಹಂತಹಂತವಾಗಿ ವ್ಯಕ್ತಿಯ ಬೆಳವಣಿಗೆಯನ್ನು ಕೊಡುವ ಕಥನಸಾಹಿತ್ಯ, ಸಾಮಾಜಿಕ ವ್ಯಕ್ತಿಯ ಚಹರೆಗಳನ್ನು ಕೊಡಲು ಇವರುಗಳು ವೈಯಕ್ತಿಕ ಮೌಲ್ಯಗಳನ್ನು ರೂಪಿಸಿಕೊಂಡು ಅವರ ಅನುಭವಿಕೆಯ ಅಭಿವ್ಯಕ್ತಿಯನ್ನು ಅನಾವರಣಗೊಳಿಸುತ್ತಾರೆ. ಆ ಮೂಲಕ ಸಮಾಜದಲ್ಲಿರುವ ಹುಳುಕುಗಳನ್ನು ಸ್ಪಷ್ಟವಾಗಿ ಗೋಚರಿಸುವಂತೆ ಕೃತಿಯನ್ನು ರಚಿಸಿರುತ್ತಾರೆ.

ತೇಜಸ್ವಿಯವರ 'ಹುಲಿಯೂರಿನ ಸರಹದ್ದು' ಕೃತಿಯಲ್ಲಿ ಜೀವನದ ಸರಪಳಿಯಲ್ಲಿ ಒಬ್ಬರು ಇನ್ನೊಬ್ಬರ ಅಧೀನದಲ್ಲಿರಬೇಕೆಂಬ ನಿಯಮ ರೂಪುಗೊಂಡಿರುವುದನ್ನು ಸಾಮಾಜಿಕವಾಗಿ ಚಿತ್ರಿಸುವ ಹುಲಿಯೂರಿನ ಸರಹದ್ದು, ಇದನ್ನು ದಾಟಿಹೋಗಬೇಕೆನ್ನುವ ಪ್ರಯತ್ನದಲ್ಲಿರುತ್ತಾನೆ. ತಾನು ಪ್ರೀತಿಸಿದ ಅನ್ಯಜಾತಿಯ ಹುಡುಗಿ ನಳಿನಾಕ್ಷಿಯ ಜೊತೆಗೆ ದೂರ ಓಡಿಹೋಗಬೇಕೆನ್ನುವ ತನ್ನ ಬಯಕೆಗೆ ಗರಡುನ ಸ್ವಚ್ಛಂದ ಹಾರಾಟ ಖುಷಿಕೊಡುತ್ತದೆ. ಆದರೆ ಅವನಿಗೆ ತಾನು ಹುಲಿಯೂರಿನ ಸರಹದ್ದನ್ನು ದಾಟಲಾಗದೆ ಇರುವುದು ಮನವರಿಕೆಯಾಗುತ್ತದೆ. ಈ ಊರಿನಲ್ಲಿ "ನಾನು ನನ್ನ ಅಪ್ಪನಿಗಾಗಿ, ಅಪ್ಪ ಅವನಪ್ಪನಿಗಾಗಿ, ನನ್ನ ಮಗ ನನಗಾಗಿ ಅಯ್ಯೋ ಈ ಹುಲಿಯೂರಿನ ಸರಹದ್ದಿನಲ್ಲಿ ಒಂದು ಇನ್ನೊಂದಕ್ಕಾಗಿ ಬದುಕಿದೆ ಅನ್ನಿಸುತ್ತದೆ.

ಸಂಪ್ರದಾಯವನ್ನು ಒಪ್ಪಿಕೊಂಡು ಅದೇ ಜಾಡಿನಲ್ಲಿ ನೆಲಕಚ್ಚಿ ಹಾವಿನಂತೆ ನಡೆಯುವ ನನ್ನ ತಂದೆ ರಂಗೇಗೌಡ, ಆಳು ಲಿಂಗ, ಈ ಸಂಪ್ರದಾಯವನ್ನೇ ತಲೆತಲಾಂತರದವರೆಗೆ ಸಾಗಿಸುತ್ತ ಬರುವ ಸಿಬ್ಬಲಗಡ್ಡೆ ಭಟ್ಟ ಇವನಿಗಿಂತ ನಾನು ಭಿನ್ನವಾಗಿ ವಿಚಾರವಾದಿ ಕ್ರಾಂತಿಕಾರಿಯಾಗಿ ಬದುಕಬೇಕೆನ್ನುತ್ತಾನೆ".[೮೨] ಇಲ್ಲಿ ಸೋಮ ಈ ಹುಲಿಯೂರಿನ ಪರಿಧಿಯೊಳಗೆ ಒಂದು ಸಣ್ಣ ಪ್ರಳಯ ಯಾಕೆ ನಡೆಯಬಾರದು ಎಂದುಕೊಳ್ಳುತ್ತಾನೆ. ಆದರೆ ಇಂತಹ ಬದಲಾವಣೆ ತರಲು ಸೋಮುವಿಗೆ ಆಗುವುದಿಲ್ಲ. ತೇಜಸ್ವಿ ಶೂನ್ಯ ಬಲದ ಬಾಯಿಯಿಂದ ಹೊರಬರುವ ಗೆದ್ದಲುಗಳನ್ನು ತಿನ್ನುತ್ತಿರುವ ಕೋಳಿಯಚಿತ್ರಣ ನೀಡುವುದರ ಮೂಲಕ ಕೈಲಾಗದ ಸೋಮುವಿನ ನಿರ್ವಿರ್ಯತೆಯನ್ನು ಚಿತ್ರಿಸುತ್ತಾರೆ. ಕೋಳಿಯನ್ನು ತಿನ್ನಲು ಹೊಂಚುಹಾಕುವ ಗರುಡನನ್ನು ರಕ್ಷಿಸಲು ಸೋಮುಪ್ರಯತ್ನಿಸುತ್ತಾನೆ. ಗರುಡನನ್ನು ಹೊಡೆಯಲು ಮುಂದಾಗುವ ತಂದೆ ರಂಗೇಗೌಡ ಆಳು ಲಿಂಗ ಹಾಗೂ ನಾಯಿಯಿಂದ ಗರುಡನನ್ನು ರಕ್ಷಿಸಲು ಮುಂದಾಗುತ್ತಾನೆ. ಆದರೆ ಗರುಡನ ಉಗುರುಗಳು ಸೋಮುವಿನ ಅಂಗೈಗೆ ತರಚುವ ಮೂಲಕ ಅತೀವ ಯಾತನೆ ಆದಾಗ ಗರುಡನ ಕತ್ತನ್ನು ಕಚಕಚನೆ ಜಗಿದು ಅದನ್ನು ಕೊಂದುಬಿಡುತ್ತಾನೆ. ಸ್ವಚ್ಛಂದ ಬದುಕಿನ ಸಂಕೇತವಾದ ಗರುಡನನ್ನು ಸಾಯಿಸುವುದರ ಮೂಲಕ ತಾನೂ ಸರಹದ್ದಿನಿಂದ ಪಾರಾಗಲಾರದ ದುರಂತ ಕಥೆಯನ್ನು ವ್ಯಕ್ತಪಡಿಸುತ್ತಾನೆ. ಹುಲಿಯೂರಿನ ಸರಹದ್ದನ್ನು ದಾಟಲುಹೊರಟ ಸೋಮು ಅನುಭವಿಸುವ ಸೋಲನ್ನು ಗರುಡನ ಸಾವಿನ ಮೂಲಕ ತೇಜಸ್ವಿ ಸಾಂಕೇತಿಕವಾಗಿ ರೂಪಿಸುತ್ತಾರೆ. ಬದಲಾವಣೆ ಒಬ್ಬನಿಂದ ಮಾತ್ರ ಸಾಧ್ಯವಾಗಲಾರದು ಎಂಬ ಸಾಮಾಜಿಕ ಮೌಲ್ಯಕ್ಕೆ ಎಲ್ಲರೂ ಬದ್ಧವಾಗಿರಬೇಕೆಂಬ ಅಂಶವನ್ನು ಪ್ರತಿಪಾದಿಸುವ ಹುಲಿಯೂರಿನ ಸರಹದ್ದಿನ ಕಥೆ ನಾವು ಯಾಕೆ ಬದುಕುತ್ತಿದ್ದೇವೇ? ಯಾರಿಗಾಗಿ ಬದುಕುತ್ತಿದ್ದೇವೆ? ಎಂಬ ಪ್ರಶ್ನೆಗಳನ್ನು ಎತ್ತುತ್ತದೆ. ಬದಲಾವಣೆ ಬಯಸುವ ವ್ಯಕ್ತಿಗೆ ನಿರಾಸೆ ಅನಿವಾರ್ಯವೇ? ಎಂಬ ಪ್ರಶ್ನೆಯನ್ನು ಇಲ್ಲಿ ಎತ್ತಬಹುದು. ವ್ಯವಸ್ಥೆಯ ವಿರುದ್ಧ ಸಿಡಿದೇಳುವುದರ ಜೊತೆಗೆ ನಾವು ಅದರಿಂದ ಪಡೆಯಬಹುದಾದ ಪ್ರತಿಫಲವನ್ನು ಯೋಚಿಸಬೇಕಾಗುತ್ತದೆ. ಬದಲಾವಣೆಗೆ ಬಿಟ್ಟು ಸಮುದಾಯದ ಪ್ರಯತ್ನಬೇಕಾದರೂ ಏಕವ್ಯಕ್ತಿಯ ಪ್ರಯತ್ನಗಳೂ ಕೂಡ ಮಹತ್ವದ್ದಾಗುತ್ತವೆ ಎಂಬುದನ್ನು ತೇಜಸ್ವಿಯವರು ನಿರಾಕರಿಸುವುದನ್ನು ಅವರ ವೈಯಕ್ತಿಕ ಮೌಲ್ಯವಾಗಿ ಸ್ವೀಕರಿಸಿದ್ದಾರೆ. ಈ ಕಥೆಯಲ್ಲಿ ಸೋಮು ಗಟ್ಟಿಯಾಗಿ ನಿಲ್ಲದೆ ತನ್ನ ಪುಕ್ಕಲುತನ ತೋರಿಸುವುದೇ ಅವನ ಸೋಲಿಗೆ ಕಾರಣವಾಗುತ್ತದೆ ಎಂಬುದನ್ನು ಕೂಡ ತೇಜಸ್ವಿ ಅವರ ಕಥೆಯಲ್ಲಿ ಧ್ವನಿತವಾಗಿದೆ.

೮೨. ಕೆ.ಪಿ.ಪೂರ್ಣಚಂದ್ರತೇಜಸ್ವಿ, 'ಹುಲಿಯೂರಿನ ಸರಹದ್ದು', ಪುಟ ೪೮, ೨೦೦೫.

ಆಲನಹಳ್ಳಿಯವರ ಕಥೆಗಳು ಕೂಡ ವೈಯಕ್ತಿಕ ಮೌಲ್ಯಗಳ ಗ್ರಹಿಕೆಯ ಮೂಲಕ ಮಾನವೀಯ ಸಂಬಂಧಗಳನ್ನು ಶೋಧಿಸಹೊರಡುತ್ತವೆ. ಮನುಷ್ಯ ಪ್ರಾಣಿಗಳ ವರ್ಗಕ್ಕೆ ಸೇರುವುದಿಲ್ಲ. ಅವನು ಮನುಷ್ಯನೇ ಎಂಬುದೇ ಮಾನವೀಯತೆ ಈ ಅಂಶವನ್ನು ಪ್ರತಿಯೊಬ್ಬ ಮನುಷ್ಯನಲ್ಲಿ ಅಗತ್ಯವಾಗಿ ಇರಬೇಕಾದುದು, ಸಹನೆ, ಅನುಕಂಪ ಮಿಡಿಯುವ ಹೃದಯ ಪ್ರತಿಯೊಬ್ಬ ಲೇಖಕನಲ್ಲಿಯೂ ಈ ಮನುಷ್ಯತ್ವದ ಅಂಶಗಳನ್ನು ಗುರುತಿಸಬಹುದು. ಜೀವನದಲ್ಲಿ ಮಾನವೀಯತೆ ಇಲ್ಲದಿದ್ದರೆ ಬದುಕು ದುಸ್ತರವಾಗುತ್ತದೆ. ಮಾನವೀಯತೆ ಅತಿಯಾದರೂ ಬದುಕು ಇನ್ನೊಂದು ಬಗೆಯ ದುಸ್ತರಕ್ಕೆ ಸಿಕ್ಕಿಕೊಳ್ಳುತ್ತದೆ. ಮಾನವೀಯತೆ ಇತಿಮಿತಿಯಲ್ಲಿದ್ದಾಗ ಸಮಾಜವು ಸ್ವಸ್ಥವಾಗಿರುತ್ತದೆ. ಮಾನವೀಯತೆಯ ಹೆಸರಿನಲ್ಲಿ ನಡೆಯುತ್ತಿರುವ ಕಿರುಕುಳ ದೌರ್ಜನ್ಯಗಳು ಮನುಷ್ಯ ಸ್ವಭಾವದ ಅವಲಕ್ಷಣಗಳನ್ನು ಹೇಳುತ್ತದೆ. ಆಲನಹಳ್ಳಿಯವರ ಮಾನವೀಯತೆಯ ಮೌಲ್ಯಗಳ ಚಿತ್ರಣವನ್ನು ಅದರ ಸ್ವರೂಪಗಳನ್ನು ಮನುಷ್ಯನ ಬದಲಾಗುವ ಚಹರೆಗಳನ್ನು ಸೂಕ್ಷ್ಮವಾಗಿ ತೆರೆದಿಡುವ ಕಥೆ 'ಸಂಬಂಧ' ಮಾನವತಾವಾದದ ಹಿನ್ನೆಲೆಯನ್ನು ನೋಡಿದಾಗ ಈ ಮಾನವತಾವಾದ ಮೂಲತಃ ಇಂಗ್ಲಿಷ್ ಶಿಕ್ಷಣದ ಮೂಲಕ ನಮ್ಮ ಬೌದ್ಧಿಕ ಚಿಂತನೆಯನ್ನು ಪ್ರವೇಶಿಸಿದ ಒಂದು ತತ್ವವಾಗಿತ್ತು. ಅದು ಇಂಗ್ಲೆಂಡಿನ ವರ್ಗವ್ಯವಸ್ಥೆಯಲ್ಲಾದ ಪಲ್ಲಟದಿಂದ ಹುಟ್ಟಿಕೊಂಡ ಒಂದು ತತ್ವ ಅದು ಪ್ರಬಲವರ್ಗದ ತತ್ವವಾಗಿದ್ದರೂ ಕೂಡ ಜಗತ್ತಿನ ಇನ್ನಿತರ ತತ್ವಗಳ ಹಾಗೇ ಇಡೀ ಮನುಷ್ಯ ಕುಲವನ್ನು ಒಳಗೊಳ್ಳುವ ಮಹತ್ವಾಕಾಂಕ್ಷೆ-ಯುಳ್ಳದ್ದಾಗಿತ್ತು. ವರ್ಗವ್ಯವಸ್ಥೆಯನ್ನು ತಾತ್ವಿಕವಾಗಿ ವಿರೋಧಿಸುವ ಈ ತತ್ವ ಮನುಷ್ಯನ ಸ್ವಾತಂತ್ರ್ಯವನ್ನು ಮತ್ತು ಸಮಾನತೆಯನ್ನು ಸಮರ್ಥಿಸುತ್ತದೆ. ಆದರೆ ಇದೇ ಹೊತ್ತಿಗೆ ಅದು ವರ್ಗ ವ್ಯವಸ್ಥೆಯ ವಿಪರ್ಯಾಸಗಳನ್ನು ಪೂರ್ತಿಯಾಗಿ ಅರಗಿಸಿಕೊಂಡು ಪ್ರಬುದ್ಧವಾಗಿರಲಿಲ್ಲ. ಅದರ ತಾತ್ವಿಕ ತಿರುಳು ಏನೇ ಇರಲಿ ಅದು ಒಟ್ಟಿನಲ್ಲಿ ಮನುಷ್ಯನ ಬಗ್ಗೆ ಪ್ರೀತಿಯನ್ನು ಅವನು ಸಮಾಜ ವ್ಯವಸ್ಥೆಯ ಇತಿಮಿತಿಗಳನ್ನು ಮೀರುವ ಸಾಧ್ಯತೆಯನ್ನು ಗುರುತಿಸುವ ಹಂಬಲವನ್ನು ರೂಪಿಸಿತು. ಸಮಾನತೆಯ ಆಶಯದ ಒಂದು ಅಭಿವ್ಯಕ್ತಿಯೆಂದರೆ ಮಾನವತಾವಾದ ಮನುಷ್ಯರೆಲ್ಲರಲ್ಲಿರುವ ಮನುಷ್ಯನ ಸ್ವಭಾವದ ಅಂಶಗಳನ್ನು ಗುರುತಿಸುವಂತೆ ಆದದ್ದು. ಅಂದರೆ ಸಮಾಜದ ವ್ಯವಸ್ಥೆಯ ಎಲ್ಲ ವಿಪರ್ಯಾಸಗಳ ಮಧ್ಯೆಯೂ ಚಿಗುರುವ ಮನುಷ್ಯ ಸ್ವಭಾವದ ಪರಿಕರಗಳನ್ನು ಗುರುತಿಸಬಹುದು. ಅಂದಿನ ಸಾಂಸ್ಕೃತಿಕ ಸಂದರ್ಭದಲ್ಲಿ ಇಂಥ ಒಂದು ತತ್ವ ಜಡಗಟ್ಟಿದ ಚಿಂತನೆಗೆ ಚೈತನ್ಯಕೊಟ್ಟಿತು.

ಇಬ್ಬರೂ ಲೇಖಕರ ವ್ಯಕ್ತಿನಿರಪೇಕ್ಷತೆಯ ಚಿಂತನೆಯ ಪರಂಪರೆ ಹಿನ್ನೆಲೆಯನ್ನು ನೆನಪಿನಲ್ಲಿಟ್ಟರೆ ಇದರ ಮಹತ್ವ ಹೊಳೆಯುತ್ತದೆ. ಜಡವ್ಯವಸ್ಥೆಯಿಂದಾಗಿ ಮನುಷ್ಯ ಬದುಕನ್ನು ನೋಡುವ ದೃಷ್ಟಿಯನ್ನು ಕಳೆದುಕೊಂಡಿದ್ದು ಸಂಸ್ಕೃತಿಗೆ ಹೊಸ ಶಕ್ತಿದೊರೆಯಿತು. ಮನುಷ್ಯರೆಲ್ಲರ

ಬದುಕಿನಲ್ಲಿ ಸಾಮಾನ್ಯವಾಗಿರುವ ಮನುಷ್ಯ ಸ್ವಭಾವವನ್ನು ಗುರುತಿಸಿದ್ದರೂ ವರ್ಗವ್ಯವಸ್ಥೆಯಿಂದಾಗಿ ಈ ಸ್ವಭಾವ ಪರಿಸರದ ಪ್ರಭಾವದಿಂದ ಪಡೆಯುವ ಮೂರ್ತಿ ವಿಶಿಷ್ಟತೆಯನ್ನು ಸ್ಪಷ್ಟವಾಗಿ ಗುರುತಿಸಿರಲಿಲ್ಲ. ಆದ್ದರಿಂದಲೇ ಅದು ಸುಲಭವಾಗಿ ಆದರ್ಶವಾದ ಮತ್ತು ಒಂದುಬಗೆಯ ಅಮೂರ್ತ ಭಾವಾವೇಶದ ಮರುಕವಾಗಿ ಪರಿಣಮಿಸುವುದು ಸಾಧ್ಯವಾಯಿತು. ನಮ್ಮ ಸಮಾಜ ವ್ಯವಸ್ಥೆ ತೀವ್ರವಾದ ಬದಲಾವಣೆಗಳನ್ನು ಹೊರತೋರಿದ್ದರಿಂದ ವರ್ಗ, ಜಾತಿಗಳಿಂದುಂಟಾದ ವಿಶಿಷ್ಟತೆಗಳ ಬದಲು ಸಾಮಾನ್ಯವಾಗಿರುವ ಮಾನವೀಯತೆಯ ಮೇರೆಗೆ ಮನಕೊಡುವುದು ಬರಹಗಾರರಿಗೆ ಸಹಜವಾಯಿತು. ಒಂದು ಕಡೆಗೆ ವ್ಯಕ್ತಿ ನಿರಪೇಕ್ಷ ಸಂಪ್ರದಾಯವನ್ನು ಮುರಿದು ಮನುಷ್ಯನ ಇಹದ ಬದುಕನ್ನು ದಾಖಲೆಮಾಡುವುದು ಸಾಧ್ಯವಾಯಿತು.

ಆಲನಹಳ್ಳಿಯವರ 'ಸಂಬಂಧ' ಕಥೆ ಸಾಮಾಜಿಕ ಮೌನಗಳ ಅಮಾನವೀಯತೆಯನ್ನು ಅನಾವರಣಗೊಳಿಸುತ್ತದೆ. ಈ ಮೌನದ ಹಿಂದಿರುವ ಕ್ರೌರ್ಯವನ್ನು ಅನಾವರಣಗೊಳಿಸುತ್ತದೆ. ಈ ಎಲ್ಲ ಅಭಿವ್ಯಕ್ತಿಯನ್ನು ಅನಾವರಣಗೊಳಿಸಿದಾಗ ಬೇಸರವಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಬಹಳ ಪ್ರಾಮುಖ್ಯತೆಪಡೆಯುತ್ತದೆ. ಈ ಕಥೆಯಲ್ಲಿ ಯಾವುದೇ ಆದರ್ಶ ಮಾನವೀಯತೆಯ ಒಣಜಂಭಗಳನ್ನು ಕಾಣದೇ ಒಂದೇ ಊರಿನ ಸ್ನೇಹಿತೆಯ ಬದುಕನ್ನು ನೋಡುವ ಒಬ್ಬ ಮನುಷ್ಯನ ಚಿತ್ರಣವಿದೆ. ಲಲಿತ ಹಳ್ಳಿಯ ಹುಡುಗಿ ಗುರುತು ಪರಿಚಯವಿಲ್ಲದ ನಗರ ಜೀವನಕ್ಕೆ ಇಲ್ಲಿನ ಜನ ಜೀವನಕ್ಕೆ ಸ್ಪಂದಿಸಲಾಗದೇ ಇಲ್ಲಿನ ರಾಕ್ಷಸ ಮನಸ್ಥಿತಿಗೆ ಬಲಿಯಾಗುವಂತಹ ಕಥೆ ಮಾನವೀಯತೆ ಅನುಕಂಪಕ್ಕೆ ರಕ್ತಸಂಬಂಧವೇ ಆಗಬೇಕೆಂಬ ನಿರ್ಬಂಧವಿಲ್ಲದಿರುವುದು ಕಾಣಬಹುದು. ಲಲಿತ ಬ್ರಾಹ್ಮಣವರ್ಗಕ್ಕೆ ಸೇರಿದವಳು 'ಸಂಬಂಧ' ಕಥೆಯ ನಿರೂಪಕನಾಗಿರುವ ಕಥಾನಾಯಕ ಶೂದ್ರವರ್ಗಕ್ಕೆ ಸೇರಿದವರು. ಹಳ್ಳಿಯ ವಾತಾವರಣದಲ್ಲಿ ಸಮಾನ ವಯಸ್ಕ ಹಾಗೂ ಮನಸ್ಕರಾಗಿ ಬೆಳೆದಿರುವವರು ಮನಸ್ಸಿನಲ್ಲಿ ವರ್ಗ ಅಸಮಾನತೆಯ ಪ್ರಜ್ಞೆಯೂ ಇವರಲ್ಲಿ ಕಾಣುವುದಿಲ್ಲ. ಆದರೆ ಇವರಿಬ್ಬರೂ ಹಿರಿಯರಲ್ಲಿ ವರ್ಗ ಅಸಮಾನತೆಯ ಪ್ರಜ್ಞೆ ಜೀವಂತವಾಗಿರುವುದನ್ನು ಕಾಣುತ್ತೇವೆ. "ಇವತ್ತು ಹೇಗಾದರೂ ಇವರ ಮನೆಯ ದೇವರನ್ನು ನೋಡಿ ಬಿಡುವಾ ಎಂದು ಹೊಸ್ತಿಲೊಳಗೆ ಕಾಲಿಡುತ್ತಿದ್ದಂತೆಯೇ ಎಲ್ಲಿತ್ತೋ ಅಜ್ಜಿ ಅಯ್ಯೋ ಶೂದ್ರಮುಂಡೇದೆ ಒಳಗೆ ನುಗ್ಗುಬ್ಟ್ಯಲ್ಲೋ......... ಎಂದು ಕಿರುಚುತ್ತಾ ನನ್ನ ಹಿಂದೇ ತೋಳಲ್ಲಿ ಸೌದೆಯಿರುಕಿ ಬಂದು ನಿಂತು ಕೋಲಿನಿಂದ ನನಗೆ ಸರಿಯಾಗಿ ಬಿಗಿಯಿತು. ನಾನು ಅಳುತ್ತಾ ಹಜಾರ ದಾಟಿ ನಿಂತೆ. ಮನೆಯವರೆಲ್ಲ ಕೂಡಿದರು. ಎಲ್ಲರ ಮುಖವನ್ನು ನೋಡಿದೆ. ಅಪರಾಧಿ ಎನ್ನುವ ಹಾಗೆ ನೋಡುತ್ತಿದ್ದರೂ ನಾಚಿಕೆ, ಭಯ, ಥರಥರ ನಡುಗಿದೆ. ಲಲಿತ ಓಡಿಬಂದಳು. ನನ್ನ ಸ್ಥಿತಿಗೆ ಸಹಾನುಭೂತಿಯನ್ನು ತೋರುವ ಹಾಗೆ ನೋಡಿದಳು. ಅವಳ

ತಾಯಿ ಹೋಗ್ಲಿಬಿಡಿ ಪಾಪ, ಗೊತ್ತಿಲ್ಲದ ಹುಡುಗ ಅನ್ನುತ್ತಿದ್ದ ಹಾಗೆ ಮುದುಕಿ ನಿಮಗೊಂದು ಕಟ್ಟುನಿಟ್ಟಿಲ್ಲ. ಶೂದ್ರಮುಂಡೇವ, ನಾಳೆ ನಿನ್ನಜ್ಜಿಗೆ ಹೇಳಿ ಸರಿಯಾಗಿ ಮಾಡಿಸ್ತೀನಿ ಎಂದಾಗ ನನಗೆ ಮಂಡಿಚಿಪ್ಪು ಕಳಚಿ ಬಿದ್ದಂತಾಯಿತು. ನನ್ನ ಹಿಂದೆಯೇ ಬಂದು ನಿಂತಿದ್ದ ಲಲಿತ ತನ್ನ ಪಾಡಿಗೆ ತಾನೂ ಅಳುಮುಖ ಮಾಡಿಕೊಂಡು ನಿಂತಿದ್ದಳು. ಅವಳ ಕಣ್ಣಲ್ಲೂ ನೀರುತುಂಬಿದ್ದವೂ".[೮೩] ಶಾಲೆಯಲ್ಲಿ ಸಹಪಾಠಿಗಳಾಗಿದ್ದ ಲಲಿತ ಮತ್ತು ನಿರೂಪಕರನ್ನು ವಿದ್ಯಾಭ್ಯಾಸವು ಅವರಿಬ್ಬರಲ್ಲಿ ಆತ್ಮಿಯತೆಯನ್ನು ಬೆಳೆಸಿದೆ. ಇವರಿಬ್ಬರ ಸ್ನೇಹಕ್ಕೆ ಜಾತಿ ಅಡ್ಡಬರುದಿಲ್ಲ. ಸ್ನೇಹದ ಮುಂದಿನ ಘಟ್ಟವಾದ ಪ್ರಣಯ ಮಾತ್ರ ಸಮಾಜವು ಇವರಿಬ್ಬರಿಗೆ ನಿರಾಕರಿಸಿತು. ಇಬ್ಬರು ಪ್ರೌಢಾವಸ್ಥೆಗೆ ಬಂದಾಗ ನಿರೂಪಕರು ಹೆಚ್ಚಿನ ವ್ಯಾಸಂಗಕ್ಕೆ ನಗರಕ್ಕೆ ಬಂದರು. ಲಲಿತಳ ಓದು ಅರ್ಧಕ್ಕೆ ನಿಂತು ಮದುವೆಯ ಬಂಧನಕ್ಕೆ ಒಳಗಾದಳು. ನಗರಸಂವೇದನೆಗೆ ಪ್ರವೇಶಿಸಿದಳು.

ಎಂಟುವರ್ಷಗಳ ನಂತರ ಲಲಿತ, ನಿರೂಪಕನು ಆಕಸ್ಮಿಕವಾಗಿ ಭೇಟಿಯಾದಾಗ ನಿರೂಪಕನಿಗೆ ಗುರುತಿಸಲು ಸಾಧ್ಯವಾಗುವುದಿಲ್ಲ. ಪರಸ್ಪರ ಭೇಟಿಯೂ ಬಾಲ್ಯದ ನೆನಪುಗಳನ್ನು ತರುತ್ತದೆ. ಅವರೊಂದಿಗೆ ನಿರೂಪಕರು ಸೂಕ್ಷ್ಮವಾಗಿ ಲಲಿತಳನ್ನು ಗಮನಿಸುತ್ತಾರೆ. ಅವಳ ಬದುಕಿನ ಅನೇಕ ಪರಿವರ್ತನೆಗಳು ಅವಳ ಕಂಡ ತಕ್ಷಣವೇ ನಿರೂಪಕರಿಗೆ ಮನವರಿಕೆಯಾಗುತ್ತದೆ. ಈ ಭೇಟಿಯಿಂದ ಇಬ್ಬರ ಬದುಕು ಅನಾವರಣಗೊಂಡವು. ಲಲಿತ ನಾಲ್ಕುಮಕ್ಕಳ ತಾಯಿಯಾಗಿದ್ದಾಳೆ. ತನ್ನ ಗಂಡನ ಕಾಮ ಪಿಪಾಸೆ ದೌರ್ಜನ್ಯಕ್ಕೆ ಶೋಷಣೆಗೆ ಒಳಗಾದವಳು. ಅವಳ ತಂದೆಯ ಮೇಲಿನ ಕೋಪವನ್ನು ಲಲಿತಳ ಮೇಲೆ ತೋರಿಸಿ ಅವಳ ಬದುಕನ್ನು ನರಕಮಾಡಿದ್ದಾನೆ. ಇಲ್ಲಿ ಲಲಿತಳ ಗಂಡನನ್ನು ಅಮಾನವೀಯ ಪ್ರತಿರೂಪವಾಗಿಯೇ ಚಿತ್ರಿಸಿದ್ದಾರೆ. ಅವಳ ಕುಟುಂಬದ ದುಸ್ಥಿತಿಯನ್ನು ನೋಡಿ ಸಹಾಯಮಾಡುವ ನಿರೂಪಕನನ್ನು ಅವಳ ಗಂಡ ಸಂಶಯದಿಂದ ನೋಡುತ್ತಾನೆ. ತನ್ನ ಮಗಳ ಸಾವಿಗೆ ತಾನೇ ಕಾರಣನಾಗುತ್ತಾನೆ. ಇದರಿಂದ ಲಲಿತಳ ಗಂಡನ ಅಮಾನವೀಯತೆಯ ಸ್ವರೂಪವನ್ನು ತಿಳಿಯಬಹುದು. ಈ ಜೀವನದಿಂದಲೇ ಬೇಸರಗೊಂಡಿರುವ ಲಲಿತ, ತನ್ನ ಮಕ್ಕಳಿಂದ ತನ್ನ ಉಸಿರನ್ನು ಜೀವಂತವಾಗಿರಿಸಿಕೊಂಡಿದ್ದಾಳೆ. ಲಲಿತ ಅವಳ ಗಂಡನಿಗೆ ಇಲ್ಲಿ ಒಂದು ವಸ್ತುವಾಗಿ ಪರಿಣಮಿಸಿದ್ದಾಳೆ.

ಮನುಷ್ಯನ ಮೂಲ ಪ್ರವೃತ್ತಿಗಳಾದ ಕಾಮ, ಸೇಡುಗಳಂತಹ ಸ್ವಭಾವಗಳು ಅವನನ್ನು ರಾಕ್ಷಸ ಮನೋಧರ್ಮವಾಗಿ ಮಾರ್ಪಡಿಸುವುದು. ಅವನಲ್ಲಿ ಸಹಾನುಭೂತಿ, ದಯೆ, ಕರುಣೆ

---

೮೩. ಶ್ರೀಕೃಷ್ಣ ಆಲನಹಳ್ಳಿ, 'ಸಮಗ್ರಕಥೆಗಳು', ಪುಟ ೧೦೪, ೨೦೦೦.

ಇವುಗಳು ಅಪಹಾಸ್ಯವಾಗಿ ಕಾಣುತ್ತವೆ. ತನ್ನ ದೌರ್ಬಲ್ಯಗಳನ್ನು ಮುಚ್ಚಿಕೊಳ್ಳಲು ಬೇರೆಯವರನ್ನು ಶೋಷನೆಗೆ ಒಳಪಡಿಸುತ್ತಾನೆ. ಇಲ್ಲಿ ಮನುಷ್ಯನ ಇನ್ನೊಂದು ಮುಖವನ್ನು ಪರಿಚಯಿಸಿಕೊಳ್ಳಬಹುದು. ಮಾನವೀಯತೆಯ ಮೂರ್ತಿಯಾಗಿ ನಿರೂಪಕರು, ಅಮಾನವೀಯತೆಯ ಮೂರ್ತಿಯಾಗಿ ಲಲಿತಳಗಂಡ ನಿಲ್ಲುತ್ತಾರೆ. ಬದುಕಿನ ಈ ಎರಡು ತುದಿಗಳಾದ ದುರಂತವನ್ನು ಮಾತ್ರ ಕಾಣಬಹುದು. ಪ್ರತಿಯೊಬ್ಬ ಮನುಷ್ಯನಲ್ಲೂ ಮನುಷ್ಯತ್ವದ ಎಲ್ಲಾ ಸಾಧ್ಯತೆಗಳು ಇರುವುದನ್ನು ಮಾನವತಾವಾದ ಒಪ್ಪಿಕೊಳ್ಳುತ್ತದೆ. ಮನುಷ್ಯನ ಸ್ವಭಾವವನ್ನು ಮೂಲಪ್ರವೃತ್ತಿಗಳ ಆಕರ್ಷಣೆಗಳಿಂದ ತನ್ನ ಕಡೆಗೆಯೇ ಸೆಳೆಯುತ್ತಿರುತ್ತದೆ. ಈ ಪ್ರವೃತ್ತಿಗಳು ಮನುಷ್ಯನ ಉನ್ನತಿಗೂ ಕಾರಣವಾಗುತ್ತವೆ. ಈ ಮೂಲಪ್ರವೃತ್ತಿಗಳು ಪರಿಸರ, ಸಂಸ್ಕಾರದಿಂದ ತಮ್ಮ ಸಾಧ್ಯತೆಗಳನ್ನು ರೂಪಿಸಿಕೊಳ್ಳುತ್ತವೆ. ಮಾನವೀಯತೆ ಎಂಬುದು ಮನುಷ್ಯ ಮೂಲಪ್ರವೃತ್ತಿಗಳಿಗೆ ವ್ಯಂಗ್ಯವಾಗಿ ಕಾಣುತ್ತದೆ. ಈ ಪ್ರವೃತ್ತಿಗಳ ತಮ್ಮ ಸಾಧ್ಯತೆಗಳನ್ನು ಕಂಡುಕೊಳ್ಳಲು ಸಂದರ್ಭಗಳನ್ನು ಶೋಧಸುತ್ತಲೇ ಇರುತ್ತದೆ. ಇಲ್ಲಿ ಸಾಮಾಜಿಕ ಮೌಲ್ಯಗಳು ಢಾಳಾಗಿ ವೈಯಕ್ತಿಕ ಮೌಲ್ಯಗಳು ಅನಾವರಣವಾಗಲು ಹೋಗಿ ಸೋಲುತ್ತವೆ ಎಂಬುದನ್ನು ತಿಳಿಯಬಾರದು. "ಆಕ್ರೋಶವಿಲ್ಲದೆ ಮಿತಿಗಳನ್ನು ಅರಿತುಕೊಳ್ಳುವ ಲಿಬರಲ್ ಮನೋಧರ್ಮ ಒಂದು ಜೀವನದ ದುರಂತವನ್ನು ನಿಷ್ಠುರವಾಗಿ ಸೆಂಟಿಮೆಂಟಲ್ ಆಗದಂತೆ ಹೇಗೆ ವ್ಯಕ್ತಪಡಿಸಬಹುದೆಂಬುದಕ್ಕೆ ಈ ಕಥೆ ಒಳ್ಳೆಯ ಉದಾಹರಣೆ. ಲಲಿತಳ ದುರಂತ ಆದರೆ ಇದರಿಂದ ಉದ್ವಿಗ್ನನಾಗಿ ಕಥೆಹೇಳುವವನ ನಿಸ್ಸಾಹಯಕತೆ ಒಂದು ವಿಷಾದ ಭಾವನೆಯನ್ನು ನಮ್ಮಲ್ಲಿ ಹುಟ್ಟಿಸುತ್ತದೆ. ಫ್ರೆಂಚ್ ಕಾದಂಬರಿಗಳಿಂದ ಭಾವನೆ ಕಲ್ಲಾಗುತ್ತದೆಂದು ಬರ್ನ್ಸ್ ಹೇಳುತ್ತಾನೆ. ಆದರೆ ಕ್ರೂರವಾದ ನಿರ್ದಯ ಸತ್ಯಗಳ ಪ್ರಪಂಚವನ್ನು ಸೃಷ್ಟಿಸಿಯೂ ಇಲ್ಲಿ ಮೃದುವಾದ ಅಂತಃಕರಣವನ್ನು ಅರಳಿಸಬಲ್ಲ ಇಂತಹ ಕಥೆಗಳಲ್ಲಿರುವ ಕಲೆ ನಿತ್ಯ ಜೀವನದ ಸತ್ಯಗಳನ್ನು ಒಳಗೊಳ್ಳಬಲ್ಲ ವ್ಯಕ್ತಿತ್ವ ಊನಗಳನ್ನು ಸಹಿಸುವ ಔದಾರ್ಯದ್ದು ಈ ವೈಯಕ್ತಿಕ ಮೌಲ್ಯ"[೭೪] ಎಂದು ಕೃತಿಯ ಮುನ್ನುಡಿ ಬರೆದಿರುವ ಯು.ಆರ್.ಅನಂತಮೂರ್ತಿಯವರ ಮಾತುಗಳನ್ನು ಒಪ್ಪಬಹುದು. ಮಾನವೀಯ ಅನುಕಂಪ ಮತ್ತು ಅದರಿಂದ ಹುಟ್ಟಿಕೊಳ್ಳುವ ಸಮಸ್ಯೆಗಳು ಈ ಕಥೆಯ ಪ್ರಧಾನ ವಸ್ತು ಈ ಕಥೆಯಿಂದ ಹೊರಡುವ ಸಾಮಾಜಿಕ ಮೌಲ್ಯ ಜೀವನದ ಬಗೆಗೆ ಉಕ್ಕುವ ಪ್ರೀತಿ, ಅದರ ಅಚ್ಚುಕಟ್ಟಾದ ಶಿಲ್ಪ ಓದುಗನ ಅಂತಃಕರಣವನ್ನು ತಟ್ಟುವ ಅದರ ವಸ್ತು ಕಥೆಯ ಉಲ್ಲೇಖದಲ್ಲಿ ಯಶಸ್ವಿಯಾಗುವ ಅದರ ಸಿದ್ಧಿ, ಕಥಾನಾಯಕನ ಬಾಲ್ಯದ ದಟ್ಟ ಅನುಭವ, ನೆನಪು ಇವೆಲ್ಲವೂ ಕುತೂಹಲಕಾರಿಯಾದ ಅಧ್ಯಯನಕ್ಕೆ ಪ್ರಿಯವಾಗುತ್ತವೆ. ಇದರ ಜೊತೆಗೆ ಕಥಾನಾಯಕನು ಭಾವಪರವಶನಾಗದೆ ಎಚ್ಚರದಿಂದ,

---

೭೪. ಶ್ರೀಕೃಷ್ಣ ಆಲನಹಳ್ಳಿ, 'ಸಮಗ್ರ ಕಥೆಗಳು', ಮುನ್ನುಡಿ, ೨೦೦೦.

ಮೃದುವಾದ ತನ್ನ ಅಂತಃಕರಣದ ಮಿಡಿತದಿಂದ ವಿಷಾದದ ಧ್ವನಿಯಿಂದ ತನ್ನ ವ್ಯಾಕುಲವನ್ನು ಉದ್ವೇಗಕ್ಕೊಳಗಾಗದೆ ಪ್ರಕಟಿಸುವ ರೀತಿಯು ಈ ಕಥೆಯ ಪ್ರಮುಖ ಲಕ್ಷಣವಾಗಿದೆ. ಮನುಷ್ಯನ ದುರ್ಬಲವಾದ ಮನಸ್ಸು ಸುತ್ತಲ ಸಾಮಾಜಿಕ ಪರಿಸರದಿಂದ ಮತ್ತಷ್ಟು ದುರ್ಬಲವಾಗುವುದು ಒಂದು ಮುಖ ಚಿತ್ರಿತವಾದರೆ ಮತ್ತೊಂದು ಚಿತ್ರ ಈ ಪರಿಸರವನ್ನೇ ಬದಲಾಯಿಸಲು ಹೆಣಗುವಂತಹ ಪ್ರಜ್ಞೆ ಇವರೆರಡು ಮನುಷ್ಯನ ಆಂತರಿಕ ಸಮಸ್ಯೆಗಳಾಗಿ ಕಾಡಿದೆ. 'ಸಂಬಂಧ' ಕಥೆಯಲ್ಲಿ ಮಾನವೀಯ ಸಂಬಂಧಗಳ ಶೋಧನೆಯೊಂದಿಗೆ ಸಾಮಾಜಿಕ ಮೌಲ್ಯ ಮತ್ತು ವೈಯಕ್ತಿಕ ಮೌಲ್ಯಗಳ ಅನಾವರಣವಾಗುವುದನ್ನು ಶೋಧಿಸಲಾಗಿದೆ.

ತೇಜಸ್ವಿಯವರ 'ಜುಗಾರಿಕ್ರಾಸ್' ಕಾದಂಬರಿಯಲ್ಲಿ ಪತ್ತೇದಾರಿಕೆ ಜೊತೆಗೆ ರೋಚಕ ಎನ್ನಿಸುವ ಶೋಧಗಳು ಇವೆ. ಕಾದಂಬರಿ ವಾಸ್ತವವಾದಿ ನೆಲೆಯಲ್ಲಿದ್ದು ಆರ್ಥಿಕ ಸಂಪದಾನೆಯೇ ದೇವಪುರದ ಮುಖ್ಯಗುರಿಯಾಗಿದೆ. ಜೂಜು, ಗಾಂಜಾ, ಅಫೀಮು, ಕಳ್ಳಸಾಗಣಿಕೆ ಹೀಗೆ ಹಲವಾರು ಮಾರ್ಗಗಳಲ್ಲಿ ಜನರನ್ನು ಶೋಷಿಸುವ ದೇವಪುರವೊಂದು ಚಕ್ರವ್ಯೂಹದಂತೆ ಗೋಚರಿಸುತ್ತದೆ. ದೇವಪುರ ಮೊದಲಿನಂತಿಲ್ಲ. ಅದೊಂದು ಅಂತಾರಾಷ್ಟ್ರೀಯ ಭೂಗತ ದೊರೆಗಳ ವ್ಯಾಪಾರ ಕೇಂದ್ರ ಒಂದು ದಿನ ದೂರಸಂಪರ್ಕ ಕೈಕೊಟ್ಟರೆ ಅಲ್ಲಿ ಅನೇಕ ಅವಾಂತರಗಳು ಜರುಗುತ್ತದೆ. ಅತಿ ವೈಜ್ಞಾನಿಕತೆಯ ಪರಿಣಾಮದಿಂದ ಮೇದರಹಳ್ಳಿಯ ಗ್ರಾಮ ಸಮಾಜ ನಶಿಸುತ್ತಿದೆ. ಇಂಥ ಚಿತ್ರಣಗಳು ಒಂದು ರೀತಿಯ ಅತ್ಯಂತ ಫ್ಯಾಂಟಸಿಯಾಗಿ ಕಾಣಿಸಿದರೂ ತನ್ನಾಳದಲ್ಲಿ ಆಧುನಿಕತೆಯ ಜೀವನ ವಿರೋಧಿ ವೈಲಕ್ಷಣಗಳನ್ನು ಸಾಂಕೇತಿಕವಾಗಿ ತಿಳಿಸುತ್ತದೆ. ಗೌರಿ ಮತ್ತು ಸುರೇಶ ತಂದಿದ್ದ ಏಲಕ್ಕಿ ಚೀಲದೊಳಗೆ ಕಳ್ಳಸಾಗಾಣಿಕೆದಾರರು ತಮ್ಮ ವಸ್ತುವನ್ನು ಸಾಗಿಸಿದ್ದಲ್ಲದೆ, ಅಧಿಕ ಹಣದಿಂದ ಆ ಏಲಕ್ಕಿಯನ್ನು ಕೊಂಡಿದ್ದುದೇ ವಿಚಿತ್ರ ತಾವು ದುಡಿದ ಹಣವನ್ನು ರಕ್ಷಿಸಿಕೊಳ್ಳುವುದು ಒಂದು ಫ್ಯಾಂಟಸಿಯಾಗಿ ಕಾದಂಬರಿಯಲ್ಲಿ ಗೋಚರಿಸುತ್ತದೆ. ಪಿಕ್‌ಪ್ಯಾಕೆಟ್ ಗುಂಪಿನವರು ಖೂನಿ ಗುಂಪಿನವರು ಹೀಗೆ ಕಂಡವರನ್ನೆಲ್ಲ ಭಯದಿಂದ ನೋಡುತ್ತಾ ಗೌರಿ ಸುರೇಶ ಕೊನೆಗೆ ಜುಗಾರಿಕ್ರಾಸ್ ತಲುಪುತ್ತಾರೆ.

ತೇಜಸ್ವಿಯವರ ಜುಗಾರಿಕ್ರಾಸ್ ಕಾದಂಬರಿಯಲ್ಲಿ ಹಣದ ವಿಷಯಕ್ಕಾಗಿ ಗೌರಿಸುರೇಶರಿಗೆ ನಡೆದ ಶೋಷಣೆಗೆ ಆಲನಹಳ್ಳಿಯವರ ಗೆಂಡೆತಿಮ್ಮ ಮತ್ತು ಮರಂಕಿಯರ ಶೋಷಣೆಗೂ ಹೋಲಿಕೆಗಳಿವೆ. ಇವತ್ತಿನ ಸಾಂಸ್ಕೃತಿಕ ಸಂದರ್ಭದಲ್ಲಿ ಹಲವು ಕ್ಷೇತ್ರಗಳಲ್ಲಿ ಹಲವು ರೂಪಗಳಲ್ಲಿ ಶೋಷಣೆಗಳು ಸೂಕ್ಷ್ಮತೆಗೊಳ್ಳುತ್ತಿರುವಾಗ, ವೈರುಧ್ಯ ಸ್ಥಿತಿಗಳ ದರ್ಶನ ದೃಷ್ಟಿ ಹೊಸದನ್ನು ಕಂಡುಕೊಳ್ಳುವ ಕಾಣ್ಕೆಯಾಗುತ್ತದೆ. ತೇಜಸ್ವಿಯವರ ಒಟ್ಟು ಕಾದಂಬರಿಗಳ ತಾತ್ವಿಕ ದೃಷ್ಟಿಕೋನವನ್ನು ಪರಿಶೀಲಿಸಿದರೆ, ಇವರ ಶ್ರದ್ಧೆ, ಚಿಂತನಾಕ್ರಮ, ಅಭಿವ್ಯಕ್ತಿ ಮಾದರಿಗಳನ್ನು ರೂಪಿಸಿದ ಮತ್ತು ನಿಯಂತ್ರಿಸಿ ಬೇರೆಡೆಗೆ ಹೊರಳಿಸಿದ ಎಳೆಯೊಂದು ಕಾಣಸಿಗುತ್ತದೆ. ಅದು

ಸಾಮಾಜಿಕ ಕಳಕಳಿಯ ಬದ್ಧತೆಯಿಂದ ರೂಪುಗೊಂಡದ್ದು ಎಂಬುದನ್ನು ಅಲ್ಲಗಳೆಯಲಾಗದು. ವ್ಯವಸ್ಥೆಯ ಒಪ್ಪಿತ ಮೌಲ್ಯಗಳಾಗಿ ವಿಜೃಂಬಿಸುತ್ತಿರುವ ಸಂಸ್ಕೃತಿಯ ಸೂಕ್ಷ್ಮ ಸ್ತರಗಳನ್ನು ಬಿಡಿಸಿಕೊಳ್ಳುವಲ್ಲಿ ಸಾಹಿತ್ಯ ಸಮಾಜಕ್ಕೆ ಮತ್ತಷ್ಟು ಹತ್ತಿರವಾಗುತ್ತದೆ. ತೇಜಸ್ವಿಯವರ ಸಾಹಿತ್ಯದ ಹಿಂದಿನ ತುಡಿತಗಳು ನಮ್ಮ ವ್ಯವಸ್ಥೆಯ ಆರ್ಥಿಕ, ಸಾಮಾಜಿಕ, ರಾಜಕೀಯ ಪರಂಪರೆಗಳ ಮೂಲಸೆಲೆಯಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಮೇಲೆ ಚರ್ಚಿಸಲಾದ ಅಂಶಗಳ ಹಿನ್ನೆಲೆಯಲ್ಲಿ 'ಜಗಾರಿಕ್ರಾಸ್' ಕಾದಂಬರಿಯ ಸಾಹಸ ಪ್ರವೃತ್ತಿಯ ಸುರೇಶ ಮತ್ತು ಗೌರಿಯವರ ಪಾತ್ರ ಮುಖ್ಯವಾಗಿಬಿಡುತ್ತದೆ. ಕತ್ತಲಲ್ಲಿ ನಿಂತು ಬೆಳಕನ್ನು ಕಾಣಲುಪ್ರಯತ್ನಿಸಿರುವ ಹುಚ್ಚು ಕುಂಟರಾಮನ ಹೋರಾಟವು ನಿಷ್ಪ್ರಯೋಜಕವಾದುದಲ್ಲ. ಕತ್ತಲ ಲೋಕದ ರಹಸ್ಯಗಳನ್ನು ಬಯಲು ಮಾಡುವ ಪತ್ತೇದಾರನಾದ ರಾಜಪ್ಪನ ಪ್ರಯತ್ನವು ವಿಫಲವಾಗುವುದಿಲ್ಲ. ಸಾಮಾಜಿಕ ಅಸಮಾನತೆಯ ನಿರ್ಮೂಲನೆ ಒಂದು ದೀರ್ಘವಾದ ತ್ಯಾಗ ಬಲಿದಾನದಿಂದ ಕೂಡಿದ ಹೋರಾಟದಿಂದ ಮಾತ್ರ ಸಾಧ್ಯ ಎಂಬುದನ್ನು ಲಕ್ಷಿಸಬೇಕು. ಸೂಕ್ಷ್ಮವಾಗಿ ಗಮನಿಸದರೆ ತೀರಾ ಮೂರ್ತವಾದ ಮನುಷ್ಯಲೋಕದ ವಸ್ತು ವಿವರಗಳಿಂದಲೇ ತೇಜಸ್ವಿ 'ಜಗಾರಿಕ್ರಾಸ್' ಮೂಲಕ ಒಂದು ಆಧುನಿಕ ಪುರಾಣವನ್ನೇ ಸೃಷ್ಟಿಸಿದ್ದಾರೆ ಎಂಬುದು ಹೊಳೆಯತೊಡಗುತ್ತದೆ. ಈ ಪುರಾಣಕ್ಕೆ ತನ್ನದೇ ಆದ ಜಟಿಲವೂ ಸಂಕೀರ್ಣವೂ ಆದ ಒಳತರ್ಕಗಳಿವೆ. ಕಾದಂಬರಿಯನ್ನು ಪತ್ತೇದಾರಿ ಇಲ್ಲವೆ ವಾಸ್ತವವಾದಿ ನೆಲೆಗಳಿಂದ ಪ್ರವೇಶ ಮಾಡಿದರೆ ಅಲ್ಲಿ ನಮಗೆ ಏನೂ ಸಿಕ್ಕಲಾರದು ಅದನ್ನೊಂದು ಪುರಾಣವಾಗಿ ಓದಲು ನಮಗೆ ಸಾಧ್ಯವಾದರೆ ಆಗ ತೇಜಸ್ವಿ ಕಥನ ಸಾಧಿಸಿರುವ ಹೊಸ ಸಿದ್ಧಿಯ ಸ್ವರೂಪದ ಪರಿಚಯವಾಗುತ್ತದೆ. ಕಾದಂಬರಿ ತನ್ನ ಆಕೃತಿಯೊಳಗೆ ಆಧುನಿಕ ಪುರಾಣ ಕ್ರಮವೊಂದನ್ನು ರೂಢಿಸಿಕೊಳ್ಳಲು ಸಾಧ್ಯವಾದ ಪರಿಸರದ ಚಾರಿತ್ರಿಕ ಹಿನ್ನೋಟ ಮುನ್ನೋಟಗಳ ಅರಿವಿನಿಂದಲೇ ಸೃಜನಾತ್ಮಕ ನೆಲೆಗಳು ಸಮೃದ್ಧ ಸಂಕಥನಗಳಾಗಿವೆ. ನಮ್ಮ ಊಹೆ ತರ್ಕಕ್ಕೆ ಮೀರಿದ ಸಂಬಂಧಗಳ ಕುತೂಹಲ ಆಧುನಿಕ ಪ್ರಪಂಚದ ಗರ್ಭದಿಂದ ಉದಿಸಿದ್ದು ನಾಗರೀಕ ಜಗತ್ತಿನ ಕ್ಷುದ್ರಲೋಕದಲ್ಲಿ ಅದಕ್ಕೆ ಎದುರಾಗುವ ಸಾಹಸಿ ಮನಸ್ಸುಗಳು ಜೀವಂತವಾಗಿವೆ ಎಂಬುದು ಸಮಾಧಾನದ ಸಂಗತಿ.

ಸಾಮಾಜಿಕ ಮೌಲ್ಯಗಳನ್ನು ಅನಾವರಣ ಮಾಡುವಾಗ ಕಾದಂಬರಿಯ ಪ್ರಮುಖಪಾತ್ರವಾದ ಗೌರಿಯೂ ಸಹ ಸುರೇಶನೊಡನೆ ಆತಂಕಕಾರಿ ಅವಾಂತರಗಳನ್ನು ಎದುರಿಸುವ ಕೆಚ್ಚನ್ನು ಪ್ರದರ್ಶಿಸುವುದು ಐಕ್ಯತೆಯ ಸಂಕೇತವಾಗುತ್ತದೆ. ಕಾದಂಬರಿಯ ಗೌರಿ ಸುಶಿಕ್ಷಿತೆ ಹಾಗೂ ಧೈರ್ಯಶಾಲಿ ಆಧುನಿಕ ಸ್ತ್ರೀ ಪ್ರಾತಿನಿಧ್ಯಕ್ಕೆ ಆಕೆ ಸಾಕ್ಷಿಯಾಗಿದ್ದಾಳೆ. ತೇಜಸ್ವಿಯವರ ಹಿಂದಿನ ಸ್ತ್ರೀಪಾತ್ರಗಳಿಗಿಂತ ಆಕೆ ಭಿನ್ನವಾಗಿದ್ದಾಳೆ. 'ಅನನ್ಯ' ಕಥೆಯ ಗೌರಿಯಂತೆ ಈಕೆ ಮುಗ್ದೆಯು ಅಲ್ಲ ಚಿದಂಬರ ರಹಸ್ಯದ ಜಯಂತಿಯಂತೆ ಬಾಲೆಯೂ ಅಲ್ಲ

ಈಗೆ ಮಾಗಿದ ಪ್ರಬುದ್ಧ ವ್ಯಕ್ತಿತ್ವವುಳ್ಳವಳು ಮತ್ತು ಕ್ರಿಯಾಶೀಲಳು ಅವಳ ವೈಯಕ್ತಿಕವಾದ ವ್ಯಕ್ತಿತ್ವವನ್ನು ನೋಡುವುದಾದರೆ ತುಂಬಾ ಎದೆಗಾರಿಕೆಯುಳ್ಳ ಸ್ತ್ರೀ – ಇಂತಹಪಾತ್ರ ಸೃಷ್ಟಿಯಲ್ಲಿ ತೇಜಸ್ವಿಯವರ ಸ್ತ್ರೀ ಸಂವೇದನೆಯ ದೃಷ್ಟಿಕೋನ ಹೊಸನೋಟದಿಂದ ಸಹ ಕೂಡಿದೆ. 'ನಿಗೂಢ ಮನುಷ್ಯರು' ಕಾದಂಬರಿಯ 'ಶಾರಿ' ಮೂಕಪ್ರೇಕ್ಷಕಗಳಾಗಿದ್ದಾಳೆ. ಇಲ್ಲಿಯ ಗೌರಿ 'ಕಿರಿಗೂರಿನ ಗಯ್ಯಾಳಿಗಳು' ಕಥೆಯ ದಾನಮ್ಮನಂತೆ ಪ್ರಜ್ಞೆಯುಳ್ಳ ಸ್ತ್ರೀಯಾಗಿದ್ದಾಳೆ.

ಪ್ರಸ್ತುತ ಸಮಾಜದಲ್ಲಿ ಬೆಳೆಯುತ್ತಿರುವ ಸ್ತ್ರೀವಾದಿ ಚಿಂತನೆಗಳು ಕನ್ನಡ ಸಾಹಿತ್ಯದ ಮೇಲೆ ಪ್ರಭಾವ ಬೀರುತ್ತಿರುವುದರಿಂದ, ಬಹುತೇಕ ಸ್ತ್ರೀ ಪಾತ್ರಗಳು ಸಾಹಸ ಸ್ವಾಭಿಮಾನದ ನೆಲೆಯಿಂದ ಜೀವಂತವಾಗಿ ಮೂಡಿಬಂದಿವೆ. ಒಟ್ಟಾರೆ ಸಾಂಸ್ಕೃತಿಕ ಸಂದರ್ಭದ ಸಾಮಾಜಿಕ ಸ್ಥಿತಿಯ ಹಿನ್ನೆಲೆಯಿಂದ 'ಜುಗಾರಿಕ್ರಾಸ್' ಮಹತ್ವದ ಕಾದಂಬರಿಸ್ಥಾನ ಪಡೆದುಕೊಳ್ಳುತ್ತದೆ. ಈ ಕೃತಿ ಸಾಹಿತಿ ಮತ್ತು ಸಹೃದಯ ವರ್ಗಕ್ಕೆ ಇರಬೇಕಾದಂತಹ ಸಾಮಾಜಿಕ ಬದ್ಧತೆಯನ್ನು ಪ್ರತಿಪಾದಿಸುತ್ತದೆ. ಸಾಂಸ್ಕೃತಿಕ ಬದುಕಿನ ಕಠೋರ ಸತ್ಯಗಳನ್ನು ಸೂಚಿಸುತ್ತಾ ವರ್ತಮಾನ ಹಾಗೂ ಚಾರಿತ್ರಿಕ ವಾಸ್ತವಗಳ ಹಿನ್ನೆಲೆಯಲ್ಲಿ ಗಂಭೀರವಾದ ಪ್ರಶ್ನೆಗಳನ್ನು ಹಾಕುತ್ತದೆ. ಭಾರತೀಯ ಪರಿಸರದ ಕಟುವಾಸ್ತವಗಳ ಗಂಭೀರವಾದ ಪ್ರಶ್ನೆಗಳನ್ನು ಹಾಕುತ್ತದೆ. ಭಾರತೀಯ ಪರಿಸರದ ಕಟುವಾಸ್ತವಗಳ ಬಗ್ಗೆ ಅನುಸಂಧಾನ ನಡೆಸುತ್ತಾ ಹೊಸ ಸಂಬಂಧಗಳ್ನು ವೃದ್ಧಿಸಲು ಪ್ರಯತ್ನಿಸುತ್ತದೆ.

ಯು.ಆರ್.ಅನಂತಮೂರ್ತಿಯವರು ಹೇಳುವ ಅಭಿಪ್ರಾಯವನ್ನು ಗಮನಿಸುವುದಾದರೆ "ನನ್ನ ಕೃತಿಯ ಶರೀರ ಸಾಂಕೇತಿಕವಾದದ್ದೇ ನಮ್ಮ ಸಾಹಿತ್ಯ ಸಂದರ್ಭದ ಒಂದು ತುದಿಯಲ್ಲಿದ್ದರೆ, ಕಥನವನ್ನೇ ಕೈವಶಮಾಡಿಕೊಂಡಂತೆ ಬರೆಯುವ ಭೈರಪ್ಪನವರು ಮತ್ತೊಂದು ತುದಿಯಲ್ಲಿದ್ದಾರೆ. ತೇಜಸ್ವಿಯವರದು ಇವರಿಬ್ಬರಿಗಿಂತ ಭಿನ್ನರೀತಿಯ ಪ್ರತಿಭೆ. ಕಲಾವಿದ ಪ್ರಜ್ಞೆಯೇ ಕೇಂದ್ರವಾಗುವ ಅಥವಾ ಕಲಾವಿದನ ಪ್ರಜ್ಞೆಯೊಳಗೆ ವಿಕಾಸವಾಗುವ ಆತ್ಮನಿಷ್ಠ ಬರೆಹಕ್ಕಿಂಥ ಬೇರೆಯಾದ, ಕೇವಲ ವೀಕ್ಷಕನಾಗಿ ಮಾತ್ರ ಕಲಾವಿದ ಕೃತಿಯಲ್ಲಿ ವ್ಯಕ್ತವಾಗುವ ಕ್ರಮವನ್ನು ತೇಜಸ್ವಿ ಅನುಸರಿಸುತ್ತಾರೆ. ಈ ಕ್ರಮ ಕನ್ನಡಕ್ಕೆ ಹೊಸತಲ್ಲದಿದ್ದರೂ ಅದರ ಉದ್ದೇಶ ಹಾಗೂ ಅಲ್ಲಿ ವ್ಯಕ್ತವಾಗುವ ಸಂವೇದನೆ ಮಾತ್ರ ಕ್ರಾಂತಿಕಾರಕವಾದದ್ದು".[೮೫] ಸಮರ್ಥವಾದ ಭಾಷಾ ಬಳಕೆಯ ಮೂಲಕ ಸಾಮಾಜಿಕ ವಿಷಾದಕರ ಸತ್ಯಗಳ ಅನ್ವೇಷಣೆಗೆ ಮುಂದಾದಾಗ ಮನುಷ್ಯ ಮತ್ತು ಪರಿಸರದ ಪ್ರಜ್ಞೆ ದಟ್ಟವಾದ ವಿಶಿಷ್ಟತೆಗೆ ಒಳಗಾಗುತ್ತದೆ. ಅನುಭವದ ಕಥನದ ಸರಳತೆ, ಹಾಸ್ಯ ವಿನೋದಗಳಿಂದ ಕೂಡಿದ ಆಕರ್ಷಕ ಶೈಲಿ, ಓದುಗರನ್ನು ಸೆಳೆದು ನಿಲ್ಲಿಸುವ

---

೮೫. ನರಹಳ್ಳಿ ಬಾಲಸುಬ್ರಹ್ಮಣ್ಯ, 'ಸಾಹಿತ್ಯ ಸಂಸ್ಕೃತಿ', ಪುಟ. ೩೭, ೧೯೯೮.

ಕುತೂಹಲಕಾರಿ ಪ್ರಸಂಗಗಳ ನಿರೂಪಣೆ, ಅಮೂರ್ತ ಲೋಕದ ತಲ್ಲಣಗಳು ಕಾದಂಬರಿಯ ಕಥನಕ್ರಿಯೆಗೆ ಪೂರಕವಾಗಿ ನೆಲೆಗೊಂಡಿರುವುದರಿಂದ ಕೃತಿ ಹೆಚ್ಚು ಆಪ್ತವಾಗುತ್ತದೆ. ಆರ್ಥಿಕ ಪ್ರಪಂಚಕ್ಕೆ ದಾಸರಾಗಿರುವ ಅಮಲಿನ ಜನ, ಹೆತ್ತತಾಯಿಯ ಕೊರಳನ್ನೇ ಕೊಯ್ಯುತ್ತಿರುವ ವಿಕೃತಿಗಳನ್ನು ಚಿತ್ರಿಸುತ್ತಾ ಅದರೊಳಗೆ ಅಡಕವಾಗಿರುವ ನೈತಿಕ ಬದುಕಿನ ಸೂಚನೆಗಳನ್ನು ಕಾದಂಬರಿ ನೀಡುತ್ತದೆ.

ಸಾಮಾಜಿಕ ಹಾಗೂ ವೈಯಕ್ತಿಕ ಮೌಲ್ಯಗಳ ಗ್ರಹಿಕೆಯನ್ನು ಆಲನಹಳ್ಳಿಯವರ 'ಪರಸಂಗದ ಗೆಂಡೆತಿಮ್ಮ' ಕೃತಿಯಲ್ಲಿ ವ್ಯಕ್ತವಾಗಿರುವುದನ್ನು ನೋಡಬಹುದು. ಬಾಲ್ಯದಲ್ಲಿ ತಮ್ಮ ಮೇಲೆ ಗಾಢಪ್ರಭಾವ ಬೀರಿದ ಪರಸಂಗದ ಗೆಂಡೆತಿಮ್ಮ ಮತ್ತು ಅವನ ಹೆಂಡತಿ ಮರಂಕಿಯರನ್ನು ಆಲನಹಳ್ಳಿ ಇಲ್ಲಿ ಅಕ್ಷರಲೋಕಕ್ಕೆ ಎಳೆದುತಂದು ಗ್ರಾಮೀಣ ಬದುಕನ್ನು ಚಿತ್ರಿಸಿದ್ದಾರೆ. ರಸಭರಿತವಾದ ಕಥೆಗಳನ್ನು ಪ್ರಸಂಗಗಳನ್ನು ವರ್ಣಿಸುತ್ತಿದ್ದ ಅಪ್ಪಟ ಮುಗ್ಧ. ಪ್ರಾಮಾಣಿಕ ಗೆಂಡೆತಿಮ್ಮನ ಖಾಸಗೀ ಬದುಕನ್ನು ರೂಪಿಸುತ್ತಲೇ ಅವನು ಬದುಕಿದ್ದ ಗ್ರಾಮೀಣ ಪರಿಸರವನ್ನು ಅದರ ಜೀವಂತಿಕೆಯನ್ನು, ಅದು ಕೊಳೆಯುತ್ತಿದ್ದ ಪರಿಯನ್ನು ವಿಕಾಸಕ್ಕೆ ಚಾಚಿಕೊಳ್ಳುತ್ತಿದ್ದ ರೀತಿಯನ್ನು ಈ ಕಾದಂಬರಿ ಅರ್ಥಪೂರ್ಣವಾಗಿ ನಿರೂಪಿಸುತ್ತದೆ. ಕುತೂಹಲದ ಕಣ್ಣೊಂದು ಪ್ರೀತಿಯಿಂದ ನೋಡಿದುದರ ದಾಖಲೆ ಇಲ್ಲಿ ಓದುಗರಿಗೆ ಸಿಗುತ್ತದೆ. ಕೆಲವು ಪಾತ್ರಗಳ, ಕುಟುಂಬಗಳ ಒಂದೆರಡು ಹಳ್ಳಿಗಳ ಬದುಕು ಇಲ್ಲಿ ಚಿತ್ರಿತವಾಗಿದ್ದರೂ ಕಾದಂಬರಿಕಾರರ ಅವಲೋಕನ ಕೇಂದ್ರಿತವಾಗಿರುವುದು ಈ ಗ್ರಾಮೀಣ ಬದುಕಿನಲ್ಲಿ ಬದಲಾವಣೆಯ ಕಿರು ಅಲೆಗಳು ಎದ್ದಿವೆ. ಬದಲಾವಣೆ ಎಂದರೆ ಕಣ್ಣು ಕುಕ್ಕಿಸುವ ಬದಲಾವಣೆಗಳಲ್ಲ, ಆರ್ಥಿಕ ಪಲ್ಲಟಗಳಲ್ಲ ರಾಜಕೀಯ ಏರುಪೇರುಗಳೂ ಅಲ್ಲ ಗೆಂಡೆತಿಮ್ಮನ ಸಾಲುಂಡಿಯಲ್ಲಾಗಲೀ, ಮರಂಕಿಯ ಉಳಿಮಾವಿನಲ್ಲಾಗಲೀ ಅಥವಾ ಗೆಂಡೆತಿಮ್ಮನ ವ್ಯಾಪಾರದ ಊರಾದ ಗೌವ್ವಳ್ಳಿಯಲ್ಲಾಗಲೀ ಇಂಥ ಅಲ್ಲೋಲಕಲ್ಲೋಲ ಮಾಡುವಂಥ ಬದಲಾವಣೆಗಳೇನೂ ನಡೆದೇ ಇಲ್ಲ ಅವೆಲ್ಲ ಮೊದಲಿನ ಹಾಗೇ ಅದೇ ಸ್ಥಿತಿಯಲ್ಲೇ ಉಳಿದಿವೆ. ಉತ್ತುವುದು, ಬಿತ್ತುವುದು, ಗೇಯುವುದು, ಮದುವೆಗಳು, ಪೂಜೆಗಳು, ದೇವರು ಮೈಮೇಲೆ ಬರುವುದು ಇತ್ಯಾದಿ ಕ್ರಿಯೆಗಳು ಯಾವ ಬದಲಾವಣೆಯೂ ಇಲ್ಲದೆ ಯಥಾಪ್ರಕಾರ ನಡೆಯುತ್ತಲೇ ಇವೆ. ಆದರೆ ಒಳಗೇ ಥಣ್ಣಗೆ ಹರಿದು ಎಬ್ಬಿಸಿದ ಕಂಪನ ಈವರೆಗಿನ ಶಾಂತಿಯನ್ನು, ನೆಮ್ಮದಿಯನ್ನು ಕದಡಿದೆ. ಗೆಂಡೆತಿಮ್ಮ ಮೈಸೂರಿನಿಂದ ಕೊಂಡುತಂದು ಗೌವ್ವಳ್ಳಿಯ ಹರೆಯದ ಹೆಣ್ಣುಗಳಿಗೆ ಕದ್ದುಮುಚ್ಚಿ ಮಾರಿದ ಸ್ನೋ, ಪೌಡರ್, ಗಮನದೆಣ್ಣೆ, ಬಾಡಿ, ಲಂಗಗಳ ನಾಗರಿಕತೆ ಎಬ್ಬಿಸಿದ ಕಂಪನ ಈ ಬಗೆಯದು.

ಮೇಲುನೋಟಕ್ಕೆ ಇದು ಮಹತ್ವದ ಬದಲಾವಣೆ ಅಲ್ಲ. ಆದರೆ ಮಲೆತು ನಿಂತ ಬದುಕಿನಲ್ಲಿ ಇದು ಉಂಟುಮಾಡಿದ ಪಲ್ಲಟ ವಿಶಿಷ್ಟವಾದದ್ದು. ಸ್ನೋ-ಪೌಡರ್‌ಗಳು ಹೊಸ

ಜೀವನಶೈಲಿಯೊಂದರ ಸಾಧನಗಳಾಗಿರುವಂತೆಯೇ ಹೊಸಮೌಲ್ಯಗಳೂ ಆಗಿ ಹಳೆಯ ಸಂಪ್ರದಾಯಬದ್ಧ ಮೌಲ್ಯಗಳೊಂದಿಗೆ ಮುಖಾಮುಖಿಯಾಗುವ ಸಂಬಂಧಗಳಲ್ಲಿ ಏರು-ಪೇರು ಉಂಟಾಗಿ ಸಂಘರ್ಷ ಏರ್ಪಡುವುದು ಕುಟುಂಬದ ಸಂಗತಿಗಳು ಬೀದಿಗೆ ಬಂದು ಸಾರ್ವಜನಿಕ ಸ್ವರೂಪ ಪಡೆದುಕೊಳ್ಳುವುದು ಇತ್ಯಾದಿ ಪರಿಣಾಮಗಳಿಂದಾಗಿ ಈ ಬದಲಾವಣೆ ಏರಿಳಿತಗಳಿಲ್ಲದ ಬದುಕಿನಲ್ಲಿ ಅಲ್ಲೋಲ ಕಲ್ಲೋಲ ಉಂಟುಮಾಡುವ ಬದಲಾವಣೆಯಾಗಿ ಮಹತ್ವ ಪಡೆದುಕೊಲ್ಲುತ್ತದೆ. ಹಾಗೆ ನೋಡಿದರೆ ಗೆಂಡೆತಿಮ್ಮ-ಮರಂಕಿಯರು ಮುಗ್ಧ ವ್ಯಕ್ತಿಗಳಾಗಿರುವಂತೆಯೇ ಸಂಕೇತಗಳೂ ಆಗಿದ್ದಾರೆ. ಹೊಸ ನಾಗರಿಕತೆಯೊಂದರ ಪ್ರತಿರೂಪದಂತೆ ಆ ಹಳ್ಳಿಯಲ್ಲಿ ಕಾಣಿಸಿಕೊಳ್ಳುವ ಮರಂಕಿ ಹೊಸಮೌಲ್ಯಗಳ ಸಂಕೇತವೂ ಹೌದು. ಒಳಗೆ ಪ್ರತಿರೋಧ ಇಟ್ಟುಕೊಂಡೇ ಈ ಹೊಸತನಕ್ಕೆ ತನ್ನನ್ನು ಒಪ್ಪಿಕೊಳ್ಳುವ ಗೆಂಡೆತಿಮ್ಮ ಹಳೆಯ ಸಂಪ್ರದಾಯ ಮೌಲ್ಯಗಳ ಸಂಕೇತದಂತೆಯೂ ಭಾಸವಾಗುತ್ತಾನೆ. ಇವರಿಬ್ಬರ ಸಮಾಜ ಕಂಡುಕೊಳ್ಳುವ ಸಂಘರ್ಷ ತಿಕ್ಕಾಟಗಳಾಗಿಯೂ ಕಂಡುಬರುತ್ತದೆ. ಹೀಗೆ ಕಾದಂಬರಿ ಒಂದು ಸ್ತರದಿಂದ ಇನ್ನೊಂದು ಸ್ತರಕ್ಕೆ ತನ್ನ ಅರ್ಥವ್ಯಾಪ್ತಿಯನ್ನು ಹರಡಿ ಬೆಳೆಯುತ್ತ ಹೋಗುತ್ತದೆ. ಹೀಗೆಂದ ಮಾತ್ರಕ್ಕೆ ಆಲನಹಳ್ಳಿ ತಮ್ಮೆಲ್ಲ ಪ್ರತಿಭೆಯನ್ನು ಸಂಕೇತ, ಪ್ರತಿಮೆಗಳ ಸೃಷ್ಟಿಗೇ ಧಾರೆ ಎರೆದಿದ್ದಾರೆ ಎಂದಲ್ಲ. ಹಾಗಾಗಿದ್ದರೆ ಅದು ಓದುಗರಿಂದ ದೂರವೇ ಉಳಿದುಬಿಡುವ ಸಂಭವವೇ ಹೆಚ್ಚಾಗಿತ್ತು. ಕೃತಕತೆ ಅಲ್ಲಿ ತಲೆಹಾಕುವ ಸಾಧ್ಯತೆಯೂ ಇತ್ತು. ಆದರೆ ಆಲನಹಳ್ಳಿ ದಟ್ಟ ಗ್ರಾಮೀಣ ವಿವರಗಳಿಂದ ಸಹಜಪಾತ್ರಗಳ ನಿರೂಪಣೆಯಿಂದ ಬದುಕಿನ ಸಕಲ ವ್ಯಾಪಾರಗಳ ಮಂಡನೆಯಿಂದ ಈ ಕೃತಿಯನ್ನು ನೈಜದಾಖಲೆಯನ್ನಾಗಿ ಮಾಡುತ್ತಲೆ ಇಲ್ಲಿಯ ಸಂಗತಿಗಳು, ಘಟನೆಗಳು, ಸಂಬಂಧಗಳು ಸಂಘರ್ಷಗಳು, ಇನ್ನೊಂದು ಸ್ತರದ ಅರ್ಥವ್ಯಾಪ್ತಿಯನ್ನು ಪಡೆದುಕೊಳ್ಳುವಂತೆ ಮಾಡುತ್ತಾರೆ. ಹೀಗಾಗಿಯೇ ಒಂದು ಸಂಕೇತ, ಪ್ರತಿಮೆಗಳು ಮಾತ್ರ ಜೋತುಬೀಳದೆ ಅರ್ಥಸಮೃದ್ಧಿಯನ್ನು ಚಿಮ್ಮಿಸುತ್ತ ಜೀವಂತಿಕೆಯನ್ನು ಪಡೆದುಕೊಳ್ಳುತ್ತದೆ. ಆಲನಹಳ್ಳಿ ಪೂರ್ವಗ್ರಹಗಳನ್ನು ದೂರವಿರಿಸಿ ಕೃತಿಕಟ್ಟುವ ಬರಹಗಾರ ಇದು ಕಾರಣವಾಗಿರುವುದರಿಂದಲೇ ಈ ಕಾದಂಬರಿಯ ಗೆಂಡೆತಿಮ್ಮನಾಗಲೀ, ಮರಂಕಿಯಾಗಲೀ ಕಾದಂಬರಿಕಾರನ ಆಶಯಗಳಿಗೆ ತಕ್ಕ ಪಾತ್ರಗಳಾಗಿ ರೂಪುಪಡೆಯುವ ಬದಲು ಅವರು ಇರುವಂತೆಯೇ ಸಹಜ ವ್ಯಕ್ತಿತ್ವವನ್ನು ಉಳಿಸಿಕೊಂಡೇ ಕಾಣಿಸಿಕೊಳ್ಳುತ್ತಾರೆ. ಹಾಗಾಗಿಯೇ ಇವರು ಜೀವಂತ ವ್ಯಕ್ತಿಗಳಾಗಿ ನಮ್ಮೊಳಗೆ ಇಳಿಯುತ್ತಾರೆ. ನವ್ಯದ ಬಹುಪಾಲು ಲೇಖಕರಲ್ಲಿ ಅಥವಾ ಪೊಳ್ಳು ಬಂಡಾಯದ ಹಲವು ಬರಹಗಾರರಲ್ಲಿ ಇಂಥ ಪೂರ್ವಾಗ್ರಹಮುಕ್ತ ಮನೋಭಾವವೇ ಅಪರೂಪವಾಗಿರುವುದರಿಂದಾಗಿ ಆಲನಹಳ್ಳಿಯವರ ಈ ಗುಣ ಬಹಳ ಮುಖ್ಯವಾಗುತ್ತದೆ.

ಅತ್ಯಂತ ರಭಸವಾಗಿ, ಅಷ್ಟೇ ಕಲಾತ್ಮಕವಾಗಿ ಕಥೆಯನ್ನು ಮುನ್ನಡೆಸಬಲ್ಲ ಅಗಾಧ ಸಾಮರ್ಥ್ಯವನ್ನು ಪಡೆದುಕೊಂಡಿದ್ದ ಆಲನಹಳ್ಳಿ ಅಷ್ಟೇ ಸಂಯಮವನ್ನು ತೋರುತ್ತಿದ್ದ ಬರಹಗಾರ ಈ ಗುಣ ಆಲನಹಳ್ಳಿಯವರ ಪರಸಂಗ ದಾರಿ ತಪ್ಪದಂತೆ ನೋಡಿಕೊಳ್ಳುತ್ತದೆ. ಅತ್ಯಂತ ರೋಚಕ ಹಂತದಲ್ಲೂ ಈ ಕಾದಂಬರಿ ತನ್ನ ಮಾರ್ಗದಿಂದ ಆಚೆಗೆ ಸಾಗುವುದಿಲ್ಲ. ಅನಗತ್ಯವಾಗಿ ತನ್ನ ಗಾತ್ರ ಹೆಚ್ಚಿಸಿಕೊಳ್ಳುವುದಿಲ್ಲ. ಆಲನಹಳ್ಳಿಯವರ ಇನ್ನೊಂದು ವಿಶೇಷಗುಣ ಎಂದರೆ ಅವರು ಬಿಡುಗಣ್ಣಿನಿಂದ ಎಲ್ಲವನ್ನು ನೋಡುವ ಪರಿ ಗೌವ್ವಳ್ಳಿಯ ಮಳೆ, ತಿಪ್ಪೆ, ಕೊಟ್ಟಿಗೆ, ಬೀದಿ, ಮೂಗಿಗೆ ಅಪ್ಪಳಿಸುವ ವಾಸನೆ, ಹೇಲು, ಕೊಚ್ಚೆ, ಕೆಸರು, ನೊಣಗಳ ದಂಡು, ನಾಯಿಗಳ ಹಿಂಡು, ಗಮನದೆಣ್ಣೆಯನ್ನು ಅಸಹ್ಯ ಹುಟ್ಟಿಸುವ ವಾಸನೆ ಎಂದು ಭ್ರಮಿಸುವಷ್ಟರಮಟ್ಟಿಗೆ ಕೊಳೆತ ಈ ಪರಿಸರಕ್ಕೆ ಹೊಂದಿಕೊಂಡ ಜನ ಇದೆಲ್ಲವನ್ನು ಉತ್ಸಾಹದಿಂದ, ಕುತೂಹಲದಿಂದ, ಸಂಭ್ರಮಗಳಿಂದ ಅಲ್ಲಿ ಆಗುವ ಋತು ಪರಿವರ್ತನೆಗಳನ್ನು ತರುವ ಚಿತ್ರಣಗಳನ್ನು ಗಮನಿಸಬಹುದು. ಹೀಗೆ ಆಲನಹಳ್ಳಿ ಸಾಮಾಜಿಕ ಮೌಲ್ಯಗಳನ್ನು ಭಿನ್ನ ದೃಷ್ಟಿಕೋನದಲ್ಲಿ ಕಟ್ಟಿಕೊಟ್ಟಿರುವುದನ್ನು ಶೋಧಿಸಬಹುದು.

ತೇಜಸ್ವಿಯವರ 'ಮಾಯಾಲೋಕ' ಕಾದಂಬರಿಯಲ್ಲಿ ಸಾಮಾನ್ಯ ಕ್ಷುದ್ರ ಎನಿಸುವ ವಸ್ತುಗಳು ಪಾತ್ರಗಳ ಮೂಲಕ ಬದುಕಿನ ಕಥನವನ್ನು ಕಟ್ಟುವ ಪ್ರಯೋಗವಿದೆ. ಸಣ್ಣಸಂಗತಿಗಳ ಮಹಾಕಾವ್ಯ ಎನ್ನುವ ಈ ಕೃತಿಯಲ್ಲಿ ನಾಯಕ ಇಲ್ಲ. ಬದಲಾಗಿ ನೂರಾರುಪಾತ್ರಗಳು ತಮ್ಮದೇ ನೆಲೆಯಲ್ಲಿ ನಾಯಕರಾಗುತ್ತ ಕಥೆಯನ್ನು ಕಟ್ಟುತ್ತಾರೆ. ಪಾತ್ರಗಳಿಗೆ ಸಂಬಂಧಿಸಿದಂತೆ ಮಾಯಾಲೋಕ ಕಾದಂಬರಿಯನ್ನು ಗಮನಿಸಿದಾಗ ಸಾಮಾನ್ಯ ವಿವರಗಳು ಹಾದಿಬೀದಿಯಲ್ಲಿ ನಡೆಯುವವು. ಮನೆಯೊಳಗಿನ ಜಗತ್ತಿನ ವಿಷಯ ಬಂದಾಗ ತೇಜಸ್ವಿ ಅಷ್ಟು ಆಸಕ್ತರೂ ಅಲ್ಲ ಸೂಕ್ಷ್ಮರೂ ಅಲ್ಲ. ಅವರ ಬಹುತೇಕ ಪಾತ್ರ ಪ್ರಪಂಚ ಕೌಟುಂಬಿಕ ಜಗತ್ತು ಅಲ್ಲ ಎಂಬುದು ಸ್ಪಷ್ಟವಾಗುತ್ತದೆ. ಸತತ ಮೂರು ವರ್ಷಗಳ ಬರಗಾಲದಿಂದಾಗಿ ಕೃಷಿಜೀವನ ಅತಂತ್ರವಾಗಿದ್ದು, ಕಳ್ಳಭಟ್ಟಿ ಇಳಿಸುವಂತ ಗುಡಿಕೈಗಾರಿಕೆ ವೃತ್ತಿಗೆ ಊರಳ್ಳಿ, ಮಕ್ಕಿಗದ್ದೆ ಜನರು ಇಳಿದಿದ್ದಾರೆ. ಕುಡಿಯುವ ನೀರಿಗಾಗಿ ಪರದಾಟವಿದ್ದು, ಗದ್ದೆಗಳನ್ನೆಲ್ಲಾ ಬೀಳುಬಿಟ್ಟಿರುವ ಸ್ಥಿತಿಯಿದೆ. ಐದು ಎಕರೆ ಜಮೀನು ಹೊಂದಿರುವ ಅಣ್ಣಪ್ಪ ಕೂಲಿ ವೃತ್ತಿಗಾಗಿ ನಿರೂಪಕರ ಬಳಿ ಬಂದಿದ್ದಾನೆ. ಕಾದಂಬರಿಯಲ್ಲಿ ನಿರೂಪಕರ ಪಾತ್ರವು ಪ್ರೌಢತೆಯಿಂದ ಕೂಡಿದ್ದು ಎಲ್ಲವನ್ನು ವೀಕ್ಷಿಸಿ ಓದುಗರಿಗೆ ಮಾರ್ಗದರ್ಶನ ಮಾಡುತ್ತದೆ.ನಿಲ್ಲಿ ಕರಾಟೆಮಂಜ ಆದರ್ಶಪಾತ್ರವಾಗಿದ್ದು ಪಾನಿಪುರಿ, ಬೀಡಾ, ಎಳನೀರು, ವ್ಯಾಪಾರ, ಆಟೋ ಓಡಿಸುವುದು ಮುಂತಾದ ಕೆಲಸಗಳನ್ನು ಕೈಗೊಂಡು ಎಲ್ಲಿಯೂ ಯಶಸ್ಸುಕಾಣದೆ ಕೂಲಿ, ಫೋಟೋಗ್ರಫಿ, ಪತ್ರಿಕಾಸಂಪಾದಕ ಕಾರ್ಯಗಳಲ್ಲಿ ನಿರನಾಗಿದ್ದಾನೆ. ದಲಿತವರ್ಗದ ಮಂಜ ವಿದ್ಯಾವಂತನಾಗಿದ್ದು ಸರ್ಕಾರಿ ಕೆಲಸಕ್ಕೆ ಪ್ರಯತ್ನಿಸದೆ. ಹಳ್ಳಿಯಲ್ಲಿಯೇ

ಉಳಿದು ತನ್ನ ಉತ್ತಮ ಸ್ನೇಹತ್ವದಿಂದಾಗಿ ಜನರಿಂದ ಮೆಚ್ಚುಗೆ ಸಹ ಪಡೆದಿದ್ದನು. ಇಲ್ಲಿ ವೈಯಕ್ತಿಕ ಮೌಲ್ಯವನ್ನು ಅನಾವರಣಮಾಡಲು ಲೇಖಕರು ಮುಂದಾಗುತ್ತಾರೆ. ಭಂಡಾರಿ ಬಾಬು ಕ್ಷೌರಿಕ ವೃತ್ತಿಯ ಜೊತೆಗೆ ಅಪ್ಪಣ್ಣನ ಜಮೀನಿನಲ್ಲಿ ಮೆಣಸಿನ ಗಿಡ ಬೆಳೆಯುವುದರೊಂದಿಗೆ ಬರಗಾಲದಲ್ಲೂ ಬೆಳೆ ಬೆಳೆದು ಊರಳ್ಳಿ ಜನರಿಗೆ ಮಾದರಿ ಪಾತ್ರನಾಗುತ್ತಾನೆ.

ಹಿಂದೂ ಮುಸ್ಲೀಂ-ಕ್ರಿಶ್ಚಿಯನ್ ಧರ್ಮ ಹಾಗೂ ಜಾತಿಗಳ ಜನರು ಊರಳ್ಳಿಯಲ್ಲಿ ಹೊಂದಾಣಿಕೆಯಿಂದಿದ್ದು ಧಾರ್ಮಿಕ ಭಾವನೆಗಳಿಗೆ ಧಕ್ಕೆ ಬಾರದಂತೆ ಪರಸ್ಪರ ವ್ಯಾಪಾರ ವ್ಯವಹಾರಗಳಲ್ಲಿ ಜೀವನಸಾಗಿಸುತ್ತಿದ್ದಾರೆ. ಜಲೀಲ್‌ಸಾಬಿ ತರಕಾರಿ ಅಂಗಡಿ ಜೊತೆ ಅಣ್ಣಪ್ಪ ಬೆಳೆದ ಮೆಣಸಿನಕಾಯಿ ವ್ಯಾಪಾರ ಕುದುರಿಸುತ್ತಾನೆ. ಇಕ್ಬಾಲ್‌ಸಾಬಿಯ ಅಜ್ಞಾನದಿಂದಾಗಿ ಗೊಂದಲ ಸಂಭವಿಸಬೇಕಿದ್ದು ಜನರ ತಾಳ್ಮೆಯಿಂದ ಎಲ್ಲವೂ ಬಗೆಹರಿಯುತ್ತದೆ. ಕಾದಂಬರಿಯಲ್ಲಿ ಬರುವ ಮೊದಲವರ್ಗದ ಕೂಲಿ, ವ್ಯಾಪಾರಸ್ಥ, ಪಾತ್ರಗಳು ಹಲವಾರು ವೈರುಧ್ಯಗಳ ಮಧ್ಯೆಯೂ ಸಾಮಾಜಿಕ ಸ್ವಾಸ್ಥ್ಯ ಮುಖ್ಯವಾಗುತ್ತದೆ. ಅವರು ವಿಭಿನ್ನ ನೆಲೆಗಟ್ಟಿನ ಪಾತ್ರಗಳನ್ನು ರಚಿಸಿದ್ದರೂ ಉದ್ವೇಗದ ಈಡೇರಿಕೆಗಾಗಿ ಆ ಎಲ್ಲಾ ಪಾತ್ರಗಳು ಶ್ರಮಿಸುವಂತೆ ನೋಡಿಕೊಳ್ಳುತ್ತಾರೆ. ಸತ್ಯದ ಸಾಕ್ಷಾತ್ಕಾರ, ಬೌದ್ಧಿಕಜ್ಞಾನದ ಅರಿವು ಅವರ ಕೃತಿಗಳ ಮುಖ್ಯ ಆಶಯವಾಗಿರುತ್ತದೆ. ಆಲನಹಳ್ಳಿ ಹಾಗೂ ತೇಜಸ್ವಿ ಅವರ ಕಾದಂಬರಿಗಳಲ್ಲಿ ಬಹುತೇಕ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆ ಚಿತ್ರಿತವಾಗಿದೆ. ಆಲನಹಳ್ಳಿಯವರ ಕಾದಂಬರಿಗಳ ಅರೆಮಲೆನಾಡಿನ ಸಾಮಾಜಿಕ ಮೌಲ್ಯವ್ಯವಸ್ಥೆಯ ವಿವಿಧ ಮನಸ್ಥಿತಿಯ ಪಾತ್ರಗಳಿದ್ದರೆ ತೇಜಸ್ವಿ ಅವರಲ್ಲಿ ಮಲೆನಾಡಿನ ಶಾಂತ ವಿದ್ಯಾವಂತ ಪಾತ್ರಚಿತ್ರಣಳು ಗೋಚರಿಸುತ್ತವೆ.

ಆಲನಹಳ್ಳಿಯವರ 'ಭುಜಂಗಯ್ಯನ ದಶಾವತಾರ' ಕೃತಿಯಲ್ಲಿ ಭುಜಂಗಯ್ಯನ ವ್ಯವಸಾಯದ ಮೇಲಿನ ಅನಾಶಕ್ತಿಯಿಂದ ಕೃತಿ ಆರಂಭವಾಗುತ್ತದೆ. ಭೂಮಿಯನ್ನೇ ನಂಬಿ ಬದುಕುವುದು ಸಾಧ್ಯವಿಲ್ಲ ಎಂಬುದು ಒಟ್ಟಾರೆಯಾಗಿ ಭುಜಂಗಯ್ಯನ ಅಭಿಪ್ರಾಯ. ಮಳೆರಾಯನನ್ನು ನಂಬಿ ಕೂತಿರುವುದೇ ರೈತ ಆರ್ಥಿಕವಾಗಿ ಹಿಂದುಳಿದಿರುವುದಕ್ಕೆ ಕಾರಣವಾಗಿದೆ. ಭುಜಂಗಯ್ಯ ಸದಾ ಚಟುವಟಿಕೆಯಲ್ಲಿರುವುದನ್ನು ಬಯಸುವುದರಿಂದ, ಅರೆ ಉದ್ಯೋಗದ ಅನಿಶ್ಚಿತ ಸ್ಥಿತಿಯ ವ್ಯವಸಾಯವನ್ನು ವಿರೋಧಿಸುವುದು ಸಕಾರಣವಾಗಿದೆ. ಹೊಟೇಲು ಉದ್ಯಮವನ್ನು ಆರಂಭಿಸುವ ಅವನ ಉದ್ದೇಶ ಸ್ಪಷ್ಟವಾಗಿ ಈ ಹಿನ್ನೆಲೆಯನ್ನು ಹೊಂದಿದೆಯಾದರೂ, ಅವುಗಳ ಮೂಲಕ ತಾನು ಊರಿಗೆ ಗಣ್ಯವ್ಯಕ್ತಿಯೂ ಆಗಬೇಕೆಂಬ ಆಸೆ ಇದೆ. ಆದರೆ ಇವರ ಹೊಸ ಸಾಹಸ ಆಧುನಿಕ ಗಾಳಿಯನ್ನು ಸೇವಿಸಬಯಸುವವರಿಗೆ ಹಿತಕರವಾಗಿಯೂ, ಲಿಂಗಾಯಿತನಾಗಿ ತಟ್ಟೆಲೋಟದ ಕನಿಷ್ಟ ಉದ್ಯೋಗಕ್ಕೆ ಇಳಿದ ಬಗೆಗೆ ಜಾತಿಬಾಂಧವರಲ್ಲಿ ಅಸಮಾಧಾನವೂ. ಇದರಿಂದ ಆರ್ಥಿಕವಾಗಿ ಈತ

ಮುಂದುವರಿದುಬಿಡಬಹುದೆಂಬ ಆಗದವರ ಮತ್ಸರವೂ ಏಕಕಾಲದಲ್ಲಿ ಜಾಗೃತವಾಗುತ್ತದೆ. ಮಳೆ ಬಂದಾಗಷ್ಟೆ ಎದ್ದು ಕೂರುತಿದ್ದ ಮಾದಳ್ಳಿಗೆ ಇದರಿಂದ ಒಂದು ಬಗೆಯ ಚಲನೆಯಲಕ್ಷಣ ಗೋಚರವಾಗುತ್ತದೆ. ಪೂರ್ಣವಾಗಿ ಸಾಂಪ್ರದಾಯಿಕವಾಗಿರುವ ಹಳ್ಳಿಯ ವಾತಾವರಣವು ಭುಜಂಗಯ್ಯನ ಸಾಹಸದಲ್ಲಿ ಸ್ವಲ್ಪಮಟ್ಟಿಗೆ ಮುಕ್ತಗೊಳ್ಳುತ್ತಿದ್ದರೂ ಎಲ್ಲವನ್ನು ಒಪ್ಪಿಕೊಳ್ಳಲು ಸಿದ್ಧವಾಗಿಲ್ಲ. ಇಂಥ ಸ್ಥಿತಿಗೆ ಮೊದಲ ಆಘಾತ ಬಳೆಶೆಟ್ಟರ ಮಗಳು ಸುಶೀಲಳನ್ನು ಭುಜಂಗಯ್ಯ ಇಟ್ಟುಕೊಂಡಿದ್ದಾರೆ ಎಂಬುದು ಪುರುಷಪ್ರಧಾನ ಸಮಾಜದ ಲಕ್ಷಣಗಳನ್ನು ಪ್ರತಿನಿಧಿಸುತ್ತಿರುವ ಭುಜಂಗಯ್ಯ, ಸುಶೀಲಳತ್ತ ತನ್ನ ಗಮನಹರಿಯುವುದು ಸಹ ಎಂದು ತಿಳಿಯುತ್ತಾನೆ. ಆದರೆ ಆರಂಭದಲ್ಲಿ ಇಂಥ ಸೆಳೆತದಿಂದ ದೂರವಿರಲು ಪ್ರಯತ್ನಿಸುತ್ತಾನೆ. ಅವನು ಹಾಗೆ ಪ್ರಯತ್ನಪಟ್ಟರೂ ಅದು ಇವನನ್ನು ಸುತ್ತಿಕೊಳ್ಳುತ್ತದೆ.

ಸಾಂಪ್ರದಾಯಿಕ ಆವರಣದಲ್ಲಿ ಗಂಡು ಇಚ್ಛಿಸಿದ ಹೆಣ್ಣಿನ ಬಗೆಗೆ ಹೇಗೆ ಪ್ರತಿಕ್ರಿಯಿಸಬಹುದೋ ಹಾಗೆಯೇ ಸುಶೀಲಳ ಬಗೆಗೆ ನಡೆದುಕೊಳ್ಳುತ್ತಾನೆ. ಭುಜಂಗಯ್ಯನ ಆಸಕ್ತಿಯು ಹಳ್ಳಿಯಲ್ಲಿ ಬೇರೊಂದು ಆಯಾಮ ಪಡೆದು ಪಾರ್ವತಿಯನ್ನು ಕೆರಳಿಸಿಬಿಡುತ್ತದೆ. ತನಗೆ ಮೀಸಲಾದ ಗಂಡನ್ನು ಇನ್ನೊಂದು ಹೆಣ್ಣು ಹಂಚಿಕೊಳ್ಳುವುದನ್ನು ಇಷ್ಟಪಡದ ಭಾರತೀಯತೆಯು, ಪಾರ್ವತಿಯನ್ನು ಬಹಿರಂಗಕ್ಕೆ ಎಳೆದುತರುತ್ತಾನೆ. ಇದರಿಂದ ತನಗಾದ ಅವಮಾನವನ್ನು ಸಹಿಸಿಕೊಳ್ಳಲಾಗದೆ ಸುಶೀಲ ಮೈಸೂರು ಸೇರುತ್ತಾಳೆ. ಭುಜಂಗಯ್ಯನ ಕೌಟುಂಬಿಕ ನೆಮ್ಮದಿಕೆಡುತ್ತದೆ. ಸಮೂಹವು ಅವನ ಪರ–ವಿರೋಧ ಪಾತ್ರವಾಗಿ ಹಂಚಿಹೋಗುತ್ತದೆ. ಇದರಿಂದಾದ ಪರಿಣಾಮವೆಂದರೆ ಪಾರ್ವತಿಗೆ ಬಡಿತ ಮತ್ತು ಸುಶೀಲಳನ್ನು ಹೆಂಡತಿಯಾಗಿ ಸ್ವೀಕರಿಸಿದ್ದು ಒಂದು ರೀತಿಯಲ್ಲಿ ಇದು ಸಾಮಾಜಿಕ ಸಮಸ್ಯೆಯನ್ನು ಸರಳೀಕರಿಸಿದಂತಾಗಿದೆ. ಮಧ್ಯವಯಸ್ಸಿನ ಈಗಾಗಲೇ ಹೆಂಡತಿ ಮಕ್ಕಳಿರುವ ಭುಜಂಗಯ್ಯನನ್ನು ಆಗತಾನೆ ಹೆಣ್ಣಾಗಿ ಅರಳುತ್ತಿರುವ ಸುಶೀಲ ತನ್ನ ಕೈವಶಮಾಡಿಕೊಳ್ಳುತ್ತಾಳೆ. ಅಂದರೆ ಇದರಲ್ಲಿ ಅವಳು ಮಾತ್ರವೇ ಕಾರಣಳಲ್ಲ. ಆದರೆ ಅವಳ ಜೀವನದ ಆಯ್ಕೆಯು ಗೊಂದಲದ್ದಾಗಿದೆ. ಸುಶೀಲ ತನ್ನ ನಿರ್ಧಾರದ ಮೂಲಕ ಪಾರ್ವತಿಯ ಬದುಕನ್ನು ಪಲ್ಲಟಗೊಳಿಸುತ್ತಾನೆ. ಆರಂಭದ ಇವರ ಕ್ರಿಯೆ ದೈಹಿಕ ಹಸಿವಿಗೆ ಸಂಬಂಧಿಸಿದ್ದಾಗಿದೆ. ಹೋಟೆಲಿನಲ್ಲಿ ಭುಜಂಗಯ್ಯ ಸುಶೀಲ ಬೇರೆ ಬೇರೆಯಾಗಿ ಮಲಗಿದ್ದರೂ ಅವಳಲ್ಲಿ ಕಾಮದ ಲಕ್ಷಣಗಳು ಕಾಣಿಸಿಕೊಳ್ಳುವುದು ಮತ್ತು ಮೈಸೂರಿನಲ್ಲಿ ಶೆಟ್ಟರೊಡಗೂಡಿ ನಾಟಕ ನೋಡುವ ಸಂದರ್ಭದಲ್ಲಿ ಅವರಿಬ್ಬರೂ ಪರಸ್ಪರ ಲೈಂಗಿಕ ಸ್ಪರ್ಶಗಳಲ್ಲಿ ಉದ್ರೇಕಗೊಳ್ಳುವುದು. ಒಬ್ಬರು–ಇನ್ನೊಬ್ಬರನ್ನು ಬಿಟ್ಟಿರಲಾರದ ಸ್ಥಿತಿಗೆ ನಿದರ್ಶನವಾಗಿದೆ. ಭುಜಂಗಯ್ಯ ಹಳ್ಳಿಯಿಂದ ನಾಪತ್ತೆಯಾಗಿದ್ದಾಗ ಮೈಸೂರಿನ ಶ್ರೀಮಂತ ಮನೆಯೊಂದರಲ್ಲಿ ತನ್ನ ಅವ್ವನ ವಯಸ್ಸಿನ ಹೆಂಗಸಿನೊಡನೆ ಲೈಂಗಿಕ ಸಂಬಂಧಪಡೆದಿದ್ದವನು.

ಇದರಿಂದ ಅವನಿಗೆ ಚಂದ ಕಾಣುವ ಹೆಣ್ಣುಗಳು ಕಂಡಾಗ ಮನಸ್ಸು ಚಂಚಲವಾಗುತ್ತದೆ. ಈಗ ಸುಶೀಲಳ ಸಂದರ್ಭದಲ್ಲಿ ಅದು ಮತ್ತೆ ಬೋರ್ಗರೆಯುತ್ತದೆ. ಆದರೆ ಅವಳನ್ನು ಮದುವೆಯಾಗಲು ಪಾರ್ವತಿ ಮತ್ತು ಆಕೆಯ ತವರು ಮನೆಯ ಕ್ರೌರ್ಯವೂ ಹಾಗೂ ಸುಶೀಲಳ ಅಸಹಾಯಕ ಸ್ಥಿತಿಯೂ ಕಾರಣವಾಗಿದೆ. ಇದಕ್ಕೆ ಹಿನ್ನೆಲೆಯಾಗಿ ಬಡಿದರೆ ಮಾತ್ರವೇ ಹೆಣ್ಣನ್ನು ಹಿಡಿತದಲ್ಲಿಟ್ಟುಕೊಳ್ಳಲು ಸಾಧ್ಯ ಎಂಬ ಭುಜಂಗಯ್ಯನ ದುಡುಕುತನವೂ ಇದೆ. ಗಂಡು ಎಷ್ಟು ಹೆಣ್ಣನ್ನಾದರೂ ಆಳಬಹುದು ಎಂಬ ಭಾರತೀಯ ಸಾಂಪ್ರದಾಯಿಕ ಧೋರಣೆಯನ್ನು ಭುಜಂಗಯ್ಯ ಯಾವ ಹಿಂಜರಿಕೆಯೂ ಇಲ್ಲದೆ ಒಪ್ಪಿಕೊಂಡಿದ್ದಾನೆ. ವ್ಯವಸ್ಥೆಯೇ ಹಾಗಿರುವಾಗ ದೇವೀರವ್ವನಾದಿಯಾಗಿ ಮಾದಳ್ಳಿಯ ಹೆಂಗಸರು ಪಾರ್ವತಿಯದೇ ತಪ್ಪು ಎಂದು ಪ್ರತಿಕ್ರಿಯಿಸುತ್ತಾರೆ. ಯಾಕೆಂದರೆ ಅವರೆಲ್ಲರೂ ಅವರವರ ಗಂಡಂದಿರ ಹಿಡಿತದಲ್ಲಿರುವವರೇ ಆದರೆ ಪಾರ್ವತಿ ಸುಶೀಲಳ ಸಂದರ್ಭವನ್ನು ತನ್ನ ಬದುಕಿನ ಮೌನ ಸವಾಲಾಗಿ ಸ್ವೀಕರಿಸುವುದರಿಂದ ಚಲನೆಯ ಸ್ಥಿತಿಯೂ ವಿಘಟನೆಯತ್ತ ಸರಿಯುತ್ತದೆ.

'ಚಿದಂಬರ ರಹಸ್ಯ' ಕಾದಂಬರಿಯ ಕೆಸರೂರು ಗ್ರಾಮ ಏಲಕ್ಕಿ ಬೆಳೆಗೆ ಪ್ರಪಂಚದಲ್ಲೇ ಹೆಸರುವಾಸಿಯಾಗಿದ್ದ ತಾಣ ಅಧಿಕಾರಿಗಳ ಭ್ರಷ್ಟಾಚಾರದಿಂದಾಗಿ ಕಾನೂನುಗಳನ್ನು ಸಡಿಲಗೊಳಿಸಿ ಸುಲೇಮಾನ್ ಭೇರಿಗೆ ಅನುಕೂಲ ಮಾಡಿಕೊಟ್ಟು ಇಡೀ ಸಂಸ್ಕೃತಿಯೇ ನಾಶವಾಗಲು ಕಾರಣರಾಗಿದ್ದಾರೆಂದು ತಿಳಿಸುತ್ತಾರೆ. ಡಾ. ರಾಮಚಂದ್ರ ಮುಂತಾದ ಶಿಕ್ಷಕರಿಂದ ಅಲ್ಲಿನ ಕಾಲೇಜು ಶಿಕ್ಷಣ ಸ್ವಲ್ಪ ಸುಧಾರಿಸಿದ್ದು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಚಿಂತನೆ ಅಭಿವ್ಯಕ್ತಿಗೆ ಪ್ರೇರೇಪಿಸಿದ್ದಾರೆ. ಜಾತಿವಿನಾಶಸಂಘ, ವಿಚಾರವಾದಿ ಆಂದೋಲನ ಮುಂತಾದ ಸಂಘಟನೆ ಮೂಲಕ ಸಾಮಾಜಿಕ ಕ್ರಾಂತಿಗೆ ತರುಣಪಡೆ ಹಾತೊರೆಯುತ್ತದೆ. ಆದರೆ ಕಾಲೇಜಿನ ಪ್ರಾಂಶುಪಾಲರು ಸಭೆಯಲ್ಲಿ ಪ್ರಶ್ನೆ ಕೇಳಲು ಬಿಟ್ಟರೆ ಸಭೆಯನ್ನು ಗೊಂದಲಗೊಳಿಸುತ್ತಾರೆಂದು ಅವರನ್ನು ಹತ್ತಿಕ್ಕಲು ಪ್ರಯತ್ನಿಸುವುದು ಸಾಮಾಜಿಕ ಮೌಲ್ಯ ಕುಂಠಿತವಾಗಿ ಗೋಚರಿಸುತ್ತದೆ. ಕೆಸರೂರಿನ ಹೈಬ್ರಿಡ್ ತಳಿ ಸಂಶೋಧನೆಗಾಗಿ ಬಂದಿದ್ದ ಡಾ. ಜೋಗಿಹಾಳರು ನಿಗೂಢವಾಗಿ ಸಾವನ್ನಪ್ಪಿದ್ದರು. ಏಲಕ್ಕಿ ತಳಿ ನಾಶದ ಹಂಚಿನಲ್ಲಿದ್ದುದ್ದರಿಂದ ಶಮಾನಂದ ಅಂಗಡಿ ಕಾರಣ ತಿಳಿಯಲು ಕೆಸರೂರಿಗೆ ಆಗಮಿಸಿದ್ದರು. ಸಂಶೋಧನಾ ಸಂಸ್ಥೆಯ ಡಾ. ಪಾಟೀಲರೊಂದಿಗೆ ಜೋಗಿಹಾಳರು ಮಾಡಿದ ಕೆಲಸಗಳ ಬಗ್ಗೆ ಪರಿಶೀಲಿಸುತ್ತಾನೆ. ಆದರೆ ಏನೂ ಪ್ರಯಾಜನವಾಗುವುದಿಲ್ಲ. ಅಂಗಾಡಿ ಹಾಗೂ ಏಲಕ್ಕಿ ಸಂಶೋಧನಾ ಸಂಸ್ಥೆ ಮೇಲೆ ಅನುಮಾನದಿಂದ ದ್ವೇಷ ಕಾರುತ್ತಿದ್ದ ಸುಲೇಮಾನ್ ಕಡೆಯವರು ವಿಜ್ಞಾನಿ ಮಹಮ್ಮದ್‌ನನ್ನು ಸಾಯಿಸಲು ಸಂಚುರೂಪಿಸುತ್ತಾರೆ. ಏಲಕ್ಕಿತಳಿ ಅರಸಿ ಹೊರಟ ಪಾಟೀಲರು ಕೇಪಿನ ಹುಂಡೆಯ ಸಿಡಿತದಿಂದ ಸಾವನ್ನಪ್ಪುತ್ತಾರೆ. ಮತೀಯ ವಾದಿಗಳು ಕಾಡಿಗೆ ಬೆಂಕಿಹಚ್ಚುತ್ತಾರೆ. ಕೆಸರೂರಿನ

ಹೈಬ್ರಿಡ್ ತಳಿ ನಾಶದೊಂದಿಗೆ ಸಂಸ್ಕೃತಿಯೂ ನಾಶವಾಗುತ್ತದೆ. ಇದೆಲ್ಲವನ್ನು ಮೂಕ ವಿಸ್ಮಿತರಾಗಿ ನೋಡಿಕೊಂಡು ಪೊಲೀಸ್ ಇಲಾಖೆ ಇರುವುದು ವ್ಯವಸ್ಥೆಯ ಅಧೋಗತಿಗೆ ಸೂಕ್ತ ನಿದರ್ಶನವೆಂಬುದನ್ನು ಶೋಧಿಸಬಹುದು.

ಇಲ್ಲಿ ವೈಯಕ್ತಿಕ ಮೌಲ್ಯಗಳ ಗ್ರಹಿಕೆಯ ಮಿತಿಯನ್ನು ಕಂಡುಕೊಂಡು ಆ ಮಿತಿಯಲ್ಲಿ ಸಾಮಾಜಿಕ ವೈರುಧ್ಯಗಳ ಹಿನ್ನೆಲೆಯಲ್ಲಿನ ಜೀವನವನ್ನು ಕಥನಸಾಹಿತ್ಯವು ಪರೀಕ್ಷಿಸುತ್ತದೆ. ಪಾತ್ರಗಳು ಇವುಗಳನ್ನು ಮೈಗೂಡಿಸಿಕೊಂಡಿವೆ. ವ್ಯಕ್ತಿ ಎನ್ನುವುದು ಸದ್ಯ ಒಂದು ಮುಖವಾದರೆ ಸಮಾಜವು ಅದರ ಇನ್ನೊಂದು ಮುಖವಾಗಿದೆ. ವ್ಯಕ್ತಿ ಸಮಾಜಗಳು ದ್ವಂದ್ವ ಸತ್ಯಗಳಾಗಿವೆ. ಈ ಸತ್ಯಗಳ ಮಾದರಿಗಳನ್ನು ವಿಭಿನ್ನ ದೃಷ್ಟಿಕೋನದಿಂದ ಸಾಹಿತ್ಯದಲ್ಲಿ ಗ್ರಹಿಸುವುದು ಆಲನಹಳ್ಳಿ ಹಾಗೂ ತೇಜಸ್ವಿಯವರ ಕೃತಿಗಳು ಪಡೆಯುವ ಖಚಿತವಾದ ಸಾರ್ಥಕ್ಯಗಳು.

ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನಸಾಹಿತ್ಯದಲ್ಲಿ ಸಾಮಾಜಿಕ ಹಾಗೂ ವೈಯಕ್ತಿಕ ಮೌಲ್ಯಗಳ ಮುಖಾಮುಖಿಯಲ್ಲಿ ವ್ಯಕ್ತಿನಿಷ್ಠ ಮೌಲ್ಯಗಳ ನಾಶ ಹಾಗೂ ದುರಂತದ ಚಿತ್ರಣ. ದುರಂತತೆಯಲ್ಲಿ ಮನುಷ್ಯನು ಬದುಕಿನಲ್ಲಿ ಕಾಣುವ ಜೀವಂತಿಕೆ ಹಾಗೂ ಪ್ರಯೋಗಶೀಲತೆಯನ್ನು, ಸೃಜನಶೀಲತೆಯನ್ನು ಸಮಾಜದಲ್ಲಿ ಕಾಣದಿದ್ದರೂ ಪಾತ್ರಗಳ ಮೂಲಕ ಸಮಾಜಕ್ಕೆ ಚಲನಶೀಲತೆಯನ್ನು ತಂದುಕೊಟ್ಟಿದ್ದಾರೆ ಎಂದರೆ ತಪ್ಪಾಗಲಾರದು. ಇಲ್ಲಿ ಆಧ್ಯಾತ್ಮಿಕ ಅಂಶಗಳನ್ನು ಗ್ರಹಿಕೆಗೆ ತಂದು ಕೂಡುವಿಕೆ ಬಹಳ ವಿಶಿಷ್ಟವಾಗಿದೆ. ಮೌಲ್ಯಗಳ ತಿಕ್ಕಾಟದಲ್ಲಿ ಮನುಷ್ಯನು ಅನುಭವಿಸುವ ಪಲಾಯನವಾದ ಮತ್ತು ಅಸಹಾಯಕತೆಗಳು ಅವನನ್ನು ಸಾವಿನ ಬಗ್ಗೆ ಯೋಚಿಸುವಂತೆ ಮಾಡುತ್ತದೆ. ಜೀವನದ ಪ್ರತಿಯೊಂದು ಅನುಭವಗಳನ್ನು ಸಂಕಲ್ಪದಿಂದಲೇ ಅನುಭವಿಸುವಿಕೆಯನ್ನು ಅದಕ್ಕೆ ಬೆನ್ನು ತಿರುಗಿಸುವುದನ್ನು ಇಲ್ಲಿ ಒಪ್ಪಿತವಾಗುವುದಿಲ್ಲ. ನೇರವಾಗಿಯೇ ಜೀವನವನ್ನು ಎದುರಿಸುವಿಕೆಯ ಕಡೆಗೆ ಹೆಚ್ಚಿನ ಒಲುಮೆ, ಮೌಲ್ಯಗಳ ತಿಕ್ಕಾಟದಲ್ಲಿ ಮನುಷ್ಯನ ವಿಕಾರ ರೂಪುಗಳು ಅದಕ್ಕೆ ಪೂರಕವಾದ ಸನ್ನಿವೇಶ, ಸಂದರ್ಭಗಳ ನಿರ್ಮಾಣ ಇವುಗಳ ಸೃಷ್ಟಿಸುವಿಕೆಯಲ್ಲಿ ಪರಿಸರವು ಸಹಾಯಕವಾಗಿಯೇ ನಿಲ್ಲುವುದು. ಮನುಷ್ಯನ ವರ್ಣೀಯ ಚಹರೆ, ಮಾದರಿಗಳನ್ನು ಸಮಾಜದ ಗ್ರಹಿಕೆಗೆ ತಂದು ಕೊಡುತ್ತದೆ. ಇಲ್ಲಿ ನಾವು ಮನುಷ್ಯನ ಪ್ರವೃತ್ತಿಗಳ ಒತ್ತಡಗಳಿಂದಲೇ ಅವನ ಜೀವನ ಕ್ರಮದಲ್ಲಿ ಪಲ್ಲಟವನ್ನು ಗುರುತಿಸಬಹುದು.

ಮೌಲ್ಯಗಳ ಮುಖಾಮುಖಿಯಲ್ಲಿ ಮನುಷ್ಯನ ಹುಡುಕುವಿಕೆಯು ನಿರಂತರವಾಗಿ ಬೆಳೆಯುತ್ತಿರುವುದು ತನ್ನ ವ್ಯಕ್ತಿತ್ವದ ಬಗ್ಗೆ ಪ್ರಶ್ನೆಗಳನ್ನು ಹಾಕಿಕೊಳ್ಳುತ್ತಾನೆ. ಅದರ ಉತ್ತರ ಪಡೆಯಲು ಬದುಕಿನ ಶೋಧನೆಯಲ್ಲಿ ನಿರತನಾಗುತ್ತಾನೆ. ಆಗ ಅವನಿಗೆ ಸಾಮಾಜಿಕ ಮೌಲ್ಯಗಳ

ಮೂಲ ಸ್ವರೂಪಗಳು ಕಾಣಿಸುತ್ತವೆ. ಅವುಗಳನ್ನು ವ್ಯಕ್ತಿನಿಷ್ಠ ಅನುಭವಗಳ ಮೂಲಕವೇ ಪರಿಚಯಿಸಲು ಮುಂದಾಗುತ್ತಾನೆ. ಸಾಮಾಜಿಕ ಮೌಲ್ಯವಾಗಲಿ, ವೈಯಕ್ತಿಕ ಮೌಲ್ಯಗಳಾಗಲಿ ಒಂದು ಗಡಿಯ ಮಿತಿಯಲ್ಲಿದ್ದರೆ ಬದುಕು ಸುಗಮ. ಯಾವುದೇ ಮೌಲ್ಯ ಮೇಲುಗೈ ಪಡೆದರೆ ಮನುಷ್ಯನ ಬದುಕು ದುರಂತದ ಕಡೆ ಸಾಗುತ್ತದೆ. ಇಲ್ಲಿನ ಬರಹಗಳು ಯಾವುದೇ ನಿಖರವಾದ, ಖಚಿತವಾದ ಬದುಕಿನ ಸತ್ಯವನ್ನು ಹೇಳದಿದ್ದರೂ ಅವುಗಳನ್ನು ಸಮನ್ವಯದ ರೀತಿ ರೂಢಿಸಿಕೊಂಡ ಮನುಷ್ಯನನ್ನು ಮಾತ್ರ ಗುರುತಿಸಲು ಸಾಧ್ಯ.

೬.೩. ನೈತಿಕ ನಿಯಮಗಳನ್ನು ಮೀರಿ ಹೊಸ ನೈತಿಕ ನಿಯಮಗಳನ್ನು ಸೃಷ್ಟಿಸಿಕೊಳ್ಳುವಿಕೆ

ಅನಾದಿ ಕಾಲದಿಂದಲೂ ಮನುಷ್ಯನು ಸಮಾಜದ ನೀತಿ ನಿಯಮದ ಕಟ್ಟಳೆಗಳನ್ನು ನಿರ್ಮಿಸಿಕೊಟ್ಟವನು. ಅನಂತರ ನೀತಿನಿಯಮಗಳನ್ನು ತಾನೇ ಮೀರುವುದು ನಗ್ನಸತ್ಯ. ಕಟ್ಟಳೆಗಳನ್ನು ಅನುಸರಿಸಲು ತನ್ನಿಂದ ಸಾಧ್ಯವಾಗುವುದಿಲ್ಲವೆಂದು ಅರಿತು. ಅವನು ಈ ಕಟ್ಟಳೆಯನ್ನು ಸಮಾಜದ ಮೂಲಕ ಜನರ ಮೇಲೆ ಹೇರುತ್ತಾನೆ. ಇಲ್ಲಿ ಮನುಷ್ಯನ ಸರ್ವಾಧಿಕಾರವು ಮನುಷ್ಯನು ಬೆಳೆದಂತೆಲ್ಲಾ ವಿಚಿತ್ರವಾಗಿ ಪರಿವರ್ತನೆಗೊಳ್ಳುತ್ತಿರುವುದು ಬಹಳ ಪ್ರಸ್ತುತ. ಸಂಪ್ರದಾಯಗಳನ್ನು ನೋಡುವಾಗ ದಾಂಪತ್ಯ ನೀತಿಯು ಭಾರತೀಯ ಸಮಾಜದಲ್ಲಿ ಮದುವೆ ಎಂಬ ಕಟ್ಟುಪಾಡುಗಳಿಗೆ ಒಳಪಟ್ಟಿರುವಂತದ್ದು. ಆದರೆ ಅನಾದಿಕಾಲದಿಂದಲೂ ಮನುಷ್ಯನು ಮದುವೆಯ ಚೌಕಟ್ಟಿನಲ್ಲಿರುವ ದಾಂಪತ್ಯ ನೀತಿಯನ್ನು ಉಲ್ಲಂಘಿಸುತ್ತಲೇ ಬಂದಿದ್ದಾನೆ. ಸಮಾಜವು ಸ್ವಸ್ಥವಾಗಿರಲು ಮದುವೆ ಕುಟುಂಬಳಂತಹ ಸಾಮಾಜಿಕ ಸಂಸ್ಥೆಗಳಿರಬೇಕು. ಅದಕ್ಕಾಗಿ ಕಟ್ಟುಪಾಡುಗಳನ್ನು ರೂಪಿಸಿಕೊಂಡು ಬಂದಿದ್ದಾನೆ. ಆದರೆ ಈ ಚೌಕಟ್ಟನ್ನು, ಕಟ್ಟುಪಾಡುಗಳನ್ನು ಉಲ್ಲಂಘಿಸುವ ಗೂಢಾರ್ಥವನ್ನು ಪ್ರಶ್ನೆ ಮಾಡಿದಾಗ ಈ ರೀತಿಯ ಉತ್ತರವನ್ನು ಕಾಣುತ್ತೇವೆ. ಈ ಮದುವೆ ಕಟ್ಟುಪಾಡಿನ ಎಲ್ಲೆಯನ್ನು ಮೀರಿ ಅನೈತಿಕ ಲೈಂಗಿಕ ಸಂಬಂಧಗಳ ಅನುಭವಗಳನ್ನು ಜೀವಂತವಾಗಿ ವಿಸ್ತರಿಸಿಕೊಳ್ಳುವುದಾಗಿದೆ. ಇದರಿಂದಲೇ ಮನುಷ್ಯ ದಾಂಪತ್ಯ ನೀತಿಯ ಮುರಿದು ಕಟ್ಟುವ ಕೆಲಸವನ್ನು ಕಾಲದಿಂದ ಕಾಲಕ್ಕೆ ಮಾಡಿಕೊಂಡು ಬರುತ್ತಲೇ ಇದ್ದಾನೆ.

ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥೆ ಮತ್ತು ಕಾದಂಬರಿಗಳಲ್ಲಿ ನೈತಿಕ ನಿಯಮವನ್ನು ಮೀರಿ ಹೊಸ ನೈತಿಕ ನಿಯಮಗಳನ್ನು ಸೃಷ್ಟಿಸುವ ಅಂಶಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿರುವುದನ್ನು ಕಾಣಬಹುದು. ಅನೈತಿಕ ಲೈಂಗಿಕ ಸಂಬಂಧಗಳ ಪರಿಣಾಮವಾಗಿ ಒಂದು ಕುಟುಂಬದ ಅಥವಾ ದೇಶದ. ಊರಿನ ಸಾಮಾಜಿಕ ಸ್ಥಿತ್ಯಂತರವನ್ನು ಗುರುತಿಸುತ್ತೇವೆ. ಮನುಷ್ಯನ ಬದುಕು ನಿಶ್ಚಿತವಾಗಿ ಸಾಗುತ್ತಿದ್ದಾಗ ಅವನು ಬದುಕಿನಲ್ಲಿ ಹೊಸದರ

ಹುಡುಕುವಿಕೆಗಾಗಿ ಕೈಹಚ್ಚುತ್ತಾನೆ. ಹೊಸ ಹೊಸ ಅನುಭಗಳಿಗಾಗಿ ಚಡಪಡಿಕೆ ಬಯಕೆಗಳ ತೃಪ್ತಿಗಾಗಿ ಹಾತೊರೆಯುವುದು ಅವನಿಗೆ ಬದುಕಿನ ಜೀವಂತತೆಯ ಲಕ್ಷಣವಾಗಿ ಕಂಡುಬರುತ್ತವೆ. ಮನುಷ್ಯ ನಿರ್ಮಿತವಾಗುವ ಈ ಹೊಸದರ ಬಯಕೆಗಳನ್ನು ತನ್ನ ಅನುಭವಕ್ಕೆ ಅಭಿವ್ಯಕ್ತಿಗೊಳಿಸಿಕೊಳ್ಳಬೇಕು ಎಂದು ಆತುರದ ಮನಸ್ಥಿತಿಯನ್ನು ಇಲ್ಲಿ ಗುರುತಿಸಲು ಸಾಧ್ಯ. ಈ ಅನುಭವಗಳಿಂದಲೇ ಮನುಷ್ಯನು ಪರಿಪೂರ್ಣಗೊಳ್ಳಲು ಮತ್ತು ಪರಿಪಕ್ವಗೊಳ್ಳಲು ಸಾಧ್ಯ ಎಂಬ ಪೂರ್ವಗ್ರಹ ಪೀಡಿತನಾಗಿ ಲೈಂಗಿಕ ಸಂಬಂಧವನ್ನು ಸೃಷ್ಟಿಸಿಕೊಳ್ಳಲು ತಯಾರಾಗುತ್ತಾನೆ. ಅವನು ಪ್ರಪಂಚಕ್ಕೆ ತಾನು ಬದುಕಿನಲ್ಲಿ ಆಸಕ್ತಿಯನ್ನು ಕಳೆದುಕೊಂಡಿಲ್ಲವೆಂದು ತಿಳಿಸಲು ತನ್ನ ವೈಯಕ್ತಿಕ ಅನುಭವಗಳನ್ನು ಪ್ರಾಮಾಣಿಕತೆಯಿಂದ ಸಮಾಜೀಕರಿಸುತ್ತಾನೆ. ಗಂಡುಹೆಣ್ಣುಗಳ ಸಂಬಂಧಗಳ ಸ್ವರೂಪಗಳಿಗೆ ಲೈಂಗಿಕ ಸ್ವರೂಪಗಳು ಪ್ರತಿಯೊಬ್ಬ ಮನುಷ್ಯನಲ್ಲೂ ಹಲವು ಬಗೆಗಳಲ್ಲಿ ಇರುತ್ತದೆ. ಆದರೆ ಈ ಸಂಬಂಧಗಳಿಗೆ ಒಂದು ಚೌಕಟ್ಟನ್ನು ರೂಪಿಸಿಕೊಳ್ಳಲು ಅವನು ತಯಾರಿಲ್ಲ ಸಮಾಜವು ರೂಪಿಸಿರುವ ಚೌಕಟ್ಟನ್ನು ತನ್ನ ಶಕ್ತಿಮೀರಿ ಮೀರುವುದಕ್ಕೆ ಪ್ರಯತ್ನಿಸುತ್ತಾನೆ. ತನ್ನದೇ ಇಂಥಹ ಕಲ್ಪಿತ ಪ್ರಪಂಚದಲ್ಲಿ ಸ್ಪಷ್ಟವಾಗಿ ಪರಿಹರಿಸಲು ಇಷ್ಟಪಡುತ್ತಾನೆ. ಇದಕ್ಕೆ ಅಡೆತಡೆಗಳು ಬಂದಾಗ ತನ್ನ ಚಹರೆಯ ರೂಪಗಳನ್ನು ಬದಲಾಯಿಸಿಕೊಳ್ಳುತ್ತಾನೆ.

ತೇಜಸ್ವಿಯವರ 'ಚಿದಂಬರ ರಹಸ್ಯ' ಬದುಕಿನ ಸಂಕೀರ್ಣವಾದ ಸಮಸ್ಯೆಗಳಿಗೆ ಮೈಚಾಚಿರುವ ಹಲವು ರಹಸ್ಯಗಳ ಸತ್ಯಾನ್ವೇಷಣೆಗೆ ಹೊರಟಿರುವ ಸಾಮಾಜಿಕ ಕಾಳಜಿಯುಳ್ಳ ಕಾದಂಬರಿಯಾಗಿದೆ. ಸಮಾಜವಾದಿ ಚಳುವಳಿ, ರೈತಚಳುವಳಿ, ರಾಜಕೀಯ, ಶೈಕ್ಷಣಿಕ ಪ್ರಭಾವಗಳಿಂದ ಪರಿವರ್ತನೆಯ ಹಾದಿ ತುಳಿದ ನವ್ಯ ಕಾಲಘಟ್ಟದ ಅಂತ್ಯದಲ್ಲಿ ಹಾಗೂ ನವ್ಯೋತ್ತರ ಕಾಲಘಟ್ಟದ ಆರಂಭದಲ್ಲಿ ರಚಿತವಾದ ಈ ಕೃತಿಯಲ್ಲಿ ಮಾನಸಿಕ ದ್ವಂದ್ವ, ಅನಾಥಪ್ರಜ್ಞೆ, ಹಿಂಜರಿಕೆ ಮುಕ್ತ ಲೈಂಗಿಕ ಕಾಮನೆಗಳ ಅಭಿವ್ಯಕ್ತಿ ಮುಂತಾದ ನವ್ಯ ಕಾಲದ ಸಂವೇದನೆಗಳು ತಂತ್ರ ಆಶಯಗಳು ಕೃತಿಯಲ್ಲಿ ಕಾಣಸಿಗುತ್ತವೆ. ಕೆಸರೂರು ಸಾಮಾಜಿಕ ಸಮಸ್ಯೆಗಳ ಆಗರವಾಗಿದ್ದು ವಾಚ್ಯಾರ್ಥ ಹಾಗೂ ವ್ಯಂಗ್ಯಾರ್ಥಗಳನ್ನು ಸೂಚಿಸುತ್ತದೆ. ಕಾಡಿನ ಲಂಟಾನಕ್ಕೆ ಬೆಂಕಿ ಬೀಳುವುದು ಪ್ರೇಮಿಗಳಿಬ್ಬರು ಹೊಗೆ ತುಂಬಿರುವ ವಾತಾವರಣದಿಂದ ಪಾರಾಗಿ ಹೊರಬಂದು ಸಾಮಾಜಿಕ ಗೊಂದಲಗಳಲ್ಲಿ ಸಿಲುಕಿರುವ ಸಾಮಾಜಿಕ ಜಿಗಟಿನ ವಿವರಣೆಯನ್ನು ಕಾದಂಬರಿ ನೀಡುತ್ತದೆ. ನೈತಿಕ ನಿಯಮಗಳನ್ನು ಮೀರಿ ಹೊಸ ನೈತಿಕ ನಿಯಮಗಳನ್ನು ಸೃಷ್ಟಿಸಿಕೊಳ್ಳುವತ್ತ ಹಪಹಪಿಸುವುದು ಕಂಡುಬರುತ್ತದೆ. ಕೆಸರೂರಿನ ಕ್ರಾಂತಿಕಾರಿಗಳಾದ ಇಂಗ್ಲಿಷ್‌ಗೌಡ, ಚಂದ್ರು, ಜೋಸೆಫ್ ಅಂಗಾರ, ರಮೇಶ ರಫಿ ಇವರಿಗೆ ಜಾತಿ ವಿನಾಶ ಹೋರಾಟದ ಸಂಘಕ್ಕೆ ಫಲ ದೊರಕದಿದ್ದರಿಂದ ಬದಲಾವಣೆ ಬಯಸದ ಸಮಾಜ

ಮತ್ತು ಇವರನ್ನು ಇಷ್ಟಪಡದ ಕೆಸರೂರಿನ ಹುಡುಗಿಯರ ಬಗ್ಗೆ ಅಸಮಾಧಾನವಿದ್ದಿತು. ಯಾವೊಂದು ಹುಡುಗಿಯರೂ ಕಣ್ಣೆತ್ತಿ ಕೂಡ ಇವರನ್ನು ನೋಡದಿದ್ದರಿಂದ ಮಾನಸಿಕ ಹಿಂಜರಿಕೆ ಅನುಭವಿಸುತ್ತಾ ಒಟ್ಟಿನಲ್ಲಿ ಕ್ರಾಂತಿಯಾಗಲೇಬೇಕೆಂದು ಆಶಿಸುತ್ತಾ ಅಡ್ಡಾಡುತ್ತಿದ್ದವರು ಸಂಶೋಧನಾ ಕೇಂದ್ರದ ಸಿದ್ದಪ್ಪ, ಹೆಗ್ಡೆ, ಮಹಮದ್, ಅವರಿಗೆ ಕವಿಯ ಮಾನಸಿಕ ದ್ವಂದ್ವ ಅನಾಥಪ್ರಜ್ಞೆ ಅವರನ್ನು ಕಾಡುತ್ತದೆ. ಗೋಸಾಯಿಗಳೊಂದಿಗಿನ ಆಚಾರಿಯ ಮುಕ್ತ ಲೈಂಗಿಕತೆ, ಕೃಷ್ಣೇಗೌಡನ ಅಸಂಖ್ಯ ಅನೈತಿಕ ಸಂಬಂಧಗಳು, ಜಯಂತಿ ರಫಿಯರ ಮೌಲಿಖ ಭಾವನೆಯ ಸಂಬಂಧಗಳು ನವ್ಯದ ಬಹುಮುಖ್ಯ ಅಭಿವ್ಯಕ್ತಗಳಾಗಿ ಗೋಚರಿಸುತ್ತವೆ. ಚಿಂತನಾಪರ ಹಾಗೂ ಅನುಭವಯುಕ್ತವೂ ಆದ ಕಾಂದಂಬರಿ ಹಲವು ಸಂಜ್ಞೆ ಸಂಕೇತಗಳ ಮೂಲಕ ಸಾಮಾಜಿಕವಾಗಿ ಧನ್ಯಾರ್ಥವನ್ನು ಹೊರಹೊಮ್ಮಿಸುತ್ತಿದೆ.

ಕೆಸರೂರಿನ ಸಮಾಜದಲ್ಲಿ ಉಂಟಾಗಿರುವ ಕ್ಷೋಬೆಯಂತೆ ಕೃಷ್ಣೇಗೌಡನ ಮನೆಯಲ್ಲೂ ಪರಿಸ್ಥಿತಿ ಬಿಗಡಾಯಿಸಿದೆ ಸದಾ ಗಂಡನನ್ನು ದೂರುತ್ತಾ ಜಗಳವಾಡುವ ತಾಯಿ, ಹೆಂಗಸರೆಂದರೆ ಕೇವಲವೆಂದು ಭಾವಿಸಿ ತೆವಲು ತೀರಿಸಿಕೊಳ್ಳುವ ತಂದೆ, ಇವರ ನಡುವೆ ಸಿಲುಕಿ ಎಳೆಯ ಮನಸ್ಸುಗಳು ಕಂಗಾಲಾಗಿ ಹೋಗಿದ್ದವು. ಮುದಿಯಾದ ಸಂಸ್ಕೃತಿಯ ಕೆಸರೂರಿನ ಮನೆ ಮನೆಯೊಳಗಿನ ಎಳೆಯರ ತುಮುಲವಿರಬಹುದು ಇದು. ವಿವೇಕ ವಿವೇಚನೆಗಳನ್ನು ಎಳೆಯ ಜೀವಗಳಿಗೆ ಧಾರೆ ಎರೆದು ಅದರೊಂದಿಗೆ ಅವರು ವಿಕಾಸಗೊಳ್ಳಲು ಅನುವು ಮಾಡಿಕೊಡುವುದರ ಬದಲು ಶಾಸ್ತ್ರ ಆಚಾರದ ನೀತಿನಿಯಮಗಳ ಅದೃಶ್ಯ ಜಾಲದಲ್ಲಿ ಅವರನ್ನು ಸಿಲುಕಿಸಿ ಅದಕ್ಕೆ ಅವರು ವಿಧೇಯರಾಗಿರುವಂತೆ ಮಾಡಲು ತಾವು ಅದನ್ನು ನಂಬಿ ತಮ್ಮ ತಾರುಣ್ಯವನ್ನು ಹಾಳುಮಾಡಿಕೊಂಡು ಮುದಿಯರೆಲ್ಲಾ ಎಳೆ ಹೃದಯದೊಳಹೊಕ್ಕು ಪರಕಾಯ ಪ್ರವೇಶ ಮಾಡಲು ಹವಣಿಸುತ್ತಾ ಕೆಸರೂರನ್ನು ಒಂದು ಬೆಂತರ ಲೋಕ ಮಾಡಿದ್ದರು. ಮೇಲೆ ಏನೂ ಸಂಭಿಸದಂತೆ ನಟಿಸುತ್ತಾ ಬಸ್ಸು ಕಾಯುವವರು ಬಸ್ಸು ಕಾಯುತ್ತಿದ್ದರು ಕಾರ ಕಡೆಯುವವರು ಕಾರ ಕಡೆಯುತ್ತಿದ್ದರು. ಗದ್ದೆಉಳುತ್ತಾ ಮಳೆ ಬರಲಿಲ್ಲವೆಂದು ಗೊಣಗುವವರು ಗೊಣಗುತ್ತಾ ಇದ್ದರು. ಆದರೆ ಜ್ವಾಲಾಮುಖಿಯೊಂದು ಒಳಗೇ ಭಯಂಕರ ಒತ್ತಡ ನಿರ್ಮಿಸುತ್ತಿತ್ತು. ಉಸಿರುಗಟ್ಟಿಸುವ ವಾತಾವರಣದಿಂದ ವಿಮುಕ್ತಿಗೊಳ್ಳಲು ರಫಿಯನ್ನು ಮನಸಾರೆ ಪ್ರೀತಿಸುತ್ತಿದ್ದ ಜಯಂತಿ, ಹುಡುಗರು ತಮ್ಮ ಮನೆಕಡೆ ಬರಲಿ ಎಂದು ಮನೆಗೆ ತಾನೇ ಕಲ್ಲು ಹೊಡೆಯುತ್ತಿರುತ್ತಾಳೆ. ಆದರೆ ಅದೊಂದು ಅತಿಮಾನುಷ ಘಟನೆಯಾಗಿ ರಂಜಿತವಾದ ತಿರುವುಗಳನ್ನು ಪಡೆದುಕೊಳ್ಳುತ್ತದೆ. ಕೆಸರೂರಿನ ಕ್ರಾಂತಿಕಾರಿ ಹುಡುಗರು ಕೃಷ್ಣೇಗೌಡರ ಮನೆಯ ಮೇಲೆ ಕಲ್ಲು ಬೀಳಲು ರಹಸ್ಯವನ್ನು ತಿಳಿಯಲು ಬಂದಾಗ ನೀಲಿ ಕಣ್ಣಿನ ರಫಿಯನ್ನು ಜಯಂತಿ ಅಪ್ಪಿಕೊಳ್ಳುವುದು ನಿಷ್ಕಲ್ಮಶ ಪ್ರೀತಿಯಿಂದ.

ಜಯಂತಿ ರಫಿಯರ ಪ್ರೇಮಪ್ರಕಣದಿಂದ ಸಿಡಿದೆದ್ದ ಕೃಷ್ಣೇಗೌಡ ಕೆಂಡಾಮಂಡಲವಾಗುವುದು ಸಹಜ. "ನೋಡಿ ಹೊಲೇರವನಾದ್ರು ಪವಾಡ ಪರ್ವಾಗಿರಲಿಲ್ಲ ಹಿಂದೂ ಆದ್ರೆ ಸಾಕಿತ್ತು. ಎಲ್ಲಾ ಬಿಟ್ಟು ಹೋಗಿ ತುರುಕ! ತಂದೆ ತಾಯಿ ಇಲ್ಲದ ಬಿಕನಾಸಿ! ಥುತ್, ನಾನಿರೋವರೆಗೆ ಇದೆಲ್ಲಾ ಸಾಧ್ಯವಿಲ್ಲ. ನನ್ನ ಹೆಣ ಬಿದ್ದ ಮೇಲೆ ಅವರು ಕಟ್ಕೋಬೇಕು. ಅಷ್ಟೇ"[೮೬] ಎಂಬ ಮನಸ್ಥಿತಿಯ ಕೃಷ್ಣೇಗೌಡನೂ ಸಹ ಅಂತಿಮವಾಗಿ ಮೌನವಾಗುವುದಕ್ಕೆ ರಾಮಚಂದ್ರನ ಬುದ್ಧಿವಾದ ಕಾರಣವಾಗುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಕೋಮುವಾದಿ ಭಾವನೆಗಳು ಆಳವಾಗಿ ಬೇರು ಬಿಟ್ಟಿರುವುದಕ್ಕೆ ಮೇಲಿನ ಘಟನೆಗಳು ನಿದರ್ಶನವಾಗುತ್ತವೆ. ಪುರಾಣ ಮತ್ತು ಇತಿಹಾಸದ ಹಲವು ಪರಿಕರಗಳು ಜನರ ಭಾವನೆಗಳು ಕೆರಳಿಸುವ ಸಂದರ್ಭವನ್ನು ಅಲ್ಲಗಳೆಯಲಾಗದು. ವಾಸ್ತವತೆಯನ್ನು ವಿಕೃತಗೊಳಿಸಿ ಹಸಿ ಹಸಿ ಸುಳ್ಳುಗಳನ್ನೇ ಸತ್ಯವೆಂದು ಪರಿಭಾವಿಸಿ ಮುನ್ನಡೆಸಿಕೊಂಡ ಪರಿಣಾಮ ಕೋಮು ಸಾಮರಸ್ಯ ಕನಸಿನ ಮಾತಾಗುತ್ತದೆ. "ಹದಿಹರೆಯದ ವಯಸ್ಸಿನ ಭ್ರಾಮಕತೆಯಲ್ಲಿಯೇ ಹುಟ್ಟಿದರೂ ಕೂಡ ಸಹಜತೆಯ ಸೋಂಕಿನಿಂದ ರಫಿ ಮತ್ತು ಜಯಂತಿಯ ಸಂಬಂಧ ಹೊಸ ಬದುಕಿನತ್ತ ಬೆರಳು ಮಾಡಿ ತೋರಿಸುವಷ್ಟು ಸಮರ್ಥವಾಗಿದೆ. ಕಾದಂಬರಿಯ ಕೊನೆಗೆ ಅವರಿಬ್ಬರೂ ಆಡಮ್ ಮತ್ತು ಈವ್‌ರ ಹಾಗೆ ಬೆತ್ತಲೆಯಾಗಿ ನಾಶವಾಗುತ್ತಿರುವ ಕೆಸರೂರಿನಿಂದ ದೂರ ನಿಂತು ಪುನರ್ ಜನ್ಮ ಪಡೆದುಕೊಳ್ಳುತ್ತಾರೆ. ಅವರಲ್ಲಿಯ ಜೀವೋನ್ಮುಖತೆ ಸಂಸ್ಕೃತಿಯೊಂದರ ಅವಸಾನದ ನಂತರವೂ ಉಳಿಯಬಲ್ಲದು ಎನ್ನುವ ಸೂಚನೆ ಕೆಸರೂರನ್ನು ಮುಸುಕಿದ ವಿಷದ ಹೊಗೆಯ ಮಧ್ಯೆ ಹೊಳೆಯುವ ಕಾದಂಬರಿಯ ಕೊನೆಯ ಕಾಣ್ಕೆಯಲ್ಲಿದೆ"[೮೭] ವಿಕೃತಗೊಂಡ ಸಮಾಜದ ರೋಗಗ್ರಸ್ಥ ಬದುಕಿನ ಅವಸಾನ, ಸೃಷ್ಟಿ ಲೋಕದಲ್ಲಿನ ಗರ್ಭದ ಭ್ರೂಣದೊಳಗಿನಿಂದ ಪುನರ್ ಸೃಷ್ಟಿಯ ಆಶಯ ಧ್ವನಿ ಪೂರ್ಣವಾಗಿದೆ. ಜೀವ ಮೂಲದ ಸಂಕೇತಗಳು ಹೊಸ ಕಾಣ್ಕೆಯೊಂದನ್ನು ಹೊತ್ತು ತರುವ ಹವಣಿಕೆಯಲ್ಲಿವೆ. ಕೃತಿ ಕಟ್ಟಿಕೊಡುವ ಅಖಂಡ ಅನುಭವದ ವಿಶ್ಲೇಷಣೆ ಸಮಾಜದ ನಾಡಿ ಬಡಿತವನ್ನೇ ಬಿಂಬಿಸುತ್ತದೆ. ಕಾದಂಬರಿಯ ಕೇಂದ್ರ ಪ್ರಜ್ಞೆ ನಾಡಿನ ಇಂದಿನ ಸ್ಥಿತಿಯನ್ನು ಯಥಾವತ್ತಾಗಿ ಅರ್ಥವತ್ತಾಗಿ ಪ್ರತಿಬಿಂಬಿಸುವಂಥದ್ದು. ಒಂದು ಊರನ್ನು ಪ್ರತಿನಿಧಿಸಿ ನಾಡನ್ನು ಎಚ್ಚರಿಸುವ ಸಾರ್ವತ್ರಿಕ ಮೌಲ್ಯವನ್ನು ಒಳಗೊಂಡಿರುವಂಥದ್ದು. ಪ್ರೀತಿ ಹೃದಯಗಳ ಕಂಪನವನ್ನು ದೂರವಾಗಿಸಿ ಒಂದು ದೇಶವನ್ನು ತನ್ಮೂಲಕ ಒಂದು ಸಂಸ್ಕೃತಿಯನ್ನು ಕಟ್ಟಿಬೆಳೆಸುತ್ತದೆ. ಅನೈತಿಕ ಅಪಮೌಲ್ಯಗಳು ಬಲಿಷ್ಠ ಸಂಸ್ಕೃತಿಯನ್ನೇ ವಿಚ್ಛಿದ್ರಗೊಳಿಸುತ್ತವೆ ಎಂಬ ಸಾರ್ವಕಾಲಿಕ ಸತ್ಯವನ್ನು 'ಚಿದಂಬರರಹಸ್ಯ'

---

೮೬. ಕೆ.ಪಿ.ಪೂರ್ಣಚಂದ್ರತೇಜಸ್ವಿ, 'ಚಿದಂಬರರಹಸ್ಯ', ಪು. ೧೯೩, ೨೦೦೫.
೮೭. ರಾಜೇಂದ್ರಚೆನ್ನಿ, ಅಧ್ಯಯನ, ಪು. ೧೦೬, ೨೦೦೧.

ಬಿತ್ತರಿಸುತ್ತದೆ. ಆದ್ದರಿಂದ ಚಿದಂಬರ ರಹಸ್ಯ ನೈತಿಕ ನಿಯಮಗಳನ್ನು ಮೀರಿ ಹೊಸ ನೈತಿಕ ನಿಯಮಗಳನ್ನು ಸೃಷ್ಟಿಸಿಕೊಳ್ಳುವ ಚಿಂತನ ಪರ ಕಾದಂಬರಿಯೂ ಹೌದು, ಅನುಭವ ಪರ ಕಾದಂಬರಿಯೂ ಹೌದು. ಜೀವನಾನುಭವದ ಮತ್ತು ಈ ಅನುಭವವನ್ನು ಎಲ್ಲ ಸ್ತರಗಳಲ್ಲೂ ಹಿಡಿಯಬಲ್ಲ ಬೌದ್ಧಿಕತೆ ಇಲ್ಲಿದೆ. ಕಾದಂಬರಿ ರಚನೆಯಾದ ಅನಂತರದ ಸಾಮಾಜಿಕ ವ್ಯವಸ್ಥೆಯ ಅವಸಾನವನ್ನು ಗ್ರಹಿಸದೆ ತೇಜಸ್ವಿ ಅವರಿಗೆ ಭವಿಷ್ಯದ ಬಗೆಗಿದ್ದ ಮುನ್ನೋಟಗಳ ಬಗೆಗಿನ ಚಿಂತನೆ ಅರಿವಾಗುತ್ತದೆ. ಈ ಕಾದಂಬರಿಯಲ್ಲಿ ಕಂಡುಬರುವ ವಿನೋದ, ಲೇವಡಿ, ಹಾಸ್ಯ, ಲವಲವಿಕೆ, ಕ್ರಿಯಾಶೀಲತೆ ಮುಂತಾದ ಭಾಷಿಕ ನೆಲೆಗಳು ಹೊಸ ಆಯಾಮವನ್ನು ತಂದುಕೊಟ್ಟಿವೆ. ಪತ್ತೇದಾರಿ ಶೈಲಿಗಿಂತ ಭಿನ್ನವಾದ ತಂತ್ರವನ್ನು ಬಳಸಿರುವುದು. ಸರಳವಾದ ಭಾಷಿಕರ ಸ್ತರಗಳು, ವೈವಿಧ್ಯಮಯವಾದ ವರ್ಣನೆಗಳು ಔಚಿತ್ಯಪೂರ್ಣವಾದ ಸನ್ನಿವೇಶಗಳು ಕಾದಂಬರಿಯನ್ನು ಆಕರ್ಷಕಗೊಳಿಸಿವೆ ಎಂದು ಹೇಳಬಹುದು.

'ಕಾಡು' ಕಾದಂಬರಿಯ ಚಂದ್ರಯ್ಯಗೌಡನು ಈಗಾಗಲೇ ಅನೈತಿಕ ಸಂಬಂಧ ಇರಿಸಿಕೊಂಡಿದ್ದಾನೆ. ಕೆಳವರ್ಗದ ಜನ ಇಂತಹ ಸಂಬಂಧಗಳನ್ನು ಹೊಂದುವುದು ಅವನಿಗೆ ಕೋಪತರಿಸುತ್ತದೆ. ತನಗೆ ಒಂದು ನ್ಯಾಯ, ಸಮಾಜದ ಇತರ ವರ್ಗಗಳ ಜನರಿಗೊಂದು ನ್ಯಾಯ ಸಾಮಾಜಿಕ ಅಸಮಾನತೆಯನ್ನು ಹೇಳುತ್ತದೆ. ಬಡವರ್ಗದ ಜನರು ಈ ಸಂಬಂಧಗಳನ್ನು ಪ್ರಶ್ನಿಸಿದರೆ ಅವರಿಗೆ ಬಹಿಷ್ಕಾರ, ದಂಡನೆಯ ಶಿಕ್ಷೆ. ಪ್ರತಿಯೊಬ್ಬ ಮನುಷ್ಯನಲ್ಲಿ ಇರುವ ನೈತಿಕ ನಿಯಮಗಳನ್ನು ಕಾಲದಿಂದ ಕಾಲಕ್ಕೆ ರೂಢಿಸಿಕೊಳ್ಳುತ್ತಿರುವ ಚಾರಿತ್ರಿಕ ಸತ್ಯ. "ಇದು ಎಂಥಲೋಕ ಈ ಕಾಡಿನ ಲೋಕ ಇಲ್ಲಿ ಎಲ್ಲವೂ ನಿಗೂಢ ಚಂದ್ರೇಗೌಡರ ಹಾದರವನ್ನು ನಿಯಂತ್ರಿಸಲು ಗೌಡರ ಹೆಂಡತಿ ಮಂತ್ರವಾದಿಯ ಮೂಲಕ ಹನುಮಂತರಾಯನ ಗುಡಿಯ ಹಿಂದಿನ ಮೆಳೆಯಲ್ಲಿ ಭಯಂಕರ ಮಂತ್ರ ಹಾಕಿಸುತ್ತಾಳೆ. ದಾಂಪತ್ಯ ನೀತಿಯನ್ನು ಮನಷ್ಯ ಉಲ್ಲಂಘಿಸುತ್ತಾರೆ. ಏಕೆ ಎನ್ನುವುದು ಎಷ್ಟು ಗೂಢವೆಂದರೆ ಅದನ್ನು ನಿಯಂತ್ರಿಸಲು ಮರಳಿ ಆ ಗೂಢಕ್ಕೆ ಶರಣಾಗಬೇಕಾಗುತ್ತದೋ ಎನ್ನುವಂತೆ ಹಾಗೆಯೇ ಗಂಡ ಇನ್ನೊಬ್ಬಳ ತೆಕ್ಕೆಗೆ ಹೋಗುವುದರಿಂದ ಜೀವ ಕುಸಿಯುತ್ತಿರುವ ಈ ಹೆಂಡತಿ ತಾನೇ ಕೆಲವರ ಅತ್ಯಾಚಾರಕ್ಕೆ ತುತ್ತಾಗಿ ವಸ್ತುವಾಗಿ ಬಿಡುವ ತನಕ ಈ ಲೋಕ ಎಲ್ಲ ಆಯಾಮಗಳನ್ನು ತನ್ನೊಳಗೆ ಸೆಳೆಯುತ್ತದೆ."[೮೮] ಮುಗ್ಧೆಯಾದ ಕಮಲಮ್ಮ ಮೊದಲಿನಿಂದಲೂ ತನ್ನ ಗಂಡನು ಬೇರೊಬ್ಬನನ್ನು ಇಟ್ಟುಕೊಂಡಿದ್ದರಿಂದ ವಂಚಿತಳಾಗಿದ್ದಳು. ಬಸಕ್ಕನ ಕಡೆ ಮುಖ ಹಾಕದ ಹಾಗೆ ತಪ್ಪಿಸಬೇಕಾದರೆ ಪೂಜೆ ಹಾಕಿಸಿದರೆ ಒಳ್ಳೆಯದೆಂದು ನಂಬಿದ್ದಳು. ಈಗಲೂ ಗಂಡನ ಒಳಿತಿಗಾಗಿ ಊರ ಹೊರಗಿನ ಗುಡಿಕಟ್ಟೆ ದೇವಸ್ಥಾನಕ್ಕೆ ಕಿಟ್ಟಿಯನ್ನು ಕರೆದುಕೊಂಡು ಮಬ್ಬುಗತ್ತಲೆಯಲ್ಲಿ ಪೂಜೆ

---

೮೮. ಶ್ರೀ ಕೃಷ್ಣ ಆಲನಹಳ್ಳಿ, ಕಾಡು, ೨೦೦೧, ಪು. ೬೨-೬೩.

ಹಾಕಿಸಲು ಹೊರಡುತ್ತಾಳೆ. ಗುಡಿಕಟ್ಟೆಯ ಸುತ್ತಮುತ್ತ ಬಾವಲಿಗಳ ಚೀರಾಟ, ಒಣಗಿದ ಎಲೆಗಳ ಮೇಲೆ ಸರಸರ ಹರಿಯುವ ಹಾವು, ಕಿಟ್ಟಿಗೆ ಭಯವಾಗುತ್ತದೆ. ಆದರೂ ಅತ್ತೆಯ ಜೊತೆಗೆ ಸುಮ್ಮನೆ ನಡೆಯುತ್ತಾನೆ. ಗುಡಿಗೆ ಹೋಗುವಾಗಲೇ ಕತ್ತಲೆ ಆಗುತ್ತದೆ. ರಾಕ್ಷಸಾಕಾರದ ಮರಗಳು, ಚಕ್ಕಳರ ಹಕ್ಕಿಗಳು ರೆಕ್ಕೆಯನ್ನು ಬಡಿಯುತ್ತವೆ. ಕಿಟ್ಟಿಗೆ ಆಳು ಕೂಗಿನ ಹಕ್ಕಿ ನೆನಪಾಗುತ್ತದೆ. ಇಲ್ಲಿ ಲೇಖಕರು ಕಿಟ್ಟಿಯ ದೃಷ್ಟಿಯಲ್ಲಿ ಆ ಒಂದು ಚಿತ್ರಣವನ್ನು ನೀಡುವುದರ ಮೂಲಕ ಮುಂದೆ ಒದಗಬಹುದಾದ ದುರಂತವನ್ನು ಸೂಚಿಸುತ್ತಾರೆ. ಪೂಜೆ ಮುಗಿಸಿ ಬಂದಾಗ "ದಟ್ಟವಾಗಿ ಉದುರಿಬಿದ್ದಿದ್ದ ಎಲೆಗಳಲ್ಲಿ ಶಬ್ದ ಮಾಡುತ್ತ ಏನೋ ಓಡಿಹೋಯಿತು ಕಿಟ್ಟಿಯ ಕಣ್ಣುಗಳಿಗೆ ರಕ್ತ ನುಗ್ಗಿತು ಮುಸ್ಸಂಜೆಯಲ್ಲಿ ಕಿರಣಗಳು ಹೊರಗೆ ಬರದಂತೆ ಅತ್ತೆಯ ಸೀರೆಗೆ ಅಂಟಿಕೊಂಡೇ ನಡೆದ. ಹುಣಸೆಳ್ಳಿ ಮೆಳೆ ದಾಟುತ್ತಿದ್ದ ಹಾಗೆ ಮೂರು ನಾಕು ಜನ ದಿಢೀರನೆ ನುಗ್ಗಿ ಮೇಲೆ ಬಿದ್ದರು. ಕಿರುಚಿಕೊಳ್ಳಲೂ ಆಗದಂತೆ ಉಸಿರುಕಟ್ಟಿತು. ನಾಗಿ ಕಿರುಚಿಯೇ ಬಿಟ್ಟಳು. ಒಬ್ಬ ನಾಗಿಯ ಬಾಯಿ ಅದುಮಿ ಹಿಡಿದುಕೊಂಡ ಇನ್ನೊಬ್ಬ ಕಿಟ್ಟಿಯ ಮುಸುಡಿ ಬಜ್ಜಿಯಾಗುವ ಹಾಗೆ ಹಿಂಡಿ ಹಿಡುದು ಅನಾಮತ್ತಾಗಿ ಮೇಲೆತ್ತಿಕೊಂಡು ಅಲ್ಲೆ ಇದ್ದ ಮಾವಿನ ಮರದಡಿಯತ್ತ ನಡೆದ. ಅತ್ತೆ ಒದರಾಡಿದರೂ ಬಿಡದೆ ಅವರ ಬಾಯಿಯನ್ನು ಮುಚ್ಚಿ ದರದರ ಮರದಡಿಗೆ ಎಳೆದು ತಂದರು. ಕಿಟ್ಟಿಯ ಕಣ್ಣುಗಳಲ್ಲಿ ರಕ್ತ ತುಂಬಿಕೊಂಡಿತು. ಅವರೆಲ್ಲ ರಾಕ್ಷಸರೇ ಅನ್ನುವುದು ಖಚಿತವಾಗಿಬಿಟ್ಟಿತು. ಅವನಿಗೆ ಒಣಗಿದೆಲೆಯ ರಾಶಿಯ ಮೇಲೆ ಅತ್ತೆಯನ್ನು ರಪ್ಪನೆ ಕೆಡವಿದರು."೪೯

ಭೂಮಿ ಮತ್ತು ಹೆಣ್ಣಿನ ಸಂಬಂಧದಲ್ಲಿ ಆರಂಭವಾಗುವ ಮಾತ್ಸರ್ಯ ದ್ವೇಷ ಅಂತಿಮವಾಗಿ ಎಂತಹ ನೀಚ ಪ್ರವೃತ್ತಿಗೆ ಎಳೆದೊಯ್ಯುತ್ತವೆ ಎಂಬುದನ್ನು ಲೇಖಕರು ಈ ಬಗೆಯ ದುರಂತ ಚಿತ್ರಣಗಳ ಮೂಲಕ ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ. ಅಮಾಯಕಳಾದ ಕಮಲಮ್ಮ ಇಡೀ ಜೀವನದಲ್ಲಿ ಅತೃಪ್ತಿಯಿಂದ ನೊಂದು ಬೆಂದು ಕೊನೆಗೆ ಗಂಡನ ನಿರ್ಲಕ್ಷ್ಯ ಮತ್ತು ಅಹಂಕಾರಗಳಿಂದಾಗಿ ಎದುರಾಳಿಗಳ ಅತ್ಯಾಚಾರಕ್ಕೆ ಒಳಗಾದದ್ದು ದುರಂತಮಯವಾಗಿದೆ. ಚಂದ್ರೇಗೌಡ ಕೋಟೆಯಿಂದ ಬಂದವನೆ ಪರಿಸ್ಥಿತಿಯನ್ನು ಅರಿತುಕೊಂಡು ಭಗಭಗನೆ ಉರಿಯುತ್ತಾನೆ. ಅಪಮಾನ, ಕೋಪ, ಹಿಂಸೆ, ರೋಷಗಳಿಂದ ಉಕ್ಕುತ್ತಿದ್ದ ಆತ ಒಮ್ಮೆಲೆ ಕಮಲೀ ಎಂದು ಕೂಗುವುದರ ಮೂಲಕವೇ ತನ್ನೆಲ್ಲಾ ಯಾತನೆಯನ್ನು ಪ್ರಕಟಿಸುವುದನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ತಕ್ಷಣ ತೊಲೆಗೆ ಸಿಕ್ಕಿಸಿದ್ದ ಮಚ್ಚನ್ನು ಎಳೆದುಕೊಂಡು

---

೪೯. ಲಕ್ಷ್ಮೀಶತೊಳ್ಪಾಡಿ, 'ಕಾಡಮೂಲಕವೇ ಪಥ ಆಗಸಕ್ಕೆ (ಸಂ) ಕಾಡಿನ ಹುಡುಗ ಕೃಷ್ಣ', ೧೯೯೦, ಪು.೪೯.

ಹೊರಡುತ್ತಾನೆ. ಕಿಟ್ಟಿಗೆ ಭಯವಾಗುತ್ತದೆ. ಹಟ್ಟಿಯೆಲ್ಲ ಗಡಗಡ ನಡುಗುವ ಹಾಗೆ ಹೆಜ್ಜೆ ಹಿಡುತ್ತ ಹೊರಟೇಬಿಟ್ಟರು. ಕಿಟ್ಟಿಯ ಕಣ್ಣುಗಳಿಗೆ ಮಾರಿಹಬ್ಬ ಮೊಗಚಿಕೊಂಡಿತು.

ತಮಟೆ ಕೊಂಬಿನ ಸದ್ದು ಕಿವಿ, ಕಿವುಡಾಗಿಸುತ್ತಿದ್ದ ಹಾಗೆ ಮಾವ ಮಚ್ಚನ್ನು ಎರಡು ಕೈಯಿಂದ ಮೇಲೆತ್ತಿ ಟಗರಿನ ಕತ್ತಿಗೆ ಜೋರಾಗಿ ಅಪ್ಪಳಿಸಿದರು. ಒಂದೇ ಹೊಡೆತಕ್ಕೆ ಕತ್ತು ಕತ್ತರಿಸಿ ಬಿದ್ದು ರಕ್ತ ಚಿಲ್ಲೆಂದಿತು. ಚಂದ್ರೇಗೌಡನು ಶಿವಗಂಗನನ್ನು ಮುಗಿಸಿದ್ದನ್ನು ಲೇಖಕರು ಸಾಂಕೇತಿಕವಾಗಿ ಚಿತ್ರಿಸಿದ್ದಾರೆ. ಕಿಟ್ಟಿಗೆ ನಿಜಕ್ಕೂ ಇದು ರಾಕ್ಷಸರ ಲೋಕವೆಂಬುದು ಸಾಬೀತಾಗುತ್ತದೆ. ಧಗ ಧಗ ಉರಿಯುವ ರಾಗಿ ಮೆದೆಗಳು, ಆಳು ಕೂಗಿನ ಹಕ್ಕಿಯ ಕತೆ, ರಕ್ತ ಚೆಲ್ಲಾಡಿದ ಹೊಸೂರಿನ ಓಕುಳಿ ಕಾಡಿನೊಳಗಿಂದ ನುಗ್ಗಿ ಬಂದ ರಾಕ್ಷಸರು, ಅತ್ತೆಯ ತೊಡೆಯ ರಕ್ತ ಕುಂತಲ್ಲೇ ನಡುಗಿದ ಕಿಟ್ಟಿ. "ಇದ್ದಕ್ಕಿದ್ದ ಹಾಗೆ ಅತ್ತೆ ಜೋರಾಗಿ ನರಳಿ ಥಟ್ಟನೆ ನರಳುವುದನ್ನು ನಿಲ್ಲಿಸಿಬಿಟ್ಟರು. ಇನ್ನೊಮ್ಮೆ ಹಟ್ಟಿಯನ್ನೇ ಎತ್ತೆಸೆದು ಬಿಟ್ಟಂತ ಗೋಳಾಟ ಬೆಳಗಾದರೂ ಕಿಟ್ಟಿಯ ಕಣ್ಣಿಗಿಳಿದಿದ್ದ ರಾಕ್ಷಸಲೋಕ ಕರಗಲಿಲ್ಲ. ಇನ್ನೂ ನಡುಗುತ್ತಲೇ ಇದ್ದ ಬೇಡವಾಗಿದ್ದ ತನ್ನ ಊರು ಈಗ ಬೇಕೆನಿಸಿತು. ಅವ್ವ, ಅಜ್ಜಿ, ಸುಶಿ, ಚಿಕ್ಕಪ್ಪರ ಮುಖಗಳು ಮುಂದೆ ಬಂದವು. ಈ ರಾಕ್ಷಸಲೋಕದಿಂದ ಈ ಕ್ಷಣದಲ್ಲೇ ಪಾರಾಗಿ ಬಿಡುವ ಅವಸರದಿಂದ ಅವರು ಬರುವ ದಾರಿಯತ್ತಲೇ ಕಣ್ಣು ನೆಟ್ಟು ಕೂತ."[೯೦] ಲೇಖಕರು ಮಾನವನಲ್ಲಡಗಿರುವ ಪಶುತ್ವವನ್ನು ಕ್ರೌರ್ಯವನ್ನು ಕಾಮವನ್ನು ದಬ್ಬಾಳಿಕೆಯ ಮನೋವೃತ್ತಿಯನ್ನು, ಮುಗ್ಧ ಬಾಲಕನ ಮೂಲಕ ಅತ್ಯಂತ ಪರಿಣಾಮಕಾರಿಯಾಗಿ ಎಲ್ಲ ಸಂಕೀರ್ಣತೆಗಳೊಂದಿಗೆ ಕಟ್ಟಿಕೊಡುತ್ತಾರೆ. ಈ ದೃಷ್ಟಿಯಿಂದ ಶ್ರೀಕೃಷ್ಣ ಆಲನಹಳ್ಳಿಯವರು ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ವಿಶಿಷ್ಟವಾದ ಸ್ಥಾನವನ್ನು ಗಳಿಸಿದ್ದಾರೆ.

'ಕವಿಯ ಬಾಳಿನ ಕೊನೆಯದಿನ' – ಜರ್ಮನ್ ಕವಿ ಗಯಟೆಯ ಬದುಕಿನ ಕೊನೆಯದಿನದ ನೆನಪುಗಳು, ಆಲೋಚನೆಗಳ ಸ್ವಗತವಿಲ್ಲಿದೆ. ಇಲ್ಲಿ ಗಯಟೆ ಮನುಷ್ಯ ಪ್ರವೃತ್ತಿಗಳು ಅವುಗಳ ಅಭಿವ್ಯಕ್ತಿಯ ಪೂರೈಸುವಿಕೆಯ ಸರಿತಪ್ಪುಗಳ ಬಗ್ಗೆ ಅತ್ಯಂತ ವ್ಯಕ್ತಿನಿಷ್ಠ ನಿಲುವು ತಾಳುತ್ತಾನೆ. ಕೆಲವೊಂದು ಸಂದರ್ಭದಲ್ಲಿ ಗಯಟಲೋಲುಪತೆಯ ಹಾದಿ ಹಿಡಿದವನು. ಆದರೆ ಅವನಿಗೆ ಇವೆರಡೂ ಪರಸ್ಪರ ವಿರುದ್ಧವಾಗಿ ಕಾಣುವುದಿಲ್ಲ. ಅವನಿಗೆ ನೈತಿಕತೆಯ ಪ್ರಶ್ನೆಯೇ ಬೇರೆ ರೀತಿಯದ್ದಾಗಿದೆ. ಅವನಿಗೆ ಕೊನೆಯಿಲ್ಲ. ಅನ್ನಿಸುವುದು ಈ ರೀತಿಯಲ್ಲಿದೆ. "ತಾನು ಅನುಭವದಲ್ಲಿ ಸುಖ ಹುಡುಕಿದೆನು. ಅದು ಅಲ್ಲಿ ಸ್ವಲ್ಪ ಸಿಕ್ಕಿತು. ಆಸೆಯನ್ನು ಹಿಡಿತದಲ್ಲಿಟ್ಟು ಸುಖ ಹುಡುಕಿದನು. ಅದು ಆಗ ಸುಖವನ್ನು ತಂದಂತೆ ಕಾಣದಿದ್ದರೂ ಆಮೇಲೆ

೯೦. ಶ್ರೀ ಕೃಷ್ಣ ಆಲನಹಳ್ಳಿ, 'ಕಾಡು', ೨೦೦೧, ಪು. ೯೬

ಸುಖಕ್ಕೂ ಹತ್ತು ಮಡಿಯ ತೃಪ್ತಿಯನ್ನು ತಂದುತು. ಹುಡುಕಬೇಕೆ? ಯಾವುದು ಒಳ್ಳೆಯದು? ತ್ಯಾಗವೇ, ಬೋಗವೇ? ನೇಮವೇ ಇಚ್ಛೆಯೆ? ಆಂತರಿಕ ಸಂಬಂಧವಿದೆಯೆಂದು ಪ್ರೇಯಸಿಯನ್ನು ಮಾಡಿಕೊಳ್ಳುವುದೇ? ನೀತಿಯೆಂಬ ಕಾರಣದಿಂದ ಏಕಪತ್ನಿವ್ರತನಾಗಿರುವುದೇ?......... ಯಾವುದು ಸರಿಯೋ? ಮನುಷ್ಯನಿಗೆ ಈಗ ಇರುವ ತಿಳಿವಿನಿಂದ ಇದೇ ಸರಿಯೆಂದು ಹೇಳುವುದು ಕಷ್ಟ. ಇನ್ನು ಸ್ವಲ್ಪ ಬೆಳಕು ಬೇಕು...... ಎಂದು ಗಯಟೆ ಪ್ರವೃತ್ತಗಳ ಮೇಲುಗೈಯನ್ನು ತೀರ ವೈಯಕ್ತಿಕವಾದ ತನ್ನ ಆರಂಭದ ಮೂಲಕ ನಿರ್ಧರಿಸುತ್ತಾನೆ".[೯೧]

ಮನುಷ್ಯನು ತನ್ನ ವೈಯಕ್ತಿಕ ಸುಖದ ಅರ್ಥವನ್ನು ಸೂಕ್ಷ್ಮವಾಗಿ ಕಂಡುಕೊಂಡಿದ್ದಾನೆ. ಕೈಗಾರಿಕೆಯ ಕ್ರಾಂತಿಯ ಫಲವಾಗಿ ಮನುಷ್ಯನ ಜೀವನಕ್ರಮದ ಬದಲಾವಣೆಯು ಅವನ ದೈನಂದಿನ ಬದುಕಿನ ಚಲನೆಯನ್ನು ತಿರುವು ಮುರುವು ಮಾಡಿತು. ಮನುಷ್ಯನು ದುಡಿದು ಹಣಸಂಪಾದನೆಮಾಡಿ ಪ್ರತಿಷ್ಠಿತನಾಗಬೇಕು ಎಂಬ ಆಕಾಂಕ್ಷೆಯಲ್ಲಿ ಕುಟುಂಬದ ಬಂಧನವನ್ನು ಒಪ್ಪಿಕೊಳ್ಳಲು ಸಿದ್ದನಾಗುವುದಿಲ್ಲ. ವಿದ್ಯಾವಂತ ಇವನು ತನ್ನ ಸುಖವನ್ನು ಇನ್ನಿತರ ಹವ್ಯಾಸಗಳಲ್ಲಿ ಈಡೇರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ತನ್ನ ಬಯಕೆಗಳ ತೃಪ್ತಿಗಾಗಿ ನೈತಿಕವಲ್ಲದ ಮಾರ್ಗಗಳ ಮೂಲಕ ಹುಡುಕುತ್ತಿರುತ್ತಾನೆ. ಪ್ರವೃತ್ತಿಗಳಿಗೆ ಕಾಮದ ವಿಜೃಂಭಣೆಯನ್ನು ತೇಜಸ್ವಿ ಹಾಗೂ ಆಲನಹಳ್ಳಿಯವರ ಕಥನಸಾಹಿತ್ಯದಲ್ಲಿ ನೋಡಲು ಸಾಧ್ಯ. ಕಾಮದ ಪ್ರಬುದ್ಧತೆ ಮನುಷ್ಯನ ಮೇಲೆ ಸಾಧಿತವಾಗುವಾಗ ಅದರ ತೃಪ್ತಿಗಾಗಿ ಮನುಷ್ಯ ಕಂಡುಕೊಳ್ಳುತ್ತಿರುವ ವಾಮಮಾರ್ಗಗಳನ್ನು ಅದರ ಶೋಧನೆಯಲ್ಲೇ ತನ್ನನ್ನು ತೊಡಗಿಸಿಕೊಮಡಿರುವುದು. ಇವುಗಳ ವಿವಿಧ ರೂಪಗಳ ಮಾದರಿಯನ್ನು ಆಲನಹಳ್ಳಿ ಹಾಗೂ ತೇಜಸ್ವಿಯವರ ಕೃತಿಗಳಲ್ಲಿ ತೆರೆದು ತೋರಿಸುತ್ತಿರುವುದು ಮನುಷ್ಯನ ನಿರಂತರವಾದ ಹುಡುಕುವಿಕೆಗೆ ಕೊನೆಯಿಲ್ಲ.

ಆಲನಹಳ್ಳಿ ಹಾಗೂ ತೇಜಸ್ವಿಯವರು ಸಾಹಿತ್ಯರಚನೆಗೆ ತೊಡಗಿದ ಸಾಹಿತ್ಯ ಸಂದರ್ಭವು ಸಾಕಷ್ಟು ಪರಿಣಾಮಕಾರಿಯಾಗಿತ್ತು. ಹಳ್ಳಿಯ ಜನರು ಉನ್ನತ ವಿದ್ಯಾಭ್ಯಾಸಕ್ಕೆ ನಗರ ಪ್ರದೇಶಕ್ಕೆ ವಲಸೆಬರುವುದು, ಇಲ್ಲಿನ ಜೀವನ ಶೈಲಿಗೆ ಆಕರ್ಷಿತರಾಗಿ ಇಲ್ಲಿನ ಸ್ವತಂತ್ರ ಬದುಕು ಸ್ವಾಭಿಮಾನ, ಆತ್ಮವಿಶ್ವಾಸ, ಹೊಸ ಆಲೋಚನೆಗಳ ಗ್ರಹಿಕೆಗಳು ಅವರಿಗೆ ಬಹಳ ಮೆಚ್ಚುಗೆಯಾದವು. ಈ ನೆಲೆಗಳನ್ನು ಆಲನಹಳ್ಳಿ ಹಾಗೂ ತೇಜಸ್ವಿಯವರ ಕೃತಿಗಳಲ್ಲಿ ಗುರುತಿಸಬಹುದು. ಕಥಾನಾಯಕರು ಹಳ್ಳಿಯ ಬದುಕಿಗೆ, ಸ್ಪಂದಿಸಲು ಸಮರ್ಥರಾಗದೆ, ನಗರ ಬದುಕಿಗೆ ಸ್ಪಂದಿಸಲು ಸಮರ್ಥರಾದರೆ ತ್ರಿಶಂಕು ಸ್ಥಿತಿಯನ್ನು ಅನುಭವಿಸುವುದು ಶತಸಿದ್ದ. ಸ್ಪಂದನೆಗಳನ್ನು ಕಳೆದುಕೊಂಡಾಗ ಮನುಷ್ಯನ ಪ್ರಜ್ಞೆಗಳಲ್ಲಿ ಕಾಣಿಸುವ ಪಾಪಪ್ರಜ್ಞೆ, ಅನಾಥಪ್ರಜ್ಞೆ, ಅಸಹಾಯಕ

---

೯೧. ರಾಜೇಂದ್ರಚೆನ್ನಿ, 'ಅಧ್ಯಯನ', ಪುಟ. ೯೨, ೨೦೦೧.

ಸ್ಥಿತಿಯೂ ಅವರಲ್ಲಿ ಬದುಕಿನ ಬಗೆಗೆ ನಿರಾಶೆ ಕಾಣುತ್ತದೆ. ಈ ಪ್ರಜ್ಞೆಗಳನ್ನು ದೂರಮಾಡಲು ವೈಯಕ್ತಿಕ ಮೌಲ್ಯಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾರೆ. ಆಗ ಸಮಾಜದಲ್ಲಿರುವ ನೈತಿಕ ನಿಯಮಗಳನ್ನು ಮೀರಬೇಕು. ತನ್ನದೇ ಹೊಸ ನೈತಿಕ ನಿಯಮಗಳನ್ನು ಸೃಷ್ಟಿಸಿಕೊಳ್ಳಲು ಬಹಳ ಪ್ರಾಧಾನ್ಯತೆ ನೀಡುತ್ತಾನೆ. ಹಳ್ಳಿಯ ಬದುಕಿನಲ್ಲಾಗಲೀ, ನಗರದ ಬದುಕಿನಲ್ಲಾಗಲೀ ನೈತಿಕ ನಿಯಮಗಳಲ್ಲಿ ವ್ಯತ್ಯಾಸಗಳನ್ನು ಕಾಣಬಹುದು. ಹಳ್ಳಿಯ ಸಂಬಂಧಗಳು ಪ್ರಚಲಿತವೆಂಬ ಮಟ್ಟಕ್ಕೆ ಜಗಜ್ಜಾಹೀರಾಗಿರುತ್ತದೆ. ನಗರ ಸಂಬಂಧಗಳು ಬಹಳ ಸಂಕುಚಿತತೆಯಿಂದ ಕೂಡಿರುತ್ತವೆ. ಈ ಸಂಬಂಧಗಳ ಬಗ್ಗೆ ನಗರದಲ್ಲಿ ತಲೆಕೆಡಿಸಿಕೊಳ್ಳುವವರು ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಸಮಾಜದಲ್ಲಿರುವ ಕುಟುಂಬ, ಮದುವೆ, ಜಾತಿಗಳೆಂಬ ಸಂಸ್ಥೆಗಳ ವಿರುದ್ಧದ ಮನಸ್ಸುಗಳು ಒಗ್ಗೂಡುತ್ತವೆ. ಒಗ್ಗೂಡುವಿಕೆಯಲ್ಲಿ ಸಾಮಾಜಿಕ ನೈತಿಕ ಧೋರಣೆಗಳಿಗೆ ಯಾವುದೇ ಪ್ರಾಶಸ್ತ್ಯ ನೀಡುವುದಿಲ್ಲ. ವೈಯಕ್ತಿಕ ಅನುಭವಗಳಿಗೆ ಪೂರಕವಾಗುವಂತಹ ನೈತಿಕ ನಿಯಮಗಳನ್ನು ಜಾರಿಗೆ ತಂದುಕೊಳ್ಳುತ್ತಾನೆ.

ಆಲನಹಳ್ಳಿ ಕಥನಸಾಹಿತ್ಯದ ನಾಯಕರುಗಳು ಹಳ್ಳಿಯ ಬದುಕಿನ ಶೈಲಿಯ ಬಗೆಗೆ ತಿರಸ್ಕಾರವಿಟ್ಟುಕೊಂಡಿರುವವರು. ಇವರುಗಳು ಹಳ್ಳಿಯಿಂದಲೇ ಬಂದಿದ್ದರು. ಪ್ರಬುದ್ಧ ಮನಃಸ್ಥಿತಿಯಲ್ಲಿ ಆ ಬದುಕಿನಲ್ಲಿ ಬೇಸರ ಉಂಟುಮಾಡುತ್ತದೆ. ತೇಜಸ್ವಿ ಕಥನಸಾಹಿತ್ಯದಲ್ಲಿ ಸ್ವಚ್ಛಂದ ಬದುಕು, ಮನುಷ್ಯನ ಅತಿರೇಕಗಳು, ವೈಯಕ್ತಿಕ ಬದುಕಿನ ಖಾಸಗೀ ಕ್ಷಣಗಳ ಮೇಲೆಯೇ ಹೆಚ್ಚು ಒತ್ತುಕೊಡುವುದು. ಇವುಗಳನ್ನು ಗಮನಿಸಿದಾಗ ಮನುಷ್ಯನ ಅವಸ್ಥಾಂತರಗಳು ಯಾವ ಸ್ವರೂಪದಲ್ಲಿ ಬದಲಾವಣೆಯನ್ನು ಕಂಡಿತು ಎಂಬುದನ್ನು ನವ್ಯಸಾಹಿತ್ಯದ ಘಟ್ಟದಲ್ಲಿ ಗುರುತಿಸಬಹುದು. ಕಲ್ಪಿತ ಪ್ರಪಂಚಕ್ಕೆ ಹೆಚ್ಚಿನ ಒತ್ತುಕೊಡುತ್ತಿದ್ದ ಅಂದಿನ ಸಾಹಿತ್ಯಕ ಸಂದರ್ಭದಲ್ಲಿ ವೈಯಕ್ತಿಕ ಕಷ್ಟಸುಖಗಳ ಬಗ್ಗೆ ಗಮನ ಕೇಂದ್ರಿಕರಿಸುವಾಗ ಬಹಳ ವಿರೋಧ ವ್ಯಕ್ತವಾಗುತ್ತಿತ್ತು. ಆಧುನಿಕತೆಯ ಪ್ರವೇಶವು ವಾಸ್ತವಿಕ ಪ್ರಪಂಚವನ್ನು ಸಾಹಿತ್ಯದಲ್ಲಿ ಕಟ್ಟಿಕೊಡಲು ಬಹಳಷ್ಟು ಸಹಕಾರಿಯಾಯಿತು. ಆಧುನಿಕ ಸ್ಪಂದನೆಯು ಭಾರತೀಯ ಸಮಾಜ ವ್ಯವಸ್ಥೆಯಲ್ಲಿಯೇ ಆಂತರಿಕ ಬದಲಾವಣೆಗೆ ಕಾರಣವಾಯಿತು. ಈ ಸ್ಥಿತ್ಯಂತರ ಕಂಡ ಮನಸ್ಥಿತಿಗಳಿಗೆ ಹಳೆಯ ನೈತಿಕ ನಿಯಮಗಳಲ್ಲಿ ಜೀವನ ನಡೆಸುವುದು ದುಸ್ತರವಾಯಿತು. ಪರಂಪರೆಯಿಂದ ಒಂದು ನಿಯಮಗಳನ್ನು ಮೀರಿ ಬೆಳೆದರು. ಆ ಪ್ರಜ್ಞೆಯು ಮನುಷ್ಯನಲ್ಲೂ ಆಳವಾಗಿರುವುದನ್ನು ನೋಡಬಹುದು.

ಆಲನಹಳ್ಳಿಯವರು ಹೇಳುವಂತೆ "ನನ್ನ ಬಾಲ್ಯದಲ್ಲಿ ನನ್ನನ್ನು ಆವರಿಸಿದ್ದು ಪಾಪ-ಪುಣ್ಯಗಳ ದ್ವಂದ್ವದಿಂದ ನಾನಿನ್ನು ಮುಕ್ತನಾಗಿಯೇ ಇಲ್ಲ. ಪ್ರಜ್ಞೆಯ ಆಳದಲ್ಲಿ ಗಟ್ಟಿಯಾಗಿ ಬೇರುಬಿಟ್ಟಿರುವ ಇವನ್ನೇಕೆ ಕಿತ್ತುಹಾಕಲಾಗುತ್ತಿಲ್ಲ? ನಾನು ವಸ್ತು ನಿಷ್ಟನಾದಷ್ಟು ಅವು ನನ್ನನ್ನು

ಇನ್ನಷ್ಟು ಬಿಗಿಯುತ್ತಿದೆ ಎಂಬ ಅನಿಸಿಕೆಗೆ ಒಳಗಾಗುತ್ತಿರುವೆ ಯಾಕೆ? ಒಂದೊಂದು ಸಲ ಅನ್ನಿಸುತ್ತದೆ. ಈ ಎಲ್ಲ ನನ್ನ ದುರ್ಬಲ ಮನಸ್ಸಿನಿಂದ ಅಂತ. ಈ ಸರಿತಪ್ಪು, ಈ ಪಾಪಪುಣ್ಯ ಈ ಎಲ್ಲಕ್ಕೂ ನಾನಾಗಲೀ, ನನ್ನವರಾಗಲೀ ಜವಾಬ್ದಾರರಲ್ಲ. ಎಲ್ಲವೂ ಪಲ್ಲವಿಯಿಂದಾಗಿಯೇ ಅವಳು ನೇರವಾಗಿ ಜವಾಬ್ದಾರಳಲ್ಲವಾದರೂ ಅವಳ ಅಸ್ತಿತ್ವಕ್ಕೆ ಕಾರಣವಾದ ಅವಳ ಅಪ್ಪ, ಅಜ್ಜ, ಮುತ್ತಜ್ಜ ಅವರೆಲ್ಲ ತಮ್ಮ ಪಿತ್ರಾರ್ಜಿತವೆಂದೇ ಪರಿಪಾಲಿಸುತ್ತಾ ಬಂದ ಅವಳ ಸಂಸ್ಕೃತಿ ಕಾರಣ. ತಮ್ಮ ಸುಖಕ್ಕೆ ತಮ್ಮ ಲೋಭಕ್ಕೆ ತಾವೇ ಸೃಷ್ಟಿಸಿಕೊಂಡ ವ್ಯೂಹಗಳು ನಾನು ಅವನ್ನು ನಿಷ್ಠೆಯಿಂದ ಪಾಲಿಸುವಂತೆ ಪ್ರೀತಿಯಿಂದ ಹೇಳಿದ್ದೆಲ್ಲ ಕಟ್ಟಳೆಯಿಂದ ವಿಧಿಸಿದವು. ಅವನ್ನು ಅನುಷ್ಠಾನಕ್ಕೆ ತರುವುದಿರಲಿ ಆ ಕ್ರಿಯೆಗಳನ್ನು ಅಭಿವ್ಯಕ್ತಿಸುವ ಶಬ್ದಗಳನ್ನು ಬರಿದೆ ಉಚ್ಚಾರಿಸುವುದಕ್ಕೆ ನಾನೆಷ್ಟು ಹಿಂಸೆಗೆ ಒಳಗಾಗಿರಲಿಲ್ಲ? ಇವು ನನ್ನನ್ನು ಉದ್ಧಾರ ಮಾಡುವುದಿರಲಿ ನನ್ನನ್ನು ನನ್ನ ಜನವನ್ನು ಎಂಥ ಮೋಸಕ್ಕೆ ಎಂಥ ಅಥಪ್ರೀತನ ಕ್ರಿಯೆಗೆ ಒಳಗುಮಾಡಲಿಲ್ಲ? ಇವೆಲ್ಲವನ್ನು ಯೋಚಿಸುವ ಇವೆಲ್ಲ ಅಸಂಬದ್ಧವೆಂದು ಪರಿಭಾವಿಸುವ ನಾನು ಮತ್ತೆ ಮತ್ತೆ ಈ ತುಮುಲಕ್ಕೆ ಈ ಬಗೆಯ ಕಿರುಕುಳಕ್ಕೆ ಒಳಗಾಗುತ್ತಿರುವೆ ಯಾಕೆ?....."[೯೨]

ಗಟ್ಟಿಯಾದ ಹೊಸ ನೈತಿಕ ನಿಯಮವನ್ನು ಮನುಷ್ಯನು ಸೃಷ್ಟಿಸಿಕೊಂಡಿದ್ದರೂ ಪರಂಪರಾನುಗತವಾಗಿ ಬಂದಿರುವ ಪಾಪ-ಪುಣ್ಯಪ್ರಜ್ಞೆಗಳು ಅವನಲ್ಲಿ ಕಾಡಿ ಅವನ ದ್ವಂದ್ವ ನಿಲುವಿಗೆ ಕಾರಣ. ಬದುಕಿಗೆ ಚೌಕಟ್ಟನ್ನು ರೂಪಿಸಿಕೊಂಡು ಅದರಲ್ಲಿಯೇ ತನ್ನ ಜೀವನವನ್ನು ರೂಪಿಸಿಕೊಳ್ಳುವುದಕ್ಕೆ ಅವನು ತಯಾರಿಲ್ಲ. ಅಂತಹ ಬದುಕು ಅವನಿಗೆ ಹಾಸ್ಯಾಸ್ಪದವಾಗಿ ಕಾಣುತ್ತವೆ. ತನ್ನ ವೈಯಕ್ತಿಕ ಬದುಕಿನ ಸತ್ಯಗಳನ್ನು ಅನಾವರಣಗೊಳಿಸುವುದರ ಮೂಲಕ ತಾನೊಬ್ಬ ಪ್ರಾಮಾಣಿಕ ವ್ಯಕ್ತಿ ಎನಿಸಿಕೊಳ್ಳಬೇಕು. ತನ್ನ ಬದುಕಿನ ಪ್ರತಿಯೊಂದು ಘಟನೆಗಳನ್ನು ಯಾವುದೇ ಅಳುಕುಗಳಿಲ್ಲದೆ ಕಟ್ಟಿಕೊಡುವುದು. ಅವನಿಗೆ ಪ್ರಮುಖ ಅದರಿಂದಲೇ ತನ್ನ ಖಾಸಗೀ ಅನುಭವಗಳನ್ನು ನಿರ್ಭಿಡೆಯಿಂದ ಹೇಳಿಕೊಳ್ಳುತ್ತಾನೆ. ತನ್ನಲ್ಲಿ ಅಂತರಂಗ, ಬಹಿರಂಗದ ಮೌಲ್ಯಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ ಎಂದು ತೋರಿಸಿಕೊಡುವುದೇ ಅವನಿಗೆ ಮುಖ್ಯ. ನವ್ಯಸಾಹಿತ್ಯವು ಉಚ್ಛ್ರಾಯಸ್ಥಿತಿಯಲ್ಲಿದ್ದಾಗ ಅವರ ಪ್ರಭಾವಕ್ಕೆ ಒಳಗಾಗಿಯೇ ತಮ್ಮ ಬರವಣಿಗೆಯನ್ನು ಆರಂಭಿಸಿದ ಆಲನಹಳ್ಳಿ ತಮ್ಮ ಬದುಕಿನ ಅನುಭವಗಳ ಗ್ರಹಿಕೆಗಳನ್ನು ಸಮಾಜ ನೋಡುವ ದೃಷ್ಟಿಕೋನವನ್ನು ಬರಹದಲ್ಲಿ ಹಿಡಿದಿಡುವಲ್ಲಿ ಯಶಸ್ವಿಯಾಗಿದ್ದಾರೆ.

ಮನುಷ್ಯ ತನ್ನ ಮನಸ್ಸಿನಲ್ಲಿರುವ ಪರಂಪರಾನುಗತವಾಗಿ ಸಂಪ್ರದಾಯದ ಬೇರುಗಳು ಅವನ ವರ್ತಮಾನದ ಬದುಕಿನಲ್ಲಿ ನೆನಪಾಗಿ ಕಾಡುವುದು. ಕಾಡುವಿಕೆಯಿಂದ ಅವನು

---

೯೨. ಶ್ರೀಕೃಷ್ಣ ಆಲನಹಳ್ಳಿ, 'ಸಮಗ್ರ ಕಥೆಗಳು', ಪುಟ. ೮೨, ೨೦೦೦.

ಎಲ್ಲವನ್ನು ಒಪ್ಪಿಕೊಳ್ಳುವಂತಹ ಪಾತ್ರವಾಗಿ ಕಾಣುವುದಿಲ್ಲ. ವರ್ತಮಾನಕಾಲವನ್ನು ತನ್ನ ಪ್ರಬುದ್ಧ ಮನಸ್ಥಿತಿಯಲ್ಲಿ ಸ್ಪಂದಿಸುವುದನ್ನು ಕಲಿತಿದ್ದಾನೆ. ಈ ಮನಸ್ಥಿತಿಗಳು ಮನಸ್ಸಿನ ಪರಿಧಿಯಲ್ಲಿಯೇ ಹೊರಗಿನ ಪ್ರಪಂಚವನ್ನು ಸ್ಪಂದಿಸುತ್ತಾ ಅರಗಿಸಿಕೊಳ್ಳಲು ಯತ್ನಿಸುತ್ತದೆ. ಪ್ರಪಂಚವನ್ನು ತನ್ನದೇ ಗ್ರಹಿಕೆಯಲ್ಲಿ ಶೋಧಿಸುತ್ತಿರುವಾಗ ತನ್ನ ವೈಯಕ್ತಿಕತೆಯನ್ನು ಹುಡುಕುತ್ತಿರುವುದು ಆಧುನಿಕ ಮನುಷ್ಯನ ದ್ವಂದ್ವಗಳನ್ನು ಹೇಳುತ್ತದೆ.

ಮನುಷ್ಯನಿಗೆ ಲೈಂಗಿಕ ಸಂಬಂಧಗಳು ಅದರ ಸ್ವರೂಪಗಳು ಪ್ರತಿಯೊಬ್ಬ ಮನುಷ್ಯನಲ್ಲೂ ಹಲವು ಬಗೆಗಳಲ್ಲಿ ಇರುತ್ತದೆ. ಆದರೆ ಈ ಸಂಬಂಧಗಳಿಗೆ ಒಂದು ಚೌಕಟ್ಟನ್ನು ರೂಪಿಸಿಕೊಳ್ಳಲು ಅವನು ತಯಾರಿಲ್ಲ. ಸಮಾಜವು ರೂಪಿಸಿರುವ ಚೌಕಟ್ಟನ್ನು ತನ್ನ ಶಕ್ತಿಮೀರಿ ಮೀರುವುದಕ್ಕೆ ಪ್ರಯತ್ನಿಸುತ್ತಾನೆ. ತನ್ನದೇ ಇಂತಹ ಕಲ್ಪಿತ ಪ್ರಪಂಚದಲ್ಲಿ ಸ್ವಚ್ಛಂದವಾಗಿ ಪರಿಹರಿಸಲು ಇಷ್ಟಪಡುತ್ತಾನೆ. ಇದಕ್ಕೆ ಅಡೆತಡೆಗಳು ಬಂದಾಗ ತನ್ನ ಚಹರೆಯ ರೂಪಗಳನ್ನು ಬದಲಾಯಿಸಿಕೊಳ್ಳುತ್ತಾನೆ. ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನಸಾಹಿತ್ಯದಲ್ಲಿ ಮನುಷ್ಯನ ಮಾನಸಿಕ ಮನಸ್ಥಿತಿಗಳ ಪರಿಚಯವನ್ನು ವಿಭಿನ್ನ ಮಾದರಿಗಳಲ್ಲಿ ಸಮೀಕ್ಷಿಸಬಹುದು. ಜೊತೆಗೆ ಗಂಡು-ಹೆಣ್ಣುಗಳ ಸಂಬಂಧಗಳೊಂದಿಗೆ ಪ್ರಸ್ತುತ ಸಾಮಾಜಿಕತೆಯಲ್ಲಿ ಮನುಷ್ಯನು ತನ್ನ ಐಡೆಂಟಿಟಿಯನ್ನು ಯಾವ ರೀತಿ ಕಳೆದುಕೊಳ್ಳುತ್ತಿದ್ದಾನೆ. ಇಂತಹ ಸವಾಲುಗಳನ್ನು ಕಾಮದ ಪರಿಕಲ್ಪನೆಯಲ್ಲಿಯೇ ಉತ್ತರಗಳನ್ನು ಹುಡುಕುತ್ತಿರುವುದು ಮನುಷ್ಯನ ಬದಲಾದ ದೃಷ್ಟಿಕೋನವೇ ಕಾರಣ ಎಂಬುದನ್ನು ಶೋಧಿಸಬಹುದು.

ಆಲನಹಳ್ಳಿಯವರ ಸಾಕಷ್ಟು ಕಥೆಗಳಿಗೆ ಹಾಗೂ ತೇಜಸ್ವಿಯವರ ಕೆಲವು ಕಥೆಗಳಲ್ಲಿ ಅನೈತಿಕ ಸಂಬಂಧಗಳ ಮೂಲಕ ಮನುಷ್ಯನ ಪ್ರವೃತಿಗಳ ಮೇಲಾಟ ಅವನ ವೇಷಗಳ ಸಂದರ್ಭಕ್ಕೆ ತಕ್ಕಂತೆ ಬದಲಾಗುವುದು ಇವುಗಳಿಂದ ಸಾಹಿತ್ಯದಲ್ಲಿ ಒಂದು ಹೊಸ ಗ್ರಹಿಕೆಯನ್ನು ತರುವುದು ಈ ಲೇಖಕರ ಮುಖ್ಯ ಗುರಿಯಾಗಿದೆ. "ಸೆನ್ಸಸ್ ಎನ್ನುವಂತಹ ದೇಹರಚನೆ ಹೊಂದಿರುವ ಆಲನಹಳ್ಳಿಯವರ ಕಥೆಗಳಲ್ಲಿ ಮೂಲಕಲ್ಪನೆಯ ಲೈಂಗಿಕ ಗಾಯವನ್ನು ಮೀರಿಬೆಳೆಯುವ, ಈ ಲೈಂಗಿಕಗಾಯಕ್ಕೆ ಆಂಟಿಡೋಸ್‌ನ ನಿಲುವು ತಾಳುವುದನ್ನು ಕಾಣುತ್ತೇವೆ. ಶಾಲಿನಿಯೊಂದಿಗಿನ ಸ್ನೇಹ ಕಾಮದಸಂಬಂಧದಲ್ಲಿ ನಾಯಕನ ಮನೋಭೂಮಿಕೆಯಲ್ಲಿ ಹೊಸ ಬೆಳವಣಿಗೆಗಳು ಸಾಧ್ಯವಾಗುತ್ತವೆ. ಮದುವೆ ಎನ್ನುವುದೊಂದು ಸಂತೆ ಅಲ್ಲ. ಪ್ರೇಮಕಾಮಕ್ಕಿಂತ ಕಾಮನ್‌ಸೆನ್ಸ್‌ನ ನಿಯಮಗಳು ಹೆಚ್ಚು ಅನ್ವಯವಾಗುತ್ತಿವೆ ಎನ್ನುವ ಸಮಾಜ ವ್ಯವಸ್ಥೆಯ ಬಗೆಗೆ ತಿಳುವಳಿಕೆ ಉಂಟಾಗುತ್ತದೆ. ಅಲ್ಲದೇ ಯಾವ ಸಂಕುಚಿತ ಉದ್ದೇಶಗಳೊಂದಿಗೆ ಶಾಲಿನಿಯೊಂದಿಗೆ ತನ್ನ ಸಂಬಂಧವನ್ನು ನಾಯಕ ಏರ್ಪಡಿಸಿಕೊಂಡಿದ್ದನೋ ಅದು ಸಂಪೂರ್ಣವಾಗಿ ಪಲ್ಲಟಗೊಂಡುಬಿಡುತ್ತದೆ. ಗಂಡು-ಹೆಣ್ಣಿನ ನಡುವಿನ ಪ್ರೇಮ-ಕಾಮಗಳು

ಅತ್ಯಂತ ವೈಯಕ್ತಿಕವಾದ ಮೌಲ್ಯಗಳನ್ನು ಮತ್ತು ಇವುಗಳನ್ನು ನಿಯಂತ್ರಿಸಲು ಹೊರಡುವ ವ್ಯವಸ್ಥೆ ಒಂದು ಕ್ರೈಸಿಸ್ ಅನ್ನು ನಿರ್ಮಿಸುತ್ತದೆ".[೯೩]

ಆಲನಹಳ್ಳಿಯವರ ಕಥಾಸಂಕಲನದಲ್ಲಿ ಕಾಮ, ಮದುವೆ, ಪ್ರೇಮ ಸಂಬಂಧಗಳಲ್ಲಿ ಸುತ್ತಾಡುತ್ತಾ ಮನುಷ್ಯನ ಮೂಲಪ್ರವೃತ್ತಿಗಳು ಯಾವ ರೀತಿ ವಿಜೃಂಭಿಸುತ್ತವೆ ಎಂಬುದನ್ನು ತಿಳಿದುಕೊಳ್ಳಬಹುದು. 'ಅಂಟಿದ ನಂಟಿನ ಕೊನೆಯ ಬಲ್ಲವರಾರು' ಕಥೆಯಲ್ಲಿ ಕಥೆಯ ನಾಯಕ ಮತ್ತು ಶಾಲಿನಿ ಆಕಸ್ಮಿಕ ಸಂದರ್ಭಗಳಲ್ಲಿ ಪರಿಚಯವಾಗುತ್ತದೆ. ಈ ಪರಿಚಯ ಪ್ರಣಯದಲ್ಲಿ ಮುಂದುವರೆಯುವುದು. ಇಲ್ಲಿನ ಪ್ರೇಮ, ಕಾಮಕ್ಕೆ ಜಾತಿಯಾಗಲೀ, ಅಂತಸ್ತಾಗಲೀ ಈ ಸಾಮಾಜಿಕ ಕಟ್ಟುಪಾಡುಗಳು ಇಬ್ಬರಿಗೂ ಅಡ್ಡಬರುವುದಿಲ್ಲ. ಇವರಿಬ್ಬರ ಮದುವೆಯನ್ನು ಮಾತ್ರ ಸಮಾಜ ನಿರ್ಬಂಧಿಸುತ್ತದೆ. ಭಾರತೀಯ ಸಮಾಜದಲ್ಲಿ ಇನ್ನೂ ಜೀವಂತವಾಗಿರುವ ವರ್ಗ ಅಸಮಾನತೆಯ ಅನಾಗರಿಕ ಮೌಲ್ಯಗಳ ಕಡೆಗೂ ಗಮನ ಕೇಂದ್ರೀಕೃತವಾಗುತ್ತದೆ. ಈ ಕಥೆಯ ಹೆಣ್ಣು ಶಾಲಿನಿ ಪಾತ್ರವು ಸಂದರ್ಭಕ್ಕೆ ತಕ್ಕಂತೆ ಬದಲಾಗುವ ಪಾತ್ರ ಪುರುಷಕೇಂದ್ರಿತ ಸಮಾಜದಲ್ಲಿ ನಾಯಕ ಪ್ರತಿಯೊಂದು ನಡವಳಿಕೆಯನ್ನು ಉದ್ದೀಪನಗೊಳಿಸುತ್ತಾಳೆ. ಅವನಿಗೆ ಪ್ರೇರಣೆ- ಯಾಗಿಯೂ ನಿಲ್ಲುತ್ತಾಳೆ. ಅವನ ಬಯಕೆಗಳಿಗೆ ಅವಳು ಅಡ್ಡಿಬರುವುದಿಲ್ಲ. ಹೆಣ್ಣಿನ ಮನೋದೌರ್ಬಲ್ಯಗಳನ್ನು ಬಹಳ ನಿಖರತೆಯಿಂದ ನಿರೂಪಿಸುತ್ತಾಳೆ. ಅವಳು ಬಯಸಿದ ಸ್ವಚ್ಛಂದ ಬದುಕು, ಅವಳನ್ನು ಆಧುನಿಕತೆಯ ಪ್ರತಿಮೂರ್ತಿಯಾಗಿ ಸೃಷ್ಟಿಸಲಾಗಿರುವ ಪಾತ್ರ, ಇದುವರೆವಿಗೆ ಕನ್ನಡ ಸಾಹಿತ್ಯಕ್ಕೆ ವರ್ಜ್ಯವೆನಿಸಿದ್ದ ಕಾಮ ನಮ್ಮ ಸಾಹಿತ್ಯ ಪ್ರವೇಶಿಸಬೇಕು. ಕಾಮಜೀವನದ ಒಂದು ಅತ್ಯಂತ ತೀವ್ರವಾದ ವಾಸ್ತವವಾಗಿದೆ. ಅಲ್ಲದೆ ಕಾಮದ ನೆಲೆಯಲ್ಲಿ ಎರಡು ವಿಭಿನ್ನ ಸಂಸ್ಕೃತಿಯ ತುಲನೆಗೆ ನಮ್ಮನ್ನು ಸಜ್ಜುಗೊಳಿಸಲು ಪ್ರಯತ್ನಿಸುವ ಈ ಕಥೆ ಭಾರತೀಯ ಸಂಸ್ಕೃತಿಯ ಬಿಚ್ಚಿಕೊಳ್ಳಲಾರದ ಅರಳಲಾರದ ರೀತಿಯನ್ನು ತಿಳಿಸುವಂಥಾಗಿದೆ. ಇಂಡಿಯಾದ ಮೂಲೆಯೊಂದರಲ್ಲಿ ಅಪರಿಚಿತರ ನಡುವೆ ಇರುವ ಈ ಹೆಣ್ಣಿನ ಮುಕ್ತ ನಡವಳಿಕೆ ಪೂರ್ಣ ಸಾಚಾ ಎಂದು ಸಾಬೀತಾಗಲಾರದು. ಈ ಹೆಣ್ಣು ಕೂಡ ಕಾಡಿನ ಆದಿವಾಸಿಗಳ ಅರೆನಗ್ನ ವಸ್ತ್ರವನ್ನು ಅಪೇಕ್ಷಿಸುತ್ತಾಳೆಯೇ ಹೊರತು ತಾನು ಈಗಾಗಲೇ ಮದುವೆಯಾಗಿ ಬಿಟ್ಟಿರುವುದರಿಂದ ಆ ರೀತಿ ಬಟ್ಟೆ ತೊಡಲಾರೆನು ಎನ್ನುತ್ತಾಳೆ.

'ಗೀಜಗನಗೂಡು' ಕಥೆಯು ರಷ್ಯನ್ ಮಹಿಳೆ ಮತ್ತು ಕಥಾನಿರೂಪಕನ ಸಂಬಂಧವು ಯಾವ ರೀತಿಯದು ಎಂಬ ಪ್ರಶ್ನೆಯು ಕಾಮದ ಉದ್ರಿಗ್ನತೆಯಿಂದ ಏರ್ಪಟ್ಟ ಸಂಬಂಧವಿರಬೇಕು. ಇಲ್ಲಿ ನಿರೂಪಕನಿಗೆ ಸುಖಕೊಡುವ ಒಂದು ಹೆಣ್ಣು ಬೇಕು. ರಷ್ಯನ್ ಮಹಿಳೆಗೆ ತನ್ನ ಅತೃಪ್ತ

---

೯೩. ರಾಘವೇಂದ್ರ ಪಾಟೀಲ, 'ಕಾಡಿನ ಹುಡುಗ ಕೃಷ್ಣ', ಪುಟ. ೯೫, ೧೯೯೦.

ಬಯಕೆಗಳನ್ನು ತಪ್ತಗೊಳಿಸುವ ಸದೃಢ ಒಂದು ಗಂಡುಬೇಕು. ಅವರಿಬ್ಬರಲ್ಲಿ ಸ್ಪಂದನೆಗಳಿರುವ ಯಾವುದೇ ಮಾತುಕತೆಯಿಲ್ಲ. ಇಬ್ಬರಲ್ಲೂ ಲೈಂಗಿಕ ತೃಷೆಯೇ ಮುಖ್ಯ ಇಬ್ಬರೂ ವಸ್ತುವಾಗಿ ಕಾಣಬಹುದು. ಗೀಜಗನ ಗೂಡು ಎಂಬ ಸಾಂಕೇತಿಕ ಪ್ರತಿಮೆಯನ್ನು ತರುವ ಲೇಖಕರು ಗೀಜಗ ಹಕ್ಕಿಯು ಎಷ್ಟು ಸುಂದರವಾಗಿ ಗೂಡು ಕಟ್ಟಿಸಂಸಾರ ಮಾಡುತ್ತಿರುತ್ತದೆ. ಮನುಷ್ಯನನ್ನು ಆಕರ್ಷಿಸುವ ಈ ಗೂಡುಗಳು ಭಾರತೀಯ ಸಂಪ್ರದಾಯದ ಮೌಲ್ಯಗಳನ್ನು ಪ್ರತಿಬಿಂಬಿಸುತ್ತವೆ ಎನ್ನಬಹುದು. ಗೂಡನ್ನು ಯಾರಾದರೂ ಮುಟ್ಟಿದರೂ ಗೀಜಗನ ಹಕ್ಕಿ ಮತ್ತೆ ಆ ಗೂಡಿನಲ್ಲಿ ವಾಸಿಸುವುದಿಲ್ಲ. ಆಧುನಿಕತೆಯಿಂದ ಸಮಾಜ್ಜಕೆ ಪ್ರವೇಶಿಸಿರುವ ಸ್ವಚ್ಛಂದ ಬದುಕನ್ನು ಭಾರತೀಯ ಸಮಾಜವು ಒಪ್ಪಿಕೊಳ್ಳಲು ಸಿದ್ದವಿಲ್ಲ ಎಂಬ ಸೂಕ್ಷ್ಮವನ್ನು ಈ ಗೂಡುಗಳ ಸಾಂಕೇತಿಕ ರೂಪದಿಂದ ಲೇಖಕ ತಿಳಿಸುತ್ತಿದ್ದಾರೆ. ಈ ಕಥೆಯ ರಷ್ಯನ್ ಮಹಿಳೆ ಗಂಡಿನ ದುರ್ಬಲ ಮನಸ್ಸನ್ನು ಸಂಪೂರ್ಣವಾಗಿ ತೆರೆದು ತೋರಿಸುತ್ತಾಳೆ. ಅವನು ಹೆಣ್ಣಿನ ದೇಹ ಸಂಬಂಧವನ್ನು ಪಡೆಯಲು ಬದಲಾಯಿಸುವ ವೇಷಗಳನ್ನು ಸಮರ್ಥವಾಗಿ ಅನಾವರಣಗೊಳಿಸುತ್ತಾಳೆ. ನಿರೂಪಕನ ಪರೋಕ್ಷವಾದ ಮುಖವಾಡಗಳು ರಷ್ಯನ್ ಮಹಿಳೆಯ ಪ್ರಿಯಕರನಾದ ಪೂವೆಲ್ ಪ್ರತ್ಯಕ್ಷ ಮುಖವಾಡಗಳನ್ನು ಗೀಜಗನಗೂಡು ಕಥೆಯಲ್ಲಿ ಮೂವರುಗಳ ಮಾತುಕತೆಯ ಮೂಲಕವೇ ಅವರ ನಡೆನುಡಿಗಳಿಂದ ಸಂಪೂರ್ಣವಾಗಿ ಪರಿಚಯಿಸಿಕೊಳ್ಳಬಹುದು. "ಈ ಕೊಳಕು ಮುದುಕನ ಜೊತೆ ಇಲ್ಲಿಗೆ ಬಂದೆ. ಪೂವೆಲ್ ತುಂಬಾ ಮೀನ್ ಫೆಲೋ ಅಂದಳು. ರಾತ್ರಿ ನಿನಗೆ ಮುತ್ತು ಕೊಟ್ಟದ್ದಕ್ಕೆ ಅಷ್ಟು ಕಿರಿಕಿರಿ ಪಟ್ಟ ನಾನು ಅವನ ಹೊಟೇಲಿನಲ್ಲಿ ಇದ್ದೇನೆ. ಅಷ್ಟಕ್ಕೆ ಅವನ ಹೆಂಡತಿ ಅನ್ನುವಂಥ ಅಧಿಕಾರ. ನಾನು ಯಾವ ತಿಂಗಳೂ ಅವನಿಗೆ ಹೊಟೇಲ್ ಬಿಲ್ ಕೊಡುವುದು ನಿಲ್ಲಿಸಿಲ್ಲ ತುಂಬಾ ಸಭ್ಯ ಅಂದುಕೊಂಡಿದ್ದೆ. ರಾತ್ರಿ ವಾಕರಿಕೆ ಬರುವಂತೆ ನಡೆದುಕೊಂಡ ಅಂದಳು....."[೯೪] ನಿರೂಪಕನೊಂದಿಗೆ ರಷ್ಯನ್ ಮಹಿಳೆಯ ಈ ಮಾತುಗಳಲ್ಲಿ ಗಂಡಿನ ದೌರ್ಬಲ್ಯಗಳನ್ನು ಕಾಣಲು ಸಾಧ್ಯ. ಆದಿವಾಸಿಗಳ ಬದುಕನ್ನು ನಿರೂಪಕನಿಂದ ತಿಳಿಯುವ ಇವಳು ಅವರ ವೇಷಭೂಷಣವನ್ನು ಮೆಚ್ಚುತ್ತಾಳೆ. ಇಲ್ಲಿ ಅನುಭವಿಸಿದ ಅನುಭವಗಳನ್ನು ರಷ್ಯಕ್ಕೆ ಹಿಂದಿರುಗಿ ತನ್ನ ಗಂಡನೊಂದಿಗೆ ಹಂಚಿಕೊಳ್ಳುತ್ತೇನೆ ಎನ್ನುತ್ತಾಳೆ. ಇವುಗಳೆಲ್ಲ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಅತಿಸಹಜವೆಂಬುದು ಕಾಣುತ್ತದೆ.

'ಕಿರಗೂರಿನ ಗಯ್ಯಾಳಿಗಳು' ಕೃತಿಯಲ್ಲಿ ನಾಗಮ್ಮನಿಗೆ ಶಿಕ್ಷಿಸುವ ಮೂಲಕ ಊರಿನ ಗಯ್ಯಾಳಿಗಳಿಗೆ ಹೆದರಿಕೆ ಹುಟ್ಟಿಸಲು ಪಂಚಾಯಿತಿಯ ಪ್ರಕ್ರಿಯೆಗೆ ಚಾಲನೆ ನೀಡುತ್ತಾರೆ. ತನ್ನ ವಿಧೇಯತೆ ಸೇವೆ, ದುಡಿಮೆ ಹಾಗೂ ಮೌನಗಳಿಂದ ಗಂಡನ ಶಾರೀರಿಕ ಸುಖವಿಲ್ಲದಿದ್ದರೂ

---

೯೪. ಆಲನಹಳ್ಳಿ ಕೃಷ್ಣ, 'ಸಮಗ್ರ ಕಥೆಗಳು', ಪುಟ. ೧೨೧, ೨೦೦೦.

ಸಹನೀಯವಾಗಿ ಬದುಕಿದ್ದರಿಂದ ಕಿರಗೂರಿನ ಪುರುಷ ಸಮಾಜಕ್ಕೆ ಆಕೆ ಮಾದರಿ ಹೆಣ್ಣು ಎನಿಸಿಕೊಂಡಿದ್ದಳು. ಗಂಡ ಕಾಳೇಗೌಡನ ಶರೀರಕ್ಕೆ ಎಣ್ಣೆ ಹಚ್ಚುವ ಸಂದರ್ಭದಲ್ಲಿ ನಾಗಮ್ಮನ ಮನಸ್ಸಿನಲ್ಲಿ ಹುಟ್ಟುವ ಭಾವನೆಗಳಿಂದ ಅವಳ ದಾಂಪತ್ಯದ ಅಸಹನೀಯ ಸ್ಥಿತಿಯನ್ನು ತರ್ಕಿಸಬಹುದಾಗಿದೆ. "ಎಣಿಕೆ ಮಾಡುವಷ್ಟು ಸ್ಪಷ್ಟವಾಗಿ ಕಾಣುತ್ತಿದ್ದ ಪಕ್ಕೆಲುಬುಗಳನ್ನು ತೊಗಲೆಲ್ಲಾ ಸುಕ್ಕು ಬಿದ್ದು ಮುರುಟಿಕೊಂಡಿದ್ದ ಪೃಷ್ಟವನ್ನು ನೋಡಿ ನಾಗಮ್ಮನಿಗೆ ಇದೆಂಥ ಶರೀರ ಎಂದು ಜುಗುಪ್ಸೆಯಾದರೂ ಗಂಡ-ಮಕ್ಕಳಾಗಲಿಲ್ಲ ಎಂದು ರೇಗಾಡಿದರೂ ಮಾತಿಲ್ಲ. ಎರಡನೇ ಮದುವೆ ಆಗುತ್ತೇನೆಂದರೂ ಮಾತಿಲ್ಲದ ಮೂಕಪ್ರಾಣಿಯಂತಿದ್ದ"[೯೫] ನಾಗಮ್ಮ ಭಾರತೀಯ ಮಹಿಳೆಯ ಪ್ರತಿನಿಧಿಯಂತಿದ್ದಾಳೆ. ಇಂತಹ ನಾಗಮ್ಮನನ್ನು ಊರ ಪಂಚಾಯ್ತಿಯಲ್ಲಿ ಹಾಜರುಪಡಿಸುತ್ತಾರೆ. ಖಾಸಗಿಯಾದ ವೈವಾಹಿಕ ವಿವರಗಳು ಗಂಡಿನ ಸ್ವಾರ್ಥ ಹಾಗೂ ಅಹಂನಿಂದ ಸಾರ್ವಜನಿಕವಾಗಿ ಬಹಿರಂಗಗೊಳ್ಳುವುದು ಸ್ಥಾವರ ಸಂಸ್ಕೃತಿಯ ಮೌಲ್ಯಗಳನ್ನು ಎತ್ತಿಹಿಡಿಯುತ್ತದೆ. ಹೆಣ್ಣಿನಲ್ಲಿ ನಿರೀಕ್ಷಿಸುವ ಈ ಸಮಾಜಕ್ಕೆ ದಾನಮ್ಮನ ಧಾರ್ಷ್ಟ್ಯ ಗುಣವನ್ನು ಸ್ವೀಕರಿಸಲು ಸಾಧ್ಯವಾಗದೆ ಆಕೆಯನ್ನು ಗಯ್ಯಾಳಿ ಎಂದೇ ಗುರುತಿಸುತ್ತಾರೆ. ಪುರುಷಪ್ರಧಾನ ಸಮಾಜದಲ್ಲಿ ಅನ್ಯಘಟಕವೆಂದೇ ಗುರುತಿಸಲಾಗುವ ಸ್ತ್ರೀಯ ಗುಣಗಳು ಒಪ್ಪಿತ ಮೌಲ್ಯದಂತೆ ಇಲ್ಲವಾದಾಗ ಆಕೆಯನ್ನು ನಕಾರಾತ್ಮಕವಾಗಿ ಮೌಲ್ಯಮಾಪನ ಮಾಡುವ ಹುನ್ನಾರ ವ್ಯವಸ್ಥಿತವಾಗಿ ನಡೆಯುತ್ತದೆ. ಲಿಂಗ ಅಸಮಾನತೆಯನ್ನು ಪ್ರಶ್ನಿಸುವ ಹಾಗೂ ಪ್ರತಿಭಟಿಸುವ ವಿಚಾರ ಸ್ಪಷ್ಟತೆ, ದಬಾಯಿಸಬಲ್ಲ ಸಾಮರ್ಥ್ಯ ತಪ್ಪು ನಡೆದಾಗ, ಅನ್ಯಾಯ ಕಂಡಾಗ ಕೋಪದಿಂದ ವಿರೋಧಿಸುವ ದಾನಮ್ಮನ ಗುಣ ಊರಿನ ಗಂಡಸರಿಗೆ ಬಜಾರಿತನವಾಗಿ ಗೋಚರಿಸಿದೆ. ಪ್ರಚಂಡ ಬಿರುಗಾಳಿಯಂತೆ ಊರಿನ ಜಡತೆಯನ್ನು ಗುಡಿಸಿಹಾಕಿ ಕ್ರಿಯಾಶೀಲತೆಯನ್ನು ಹೊಸ ಎಚ್ಚರವನ್ನು ನೀಡುವ ದಾನಮ್ಮ ಪ್ರಜ್ಞಾಜಾಗೃತಿಯ ಅಂಶವಾಗಿದ್ದಾಳೆ.

ಮನುಷ್ಯನ ಸಂಬಂಧಗಳು ಯಾವ ರೀತಿ ರೂಪುಗೊಳ್ಳುತ್ತವೆ ಎಂಬುದಕ್ಕೆ ಕಾರಣ ಕೊಡಲು ಸಾಧ್ಯವಾಗುವುದಿಲ್ಲ. ಕೆಲವೊಂದು ಸಂದರ್ಭದಲ್ಲಿ ಈ ಕಥೆಗಳಿಗೆ ಗಂಡು-ಹೆಣ್ಣುಗಳ ಲೈಂಗಿಕ ಸಂಬಂಧಗಳಾಗಿಯೇ ಸನ್ನಿವೇಶ, ಸಂದರ್ಭಗಳು ಮತ್ತು ಅದಕ್ಕೆ ಪೂರಕವಾದ ಪರಿಸರವು ನಿರ್ಮಾಣವಾಗುವುದು ಲೇಖಕರ ಮನಃಸ್ಥಿತಿಯನ್ನು ಅರಿಯಬಹುದಾಗಿದೆ. 'ಇನ್ನೊಂದು ಪ್ರಣಯ ಪ್ರಸಂಗ' ಕಥೆಯಲ್ಲಿ ಭಾರತೀಯ ಹೆಣ್ಣಿನ ಮನೋಧರ್ಮದಲ್ಲಿ ಆಗುತ್ತಿರುವ ಸ್ಥಿತ್ಯಂತರವನ್ನು ಕಾಣುತ್ತೇವೆ. ಪಾಶ್ಚಾತ್ಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಸ್ವದೇಶಕ್ಕೆ ಮರಳುವ ಇಲ್ಲಿನ ಕಥಾನಾಯಕಿ ಪರಂಪರಾನುಗತದಿಂದ ಬಂದಿರುವ ಪ್ರಜ್ಞೆಗಳಿಂದ ಅವಳು ಪೂರ್ಣವಾಗಿ ಮುಕ್ತಳಾಗುವುದಿಲ್ಲ. ಇವಳಿಗೆ ರಷ್ಯನ್ ಮಹಿಳೆಯಂತೆ ತನ್ನ

---

೯೫. ಕೆ.ಪಿ.ಪೂರ್ಣಚಂದ್ರ ತೇಜಸ್ವಿ 'ಕಿರಗೂರಿನ ಗಯ್ಯಾಳಿಗಳು' ಪುಟ. ೨೪, ೨೦೦೫.

ಗಂಡನೊಂದಿಗೆ ತನ್ನ ಇತರೆ ಲೈಂಗಿಕ ಅನುಭವಗಳನ್ನು ಹೇಳಿಕೊಳ್ಳಲು ಸಾಧ್ಯವಿಲ್ಲ. ಅಂತಹ ಸಮಾಜವು ಸೃಷ್ಟಿಗೊಳ್ಳಬೇಕಿದೆ ಎಂಬ ಗ್ರಹಿಕೆಗಳನ್ನು ಇಲ್ಲಿನ ಕಥಾಪಾತ್ರಗಳು ತೋರ್ಪಡಿಸುತ್ತವೆ. ಇನ್ನೊಂದು ಪ್ರಣಯಪ್ರಸಂಗ ಹೆಸರೇ ತಿಳಿಸುವಂತೆ ನಿರೂಪಕನ ಮತ್ತೊಂದು ಪ್ರಣಯದ ಅನುಭವವನ್ನು ಓದುಗರಿಗೆ ನೀಡುವುದಾಗಿದೆ. ನಾಯಕಿ ಪಲ್ಲವಿ ತನ್ನ ಮದುವೆಯ ಮುಂಚೆಯೇ ನಿರೂಪಕನೊಂದಿಗೆ ಅನೈತಿಕ ಸಂಬಂಧವನ್ನು ಹೊಂದಿರುತ್ತಾಳೆ. ನಂತರ ಪರದೇಶದ ಗಂಡಿನೊಂದಿಗೆ ಮದುವೆಯಾಗಿ ಅಲ್ಲೆ ನೆಲೆಸಿರುವವಳು. ಸ್ವದೇಶಕ್ಕೆ ಹಿಂದಿರುಗಿದಾಗ ನಿರೂಪಕನಿಗೆ ಕಾಗದದ ಮೂಲಕ ತನ್ನ ಅತೃಪ್ತ ಬಯಕೆಗಳನ್ನು ಸೂಕ್ಷ್ಮವಾಗಿ ತೆರೆದಿಡುತ್ತಾಳೆ. ನಿರೂಪಕನ ಕಾಮವನ್ನು ಉದ್ದೀಪನಗೊಳಿಸಿದವಳು. ಇಬ್ಬರೂ ಮುಖಾಮುಖಿ ಭೇಟಿಯಲ್ಲಿ ಮಾತುಕತೆಗಳಿಗೆ ಯಾವುದೇ ಅರ್ಥವಿಲ್ಲದೆ ಇಬ್ಬರೂ ದೈಹಿಕ ತೃಪ್ತಿಗಾಗಿ ಹಾತೊರೆಯುವುದಕ್ಕಾಗಿ ಸಂದರ್ಭವನ್ನು ಸೃಷ್ಟಿಮಾಡಿಕೊಳ್ಳಲು ಯತ್ನಿಸುವುದು ಇಲ್ಲಿ ಯಾರಾದರೊಬ್ಬರ ತಪ್ಪನ್ನು ಹುಡುಕುವುದು ಸಾಧ್ಯವಿಲ್ಲ. ನಾಯಕ–ನಾಯಕಿಯರು ತಪ್ಪಿನಲ್ಲಿ ಸಮಭಾಗಿಯಾಗಿರುವುದನ್ನು ಗುರುತಿಸಬಹುದು.

'ಅವನತಿ' ಕಥೆಯಲ್ಲಿ ಅಸಾಮಾನ್ಯ ಕಲೆಗಾರಿಕೆ ಹೊಂದಿದ್ದ ಸೂರಾಚಾರಿ ಇಸ್ಲಾಪುರದ ಹಳ್ಳಿಯ ಪರಿಸರದಲ್ಲಿ ತನ್ನ ಕಲಾವಂತಿಕೆಯನ್ನು ಬಳಸಿಕೊಳ್ಳಲಾರದೆ ಅವನತಿ ಹೊಂದುವ ಚಿತ್ರಣ 'ಅವನತಿ' ಕತೆಯಲ್ಲಿ ಮೂಡಿಬಂದಿದೆ. ಸೂರಾಚಾರಿಯ ಶಿಲ್ಪನೈಪುಣ್ಯವೆಲ್ಲ ಒಳಕಲ್ಲಿಗೆ ಉಳಿಹಾಕುವುದು. ಮಾರಿಮಸಣೆಗಳನ್ನು ಮಾಡಿಕೊಡುವುದರಲ್ಲೇ ಪರ್ಯಾವಸಾನಗೊಳ್ಳುತ್ತದೆ. ಸೂರಾಚಾರಿಗೆ ತನ್ನಲ್ಲಿ ಹುದುಗಿರುವ ಕಲೆಯನ್ನು ಅರ್ಥಮಾಡಿಕೊಳ್ಳುವುದಾಗಲಿ ಅಥವಾ ಅದನ್ನೊಂದು ಅಭಿವ್ಯಕ್ತಿಯ ಮಾಧ್ಯಮವೆಂದು ತಿಳಿದುಕೊಳ್ಳುವುದು ಸಾಧ್ಯವಾಗುವುದಿಲ್ಲ. ಅಲ್ಲದೆ ಅವನ ಪರಿಸರ ಕೂಡ ಅವನ ಶ್ರೇಷ್ಠ ಕಲಾವಂತಿಕೆಯ ಅರಳುವಿಕೆಗೆ ಪೂರಕವಾಗುವುದಿಲ್ಲ. ಕಾಲಾನಂತರ ಸೂರಾಚಾರಿ ಅಕರಾಳ ವಿಕರಾಳ ರೂಪದ ಮಾರಿ ವಿಗ್ರಹಗಳನ್ನು ಮಾಡಲು ಪ್ರಾರಂಭಿಸುತ್ತಾನೆ. ಕಟ್ಟಿಗೆ ಗೊಂಬೆ ತಯಾರಿಸುವ ಮಂತ್ರತಂತ್ರ ತಾಯಕ ಮಾಡಿಕೊಡುವ ಕೊನೆಗೆ ಹೆಣ್ಣುಗಂಡುಗಳನ್ನು ಮದುವೆಗೆ ಹೊಂದಿಸುವ ಎತ್ತಿನ ದಲ್ಲಾಳಿ ವ್ಯಾಪಾರಮಾಡುವ ಕೆಲಸ ಮಾಡಲು ಪ್ರಾರಂಭಿಸುತ್ತಾನೆ. ಇನ್ನೊಂದು ಕಡೆ ಇತ್ತಾವರದ ಸುಬ್ಬಯ್ಯನ ಹೆಂಡತಿ ಅಪೂರ್ವ ಸೌಂದರ್ಯವತಿಯಾಗಿದ್ದರೂ ತನ್ನ ಸೌಂದರ್ಯದ ಅರಿವಿಲ್ಲದೆ ಹಳ್ಳಿಯ ಪರಿಸರದಲ್ಲಿ ಮಕ್ಕಳನ್ನು ಹೆರುವ ಯಂತ್ರವಾಗಿ ಕೊನೆಗೆ ಆ ಮಕ್ಕಳು ಬದುಕದೆ ಗಂಡನ ದೂಷಣೆಗೆ ಒಳಗಾಗುತ್ತಾಳೆ. ಅವಳ ಸೌಂದರ್ಯವನ್ನು ಕಂಡ ಹಳ್ಳಿಯ ಜನ ಅವಳು ಯಾರೋ ಬ್ರಾಹ್ಮಣರಿಗೆ ಅಡ್ಡ ಹುಟ್ಟಿದವಳಿರಬೇಕೆಂಬ ಕುಹಕವಾಡುವ ಮಟ್ಟಕ್ಕೆ ಹೋಗುತ್ತಾರೆ. ಹುಟ್ಟಿದ ಮೂರುಮಕ್ಕಳು ಸತ್ತಿದ್ದಕ್ಕೆ ಗೌರಿಯಲ್ಲಿಯೇ ದೋಷವಿರಬೇಕೆಂದು ತಿಳಿಯುವ ಗಂಡ ಸುಬ್ಬಯ್ಯನ ಮೌಢ್ಯದ

ಜೊತೆಗೆ ಕಲಾವಿದನಾದ ಸೂರಾಚಾರಿ ಕೂಡಾ ಧ್ವನಿ ಸೇರಿರುವುದು ಬದುಕಿನ ಅವನತಿಗೆ ಉದಾಹರಣೆಯಾಗುತ್ತವೆ. ಗೌರಿಯ ಎದೆಯ ಹಾಲಿನ ದೋಷದಿಂದ ಮಕ್ಕಳು ಸಾಯುತ್ತಿವೆ. ಅದಕ್ಕಾಗಿ ಮೊಲೆಯ ಮೇಲುಗಡೆ ಇರುವ ನೀಲಿ ನರವನ್ನು ಅರಿಶಿಣದ ಕೊಂಬನ್ನು ಕೆಂಡಮಾಡಿ ಕಾಯಿಸಿ ಸುಡಬೇಕೆನ್ನುವ ಅಭಿಪ್ರಾಯವನ್ನು ಸೂರಾಚಾರಿ ವ್ಯಕ್ತಪಡಿಸಿದಾಗ ಅವನ ಮಾತಿಗೆ ಗೌರಿಯ ಗಂಡ ಸುಬ್ಬಯ್ಯ ಕೂಡ ಸಮ್ಮತಿಸುತ್ತಾನೆ. ಇಲ್ಲಿ ಸುಂದರ ವಿಗ್ರಹ ಕೆತ್ತುವ ಸೂರಾಚಾರಿಯ ಕಲೆ ಗೌರಿಯ ಸೌಂದರ್ಯವನ್ನು ಹಾಳುಮಾಡುವಷ್ಟು ಅಧೋಗತಿಗೆ ಇಳಿಯುತ್ತದೆ.

ಅಪೂರ್ವ ಸೌಂದರ್ಯದ ಕನಿಯಾದ ಅತ್ತಾವರದ ಗೌರಿಯ ಕಾಯವನ್ನು ವಿಕಾರ ಮಾಡಲು ಸಿದ್ದವಾಗುವ ಶ್ರೇಷ್ಠ ಶಿಲ್ಪ ಕಲಾವಿದನಾದ ಸೂರಾಚಾರಿಯ ಕೃತ್ಯ ನಮ್ಮ ಬದುಕಿನ ವಿಪರ್ಯಾಸದ ಚಿತ್ರಣ ನೀಡುತ್ತದೆ. ಸೂಕ್ಷ್ಮ ಬರಹಗಾರರಾದ ತೇಜಸ್ವಿ ಹಳ್ಳಿಯ ಪರಿಸರದಲ್ಲಿ ಅವಕಾಶವಿಲ್ಲದೆ ಕಮರಿಹೋಗುತ್ತಿರುವ ಕಲಾವಂತಿಕೆ ಹಾಗೂ ಸೌಂದರ್ಯದ ದುರಂತ ಚಿತ್ರಣವನ್ನು ಅವನತಿ ಕಥೆಯಲ್ಲಿ ಸಮರ್ಥವಾಗಿ ಚಿತ್ರಿತವಾಗಿದೆ. ಪರಿಸರದಲ್ಲಿ ಅವನತಿ ಹೊಂದುತ್ತಿರುವ ಅನೇಕರ ಬದುಕಿನ ಚಿತ್ರಗಳನ್ನು ನಾವು ಗುರುತಿಸಲಾರದಷ್ಟು ಮಂದರಾಗಿದ್ದೇವೆ. ಇಂದಿಗೂ ಕೂಡ ನಮ್ಮೆದುರಿನಲ್ಲೇ ಬದುಕಿನ ಶ್ರೇಷ್ಠತೆಯನ್ನು ಕಳೆದುಕೊಳ್ಳುತ್ತಿರುವ ಜನರಿಗೆ ಏನೂ ಮಾಡಲಾಗದೆ ಕೇವಲ ಮೂಕಪ್ರೇಕ್ಷಕರಾಗಿದ್ದೇವೆ ಎಂಬುದನ್ನು ಕೂಡ ಕಥೆ ಧ್ವನಿಸುತ್ತದೆ. ಕುರುಡು ನಂಬಿಕೆಗಳ ಆಗರವಾಗಿರುವ ಗ್ರಾಮೀಣ ಜನಗಳ ಜೀವನ ಮತ್ತು ಅವರ ಸೀಮಿತ ಆಸೆ–ಆಕಾಂಕ್ಷೆಗಳನ್ನು ಕಥೆ ಅತ್ಯಂತ ದಕ್ಷವಾಗಿ ಬಿಂಬಿಸುತ್ತದೆ. ಉತ್ತಮ ಶಿಲ್ಪಿಯಾಗಬಹುದಾಗಿದ್ದ ಸೂರಾಚಾರಿಯ ಅವನತಿ ಇಲ್ಲಿನ ಒಂದು ಮುಖವಾದರೆ ಮಕ್ಕಳ ಯೋಗ ಇಲ್ಲದಿರುವ ಸುಬ್ಬಯ್ಯ ಇನ್ನೊಂದು ಮುಖ ಸುಬ್ಬಯ್ಯನ ಹೆಂಡತಿಗೆ ಮಕ್ಕಳು ಉಳಿಯದಿರುವುದಕ್ಕೆ ಅವಳ ಮೊಲೆಯ ದೋಷ ಕಾರಣವೆನ್ನುವುದು ಇಡೀ ಕಥೆಯಲ್ಲಿನ ವಿಕೃತಗೊಂಡ ಮೌಲ್ಯಗಳನ್ನು ಎತ್ತಿತೋರಿಸುತ್ತದೆ. ರೋಗಗ್ರಸ್ಥ ಸಮಾಜದ ಇಂತಹ ಬೆಳವಣಿಗೆಯನ್ನು 'ಅವನತಿ' ಅತ್ಯಂತ ಪ್ರಭಾವಕಾರಿಯಾಗಿ ಚಿತ್ರಿಸಿದೆ. ಕಥೆಗಾರ ಇಲ್ಲಿ ಯಾವುದೇ ಬಗೆಯ ಸಾಕೇತಿಕತೆ ಅಥವಾ ಪ್ರತಿಮೆಗಳಿಗೆ ಹಾತೊರೆಯದೆ ಕಥೆಯನ್ನು ನೇರವಾಗಿ, ಜನಪರೀಯ ನಿಟ್ಟಿನಲ್ಲಿ ಹೇಳುತ್ತಾ ಹೋಗುವ ರೀತಿ ಕೂಡ ಇಲ್ಲಿ ನಾವು ಗಮನಿಸಬೇಕಾದ ಬಹುಮುಖ್ಯ ಅಂಶ.

ಖಾಸಗಿಯಾಗಿ ಪಡೆಯುವ ಅನುಭವಗಳು ಅಭಿವ್ಯಕ್ತಿ ಪಡೆಯುವುದರೊಳಗಾಗಿ ಸಾಮಾಜಿಕವಾಗಿ ರೂಪುಗೊಳ್ಳುತ್ತವೆ. ವೈಯಕ್ತಿಕ ಅನುಭವಗಳಲ್ಲಿ ಸಾಮಾಜಿಕತೆಯನ್ನು ಸಾಮಾಜಿಕ ಅನುಭವಗಳಲ್ಲಿ ವೈಯಕ್ತಿಕತೆಯನ್ನು ನಿರಂತರವಾಗಿ ಸಾಹಿತ್ಯವು ಹುಡುಕುತ್ತಿರುತ್ತದೆ. ಈ ಅನುಭವಗಳಿಂದ ತಮ್ಮ ಆತ್ಮಶೋಧನೆ ಮಾಡಿಕೊಳ್ಳುವ ಮನುಷ್ಯನಲ್ಲಿ ಒಪ್ಪುತಪ್ಪುಗಳ

ತಿಳುವಳಿಕೆ ಆಕಾಂಕ್ಷೆಗಳ ಪೂರೈಕೆಗಾಗಿ ಸೃಷ್ಟಿಸುವ ಅತಿರಂಜಿತ ಕಲ್ಪನೆಗಳನ್ನು ಅವನ ಹೊಸ ನೈತಿಕ ನಿಯಮಗಳು ಬಲಗೊಳ್ಳಲು ಸಾಧ್ಯವಾಗುತ್ತದೆ. ಈ ನಿಯಮಗಳು ವೈಯಕ್ತಿಕ ತುಡಿತಗಳಿಗೆ ಪೂರಕವಾಗಿಯೇ ಸೃಷ್ಟಿಸಿಕೊಂಡವು ಕಾಲನಂತರ ಇದು ಸಮಾಜದ ನೈತಿಕ ನಿಯಮವಾಗಿ ರೂಪುಗೊಳ್ಳುವ ಸಾಧ್ಯತೆ ಉಂಟಾಗುತ್ತದೆ. ಒಂದು ಕಾಲಕ್ಕೆ ಆಧುನಿಕ ಮೌಲ್ಯವೆನಿಸಿಕೊಂಡ ನಿಯಮಗಳು ಕಾಲಚಕ್ರದ ಗತಿಯಲ್ಲಿ ಈ ಮೌಲ್ಯವು ಸಾಂಪ್ರದಾಯಿಕ ಮೌಲ್ಯವಾಗಿ ಪರಿವರ್ತನೆಗೊಳ್ಳುತ್ತದೆ. ಮನುಷ್ಯನು ಮಾಡಿಕೊಳ್ಳುವ ಈ ನೈತಿಕ ನಿಯಮಗಳ ಚಲನೆಯನ್ನು ಆಗಿಂದ್ದಾಗಲೇ ಕಂಡುಕೊಳ್ಳುತ್ತಿರುತ್ತದೆ. ನವ್ಯಸಾಹಿತ್ಯದ ಕಥೆಗಳಲ್ಲಿ ನಾವು ಈ ಅಂಶದ ಕಡೆಗೆ ಹೆಚ್ಚಿನ ಒತ್ತುಕೊಟ್ಟಿರುವುದನ್ನು ನೋಡುತ್ತೇವೆ. ನಿಯಮ ಸೃಷ್ಟಿಸುವಿಕೆಯಲ್ಲಿ ಮನುಷ್ಯನ ಪಾತ್ರ, ಪರಿಸರದ ಪಾತ್ರ, ಅವುಗಳ ಸಂಬಂಧಗಳಲ್ಲಿನ ಬಿರುಕುಗಳನ್ನು ವಿಭಿನ್ನ ರೀತಿಯಲ್ಲಿ ಕಟ್ಟಿಕೊಡುತ್ತಾ ಹೋಗುತ್ತದೆ.

ನವ್ಯ ಸಾಹಿತ್ಯದ ಒತ್ತು ಇರುವುದು ಮನುಷ್ಯನ ಅನುಭವದ ವೈಯಕ್ತಿಕತೆಯ ಮೇಲೆ ಅದು ಎಷ್ಟರಮಟ್ಟಿಗೆ ಎಂದರೆ ಸಾಹಿತ್ಯ ಸೃಷ್ಟಿಯ ಕೆಲಸದಲ್ಲಿ ಅನುಭವವನ್ನು ಅದರಿಂದಾಚೆಗಿರುವ ಎಲ್ಲ ಚೌಕಟ್ಟುಗಳಿಂದ ದೂರ ಇಟ್ಟು ಶೋಧಿಸುತ್ತಾರೆ ಎನ್ನಿಸುತ್ತದೆ. ಮನುಷ್ಯ ತನ್ನ ನಡವಳಿಕೆಯ ಬಗ್ಗೆ ಇಟ್ಟುಕೊಳ್ಳುವ ಅಪೇಕ್ಷೆ ಮತ್ತು ಅವನ ಮನಸ್ಸಿನ ನಿಜವಾದ ಆಗುಹೋಗುಗಳ ಮಧ್ಯೆ ಇರುವ ಬಿರುಕುಗಳನ್ನು ತೋರಿಸುವುದು ಇನ್ನೊಂದು ವಿಶಿಷ್ಟ ರೀತಿಯೆಂದರೆ ಅನುಭವವನ್ನು ಅದು ಇದ್ದ ಹಾಗೆಯೇ ಇಡಿಯಾಗಿ ದಾಖಲೆಮಾಡಿ ಅದರ ಬಗ್ಗೆ ನಮಗಿರುವ ಗ್ರಹಿತ ಕಲ್ಪನೆಗಳನ್ನು ದಿಕ್ಕರಿಸುವಂತೆ ಮಾಡುವುದು. ಕಥನಸಾಹಿತ್ಯದಲ್ಲಿ ಅನುಭವವನ್ನು ಶೋಧಿಸುವುದು ಅದರ ಕೆಲಸದಲ್ಲಿ ಅದಕ್ಕೆ ಸಮಗ್ರತೆ ಕೊಡಬಹುದಾದ ಯಾವುದೇ ಚೌಕಟ್ಟು ಬಳಸುವುದಿಲ್ಲ. ಇಂತಹ ಯಾವ ಚೌಕಟ್ಟುಗಳಲ್ಲಿ ನವ್ಯರಿಗೆ ನಂಬಿಕೆ ಇಲ್ಲ. ಇಂಥ ಚೌಕಟ್ಟುಗಳನ್ನು ತಿರಸ್ಕರಿಸುವುದಕ್ಕಾಗಿಯೇ ತಮ್ಮ ಅನುಭವವನ್ನು ದಾಖಲೆ ಮಾಡುವುದೇ ತಮ್ಮ ಉದ್ದೇಶವೆನ್ನುವಂತೆ ಬರೆದಿದ್ದಾರೆ. ಬಂಡಾಯ ಮನೋವೃತ್ತಿ ಯಾವ ಚೌಕಟ್ಟುಗಳ ಸಹಾಯವಿಲ್ಲದೆ ಅವರ ಅನುಭವವನ್ನು ಗ್ರಹಿಸುವ ರೀತಿಯೇ ಅಂತಹ ಎಲ್ಲ ಚೌಕಟ್ಟುಗಳನ್ನು ತಿರಸ್ಕರಿಸುವ ಉಪಾಯವಾಗಿ ಬಿಟ್ಟಿದೆ. ಅದು ನಾವು ಅನುಭವವನ್ನು ನೋಡುವ ಬಗೆಗಳನ್ನು ಬದಲಾಯಿಸಿಬಿಡುತ್ತದೆ. ಮನುಷ್ಯನ ಸ್ವಭಾವದ ಬಗ್ಗೆ ನಮಗಿರುವ ತಿಳುವಳಿಕೆಯಲ್ಲಿ ಮಾರ್ಪಾಡುಗಳನ್ನು ಮಾಡುತ್ತದೆ.

ನವ್ಯ ಬರಹಗಾರರಲ್ಲಿ ಸಾಂಪ್ರದಾಯಿಕವಾದ ಚಿಂತನೆಯನ್ನು ತಿರಸ್ಕರಿಸಲಾಗುತ್ತದೆ. ಇದಕ್ಕೆ ಕಾರಣ ಮನುಷ್ಯನ ಅನುಭವವನ್ನು ಅದು ಇದ್ದ ಹಾಗೆ ಇಡಿಯಾಗಿ ಗ್ರಹಿಸಿ ಆ ಮೂಲಕ ಸಾಂಪ್ರದಾಯಿಕ ಚಿಂತನೆ ಆ ಅನುಭವಗಳನ್ನು ಅರ್ಥೈಸುವ ಬಗೆಗಳನ್ನು ಧಿಕ್ಕರಿಸುವುದು ಮನುಷ್ಯ

ಸ್ವಭಾವದ ಬಗ್ಗೆ ತೀರ ವಿಶಿಷ್ಟವಾದ ನಿಲುವನ್ನು ಕೊಡುವುದಲ್ಲದೆ ಅದರ ಪರಿಕಲ್ಪನೆಯ ಪ್ರಕಾರ ಮನಸ್ಸಿನ ಎಲ್ಲ ವ್ಯಾಪಾರಗಳ ಹಿಂದೆ ಇರುವ ಕೆಲವು ಪ್ರವೃತ್ತಿಗಳು ಅನುಭವದ ನಿಜವಾದ ಅಂಶಗಳು ಅದರಲ್ಲೂ ಕಾಮದಷ್ಟೇ ಪ್ರಬಲವಾದ ಪ್ರವೃತ್ತಿಯನ್ನು ಗುರುತಿಸುವುದು ಕನ್ನಡದ ಮಟ್ಟಿಗೆ ಆಲನಹಳ್ಳಿ ಕೃಷ್ಣ, ಪೂರ್ಣಚಂದ್ರತೇಜಸ್ವಿ, ಪಿ.ಲಂಕೇಶ್, ಯು.ಆರ್.ಅನಂತಮೂರ್ತಿ, ಬಿ.ಸಿ.ರಾಮಚಂದ್ರಶರ್ಮ ಇವರುಗಳಲ್ಲಿ ಪ್ರಧಾನವಾಗಿ ಕಂಡುಬರುತ್ತದೆ. ಮನುಷ್ಯನ ಇಡೀ ಮಾನಸಿಕ ಜೀವನವನ್ನು ಅವನು ಇತರರ ಮೇಲೆ ಮಾಡುವ ಆಕ್ರಮಣ ಮತ್ತು ಅದು ಸಾಧ್ಯವಾಗದಿದ್ದಾಗ ಅನ್ನಿಸುವ ಅವಮಾನ ಇವೆರಡರ ಮಧ್ಯೆ ಹರಿದಾಡುವರೆಗೆ ಮಾತ್ರ ಗುರುತಿಸುತ್ತಾರೆ. ಹೀಗಾಗಿ ಸಮಾಜದಲ್ಲಿ ಶಿಷ್ಟವೆನಿಸಿಕೊಳ್ಳುವ ಸ್ನೇಹ, ಅನುಕಂಪ, ಒಳ್ಳೆಯತನ ಇವೆಲ್ಲವೂ ಹೇಗೆ ಇತರರ ಮೇಲೆ ಹೇರಿ ಹಾಗೂ ಹೋಗುಗಳು ವ್ಯಾಪಾರದ ಮೇಲೂ ಮುಖವಾಡಗಳು ಅಥವಾ ತಂತ್ರಗಳಾಗಿ ಒಬ್ಬ ಲೇಖಕ ಪಾತ್ರಗಳ ಮೂಲಕ ತೆರೆದಿಡುತ್ತಾರೆ. ಮನುಷ್ಯನ ಸ್ವಭಾವ ಅವನು ಸಮಾಜದಲ್ಲಿ ನಡೆದುಕೊಳ್ಳುವ ನಡವಳಿಕೆಗಳು ಪ್ರತಿಯಾಗಿ ಸಮಾಜವು ಸ್ವಲ್ಪಮಟ್ಟಿಗಾದರೂ ಸ್ಪಂದಿಸಿದಾಗ ಸಮಾಜ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ಜವಾಬ್ದಾರಿಯುತ ಲೇಖಕನ ಗಮನಕ್ಕೆ ತರುತ್ತದೆ. ಚಾರಿತ್ರಿಕ ಸ್ಥಿತ್ಯಂತರವನ್ನು ಸಾಹಿತ್ಯದಲ್ಲಿ ಹಿಡಿದಿಡುತ್ತಾ ಭಾರತದ ಹಳೆಯ ನಂಬಿಕೆಗಳಿಗೆ ಹೊಸರೀತಿಯ ಪ್ರತಿನಂಬಿಕೆಗಳು ಸೃಷ್ಟಿಯಾಗುವಿಕೆ ಹೊಸದೃಷ್ಟಿಕೋನಗಳು ರೂಪುಗೊಂಡಿರುವುದನ್ನು ಕಾಣುತ್ತೇವೆ. ಬರಹವನ್ನು ಶೋಧಿಸುವಾಗ ಪ್ರಾಮಾಣಿಕವಾಗಿ ತನ್ನ ಅಂತರಂಗ, ಬಹಿರಂಗಗಳ ಶೋಧನೆಯನ್ನು ಮಾಡಿಕೊಳ್ಳುತ್ತಾನೆ. ಆಗ ಅವನ ಸೃಷ್ಟಿಯ ನೈತಿಕ ನಿಯಮಗಳ ಚೌಕಟ್ಟಿನ ಕಡೆಯ ಗಮನವು ಮುಖ್ಯವಾಗುತ್ತದೆ.

ಒಟ್ಟಾರೆಯಾಗಿ ಒಂದು ಅಂಶವನ್ನು ಗಮನದಲ್ಲಿಟ್ಟುಕೊಳ್ಳಬಹುದು. ನೈತಿಕ ನಿಯಮವೆಂದರೆ ಮನುಷ್ಯನ ಜೀವಂತಿಕೆಯನ್ನು ಭ್ರಷ್ಟಗೊಳಿಸುವ ಎಲ್ಲವನ್ನು ವಿರೋಧಿಸುವ ಅರ್ಥದಲ್ಲಿ ಆಲನಹಳ್ಳಿ ಹಾಗೂ ತೇಜಸ್ವಿಯರ ಕಥನಸಾಹಿತ್ಯದಲ್ಲಿ ರೂಪುಗೊಂಡಿರುವ ಹೊಸನೈತಿಕ ನಿಯಮಗಳ ಕಡೆ ಗಮನಹರಿಸಿದಾಗ ಮಾತ್ರ ಕಥನಸಾಹಿತ್ಯ ಗಟ್ಟಿಯಾಗಿ ನೆಲೆಯೂರಲು ಅದರ ಅರ್ಥಸ್ಫುರಣೆಯಾಗಲು ಸಾಧ್ಯ. ಆಧುನಿಕತೆಯ ಗಾಳಿಯಿಂದ ಮನುಷ್ಯನು ಸಮಾಜದ ಎಲ್ಲ ನಡವಳಿಕೆಗಳನ್ನು ಕ್ರಿಯೆಗಳನ್ನು ಪ್ರಶ್ನಿಸುವ ಸಂದೇಹಿಸುವ ಗುಣ ಅವನದ್ದಾಗಿದೆ. ಯಾವುದನ್ನು ನಂಬಲಾರದ ಒಪ್ಪಲಾರದ ಸ್ಥಿತಿ ಸಮಾಜದ ಮೌಲ್ಯಗಳ ಅರ್ಥಹೀನತೆ ಕೃತಕತೆಯನ್ನು ಪ್ರತಿಭಟಿಸುವ ರೀತಿ ನಿರಾಕರಣೆಯಿಂದ. ಈ ನಿರಾಕರಣೆಯ ಪರೀಕ್ಷೆಗಾಗಿ ತನ್ನನ್ನೇ ಒಳಗುಮಾಡಿಕೊಳ್ಳುತ್ತಾನೆ. ತನ್ನಲ್ಲೇ ನಿಶ್ಚಿತವಾದ ನೈತಿಕ ತೀರ್ಮಾನಗಳಿಗೆ ಯಾವುದೇ ಮೌಲ್ಯಗಳಿಲ್ಲದಿರುವ ಸಂದರ್ಭದಲ್ಲಿ ವ್ಯಕ್ತಿತ್ವವನ್ನು ಒತ್ತಾಯಪೂರ್ವಕವಾಗಿಯೇ ಆರೋಪಿಸಿಕೊಳ್ಳುತ್ತಾನೆ. ಇದರಿಂದ ಆಂತರಿಕ ಒತ್ತಡಗಳಿಗೆ ಒಳಗಾಗುತ್ತಾನೆ. ಮುಖ್ಯವಾಗಿ ತನ್ನ

ಇಂದ್ರಿಯಗಳಿಂದ ಗ್ರಹಿಸಿದ ಅನುಭವಗಳನ್ನು ವಸ್ತುನಿಷ್ಠವಾಗಿ ಆತ್ಮವಿಮರ್ಶೆ ಮಾಡಿಕೊಂಡು ಹೊಸಮೌಲ್ಯಗಳನ್ನು ತೀರ್ಮಾನಗಳನ್ನು ಕಂಡುಕೊಳ್ಳುವತ್ತ ತನ್ನ ಒಲವನ್ನು ಮೀಸಲಿರಿಸುತ್ತಾನೆ. ಇವುಗಳಿಗೆಲ್ಲ ತನ್ನನ್ನು ಶೋಧಿಸಿಕೊಳ್ಳುವುದರೊಂದಿಗೆ ಸಮಸ್ಯೆಗಳನ್ನು ಬಿಡಿಸಲು ಪ್ರಯತ್ನಿಸುತ್ತಾನೆ.

ಆಲನಹಳ್ಳಿ ಹಾಗೂ ತೇಜಸ್ವಿಯವರ ಕಥನಸಾಹಿತ್ಯದಲ್ಲಿ ಆಧುನಿಕತೆಯ ಮೌಲ್ಯ ಸಾಂಪ್ರದಾಯಿಕ ಮೌಲ್ಯ, ನೈತಿಕ ನಿಯಮಗಳಲ್ಲಿ ಬದಲಾವಣೆಗಳನ್ನು ಮನುಷ್ಯ ಸ್ವಭಾವಗಳಲ್ಲಿಯೇ ಕಂಡುಕೊಳ್ಳುವುದು ಬಹಳ ಪ್ರಮುಖವಾದವುಗಳು.

೬.೪. ಮುಗ್ದತೆ ಮತ್ತು ವೈಚಾರಿಕತೆ

ಆಲನಹಳ್ಳಿ ಹಾಗೂ ತೇಜಸ್ವಿಯವರು ಭಾಷೆಯನ್ನು ಬಳಸಿದ ಕ್ರಮವನ್ನು ನೋಡುವುದಾದರೆ ಮುಗ್ದತೆಯ ರೂಪದಲ್ಲಿ ಬಯಲುಸೀಮೆಯ ಬದುಕಿನ ಕ್ರಮಗಳು ಹಾಗೂ ಅಲ್ಲಿನ ಭಾಷಾವೈವಿಧ್ಯತೆಯನ್ನು ಬಾಲ್ಯದಲ್ಲಿ ಅನುಭವಿಸಿದ ಹಳ್ಳಿಯ ಜನರ ನಡವಳಿಕೆಯನ್ನು ಮತ್ತು ಮೈಸೂರಿನ ಸುತ್ತಮುತ್ತಲಿನ ಗ್ರಾಮ್ಯಭಾಷೆಯನ್ನು ಮುಗ್ದತೆಯಿಂದ ಆಲನಹಳ್ಳಿಯವರು ಬಳಸಿದ್ದಾರೆ. ತೇಜಸ್ವಿಯವರು ಮಲೆನಾಡಿನ ಪರಿಸರ ವೈಚಾರಿಕತೆಯನ್ನು ಬಿತ್ತರಿಸುವ ಭಾಷೆಯನ್ನು ಬಳಸುತ್ತಾರೆ. "ತೇಜಸ್ವಿ ಮೂಲತಃ ತಾತ್ವಿಕ ಹುಡುಕಾಟ ಮಾಡುವ ಲೇಖಕರು. ಆದರೆ ಇದಕ್ಕಾಗಿ ಅವರು ಬರಹವನ್ನು ಜಟಿಲ ಮಾಡಲಿಲ್ಲ ಎನ್ನುವುದು. ಅವರ ಬರಹದ ದೊಡ್ಡ ಸಾಧನೆಯಾಗಿದೆ. ಇದಕ್ಕೆ ಒಂದು ಕಾರಣ ಬದುಕನ್ನು ತೇಜಸ್ವಿ ವ್ಯಂಗ್ಯವಾಗಿ ತಮಾಷೆಯಲ್ಲಿ ನೋಡುತ್ತಾ ಸೃಷ್ಟಿಸಿರುವ ಭಾಷೆ ಮತ್ತು ಕಥನಶೈಲಿ ವಿಶಿಷ್ಟವಾದುದು"[೯೬] ನವ್ಯಸಾಹಿತ್ಯದ ಕಾಲಮಾನದಲ್ಲಿ ಸಾಹಿತ್ಯಕ್ಷೇತ್ರಕ್ಕೆ ಕಾಲಿರಿಸಿದ ತೇಜಸ್ವಿ ಅವನು ನಂತರ ಹೊಸ ದಿಗಂತಕ್ಕೆ ಸಾಗಿದರು. ಅವರ ಬರವಣಿಗೆ ಭಾಷೆ ಕಾಲತೀತವಾಗಿದ್ದು ನವೋದಯ ಭಾಷಾಸಂವೇದನೆ, ನವ್ಯದ ದ್ವಂದ್ವ, ನವ್ಯೋತ್ತರದ ಆಕ್ರೋಶ ಸ್ಪಂದನೆ ಅವರ ಕಥನ ಸಾಹಿತ್ಯದಲ್ಲಿದೆ. ನೈರಾಶ್ಯ ಹಳಹಳಿಕೆಗಳಿಲ್ಲದ ಪ್ರಾಂಜಲ ಮನಸ್ಸಿನಿಂದ ಸಮಾಜವನ್ನು ವೀಕ್ಷಿಸುವ ಅವರು ಅನುಭವಗಳನ್ನು ಸಾಚಾಭಾಷೆಯಲ್ಲಿ ದಾಖಲಿಸುತ್ತಾ ಅಪರೂಪದ ವಿಶಿಷ್ಟ ಸಾಹಿತ್ಯ ಪ್ರಕಾರಗಳಲ್ಲಿ ತಮ್ಮ ಕೃತಿಗಳ ಮೂಲಕ ವಿಶಿಷ್ಟ ಛಾಪು ಮೂಡಿಸಿದ್ದಾರೆ.

ತೇಜಸ್ವಿಯವರ 'ಕಾಡು ಮತ್ತು ಕ್ರೌರ್ಯ' ನವ್ಯಕಾಲಘಟ್ಟದಲ್ಲಿ ರಚಿತವಾಗಿದ್ದರೂ ಭಾಷೆಯಲ್ಲಿ ಕ್ಲಿಷ್ಟತೆ, ಸಂಕೇತ, ದ್ವಂದ್ವತೆಗಳಿಲ್ಲದೆ ನೇರ ಮತ್ತು ಕಾವ್ಯಾತ್ಮಕವಾದ ಭಾಷೆಯನ್ನು ಬಳಸಿದ್ದಾರೆ. 'ಬಲಕ್ಕೆ ನೋಡಿದವರ ನೆತ್ತಿ ಕದಡುವಂತೆ ಕಿಕ್ಕಿರಿದ ಕಾಡುಹಬ್ಬಿದ ಪರ್ವತ ಶ್ರೇಣಿಗಳು ತರಂಗತರಂಗವಾಗಿ ಮಲಗಿದ್ದವು. ಲಿಂಗನು ಉಣಗೋಲನ್ನು ದಾಟಿ ಇನ್ನೇನುಬಿದ್ದು

---

೯೬. ರಹಮತ್ ತರೀಕೆರೆ, 'ಕತ್ತಿಯಂಚಿನ ದಾರಿ', ಪುಟ. ೧೦೨, ೨೦೧೫.

ಹೋಗುವಂತಿದ್ದ ಕಂಬಳಿಯನ್ನು ಹೆಗಲ ಮೇಲೆಳೆದುಕೊಳ್ಳುತ್ತ ಕೊಳೆ ಇಲ್ಲದ ಆಕಾಶವನ್ನು ಸುಳ್ಳುಸುಳ್ಳೇ ಗುಡಿಸುವಂತೆ ಓಲಾಡುತ್ತಿದ್ದ ಅಡಿಕೆ ಮರಗಳನ್ನು ಅದರಾಚೆಯ ಹೇರಡಿ ಮೆತ್ತಿದ್ದ ಪರ್ವತಗಳನ್ನು ಒಂದರೆಕ್ಷಣ ನೋಡಿ ನಿಟ್ಟುಸಿರೊಂದನ್ನು ಬಿಟ್ಟು ಮುನ್ನಡೆದ' ಎಂಬ ಪ್ರಕೃತಿ ಮತ್ತು ವ್ಯಕ್ತಿತ್ವ ವಿವರ ನೀಡುವಲ್ಲಿ ಅವರ ಭಾಷೆ ಓದುಗರಿಗೆ ವಿಶಿಷ್ಟ ಅನುಭವ ನೀಡುತ್ತದೆ. ಕಾದಂಬರಿಯಲ್ಲಿ ಪ್ರಥಮಪುರುಷ ಭಾಷಾ ಅಭಿವ್ಯಕ್ತಿಯಿರುವಂತೆ ಉತ್ತಮ ಪುರುಷ ಸಂವೇದನಾ ಭಾಷೆಯೂ ಬಳಕೆಯಾಗಿದೆ. ಮಲೆನಾಡಿನ ಭಾಷೆಯನ್ನು ಸಮರ್ಥವಾಗಿ ಬಳಸುತ್ತಾ ಮಲೆನಾಡಿನ ಎಲ್ಲಾ ವರ್ಗದವರ ಸಂವೇದನೆಗಳನ್ನು ದಾಖಲಿಸುತ್ತಾರೆ. ಸಾಹಿತ್ಯ, ತತ್ವ, ಬದುಕಿನ ಬಗೆಗಿನ ಅರ್ಥ ವಿಶ್ಲೇಷಣೆ, ಬೌದ್ಧಿಕಮಟ್ಟದ ಶೋಷಣೆಗಳ ಸಾಚಾ ಅಭಿವ್ಯಕ್ತಿಯು 'ಸ್ವರೂಪ' ಕಿರುಕಾದಂಬರಿಯಲ್ಲಿದೆ. ನವ್ಯ ಹಾಗೂ ಪರಿವರ್ತನಾಶೀಲ ಮನಃಸ್ಥಿತಿಯಲ್ಲಿ ರಚಿಸಿದ ಈ ಕಾದಂಬರಿಯ ಭಾಷೆ ಸರಳ, ನವುರು ಹಾಗೂ ಅಭಿವ್ಯಕ್ತಿ ನೇರವಾಗಿದೆ. ಶ್ರೀನಿವಾಸನ ಸ್ವಗತದ ಮೂಲಕ ಸಾಗುವ ಕಾದಂಬರಿ ವಿದ್ಯಾರ್ಥಿ ಜೀವನದ ವಿಶಿಷ್ಟ ಅನುಭವ ನಗರದ ಸಾಮಾಜಿಕ ಬದುಕಿನ ವಿಶ್ಲೇಷಣೆಯನ್ನು ವಿವರಿಸುತ್ತದೆ. ಶ್ರೀನಿವಾಸ ಮಲೆನಾಡಿನ ಜೀವನಾನುಭವ ಶಿಕಾರಿ ವೃತ್ತಾಂತಗಳ ಬಗ್ಗೆ ತಿಳಿಸುವಲ್ಲಿ ಏರಿಳಿತದ, ಚರ್ಚೆಯ ಶ್ರದ್ಧೆಯ ಭಾಷಾಪ್ರಯೋಗವನ್ನು ಗಮನಿಸಬಹುದಾಗಿದೆ. ವ್ಯಕ್ತಿತ್ವ ಪಲಾಯನ, ದ್ವಂದ್ವ, ಮೌಲ್ಯಗಳ ಭಂಜಕತೆಯಲ್ಲಿ ಭಾಷೆ ತೀಕ್ಷ್ಣವಾಗಿದ್ದು ಕಾದಂಬರಿ ಬೆಳವಣಿಗೆಗೆ ಸಹಾಯಕವಾಗಿದೆ.

'ನಿಗೂಢ ಮನುಷ್ಯರು' ಕಿರುಕಾದಂಬರಿಯು ಪರಿಸರ ಹಾಗೂ ಮಾನವನ ನಿಗೂಢತೆಯನ್ನು ಭೇದಿಸುತ್ತಾ ಸಾಗುತ್ತದೆ. ಪರಸ್ಪರ ವೇಷ ಧರಿಸುವ ರಂಗಪ್ಪ, ಜಗನ್ನಾಥ ಗೋಪಾಲಯ್ಯರು ಭೂಕಂಪ ಜಡಿಮಳೆ ಹಾಗೂ ಪ್ರಕೃತಿಯ ನಿಗೂಢತೆ ಎದುರು ಅವರ ಸ್ವರೂಪಗಳ ದರ್ಶನವಾಗುತ್ತದೆ. ಗ್ರಾಮ್ಯ ಗ್ರಾಂಥಿಕ, ಸ್ವಗತ, ಚರ್ಚೆ ಹಾಗು ನಿರೂಪಣೆಯೊಂದಿಗೆ ಸಾಗುವ ಕಾದಂಬರಿ ಅನುಮಾನ ಮತ್ತು ಕುತೂಹಲಗಳಿಗೆ ಅವಕಾಶ ಕಲ್ಪಿಸುತ್ತವೆ. "ನವ್ಯದ ಮಾದರಿಯಲ್ಲಿ ನಿಗೂಢ ಮನುಷ್ಯರು ಮತ್ತು ಸ್ವರೂಪ ಎರಡೂ ಕಾದಂಬರಿಗಳು ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ವ್ಯಕ್ತವಾಗುವ ಆತ್ಮನಿಷ್ಠತೆ ಮತ್ತು ಸ್ವಗತದ ಧಾಟಿಯೆ ಇದಕ್ಕೆ ಮುಖ್ಯ ಕಾರಣ ಸ್ವರೂಪದಲ್ಲಿ ಗಾಢವಾದ ಆತ್ಮನಿವೇದನೆ ಇದೆ. 'ನಿಗೂಢಮನುಷ್ಯರು' ಕಾದಂಬರಿಯಲ್ಲಿ 'ರಹಸ್ಯ' ಸ್ಥಾಯಿಯಾದರೆ 'ಸ್ವರೂಪ'ದಲ್ಲಿ 'ಮೌನ'ಸ್ಥಾಯಿಯಾಗಿದೆ. ನಿರೂಪಣೆ ಏಕರೀತಿಯಿಂದ ಕೂಡಿದ್ದು ಸೂಕ್ಷ್ಮವಾಗಿದೆ. ವ್ಯಕ್ತಿಯ ದುರಂತಗಳಿಗೆ ಮನುಷ್ಯಕುಲದ ವ್ಯಂಗ್ಯ ಸ್ವರೂಪದ ಶ್ರೀನಿವಾಸನ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ಅವರವರ ಕರ್ಮಕ್ಕೆ ಅವರವರೇ ಹೊಣೆಗಾರರು ಎಂಬ ತತ್ವ ಈ ನಿರೂಪಣೆಯಲ್ಲಿ ಕಾಣಿಸಿಕೊಳ್ಳುತ್ತದೆ".[೯೭]

---

೯೭. ಜಿ.ಟಿ.ವೀರಪ್ಪ, ಡಾ. ಎಂ.ಭೈರೇಗೌಡ, ತೇಜಸ್ವಿ ಸಾಹಿತ್ಯ ಕೃಷಿ (ಸಂ), ಪುಟ. ೨೦, ೨೦೧೧.

ಹೀಗೆ ಸ್ವರೂಪ ಮತ್ತು ನಿಗೂಢ ಮನುಷ್ಯರು ಕಾದಂಬರಿ ನವ್ಯದ ಏಕರೀತಿಯ ಸೂಕ್ಷ್ಮ ಭಾಷೆಯನ್ನು ನೇರವಾಗಿ ಕಟ್ಟಿಕೊಡುತ್ತದೆ. ಸ್ವರೂಪದಲ್ಲಿ ಶ್ರೀನಿವಾಸ ನಗರ ತೊರೆದು ಮಲೆನಾಡಿನ ಅನುಭವಕ್ಕೆ ಅರಸಿದರೆ ನಿಗೂಢಮನುಷ್ಯರು ಕಾದಂಬರಿಯಲ್ಲಿ ಮಲೆನಾಡಿನ ರೌದ್ರತೆಗೆ ಭಯಪಟ್ಟು ಜಗನ್ನಾಥ, ರಂಗಪ್ಪ ಪುನಃ ನಗರದತ್ತ ಪ್ರಯಾಣ ಮಾಡುವ ಸನ್ನಿವೇಶಗಳಿವೆ. ಸೃಜನಶೀಲ ನಿರೂಪಣೆಯ ವಕ್ತಾರರಂತೆ ಕಾಣುವ ತೇಜಸ್ವಿ ಅವರು ಕನ್ನಡನಾಡಿನ ನಾಡಿಬಡಿತವನ್ನು ಅರಿತು ಕನ್ನಡ ಭಾಷೆಯ ಸಾಧ್ಯತೆಗಳನ್ನು ಅಪಾರವಾಗಿ ವಿಸ್ತರಿಸಿದರು. ಅವರ ಕಥನದಲ್ಲಿ ವೈಚಾರಿಕತೆ, ವಾಸ್ತವ, ಅದ್ಭುತ ಹಾಗೂ ನಿಗೂಢ ಅಂಶಗಳನ್ನು ಮಾಂತ್ರಿಕವಾಗಿ ಸೃಜಿಸಬಲ್ಲವರಾಗಿದ್ದಾರೆ. ಹಾಸ್ಯವಿನೋದ, ಗಂಭೀರ ನುಡಿಗಳಲ್ಲಿ ತಮ್ಮ ಅಭಿವ್ಯಕ್ತಿಗಳನ್ನು ಹೊರಹಾಕುವ ತೇಜಸ್ವಿ ಕರ್ವಾಲೋ ಕೃತಿಯಲ್ಲಿ ಸಮಾಜವಾದದ ಬಗ್ಗೆ ಚಿತ್ರಿಸುತ್ತಾ ನವ್ಯೋತ್ತರದ ಗ್ರಾಮ್ಯ ಮತ್ತು ನಗರ ಎರಡೂ ರೀತಿಯ ಭಾಷೆಯನ್ನು ಬಳಸಿಕೊಂಡಿದ್ದಾರೆ. ಮಲೆನಾಡಿನ ಗ್ರಾಮ್ಯ ಭಾಷೆಯ ಅರಿವಿರುವ ಲೇಖಕರು ಸಮಾಜದ ಕೆಳವರ್ಗ, ವರ್ಣದ ಜನರು ಬಳಸುವ ಅವರೊಂದಿಗೆ ವ್ಯವಹರಿಸುವ ಭಾವನಾತ್ಮಕ ಉತ್ಕರ್ಷದ ಭಾಷೆಯ ಜೊತೆಗೆ 'ಕರ್ವಾಲೋ' ಕಾದಂಬರಿಯಲ್ಲಿ ಪ್ರಸ್ತಾಪಗೊಳ್ಳುವ ಕಥೆಯ ಹಂದರ. ಕರ್ವಾಲೊ ನೇತೃತ್ವದಲ್ಲಿ ಇಡೀ ಗುಂಪು ಬೆನ್ನು ಹತ್ತಿರುವುದು. ಆ ಓತಿಯನ್ನು ಇದು ಎಲ್ಲರನ್ನು ನಿಯಂತ್ರಿಸುತ್ತದೆ. ಕಾದಂಬರಿಗೆ ನಾಟಕೀಯ ತಿರುವನ್ನು ತಂದುಕೊಡುತ್ತದೆ. ಕ್ಲೈಮ್ಯಾಕ್ಸ್ ಕೂಡ ತಂದುಕೊಡುವುದು ಇದೆ ಎಂಬುದು ಕಾದಂಬರಿಯಿಂದ ಸ್ಪಷ್ಟವಾಗುತ್ತದೆ. ಜೀವವಿಕಾಸದ ಹಾದಿಯಲ್ಲಿ ಹಲವು ಸಂಗತಿಗಳನ್ನು ಬಿಚ್ಚುವ ನಿಗೂಢಗಳ ಪ್ರತಿಮೆ, ಸಂಕೇತಗಳಾಗುತ್ತ ನಮ್ಮ ವ್ಯಕ್ತಿತ್ವ ಆವರಿಸಿರುವ ಮತ್ತು ನಿಯಂತ್ರಿಸುವ ಹಾರುವ ಓತಿ ಸಹ್ಯಾದ್ರಿಯ ಅಂಚಿನಿಂದ ಪ್ರಪಾಪದ ಕಡೆಗೆ ಕುಪ್ಪಳಿಸಿ ನೀಲಿಯ ಶೂನ್ಯದಲ್ಲಿ ಲೀನವಾಗುವ ಇದು ಹಲವು ಸಂದಿಗ್ಧಗಳಿಗೆ ಓದುಗರನ್ನು ತಳ್ಳಿಹಲವು ಕುತೂಹಲದೊಂದಿಗೆ ಚಿರಸ್ಥಾಯಿಯಾಗುತ್ತದೆ.

ತೇಜಸ್ವಿ ಅವರ 'ಚಿದಂಬರ ರಹಸ್ಯ' ಕೃತಿಯಲ್ಲಿ ಜಾತಿದ್ವೇಷ, ವರ್ಗ, ವರ್ಣ, ಕಲಹ, ವಿಷಯಲಂಪಟತೆ, ದೌರ್ಜನ್ಯ ದಬ್ಬಾಳಿಕೆ ಕೊಲೆ, ಕ್ರೌರ್ಯ ಮತೀಯ ಗಲಭೆಯಲ್ಲಿ ಮುಳುಗಿರುವ ಕೆಸರೂರಿನ ಸಮಾಜದ ಜನರ ಪ್ರಾಣಿಗಳ ನಡವಳಿಕೆಯನ್ನು ಭಾಷೆಯ ಮೂಲಕ ಅನಾವರಣಗೊಳಿಸುತ್ತಾರೆ. ಕಾದಂಬರಿಯಲ್ಲಿ ಮಾಯ್ಲು ಮೇಸ್ತ್ರಿ ಕೋಳಿ ಕದಿಯುವ ನರಿಯ ಗುಹೆಯ ಬಳಿ ಚಾಣಕ್ಯತನದಿಂದ ಕೋಳಿ ಕಸಿದುಕೊಳ್ಳುವುದು ನಂತರ ಹರಿಜನರ ಪಾಲಿನ ದೈವಾಂಶಪುರುಷನಾಗಿ ಅವರೆ ಕೋಳಿಗಳನ್ನು ಭಕ್ತಿಯಿಂದ ಅರ್ಪಿಸುವ ಸನ್ನಿವೇಶಗಳಲ್ಲಿ ಮಾತ್ರ ಪ್ರಾಣಿಗಳ ವಿವರಣೆಯಿದ್ದು ಉಳಿದಂತೆ ಕಾದಂಬರಿಯ ಉದ್ದಕ್ಕೂ ಪ್ರಾಣಿ ನಡಾವಳಿಕೆಯ ಮನುಷ್ಯರ ವರ್ತನೆಗಳಿಂದ ಸಾಮಾಜಿಕ ಅಶಾಂತಿ ಉಂಟಾಗುವ ವಿವರಣೆಯನ್ನು ನೀಡುತ್ತಾರೆ.

'ಜುಗಾರಿಕ್ರಾಸ್' ಕಾದಂಬರಿಯಲ್ಲಿ ಭಾಷೆ, ಸಾಹಿತ್ಯ, ಪರಿಸರ, ಸಂಸ್ಕೃತಿ ದರ್ಶನ, ವಿಜ್ಞಾನ, ಜಾಗತೀಕರಣ, ಮಾರುಕಟ್ಟೆ ಹಾಗೂ ಕೃಷಿಪದ್ಧತಿಯ ಬಗ್ಗೆ ಹೊಸ ಒಳನೋಟಗಳನ್ನು ಕಂಡರಿಸಿದ್ದಾರೆ. ಭಾಷೆಯ ಬಳಕೆಯಲ್ಲಿ ಸೂಕ್ಷ್ಮತೆ ನವಿರಾದ ಹಾಸ್ಯವನ್ನು ಬೆರೆಸಿ ಸಂವೇದನೆಗಳನ್ನು ಪ್ರಕಟಿಸಿದ್ದು ಈ ಕೃತಿಯ ಕಲಾತ್ಮಕತೆ ಕನ್ನಡ ಕಾದಂಬರಿ ಲೋಕಕ್ಕೆ ಹೊಸ ಕಾಣ್ಕೆಯಂತಿದೆ. ಮಲೆನಾಡಿನ ಗ್ರಾಮೀಣ ಸನ್ನಿವೇಶಗಳನ್ನು ಸಂವೇದನೆಗಳನ್ನು ಅವರ ನೈಜ ಭಾಷೆಗಳಲ್ಲಿ ಅಭಿವ್ಯಕ್ತಿಸುತ್ತಾ ಭಾಷೆಯನ್ನು ಸಮರ್ಥವಾಗಿ ಬಳಸಿದ್ದಾರೆ. ದ್ವಂದ್ವಾರ್ಥ, ಗಾದೆಗಳು, ನೇರ ನುಡಿಗಳಿಂದ ಕಂಡಿರುವ ಈ ಕಾದಂಬರಿಯು ವಸ್ತು ವಿಶ್ಲೇಷಣೆಯಲ್ಲಿ ಪ್ರೌಢತೆಯನ್ನು ಸಾಧಿಸಿದೆ. ಚಕ್ರವ್ಯೂಹ ಎಂಬ ಅಧ್ಯಾಯವೊಂದಕ್ಕೆ ಕೊಟ್ಟಿರುವ ಶೀರ್ಷಿಕೆ ಇಡೀ ಕಾದಂಬರಿಗೆ ಅನ್ವಯಿಸುವಂತಿದೆ. ಜುಗಾರಿಕ್ರಾಸ್, ದೇವಪುರ ಎಂದರೆ ಅವ್ಯವಹಾರ, ಕಾಳವ್ಯವಹಾರ ಜಾಲದ, ಕೊಲೆ, ಸುಲಿಗೆ, ಮೋಸ, ಸಾಮಾನ್ಯವಾದ ಊರೆಂದು ಹೆಸರು ಕೇಳಿದ ತಕ್ಷಣ ಭಯ ಗೋಚರಿಸುವಂತೆ ಕಥೆ ಬೆಳವಣಿಗೆ ಹೊಂದಿದೆ. ಇಲ್ಲಿ ಏಲಕ್ಕಿ ಅಂದರೆ ಹಲವು ಅರ್ಥಗಳುಂಟು 'ಏಲಕ್ಕಿಸಪ್ಲೆ' ಎಂದರೆ ಗಾಂಜಾ, ಅಫೀಮು, ಕೆಂಪುಕಲ್ಲು, ಗಂಧವನ್ನು ಬೇಕಾದರೂ ಅರ್ಥ ಪಡೆಯಬಹುದಾಗಿದ್ದು ಭಯ ರೋಚಕತೆ ಈ ಕಾದಂಬರಿಯಲ್ಲಿ ದಟ್ಟವಾಗಿದೆ.

ಮಾಯಾಲೋಕ ಕಾದಂಬರಿಯಲ್ಲಿ ಊರಳ್ಳಿಗೆ ರೌಡಿ ಪಾಳ್ಯ – ಎಂಬ ಅನ್ವರ್ಥನಾಮ ಇರುವಂತೆ ಊರಳ್ಳಿಗೆ ಸಮೀಪವಿದ್ದ ಗೊಂದಲಗಳ ಗುಂಪಾದ ನಗರಕ್ಕೆ ಗೊಂದಲಗೇರಿ ಎಂಬ ಅಂಕಿತ ಹಾಗೂ ಅನ್ವರ್ಥ ನಾಮವನ್ನು ಕಾದಂಬರಿಕಾರನು ನೀಡಿದ್ದಾರೆ. ಗೊಂದಲಗೇರಿ ಗೊಂದಲದ ಗೂಡಾಗಲು ಅಲ್ಲಿಯ ರೈತ ಸಂಘದವರು ಹಾಗೂ ಅಧಿಕಾರಿಗಳು, ನೌಕರರು, ರಾಜಕಾರಣಿಗಳ ನಡವಳಿಕೆ ಹಾಗೂ ಅಸಮರ್ಪಕ ಭಾಷೆಯ ಬಳಕೆಯ ಕಾರಣವಾಗಿರುತ್ತದೆ. ಮುಷ್ಕರಗಳಿಂದ ಗೊಂದಲಗೇರಿಯಲ್ಲಿ ಅಶಾಂತಿಯ ವಾತಾವರಣ ಸೃಷ್ಟಿಸಿದ್ದು ಇದಕ್ಕೆ ಪ್ರೇರಕವಾಗಿ ಪ್ರಕಾಶವಾಣಿ ಪತ್ರಿಕೆಯ ಉದ್ವೇಗಕಾರಿ ಬರಹಗಳೂ ಕಾರಣವಾಗಿವೆ. ರೈತಕ್ರಾಂತಿಗಳ ಬಗ್ಗೆ ತಿಳಿಸುತ್ತಾ "ರೈತರ ಕ್ರಾಂತಿ ಹಾಳಾಗಕ್ಕೆ ಏನು ಬೇಡ ಒಂದು ಒಳ್ಳೆ ಹದವಾದಮಳೆ ಬಂದರೆ ಸಾಕು ಕ್ರಾಂತಿನೀತಿ ಎಲ್ಲಾ ಕೈಬಿಟ್ಟು ನೇಗಿಲು ಹೆಗಲ ಮೇಲೆ ಹಾಕಿಕೊಂಡು ಉಳೋದಕ್ಕೆ ಹಿಡಿದು ಬಿಡ್ತಾನೆ ರೈತ. ಇವತ್ತೊಂದು ಮಳೆ ಬೀಳಲಿ ನಿಂಗೆ ಗೊತ್ತಾಗುತ್ತೆ! ಬಿರುಬೇಸಿಗೆಯಲ್ಲಿ ವಿದ್ಯುತ್ ಇಲಾಖೆಯವರು ಸರ್ಕಾರಿ ಅಧಿಕಾರಿಗಳು ಕೊಟ್ಟ ಕಷ್ಟ, ಪಟ್ಟ ಬವಣೆ ಎಲ್ಲಾ ಮರ್ತೇ ಹೋಗ್ತದೆ ರೈತರಿಗೆ"[೯೮] ಎಂದು ಅವರ ಕಾಯಕ ನಿಷ್ಠೆಯನ್ನು ತಿಳಿಸುವ ಜೊತೆಗೆ ವ್ಯವಸ್ಥೆಯ ಕ್ರೂರತೆಯನ್ನು ವಿವರಿಸುತ್ತಾರೆ. ತೇಜಸ್ವಿಯವರ ಭಾಷೆ ಬಳಕೆ ಸರಳ ಹಾಗೂ ಸಹಜ ಲಯದ್ದಾಗಿದೆ. ವಸ್ತು ಸ್ಥಿತಿಗಳನ್ನು ಅರ್ಥೈಸಲು ಸಂವೇದನೆಗಳನ್ನು ಹೊರಹಾಕಲು ಭಾಷೆಯನ್ನು

---

೯೮. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, 'ಮಾಯಾಲೋಕ', ೨೦೧೧, ಪು. ೨೩೮–೨೩೯.

ಸಹಜವಾಗಿ ಬಳಸುತ್ತಾರೆ. ನವಿರಾದ ಹಾಸ್ಯ, ಸೂಕ್ಷ್ಮತೆ, ಹೊಸತರ, ಕಲಾತ್ಮಕ ನುಡಿಗಟ್ಟು ಅವರ ಸಾಹಿತ್ಯವನ್ನು ಇನ್ನಷ್ಟು ಎತ್ತರಕ್ಕೇರಿಸುತ್ತವೆ. ಕಾಲಘಟ್ಟಗಳಾಚೆ ಚಿಂತಿಸುವ ತೇಜಸ್ವಿ ಅವರು ಕಥೆ ಹೇಳಿದಂತೆ ವಿಜ್ಞಾನವನ್ನು ನಿಗೂಢತೆಯನ್ನು, ತಾಂತ್ರಿಕತೆಯನ್ನು ಸಹ ಅಷ್ಟೇ ನವುರಾಗಿ ಅರ್ಥೈಸಬಲ್ಲವರಾಗಿದ್ದಾರೆ. ಆಲನಹಳ್ಳಿ ಹಾಗೂ ತೇಜಸ್ವಿ ಅವರು ನಗರ ಹಳ್ಳಿಯ ಭಾಷೆಯನ್ನು ವಿಶಿಷ್ಟವಾಗಿ ತಮ್ಮ ಕಾದಂಬರಿಗಳಿಗೆ ಬಳಸಿದ್ದಾರೆ. ಈ ಇಬ್ಬರೂ ಲೇಖಕರು ತಮ್ಮ ಕಥನ ಸಾಹಿತ್ಯದಲ್ಲಿ ಬಳಸಿರುವ ವಿಶಿಷ್ಟ ಪ್ರಾದೇಶಿಕ ಭಾಷೆ ಹಾಗೂ ವೈಚಾರಿಕ ಮತ್ತು ಸಾಹಿತ್ಯಕ ಭಾಷೆಯ ಅಧ್ಯಾಯ ಸಾಂಸ್ಕೃತಿಕವಾಗಿ ಇಲ್ಲಿ ಮುಖ್ಯವಾಗುತ್ತದೆ. ಪೂರ್ಣಚಂದ್ರತೇಜಸ್ವಿಯವರ ಕಥೆಗಳಲ್ಲಿ ಭಾಷೆಯ ಮೂಲಕ ಇರುವ ಕಾಳಜಿ ಬಹಳ ಮುಖ್ಯವಾಗುತ್ತದೆ. ಇವರಿಗೆ ಇರುವ ಜೀವನ ಮೌಲ್ಯಗಳ ಬಗ್ಗೆ ಕಾಳಜಿ ಬೇರೆ ಯಾರಿಗೂ ಇಲ್ಲವೆಂದು ತೋರುತ್ತದೆ. 'ಕುಬಿ ಮತ್ತು ಇಯಾಲ', 'ಅವನತಿ' ಇಂಥ ಕತೆಗಳು ಶ್ರೇಷ್ಠ ಕೃತಿಗಳಾಗಲು ಕಾರಣ ಅವರ ಗಂಭೀರವಾದ ಕಾಳಜಿಯೇ 'ತಬರನ ಕಥೆ'ಯಲ್ಲಿ ಈ ಕಾಳಜಿ ತನ್ನ ಪರಾಕಾಷ್ಠತೆಯನ್ನು ಮುಟ್ಟಿದ್ದು ಕಾಣಬಹುದು. 'ಅಬಚೂರಿನ ಪೋಸ್ಟಾಫೀಸು' ಕಥೆಯಲ್ಲಿ ಅವರು ಜೀವನದ ಅಸಂಬದ್ಧತೆಯನ್ನು ಹೃದ್ಯವಾಗಿ ಪ್ರಯೋಗಿಸಿದ್ದಾರೆ. ತೇಜಸ್ವಿಯವರ ಕಥೆಗಳಲ್ಲಿ ಜೀವನದ ದುರಂತ ಮತ್ತು ವಿನೋದಗಳೆರಡು ಒಂದೇ ನಾಣ್ಯದ ಎರಡು ಮುಖಗಳಾದವು. 'ತಬರನಕಥೆ' ಮತ್ತು 'ಅಬಚೂರಿನ ಪೋಸ್ಟಾಫೀಸ್' ಎರಡು ಕಥೆಗಳನ್ನು ಬರೆದ ಕೈ ಒಂದೇ ಎಂಬುದನ್ನು ಮರೆಯಲಾಗದು. ಕರುಣ ಮತ್ತು ವಿನೋದಗಳೆರಡನ್ನೂ ಸಮಾನವಾಗಿ ವ್ಯಂಜಿಸಬಲ್ಲ ಭಾಷೆಯ ಹದ ತೇಜಸ್ವಿಯವರ ಪ್ರತಿಭೆಯ ರಹಸ್ಯವಾಗಿದೆ. ಅವರಿಗೆ ವಿನೋದ ಎಷ್ಟೇ ಉತ್ತಮವಾಗಿರಲಿ ತನ್ನ ಗಾಂಭೀರ್ಯವನ್ನು ಕಳೆದುಕೊಳ್ಳುವುದಿಲ್ಲ. ಕರುಣೆ ಎಷ್ಟೇ ದಾರುಣವಾಗಿರಲಿ ಪ್ರೀತಿಯ ಆರ್ದ್ರತೆಯನ್ನು ಒಣಗಿಸುವುದಿಲ್ಲ. ಈ ಬಗೆಯ ಮನೋಧರ್ಮವನ್ನು ಅವರ ಭಾಷೆ ಸರಿಯಾಗಿ ಅಭಿವ್ಯಕ್ತಿಸುತ್ತದೆ. ಶಬ್ದ ಮತ್ತು ಅರ್ಥಗಳೆರಡೂ ಮುಖ್ಯವಾಗಿರುವ ತೇಜಸ್ವಿಯವರ ಅಭಿವ್ಯಕ್ತಿಯ ಕ್ರಮ ಸುಸಂಸ್ಕೃತವಾದದ್ದು.

ತೇಜಸ್ವಿಯವರು ತಮ್ಮ ಕಥನಗಳಿಗೆ ಮಾಡುವ ಭಾಷಾ ಬಳಕೆಯ ಮೂಲಕ ಕನ್ನಡ ಭಾಷೆಗೆ ವಿಶಿಷ್ಟ ಅಭಿವ್ಯಕ್ತಿ ಶಕ್ತಿ ಕೊಟ್ಟವರಲ್ಲಿ ಮುಖ್ಯರು. ವಿಜ್ಞಾನದ ಚರ್ಚೆಯನ್ನು ಕನ್ನಡ ಕಥನದಲ್ಲಿ ಅಳವಡಿಸಿದ ಅವರ ಕಥನ ಪ್ರಯೋಗವು ಕನ್ನಡಕ್ಕೆ ಕೊಟ್ಟ ಶಕ್ತಿಯ ಸ್ವರೂಪ ಎಂತಹುದು ಎಂಬುದನ್ನು ಇನ್ನು ತಿಳಿಯಬೇಕಾಗಿದೆ. ಅನುಭವದ ಸೂಕ್ಷ್ಮಾತಿಸೂಕ್ಷ್ಮಗಳನ್ನು ಆಳ ಪಾತಾಳದ ಸತ್ಯಗಳನ್ನು ಅಭಿವ್ಯಕ್ತಿಸಲು ಭಾಷೆಯನ್ನು ಸೌಷ್ಠವಗೊಳಿಸುವುದು ಜನಸಮಷ್ಟಿಯ ಸಂಕೀರ್ಣ ಜವಾಬ್ದಾರಿ ಲೇಖಕ ಈ ಸಮಷ್ಟಿಯಲ್ಲಿ ಒಬ್ಬ ಎಂದು ಹೇಳುವುದುಂಟು. ಹಾಗಾಗಿ ತೇಜಸ್ವಿಯವರು ಭಾಷೆಯ ಮೂಲಕ ಜನರಿಗೆ ಮಾಡಬೇಕಾದ ಸೇವೆ ಎಂದರೆ ಇದು ಎಂದು ನಂಬಿದವರು.

ತೇಜಸ್ವಿಯವರ ಸರಳೀಕೃತಗೊಂಡ ಲವಲವಿಕೆಯ ವೈನೋದಿಕ ಧಾಟಿಯು ಕಥನ ಶೈಲಿ ಓದುಗರಲ್ಲಿ ಜಾಗೃತಿಯನ್ನು ಮೂಡಿಸುವಲ್ಲಿ ಯಶಸ್ವಿಯಾಗಿವೆ. ಕನ್ನಡದಲ್ಲಿ ಹದಿಹರೆಯದ ಓದುಗರಿಗೆ ಆಲನಹಳ್ಳಿ ಹಾಗೂ ತೇಜಸ್ವಿ ಯಾಕೆ ಮುಖ್ಯರಾಗುತ್ತಾರೆ ಎಂಬ ರಹಸ್ಯವನ್ನು ಇನ್ನೂ ಭೇದಿಸಬೇಕಿದೆ. ತೇಜಸ್ವಿ ಮಟ್ಟಿಗೆ ಹೇಳುವುದಾದರೆ ಅವರ ಜನಪ್ರಿಯತೆಯು ಅವರ ಬರಹದಲ್ಲಿರುವ ಲವಲವಿಕೆಯ ಶೈಲಿಯಲ್ಲಿ ನಿಗೂಢಗಳ ಬೆನ್ನು ಹತ್ತಿ ಹೋಗುವ ಶೋಧಕ ಪ್ರವೃತ್ತಿಯಲ್ಲಿ ಸಾಂಪ್ರದಾಯಿಕ ಸಮಾಜದ ವಿರುದ್ಧ ಬಂಡೇಳುವ ತರುಣರು ಕಥನದ ನಾಯಕರಾಗುವುದರಲ್ಲಿ ಪರಿಸರದ ಜತೆ ಅವರು ಅನುಸಂಧಾನ ಮಾಡುತ್ತಾ ಕಾಣಿಸುತ್ತಿರುವ ಹೊಸ ಜೀವ ಜಗತ್ತಿನ ದರ್ಶನದಲ್ಲಿ ಇರಬಹುದು. ಸಾಹಿತ್ಯವನ್ನು ಕೇವಲ ಖುಷಿಗಾಗಿ ಓದುವ ವರ್ಗಕ್ಕೂ ತಾತ್ವಿಕ ಚರ್ಚೆಗಾಗಿ ಗಂಭೀರ ಓದುಗರಿಗೂ ಏಕಕಾಲಕ್ಕೆ ಎರಡೂ ಸ್ತರಗಳಲ್ಲಿ ಸಲ್ಲುವ ಕೆಲವೇ ಲೇಖಕರಲ್ಲಿ ತೇಜಸ್ವಿಯವರು ಒಬ್ಬರು. ತೇಜಸ್ವಿಯವರ ಯಶಸ್ಸಿನ ಮುಖ್ಯ ಕಾರಣಗಳಲ್ಲಿ ಒಂದಾಗಿರುವ ಅವರ ಉತ್ಪ್ರೇಕ್ಷೆ ಮತ್ತು ಹ್ಯೂಮರುಗಳಿಂದ ಕೂಡಿದ ಕಥನ ಕ್ರಮವು ಮೂರು ಉದ್ದೇಶಗಳನ್ನು ಈಡೇರಿಸುತ್ತದೆ. ಅವೆಂದರೆ ೧) ವಕ್ರವೂ ವೈರುಧ್ಯವೂ ಉಳ್ಳ ಕ್ರಮ ೨) ತಿರಸ್ಕೃತ ಜಗತ್ತಿನಲ್ಲಿ ಅಡಗಿರುವ ಚೈತನ್ಯಶೀಲತೆಯನ್ನು ಗುರುತಿಸುವುದು ೩) ಜಡಸಂಪ್ರದಾಯವನ್ನು ವಿಮರ್ಶೆ ಮಾಡುವುದಕ್ಕೆ ಹಾಗೂ ಆ ಕೆಲಸ ಮಾಡುವ ತರುಣರ ಉಕ್ಕುವ ಜೀವನ ಪ್ರೀತಿಯನ್ನು ವ್ಯಕ್ತ ಮಾಡುವುದಕ್ಕೆ ಎಂತಲೇ ತರುಣರು ಅವರ ಮುಖ್ಯ ಪಾತ್ರಗಳು ಸರಳ ಅನಿಸುವ ಹಾಸ್ಯ ವಿನ್ಯಾಸದ ಕಥೆಯಲ್ಲಿ ಜಾತಿ ಸಮಾಜ ವಿಧಿಸುವ ಕಟ್ಟಲೆಗಳನ್ನು ಯುವಕರ ತಲೆಮಾರು ಹೇಗೆ ಮೀರಬಲ್ಲದು ಮತ್ತು ಕೂಡಿ ಬದುಕುವ ನಾಳೆಯನ್ನು ಕಟ್ಟಬಲ್ಲರು ಎಂಬ ಸಪ್ತ ದರ್ಶನವನ್ನು ತೇಜಸ್ವಿ ಭಾಷೆಯಲ್ಲಿ ಅಡಗಿಸಿದ್ದಾರೆ.

ಒಂದು ಭಾಷೆಯ ಚಾರಿತ್ರಿಕ ಪರಂಪರೆಯನ್ನು ಕಾಯುವುದು ಸಮಗ್ರ ಜನಾಂಗದ ಭಾಷೆಯನ್ನು ಮುಂದುವರೆಸುವುದು ಕಲಾವಿದನ ಜವಾಬ್ದಾರಿಯಾಗಿರುತ್ತದೆ. ಪ್ರಾದೇಶಿಕ ಭಾಷೆಯಿಂದ ಆ ಜನಾಂಗದ ಪ್ರಜ್ಞೆಯ ಭಿತ್ತಿಯಲ್ಲಿ ಪರಂಪರಾನುಗತವಾಗಿ ಕೊಂಡೊಯ್ಯುವುದು ಸಾಧ್ಯವಿಲ್ಲ. ತೇಜಸ್ವಿಯವರು ತಮ್ಮ ಕಥನಸಾಹಿತ್ಯದಲ್ಲಿ ಮಲೆನಾಡಿನ ಸಾಮಾಜಿಕ ಜನಜೀವನವನ್ನು ವಸ್ತು ವಿಷಯಗಳನ್ನಾಗಿ ಕೇಂದ್ರೀಕರಿಸಿಕೊಂಡಿದ್ದಾರೆ. ನವ್ಯ ಕಾಲಘಟ್ಟದಲ್ಲಿ ಸಾಹಿತ್ಯಕ ಬರವಣಿಗೆ ಪ್ರಾರಂಭಿಸಿದರೂ ಅವರ ಭಾಷೆಯಲ್ಲಿ ವಿಶಿಷ್ಟತೆ ಇದೆ. ಜನಸಾಮಾನ್ಯರು ಆಡುವ ಮಲೆನಾಡಿನ ಗ್ರಾಮ್ಯಭಾಷೆಯಲ್ಲಿ ತಮ್ಮ ವಿಚಾರಧಾರೆಗಳನ್ನು ಹರಿಯ ಬಿಡುವ ತೇಜಸ್ವಿಯವರು ವ್ಯಂಗ್ಯ, ವಿನೋದ, ಕುತೂಹಲಕರ ಶೈಲಿಯಲ್ಲಿ ಕಾದಂಬರಿಗಳನ್ನು ರಚಿಸಿದ್ದಾರೆ. ಬದಲಾಗುತ್ತಿರುವ ಮಲೆನಾಡಿನ ಗ್ರಾಮೀಣ ಜನರ ಸ್ಥಿತಿಗತಿಗಳನ್ನು ಅವರ ಕಥನಸಾಹಿತ್ಯವು ಗರ್ಭೀಕರಿಸಿಕೊಂಡಿವೆ. ಮಲೆನಾಡಿನ ಪ್ರಾದೇಶಿಕತೆಯನ್ನು, ವೈಚಾರಿಕತೆಯನ್ನು ಸ್ಪಷ್ಟವಾಗಿ

ಅಭಿವ್ಯಕ್ತಿಸುತ್ತದೆ. ವಸ್ತುವಿಶಿಷ್ಟತೆಗೆ ಅನುಗುಣವಾಗಿ ಅನುಭವ ಬೆರೆಸಿ ಕಥನೋಪಾದಿಯಲ್ಲಿ ಗ್ರಾಂಥಿಕ ಭಾಷೆಗೆ ಸಮೀಪವಾಗಿ ವಸ್ತು ವಿವರಣೆಯೊಂದಿಗೆ ಅನುಭವ ಲೋಕವನ್ನು ಸೃಷ್ಟಿಸುತ್ತಾ ಸಾಗುತ್ತಾರೆ. ಆಲನಹಳ್ಳಿಯವರ 'ಕಾಡು' ಕಾದಂಬರಿಯಂತೆ ಪ್ರಾದೇಶಿಕತೆಯ ವಿಶಿಷ್ಟ ವಿವರಣೆಯನ್ನು ಅವರ ಮಾಯಾಲೋಕ ಕಾದಂಬರಿಯಲ್ಲಿ ಗುರುತಿಸಬಹುದಾಗಿದೆ. ಆಲನಹಳ್ಳಿಯ ಮುಗ್ಧ ಬಾಲ್ಯದ ಹಸಿ ಹಸಿ ಅಸಂಭವಗಳನ್ನು ಕಟ್ಟಿಕೊಡುತ್ತಾರೆ. ತೇಜಸ್ವಿ ಅವರು ಹೊಸದಿಗಂತದ ಕಡೆಗೆ ಜಾರಿದಲ್ಲಿ ಎಲ್ಲರೂ ಗ್ರಹಿಸಬಹುದಾದ ಗ್ರಾಮ್ಯ, ನಾಗರೀಕ ಮತ್ತು ವೈಚಾರಿಕ, ಸಾಹಿತ್ಯಕ ಭಾಷೆಯ ಬಳಕೆಯನ್ನು ಹೆಚ್ಚಾಗಿ ಕಾಣಬಹುದು.

ಆಲನಹಳ್ಳಿ ಹಾಗೂ ತೇಜಸ್ವಿ ಇಬ್ಬರೂ ಸಾಮಾಜಿಕ ಪರಿವರ್ತನೆಯ ಆಶಯ ಹೊಂದಿದ್ದರೂ ಭಾಷೆಯ ಬಳಕೆಯಲ್ಲಿ ವಿಭಿನ್ನತೆಯಿದೆ. ಕನ್ನಡ ಸಾಹಿತ್ಯದಲ್ಲಿ ತೇಜಸ್ವಿ ಅವರು ತಮ್ಮ ಭಾಷೆಯ ಬರಹಗಳಲ್ಲಿ ಇತರ ಲೇಖಕರಿಗಿಂತ ಭಿನ್ನತೆ ಕಾಯ್ದುಕೊಂಡವರು ಎಂತಹ ಜಟಿಲ, ತಾಂತ್ರಿಕ ವಿಷಯಗಳನ್ನು ಅವರು ಸುಲಭವಾಗಿ ನಿರೂಪಿಸಬಲ್ಲವರು. ಅವರು ಬರವಣಿಗೆಯಲ್ಲಿ ಲವಲವಿಕೆ, ವೈವಿಧ್ಯಮಯ ಸಮೃದ್ಧಿ ನೂತನ ಪ್ರಯೋಗವನ್ನು ಮೈಗೂಡಿಸಿಕೊಂಡಿದ್ದವರು ಕಾರಂತರ ಪ್ರಯೋಗಶೀಲತೆ, ಕುವೆಂಪು ಅವರ ಕವಿಸೃಷ್ಟಿ ಲೋಹಿಯಾ ಅವರ ರಾಜಕೀಯ ವಿಚಾರಧಾರೆ ಅವರ ಬರವಣಿಗೆ ಶೈಲಿಯ ಗುಟ್ಟಾಗಿದ್ದಿತು. ತೇಜಸ್ವಿ ಅವರು ತಾವು ಬರೆಯಬೇಕೆಂದು ಅಕಾಡೆಮಿಕ್ ಶಿಸ್ತಿನಿಂದ ಕೂತವರಲ್ಲ ಹಾಗೆಯೇ ಭಾಷೆಯ ಬಳಕೆಯಲ್ಲೂ ಬೌದ್ಧಿಕ ಕಸರತ್ತಿಲ್ಲದೆ ನೇರನುಡಿಯಲ್ಲಿ ಸಾಹಿತ್ಯ ರಚಿಸಿದವರು. "ತಮ್ಮ ಬೌದ್ಧಿಕ ಮತ್ತು ಸೃಜನಶೀಲ ಪ್ರೇರಣೆಗಳನ್ನು ತಮ್ಮ ದೈನಂದಿನ ಬದುಕಿನ ಪರಿಸರದಿಂದ ನೇರವಾಗಿ ಪಡೆದುಕೊಂಡವರು. ತಮ್ಮ ಬಹುಮುಖಿ ಓದಿನಿಂದ ಪಡೆದ ಆಳವಾದ ಜ್ಞಾನವನ್ನು ಬದುಕಿನ ನೇರ ಅವಲೋಕನದಿಂದ ಪಡೆದ ಅನುಭವವನ್ನು ಕಸಿಮಾಡಿ ತಮ್ಮ ಜೀವನವನ್ನು ಬರವಣಿಗೆಯಲ್ಲಿ ಹೊಸದೊಂದು ಲಯದಲ್ಲಿ ರೂಢಿಸಿಕೊಂಡರು."[೯೯] ಎಂಬುದು ಅವರ ಕೃತಿಗಳಿಂದ ಅರಿವಿಗೆ ಬರುತ್ತದೆ. ಓದುಗರ ತಿಳಿವಿಗೊಂದು ಹೊಸ ಆಯಾಮ ನೀಡಿದವರು. ಅವರು ದಿಗಂತದ ವಿಸ್ತಾರವನ್ನು ಅನುಭವದ ಶೋಧನೆಗಳನ್ನು ಶ್ರೀಮಂತಗೊಳಿಸಿದ್ದಾರೆ. "ತೇಜಸ್ವಿ ಬರವಣಿಗೆ ಭೌತ ವಾಸ್ತವದ ಎಲ್ಲಾ ಸೂಕ್ಷ್ಮಾತಿ ಸೂಕ್ಷ್ಮ ವಿವರಗಳನ್ನು ದಾಖಲಿಸುತ್ತಲೇ ನಿಧಾನವಾಗಿ ಆದಿಭೌತಿಕ ಎತ್ತರವನ್ನು ಏರಿಬಿಡುತ್ತದೆ. ಲೌಕಿಕದಿಂದ ಪಾರಮಾರ್ಥಿಕಕ್ಕೆ ಜಿಗಿಯುವಾಗ ಕೂಡ ಈ ಎರಡು ಆಯಾಮಗಳನ್ನು ತೇಜಸ್ವಿ ದ್ವಿದಳ ವಿಭಜನೆಯಲ್ಲಿ ನೋಡುವುದಿಲ್ಲ. ಎಲ್ಲವನ್ನು ವೃಂದದಲ್ಲಿ ಗಮನಿಸುವ ತೇಜಸ್ವಿಯವರಿಗೆ ಎರಡು ಲೋಕಗಳು

---

೯೯. ಡಿ.ವಿ.ಪ್ರಹ್ಲಾದ್, 'ತೇಜಸ್ವಿ ಲೋಕ ಸಂಚಯ' (ಸಂ), ಪು. ೧೪, ೨೦೧೧.

ಒಂದೇ ಮೂಲದಿಂದ ಹೊರಟ ವಿಭಿನ್ನ ಆಯಾಮಗಳಾಗಿ ಗೋಚರಿಸುತ್ತದೆ."[೧೦೦] ಹೀಗಾಗಿಯೇ ಅವರು ಪುರಾಣ, ಇತಿಹಾಸ, ವಿಜ್ಞಾನ, ಸಾಹಿತ್ಯಗಳನ್ನು ಬಹುಸ್ತರಗ್ರಹಿಕೆಯನ್ನು ಒಂದೇ ಏಟಿಗೆ ಸಾಧಿಸಬೇಕೆನ್ನುವ ಮಹತ್ವಾಕಾಂಕ್ಷೆಗಳನ್ನು ಅವರ ಕಥನಸಾಹಿತ್ಯದಲ್ಲಿ ಪ್ರಕಟಿಸುತ್ತಾರೆ.

ಸಾಮಾಜಿಕ ಗದ್ದಲಗಳಿಂದ ಮರೆಗೆ ಸರಿದ ತೇಜಸ್ವಿ ಅವರು ನಿಗೂಢ ಮೌನದಲ್ಲಿ ಮನುಷ್ಯನ ಸಾಧ್ಯತೆಗಳನ್ನು ಕಂಡುಕೊಂಡವರು ಅವರು ಸಾಮಾಜಿಕ ಶಾಪಗಳ ಬಲೆಯಿಂದ ಬಿಡಿಸಿಕೊಂಡು ವಿಕಾಸದ ಅನಂತ ಮೌನದ ಶೋಧಕರಾದವರು 'ಕರ್ವಾಲೊ' ಕಾದಂಬರಿಯ ಅಭಿವ್ಯಕ್ತಿಯ ಸ್ವರೂಪದಲ್ಲಿ ಲೇಖಕರು ಸಾಂಪ್ರದಾಯಿಕ ನಿರೂಪಣಾ ವಿಧಾನವನ್ನು ಅನುಸರಿಸಿದ್ದು ನಿರೂಪಕ ಕಾದಂಬರಿಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾ ಸಾಗುತ್ತಾನೆ. ದೈನಂದಿನ ಬದುಕಿಗೆ ಮುಖಾಮುಖಿಯಾಗುತ್ತಾ ಸೃಷ್ಟಿಯ ರಹಸ್ಯಗಳನ್ನು ಶೋಧಿಸುವಲ್ಲಿ ಕಾದಂಬರಿಯ ಯಶಸ್ಸು ಹುದುಗಿದೆ. ನಿರೂಪಣೆ, ಸಂಭಾಷಣೆ, ದ್ವಂದ್ವ, ಗೊಂದಲ, ಅಭಿವ್ಯಕ್ತಿ ಹೀಗೆ ವಿಭಿನ್ನ ಸ್ತರಗಳಲ್ಲಿ ಮನುಷ್ಯ ಮತ್ತು ಪ್ರಕೃತಿ ಬಗೆಗಿನ ರಹಸ್ಯಗಳನ್ನು ಅತ್ಯಂತ ಕುತೂಹಲವಾಗಿ ಕಾದಂಬರಿ ಕಟ್ಟಿಕೊಡುತ್ತದೆ. ಕರ್ವಾಲೋದಲ್ಲಿ ಕಥೆಯ ಅಂಶ ಅತ್ಯಂತ ಸೀಮಿತವಾಗಿದ್ದರೂ ತೇಜಸ್ವಿಯವರ ಕಥನ ಕೌಶಲದಿಂದಾಗಿ ರಹಸ್ಯಮಯ ಕಾದಂಬರಿಯೊಂದರಂತೆ ಅದು ನಮ್ಮನ್ನು ಪ್ರಭಾವಿಸುತ್ತದೆ. ಇದಕ್ಕೆ ಕಾರಣ ವಸ್ತುವಿನ ಅಸಮಾನ್ಯತೆಯೆಂದೇ ಅಲ್ಲ ಯಾಕೆಂದರೆ ಹಾರುವ ಓತಿಯ ಶೋಧ ಪ್ರಾರಂಭವಾಗುವುದು ಕಾದಂಬರಿಯ ಅರ್ಧಕ್ಕಿಂತ ಹೆಚ್ಚು ಪಾಲು ಮುಗಿದ ಮೇಲೆ ಇದಕ್ಕೂ ಮೊದಲೇ ನಿವೇದಕನನ್ನು ಗಾಢವಾಗಿ ಬದುಕಿನಲ್ಲಿ ತೊಡಗಿಸುವ ಮಾನವೀಯ ಕ್ರಿಯೆ ಪ್ರಾರಂಭವಾಗುತ್ತದೆ. ಆ ಕ್ರಿಯೆಯನ್ನು ಅರ್ಥೈಸುವುದರಲ್ಲಿಯೂ ತೇಜಸ್ವಿಯವರ ಕಥೆ ಸಮರ್ಥವಾಗಿ ದುಡಿದಿದೆ. ತಾರ್ಕಿಕ, ಅತಾರ್ಕಿಕ ಅನುಭವಗಳನ್ನು ಒಟ್ಟಿಗೆ ಸಂಕೇತಿಸುವ ಆಕಾರದ ನಿರ್ಮಾಣದಿಂದಾಗಿ ಕರ್ವಾಲೋ ಅಪೂರ್ವ ಯಶಸ್ಸನ್ನು ಸಾಧಿಸಲು ಶಕ್ತಿಯಾಗಿದೆ ಎಂದು ಕೃತಿಯ ನಿವೇದಕ ಕತೆಯ ಬೆಳವಣಿಗೆಯ ಮಹತ್ವದ ಪಾತ್ರದ ಜೊತೆಗೆ ಕ್ಷುದ್ರ ಹಾಗೂ ಮಹತ್ವವಾದ ಪ್ರಪಂಚಗಳೆರಡನ್ನೂ ಪ್ರವೇಶಿಸಬಲ್ಲವನಾಗಿ ಗೋಚರಿಸುತ್ತಾನೆ. ಬದುಕಿನ ನಿಗೂಢತೆಗೆ ಹಾರುವ ಓತಿ ಕಾದಂಬರಿಯಲ್ಲಿ ಸಂಕೇತವಾಗಿ ಬಂದಿರಬಹುದು ಎನಿಸುತ್ತದೆ. ಕೊನೆಯಲ್ಲಿ ಹಾರುವ ಓತಿಯನ್ನು ಹಿಡಿಯಲು ಕರ್ವಾಲೋ ಮತ್ತು ಅವರ ಅನುಯಾಯಿಗಳಿಗೆ ಸಾಧ್ಯವಾಗುವುದೇ ಇಲ್ಲ. ಆದರೆ ಇದರಿಂದಾಗಿ ಇಡೀ ಯಾತ್ರೆ ನಿಷ್ಫಲಗೊಂಡಿತು ಎಂದು ಯಾರಿಗೂ ಅನ್ನಿಸುವುದಿಲ್ಲ. ಏಕೆಂದರೆ ಸಾಮಾನ್ಯ ಅರಿವು ಸಹ ಪರಿಪೂರ್ಣ ತಿಳುವಳಿಕೆಯೆಡೆಗೆ ಕೊಂಡೊಯ್ಯುತ್ತದೆ. ಜೀವ ಸೃಷ್ಟಿಯ ರಹಸ್ಯಗಳನ್ನು ಸಂಪೂರ್ಣವಾಗಿ ತಿಳಿಯಲು ಪ್ರಯತ್ನಿಸಿದಾಗ್ಯೂ ಮಾನವನ ಪ್ರಯತ್ನಕ್ಕೂ ಮೀರಿದ ಅನೇಕಾನೇಕ ಸತ್ಯಗಳನ್ನು ಕಾಲ ತನ್ನ

---

೧೦೦. ಟಿ.ಪಿ.ಅಶೋಕ, 'ತೇಜಸ್ವಿ ಕಥನ', ಪು. ೧೪, ೨೦೧೦.

ಗರ್ಭದಲ್ಲಿ ಬಚ್ಚಿಟ್ಟುಕೊಳ್ಳುತ್ತದೆ. ಆದರೆ ಸಾಧನೆಯ ಹಾದಿಯಲ್ಲಿನ ಅನಂತಾನಂತ ಮೌಲ್ಯಯುತ ಅನುಭವಗಳು ಅಂಧಕಾರವನ್ನು ತೊರೆದು ಜ್ಞಾನದ ದಿಗಂತಗಳನ್ನು ವಿಸ್ತರಿಸುತ್ತವೆ. ಈ ವಿಸ್ತರಣೆಯನ್ನು ಭಾಷೆಯ ಮೂಲಕವೇ ಲೇಖಕರು ಮನಗಾಣಿಸಿದ್ದಾರೆ. ಬದುಕಿನ ನಿಗೂಢತೆಗೆ ಕರ್ವಾಲೋ ಕೇವಲ ಬೆರಗಿನಲ್ಲಿ ಪ್ರತಿಕ್ರಿಯಿಸುವುದಿಲ್ಲ. ನಮ್ಮ ಅರಿವಿಗೆ ಇನ್ನು ಗೋಚರವಾಗದಿರುವ ಸತ್ಯಗಳು ಇವೆ ಎಂಬುದನ್ನು ಅವರು ನಂಬಿದರೂ ಅವುಗಳನ್ನು ಅರಿಯುವುದೇ ಅವರ ಜೀವನದ ಪ್ರಧಾನ ಕಾಳಜಿಯಾಗಿದೆ. ಮತ್ತು ಇದು ಒಂದು ಜೀವನ ರೀತಿಯನ್ನೇ ಸಾಂಕೇತಿಸುವಂತಿದೆ. ಅದು ವೈಚಾರಿಕವಾಗಿ ಚಿಂತಿಸಿದಾಗ ಮಾತ್ರವೇ ದಕ್ಕುತ್ತದೆ. ಜೀವಸೃಷ್ಟಿ ಮತ್ತು ನಿಸರ್ಗ ಸೃಷ್ಟಿಯ ಅನಂತ ಮುಖಗಳ ಪರಿಪೂರ್ಣ ಅಧ್ಯಯನ ಮಾನವನಿಗೆ ಇನ್ನೂ ಸಾಧ್ಯವಾಗಿಲ್ಲ. ಸಾರ್ವತ್ರಿಕ ಆಶಯಗಳ ದಾರಿ, ಪ್ರಾಕೃತಿಕ ಸಂಘರ್ಷಗಳ ಮೂಲಕ ಅಸ್ಪಷ್ಟವಾಗುತ್ತಿದೆ. ಆದ್ದರಿಂದ ಆ ಗ್ರಾಹ್ಯ ಸಂಗತಿಗಳನ್ನು ಅನುಭವಗ್ರಾಹ್ಯ ಮಾಡಿಕೊಳ್ಳುವಲ್ಲಿ ಮಾನವನ ಪ್ರಯತ್ನ ನಿಂತಿಲ್ಲ ನಿಲ್ಲುವುದೂ ಇಲ್ಲ. ಇದು ಬಾಳ್ವೆ ಮತ್ತು ಸೃಷ್ಟಿಯಲ್ಲಿನ ನಿರಂತರ ಹೋರಾಟದ ಸಂಕೇತ.

ಕರ್ವಾಲೋದಲ್ಲಿ ಚಿರ ನಿಗೂಢ ಅನ್ವೇಷಣೆಗೆ ಸಂಬಂಧಿಸಿದಂತಹ ತಾತ್ವಿಕ ಧೋರಣೆಗೆ ನವುರಾಗಿ ಇನ್ನೊಂದು ಆಯಾಮವನ್ನು ಮೈಗೂಡಿಸುವ ಹವಣಿಕೆಯೂ ಇರುವಂತೆನಿಸುತ್ತದೆ. ಹಾರುವ ಓತಿಯ ಅನ್ವೇಷಣೆಗೆ ಸಂಬಂಧಿಸಿದ ನಿರೂಪಣೆಯ ಸಂದರ್ಭಗಳಲ್ಲಿ ಅಲ್ಲಲ್ಲಿ ತೇಜಸ್ವಿಯವರು ಆಧ್ಯಾತ್ಮಿಕ ಪರಿಭಾಷೆಯನ್ನು ಬಳಸುತ್ತಾ ಬಂದಿರುವುದನ್ನು ಗುರುತಿಸಬೇಕು ಜೊತೆಗೆ ಅಸ್ತಿತ್ವವನ್ನು ಕುರಿತಂತ ಚಿಕ್ಕ ಚರ್ಚೆಯನ್ನು ತಂದಿದ್ದಾರೆ. ಅವುಗಳ ಹಿನ್ನೆಲೆಯಲ್ಲಿ ನೋಡಿದಾಗ ಬ್ರಹ್ಮಾಂಡದ ಚಿದಂಬರ ರಹಸ್ಯವನ್ನು ಬೇಧಿಸಲು ಹೊರಡುವ ಕರ್ವಾಲೋನ ವೈಜ್ಞಾನಿಕ ಮಾರ್ಗಕ್ಕೂ ಆಸ್ತಿಕ ಅಥವಾ ಆಧ್ಯಾತ್ಮಿಕ ಮಾರ್ಗಕ್ಕೂ ತಿರುಳಿನ ದೃಷ್ಟಿಯಿಂದ ಅಲ್ಲದಿದ್ದರೂ ಸ್ವರೂಪದ ದೃಷ್ಟಿಯಿಂದ ತಾತ್ವಿಕ ನೆಲೆಯಲ್ಲಿ ಒಂದು ಸಂಬಂಧವನ್ನು ಸೂಚಿಸುವ ಯತ್ನವಿದೆ. ಹಾಗಾಗಿ ತೇಜಸ್ವಿಯವರ ವೈಚಾರಿಕ ಚಿಂತನೆ ಪ್ರಕಾರ ದೃಷ್ಟಿಕೋನ ಅವರ ಭಾಷೆಯಲ್ಲಿ ವ್ಯಕ್ತವಾಗುತ್ತದೆ.

ಆಲನಹಳ್ಳಿಯವರು ಭಾಷೆಯನ್ನು ಪಾತ್ರಗಳ ಮೂಲಕ ಘಟನೆಯನ್ನು ವಿವರಿಸಲು ಮುಗ್ಧತೆಯಿಂದಲೇ ಬಳಸುತ್ತಾರೆ. 'ಕಾಡು' ಕಾದಂಬರಿಯಲ್ಲಿ ಭಾಷೆಯನ್ನು ಸಮರ್ಥವಾಗಿ ಬಳಸಿಕೊಂಡಿರುವುದನ್ನು ಕಾಣಬಹುದು ಸಾಂದ್ರವಾದ ಅನುಭವವನ್ನು ಕಟ್ಟಿಕೊಡುವಾಗ ಕಸುವಾದ ಆಡುಭಾಷೆ ಸ್ಪಷ್ಟವಾಗಿರುವ ಸಾಚಾ ರೀತಿಯ ದೇಸಿತನ ಮುಂತಾದವುಗಳಿಂದ ಕಾದಂಬರಿಯು ಹೆಚ್ಚಿನ ಸಾರ್ಥಕತೆಯನ್ನು ಪಡೆದಿದೆ. ಲೇಖಕರು ತಮ್ಮ ಹುಟ್ಟಿನ

ಪರಿಸರದೊಂದಿಗೆ ಇರಿಸಿಕೊಂಡಿರುವ ಭಾವನಾತ್ಮಕ ಸಂಬಂಧದಿಂದಾಗಿ ಇಂತಹ ಅಪ್ಪಟ ಭಾಷಾ ಬಳಕೆಯು ಸಾಧ್ಯವಾಗಿದೆ. ಭಾಷೆಯ ಬಿಗುವು ಶೈಲಿ, ತಂತ್ರ ಮುಂತಾದವುಗಳಿಂದ ನವ್ಯಕ್ಕೆ ಈ ಕಾದಂಬರಿಯು ಹತ್ತಿರವಾಗುತ್ತದೆ. ಇಡೀ ಕಾದಂಬರಿಯಲ್ಲಿ ಭಾಷೆಯು ಎಲ್ಲಿಯೂ ಜಾಳು ಜಾಳಾಗಿ ಬಳಕೆಯಾಗಿಲ್ಲ ಘಟನೆಗಳನ್ನು ಕಟ್ಟಿಕೊಡುವಾಗ ಸೂಚ್ಯವಾಗಿ ಹಲವು ಸಂಕೇತ, ಪ್ರತಿಮೆಗಳನ್ನು ತರುವುದರ ಮೂಲಕ ಕಾವ್ಯಾತ್ಮಕವಾಗಿ ಪರಿಣಾಮಕಾರಿಯಾಗಿ ಭಾಷೆಯನ್ನು ಬಳಸಿದ್ದಾರೆ. "ಕೇರಿಯಲ್ಲಿ ಅವಂದೆ ಆಗ್ಬುಟ್ಟಿತ್ತು. ಮನಸಾ ಅಂದ್ರೆ ಅಂಗೆ ಮೆರಿಬ್ಯಾಡ್ದು ಈ ಕಾಲಕ ಐಕಳು ವಸಿ ಗೊನೆಗೆ ನೀರಿಳಿತು ಅಂದ್ರೆ ಸಾಕು ಕಂಡವರ ಯೆಡ್ತಿರ್ನೆಲ್ಲ ನಾವೇ ಆಳ್ತಿವಿ ಅಂತ ಒದರಾಡ್ತವೆ"[೧೦೧] ಮಾಗಿದ ತುಂಬು ಜೀವನಾನುಭವದ ಮುದುಕನೊಬ್ಬನ ಈ ಮಾತುಗಳು ಅರ್ಥಗರ್ಭಿತವಾಗಿದೆ. ಇಲ್ಲಿ ಆಲನಹಳ್ಳಿಯವರು ಸಹಜವಾಗಿ ಭಾಷೆಯನ್ನು ಬಳಸಿದ್ದಾರೆ.

ಇನ್ನೂ ಕೆಲವು ನಿದರ್ಶನಗಳನ್ನು ನೋಡುವುದಾದರೆ "ಜಳಕಯಾಕೆ ಅಂದ ಕಿಟ್ಟಿ ನಾಗಿ ನಂಗೊತ್ತಿಲ್ಲ, ಅಜ್ಜಿ ಹೊತಾರಿಂದ ಚಿಕ್ಕವ್ವಂಗೆ ನನ್ನ ಮನೆಗೆ ದೇವ್ರು ದಿಂಡ್ರು ಕಾಲಾಕದಂತೆ ಮಾಡ್ಬುಟ್ಳಲ್ಲೆ ಕುಲಗೆಟ್ಟ ರಂಡೆ ಅಂತ ಬೈತಿತ್ತು ಎಂದಳು. ಕಿಟ್ಟಿಗೂ ಆ ಮಾತಿನ ಅರ್ಥ ಹೊಳೆಯಲಿಲ್ಲ"[೧೦೨] ಇಲ್ಲಿ ಲೇಖಕರು ಯಾವುದೇ ವಿಚಾರವನ್ನು ಅನಾವಶ್ಯಕವಾಗಿ ಎಳೆಯಲು ಪ್ರಯತ್ನಿಸಿಲ್ಲ. ಅಡಕವಾಗಿ ಹೇಳಲು ಹೊರಟು ಭಾಷೆಯನ್ನು ಅತ್ಯಂತ ಪರಿಣಾಮಕಾರಿಯಾದ ರೀತಿಯಲ್ಲಿ ಬಳಸಿಕೊಂಡಿದ್ದಾರೆ. ಕಾದಂಬರಿಕಾರರು ಸಂದರ್ಭಕ್ಕೆ ತಕ್ಕಂತೆ ಗಾದೆ ಮಾತುಗಳನ್ನು ಬಳಸಿಕೊಂಡಿದ್ದಾರೆ. ಕಿಟ್ಟಿಯು 'ಬಸಕ್ಕನ ಮನೆಗೆ ಅತ್ತೆ ಹೋಗಿಲ್ಲ ಅಲ್ಲವ' ಎಂದು ಅತ್ತೆಗೆ ಕೇಳಿದಾಗ 'ಕಳ್ಳ ಆಗಲಕಾಯ್ಗೊಂದು ಬೇವಿನಕಾಯಿ ಸಾಕ್ಷಿಯಂತೆ' ಹೀಗೆ ಕಾದಂಬರಿಯಲ್ಲಿ ಹಲವಾರು ಘಟನೆಗಳನ್ನು ಸೂಚಿಸಲು ಅನೇಕ ಚಿತ್ರವತ್ತಾದ ಸಂಕೇತ, ಪ್ರತಿಮೆಗಳನ್ನು ದುಡಿಸಿಕೊಂಡಿದ್ದಾರೆ. 'ಕಾಡು' ಎಂಬ ತಲೆಬರಹ ಕಂಡ ಸಾಂಕೇತಿಕವಾಗಿ ಬಳಕೆಯಾಗಿದ್ದು ಮನುಷ್ಯನ ಎಲ್ಲಬಗೆಯ ಪಶುತ್ವದ ರೀತಿಯನ್ನು ಅರ್ಥಗರ್ಭಿತವಾಗಿ ಪ್ರತಿಬಿಂಬಿಸಲು ಸಹಾಯಕವಾಗಿದೆ.

ಆಲನಹಳ್ಳಿಯವರ ಬರವಣಿಗೆಯ ಸತ್ವದ ಮೇಲೆ ಕಾದಂಬರಿಯ ಪಾತ್ರಗಳಲ್ಲಿನ ಪುಟಿದೇಳುವ ಸೊಕ್ಕು ಕಸುವು ಆಲನಹಳ್ಳಿಯವರ ಭಾಷೆಗಿಳಿದಿದೆ. ಆದರೆ ಒಟ್ಟಾರೆ ನೋಡಿದಾಗ ಈ ಗಟ್ಟಿಮುಟ್ಟಾದ ಭಾಷೆಯೂ ಸುಮ್ಮನೆ ನೆಲಗುದ್ದಿ ಕೈನೋಯಿಸಿಕೊಂಡಂತೆಯೇ ಅನ್ನಿಸುತ್ತದೆ. ಗ್ರಾಮ್ಯಭಾಷೆ ಬಳಕೆಯಲ್ಲಿ ತೀವ್ರ ಎಚ್ಚರಿಕೆ ತೋರಿರುವ ಆಲನಹಳ್ಳಿಯವರು ಭಯ, ಕುತೂಹಲ

---

೧೦೧. ಶ್ರೀ ಕೃಷ್ಣ ಆಲನಹಳ್ಳಿ, 'ಕಾಡು', ಪು. ೩೦, ೨೦೧೧.
೧೦೨. ಶ್ರೀ ಕೃಷ್ಣ ಆಲನಹಳ್ಳಿ, 'ಕಾಡು', ಪು. ೪೨, ೨೦೧೧.

ಕೆರಳಿಸುವಂತೆ ಅಮಾನುಷವೆನ್ನಿಸುವ ಘಟನೆಗಳನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸಿದ್ದಾರೆ. ಆದರೆ ಇಲ್ಲಿನ ಮುಖ್ಯ ಕೊರತೆಯೆಂದರೆ ಕಾದಂಬರಿಗೊಂದು ಭದ್ರತಳಹದಿ ಇಲ್ಲದಿರುವುದು. ಕಾಡಿನ ದಟ್ಟವಾದ ಬರವಣಿಗೆಯ ಬೆಚ್ಚಿ ಬೀಳಿಸುವಂತಹ ದುರಂತಗಳನ್ನೆಲ್ಲ ಬೇಧಿಸಿಕೊಂಡು ಒಳನೋಟದ ಹುಡುಕಾಟ ನಡೆಸಿದಾಗ ಎಲ್ಲ ಬಟ್ಟಂಬಯಲು ಏನೂ ತಾಕುವುದಿಲ್ಲ ಎನಿಸುತ್ತದೆ. ಪಾತ್ರ ಘಟನೆ ಯಾವುದರಲ್ಲೂ ಬೆಳವಣಿಗೆ ಕಾಣಿಸುವುದಿಲ್ಲ. ಕಾದಂಬರಿಯುದ್ದಕ್ಕೂ ಬರುವ ಅಕ್ರಮ ವ್ಯವಹಾರಗಳು, ಪಂಚಾಯಿತಿ ಶಿಕ್ಷೆ, ಅನಂತರ ಸಂಭವಿಸುವ ದುರಂತಗಳ ಸರಣಿ, ಎಲ್ಲಿ ಮಾನವಸಂರಕ್ಷಣೆಗೆ ಉಳಿದಿರುವುದೊಂದೆ ದಾರಿ ಹೀಗೆ ಆಲನಹಳ್ಳಿ ಕೆಲವು ಪಾತ್ರಗಳಲ್ಲಿ ಅವರೇ ಪರಕಾಯ ಪ್ರವೇಶ ಮಾಡಿದವರೇನೋ ಎನ್ನಿಸುತ್ತದೆ. ಅಂದರೆ 'ಕಾಡು' ಕಾದಂಬರಿಯ ಕಿಟ್ಟಿಗೆ ಕೃಷ್ಣನನ್ನು ಹೋಲಿಸುವುದು ಈಗಾಗಲೇ ಒಂದು ಕ್ಲೀಷೆಯಾಗಿದೆ. ಕಿಟ್ಟಿ, ಗೆಂಡೆತಿಮ್ಮ, ಭುಜಂಗಯ್ಯ – ಈ ಎಲ್ಲಾ ಪಾತ್ರಗಳು ಕೃಷ್ಣ ತನ್ನನ್ನು ತಾನೇ ಪ್ರೊಜೆಕ್ಟ್ ಮಾಡಿಕೊಂಡಿದ್ದ ಬಗೆಯಾಗಿದ್ದಿರಬಹುದು. ಈ ಯಾವ ಕಥಾಪಾತ್ರಗಳೂ ಇಂಟಲೆಕ್ಚುವಲಾಗಿ ಓದುಗರನ್ನು ತಟ್ಟುವುದಿಲ್ಲ. ಆಲನಹಳ್ಳಿ ಕಥಾಪ್ರಪಂಚದಲ್ಲಿ ಬೌದ್ಧಿಕ ತಿಕ್ಕಾಟಗಳಾಗಲೀ, ಚರ್ಚೆಗಾಗಲೀ, ಜಿಜ್ಞಾಸೆಯಾಗಲೀ ಕಾಣಿಸದು. ಅದಕ್ಕೆ ಬದಲಾಗಿ ನಾವು ಕಾಣುವುದು ಬದಲಾಗುತ್ತಿರುವ ಗ್ರಾಮೀಣ ಪರಿಸರದ ಆಂತರಿಕ ಘರ್ಷಣೆಗಳನ್ನು ಚಾರಿತ್ರಿಕವಾಗಿ ಆಲನಹಳ್ಳಿ ಕೃತಿಗಳು ಮುಖ್ಯವಾಗುವುದು ಇಲ್ಲಿಯೇ ಅವನಲ್ಲಿ ಅಪೂರ್ವವಾದ ಹಿಸ್ಟಾರಿಕಲ್ ಸೆನ್ಸ್ ಇತ್ತು. ಆದರೆ ಇದೂ ಕೂಡ ಓದಿನಿಂದಾಗಲೀ ಜಿಜ್ಞಾಸೆಯಿಂದಾಗಲೀ ಬಂದುದಲ್ಲ. ಬದುಕಿನ ಹಸಿಹಸಿ ಅನುಭವಗಳ ಮೂಲಕ ಬಂದುದು. ಹಳೆಯ ಕಾಲಘಟ್ಟದ ಕುರಿತಾಗಿ ಹುಸಿಭ್ರಮೆಗಳನ್ನೇನೂ ಅವನು ಇರಿಸಿಕೊಂಡಿರಲಿಲ್ಲ. ಬದಲಾವಣೆಯ ಅನಿವಾರ್ಯತೆಯನ್ನು ಒಪ್ಪಿಕೊಂಡೇ ಅದರಿಂದ ಬುಡಮೇಲಾಗುವ ಜನಾಂಗ ಸಂಸ್ಕೃತಿಯನ್ನು ಚಿತ್ರಿಸುವುದು ಬಹಳ ಮುಖ್ಯವಾಗಿತ್ತು. ಹಾಗೂ ಇಂಥ ಚಿತ್ರಣವೇ, ಅದರ ರಕ್ಷಣೆ ಎಂದು ಕೂಡ ಅವನಿಗೆ ಅನಿಸಿರಬಹುದು. ಆದ್ದರಿಂದಲೇ ಅವನ ಬರಹದಲ್ಲಿ ಒಬ್ಬನ ಆಸಕ್ತನ ಸೂಕ್ಷ್ಮತೆಗಳು ಕಂಡುಬರುತ್ತವೆ. ಒಂದು ರೀತಿಯಲ್ಲಿ ಇದು ಆಲನಹಳ್ಳಿ ನವ್ಯದ ವೈಚಾರಿಕತೆಗೆ ನೀಡಿದ ಪ್ರತಿಕ್ರಿಯೆಯಂತಲೂ ಹೇಳಬಹುದು. ಬದುಕನ್ನು ಕುರಿತು ಅನುಮಾನದಿಂದ ನೋಡುತ್ತಿದ್ದವರಿಗೆ ಈತ ಬದುಕಿನ ವಿಜೃಂಭಣೆಯ ಉತ್ತರವನ್ನು ಕೊಟ್ಟ ಹಾಗೆ ಭಾಷೆಯನ್ನು ಬಳಸಿಕೊಂಡಿದ್ದಾರೆ.

ಆಲನಹಳ್ಳಿಯವರು ಕಾದಂಬರಿಯಲ್ಲಿ ಮೈಸೂರಿನ ಸುತ್ತಮುತ್ತಲಿನ ಗ್ರಾಮ್ಯಭಾಷೆಯನ್ನು ಆಯಾಯ ಪಾತ್ರಗಳ ಮನೋಧರ್ಮಕ್ಕೆ ತಕ್ಕಂತೆ ಯಾವುದೇ ಮಡಿವಂತಿಕೆಯಿಲ್ಲದೆ ತಿಣುಕದೆ ಬಳಸಿಡುವ ರೀತಿಯು ಅದ್ಭುತವಾಗಿದೆ. "ನಮ್ಮೈದನಿಗೆ ಈಯೆಣ್ಣೆ ಪಸಂದಾಗದೆ ಅಂತ ಆಡುತ್ತಲೇ ಗೆಂಡೆತಿಮ್ಮನಿಗೂ ಮಾಡ್ಕೊಂಡಿಯಾ ಮೊಗ ಎಂದು ಕೇಳಿದಾಗ ಊಂ ಆ ಕೆಂಚಿ

ಕಟ್ಕಂಡು ನಾನು ಕಾಲ ಆಕ್ದಂಗೆ".[೧೦೩] ಅಲ್ಲದೆ ಪಸಂದ, ನಮ್ಮೈದ ಎಂಬ ಮಾತುಗಳು ಗ್ರಾಮ್ಯ ಭಾಷೆಯ ಬನಿಯನ್ನು ಯಥಾವತ್ತಾಗಿ ಪರಿಚಯಿಸುತ್ತವೆ. ಜೊತೆಗೆ ಕೃಷಿಯನ್ನು ಬೆರಗಿನಲ್ಲಿ ಮಾತ್ರ ಮಾಡಬೇಕೆಂಬುದನ್ನು ಮಾಲೇಗೌಡರು ಆಡುವ ಮಾತುಗಳು ಅರ್ಥಗರ್ಭಿತವಾದ ಭಾಷೆಯಲ್ಲಿ ವ್ಯಕ್ತಪಡಿಸುವ ಬಗೆಯನ್ನು ನೋಡಬಹುದು. ಬೇದಿಯಮ್ಮ ಗೆಂಡೆತಿಮ್ಮನನ್ನು ಬೈಯ್ಯುವಾಗ 'ಏನಂದೆ ನನ್ನ ಸವತೆತ್ತ ಮಗನೆ? ನಂಗೆ ತಿರಿಕ್ಕಂಡು ಮಾತಾಡಂಗಾದ್ಯಾ ನಿನ್ನ ಬುಂಡೆಗೆ ನನ್ನಾಟುಯ್ಯ' ಇಂತಹ ಕಡೆ ಲೇಖಕರು ಯಾವುದೇ ಮಡಿವಂತಿಕೆಯಿಲ್ಲದೆ ಭಾಷೆಯನ್ನು ಸಮರ್ಥವಾಗಿ ಬಳಸಿಕೊಂಡಿರುವುದು ಅನನ್ಯವೆನಿಸುತ್ತದೆ. ಈ ಎಲ್ಲ ದೃಷ್ಟಿಗಳಿಂದಲೂ ಸಹ ಈ ಕಾದಂಬರಿಯು ಜನಪ್ರಿಯವೂ ಸತ್ವಪೂರ್ಣವೂ ಆದ ಕೃತಿಯಾಗಿದೆ. ಇಷ್ಟಲ್ಲದೆ ಈ ಕಾದಂಬರಿಯಲ್ಲಿ ಸಣ್ಣಪುಟ್ಟ ದೋಷಗಳು ಇಲ್ಲದಿಲ್ಲ ಲೇಖಕರು ಮರಂಕಿಯ ದೇಹ, ಸೌಂದರ್ಯ ಇತ್ಯಾದಿಗಳನ್ನು ಚಿತ್ರಿಸುವಾಗ ಒಂದು ರೀತಿಯ ಲೈಂಗಿಕ ಚಟದ ರೀತಿಯಲ್ಲಿ ವರ್ಣಿಸುತ್ತಾರೆ. ಗೆಂಡೆತಿಮ್ಮನ ಸಮಕಾಲೀನರಾದ ಬೆಟ್ಟ, ಕಾಳ, ಪಿಲ್ಲಿ ಮುಂತಾದವರು ಮರಂಕಿಯ ಬಗ್ಗೆ ಮಾತಾಡಿಕೊಳ್ಳುವಾಗಲೂ ಅವಳ ಅತ್ಯಾಕರ್ಷಕ ಅಂಗಾಂಗಗಳನ್ನು ಕುರಿತು ಚರ್ಚಿಸುತ್ತಾರೆ. ಸ್ವತಃ ಗೆಂಡೆತಿಮ್ಮನೆ ಮರಂಕಿಯ ದೇಹವನ್ನು ಕಲ್ಪಿಸಿಕೊಳ್ಳುತ್ತಾನೆ ಎಂದು ಆಲನಹಳ್ಳಿ ಮುಗ್ಧತೆಯಿಂದ ಚಿತ್ರಿಸುತ್ತಾರೆ. ಹೀಗೆ ಒಂದೇ ವಿಚಾರವನ್ನು ಅತಿರೇಕ ಎಂಬ ಮಟ್ಟಿಗೆ ಪದೇ ಪದೇ ಚಿತ್ರಿಸುತ್ತ ಹೋಗುತ್ತಾರೆ. ಮರಂಕಿಯು ಮಹಾದೇವ ನಾಯಕನೊಡನೆ ಸುಖಿಸುವ ಸನ್ನಿವೇಶವನ್ನು ವಿವರಿಸುವಾಗ ಕಿಲಾಡಿಯಾದ ನಾಯಕ ತನ್ನ ಅವ್ವನಿಗೆ ಎಚ್ಚರತಪ್ಪುವ ಹಾಗೆ ಹೆಂಡಕುಡಿಸುತ್ತಾನೆ. ಆಕೆ ನಿದ್ರಾದೇವಿಯ ವಶವಾಗುತ್ತಾಳೆ. ಮರಂಕಿಯೂ ಮೂಗು ಮುಚ್ಚಿಕೊಂಡು ಕುಡಿಯುತ್ತಾಳೆ. ಹೀಗೆ ಇಂಥ ಸನ್ನಿವೇಶವನ್ನು ನಿರ್ಮಾಣ ಮಾಡುವಾಗ ರಸವತ್ತಾಗಿ ಬರೆಯಲೇಬೇಕೆಂಬ ಮನೋಭಾವದಿಂದ ಬರೆಯುತ್ತಿದ್ದಾರೆ ಎಂಬ ಭಾವನೆಯು ಬರುತ್ತದೆ. ಗೆಂಡೆತಿಮ್ಮ ತಮ್ಮ ಅವ್ವನೊಡನೆ ಜಗಳವಾಡುತ್ತಿದ್ದಾಗ 'ಲೇ ಮುದ್ಕಿ ಸಾಕು ನಿಲ್ಸು ನಿನ್ನ ಕಿರುಚಾಟ' ಎಂದು ಹೇಳಿಸುವುದು ಗೆಂಡೆತಿಮ್ಮನ ಒಟ್ಟು ಚಿತ್ರಣದ ಹಿನ್ನೆಲೆಯಲ್ಲಿ ಅಸಹಜವಾಗಿ ಕಾಣುತ್ತದೆ. ಹೀಗೆ ಕಾದಂಬರಿಯಲ್ಲಿ ಸಣ್ಣಪುಟ್ಟ ದೋಷಗಳೂ ಮಿತಿಗಳು ಸಾಕಷ್ಟು ಕಂಡುಬರುತ್ತವೆ. ಇದೇನೇ ಇದ್ದರೂ ಗೆಂಡೆತಿಮ್ಮ ಮತ್ತು ಮರಂಕಿಯರ ಜೀವನದ ಸುತ್ತಮುತ್ತ ಚಿತ್ರಿತವಾಗಿರುವ ಈ ಕಾದಂಬರಿಯು ನಾಗರೀಕ ಬದುಕಿನ ಕೆಲತುಣುಕುಗಳು ಗ್ರಾಮೀಣ ಬದುಕನ್ನು ಪ್ರವೇಶಿಸಿದಾಗ ಹಳೆಯ ತಲೆಮಾರಿನ ಜನರು ತಲ್ಲಣಿಸುವ ರೀತಿ ಅವರ ಹಿಡಿತಗಳನ್ನು ಮೀರಿ ಅಲ್ಲಿನ ಯುವಶಕ್ತಿಗಳು ಹೊಸ ಬದುಕಿಗೆ ಹಾತೊರೆಯುವುದು ಈ ಪರಿಣಾಮವಾಗಿ ಪ್ರತಿಮನೆಯ ಜಗಳ ಕಾದಾಟಗಳು ಬೀದಿಗೆ ಬಂದು ಸಾರ್ವಜನಿಕ ರೂಪ

---

೧೦೩. ಶ್ರೀ ಕೃಷ್ಣ ಆಲನಹಳ್ಳಿ, 'ಪರಸಂಗದ ಗೆಂಡೆತಿಮ್ಮ' ಪು. ೪, ೨೦೧೧.

ಪಡೆಯುವುದು ಆಗ ಉಂಟಾಗುವ ಏರುಪೇರುಗಳು, ಸಾವುನೋವುಗಳು, ಸಂಕಷ್ಟಗಳು ಮುಂತಾದವುಗಳೆಲ್ಲವನ್ನು ಕಾದಂಬರಿಯಲ್ಲಿ ಬಿಚ್ಚಿಡುವ ಪರಿ ಮನಮೆಚ್ಚುವ ಬಗೆಯಾಗಿದೆ. ಇವೆಲ್ಲವುಗಳನ್ನು ಚಿತ್ರಿಸಿರುವುದರ ಜೊತೆಯಲ್ಲೇ ಆ ಜನರ ಆಚಾರ-ವಿಚಾರ ಮಣ್ಣಿಗಂಟಿದ ಗುಣ, ಅದರ ಚೆಲುವು ಮುಂತಾದವುಗಳನ್ನು ಗುರುತಿಸುತ್ತಾರೆ. ಹೀಗೆ ಗೆಂಡೆತಿಮ್ಮನ ಕತೆಯನ್ನು ಹೇಳುತ್ತಲೇ ಲೇಖಕರು ಭಾರತದ ಹಲವಾರು ಊರುಗಳ ಸುಡುವಾಸ್ತವದ ಚಿತ್ರಣಗಳನ್ನು ನಮ್ಮ ಮನೋಲೋಕದ ಮುಂದೆ ತೆರೆದಿಟ್ಟಿದ್ದಾರೆ. ಇಂಥ ಜೀವಂತ ಪಾತ್ರಗಳನ್ನು ಸೃಷ್ಟಿಸುವ ಮೂಲಕ ಆಲನಹಳ್ಳಿಯವರು ಕನ್ನಡ ಓದುಗರ ಅಪಾರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯು ಹಲವು ದೃಷ್ಟಿಯಿಂದ ಮಹತ್ವದ ಕಾದಂಬರಿ ಇಲ್ಲಿ ಭಾಷೆಯನ್ನು ಬಹಳ ಸರಳವಾಗಿ ಮುಗ್ಧವಾಗಿ ಆಲನಹಳ್ಳಿಯವರು ಬಳಸಿದ್ದಾರೆ. ನಿರೂಪಣಾ ಶೈಲಿಯು ಸಹ ಗ್ರಾಮ್ಯವಾಗಿಯೇ ಬಳಸಿರುವುದನ್ನು ಕಾಣಬಹುದು. ಆಲನಹಳ್ಳಿಯವರ ಮೂರು ಕಾದಂಬರಿಗಳ ಸತ್ವ ಗ್ರಾಮೀಣ ಬದುಕೇ ಆಗಿದೆ. ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆಯ ಸುತ್ತಮುತ್ತಲ ಬದುಕಿನ ವಿವರಗಳು ಮತ್ತು ಆ ಪ್ರದೇಶದ ಗ್ರಾಮೀಣ ಭಾಷೆಯ ಸೊಗಡನ್ನು ಸಮರ್ಥವಾಗಿ ಸೆರೆಹಿಡಿದಿದ್ದಾರೆ. ಕಾದಂಬರಿಯಲ್ಲಿ ಬರುವ ವಿಭಿನ್ನ ಮನೋಧರ್ಮದ ಪಾತ್ರಗಳಿಗೆ ಅನುಗುಣವಾಗಿ ಎಲ್ಲಿಯೂ ತಿಣುಕದೆ, ಭಾಷೆಯನ್ನು ಬಳಸಿರುವುದು ಮಹತ್ವದ ಅಂಶವಾಗಿದೆ. ಪಾರ್ವತಿ ತನ್ನ ಸ್ವಭಾವಕ್ಕೆ ತಕ್ಕಂತೆ ಜಕ್ಕಳ್ಳಿಯ ಭಾಷೆಯಲ್ಲಿ ಮಾತಾಡುವುದು ಸಹಜವಾಗಿ ಬಂದಿದೆ. 'ಲೋ ಮಾದೇವ ಬಾರ್ಲಾ ಇಲ್ಲಿ ವಸಿ ಎತ್ತಿಡ್ಕೋ' ಎಂದ ಕೂಡಲೇ ಬಸಲಿಂಗ 'ಅವ್ನು ಊರ್‍ಗೆ ವೋಯ್ತಾ ಅವ್ನೆ ಕೊಡಣ್ಣ ಬೇಕಾದರೆ ಅಟ್ಟಿತವು ಬುಡ್ತಾನೆ ಎಂದಾಗ ಭುಜಂಗಯ್ಯ ಎತ್ತುಗಳ ಹಗ್ಗ ಕೈಗೆ ಕೊಟ್ಟು ನೋಡ್ಲಾ ನೀನೇ ವಸಿ ನೊಗ ಬಿಚ್ಚಿ ಯೆತ್ತ ಕೊಟ್ಗೇಗೆ ಕಟ್ಟಾಕಿ ನಮ್ಮೋಳ್ಗೆ ಹೇಳು ಇನ್ನೇನು ಈಗ್ಲೆ ಬಂದ್ಬುಟ್ಟೆ' ಇನ್ನೂ ಮುಂತಾದ ಗ್ರಾಮ್ಯ ಪದಗಳನ್ನು ಪಾತ್ರಗಳ ಮನೋಧರ್ಮಕ್ಕೆ ತಕ್ಕಂತೆ ಸೆರೆಹಿಡಿದಿರುವುದು ವಿಶೇಷ ಎನಿಸುತ್ತದೆ. ಹೀಗೆ ಲೇಖಕರು ಕಾದಂಬರಿಗಳ ಪಾತ್ರದ ಮನೋಭಾವಕ್ಕೆ ತಕ್ಕಂತೆ ಯಾವುದೇ ಮಡಿವಂತಿಕೆ ಇಲ್ಲದೆ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡಿರುವುದು ಮಹತ್ವದ ಅಂಶವಾಗಿದೆ.

ಆಲನಹಳ್ಳಿಯವರ ಈ ಮೂರು ಕಾದಂಬರಿಗಳನ್ನು ವಿಶ್ಲೇಷಣೆ ಮಾಡಿದಾಗ ಹಲವಾರು ವಿಶಿಷ್ಟ ಅಂಶಗಳನ್ನು ಕಾಣುತ್ತೇವೆ. ಆಲನಹಳ್ಳಿಯವರ ಈ ಕಾದಂಬರಿಗಳ ಲೋಕವು ಗ್ರಾಮೀಣ ಬದುಕೇ ಆಗಿದೆ. ಮೈಸೂರು ಮತ್ತು ಹೆಗ್ಗಡದೇವನಕೋಟೆಯ ಸುತ್ತಮುತ್ತಲಿನ ಬದುಕಿನ ವಿವರಗಳನ್ನು ಇವು ಜೀವಂತವಾಗಿ ಕಟ್ಟಿಕೊಡುತ್ತವೆ. ಇವರ ಕಾದಂಬರಿಗಳಲ್ಲಿ ಪ್ರಾದೇಶಿಕವಾದ ಸೊಗಡು ಇರುವುದು ವಿಶೇಷವೆನಿಸುತ್ತದೆ. 'ಕಾಡು' ಕಾದಂಬರಿಯ ಕಥೆಯ ಹಂದರವು

ಹೊಸೂರು ಮತ್ತು ಕೊಪ್ಪಲಿನಲ್ಲಿ ನಡೆಯುತ್ತದೆ. ಹೆಗ್ಗಡದೇವನಕೋಟೆಯ ಹೆಸರು ಕಾದಂಬರಿಯಲ್ಲಿ ಪೊಲೀಸ್ ಮತ್ತು ಇತರ ವಿಚಾರಗಳಿಂದ ಒಂದೆರಡುಸಾರಿ ಸುಳಿದುಹೋಗುತ್ತದೆ. 'ಪರಸಂಗದ ಗೆಂಡೆತಿಮ್ಮ' ಕಾದಂಬರಿಯ ಕಥೆಯು ಮೈಸೂರಿನ ಮತ್ತು ನಂಜನಗೂಡಿನ ಸುತ್ತಮುತ್ತಲಿನ ಗೌವ್ವಳ್ಳಿ, ಸಾಲುಂಡಿ ಮತ್ತು ಉಳಿಮಾವು ಮುಂತಾದ ಊರುಗಳ ಸ್ಥಿತಿಗತಿಯನ್ನು ಚಿತ್ರಿಸುತ್ತದೆ. 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯಲ್ಲಿ ಕೋಟೆಯ ಸುತ್ತಮುತ್ತ ಮತ್ತು ಮೈಸೂರು ರಸ್ತೆಯ ಅಂಚಿನಲ್ಲಿರುವ ಮಾದಳ್ಳಿಯ ಕಾದಂಬರಿಯ ಪ್ರಧಾನ ಕ್ರಿಯಾಕೇಂದ್ರವಾಗಿದೆ. 'ಕಾಡು' ಕಾದಂಬರಿಯಲ್ಲಿ ಹಳ್ಳಿಗೆ ಪೊಲೀಸ್ ಬರುವ ಮೂಲಕ ಕೊನೆಯಲ್ಲಿ ನಾಗರಿಕತೆಯೂ ಪ್ರವೇಶಿಸುತ್ತದೆ. 'ಪರಸಂಗದ ಗೆಂಡೆತಿಮ್ಮ'ನಲ್ಲಿ ನಾಗರಿಕತೆಯು ಅಳುಕುತ್ತಲೇ ಪ್ರವೇಶಿಸುತ್ತದೆ. 'ಭುಜಂಗಯ್ಯನ ದಶಾವತಾರ'ದಲ್ಲಿ ಆಧುನಿಕತೆಯನ್ನು ಪೂರ್ವಾಪರ ಯೋಚಿಸಿಯೇ ಸ್ವೀಕರಿಸುತ್ತವೆ. ಹೀಗೆ ಈ ಮೂರು ಕಾದಂಬರಿಗಳಲ್ಲಿ ಬೆಳವಣಿಗೆಯ ದೃಷ್ಟಿಯಿಂದ ಒಂದು ರೀತಿಯ ಸಾವಯವ ಸಂಬಂಧಗಳು ಕಂಡುಬರುತ್ತವೆ.

ಇನ್ನು ಕಥೆಗಳಲ್ಲಿ ಮುಗ್ಧತೆಯನ್ನು ಕಾಣುವ ಭಾಷೆಯನ್ನು ಆಲನಹಳ್ಳಿಯಲ್ಲಿ ಕಾಣುವುದಾದರೆ 'ಫೀನಿಕ್ಸ್' ಸಂಕಲನದಲ್ಲಿ ಕಂಡುಬರುವ ಪ್ರಮುಖ ಅಂಶಗಳು ಗಂಡು-ಹೆಣ್ಣುಗಳ ಸಂಬಂಧವು ಗಡಿಯನ್ನು ಮೀರಿ ನಿಲ್ಲುವುದು ಹೆಣ್ಣಿನ ಅಂಗಾಂಗಗಳ ವರ್ಣನೆ, ಗಂಡು-ಹೆಣ್ಣುಗಳನ್ನು ಕಾಮತೃಪ್ತಿಗಾಗಿಯೇ ಹೆಚ್ಚು ಗಮನಕೊಡುವುದು ಪುರುಷಕೇಂದ್ರಿತ ಸಮಾಜದಲ್ಲಿ ಹೆಣ್ಣಿನ ವಿವಿಧ ಮಾದರಿಗಳಲ್ಲಿ ಕಾಮಾತುರದ ಹೆಣ್ಣುಗಳನ್ನು ಕಟ್ಟಿಕೊಡುವುದು ಆಲನಹಳ್ಳಿಯವರ ಕಥೆಗಳಲ್ಲಿ ಕಂಡುಬರುವ ಪ್ರಬುದ್ಧವಲ್ಲದ ಮುಗ್ದತೆಯ ನಿರೂಪಣೆ ಹಾಗೂ ಭಾಷಾಶೈಲಿಯನ್ನು ಗುರುತಿಸಲು ಸಾಧ್ಯ.

'ಹುತ್ತ' ಕಥೆಯಲ್ಲಿ ಸುಮಿತ್ರಳ ತಾಯಿಯ ವರ್ತನೆ ಅಸಹನೆಯಿಂದಲೇ ಕೂಡಿದೆ. ಮಧ್ಯವಯಸ್ಸಿನ ಹೆಂಗಸು ಅದೇ ತಾನೇ ಪ್ರಬುದ್ಧತೆಯನ್ನು ಪಡೆಯುತ್ತಿರುವ ತನ್ನ ಮಗಳ ಸ್ನೇಹಿತನನ್ನು ಕುಡಿತದ ಅಮಲಿನಲ್ಲಿ ಲೈಂಗಿಕ ಸಂಬಂಧ ಏರ್ಪಡಿಸಿಕೊಳ್ಳಲು ಪ್ರಯತ್ನಿಸಿ ವಿಫಲವಾಗುವುದು ಮಧ್ಯವಯಸ್ಸಿನ ಹೆಂಗಸು ಅನೇಕ ವರ್ಷಗಳಿಂದಲೇ ಗಂಡನಿಂದ ದೂರವಾಗಿರುವ ಇವಳು ಒಂದೇ ರಾತ್ರಿಯಲ್ಲಿ ಕಾಮದ ಉದ್ದೀಪನಕ್ಕೆ ಒಳಗಾಗುವುದು ಅಪ್ರಬುದ್ಧತೆಯಿಂದ ಕೂಡಿದೆ. ಇಲ್ಲಿ ಕಥೆಗಾರರು ಸಮಾಜದಲ್ಲಿರುವ ವಿವಿಧ ಮುಖಗಳ ಪರಿಚಯ ಮಾಡಿಕೊಡುವ ಸಂದರ್ಭದಲ್ಲಿ ಇಂತಹ ಪಾತ್ರಗಳು ಸೃಷ್ಟಿಗೊಳ್ಳುತ್ತವೆ. ಇವುಗಳ ಮೂಲ ಸ್ವರೂಪವನ್ನು ನಾವು ಅರೆಬರೆಯಾಗಿ ಅರಗಿಸಿಕೊಂಡಿರುವುದು ಆಧುನಿಕತೆಯ ಕಾರಣವೆಂದು ಹೇಳಬಹುದು. ಸುಮಿತ್ರಳ ತಾಯಿ ಆಧುನಿಕತೆಗೆ ಆಕರ್ಷಿತಳಾಗಿ ನಗರದಲ್ಲಿ ಬದುಕನ್ನು ನಡೆಸುತ್ತಿದ್ದಾಳೆ. ಅವಳಲ್ಲಿ ತನ್ನ ದೈಹಿಕ ಸುಖಕ್ಕೆ ಕೊಡುವ ಪ್ರಾಮುಖ್ಯತೆ ಮಾನಸಿಕ

ಶಾಂತಿಗೆ ಗಮನಕೊಡುವುದಿಲ್ಲ. ಲೇಖಕರು ನಿರೂಪಣಾ ಕ್ರಮ ಮತ್ತು ಮುಗ್ಧವಾದ ಬದುಕಿನ ಸಂಗತಿಗಳನ್ನು ಭಾಷಾ ದೃಷ್ಟಿಯಿಂದ ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತಾರೆ.

ಮನುಷ್ಯನ ಮೂಲಭೂತ ಪ್ರವೃತ್ತಿಗಳು ಅವನ ನಿಯಂತ್ರಣವನ್ನು ತಪ್ಪಿಸಿಕೊಂಡು ತನ್ನ ಒತ್ತಡಗಳನ್ನು ಅವನ ಮೇಲೆ ಹೇರಿದಾಗ ಇಂತಹ ಸಂದರ್ಭಗಳು ಕಾಣಿಸಿಕೊಳ್ಳುತ್ತವೆ. 'ತಪ್ತ' ಕಥಾಸಂಕಲನದಲ್ಲಿ ಮನುಷ್ಯನು ಹುಡುಕುತ್ತಿರುವ ಮಾನಸಿಕ ಶಾಂತಿ, ಆತ್ಮಗೌರವಗಳು ಬಹಳ ಪ್ರಾಮುಖ್ಯತೆ ಪಡೆದುಕೊಂಡಿವೆ. "ಸರ್ಪದ ಹಾಗೆ ಸುತ್ತಿಸುಡುತ್ತಿರುವ ತುಂಬುತೋಳುಗಳು, ಬೆವರು, ಬ್ರಾಂದಿಮಿಶ್ರಿತ ಕೆಟ್ಟವಾಸನೆಯ ಏದುಸಿರು ನನ್ನ ಅರ್ಧ ದೇಹವನ್ನೇ ಹುದುಗಿಸಿಕೊಂಡಿರುವ ಬೆತ್ತಲೆಯ ಬೆಚ್ಚನೆಯ ಮಾಂಸಖಂಡಗಳು ರಕ್ತವೆಲ್ಲ ಒಮ್ಮೆಗೆ ಮಿದುಳಿಗೆ ನುಗ್ಗಿಬಂದಿತು. ಬಿಗಿದ ಅಪ್ಪುಗೆಯನ್ನು ಸಡಿಲಿಸಿಕೊಂಡು ದಡದಡ ಮೆಟ್ಟಿಲಿಳಿದೆ. ಕೆಳಗೆ ಕೆಲಸದ ಹುಡುಗಿಗೆ ಎಚ್ಚರವಾಗಲಿಲ್ಲ. ಯಾವುದೊಂದನ್ನು ಯೋಚಿಸದೆ ಹೊರಬಾಗಿಲು ತೆರೆದು ರಸ್ತೆಗಿಳಿದೆ. ಎಲ್ಲವನ್ನು ಕಳೆದುಕೊಂಡಿದ್ದೇನೆ. ಆಗಬಾರದ್ದು ಆಗಿ ಹೋಗಿದೆ. ನರಕವೇ ಚೀರಿಸುವ ಹುಯಿಲ ಪೊರೆ ಏರಿ ಬರುತ್ತಿದೆ. ದಟ್ಟೈಸಿದ ಕತ್ತಲಲ್ಲಿ ಬೆನ್ನಟ್ಟಿ ಬರುತ್ತಿರುವ ನೆರಳುಗಳು, ಉಸಿರು ಬಿಗಿ ಹಿಡಿದು ಓಡಿದೆ. ಓಡುವಾಗ ನೆಲವೊಮ್ಮೆಲೆ ಕುಸಿದು ಪೂರ್ಣ ನನ್ನನ್ನೇ ಹುದುಗಿಸಿಕೊಂಡು ಬಿಡಲಾರದೆ, ದೂರದಲ್ಲೆಲ್ಲೋ ಬೇಟೆ ಪೊಲೀಸನ ಲಾಠಿಶಬ್ದ ಮೃತ್ಯು ತಮ್ಮಟೆಯಾಗಿ ಕೇಳುತ್ತಿದೆ. ಅಸ್ತಿತ್ವವನ್ನೇ ಅಲುಗಾಡಿಸುತ್ತಿದೆ."[೧೦೪] ಸುಮಿತ್ರಾಳ ತಾಯಿಯನ್ನು ಸಂಪೂರ್ಣವಾಗಿ, ಆಳವಾಗಿ ಅವಳ ವ್ಯಕ್ತಿತ್ವವನ್ನು ಅರಿಯಬೇಕೆಂದು ಹೊರಡುವ ನಾಯಕ ಅವರ ನಡೆ, ನುಡಿ ಸಲಿಗೆಯಿಂದ ಅವರ ದೃಷ್ಟಿಕೋನವನ್ನು ಅರಿವಿಗೆ ತಂದುಕೊಳ್ಳುವ ನಾಯಕನು ಮತ್ತೆ ಅವರ ಬದುಕಿನ ಶೋಧನೆಯನ್ನು ಮುಂದುವರಿಸಿದಾಗ ತನ್ನ ಅಸ್ತಿತ್ವಕ್ಕೆ ದೊಡ್ಡಪೆಟ್ಟನ್ನು ತಂದುಕೊಳ್ಳುತ್ತಾನೆ. ತಾನು ಶೋಧಿಸುತ್ತಿರುವುದು ಹುತ್ತವೆಂದು ತಿಳಿದ್ದರೂ ತನ್ನ ಪ್ರಜ್ಞೆಯನ್ನು ಜಾಗೃತಗೊಳಿಸದೇ ಭಂಡಧೈರ್ಯ ದೊರೆತರು ಎಡುವುವುದು, ಇದು ಅವನ ಅಪ್ರಬುದ್ಧ ಚಿಂತನೆಗಳಿಗೆ ಕಾರಣವಾಗಿದೆ.

'ಅಂಟಿದ ನಂಟಿನ ಕೊನೆ ಬಲ್ಲವರಾರು' ಕಥೆಯಲ್ಲಿ ಭಾಷೆಯು ಸುಲಲಿತವಾಗಿ ನಿರೂಪಣೆಯೊಟ್ಟಿಗೆ ಬೆಸೆದಿದೆ. ನಾಯಕ ನಾಯಕಿಯಾದ ಶಾಲಿನಿಯ ಜಾತಿಯನ್ನು ಕೆಡಿಸುವುದಕ್ಕೆ ಹೆಚ್ಚಿನ ಗಮನಕೊಡುವುದು. ಇಲ್ಲಿ ಪ್ರವೃತ್ತಿಗಳು ಮೇಲ್ವರ್ಗದ ಮೇಲುಗೈಯನ್ನು ನೋಡಬಹುದು. ಮುಗ್ಧತೆಯಿಂದಲೇ ಭಾಷೆಯನ್ನು ಕಟ್ಟುತ್ತಾ ಬಂದರೂ ಅದರೊಳಗಿನ ಅಂತರ್‌ಧ್ವನಿ ಮಾತ್ರ ತೀಕ್ಷ್ಣವಾಗಿರುತ್ತೆ ಎಂಬುದಕ್ಕೆ ಈ ಕಥೆ ಸಾಕ್ಷಿಯಾಗುತ್ತದೆ. ಶತಶತಮಾನಗಳಿಂದ ತುಳಿಯುತ್ತಾ ಬಂದ ಮೇಲ್ವರ್ಗದ ಹೆಣ್ಣುಮಕ್ಕಳ ಜಾತಿಕೆಡಿಸಬೇಕು ಎಂಬ

---

೧೦೪. 'ಶ್ರೀಕೃಷ್ಣ ಆಲನಹಳ್ಳಿ ಸಮಗ್ರಕಥೆಗಳು', ಪುಟ. ೬೨, ೨೦೦೦.

ಕಾರಣದಿಂದ ಹೊರಡುವ ನಾಯಕ ವಿದ್ಯಾವಂತನಾಗಿದ್ದಾನೆ. ಆದರೆ ಅವನ ಆಲೋಚನೆಯಲ್ಲಿ ಬಿರುಕುಗಳು ಯಾವ ರೀತಿ ಅಪಮೌಲ್ಯದ ಚಿಂತನೆಗಳಿಗೆ ಪ್ರಾಧಾನ್ಯತೆಕೊಡುವುದು. ವಿದ್ಯಾವಂತ ಸಮಾಜವು ನಡೆಯುತ್ತಿರುವ ದಾರಿಯ ಅನೇಕ ಮುಖಗಳನ್ನು ಪರಿಚಯಿಸುತ್ತದೆ. ಅಪ್ರಬುದ್ಧ ಚಿಂತನೆಗಳ ಕಡೆಗೆ ಗಮನಕೊಡುತ್ತಲೇ ಅವಳಿಗೆ ಕಾರಣಗಳನ್ನು ಹುಡುಕುವಂತೆ ಮಾಡುವುದು ಆಲನಹಳ್ಳಿಯವರ ಸಾಹಿತ್ಯದ ವೈಶಿಷ್ಟ್ಯತೆಯಾಗಿದೆ. ಗಂಡು-ಹೆಣ್ಣು ಪರಸ್ಪರ ಭೇಟಿಯಾಗುವುದು. ಸ್ನೇಹಪೂರ್ವಕ ಮಾತುಗಳು ನಂತರ ಪ್ರಣಯದ ಬೀಜಮೊಳೆಯುವುದು, ಹೆಣ್ಣು ತನ್ನ ಕನ್ಯತ್ವವನ್ನು ನಾಯಕನಿಗೆ ಧಾರೆ ಎರೆಯುವುದು ಕಾಲನಂತರ ಹಿರಿಯರು ಸಮ್ಮತಿಸಿದ ಹುಡುಗನೊಂದಿಗೆ ಮದುವೆಯಾಗಿ ಸಂಸಾರ ನಡೆಸುವುದು 'ಅಂಟಿದ ನಂಟಿನ ಕೊನೆಯಬಲ್ಲವರಾರು', 'ಇನ್ನೊಂದು ಪ್ರಣಯ ಪ್ರಸಂಗ' ಕಥೆಗಳಲ್ಲಿ ಕಂಡುಬರುವ ಸಾಮಾನ್ಯವಾದ ಅಂಶಗಳು. ಈ ಕಥೆಗಳಲ್ಲಿ ಸದ್ಯದ ಬದುಕನ್ನು ಅನುಭವಿಸುವುದು ಮುಖ್ಯವಾಗುತ್ತದೆ. ತಮ್ಮ ಭವಿಷ್ಯದ ಬಗೆಗಿನ ಆಲೋಚನೆಗಳು ಅವರಿಗೆ ಮುಖ್ಯವೆನಿಸುತ್ತದೆ. ಈ ಕಥೆಗಳ ಮೂಲಕ ಆಧುನಿಕತೆಯ ಬೀಜವು ನಮ್ಮ ಸಮಾಜದ ಬದುಕನ್ನು ವೈಯಕ್ತಿಕ ಬದುಕಿಗೆ ಪರಿವರ್ತಿಸಿದಾಗ ಸಾಹಿತ್ಯದಲ್ಲಿ ಒಂದು ಹೊಸ ಕ್ರಾಂತಿಯನ್ನು ಸೃಷ್ಟಿಮಾಡಿತು. ಈ ಸೃಷ್ಟಿಯ ನಂತರದಲ್ಲಿ ಇಡೀ ಸಮಾಜದ ಬದಲಾವಣೆಗೆ ಕಾರಣವಾಯಿತು. ಬದಲಾವಣೆಯು ಸಮಾಜದಲ್ಲಿ ಮನುಷ್ಯನ ಮೂಲಸ್ವಭಾವಗಳಾದ ಹಿಂಸೆ, ಕ್ರೌರ್ಯ, ಕಾಮ ಇವುಗಳ ಮೇಲುಗೈಯನ್ನು ಸಾಧಿಸಲು ಅವಕಾಶ ಕಲ್ಪಿಸಿತು. ಯಾವುದೇ ಬರಹಗಾರ ತನ್ನ ವೈಯಕ್ತಿಕ ಅನುಭವಗಳನ್ನು ತಿಳಿಸುವಾಗ ಎಚ್ಚರಪ್ರಜ್ಞೆಯಿಂದ ಅಡಿಯಿಟ್ಟಾಗ ಮಾತ್ರ ಅದು ಉತ್ಕೃಷ್ಟ ಸಾಹಿತ್ಯವಾಗುತ್ತದೆ. ಇಲ್ಲದಿದ್ದರೆ ಸಮಾಜದ ತಪ್ಪುದಾರಿಗೆ ಅವನು ಕಾರಣನಾಗುತ್ತಾನೆ. ಜೊತೆಗೆ ಆಲನಹಳ್ಳಿ ಬರಹದಲ್ಲಿ ವ್ಯಕ್ತಿಕೇಂದ್ರಿತ ದೃಷ್ಟಿಯನ್ನು ನೋಡಿದಾಗ ಅಲ್ಲಿ ನಮಗೆ ಸಮಾಜದ ವೈರುಧ್ಯಗಳು ಕಂಡುಬರುತ್ತವೆ. ಗಂಡು-ಹೆಣ್ಣುಗಳ ವಿವಿಧ ಮಾದರಿಗಳನ್ನು ಅಪ್ರಬುದ್ಧ ಚಿಂತನೆಗಳ ಮೂಲಕವೇ ತೆರೆದಿಡುತ್ತಾ ಹೋಗುತ್ತಾರೆ. ಆಧುನಿಕ, ಸಾಂಪ್ರದಾಯಿಕ ಮೌಲ್ಯಗಳ ಸಂಘರ್ಷದಲ್ಲಿ ಸಾಮಾಜಿಕ, ಸಾಂಸ್ಕೃತಿಕ ಸ್ಥಿತ್ಯಂತರಗಳ ಸ್ವರೂಪವನ್ನು ಪ್ರತಿಮೆ, ಸಂಕೇತಗಳ ಮೂಲಕ ಕಟ್ಟಿಕೊಡುವುದು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾಗಿದೆ. ಅಪ್ರಬುದ್ಧ ಚಿಂತನೆಗಳಿಂದಲೇ ಸಾಹಿತ್ಯ ಪ್ರತಿಭಟನೆಯನ್ನು ತಂದರೂ ಸಹಿತ ಹೊಸ-ಹೊಸ ಆಲೋಚನೆಗಳನ್ನು ಬರವಣಿಗೆಯ ಮೂಲಕ ಹುಟ್ಟುಹಾಕಿದವರು ಆಲನಹಳ್ಳಿ.

ಹೀಗೆ ಆಲನಹಳ್ಳಿಯವರು ಸುಮಾರು ಕಾಲುಶತಮಾನದ ಅವಧಿಯಲ್ಲಿ ಸೃಷ್ಟಿಸಿರುವ ಒಟ್ಟು ಬರಹಗಳಲ್ಲಿ ಕೆಲವು ಮಹತ್ವದ ಬರಹಗಳಿರುವಂತೆ ಸಾಮಾನ್ಯ ಬರಹಗಳೂ ಇವೆ. ಒಬ್ಬ ಲೇಖಕ ಬರೆದುದೆಲ್ಲವೂ ಅತ್ಯಂತ ಶ್ರೇಷ್ಠಮಟ್ಟದ್ದಾಗುವುದು ಸಾಧ್ಯವಿಲ್ಲ. ಈ ಮಾತು ಆಲನಹಳ್ಳಿಯವರ ಕಥನಗಳಿಗೂ ಅನ್ವಯವಾಗುತ್ತದೆ. ಒಟ್ಟಾರೆ ದಟ್ಟವಾದ ಜೀವನ ಪ್ರೀತಿಯುಳ್ಳ

ಬರಹಗಾರರಾದ ಆಲನಹಳ್ಳಿಯವರು ಬದುಕಿನ ಆಳ-ಅಗಲಗಳನ್ನು ತನ್ನೆಲ್ಲಾ ಮಿತಿಗಳೊಡನೆ ನೀಡುವ ಬರಹಗಳನ್ನು ರಚಿಸಿದ್ದಾರೆ. ಈ ವಿವರಗಳೆಲ್ಲವನ್ನು ಆಯಾಯ ಕಥೆ-ಕಾದಂಬರಿಗಳನ್ನು ಕುರಿತು ವಿಶ್ಲೇಷಿಸಿದಾಗ ಚರ್ಚಿಸಿದ್ದೇನೆ. ಒಟ್ಟು ಅವರ ಬರಹಗಳ ಮುಖ್ಯ ಸತ್ವ ಕಾಮವೇ ಆಗಿದ್ದು ಯುವ ಮನಸ್ಸುಗಳ ಎಲ್ಲ ರೀತಿಯ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸುವಂತಹುದೆ ಆಗಿದೆ. ಅಲ್ಲದೆ ಹಳತು ಮತ್ತು ಹೊಸತುಗಳ ನಡುವಣ ಸಂಘರ್ಷ ಇವರ ಬಹುಪಾಲು ಕಥೆ ಹಾಗೂ ಕಾದಂಬರಿಗಳಲ್ಲಿ ಕಂಡುಬರುತ್ತದೆ. ಜೀವನವನ್ನು ಉತ್ಕಟವಾಗಿ ಅನುಭವಿಸುವ, ಮುಕ್ತಮನಸ್ಸಿನ ಇವರ ಕಥಾನಾಯಕ - ನಾಯಕಿಯರು ಹೊಸಬದುಕಿನ ಸೆಳೆತದಿಂದ ಜಾತಿ-ಮತ, ಧರ್ಮ, ವಯಸ್ಸು, ಅಂತಸ್ಸು, ಮಡಿವಂತಿಕೆ ಇವುಗಳೆಲ್ಲವನ್ನು ದಾಟಿ ಬದುಕಲು ಹವಣಿಸುತ್ತಾರೆ. ಜಾತೀಯತೆ ಅಸಮಾನತೆ ಹಾಗೂ ಶೋಷಣೆಯ ಬಗೆಗಳನ್ನು ಕಂಡರೆ ಅತ್ಯುತ್ಸಾಹದಿಂದಲೇ ಈ ರಚನೆಗಳನ್ನು ನೀಡಿದ್ದಾರೆ. ಸಮಕಾಲೀನ ಬರಹಗಾರರಿಗಿಂತ ತೀರಭಿನ್ನವಾಗಿ ಬೆಳೆಯಬೇಕೆಂಬ ಮಹತ್ವಾಕಾಂಕ್ಷೆಯ ಬರಹಗಾರರಾದ ಆಲನಹಳ್ಳಿನವರ, ದಲಿತ-ಬಂಡಾಯ ಸಾಹಿತ್ಯ ಪಂಥಗಳು ಹುಟ್ಟಿಬೆಳೆಯುವ ಕಾಲದಲ್ಲಿ ಬರಹಗಳನ್ನು ರಚಿಸಿರುವುದರಿಂದ ಆ ಎಲ್ಲ ಪಂಥದ ಪ್ರಭಾವಗಳು ಇವರ ಕಥೆ ಮತ್ತು ಕಾದಂಬರಿಗಳಲ್ಲಿ ಕಂಡುಬರುತ್ತವೆ. ಈ ಎಲ್ಲ ದೃಷ್ಟಿಯಿಂದ ಇವರ ಬರಹಗಳನ್ನು ಅಧ್ಯಯನ ಮಾಡಿದಾಗ ಹಲವಾರು ಮಿತಿಗಳು ಕಂಡುಬರುತ್ತವೆ. ಕೆಲವು ಕಥೆಗಳಲ್ಲಿ ಮಾತಿನ ದುಂದುಗಾರಿಕೆ ಇದ್ದು ಅನಾವಶ್ಯಕವಾದ ವರ್ಣನೆಗಳು ಬರುತ್ತವೆ. ಕಾಮದ ವಿವರಗಳು ಬಂದಾಗ ಹಲವು ಸಲ ವಿವೇಚನೆಯನ್ನು ಮೀರಿ ಒಂದು ಬಗೆಯ ಯಾಂತ್ರಿಕ ಚಟದ ರೀತಿಯ ಬರವಣಿಗೆಯನ್ನು ಸಹ ನೀಡಿದ್ದಾರೆ. ಈ ಬಗೆಯ ಇತಿಮಿತಿಗಳನ್ನು ಈ ಕಥೆಗಾರರ ಕಥೆಗಳಲ್ಲಿ ಧಾರಾಳವಾಗಿ ಕಾಣಬಹುದಾಗಿದೆ. ಆಲನಹಳ್ಳಿಯವರು ಅವರ ಕಥನಸಾಹಿತ್ಯಕ್ಕೆ ಯಾವುದೇ ವಸ್ತುವನ್ನು ಆಯ್ದುಕೊಂಡರೂ ತಮ್ಮ ಅದ್ಭುತವಾದ ಭಾಷಾ ನಿರೂಪಣೆಯಿಂದ, ಕಥೆಗಾರಿಕೆಯನ್ನು ಕಟ್ಟುವ ಚಾಕಚಕ್ಯತೆಯಿಂದ ಯಾವುದೆ ಒಂದು ಸಂದರ್ಭವನ್ನು ಕಟ್ಟಿಕೊಡುವಾಗ ಭಾಷೆಯ ಎಲ್ಲ ಕಸುವನ್ನು ಸಾರವನ್ನು ಹೀರಿಕೊಂಡು ವಿಶಿಷ್ಟವಾದ ರೀತಿಯಲ್ಲಿ ತಮ್ಮ ಬರಹಗಳನ್ನು ನೀಡಿರುವುದರಿಂದ ಕನ್ನಡದ ಬರಹಗಾರರಲ್ಲಿ ಗಮನಾರ್ಹವಾದ ಸ್ಥಾನವನ್ನು ಗಳಿಸಿಕೊಂಡಿದ್ದಾರೆ.

ಕನ್ನಡ ಸಾಹಿತ್ಯದ ಶ್ರೇಷ್ಠ ಲೇಖಕರುಗಳಾದ ಆಲನಹಳ್ಳಿ ಹಾಗೂ ತೇಜಸ್ವಿ ಅವರು ಹಲವು ರೀತಿಯ ಸಾಹಿತ್ಯ ಪ್ರಕಾರಗಳಲ್ಲಿ ತಮ್ಮ ಸಾಮಾಜಿಕ, ಸಾಂಸ್ಕೃತಿಕ ಕಾಳಜಿಗಳನ್ನು ಹೊರಹಾಕಿದ್ದಾರೆ. ಹಾಗೆಯೇ ಕಥನಸಾಹಿತ್ಯದಲ್ಲಿ ವಿಶಿಷ್ಟ ರೀತಿಯ ವಸ್ತು, ಭಾಷೆ, ಅಭಿವ್ಯಕ್ತಿಯ ಮೂಲಕ ಸಾಹಿತ್ಯಕ್ಷೇತ್ರದಲ್ಲಿ ತಮ್ಮದೇ ಆದ ಛಾಪುಮೂಡಿಸಿದ್ದಾರೆ. ಪ್ರಸ್ತುತ ಅಧ್ಯಯನಗಳಲ್ಲಿ ಅವುಗಳ ಸಮಗ್ರ ಚಿತ್ರಣ ನೀಡಲಾಗಿದೆ.

ಅಧ್ಯಾಯ - ೭

ಸಮಾರೋಪ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅತ್ಯಂತ ಕ್ರಿಯಾಶೀಲವಾದ ಕಥನಸಾಹಿತ್ಯ ಪ್ರಕಾರಕ್ಕೆ ಮಹತ್ವದ ಸ್ಥಾನವಿದೆ. ವೈಚಾರಿಕತೆ, ವಿಜ್ಞಾನಿಕತೆಗಳ ಭಂಡಾರವಾಗಿರುವ ಕಥನ ಪ್ರಕಾರವು ಹಲವು ಸ್ಥಿತ್ಯಂತರಗಳಿಗೆ ಒಳಗಾಗುತ್ತಾ ಇಂದಿಗೂ ತನ್ನ ಜೀವಂತ ನೆಲೆಯನ್ನು ಭದ್ರಪಡಿಸಿಕೊಂಡಿದೆ. ಹೊಸ ಹುರುಪಿನಿಂದ ಕಾಲ, ಸಂವೇದನೆಗಳಿಗೆ ಹೊರಳುತ್ತಾ ವಿಭಿನ್ನ ನೆಲಗಟ್ಟಿನಲ್ಲಿ ಸಾಗಿರುವ ಕಥನ ಪ್ರಕಾರವು ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯಸಾಹಿತ್ಯ ಹೀಗೆ ವಿಶ್ವವ್ಯಾಪಿ ಚಿಂತನೆಯತ್ತ ಕಣ್ಣರಳಿಸಿ ಸಾಗುತ್ತಿದೆ. ಇಪ್ಪತ್ತನೆಯ ಶತಮಾನದವರೆಗೆ ಪಾಶ್ಚಾತ್ಯ ಶಿಕ್ಷಣ, ಪಾಶ್ಚಾತ್ಯ ಲೇಖಕರ ಚಿಂತಕರ ಪ್ರಭಾವದೊಂದಿಗೆ ದೇಸೀಯತೆಯನ್ನು ಮೈಗೂಡಿಸಿಕೊಂಡು ರೂಪುಗೊಂಡ ಕಥನಸಾಹಿತ್ಯ ಪ್ರಕಾರವು ನವೋದಯ ಕಾಲಘಟ್ಟದಲ್ಲಿ ಸ್ಪಷ್ಟ ನೆಲೆ ಕಂಡುಕೊಂಡಿತು. ಆನಂದಕಂದ, ಜಡಭರತ, ಕುವೆಂಪು, ಶಿವರಾಮಕಾರಂತ, ವಿ.ಕೃ.ಗೋಕಾಕ್ ಮುಂತಾದ ಲೇಖಕರು ಪ್ರಕೃತಿವರ್ಣನೆ, ದೈವೀಕತೆ, ರಾಷ್ಟ್ರೀಯತೆ, ಇತಿಹಾಸ, ಗ್ರಾಮೀಣ ಸಮಾಜದ ವಿಘಟನೆ, ಸ್ತ್ರೀ ಸ್ಥಾನಮಾನ, ಪ್ರಾದೇಶಿಕ ಹಿರಿಮೆ ಮುಂತಾದ ವಸ್ತುಗಳನ್ನಿರಿಸಿಕೊಂಡು ವಸ್ತು ವೈವಿಧ್ಯತೆಗೆ ಕಥನಗಳನ್ನು ರಚಿಸಿದರು. ಪ್ರಗತಿಶೀಲ ಕಾಲಘಟ್ಟವು ಸಮಾಜವಾದ, ಮಾರ್ಕ್ಸ್‌ವಾದ ಚಿಂತನೆಗಳಿಂದ ಪ್ರೇರಣೆ ಪಡೆದು ಅ.ನ.ಕೃ., ತ.ರಾ.ಸು., ಬಸವರಾಜಕಟ್ಟೀಮನಿ, ನಿರಂಜನ ಮುಂತಾದವರು ಸಾಮಾಜಿಕ ಆಷಾಡಭೂತಿತನವನ್ನು ಬಯಲು ಮಾಡಿದರು.

ಪಾಶ್ಚಾತ್ಯಶಿಕ್ಷಣ, ಸ್ವಾತಂತ್ರ್ಯೋತ್ತರ ಭಾರತದ ಸಾಮಾಜಿಕ, ಆರ್ಥಿಕ, ರಾಜಕೀಯ ಬದಲಾವಣೆಗಳು ಸಾಹಿತ್ಯಿಕ ಸಮುದಾಯದ ಮೇಲೆ ಪ್ರಭಾವ ಬೀರಿದವು. ಪಾಶ್ಚಾತ್ಯ ಸಾಹಿತ್ಯದ ಗ್ರಹಿಕೆಯಿಂದಾಗಿ ವ್ಯಕ್ತಿಕೇಂದ್ರಿತ ನೆಲೆಯತ್ತ ನವ್ಯ ಸಾಹಿತ್ಯವು ಹೊರಳಿತು. ಕಾವ್ಯ ಪ್ರಕಾರದಲ್ಲಿ ಮೊದಲು ನವ್ಯ ಕಾಣಿಸಿಕೊಂಡರೂ ನವ್ಯದ ಸ್ಪಷ್ಟ ಅಭಿವ್ಯಕ್ತಿ, ಕಥೆ ಮತ್ತು ಕಾದಂಬರಿ ಪ್ರಕಾರಗಳ ಮೂಲಕ ಕಾಣಿಸಿಕೊಂಡಿತು. ಶಾಂತಿನಾಥದೇಸಾಯಿ, ಪಿ.ಲಂಕೇಶ್, ಯು.ಆರ್. ಅನಂತಮೂರ್ತಿ, ಯಶವಂತಚಿತ್ತಾಲ, ಕೆ.ಪಿ.ಪೂರ್ಣಚಂದ್ರತೇಜಸ್ವಿ, ಶ್ರೀಕೃಷ್ಣ ಆಲನಹಳ್ಳಿ ಮುಂತಾದವರು ನವ್ಯ ಕಥನ ಪ್ರಕಾರವನ್ನು ಕಟ್ಟಿ ಬೆಳೆಸಿದರು. ವ್ಯಕ್ತಿಕೇಂದ್ರಿತ ದೃಷ್ಟಿಯಿಂದ ಸಮಷ್ಟಿಯ ಸಾಮಾಜಿಕ ಕಾಳಜಿಗಳನ್ನು ಸಾಹಿತ್ಯ ಅಭಿವ್ಯಕ್ತಿಯನ್ನು ರೂಢಿಸಿಕೊಂಡರು ಗಾಂಧೀಜಿ, ಅಂಬೇಡ್ಕರ್, ರಾಮಮನೋಹರಲೋಹಿಯಾ, ಜಯಪ್ರಕಾಶ ನಾರಾಯಣ ಮುಂತಾದವರ ತತ್ವ ಸಿದ್ಧಾಂತಗಳು, ಜಾತಿವಿನಾಶ ಹೋರಾಟ, ಬೂಸಾ ಚಳುವಳಿ, ಭೂಸುಧಾರಣೆಗಳು ಮುಂತಾದ

ಚಳುವಳಿ, ಸಂಘಟನೆಗಳು ನವ್ಯೋತ್ತರ ದಲಿತ ಮತ್ತು ಬಂಡಾಯ ಸಾಹಿತ್ಯ ರಚನೆಗೆ ಪ್ರೇರಕವಾದವು. ತೇಜಸ್ವಿ ಅವರ ಹೊಸ ದಿಗಂತದೆಡೆಗೆ ಲೇಖನ ನವ್ಯತೆ ತೊರೆಯಬೇಕಾದ ಅನಿವಾರ್ಯತೆಯನ್ನು ಸಾರಿತು. ನವ್ಯ ಹಾಗೂ ನವ್ಯೋತ್ತರ ಕಾಲಘಟ್ಟದಲ್ಲಿ ಸಾಹಿತ್ಯ ರಚಿಸಿದ ಆಲನಹಳ್ಳಿ ಹಾಗೂ ತೇಜಸ್ವಿ ಅವರು ವಿಭಿನ್ನವಾದ ಪ್ರಾದೇಶಿಕ ಹಾಗೂ ಸಾಂಸ್ಕೃತಿಕ ಹಿನ್ನಲೆ ಹೊಂದಿದವರು. ಆದಾಗ್ಯೂ ಇವರಿಬ್ಬರ ಸಾಹಿತ್ಯದಲ್ಲಿ ಸಾಮಾಜಿಕ ಕಾಳಜಿ, ಜೀವನ ಪ್ರೀತಿಯ ಧೋರಣೆಗಳು ಏಕೀಭವಿಸಿವೆ. ಇವರುಗಳ ಕಥನಸಾಹಿತ್ಯದಲ್ಲಿ ಮಾನವೀಯ ಅಂತಃಕರಣ ಅನುಸಂದಾನಗೊಂಡಿದೆ. ವಿಶಿಷ್ಟವಾದ ವಸ್ತು, ಭಾಷೆ ಅಭಿವ್ಯಕ್ತಿಯಿಂದಾಗಿ ಕನ್ನಡದ ಅನನ್ಯ ಲೇಖಕರುಗಳಾಗಿ ಆಲನಹಳ್ಳಿ ಹಾಗೂ ತೇಜಸ್ವಿ ಕಾಣಸಿಗುತ್ತಾರೆ. ಈ ಇಬ್ಬರೂ ಲೇಖಕರ ಕಥನಸಾಹಿತ್ಯವನ್ನು ಮುಖ್ಯವಾಗಿಸಿಕೊಂಡು ಸಮಾನ ಹಾಗೂ ವೈರುಧ್ಯ ಅಂಶಗಳನ್ನು ಪ್ರಸ್ತುತ ಮಹಾಪ್ರಬಂಧದಲ್ಲಿ ಅಧ್ಯಯನ ನಡೆಸಲಾಗಿದೆ.

ಆಲನಹಳ್ಳಿಯವರು ಕನ್ನಡ ಸಾಹಿತ್ಯಕ್ಕೆ ಭಾಷೆ ಬಗೆಗೆ ಹೊಸ ನಾವೀನ್ಯತೆಯನ್ನು, ಹೊಸ ಮೊನಚನ್ನು ದೊರಕಿಸಿಕೊಟ್ಟ ಲೇಖಕ. ಕಥನಸಾಹಿತ್ಯದ ಮೂಲಕ ತಮ್ಮ ಪ್ರತಿಭೆಯನ್ನು ಮೆರೆದವರು. ನವಲವತ್ತ ನಾಲ್ಕನೆಯ ವಯಸ್ಸಿಗೆ ಕಾಡಿನ ಕೂಗಿಗೆ ಓಗೊಟ್ಟರು. ಕೃಷ್ಣರ ಈ ವಯಸ್ಸು ಸಾವಿನ ವಯಸ್ಸಲ್ಲ. ಚಿಕ್ಕವಯಸ್ಸಿನಲ್ಲಿಯೇ ತಮ್ಮ ಚಿಂತನೆಗಳಿಗೆಲ್ಲ ಒಂದು ಸ್ವರೂಪವನ್ನು ಕೊಟ್ಟು ಕೃತಿಗಳಾಗಿ ಹೊರಬಂದಾಗ ಕನ್ನಡ ಸಾಹಿತ್ಯವೇ ರೋಮಾಂಚನದಿಂದ ಪುಳಕಗೊಳ್ಳುವಂತೆ ಮಾಡಿದರು. ಅಷ್ಟೇನೂ ಮಾಗದ ವಯಸ್ಸನ್ನು ಕಾಣದ ಇವರಲ್ಲಿ ಅತಿಯಾದ ಆತ್ಮವಿಶ್ವಾಸ ಹಾಗೂ ಕ್ರಮಬದ್ಧವಲ್ಲದ ಮಹತ್ವಾಕಾಂಕ್ಷೆಯ ಆರ್ಭಟಗಳೆರಡೂ ಸೇರಿ ಆಲನಹಳ್ಳಿಯವರು ತೀರಿಕೊಳ್ಳುವ ಮೊದಲೇ ಅವರಲ್ಲಿದ್ದ ಲೇಖಕರು ತನ್ನ ಅಳಿವನ್ನು ಕಂಡುಕೊಂಡನೇ ಎಂಬ ಸಂದೇಶ ಕಾಡುತ್ತದೆ. ಕೃಷ್ಣರವರ ವೈಯಕ್ತಿಕ ಬದುಕನ್ನು ತೀರ ಹತ್ತಿರದಿಂದ ನೋಡಿದಾಗ ಈ ಮಾತುಗಳಿಗೆ ಯಾವುದೇ ಉತ್ಪ್ರೇಕ್ಷೆ ಇಲ್ಲ. ಕೆಲವರು ತಮ್ಮ ಸಾಹಿತ್ಯ ಕೃತಿಯನ್ನು ನಲವತ್ತನೇ ವಯಸ್ಸಿನ ನಂತರ ಆರಂಭಿಸುತ್ತಾರೆ. ಆಲನಹಳ್ಳಿ ಈ ವಯಸ್ಸಿಗಾಗಲೇ ಸಾಹಿತ್ಯಕ ಸಂದರ್ಭದ ಉತ್ತುಂಗದಲ್ಲಿದ್ದರು. ಕನ್ನಡ ಸಾಹಿತ್ಯ ಅವರಿಂದ ಮತ್ತಷ್ಟು ನಿರೀಕ್ಷಿಸುತ್ತಿದ್ದ ಕಾಲ ವಯಸ್ಸಿನಲ್ಲಿ ಮಾಗಿದ ಪ್ರಬುದ್ಧತೆಯನ್ನು ಪಡೆಯುವ ಮುನ್ನವೇ ತೀರಿಕೊಂಡರು. ಬಾಲ್ಯ ಮತ್ತು ಯೌವ್ವನ ಘಟ್ಟಗಳನ್ನು ಮಾತ್ರ ಕಂಡ ಆಲನಹಳ್ಳಿಯವರು ಮನುಷ್ಯನ ಅಂತರಂಗ, ಬಹಿರಂಗದ ಚಹರೆಗಳನ್ನು ತೋರಿಸುತ್ತಾರೆ. ಈ ಚಹರೆಗಳಿಗೆ ಅವನ ತುಳುಕುಗಳು, ವೇಷಗಳು, ಬದುಕಿನ ಅಶಿಸ್ತು ಕಾಲದ ಸ್ಥಿತ್ಯಂತರಗಳಿಂದ ಬದಲಾಗುತ್ತಿರುವ ಅವನ ನೈತಿಕ ತುಡಿತಗಳು, ಆತ್ಮ ಶೋಧನೆಯ ಪ್ರಾಮಾಣಿಕತೆಯನ್ನು ಕಥೆ, ಕಾದಂಬರಿಗಳಿಗೆ ಕಟ್ಟಿಕೊಡುವಲ್ಲಿ ಯಶಸ್ವಿಯಾದರು.

ಕನ್ನಡದ ಮೇರು ಪ್ರತಿಭೆ ಕುವೆಂಪುರವರ ಪುತ್ರರಾಗಿ ಸಾಹಿತ್ಯ ರಚಿಸಿದ ತೇಜಸ್ವಿಯವರು ಕಥನಸಾಹಿತ್ಯವನ್ನು ರಚಿಸಿರುವುದು ತುಂಬಾ ವಿಶಿಷ್ಟ ಬಗೆಯದು. ನಗರದ ಜಂಜಾಟಗಳಿಂದ ವಿಮುಖರಾಗಿ ಮಲೆನಾಡಿನ ದಟ್ಟ ಅನುಭವಗಳನ್ನು ಅಭಿವ್ಯಕ್ತಿಸುವ ತೇಜಸ್ವಿ ಅವರು ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಿಂತಕರಾಗಿದ್ದಾರೆ. ಪರಿಸರದ ಸಂಕೀರ್ಣತೆ, ನಿಗೂಢತೆ, ಕುತೂಹಲಗಳಿಂದಾಗಿ ತೇಜಸ್ವಿ ಅವರು ಸ್ಫೂರ್ತಿಯ ನೆಲೆಯಾದವರು. ಪರಿಸರ ಹೋರಾಟ, ಕೃಷಿ, ಛಾಯಾಗ್ರಹಣ, ಮೀನುಶಿಕಾರಿ, ಕ್ಯಾಮರಾ, ತಂತ್ರಜ್ಞತೆ, ಗಣಕಜ್ಞಾನ, ಸಂಗೀತ, ಪಕ್ಷಿವೀಕ್ಷಣೆ, ಬಣ್ಣಕುಂಚ ಮುಂತಾದ ಹಲವು ಕ್ಷೇತ್ರಗಳಿಗೆ ತಮ್ಮನ್ನು ತೊಡಗಿಸಿಕೊಂಡವರು ಸಾಹಿತ್ಯದಲ್ಲಿ ಕಾವ್ಯ, ಸಣ್ಣಕಥೆ, ಕಾದಂಬರಿ, ಪ್ರವಾಸಸಾಹಿತ್ಯ, ಪರಿಸರ ವಿಜ್ಞಾನ, ಅನುವಾದ ಮುಂತಾದ ನಾನಾ ಪ್ರಕಾರಗಳಿಗೆ ತಮ್ಮ ಚಿಂತನೆಗಳಿಂದ ವಿಶಿಷ್ಟ ಸಾಧನೆ ಮಾಡಿದ ಅಪರೂಪದ ಬರಹಗಾರರು. ಸಾಮಾನ್ಯ ಮನುಷ್ಯರ ಜೀವನಕ್ರಮದ ವಸ್ತುನಿಷ್ಠ ಗ್ರಹಿಕೆ ತೇಜಸ್ವಿ ಅವರ ಬರಹಗಳ ಕಾಳಜಿಗಳಾಗಿವೆ. ಪರಿಸರ ಪ್ರೀತಿ, ಮಲೆನಾಡಿನ ಗ್ರಾಮೀಣ ಸೊಗಡು ಆಧುನಿಕತೆಯ ದುಷ್ಪರಿಣಾಮಗಳು, ನಿಗೂಢತೆ, ಕುತೂಹಲ, ವೈಜ್ಞಾನಿಕ ಚಿಂತನೆ, ವರ್ಗ, ವರ್ಣ ಸಂಘರ್ಷ ಕೀಳು ರಾಜಕೀಯ, ಆಧುನಿಕತೆಯ ದುರ್ಬಳಕೆ, ಮಾನಸಿಕ ವಿಘಟನೆಗಳು ಪರಿಸರ ಹಾಗೂ ವ್ಯಕ್ತಿ ಕೇಂದ್ರಿತ ಸಮಸ್ಯೆ ಮುಂತಾದ ಸಾಮಾಜಿಕ ಸಮಸ್ಯೆಗಳು ಅವರ ಕಥನಸಾಹಿತ್ಯದ ಕೇಂದ್ರವಸ್ತುಗಳಾಗಿವೆ.

ಇನ್ನು ಈ ಇಬ್ಬರು ಲೇಖಕರ ವಿಶಿಷ್ಟತೆಯನ್ನು ನೋಡಲೇಬೇಕು. ನವ್ಯಸಾಹಿತ್ಯ ಎರಡನೇ ತಲೆಮಾರಿನ ಅತ್ಯಂತ ಪ್ರತಿಭಾನ್ವಿತ ಲೇಖಕರಲ್ಲಿ ಆಲನಹಳ್ಳಿ ಹಾಗೂ ತೇಜಸ್ವಿಯವರು ಪ್ರಮುಖರು. ಇವರ ಸಾಹಿತ್ಯ ಸೃಷ್ಟಿಯಲ್ಲಿ ಇವರುಗಳು ಹುಟ್ಟು ಬೆಳೆದ ಸಾಮಾಜಿಕ ಪರಿಸರ ಮತ್ತು ಸಾಹಿತ್ಯಕ ಸಂದರ್ಭದ ದಟ್ಟವಾದ ಪ್ರಭಾವವನ್ನು ಕಾಣುತ್ತೇವೆ. ಇಬ್ಬರೂ ಲೇಖಕರು ಪ್ರತಿಭಾವಂತರೂ ಹಾಗೂ ಸೂಕ್ಷ್ಮ ಸಂವೇದನಾಶೀಲ ವ್ಯಕ್ತಿತ್ವದವರು ಆಗಿದ್ದರು. ಸದಾ ಮಾನವೀಯತೆಯ ಕಡೆಗೆ ತುಡಿಯುತ್ತಿದ್ದ ಇವರು ದಟ್ಟವಾದ ಜೀವನ ಪ್ರೀತಿಯುಳ್ಳ ಲವಲವಿಕೆಯಿಂದ ಪುಟಿಯುವ ಲೇಖಕರುಗಳಾಗಿದ್ದರು. ತೀವ್ರಾಸಕ್ತಿಯಿಂದ ಸಾಹಿತ್ಯ ಸೃಷ್ಟಿಯೆಡೆಗೆ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದ ಆಲನಹಳ್ಳಿ ಹಾಗೂ ತೇಜಸ್ವಿಯವರು ಕನ್ನಡದಲ್ಲಿ ವಿಶಿಷ್ಟ ಪ್ರತಿಭೆಗಳಾಗಿದ್ದಾರೆ. ವಾಸ್ತವವಾಗಿ ಈ ಇಬ್ಬರು ಲೇಖಕರು ನವ್ಯ ಹಾಗೂ ದಲಿತ-ಬಂಡಾಯ ಸಾಹಿತ್ಯದ ಪಂಥಗಳು ಪ್ರಬಲವಾಗಿದ್ದ ಕಾಲದಲ್ಲಿ ಬರೆಯ ತೊಡಗಿದವರು. ಆದರೆ ಯಾವುದೇ ಒಂದು ಪಂಥ ಅಥವಾ ಸಿದ್ಧಾಂತಕ್ಕೆ ಅಂಟಿಕೊಳ್ಳದೇ ಸಾಹಿತ್ಯವನ್ನು ಸೃಷ್ಟಿಸಿದವರು. ದಟ್ಟವಾದ ಗ್ರಾಮೀಣ ಬದುಕಿನ ಅನುಭವವನ್ನು ಹೊಂದಿದ್ದ ಇವರು ಇಡೀ

ಕನ್ನಡ ಸಾಹಿತ್ಯದಲ್ಲೇ ಅತ್ಯಂತ ವಿಶಿಷ್ಟವಾದ ಹೆಸರನ್ನು ಮಾಡಬೇಕೆಂಬ ಮಹತ್ವಾಕಾಂಕ್ಷೆಯಿಂದ ಎಲ್ಲಾ ಪಂಥಗಳ ಶಕ್ತ ಬರಹಗಾರರನ್ನು ಆಳವಾಗಿ ಅಧ್ಯಯನ ಮಾಡಿ ಜೀರ್ಣಿಸಿಕೊಂಡಿದ್ದವರು. ಯಾವುದೇ ಲೇಖಕನಿಗೆ ಸಾಹಿತ್ಯ ಸೃಷ್ಟಿಸಲು ಎರಡು ಘಟ್ಟಗಳು ಮುಖ್ಯವಾಗುತ್ತವೆ. ಒಂದು ಲೇಖಕನ ಬಾಲ್ಯದಲ್ಲಿ ಕಂಡುಂಡ ಸಾಕ್ಷೀಪ್ರಜ್ಞೆಯ ಅನುಭವಗಳು ಮತ್ತು ಇನ್ನೊಂದು ಲೇಖಕ ಪ್ರಬುದ್ಧನಾದ ಮೇಲೆ ಬದುಕನ್ನು ಅರ್ಥೈಸುವುದು ಹೀಗೆ ಬಾಲ್ಯದ ಬಿಡುಗಣ್ಣಿನ ಅಸಲೀ ಅನುಭವ ಜಗತ್ತು ಮತ್ತು ಯೌವ್ವನದ ಉತ್ಕರ್ಷಸ್ಥಿತಿ ಇವೆರಡನ್ನು ಆಲನಹಳ್ಳಿ ಹಾಗೂ ತೇಜಸ್ವಿಯವರು ತಮ್ಮ ಸಾಹಿತ್ಯದಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಇವರ ಸಾಹಿತ್ಯದಲ್ಲಿ ಪರಿಸರದ ತೀವ್ರತೆ, ಕಾಮದ ಸೆಳೆತ ಹಾಗೂ ಹೊಸ ಬದುಕಿನ ಆಕರ್ಷಣೆಯಿಂದ ಉಂಟಾಗುವ ಸಂಘರ್ಷ, ಆನಂದ ಮುಂತಾದವುಗಳೆಲ್ಲವೂ ಸೂಕ್ಷ್ಮವಾಗಿ ದಾಖಲಾಗಿವೆ. ಇವುಗಳೆಲ್ಲವನ್ನು ಚಿತ್ರಿಸುವಾಗ ಅತ್ಯಂತ ಸಮರ್ಥವಾಗಿ ಚಿತ್ರಿಸಿದ್ದಾರೆ. ಇವುಗಳೆಲ್ಲವನ್ನು ಮೀರಿ ಮಾನವೀಯವಾದ ಬದುಕಿಗೆ ತುಡಿಯುವಂತಹ ಆಶಯವಿರುವುದು ಮಾತ್ರ ಅತ್ಯಂತ ಮಹತ್ವವೆನಿಸುತ್ತದೆ. ಬದುಕಿನ ಕಟು ವಾಸ್ತವಕ್ಕೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರಕ್ಕೆ ಈ ಲೇಖಕರು ನೀಡಿದ ಅನನ್ಯ ಕೊಡುಗೆಯಾಗಿ ಹರಳುಗೊಂಡಿರುವ ಈ ಸಾಂಸ್ಕೃತಿಕ ಚಿಂತನೆಗಳನ್ನು ಪ್ರಸ್ತುತ ಮಹಾ ಪ್ರಬಂಧದ ಪ್ರಧಾನ ಶೀರ್ಷಿಕೆಯಾದ "ಆಲನಹಳ್ಳಿ ಹಾಗೂ ತೇಜಸ್ವಿ ಅವರ ಕಥನಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷದ ಸ್ವರೂಪ" ಎಂಬ ವಿಷಯದ ಹಿನ್ನಲೆಯಲ್ಲಿ ಏಳು ಅಧ್ಯಾಯಗಳಾಗಿ ವಿಂಗಡಿಸಿಕೊಂಡು ವಿಶ್ಲೇಷಣಾತ್ಮಕ ಹಾಗೂ ತೌಲನಿಕ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಅಧ್ಯಯನದ ವಿಧಾನವನ್ನು ಹಾಗೂ ಅಧ್ಯಯನದ ವಿಂಗಡಣೆಯನ್ನು ವಿವರಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಇದುವರೆಗೆ ನಡೆದಿರುವ ಅಧ್ಯಯನಗಳ ತಾತ್ವಿಕ ಸಮೀಕ್ಷೆಯನ್ನು ಆಳನಹಳ್ಳಿ ಹಾಗೂ ತೇಜಸ್ವಿಯವರನ್ನು ಕುರಿತು ಬಂದಿರುವ ತಾತ್ವಿಕ ಆಯಾಮಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಕನ್ನಡ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷದ ಅವಲೋಕನವನ್ನು ಸ್ಥೂಲವಾಗಿ ವಿಶ್ಲೇಷಿಸಿ ವಿವರವಾಗಿ ನಿರ್ವಹಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಆಲನಹಳ್ಳಿಯವರ ಕಥನಸಾಹಿತ್ಯದಲ್ಲಿನ ತಾತ್ವಿಕತೆಯನ್ನು ತಿಳಿಸಲಾಗಿದೆ. ಮೂರು ಕಾದಂಬರಿಗಳು ಹದಿನೇಳು ಕಥೆಗಳಾಗಿ ವ್ಯಕ್ತವಾಗಿರುವ ಮುಖ್ಯ ಗ್ರಹಿಕೆಗಳು ಆಧುನಿಕತೆಯ ಪ್ರಭಾವ ಬಾಲ್ಯದ ತಳಮಳ ದಿಗ್ಭ್ರಮೆ, ಕೌತುಕಗಳು ಗ್ರಾಮಭಾರತದ

ಮುಖ್ಯ ರೂಪಾಂತರಗಳು ಗಂಡು-ಹೆಣ್ಣಿನ ಸಂಬಂಧಗಳು, ಕುಟುಂಬ ಮತ್ತು ವಿಷಮದಾಂಪತ್ಯ, ಜಾತಿ ಮತ್ತು ಸಮಾಜಗಳ ವಾಸ್ತವಿಕ ನೆಲೆಯಿಂದಲೇ ಕಥನಸಾಹಿತ್ಯ ನಿರೂಪಿತವಾಗಿದೆ. ನಗರೀಕರಣದ ಪ್ರಭಾವದಿಂದ ಮನುಷ್ಯನು ಅನುಭವಿಸುವ ಅನಾಥಪ್ರಜ್ಞೆ, ಪಾಪಪ್ರಜ್ಞೆ, ಮತ್ತು ದ್ವಂದ್ವ ಹಾಗೂ ಪಲಾಯನವಾದಿ ನೀತಿಗಳು ಆಲನಹಳ್ಳಿಯವರ ಬಹುತೇಕ ಬರಹದ ತಿರುಳಾಗಿದೆ. ಈ ರೀತಿಯಾಗಿ ಕಾಣಿಸಿಕೊಂಡಿರುವ ಛಿದ್ರತೆಯನ್ನು ಸಾಮಾಜಿಕ ಮೌಲ್ಯಗಳ ಬಗೆಗಿನ ತಿರಸ್ಕಾರ ಭಾವ ಹಾಗೂ ಎಲ್ಲ ಒತ್ತಡಗಳನ್ನು ತನ್ನ ಮೇಲೆಯೇ ಹೇರಿಕೊಂಡು ದುರ್ಬಲವಾದ ಮನಸ್ಸು ನಾಯಕಿಯರ ಪಲ್ಲಟಗೊಳ್ಳುತ್ತಿರುವ ಮನಸ್ಥಿತಿಗಳಿಗೆ ಕಾರಣ ಆಧುನಿಕತೆಯ ಪ್ರಭಾವವೆಂದು ಇಲ್ಲಿ ಗುರುತಿಸಲಾಗಿದೆ. ಕಾಮದ ಪರಿಕಲ್ಪನೆಯಿಂದಲೇ ಸಮಾಜದ ಮನುಷ್ಯ ಸ್ವಭಾವದ ಮೂಲ ಪ್ರವೃತ್ತಿಗಳ ಮಾದರಿಗಳನ್ನು ಕಟ್ಟಿಕೊಡುವ ನೆಲೆಗಟ್ಟಿನಲ್ಲಿ ಸಮಾಜಮುಖೀ ಚಿಂತನೆಗಳಿಂದಾಗಿ ತುಡಿಯುವ ಎಚ್ಚರದ ಪ್ರಶ್ನೆ ಮನುಷ್ಯತ್ವದ ನೆಲೆಗಟ್ಟಿನಲ್ಲಿ ಆಲನಹಳ್ಳಿಯವರ ಕಥನಸಾಹಿತ್ಯದ ವಿಶ್ಲೇಷಣೆಯ ಹಿನ್ನಲೆಯಲ್ಲಿ ವಿವರಿಸಲಾಗಿದೆ.

ಅಧ್ಯಾಯ ಐದರಲ್ಲಿ ತೇಜಸ್ವಿಯವರ ಕಥನಸಾಹಿತ್ಯದಲ್ಲಿನ ತಾತ್ವಿಕತೆಯನ್ನು ತಿಳಿಸಲಾಗಿದೆ. ತೇಜಸ್ವಿಯವರ ಬಹುತೇಕ ಕಥನಸಾಹಿತ್ಯ ಮೂರನೇ ತಲೆಮಾರಿನ ಸಾಂಸ್ಕೃತಿಕ ಅನಿವಾರ್ಯತೆಯಲ್ಲಿ ಮೂಡಿ ಬಂದಿದೆಯಾದರೂ ಈ ಬರಹದ ಒಡಲಿನಲ್ಲಿರುವ ಎಲ್ಲ ಘಟಕಗಳ ನಿರೂಪಣೆಗೆ ಹಾಗೂ ನಿಗೂಢತೆಯ ಅರಿವನ್ನು ಪ್ರತಿಯೊಂದು ಕೃತಿಯಲ್ಲಿ ಸ್ವತಂತ್ರ ಆಶಯದಿಂದ ಕಡೆಯಲು ಪ್ರಯತ್ನಿಸಿದೆ. ಬದುಕಿನೊಳಗಿನ ಪ್ರಾಕೃತಿಕ ಸ್ಥಿತಿಯ ಸಂಘರ್ಷವನ್ನು ಸ್ಥಳೀಯ ಪ್ರತಿಕ್ರಿಯೆಯೊಳಗೆ ತಿಳಿಸುವ ಪ್ರಯತ್ನವನ್ನು ಮಾಡಿದ್ದಾರೆ. ಅವರ ವ್ಯಕ್ತಿ ವಿಶಿಷ್ಟತೆಯ ನಿರೂಪಣೆ, ಗ್ರಾಮಸಂಸ್ಕೃತಿಯ ಶೋಧ, ಆಧುನಿಕತೆ ಮತ್ತು ಸಂಘರ್ಷ, ಪರಿಸರ ಮತ್ತು ಮಾನವ ಸಮಾಜದ ಅಂತರ್ ಸಂಬಂಧ ಹೀಗೆ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಶ್ರೀ ಸಾಮಾನ್ಯರ ಸಾಂಸ್ಕೃತಿಕ ಗ್ರಹಿಕೆಗಳಲ್ಲಿ ಅದರ ಚಲನಶೀಲ ಪ್ರಕ್ರಿಯೆಯೊಡನೆ ಮುಖಾಮುಖಿಯಾಗಿವೆ. ಇದರ ಶ್ರೇಷ್ಠ ನಿದರ್ಶನಗಳು ಕುವೆಂಪು, ಮಾಸ್ತಿ, ಕಾರಂತರಲ್ಲಿ ವಿಫುಲವಾಗಿ ಕಂಡುಬರುತ್ತದೆ.

ಇವರ ಸಂಕೀರ್ಣ ಆಯಾಮಗಳನ್ನು ನಿರಾಕರಣೆಯ ಸ್ತರದಲ್ಲಿ ಗ್ರಹಿಸಿದ್ದಾರೆ. ಜೀವನಮುಖಿಯಾದ ಹೊಸ ಸಾಹಿತ್ಯವನ್ನು ರೂಪಿಸುವುದರ ಕಡೆಗೆ ತೇಜಸ್ವಿಯವರು ಸಾಗಿರುವುದನ್ನು ಅವರ ಕಥನಸಾಹಿತ್ಯದಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಮನುಷ್ಯನನ್ನು ಒಂದು ತಾತ್ವಿಕ ಅನನ್ಯತೆಯ ಪ್ರತೀಕವಾಗಿಯೂ ನೋಡುವ ಮನೋಧರ್ಮ ತೇಜಸ್ವಿಯವರ ಕಥನಸಾಹಿತ್ಯದ ಮೂಲ ಭಿತ್ತಿಯಾಗಿವೆ. ಪ್ರೇಮ, ವಿವಾಹ, ಸ್ವಾತಂತ್ರ್ಯ, ಕಾಮ, ಸಾಹಿತ್ಯ, ಸೃಷ್ಟಿ, ಸಾವು, ಧರ್ಮ, ದರ್ಶನ, ಸಮಾಜದವ್ಯಕ್ತಿ, ಪರಿಸರ, ತತ್ವ, ಪ್ರಜಾಪ್ರಭುತ್ವ, ಜೀವನ, ಪುರುಷಾರ್ಥ

ಮುಂತಾದವುಗಳ ಬಗ್ಗೆ ತೇಜಸ್ವಿಯವರ ಪರಿಕಲ್ಪನೆಗಳು ಅವರದೇ ಆದ ವ್ಯಕ್ತಿವಿಶಿಷ್ಟವಾದ ಸಿದ್ಧಾಂತಗಳಾಗಿವೆ. ಬದುಕಿನ ಬಗೆಗೆ ತಾತ್ವಿಕ ನೋಟ ಹಾಗೂ ಸಾಮಾಜಿಕ ಅರ್ಥಪೂರ್ಣತೆಯನ್ನು ಆಕೃತಿಯೊಳಗೆ ಅಂತಃಸತ್ವವಾಗಿ ಮೂಡಿಸುವ, ಬೆಸೆಯುವ ಪ್ರವೃತ್ತಿ ಇವರ ಕಥನಸಾಹಿತ್ಯದ ಮುಖ್ಯ ಕೇಂದ್ರ ಕಾಳಜಿ. ಅನುಭವ ಮತ್ತು ಅಭಿವ್ಯಕ್ತಿ ಎರಡಕ್ಕೂ ಸಂಬಂಧಿಸಿದಂತೆ ತೇಜಸ್ವಿಯವರು ತಮ್ಮ ಸಾಹಿತ್ಯದಲ್ಲಿ ಹೊಸ ವ್ಯಾಖ್ಯೆ, ಹೊಸ ಸಾಧ್ಯತೆಗಳನ್ನು ತಮ್ಮ ಸೃಜನಶೀಲ ವ್ಯಕ್ತಿತ್ವದ ಸಂದರ್ಭದಲ್ಲಿಯೇ ಕಂಡುಕೊಂಡಿದ್ದಾರೆ. ಹೀಗೆ ಕಥನದ ಆಶಯದಲ್ಲಿ ವ್ಯಕ್ತಪಡಿಸಿರುವ ತೇಜಸ್ವಿಯವರ ಸಾಂಸ್ಕೃತಿಕ ಅನನ್ಯತೆಯನ್ನು ಸಾಮಾಜಿಕ ನಿಲುವುಗಳ ಹಿನ್ನಲೆಯಲ್ಲಿ ವಿವರಿಸಲಾಗಿದೆ.

ಅಧ್ಯಾಯ ಆರರಲ್ಲಿ ಆಲನಹಳ್ಳಿ ಹಾಗೂ ತೇಜಸ್ವಿ ಅವರ ಕಥನಸಾಹಿತ್ಯದಲ್ಲಿನ ಸಾಂಸ್ಕೃತಿಕ ಸಂಘರ್ಷದ ತೌಲನಿಕ ವಿವೇಚನೆಯನ್ನು ಮಾಡಲಾಗಿದೆ. ಈ ಇಬ್ಬರು ಲೇಖಕರ ವ್ಯಕ್ತಿತ್ವ ಹಾಗೂ ಪರಿಸರದ ಭಿನ್ನತೆಯಲ್ಲಿ ಸ್ಥಾಪಿತಗೊಂಡ ಕಥನಗಳಲ್ಲಿನ ಸಾಂಸ್ಕೃತಿಕ ಸಂಘರ್ಷವನ್ನು ಗುರುತಿಸಲಾಗಿದೆ. ಹಳೆಯ ಹಾಗೂ ಹೊಸ ಜೀವನ ಕ್ರಮಗಳ ಸಂಘರ್ಷ ಇದರಲ್ಲಿ ಗ್ರಾಮ ಸಂಸ್ಕೃತಿಯ ಶೋಧದ ತೌಲನಿಕ ವಿವೇಚನೆಯನ್ನು ಮಾಡಲಾಗಿದೆ. ಈ ಇಬ್ಬರು ಲೇಖಕರ ವ್ಯಕ್ತಿತ್ವ ಹಾಗೂ ಪರಿಸರ ಭಿನ್ನತೆಯಲ್ಲಿ ಸ್ಥಾಪಿತಗೊಂಡ ಕಥನಗಳಲ್ಲಿನ ಸಾಂಸ್ಕೃತಿಕ ಸಂಘರ್ಷವನ್ನು ಗುರುತಿಸಲಾಗಿದೆ. ಹಳೆಯ ಹಾಗೂ ಹೊಸ ಜೀವನಕ್ರಮಗಳ ಸಂಘರ್ಷ ಇದರಲ್ಲಿ ಗ್ರಾಮಸಂಸ್ಕೃತಿಯ ಶೋಧನ ತೌಲನಿಕತೆಯನ್ನು ನೋಡಲಾಗಿದೆ. ಸಾಮಾಜಿಕ ಮೌಲ್ಯಗಳು ಮತ್ತು ವೈಯಕ್ತಿಕ ಮೌಲ್ಯಗಳ ಮುಖಾಮುಖಿ, ನೈತಿಕ ನಿಯಮಗಳನ್ನು ಮೀರಿ ಹೊಸ ನೈತಿಕ ನಿಯಮಗಳನ್ನು ಸೃಷ್ಟಿಸಿಕೊಳ್ಳುವಿಕೆಯ ಮುಖೇನ ಕಥನಸಾಹಿತ್ಯದಲ್ಲಿ ಗಂಡು-ಹೆಣ್ಣುಗಳ ಸಂಬಂಧದ ಶೋಧವನ್ನು ಮಾಡಲಾಗಿದೆ. ಇನ್ನು ಭಾಷೆಯಲ್ಲಿ ಬಳಸಿರುವ ಬಗೆಯಲ್ಲಿ ಅವರು ಬೆಳೆದುಬಂದ ಪರಿಸರ ಆ ಪರಿಸರದಿಂದ ರೂಪಿತವಾದ ಈ ಲೇಖಕರುಗಳ ವ್ಯಕ್ತಿತ್ವವನ್ನು ಮುಗ್ಧತೆ ಮತ್ತು ವೈಚಾರಿಕತೆಯ ದೃಷ್ಟಿಕೋನದಲ್ಲಿ ನೋಡಲಾಗಿದೆ. ಆಲನಹಳ್ಳಿಯವರು ಪ್ರಕೃತಿಯ ಜೊತೆಗೆ ಸಾಮಾಜಿಕ ಸಮಸ್ಯೆಗಳನ್ನು ಕೇಂದ್ರೀಕರಿಸಿದರೆ ತೇಜಸ್ವಿ ಅವರು ಪ್ರಕೃತಿ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಕೇಂದ್ರಿಕರಿಸಿದರೆ ತೇಜಸ್ವಿಯವರು ಪ್ರಕೃತಿ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಸಮವಾಗಿ ತಮ್ಮ ಅನುಭವದ ಅಭಿವ್ಯಕ್ತಿಯ ಪರಿಸರದಲ್ಲಿ ಜೀವನ ಸಾಗಿಸಿದವರು ಅವರ ಬಾಲ್ಯದ ಅನುಭವಗಳೆಲ್ಲಾ ಹಳ್ಳಿ ಹಾಗೂ ಪ್ರಕೃತಿಯೊಂದಿಗೆ ಇರುವ ಮನುಷ್ಯನ ಬದುಕನ್ನು ಬಹುವಾಗಿ ಕಾಡಿದವು. ಹೀಗೆ ಆಲನಹಳ್ಳಿ ಹಾಗೂ ತೇಜಸ್ವಿಯವರ

ಕಥನಸಾಹಿತ್ಯದಲ್ಲಿನ ಸಾಂಸ್ಕೃತಿಕ ಸಂಘರ್ಷದ ತೌಲನಿಕತೆಯ ವಿವೇಚನೆಯನ್ನು ಇಲ್ಲಿನ ಅಧ್ಯಯನದಲ್ಲಿ ಮಾಡಲಾಗಿದೆ.

ಉಳಿದಂತೆ ಆಲನಹಳ್ಳಿ ಹಾಗೂ ತೇಜಸ್ವಿಯವರ ಕೃತಿಗಳನ್ನು ಆಕರ ಗ್ರಂಥಗಳಲ್ಲಿ ಸಂಗ್ರಹ ಸೂಚಿಯನ್ನು ಮಾಡಲಾಗಿದೆ.

ಅಧ್ಯಯನದ ಫಲಿತಗಳು:

'ಆಲನಹಳ್ಳಿ ಹಾಗೂ ತೇಜಸ್ವಿ ಅವರ ಕಥನಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷದ ಸ್ವರೂಪ' ಎಂಬ ವಿಷಯವನ್ನು ಸಂಶೋಧನೆಗೆ ಆಯ್ದುಕೊಂಡಿದ್ದು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡಿರುವ ಫಲಿತಗಳು ಈ ಮುಂದಿನಂತಿವೆ.

೧. ಆಲನಹಳ್ಳಿ ಹಾಗೂ ತೇಜಸ್ವಿ ಕಥಾನಕಗಳನ್ನು ಅನ್ವೇಷಿದಾಗ ಕಥೆ ಹಾಗೂ ಕಾದಂಬರಿಗಳಲ್ಲಿ ಪ್ರಮುಖವಾಗಿ ಚರ್ಚಿತವಾಗುವ ವಸ್ತು, ಭಾಷೆ, ತಂತ್ರ ಮತ್ತು ಸಾಂಸ್ಕೃತಿಕ ಅವಲೋಕನಗಳು ಸಂಘರ್ಷಗಳ ಮೂಲಕ ಉಂಟುಮಾಡಿದ ಬದುಕಿನ ದರ್ಶನ ಹಾಗೂ ಸಾಮಾಜಿಕ ಆಯಾಮಗಳು ವ್ಯಕ್ತವಾಗಿವೆ.

೨. ಆಲನಹಳ್ಳಿ ಹಾಗೂ ತೇಜಸ್ವಿಯವರ ಕಾದಂಬರಿಗಳು, ಕಥೆಗಳು ಕೂಡ ಬಹುಪಾಲು ಮನುಷ್ಯನ ಅಂತರಂಗದ ಕತೆಗಳೇ ಆಗಿವೆ. ಉದಾಹರಣೆಗೆ 'ಕರ್ವಾಲೋ'ದ ಮಂದಣ್ಣ, 'ಪರಸಂಗದ ಗೆಂಡೆತಿಮ್ಮ'ದ ಗೆಂಡೆತಿಮ್ಮ. 'ಕಾಡು'ವಿನ ಕಿಟ್ಟಿ 'ಭುಜಂಗಯ್ಯನ ದಶಾವತಾರ'ದ ಭುಜಂಗಯ್ಯ, 'ಅವನತಿ' ಕಥೆಯ ಸೂರಾಚಾರಿ ಮತ್ತು ಬಾಳಾಚಾರಿ, 'ಪರಿಸರದ ಕಥೆಯ' ಎಂಕ್ಟ ಹೀಗೆ ಎಲ್ಲಾ ಕೇಂದ್ರ ಪಾತ್ರಗಳು ಹಳ್ಳಿಯ ಹಿನ್ನಲೆಯಿಂದ ಬಂದಂಥವುಗಳು ಗ್ರಾಮಗಳೆಂದರೆ ಮುಗ್ಧ, ಏನೂ ಅರಿಯದ, ಉದಾತ್ತ, ಜೀವನದ ಪಕಳೆಗಳೆಂದು ಪರಿಭಾವಿಸಿದ ಕಾಲಕ್ಕೆ ಈ ಲೇಖಕರು ಈ ಭಾವನೆಯನ್ನು ಒಡೆದು ಕಟ್ಟಿರುವುದು ಬಿಂಬಿತವಾಗಿದೆ.

೩. ಸ್ವಕೇಂದ್ರಿತ ನೆಲೆಯಿಂದ ಹೊರಬಂದು, ಬದುಕನ್ನು ತನ್ನ ಕೇಂದ್ರಕ್ಕೆ ಅನ್ವಯಿಸಿ, ತನ್ನ ನೆಲೆಯಿಂದಲೇ ಅರ್ಥಮಾಡಿಕೊಳ್ಳುತ್ತಿದ್ದ ಗ್ರಹಿಕೆಯ ಮಿತಿಯನ್ನು ಕಂಡುಕೊಂಡಿದ್ದು ಮತ್ತು ಇಂತಹ ನೆಲೆಯು ತನ್ನನ್ನು ಎಲ್ಲಿಗೂ ಕರೆದೊಯ್ಯದೆ ಮತ್ತೆ ಮತ್ತೆ ನೋಡಿದ್ದನ್ನು ಅದೇ ಅರ್ಥದಿಂದಲೇ ಗ್ರಹಿಸಿಕೊಳ್ಳುವಂತೆ ಮಾಡುತ್ತದೆ ಎಂಬ ಮಿತಿಯನ್ನು ಗುರುತಿಸಿಕೊಂಡದ್ದು ಮುಖ್ಯವಾಯಿತು.

೪. ಸಾಮಾಜಿಕ ಸಂಸ್ಥೆಗಳ ಮೂಲ ಘಟಕ ಮನುಷ್ಯನೇ ಹೌದು ವ್ಯಕ್ತಿ ಮತ್ತು ಕುಟುಂಬಗಳು ತನ್ನ ಪರಿವಾರವನ್ನು ಸಾಮಾಜಿಕ ಪರಿಸರಕ್ಕೆ ಒಗ್ಗಿಸಿಕೊಂಡಾಗ ಸಾಮುದಾಯಿಕ ಸಹಕಾರಗಳು ಸಾಂಸ್ಕೃತಿಕ ಅನನ್ಯತೆಯ ಹಿನ್ನಲೆಯಲ್ಲಿ ಸಂಘಟಿತಗೊಳ್ಳುತ್ತವೆ.

೫. ವ್ಯಕ್ತಿಯ ಅನುಭವದಿಂದ ಜಗತ್ತನ್ನು ಅರ್ಥಮಾಡಿಕೊಳ್ಳುವ ಸಾಧ್ಯತೆಯು ಪೂರ್ವಗ್ರಹಿಕೆ ದೃಷ್ಟಿಯಿಂದ ಹೇಗೆ ಅಸಾಧ್ಯ ಎಂಬುದನ್ನು ಆಲನಹಳ್ಳಿ ಹಾಗೂ ತೇಜಸ್ವಿಯವರು ಗುರುತಿಸಿಕೊಂಡರು. ಅಂತೆಯೇ ತನ್ನ ಅನುಭದಿಂದ ದೊರಕುವುದು ಮಾತ್ರವೇ ಅರಿವು ಉಳಿದದ್ದು ವ್ಯಕ್ತಿಪ್ರಜ್ಞೆಯ ಆಚೆಗಿದ್ದರೂ ಅವನ ಗ್ರಹಿಕೆಗೆ ಬಾರದ್ದು ಅಪ್ರಸ್ತುತವೆಂಬ ನೆಲೆಯಿಂದ ಹೊರಬಂದು ಜಗತ್ತಿನೆಡೆಗೆ ಕಣ್ತೆರೆದು ನೋಡಿದ್ದು ಮುಖ್ಯವಾಗಿ ಕಾಣಿಸುತ್ತದೆ.

೬. ಪ್ರಸ್ತುತ ಕಥನಸಾಹಿತ್ಯದ ವಸ್ತುವಿನ ಪ್ರಧಾನ ನೆಲೆಯ ಹುಡುಕಾಟದ ಮೂಲಕ ಶೋಧಿಸಿಕೊಂಡ ಫಲಿತಗಳೆಂದರೆ ಚಿಂತನಾಕ್ರಮದಲ್ಲಿ ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಶ್ರೀಕೃಷ್ಣ ಆಲನಹಳ್ಳಿಯವರು ಪರಸ್ಪರ ಒಬ್ಬರನ್ನು ಒಬ್ಬರು ಓದಿಕೊಂಡೇ ಬರೆದ ಸಮಕಾಲೀನರು. ಆದರೆ ಅವರ ಆಯ್ಕೆಯ ವಸ್ತುಗಳು ಮತ್ತು ಚಿಂತನೆಯ ಕ್ರಮಗಳು ಬೇರೆ ಬೇರೆಯೇ ಆಗಿದ್ದವೆಂಬುದು ಆಲನಹಳ್ಳಿ ಹಾಗೂ ತೇಜಸ್ವಿಯವರನ್ನು ವಿಶ್ಲೇಷಿಸಿದಾಗಲೇ ಹೊಳೆಯುತ್ತದೆ. ಯು.ಆರ್.ಅನಂತಮೂರ್ತಿಯವರು ತಾವು ಕಂಡ ಬ್ರಾಹ್ಮಣ ಸಮಾಜದ ಕಟ್ಟುಪಾಡುಗಳ ಚಹರೆಗಳಡಿಯಲ್ಲಿ ಸಾಮಾಜಿಕ ಶೋಷಣೆಗೆ ನಿಂತ ಅಸ್ವಸ್ಥತೆಯ ಅದ್ವಾನಗಳ ವಿರುದ್ಧ ತಾವೇ ಬಂಡೇಳುವ 'ಅವಸ್ಥೆ', 'ಸಂಸ್ಕಾರ', 'ಭಾರತೀಪುರ'ಗಳನ್ನು ಬರೆದರೆ 'ಕರ್ವಾಲೋ' 'ಜಂಗಾರಿಕ್ರಾಸ್', 'ಕಿರಗೂರಿನ ಗಯ್ಯಾಳಿಗಳು' ಕೃತಿಗಳನ್ನು ವಸ್ತುವಾಗಿಸಿಕೊಂಡ ತೇಜಸ್ವಿಯವರು ಕೃಷಿಕ ಸಮಾಜದ ಸಂದಿಗ್ಧತೆಗಳು ಮತ್ತು ಮೌಢ್ಯಗಳನ್ನು ಆಧುನಿಕತೆಗೆ ಹೊಂದಿಕೊಳ್ಳಲಾಗದ ಮನುಷ್ಯನ ಚಡಪಡಿಕೆಗಳನ್ನು ಕಟ್ಟುತ್ತಾರೆ. ಬಲವಿದ್ದೂ ಜಯಿಸಲಾಗದ ವಾಸ್ತವಿಕತೆಯ ತಾಂತ್ರಿಕತೆಯನ್ನು ಕಾಣಿಸುವ ತೇಜಸ್ವಿ ಒಕ್ಕಲುತನದ ಜೀವಿತ ವಾಸ್ತವಗಳನ್ನು ಕಟ್ಟುತ್ತಾರೆ. ಶ್ರೀಕೃಷ್ಣ ಆಲನಹಳ್ಳಿಯವರ 'ಕಾಡು', 'ಪರಸಂಗದಗೆಂಡೆತಿಮ್ಮ', 'ಭುಜಂಗಯ್ಯನ ದಶಾವತಾರ' ಕೃತಿಗಳಲ್ಲಿ ಬಯಲು ಸೀಮೆಯ ಬದುಕಿನ ಚಿತ್ರಣವನ್ನು ಹೇಗೆ ಕಟ್ಟಿದ್ದಾರೆ ಎಂದು ಕಾಣಬಹುದು. ವರ್ತಮಾನವನ್ನು ಕಾಡುತ್ತಿರುವ ವರ್ಗಸಂಘರ್ಷ, ಕಾಮ-ಪ್ರೇಮಗಳ ಮನೋವೈಜ್ಞಾನಿಕ ವಿಶ್ಲೇಷಣೆ ಈ ಹಿನ್ನೆಲೆಯ ಕಥಾನಕಗಳ ತಂತ್ರಗಾರಿಕೆಯು ನೇಯ್ಗೆಗೊಂಡಿರುವುದು ವಿಶಿಷ್ಟತೆಯಾಗಿದೆ.

೭. ಸಮಾಜವನ್ನು ನಿಯಂತ್ರಿಸುವ ಶಕ್ತಿ ಶಿಕ್ಷಣಕ್ಕಿದೆ. ಅಂತಹ ಶಿಕ್ಷಣವನ್ನು ಪಡೆದಾಗ ಮಾತ್ರ ಸಮಾಜದಲ್ಲಿ ಸಮಾನತೆ ಸಾಧಿಸಲು ಸಾಧ್ಯ ಎಂಬುದು ಆಲನಹಳ್ಳಿ ಹಾಗೂ ತೇಜಸ್ವಿಯವರು ಸೃಷ್ಟಿಸಿದ ಆಧುನಿಕ ಚಿಂತನೆಯ ಬಹುಮುಖ್ಯ ಕಾಳಜಿ ಎಂಬುದನ್ನು ಒಪ್ಪಬಹುದು.

೮. ಗಾಂಧೀಜಿ, ಅಂಬೇಡ್ಕರ್, ಲೋಹಿಯಾ, ಬಸವಣ್ಣ ಇವರ ಚಿಂತನೆಗಳು ಆಲನಹಳ್ಳಿ ಹಾಗೂ ತೇಜಸ್ವಿಯವರ ಬರಹಗಳನ್ನು ರೂಪಿಸಿವೆ ಮನುಷ್ಯ ಪ್ರೀತಿಯಿಂದ ಹುಟ್ಟುವ ನೈತಿಕ ನೆಲೆಗಟ್ಟು ಮತ್ತು ಬದುಕಿನ ಆತ್ಮವಿಶ್ವಾಸಗಳು ಹೊಸ ತಿಳುವಳಿಕೆಯೊಂದಿಗೆ ಇಲ್ಲಿ ವಿಸ್ತರಿಸಿಕೊಂಡಿದೆ.

೯. ಪರಂಪರೆಯ ಬಗೆಗಿನ ಉಪೇಕ್ಷೆ, ತಿರಸ್ಕಾರಗಳ ಸ್ಥಾನದಲ್ಲಿ ಕುತೂಹಲ, ಆಸಕ್ತಿ ಬೆಳೆಸಿಕೊಂಡಿದ್ದು ಮುಖ್ಯ ಬೆಳವಣಿಗೆಯಾಯಿತು. ಪರಂಪರೆಗೂ ತನ್ನದೇ ಆದ ಅಸ್ತಿತ್ವವಿದೆ, ವ್ಯಕ್ತಿತ್ವವಿದೆ. ಪರಂಪರೆಗೆ ಹೊರಗಿನವರಾಗಿ ನಿಂತು ನೋಡುವುದಕ್ಕಿಂತ ಒಳಗಿನವನಾಗಿ ನಿಂತು ನೋಡಿದಾಗ ಕಾಣುವ ನೋಟಗಳೇ ಬೇರೆ ಎಂಬುದು ಅರಿವಿಗೆ ಬಂದುದು.

೧೦. ಮನುಷ್ಯ ವ್ಯಕ್ತಿನಿಷ್ಠ ನೆಲೆಯಲ್ಲಿ ಕಾಮ, ಮೋಹ, ಸ್ವಾರ್ಥ, ದೌರ್ಜನ್ಯಗಳನ್ನು ನಿಯಂತ್ರಿಸಿಕೊಂಡರೆ ಸಮಸಮಾಜದ ಜೀವಿತದ ಸಮಷ್ಠಿನೆಲೆಯನ್ನು ಸಾಂಸ್ಕೃತಿಕ ನೆಲೆಗಟ್ಟು ರೂಪುಗೊಳ್ಳುತ್ತದೆ ಎಂಬ ಆಶಯವನ್ನಿಟ್ಟುಕೊಂಡು ಬರೆದ ಆಲನಹಳ್ಳಿ ಹಾಗೂ ತೇಜಸ್ವಿಯವರ ಬರವಣಿಗೆ ಸ್ಪಷ್ಟವಾದ ಮನುಷ್ಯತ್ವದ ನಾಡಿಮಿಡಿತವನ್ನು ತುಡಿಯುವ ಜೀವಪರ ಕಾಳಜಿಯನ್ನು ಬೆಸೆಯುತ್ತದೆ.

೧೧. ಸಮಾಜದ ತನ್ನ ಎಲ್ಲಾ ಕ್ಷೇತ್ರಗಳನ್ನು ಆಧುನೀಕರಣಕ್ಕೆ ಒಗ್ಗಿಸಿಕೊಂಡಾಗ ಹಣ, ಅಧಿಕಾರ, ಜಾತಿ, ಧರ್ಮದಂಥಾ ವಿಚಾರಗಳಲ್ಲಿ ತಾರತಮ್ಯ ಏರ್ಪಡುತ್ತದೆ. ಇದು ಎಲ್ಲಾ ಕಾಲಮಾನಗಳ ಜ್ವಲಂತ ಜೀವಂತ ಸಮಸ್ಯೆಯಾಗಿ ಕಾಡುತ್ತದೆ. ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರಗಳು ಮತ್ತು ಸಂಸ್ಮರಣೆಗಳು ಜೀವವೈವಿಧ್ಯತೆಯ ನೆಲೆಯಲ್ಲಿ ಸಾಹಿತ್ಯ ಸಂವೇದನೆಯ ಸ್ತರದಲ್ಲಿ ವ್ಯಕ್ತವಾಗಿರುವ ನಿಲುವುಗಳು ಕಂಡುಬರುತ್ತವೆ.

೧೨. ಹೊಸತಲೆಮಾರಿನ ಗ್ರಾಮಭಾರತದ ಸಂಕಷ್ಟಗಳಿಗೆ. ನಗರಕೇಂದ್ರಿತ ದುಷ್ಪರಿಣಾಮಗಳಿಗೆ ಆಲನಹಳ್ಳಿ ಹಾಗೂ ತೇಜಸ್ವಿಯವರಲ್ಲಿ ಉತ್ತರಗಳಿವೆ. ಈ ಲೇಖಕರ ಓರಗೆಯವರು ಮತ್ತು ಸಮಕಾಲೀನರ ನಡುವೆ ಎಷ್ಟೇ ಅಭಿಪ್ರಾಯ ಬೇಧಗಳೂ, ಅಸೂಯೆಗಳು ಅಸಹನೆಗಳು ಕಂಡುಬಂದರೂ ಕೂಡ ತರುಣ ತಲೆಮಾರನ್ನು ರೂಪಿಸಿದವರು ಈ ಲೇಖಕರು.

೧೩. ಆಲನಹಳ್ಳಿ ಹಾಗೂ ತೇಜಸ್ವಿ ಅವರು ಕಟ್ಟಿದ ಕಥಾನಕಗಳು ಹೊಸ ತಲೆಮಾರಿನ ಚಿಂತನೆಗೆ ಒಳಸೂಕ್ಷ್ಮಗಳನ್ನು ನೀಡಿವೆ. ಗ್ಲೋಬಲೈಸೇಷನ್ನಿನ ಕಾರ್ಪೋರೇಟ್ ಸಂಸ್ಕೃತಿಗೆ ಪ್ರತಿಯಾಗಿ ಕನ್ನಡದ ದೇಸಿ ಜಗತ್ತನ್ನು ಅರಿಯಬೇಕಾಗಿದೆ ಎಂಬುದನ್ನು ಒತ್ತಿ ಹೇಳುತ್ತವೆ.

೧೪. ಬದುಕಿನ ಅನ್ವೇಷಣೆಯಲ್ಲಿ ಪರಕೀಯತೆಗಿಂತ, ಕ್ರಿಯಾತ್ಮಕವಾಗಿ ಭಾಗಿಯಾಗುವುದರ ಮೂಲಕ ನಿಧಾನವಾಗಿ ಒಂದು ಜೀವನ ಕ್ರಮದೊಳಕ್ಕೆ ಇಳಿದು ಅದನ್ನು ಅರ್ಥಮಾಡಿಕೊಳ್ಳುತ್ತಾ ಹೋದಂತೆ ಅನ್ವೇಷಣೆಯ ಗುರಿಗಿಂತ ಅನ್ವೇಷಣೆಯ ದಾರಿಯೇ ಮುಖ್ಯವೆಂಬ ನಿಲುವಿಗೆ ತೇಜಸ್ವಿಯವರು ಬಂದುದು. ಗುರಿಯ ಬೆನ್ನು ಹತ್ತಿ ನಿರ್ಜೀವವಾಗಿ

ಸಾಗುವ ದಾರಿಗಿಂತ ಅನ್ವೇಷಣೆಯ ಮಾರ್ಗದಲ್ಲಿ ಎದುರಾಗುವ ಸತ್ಯಗಳನ್ನು ಕಣ್ಣು ತೆರೆದು ನೋಡುವ ಶಕ್ತಿ ಬೆಳೆಸಿಕೊಂಡರೆ ಅದು ಗುರಿಗಿಂತಲೂ ಮುಖ್ಯವೆಂಬ ಭಾವನೆ ಬೆಳೆದು ನಿಂತುದು ಆಲನಹಳ್ಳಿ ಹಾಗೂ ತೇಜಸ್ವಿಯವರಲ್ಲಿ ಎಂದು ಹೇಳಬಹುದು.

೧೫. ಹಿಂದೆ ತಾತ್ವಿಕತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಬದುಕನ್ನು ಅರ್ಥೈಸಿಕೊಳ್ಳಲು ಹೊರಡುತ್ತಿದ್ದವರು. ಬದುಕಿಗೆ ಮುಖಾಮುಖಿಯಾಗುವ ತಾತ್ವಿಕತೆಗಳನ್ನು ಆಕ್ಷಣಕ್ಕೆ ಎದುರಾಗುವ ಘಟನೆಗಳಲ್ಲಿ ಕಾಣತೊಡಗಿದರು. ಆಗ ಘಟನೆಗಳಿಗೆ ಇನ್ನೊಂದು ಆಯಾಮ, ನೆಲೆ ಇರುವುದನ್ನು ಗುರುತಿಸಿಕೊಳ್ಳುವ ಹಂತಕ್ಕೆ ವ್ಯಕ್ತಿತ್ವ ವಿಕಾಸ ಹೊಂದಿತು. ಹೀಗಾಗಿ ಹಿಂದಿನ ಆಕ್ರೋಶ, ಉದ್ವೇಗಗಳು ಕುತೂಹಲ, ಚಿಂತನೆಗಳಾಗಿ ಬೆಳೆಯುತ್ತಾ ಬಂದವು. ಹೀಗೆ ಬದಲಾದ ದೃಷ್ಟಿಕೋನವು ಹೊಸ ಬದುಕಿನ ಸಾಧ್ಯತೆಗಳನ್ನು ಕಟ್ಟುವ ಕಡೆಗೆ ಸೃಜನಾತ್ಮಕವಾದವು.

೧೬. ಈ ಇಬ್ಬರು ಲೇಖಕರ ಸಾಹಿತ್ಯವನ್ನು ಅವಲೋಕಿಸಿದಾಗ ತೇಜಸ್ವಿ ಅವರ ಕೃತಿಗಳ ರಚನೆಗೆ ಮಲೆನಾಡಿನ ಪ್ರಾಕೃತಿಕ ಜಗತ್ತು ಹಾಗೂ ವಿಜ್ಞಾನ ಇವರಿಗೆ ಪ್ರಭಾವಬೀರಿದವು. ಇವುಗಳ ಪ್ರೇರಣೆಯಿಂದ ಅವರ ಸಾಹಿತ್ಯ ಬರಹ ಸಿದ್ಧಿಗೊಂಡಿತು. ಆಲನಹಳ್ಳಿಯವರಿಗೆ ಬಯಲುಸೀಮೆಯ ದಟ್ಟ ಪ್ರಭಾವ ಹಾಗೂ ಬಾಲ್ಯದ ಅನುಭವಗಳು ಇವರಿಗೆ ಪ್ರಮುಖ ಪ್ರೇರಣೆಯಾಗಿವೆ.

೧೭. ಕೌಟುಂಬಿಕ ವಿಘಟನೆಯು ಮನುಷ್ಯನ ತಪ್ಪು ನಡೆಯಲ್ಲಿ ರೂಪುಗೊಳ್ಳುತ್ತಿರುವುದನ್ನು ಆಲನಹಳ್ಳಿಯವರ ಕಥನಸಾಹಿತ್ಯ ಹೇಳುತ್ತದೆ. 'ಸಂಬಂಧ' ಕಥೆಯಲ್ಲಿ ಜಾತಿ ತನ್ನ ಸಾಂಕ್ರಮಿಕ ಸ್ವರೂಪವನ್ನು ವ್ಯಕ್ತಪಡಿಸುವುದರಿಂದ ಶೂದ್ರನಾಯಕನ ಗ್ರಹಿಕೆಗಳು ಸಾಂಸ್ಕೃತಿಕಗೊಳ್ಳುತ್ತಾ ಬ್ರಾಹ್ಮಣ ಹೆಣ್ಣಿನ ಆಶಯಗಳು ದುರಂತಕ್ಕೆ ತಿರುಗುತ್ತವೆ ಎಂಬುದನ್ನು ಕಥೆ ವಿಷಾದದಲ್ಲಿ ಗಮನಿಸಿದೆ. ಜಾತಿಯ ಅಡ್ಡಗೋಡೆ ಇಲ್ಲದಿದ್ದರೆ ಇವರಿಬ್ಬರೂ ಕೂಡಿ ಬದುಕುವ ಸಾಧ್ಯತೆಯು ಕಥೆಯ ವಿಷಾದದೊಡಲಿನ ಕೇಂದ್ರ ಆಶಯವಾಗಿದೆ. ಇಂತಹ ಸಂದರ್ಭದಲ್ಲೂ ಕಷ್ಟಸುಖಕ್ಕೆ ಸ್ಪಂದಿಸುವುದರಿಂದ ಜಾತಿಯನ್ನು ಮೀರಿದ ತನ್ನ ನೆಲೆಯನ್ನು ಆ ಆಶಯವು ಕಂಡುಕೊಳ್ಳುತ್ತದೆ.

೧೮. ಸಾಂಸ್ಕೃತಿಕವಾಗಿ ಮನುಷ್ಯನ ವ್ಯಾವಹಾರಿಕ ಸಂಬಂಧಗಳ ಸೂಕ್ಷ್ಮಗಳನ್ನು ಅರಿಯುವುದು ಸಾಹಿತ್ಯಕ ಅಧ್ಯಯನದಲ್ಲಿ ಒಂದು ಕುತೂಹಲಕಾರಿ ಪ್ರಕ್ರಿಯೆ. ಮಾನವ ಬದುಕಿನ ಎಷ್ಟು ನಿಗೂಢಗಳು ಇಂತಹ ಸಂಬಂಧಗಳಲ್ಲಿ ಹಾಸುಹೊಕ್ಕಾಗಿರುತ್ತವೆ. ಈ ಬಗೆಯ ವಿಸ್ಮಯಕರ ಸಂಗತಿಗಳನ್ನು ತೇಜಸ್ವಿ ಹತ್ತಿರದಿಂದ ಆತ್ಮೀಯವಾಗಿ ಗಮನಿಸುತ್ತಾರೆ. 'ಕಿರಗೂರಿನ ಗಯ್ಯಾಳಿಗಳು' ನೀಳ್ಗಥೆಯಲ್ಲಿ ಪುರುಷನ ಶೋಷಣೆಯನ್ನು ವಿನೂತನ ಶೈಲಿಯಲ್ಲಿ ಮಹಿಳೆ

ವಿರೋಧಿಸುವುದು ಹಾಗೂ ಪುರುಷ ಮಹಿಳೆಯನ್ನು ತಾನು ಶೋಷಿಸುತ್ತಿದ್ದೇನೆ ಎಂಬ ಪ್ರಜ್ಞಾಪೂರ್ವಕವಾದ ಅರಿವಿಲ್ಲದ ಮುಗ್ಧ ಸ್ಥಿತಿ. 'ಸ್ವರೂಪ'ದಲ್ಲಿ ಬರುವ ಬೌದ್ಧಿಕ ಗ್ರಹಿಕೆಯೊಳಗೆ ಜಾತಿಯ ಅಭಿಮಾನ ಇಲ್ಲಿನ ಪಾತ್ರಗಳಾದ ಹೇಮಂತ ಹಾಗೂ ಶ್ರೀನಿವಾಸ. ಇವರಿಬ್ಬರ ಚರ್ಚೆಗಳು ಬಹುತೇಕ ಜಾತಿಕೇಂದ್ರವೇ ಆಗಿವೆ. ಅದೇ ರೀತಿ 'ಚಿದಂಬರರಹಸ್ಯ'ದಲ್ಲಿ ಜಡಗೊಂಡ ವಸ್ತುಸ್ಥಿತಿಗೆ ಸಿನಿಕತನದ ಬಂಡಾಯವಿದ್ದರೆ 'ಕಿರಗೂರಿನ ಗಯ್ಯಾಳಿ'ಗಳಲ್ಲಿ ಬದುಕಿಗೆ ಅರ್ಥಕೊಡುವ ಸಾಂಸ್ಕೃತಿಕ ಬಂಡಾಯವಿದೆ. ಈ ರೀತಿಯಾಗಿ ತೇಜಸ್ವಿಯವರು ಇನ್ನೂ ಹಲವು ಪಾತ್ರಗಳ ಮೂಲಕ ಸಂಘರ್ಷದ ನೆಲೆಗಳನ್ನು ಕಥನಸಾಹಿತ್ಯದ ತಾತ್ವಿಕ ವಿಚಾರಗಳಲ್ಲಿ ಚರ್ಚಿಸಿಸದ್ದಾರೆ.

೧೯. ಇಪ್ಪತ್ತನೆಯ ಶತಮಾನದ ಕೊನೆಯ ದಶಕಗಳ ಕನ್ನಡದ ಬೌದ್ಧಿಕ ಶಿಸ್ತಿನ ಸಾಂಸ್ಕೃತಿಕ ನಡೆಯನ್ನು ವೈಜ್ಞಾನಿಕತೆಯನ್ನು ರೂಪಿಸಿದವರು ಆಲನಹಳ್ಳಿ ಹಾಗೂ ತೇಜಸ್ವಿಯವರು ಎಂಬುದು ಸ್ಪಷ್ಟ. ತಾವು ಮುಟ್ಟಿದ ಎಲ್ಲಾ ಪ್ರಕಾರಗಳಲ್ಲೂ ಶ್ರೇಷ್ಠತೆಯ ಗಳಿಗೆಗಳನ್ನು ಕಂಡು ಹಲವು ತಲೆಮಾರುಗಳನ್ನು ರಚಿಸಿದ ಈ ಇಬ್ಬರು ಲೇಖಕರು ಪ್ರಸ್ತುತವಾಗಿ ಇಂದಿಗೂ ನಿಲ್ಲುತ್ತಾರೆ.

೨೦. ಆಲನಹಳ್ಳಿ ಹಾಗೂ ತೇಜಸ್ವಿ ಅವರ ಕಥನಗಳು ಸಮಾಜ ಜೀವನದ ಸಾಂಸ್ಕೃತಿಕ ಚಿಂತನೆಗಳ ವರ್ತಮಾನದ ತರ್ಕಗಳಿಗೂ ಉತ್ತರಿಸುತ್ತಾ ಸಮಕಾಲೀನ ಸಂದರ್ಭಕ್ಕೆ ತುಡಿಯುವ ಹಿತವನ್ನು ಕಾಯ್ದುಕೊಂಡಿವೆ. ಆದಕಾರಣ ಇವರ ಕಥಾನಕಗಳು ಮನುಷ್ಯನ ಎಲ್ಲಾ ವಿಧದ ಇತಿ–ಮಿತಿಗಳನ್ನು ಶೋಧಿಸಿಕೊಳ್ಳಲು ಸಾಧ್ಯವಾಗಿವೆ ಎಂಬುದು ಪ್ರಬಂಧ ಕಂಡುಕೊಂಡ ಫಲಿತಗಳಲ್ಲಿ ಒಂದಾಗಿದೆ.

ಆಕರ ಗ್ರಂಥಗಳು

೧ **ಶ್ರೀ ಕೃಷ್ಣ ಆಲನಹಳ್ಳಿ**

ಕಾದಂಬರಿಗಳು : 'ಕಾಡು' ನೆಲಮನೆ ಪ್ರಕಾಶನ, ಮೈಸೂರು ೧೯೯೯.
'ಪರಸಂಗದ ಗೆಂಡೆತಿಮ್ಮ', ಐಬಿಎಚ್. ಪ್ರಕಾಶನ, ಬೆಂಗಳೂರು, ೨೦೦೫,
'ಭುಜಂಗಯ್ಯನ ದಶಾವತಾರಗಳು', ಭಾರತೀ ಪ್ರಕಾಶನ, ಸರಸ್ವತಿಪುರಂ, ಮೈಸೂರು, ೨೦೦೯.

ಕಥಾಸಂಕಲನ : ಸಮಗ್ರ ಕಥೆಗಳು, ನೆಲಮನೆ ಪ್ರಕಾಶನ, ಶ್ರೀರಂಗಪಟ್ಟಣ, ೨೦೦೦.

೨ **ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ**

ಕಾದಂಬರಿಗಳು : 'ಸ್ವರೂಪ', ನೆಲಮನೆ ಪ್ರಕಾಶನ, ಮೈಸೂರು, ೧೯೮೧.
'ನಿಗೂಢ ಮನುಷ್ಯರು' ಪುಸ್ತಕ ಪ್ರಕಾಶನ, ಮೈಸೂರು, ೨೦೦೫.
'ಕರ್ವಾಲೋ' ಪುಸ್ತಕ ಪ್ರಕಾಶನ, ಮೈಸೂರು, ೨೦೦೫.
'ಚಿದಂಬರ ರಹಸ್ಯ' ಪುಸ್ತಕ ಪ್ರಕಾಶನ, ಮೈಸೂರು, ೨೦೦೪.
'ಜುಗಾರಿ ಕ್ರಾಸ್' ಪುಸ್ತಕ ಪ್ರಕಾಶನ, ಮೈಸೂರು, ೨೦೦೫.
'ಮಾಯಾಲೋಕ-೧' ಪುಸ್ತಕ ಪ್ರಕಾಶನ, ಮೈಸೂರು,೨೦೧೧
'ಕಾಡು ಮತ್ತು ಕ್ರೌರ್ಯ' ಪುಸ್ತಕ ಪ್ರಕಾಶನ, ಮೈಸೂರು,೨೦೧೩

ಕಥಾಸಂಕಲನ : 'ಹುಲಿಯೂರಿನ ಸರಹದ್ದು' ಪುಸ್ತಕ ಪ್ರಕಾಶನ, ಮೈಸೂರು,೨೦೧೧.
'ಅಬಚೂರಿನ ಪೋಸ್ಟಾಫೀಸ್'ಪುಸ್ತಕ ಪ್ರಕಾಶನ, ಮೈಸೂರು, ೨೦೧೧.
'ಕಿರಗೂರಿನ ಗಯ್ಯಾಳಿಗಳು' ಪುಸ್ತಕ ಪ್ರಕಾಶನ, ಮೈಸೂರು,೨೦೧೧. 'ಪರಸರದ ಕಥೆಗಳು' ಪುಸ್ತಕ ಪ್ರಕಾಶನ, ಮೈಸೂರು,೨೦೧೧.
'ಪಾಕಕ್ರಾಂತಿ ಮತ್ತು ಇತರ ಕಥೆಗಳು' ಪುಸ್ತಕ ಪ್ರಕಾಶನ, ಮೈಸೂರು, ೨೦೧೬.

ಪರಾಮರ್ಶನ ಗ್ರಂಥಗಳು

೧. ಅಮರೇಶ ನುಗಡೋಣಿ : 'ಶ್ರೀ ಕೃಷ್ಣ ಆಲನಹಳ್ಳಿ' ಪ್ರಸಾರಾಂಗ ಹಂಪಿ (೧೯೯೫)

೨. ಆಮೂರ ಜಿ.ಎಸ್ : 'ಕನ್ನಡ ಕಥನಸಾಹಿತ್ಯ : ಸಣ್ಣ ಕಥೆ', ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು (೨೦೧೨)

: 'ಅರ್ಥಲೋಕ' ಸ್ನೇಹ ಪ್ರಕಾಶನ, ಬೆಂಗಳೂರು, (೧೯೮೮).

: 'ಕನ್ನಡ ಕಥನಸಾಹಿತ್ಯ : ಕಾದಂಬರಿ', ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, (೨೦೧೨).

೩. ಆರ್.ಡಿ.ಜಿ. : : 'ತೇಜಸ್ವಿಯನ್ನು ಹುಡುಕುತ್ತಾ' ಸಪ್ನಬುಕ್ ಹೌಸ್, (೨೦೦೫).

೪. ಅಶೋಕ ಟಿ.ಪಿ.: : 'ತೇಜಸ್ವಿ ಕಥನ', ಅಕ್ಷರ ಪ್ರಕಾಶನ ಹೆಗ್ಗೋಡು(೨೦೧೦)

: 'ಪುಸ್ತಕ ಸಮಯ', ಅಕ್ಷರ ಪ್ರಕಾಶನ, ಹೆಗ್ಗೋಡು (೨೦೧೧)

: 'ಪುಸ್ತಕ ಪ್ರೀತಿ', ಅಕ್ಷರ ಪ್ರಕಾಶನ, ಸಾಗರ (೧೯೯೩)

೫. ಕರೀಗೌಡ ಬೀಚನಹಳ್ಳಿ: : 'ತೇಜಸ್ವಿ ಕಥೆಗಳ ಕುರಿತು' ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪ್ರಸಾರಾಂಗ, (೨೦೧೭).

: 'ವ್ಯಷ್ಟಿ ಮತ್ತು ಸಮಷ್ಟಿ', ಅಜಂತ ಪ್ರಕಾಶನ, ಬೆಂಗಳೂರು (೨೦೦೭)

: 'ಶತಮಾನದ ಸಣ್ಣ ಕಥೆಗಳ ಸಮೀಕ್ಷೆ', ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು(೨೦೦೩)

೬. ಕೀರ್ತಿನಾಥ ಕುರ್ತಕೋಟಿ : 'ನೂರುಮರ ನೂರುಸ್ವರ' ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, (೧೯೯೮).

೭. ಕೋದಂಡರಾಮ ಎನ್.ಕೆ: : 'ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ', ಗಾಯತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು (೧೯೯೬)

೮. ಕೃಷ್ಣಮೂರ್ತಿ ಎಂ.ಜಿ : 'ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು', ಅಕ್ಷರ ಪ್ರಕಾಶನ, ಸಾಗರ(೧೯೯೭)

೯. ಗಿರಡ್ಡಿ ಗೋವಿಂದರಾಜ : 'ಸಣ್ಣ ಕಥೆಯ ಹೊಸ ಒಲವುಗಳು', ಸಾಹಿತ್ಯ ಭಂಡಾರ, ಹುಬ್ಬಳ್ಳಿ (೧೯೯೭)

: 'ನವ್ಯ ವಿಮರ್ಶೆ', ಅಕ್ಷರ ಪ್ರಕಾಶನ, ಸಾಗರ (೧೯೭೩)

: 'ಕಾದಂಬರಿ : ವಸ್ತು ಮತ್ತು ತಂತ್ರ', ಸ್ನೇಹ ಪ್ರಕಾಶನ, ಬೆಂಗಳೂರು (೧೯೮೭)

೧೦. ಚಂದ್ರಶೇಖರ ವಿ.ನಂಗಲಿ : 'ನೆಲಮುಟ್ಟುವ ಪ್ರೀತಿ', ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು, (೨೦೦೨).

: 'ಈಗಲೇ ಸಾಧ್ಯ', ಕ್ರೈಸ್ಟ್ ಯೂನಿವರ್ಸಿಟಿ, ಬೆಂಗಳೂರು, (೨೦೦೩).

೧೧. ಚಂದ್ರೇಗೌಡ ಬಿ. ಬಿ.ಎಲ್.ರಾಜು (ಸಂ) : 'ತೇಜಸ್ವಿ ಕಥನ' ರಂಗಭಾರತೀ ಪ್ರಕಾಶನ, ಬಳ್ಳಾರಿ, (೨೦೦೭).

೧೨. ಧನಂಜಯ ಜೀವಾಳ ಬಿ.ಕೆ : 'ಕಾಡಿನ ಸಂತ ತೇಜಸ್ವಿ', ಅಂಕಿತ ಪುಸ್ತಕ, (೨೦೧೧).

೧೩. ನಾಗಭೂಷಣ್ ಡಿ.ಎಸ್(ಸಂ) : 'ಕಾಡಿನ ಹುಡುಗ ಕೃಷ್ಣ' ಸಂವಾದನ ಪ್ರಕಾಶನ, ಮೂಡಿಹಳ್ಳಿ, ಚಿತ್ರದುರ್ಗಜಿಲ್ಲೆ, (೧೯೮೦).

೧೪. ನಾಗಭೂಷಣಸ್ವಾಮಿ ಓ.ಎಲ್ : 'ವಿಮರ್ಶೆಯ ಪರಿಭಾಷೆ', ಪರಿಸರ ಸಾಹಿತ್ಯ, ಶಿವಮೊಗ್ಗ (೧೯೯೮)

೧೫. ನಾಯಕ ಜಿ.ಎಚ್ : 'ವಿನಯ ವಿಮರ್ಶೆ' ಕನ್ನಡ ಮತ್ತು ಸಂಸ್ಕೃತಿ ಇಲಾಖೆ, (೧೯೯೧).

: 'ಮೌಲ್ಯಮಾರ್ಗ ಸಂ-೧' ಸಿರಿವರ ಪ್ರಕಾಶನ, ಬೆಂಗಳೂರು, (೨೦೧೧).

: 'ಶತಮಾನದ ಕನ್ನಡ ಸಾಹಿತ್ಯ', ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲಾ, (೨೦೦೦)

೧೬. ನಾಗರಾಜ್ ಡಿ.ಆರ್: : 'ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ', ಅಕ್ಷರ ಪ್ರಕಾಶನ, ಸಾಗರ, (೧೯೯೮)

: 'ಸಂಸ್ಕೃತಿ ಕಥನ', ಅಕ್ಷರ ಪ್ರಕಾಶನ, ಹೆಗ್ಗೋಡು (೨೦೦೮)

: 'ಸಾಹಿತ್ಯ ಕಥನ', ಅಕ್ಷರ ಪ್ರಕಾಶನ, ಹೆಗ್ಗೋಡು (೨೦೦೬)

೧೭. ನಾರಾಯಣ ಕೆ.ವಿ : : 'ಬೇರು ಕಾಂಡ ಚಿಗುರು', ವಿವೇಕ ಪ್ರಕಾಶನ, ಬೆಂಗಳೂರು (೧೯೯೨)

೧೮. ಪದ್ಮಾಶೇಖರ್ : 'ಪ್ರತಿಸ್ಪಂದನ' ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು, (೧೯೯೦).

೧೯.	ಪ್ರಹ್ಲಾದ್.ಡಿ.ವಿ.	:	'ತೇಜಸ್ವಿಲೋಕ'(ಸಂ), ಸಂಚಯ, ಬೆಂಗಳೂರು, (೨೦೦೭).
೨೦.	ಪುಟ್ಟಸ್ವಾಮಿ ಕೆ.	:	'ತೇಜಸ್ವಿ ಸಾಹಿತ್ಯ ಮತ್ತು ವೈಜ್ಞಾನಿಕತೆ', ಪುಸ್ತಕ ಪ್ರಕಾಶನ, ಮೈಸೂರು, (೨೦೧೩).
೨೧.	ಪೂರ್ಣಚಂದ್ರ ತೇಜಸ್ವಿ, ಅಕ್ಷಯಕುಮಾರ ಚಕ್ರವರ್ತಿ	:	'ಪ್ರಕೃತಿ ಮತ್ತು ಪರಿಸರ', ಮೆ॥ ಎಂ. ಮೂನಿಸ್ವಾಮಿ ಅಂಡ್ ಸನ್ಸ್, ಬಸವನಗುಡಿ, ಬೆಂಗಳೂರು, (೨೦೧೯).
೨೨.	ಮಹೇಶ್ವರಯ್ಯ ಹೆಚ್.ಎಂ.	:	'ಪೂರ್ಣಚಂದ್ರ ತೇಜಸ್ವಿ', ನವಕರ್ನಾಟಕ ಪಬ್ಲಿಕೇಷನ್, (೨೦೦೫).
೨೩.	ಮಹಾದೇವಯ್ಯ ಕೆ.ಪಿ	:	'ಶತಮಾನದ ಬೆಳಕು', ನೀ.ಗಿರಿಗೌಡ ವಿದ್ಯಾರ್ಥಿ ಬಳಗ, ಮೈಸೂರು (೨೦೧೦)
೨೪.	ರಮೇಶ ಹಳೇಕೋಟಿ:	:	'ನೆನಪಿನಂಗಳದಲ್ಲಿ ತೇಜಸ್ವಿ', ಪುಸ್ತಕ ಪ್ರಕಾಶನ, ಮೈಸೂರು, (೨೦೧೦).
೨೫.	ರಹಮತ್ ತರೀಕೆರೆ :	:	'ಮರದೊಳಗಣಕಿಚ್ಚು' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೧೯೯೬.
		:	'ಕತ್ತಿಯಂಚಿನ ದಾರಿ', ಅಭಿನವ ಪ್ರಕಾಶನ, ಬೆಂಗಳೂರು, (೧೯೯೧),
		:	'ಸಾಂಸ್ಕೃತಿಕ ಅಧ್ಯಯನ', ಪ್ರಸಾರಾಂಗ ಹಂಪಿ (೧೯೯೫)
		:	'ಪ್ರತಿ ಸಂಸ್ಕೃತಿ', ಪ್ರಸಾರಾಂಗ ಹಂಪಿ (೧೯೯೫)
೨೬.	ರಾಮಚಂದ್ರ ಸಿ.ಎನ್.	:	'ಆಶಯ – ಆಕೃತಿ' ಅಭಿನವ ಪ್ರಕಾಶನ, ಬೆಂಗಳೂರು, (೧೯೯೫).
೨೭.	ರಾಜೇಂದ್ರ ಚೆನ್ನಿ:	:	'ನಡುಹಗಲಿನಲ್ಲಿ ಕಂದೀಲುಗಳು', ಲೋಹಿಯಾ ಪ್ರಕಾಶನ, ಬಳ್ಳಾರಿ, (೨೦೦೪).
೨೮.	ರಾಮಚಂದ್ರಪ್ಪ ಬರಗೂರು	:	'ಸಂಸ್ಕೃತಿ ಮತ್ತು ಸೃಜನಶೀಲತೆ' ಜನಸ್ನೇಹ ಪ್ರಕಾಶನ, ಬೆಂಗಳೂರು, (೧೯೯೧).
೨೯.	ರಾಜೇಂದ್ರ ಚೆನ್ನಿ:	:	'ಅಧ್ಯಯನ' ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ, (೧೯೮೭).
೩೦.	ರಾಜೇಶ್ವರಿ ತೇಜಸ್ವಿ	:	'ನನ್ನ ತೇಜಸ್ವಿ', ಮಸ್ತಕ ಪ್ರಕಾಶನ, (೨೦೧೧).

೩೧. ರಾಘವೇಂದ್ರರಾವ್ ಹೆಚ್.ಎಸ್ : 'ಶತಮಾನದ ಸಾಹಿತ್ಯ ವಿಮರ್ಶೆ', ಸಾಹಿತ್ಯ ಅಕಾಡೆಮಿ (೨೦೦೧)

೩೨. ಲಂಕೇಶ್.ಪಿ. : 'ಸಾಹಿತಿ ಸಾಹಿತ್ಯ ವಿಮರ್ಶೆ', ಲಂಕೇಶ್ ಪ್ರಕಾಶನ, ಬೆಂಗಳೂರು (೨೦೧೦)

೩೩. ಲಿಂಗದೇವರ ಹಳೇಮನೆ : ಸಂಸ್ಕೃತಿಯ ಸ್ಥಿತ್ಯಂತರ ಮತ್ತು ಶ್ರೀಕೃಷ್ಣ ಆಲನಹಳ್ಳಿಯವರ ಸಾಹಿತ್ಯ ಸಂಸ್ಕೃತಿಯ ವಿವರಗಳು ಮತ್ತು ಸಾಮಾಜಿಕ ನೆಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಣೆ (೧೯೯೧).

೩೪. ವಿಜಯಶ್ರೀ ಕೆ. : 'ಕನ್ನಡ ನವ್ಯ ಕಾದಂಬರಿಗಳು' ಶ್ರೀ ರಾಮಕೃಷ್ಣ ಪ್ರಕಾಶನ, ಬೆಂಗಳೂರು, (೨೦೦೨).

೩೫. ವಿವೇಕ ಶಾನಬಾಗ (ಸಂ) : 'ಶ್ರೀಕೃಷ್ಣ ಆಲನಹಳ್ಳಿವಾಚಿಕೆ' ನುಡಿ ಪುಸ್ತಕ(೨೦೧೦)

೩೬. ಶ್ರೀಕಂಠ ಕೂಡಿಗೆ : 'ಧ್ಯಾನ' ಚೇತನ್‌ಬುಕ್ ಹೌಸ್, (೧೯೯೬).

೩೭. ಶಶಿಕಲಾ ಎಚ್. : 'ಆಶಯ – ಆಕೃತಿ' ಅಭಿನವ ಪ್ರಕಾಶನ, ಬೆಂಗಳೂರು, (೧೯೯೬).

೩೮. ಶೇಖರ್ ಎಂ.ಎಸ್. : 'ಶ್ರೀಕೃಷ್ಣ ಆಲನಹಳ್ಳಿಯವರ ಸಾಹಿತ್ಯ', ಚರಿತಾ ಪ್ರಕಾಶನ, ಬೆಂಗಳೂರು, (೨೦೦೭)

೩೯. ಶೇಷಗಿರಿರಾವ್ ಎಲ್.ಎಸ್. : 'ಇಂಗ್ಲಿಷ್ ಸಾಹಿತ್ಯ ಚರಿತ್ರೆ', ಕಾಮಧೇನು ಪ್ರಕಾಶನ, ಬೆಂಗಳೂರು, (೧೯೯೬)

: 'ಇಂಗ್ಲಿಷ್ ಭಾಷೆಯಲ್ಲಿ ಆಧುನಿಕ ಸಾಹಿತ್ಯ ವಿಮರ್ಶೆ' ಪ್ರಸಾರಾಂಗ ಮೈಸೂರು ವಿ.ವಿ, ಮೈಸೂರು (೧೯೭೨)

: 'ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ', ಶಾರದಾ ಪ್ರಕಾಶನ, ಬೆಂಗಳೂರು (೧೯೯೯).

೪೦. ಶಿವರುದ್ರಪ್ಪ ಜಿ.ಎಸ್ (ಸಂ) : 'ವಿಮರ್ಶೆಯ ನೆಲೆ–ಬೆಲೆ', ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ (೧೯೭೫)

: 'ವಿಮರ್ಶೆಯ ಪೂರ್ವಪಶ್ಚಿಮ' ಶಾರದಾ ಪ್ರಕಾಶನ, ಬೆಂಗಳೂರು (೧೯೮೪)

೪೧. ಸುಮತೀಂದ್ರ ನಾಡಿಗ : : 'ವಿಮರ್ಶೆಯ ದಾರಿಯಲ್ಲಿ', ಶಾರದಾ ಪ್ರಕಾಶನ, ಬೆಂಗಳೂರು(೧೯೯೪)

*****